ವಿಶ್ವ ಕನ್ನಡ ಸಮ್ಮೇಳನ ೨೦೧೧

ಬೆಳಗಾವಿ

# ಜ್ವಾಲಾಮುಖಿಯ ಮೇಲೆ

ಬಸವರಾಜ ಕಟ್ಟೀಮನಿ

ವಿಶ್ವಕನ್ನಡ
ಸಮ್ಮೇಳನ
ಸಾಹಿತ್ಯಮಾಲೆ

ಸುವರ್ಣ ಸಾಹಿತ್ಯ ಗ್ರಂಥಮಾಲೆ

# ಜ್ವಾಲಾಮುಖಿಯ ಮೇಲೆ

ಬಸವರಾಜ ಕಟ್ಟೀಮನಿ

ಕರ್ನಾಟಕ ಸರ್ಕಾರ

ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ಕನ್ನಡ ಭವನ, ಜೆ.ಸಿ.ರಸ್ತೆ
ಬೆಂಗಳೂರು – ೫೬೦ ೦೦೨

**JWALAMUKHIYA MELE** - A Novel in Kannada by **Basavaraja Kattimani.**
Published by **Manu Baligar**, Director, Department of Kannada and Culture, Kannada Bhavana, J.C.Road, Bengaluru - 560 002.

ಈ ಆವೃತ್ತಿಯ ಹಕ್ಕು : ಕರ್ನಾಟಕ ಸರ್ಕಾರ

ಮುದ್ರಿತ ವರ್ಷ : ೨೦೧೧
ಪ್ರತಿಗಳು : ೧೦೦೦
ಪುಟಗಳು : XIV + ೪೦೨
ಬೆಲೆ : ರೂ. ೯೦/-

ರಕ್ಷಾಪುಟ ವಿನ್ಯಾಸ : ಕೆ. ಚಂದ್ರನಾಥ ಆಚಾರ್ಯ

ಮುದ್ರಕರು :
**ಮೆ॥ ಮಯೂರ ಪ್ರಿಂಟ್ ಆ್ಯಡ್ಸ್**
ನಂ. ೬೯, ಸುಬೇದಾರ್ ಛತ್ರಂ ರೋಡ್
ಬೆಂಗಳೂರು – ೫೬೦ ೦೨೦ ದೂ : ೨೩೩೪೨೭೪

ಬಿ.ಎಸ್. ಯಡಿಯೂರಪ್ಪ
ಮುಖ್ಯಮಂತ್ರಿಗಳು

ಕರ್ನಾಟಕ ಸರ್ಕಾರ

ವಿಧಾನಸೌಧ
ಬೆಂಗಳೂರು ೫೬೦ ೦೦೧

ಸಿಎಂ/ಪಿಎಸ್/೨೬/೧೧

# ಶುಭ ಸಂದೇಶ

ವಿಶ್ವ ಕನ್ನಡ ಸಮ್ಮೇಳನದ ಸಂಭ್ರಮಾಚರಣೆಯ ಸಂದರ್ಭದಲ್ಲಿ ಕನ್ನಡ ನಾಡು ಏಕೀಕರಣಗೊಂಡು ೫೫ನೇ ವರ್ಷಕ್ಕೆ ಹೆಜ್ಜೆಯನ್ನಿಟ್ಟಿದೆ. ಈ ಸಂದರ್ಭವನ್ನು ರಚನಾತ್ಮಕವಾಗಿ ದಾಖಲಿಸಿ ಸ್ಮರಣೀಯಗೊಳಿಸಬೇಕೆಂಬುದು ಸರ್ಕಾರದ ಮಹದಾಶಯ. ಅದಕ್ಕಾಗಿ ಬೆಳಗಾವಿಯಲ್ಲಿ "ವಿಶ್ವ ಕನ್ನಡ ಸಮ್ಮೇಳನ" ವನ್ನು ಇದೇ ಮಾರ್ಚ್ ತಿಂಗಳಿನಲ್ಲಿ ಆಯೋಜಿಸಲಾಗಿದೆ. ಇದನ್ನು ಅತ್ಯಂತ ಅರ್ಥಪೂರ್ಣವಾಗಿ ಆಚರಿಸುವುದು ಕರ್ನಾಟಕ ಸರ್ಕಾರದ ಆಶಯವಾಗಿದೆ. ಇದರ ಅಂಗವಾಗಿ ನಾಡಿನ ವಿವಿಧ ಕ್ಷೇತ್ರಗಳಲ್ಲಾಗಿರುವ ಪ್ರಗತಿಯ ಆತ್ಮಾವಲೋಕನದ ಜೊತೆಗೆ ಕನ್ನಡ ಸಾಹಿತ್ಯದ ಸೃಜನಶೀಲ ಮತ್ತು ಸೃಜನೇತರ ಪ್ರಕಾರಗಳ ೧೦೦ ಕೃತಿಗಳನ್ನು ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಯಡಿ ಪ್ರಕಟಿಸಲಾಗುತ್ತಿದೆ. ಕನ್ನಡದ ಖ್ಯಾತ ಲೇಖಕರ ಮಹತ್ವದ ಕೃತಿಗಳನ್ನು ಪ್ರಕಟಿಸಿ, ಸುಲಭ ಬೆಲೆಯಲ್ಲಿ ಸಾಹಿತ್ಯಾಸಕ್ತರಿಗೆ ಒದಗಿಸುವ ಹಂಬಲ ನಮ್ಮದು.

ಈ ಸಾಹಿತ್ಯ ಮಾಲಿಕೆಯಲ್ಲಿನ ಕೃತಿರತ್ನಗಳನ್ನು ಕನ್ನಡಿಗರು ಸಹೃದಯತೆಯಿಂದ ಸ್ವಾಗತಿಸುವ ಮೂಲಕ ಇವುಗಳ ಪ್ರಯೋಜನವನ್ನು ಪಡೆದುಕೊಂಡರೆ ಸರ್ಕಾರದ ಈ ಯೋಜನೆ ಸಾರ್ಥಕವಾಗುತ್ತದೆ ಎಂದು ಭಾವಿಸುತ್ತೇನೆ.

ಬಿ.ಎಸ್. ಯಡಿಯೂರಪ್ಪ

ದಿನಾಂಕ ೨೪.೦೧.೨೦೧೧

(ಬಿ.ಎಸ್. ಯಡಿಯೂರಪ್ಪ)

ಕರ್ನಾಟಕ ಸರ್ಕಾರ

**ಗೋವಿಂದ ಎಂ. ಕಾರಜೋಳ**
ಕನ್ನಡ ಮತ್ತು ಸಂಸ್ಕೃತಿ,
ಸಣ್ಣ ನೀರಾವರಿ ಹಾಗೂ ಜವಳಿ ಸಚಿವರು

ವಿಧಾನಸೌಧ
ಬೆಂಗಳೂರು - ೦೧

# ಚೆನ್ನುಡಿ

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ವಿಶ್ವ ಕನ್ನಡ ಸಮ್ಮೇಳನದ ಅಂಗವಾಗಿ ಸುಮಾರು ೧೦೦ ಕನ್ನಡದ ಮೇರುಕೃತಿಗಳನ್ನು ಮರುಮುದ್ರಿಸಲು ಉದ್ದೇಶಿಸಿರುತ್ತದೆ.

ಈ ಯೋಜನೆಯಡಿ ಕನ್ನಡ ಸಾಹಿತ್ಯದ ಬೇರೆ ಬೇರೆ ಕಾಲಘಟ್ಟಗಳಲ್ಲಿ ರಚನೆಗೊಂಡ ಕಥೆ, ಕಾದಂಬರಿ, ವಿಚಾರ ಸಾಹಿತ್ಯ, ಪ್ರಬಂಧ, ವಿಮರ್ಶೆ, ನಾಟಕ, ಕವನ ಸಂಕಲನ– ಹೀಗೆ ಸಾಹಿತ್ಯದ ವಿವಿಧ ಪ್ರಕಾರಗಳ ಕೆಲವು ಪ್ರಾತಿನಿಧಿಕ ಕೃತಿಗಳನ್ನು ಪ್ರಕಟಿಸಲಾಗುತ್ತಿದೆ. ಈ ಪ್ರಾತಿನಿಧಿಕ ಕೃತಿಗಳನ್ನು ಸರ್ಕಾರದಿಂದ ರಚಿತವಾದ ಆಯ್ಕೆ ಸಮಿತಿಯು ಮುದ್ರಣಕ್ಕೆ ಆಯ್ಕೆ ಮಾಡಿರುತ್ತದೆ. ಈ ಕೃತಿಗಳನ್ನು ಮುದ್ರಣಕ್ಕೆ ಆಯ್ಕೆ ಮಾಡಿದ ಆಯ್ಕೆ ಸಮಿತಿಯ ಎಲ್ಲಾ ವಿದ್ವಾಂಸರಿಗೂ ನನ್ನ ಧನ್ಯವಾದಗಳು. ಈ ಮಹತ್ವದ ಕೃತಿಗಳನ್ನು ಸಹೃದಯ ಕನ್ನಡಿಗರಿಗೆ ಸುಲಭ ಬೆಲೆಯಲ್ಲಿ ತಲುಪಿಸಬೇಕೆಂಬುದು ನಮ್ಮ ಹೆಗ್ಗುರಿಯಾಗಿರುತ್ತದೆ. ಕನ್ನಡ ಸಾಹಿತ್ಯದ ಮೈಲಿಗಲ್ಲುಗಳಾಗಿರುವ ಈ ಪುಸ್ತಕಗಳು ಭಾವಿ ಪೀಳಿಗೆಯವರಿಗೆ ದಾರಿದೀಪಗಳಾಗಿವೆ. ಈ ಕೃತಿಗಳ ಪ್ರಯೋಜನವನ್ನು ಕನ್ನಡ ಜನತೆ ಹಾಗೂ ವಿದ್ಯಾರ್ಥಿಗಳು ಪಡೆದರೆ ನಮ್ಮ ಶ್ರಮ ಸಾರ್ಥಕವೆಂದು ಭಾವಿಸುತ್ತೇನೆ.

ದಿನಾಂಕ ೧೮.೦೧.೨೦೧೧

**(ಗೋವಿಂದ ಎಂ. ಕಾರಜೋಳ)**

# ಅಧ್ಯಕ್ಷರ ಮಾತು

ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಕನ್ನಡದ ಮೇರುಕೃತಿಗಳನ್ನು ಪುನರ್‌ಮುದ್ರಣ ಮಾಡಲು ಒಂದು ಯೋಜನೆಯನ್ನು ಕೈಗೊಂಡಿತು. ಕೃತಿಗಳ ಆಯ್ಕೆಗಾಗಿ ಸರ್ಕಾರವು ಒಂದು ಸಮಿತಿಯನ್ನು ರಚಿಸಿತು. ಈ ಮಹತ್ವದ ಯೋಜನೆಯ ಸಮಿತಿಯ ಅಧ್ಯಕ್ಷನಾಗಿ ಕಾರ್ಯನಿರ್ವಹಿಸುವ ಸುಯೋಗ ನನ್ನದಾಯಿತು.

ಈ ಯೋಜನೆಯ ಮಹತ್ವವನ್ನು ನಾನು ವಿವರಿಸುವ ಅಗತ್ಯವಿಲ್ಲ. ಕನ್ನಡದ ಶ್ರೇಷ್ಠ ಕೃತಿಗಳನ್ನು ಸುಲಭ ಬೆಲೆಗೆ ಕನ್ನಡಿಗರ ಕೈಗಳಲ್ಲಿರಿಸಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಹಲವು ಯೋಜನೆಗಳನ್ನು ಕೈಗೊಂಡಿರುವುದಕ್ಕಾಗಿ ಸರ್ಕಾರವನ್ನೂ ಇಲಾಖೆಯನ್ನೂ ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ. ಕನ್ನಡ ಸಂಸ್ಕೃತಿಗೆ ಈ ಯೋಜನೆಗಳು ಮಹತ್ವದ ಕೊಡುಗೆಯನ್ನು ನೀಡುತ್ತವೆ.

ಕನ್ನಡದ ಮೇರುಕೃತಿಗಳನ್ನು ಆರಿಸುವುದು ಸುಲಭದ ಕೆಲಸವಲ್ಲ. ಇಂತಹ ಆಯ್ಕೆಯಲ್ಲಿ ಬೇರೆ ಬೇರೆ ಅಭಿಪ್ರಾಯಗಳಿಗೆ ಸಾಧಾರವಾಗಿಯೇ ಅವಕಾಶವಿರುತ್ತದೆ. ಕನ್ನಡ ನಾಡಿನ ಶ್ರೇಷ್ಠ ಸಾಹಿತಿಗಳು ಈ ಸಮಿತಿಯ ಸದಸ್ಯರಾಗಿದ್ದದ್ದು ಸುದೈವದ ಸಂಗತಿ. ಕೃತಿಗಳನ್ನು ಚರ್ಚಿಸಿ ಮಹತ್ವದ ನಿರ್ಧಾರಕ್ಕೆ ಬಂದ ಸಮಿತಿಯು ಸಾಧ್ಯವಾದ ಕಾರ್ಯವನ್ನು ಸಾಧಿಸಿದೆ. ಇದಕ್ಕಾಗಿ ನಾನು ಸಮಿತಿಯ ಎಲ್ಲ ಸದಸ್ಯರಿಗೂ ಕೃತಜ್ಞನಾಗಿದ್ದೇನೆ.

ಈ ಕಾರ್ಯದ ನಿರ್ವಹಣೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾದ ಶ್ರೀ ಮನು ಬಳಿಗಾರ್ ಅವರು ನೆರವಾಗಿದ್ದಾರೆ. ಅವರ ಮತ್ತು ಅವರ ಸಿಬ್ಬಂದಿಯವರ ಅಮೂಲ್ಯ ಸಹಕಾರಕ್ಕೆ ನಾನು ಕೃತಜ್ಞ.

ಕನ್ನಡ ನಾಡಿನ ಮನೆಮನೆಗಳಲ್ಲಿ ಸಾಹಿತ್ಯದ ಮಂಗಳ ದೀಪದ ಬೆಳಕನ್ನು ಹರಡುವ ಈ ಯೋಜನೆಯ ಪೂರ್ಣಪ್ರಯೋಜನವನ್ನು ಕನ್ನಡಿಗರು ಪಡೆದುಕೊಳ್ಳಲಿ ಎಂದು ಹಾರೈಸುತ್ತೇನೆ.

ಸಿರಿಗನ್ನಡಂ ಗೆಲ್ಗೆ!

**ಎಲ್.ಎಸ್. ಶೇಷಗಿರಿ ರಾವ್**
ಅಧ್ಯಕ್ಷ
ಕನ್ನಡದ ಮೇರುಕೃತಿಗಳ ಆಯ್ಕೆ ಸಮಿತಿ

ದಿನಾಂಕ ೧೬.೧೨.೨೦೧೦

# ಹೊನ್ನುಡಿ

ನಾಡಿನ ಭಾಷೆ, ಸಂಸ್ಕೃತಿ ಮತ್ತು ಜನಜೀವನದ ಪರಿಮಾಣವನ್ನು ಅಳೆಯುವುದರಲ್ಲಿ ಅಲ್ಲಿನ ಸಾಹಿತ್ಯದ ಕೃತಿಗಳು ಮಹತ್ವದ ಪಾತ್ರವನ್ನು ವಹಿಸುತ್ತವೆ. ಸುಮಾರು ಎರಡು ಸಾವಿರದ ಐದುನೂರು ವರ್ಷಗಳಿಗೂ ದೀರ್ಘವಾದ ಐತಿಹಾಸಿಕ ಪರಂಪರೆ ಚೆಲುವ ಕನ್ನಡ ನಾಡಿನದು. ಹಾಗೆಯೇ ಅದರ ಸಾಹಿತ್ಯ ಕೂಡ ಪಂಪ, ಕುಮಾರವ್ಯಾಸ, ಶರಣರು, ದಾಸರು ಮೊದಲಾದವರಿಂದ ಸಮೃದ್ಧವಾಗಿ ಬೆಳೆದಿದೆ. ಅದರ ಸಮೃದ್ಧತೆಗೆ ಏಳು ಜ್ಞಾನಪೀಠಗಳ ಗರಿಮೆಯೇ ಸಾಕ್ಷಿ.

ಕರ್ನಾಟಕವು ಏಕೀಕರಣಗೊಂಡು ೫೦ನೇ ವರ್ಷಕ್ಕೆ ಪಾದಾರ್ಪಣೆ ಮಾಡಿದೆ. ಈ ಸಂದರ್ಭದಲ್ಲಿ ಬೆಳಗಾವಿಯಲ್ಲಿ ವಿಶ್ವ ಕನ್ನಡ ಸಮ್ಮೇಳನವನ್ನು ಆಚರಿಸುತ್ತಿರುವುದು ಒಂದು ಐತಿಹಾಸಿಕವೂ ಹಾಗೂ ಮಹತ್ವಪೂರ್ಣವೂ ಆದ ವಿಶಿಷ್ಟ ಘಟನೆ.

ವಿಶ್ವ ಕನ್ನಡ ಸಮ್ಮೇಳನದ ಸಂಭ್ರಮಾಚರಣೆಯ ಅಂಗವಾಗಿ ಹಲವಾರು ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ. ಕನ್ನಡ ನಾಡಿನ ವಿವಿಧ ಕ್ಷೇತ್ರಗಳಲ್ಲಾಗಿರುವ ಪ್ರಗತಿಯ ಆತ್ಮಾವಲೋಕನದ ಜೊತೆಗೆ ಕನ್ನಡ ಸಾಹಿತ್ಯದ ಸೃಜನಶೀಲ ಹಾಗೂ ಸೃಜನೇತರ ಪ್ರಕಾರದ ೧೦೧ ಕೃತಿಗಳನ್ನು ಮೇರುಕೃತಿಗಳ ಮರುಮುದ್ರಣ ಯೋಜನೆಯಡಿ ಪ್ರಕಟಿಸಲಾಗುತ್ತಿದೆ.

ಈ ವಿಶಿಷ್ಟ ಕೃತಿಗಳನ್ನು ಆಯ್ಕೆ ಮಾಡಿದ ಆಯ್ಕೆ ಸಮಿತಿ ಅಧ್ಯಕ್ಷರಿಗೆ ಹಾಗೂ ಸದಸ್ಯರಿಗೆ ನನ್ನ ವಂದನೆಗಳು. ಈ ಸಾಹಿತ್ಯ ಮಾಲಿಕೆಯನ್ನು ಸಾಹಿತ್ಯಾಭಿಮಾನಿಗಳು ಸ್ವಾಗತಿಸುವ ಮೂಲಕ ಈ ಕೃತಿಗಳ ಸದುಪಯೋಗ ಪಡೆದುಕೊಳ್ಳುತ್ತಾರೆಂದು ಭಾವಿಸಿದ್ದೇನೆ.

(ಐ.ಎಂ. ವಿಠ್ಠಲಮೂರ್ತಿ)
ವಿಶೇಷಾಧಿಕಾರಿಗಳು
ವಿಶ್ವ ಕನ್ನಡ ಸಮ್ಮೇಳನ

# ಎರಡು ನುಡಿ

ಕರ್ನಾಟಕ ಸರ್ಕಾರವು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ 'ವಿಶ್ವ ಕನ್ನಡ ಸಮ್ಮೇಳನ'ದ ಅಂಗವಾಗಿ ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಯಡಿ ಕನ್ನಡ ಸಾರಸ್ವತ ಲೋಕವನ್ನು ಶ್ರೀಮಂತಗೊಳಿಸಿರುವ ಸಾಹಿತಿಗಳ ಮಹತ್ವದ ಕೃತಿಗಳನ್ನು ಓದುಗರಿಗೆ ಒದಗಿಸಬೇಕೆಂಬ ಸದಾಶಯ ಹೊಂದಿರುತ್ತದೆ. ಈ ಯೋಜನೆಯಡಿ ಸುಮಾರು ೧೦೦ ಕೃತಿಗಳನ್ನು ಪ್ರಕಟಿಸಲು ಉದ್ದೇಶಿಸಿದೆ.

ಈ ಕೃತಿಗಳನ್ನು ಆಯ್ಕೆಮಾಡಲು ಖ್ಯಾತ ವಿದ್ವಾಂಸರಾದ ಪ್ರೊ. ಎಲ್.ಎಸ್. ಶೇಷಗಿರಿರಾವ್‌ರವರ ಅಧ್ಯಕ್ಷತೆಯಲ್ಲಿ ನಾಡಿನ ಹೆಸರಾಂತ ಸಾಹಿತಿ / ವಿದ್ವಾಂಸರುಗಳನ್ನೊಳಗೊಂಡ ಆಯ್ಕೆ ಸಮಿತಿಯನ್ನು ರಚಿಸಿದೆ. ಈ ಆಯ್ಕೆ ಸಮಿತಿಯು ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಗೆ ಕನ್ನಡ ಸಾಹಿತ್ಯದ ವಿವಿಧ ಕಾಲಘಟ್ಟಗಳಲ್ಲಿ ಬಂದ ಪ್ರಾತಿನಿಧಿಕ ಕೃತಿಗಳನ್ನು ಆಯ್ಕೆ ಮಾಡಿರುತ್ತದೆ. ಆಯ್ಕೆ ಸಮಿತಿಯ ಅಧ್ಯಕ್ಷರು ಹಾಗೂ ಸದಸ್ಯರಿಗೆ ಸರ್ಕಾರದ ಪರವಾಗಿ ವಂದನೆಗಳು ಸಲ್ಲುತ್ತವೆ. ಈ ಪುಸ್ತಕಗಳನ್ನು ಹೊರತರಲು ಅನುಮತಿ ನೀಡಿ ಸಹಕರಿಸಿದ ಎಲ್ಲಾ ಲೇಖಕರು ಹಾಗೂ ಹಕ್ಕುದಾರರುಗಳಿಗೆ ನನ್ನ ಕೃತಜ್ಞತೆಗಳು ಸಲ್ಲುತ್ತವೆ. ಕನ್ನಡದ ಮೇರುಕೃತಿ ಸಾಹಿತ್ಯ ಮಾಲಿಕೆಯನ್ನು ಓದುಗರು ಸ್ವಾಗತಿಸುತ್ತಾರೆಂದು ನಂಬಿದ್ದೇನೆ.

ದಿನಾಂಕ ೧೭.೦೧.೨೦೧೧

(ರಮೇಶ್ ಬಿ.ಝುಳಕಿ)
ಸರ್ಕಾರದ ಕಾರ್ಯದರ್ಶಿಗಳು
ಕನ್ನಡ ಮತ್ತು ಸಂಸ್ಕೃತಿ ಹಾಗೂ ವಾರ್ತಾ ಇಲಾಖೆ

## ಪ್ರಕಾಶಕರ ಮಾತು

ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಯಡಿ 'ವಿಶ್ವ ಕನ್ನಡ ಸಮ್ಮೇಳನ'ದ ಅಂಗವಾಗಿ ಸುಮಾರು ನೂರು ಪುಸ್ತಕಗಳನ್ನು ಪ್ರಕಟಿಸಲು ಉದ್ದೇಶಿಸಿರುತ್ತದೆ. ಈ ಯೋಜನೆಯಡಿ ಹಳಗನ್ನಡ, ನಡುಗನ್ನಡ ಮತ್ತು ಹೊಸಗನ್ನಡ ಈ ಮೂರೂ ಕಾಲಘಟ್ಟಗಳಲ್ಲಿ ರಚನೆಗೊಂಡ, ಕನ್ನಡದಲ್ಲಿ ಮಹತ್ವದ ಕೃತಿಗಳೆಂದು ಪರಿಗಣಿತವಾಗಿರುವ ಪುಸ್ತಕಗಳನ್ನು ಸರ್ಕಾರವು ನೇಮಿಸಿರುವ ಆಯ್ಕೆ ಸಮಿತಿಯು ಮರುಮುದ್ರಣಕ್ಕೆ ಆಯ್ಕೆ ಮಾಡಿರುತ್ತದೆ. ಈ ಸಾಹಿತ್ಯ ಮಾಲೆಯಲ್ಲಿ ಈಗಾಗಲೇ ಇಲಾಖೆಯು ಸಮಗ್ರ ಸಾಹಿತ್ಯ ಪ್ರಕಟಣೆಯಡಿ ಪ್ರಕಟಿಸಿರುವ ಲೇಖಕರ ಕೃತಿಗಳನ್ನು ಪರಿಗಣಿಸಿರುವುದಿಲ್ಲ.

ಕನ್ನಡದ ಮೇರುಕೃತಿಗಳ ಮರುಮುದ್ರಣಕ್ಕೆ ಪುಸ್ತಕಗಳನ್ನು ಆಯ್ಕೆ ಮಾಡಿದ ಆಯ್ಕೆ ಸಮಿತಿಯ ಅಧ್ಯಕ್ಷರಾದ ಪ್ರೊ. ಎಲ್.ಎಸ್. ಶೇಷಗಿರಿ ರಾವ್‌ರವರಿಗೆ ಹಾಗೂ ಸಮಿತಿಯ ಸದಸ್ಯರುಗಳಾದ ಡಾ. ಚಂದ್ರಶೇಖರ ಕಂಬಾರ, ಡಾ. ಹಂಪ ನಾಗರಾಜಯ್ಯ, ಡಾ. ಎಂ.ಎಂ.ಕಲಬುರ್ಗಿ, ಡಾ. ದೊಡ್ಡರಂಗೇಗೌಡ, ಡಾ. ಎಚ್.ಜೆ. ಲಕ್ಕಪ್ಪಗೌಡ, ಡಾ. ಅರವಿಂದ ಮಾಲಗತ್ತಿ, ಡಾ. ಎಸ್.ಎಸ್. ಲಕ್ಷ್ಮೀನಾರಾಯಣ ಭಟ್ಟ, ಡಾ. ಪಿ.ಎಸ್. ಶಂಕರ್, ಶ್ರೀಮತಿ ಸಾರಾ ಅಬೂಬಕರ್, ಡಾ. ಪ್ರಧಾನ್ ಗುರುದತ್ತ ಇವರುಗಳಿಗೆ ನನ್ನ ಕೃತಜ್ಞತೆಗಳು. ಈ ಯೋಜನೆಯಡಿ ಮರುಮುದ್ರಣಕ್ಕೆ ಆಯ್ಕೆಯಾಗಿರುವ ಪುಸ್ತಕಗಳ ಮುದ್ರಣಕ್ಕೆ ಅನುಮತಿ ನೀಡಿದ ಎಲ್ಲ ಲೇಖಕರಿಗೂ, ಹಕ್ಕುದಾರರಿಗೂ ಮತ್ತು ಕರಡಚ್ಚು ತಿದ್ದಿದವರಿಗೂ ನನ್ನ ವಂದನೆಗಳು.

ಸದರಿ ಪ್ರಕಟಣಾ ಯೋಜನೆಯ ಪುಸ್ತಕಗಳನ್ನು ಹೊರತರಲು ಸಹಕರಿಸಿದ ಶ್ರೀ ಎಚ್. ಶಂಕರಪ್ಪ, ಜಂಟಿ ನಿರ್ದೇಶಕರು, (ಸು.ಕ.), ಶ್ರೀಮತಿ ವೈ.ಎಸ್.ವಿಜಯಲಕ್ಷ್ಮಿ, ಸಹಾಯಕ ನಿರ್ದೇಶಕರು ಹಾಗೂ ಪ್ರಕಟಣಾ ಶಾಖೆಯ ಸಿಬ್ಬಂದಿಗೆ ನನ್ನ ನೆನಕೆಗಳು. ವಿಶ್ವ ಕನ್ನಡ ಸಮ್ಮೇಳನದ ಲಾಂಛನವನ್ನು ಸಿದ್ಧಪಡಿಸಿಕೊಟ್ಟ ಹಿರಿಯಕಲಾವಿದರಾದ ಶ್ರೀ ಸಿ. ಚಂದ್ರಶೇಖರ ಅವರಿಗೂ ನನ್ನ ನೆನಕೆಗಳು ಹಾಗೂ ಈ ಪುಸ್ತಕಗಳನ್ನು ಸುಂದರವಾಗಿ ಮುದ್ರಿಸಿಕೊಟ್ಟಿರುವ ಮಯೂರ ಪ್ರಿಂಟ್ ಆ್ಯಡ್ಸ್‌ನ ಮಾಲೀಕರಾದ

ಶ್ರೀ ಬಿ.ಎಲ್. ಶ್ರೀನಿವಾಸ್ ಮತ್ತು ಸಿಬ್ಬಂದಿ ವರ್ಗದವರಿಗೂ ನನ್ನ ನೆನಕೆಗಳು.

ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಯಡಿ ಕನ್ನಡ ಓದುಗರಿಗೆ ಹಲವಾರು ವರ್ಷಗಳಿಂದ ದೊರಕದೇ ಇದ್ದ ಎಷ್ಟೋ ಪುಸ್ತಕಗಳು ಲಭ್ಯವಾಗುತ್ತಿರುವುದು ಹೆಮ್ಮೆಯ ಸಂಗತಿ. ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಯಡಿ ಸಾಹಿತ್ಯಾಭಿಮಾನಿಗಳಿಗೆ ಅಕ್ಷರದಾಸೋಹ ನಡೆಸುವ ಆಶಯ ನಮ್ಮದು. ಈ ಕೃತಿಗಳನ್ನು ಕನ್ನಡಿಗರು ಸ್ವಾಗತಿಸುತ್ತಾರೆಂದು ನಂಬಿದ್ದೇನೆ.

ಮನು ಬಳಿಗಾರ್

ದಿನಾಂಕ ೧೧.೦೧.೨೦೧೧

ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

# ಕನ್ನಡದ ಮೇರುಕೃತಿಗಳ ಆಯ್ಕೆ ಸಮಿತಿ

**ಅಧ್ಯಕ್ಷರು**

ಪ್ರೊ. ಎಲ್.ಎಸ್. ಶೇಷಗಿರಿರಾವ್

**ಸದಸ್ಯರು**

ಡಾ॥ ಚಂದ್ರಶೇಖರ ಕಂಬಾರ

ಡಾ॥ ಎಂ.ಎಂ. ಕಲಬುರ್ಗಿ

ಡಾ॥ ದೊಡ್ಡರಂಗೇಗೌಡ

ಡಾ॥ ಅರವಿಂದ ಮಾಲಗತ್ತಿ

ಡಾ॥ ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟ

ಡಾ॥ ಪ್ರಧಾನ್ ಗುರುದತ್ತ

ಡಾ॥ ಹಂಪ ನಾಗರಾಜಯ್ಯ

ಡಾ॥ ಎಚ್.ಜೆ. ಲಕ್ಕಪ್ಪಗೌಡ

ಶ್ರೀಮತಿ ಸಾರಾ ಅಬೂಬಕ್ಕರ್

ಡಾ॥ ಪಿ.ಎಸ್. ಶಂಕರ್

**ಸದಸ್ಯ ಕಾರ್ಯದರ್ಶಿ**

ಶ್ರೀ ಮನು ಬಳಿಗಾರ್, ಕ.ಆ.ಸೇ.

ನಿರ್ದೇಶಕರು

ಕನ್ನಡ ಮತ್ತು ಸಂಸ್ಕೃತಿ ಇಲಾಖೆ

# ಪರಿವಿಡಿ

| | |
|---|---|
| ಶುಭ ಸಂದೇಶ | iii |
| ಚೆನ್ನುಡಿ | iv |
| ಅಧ್ಯಕ್ಷರ ಮಾತು | v |
| ಹೊನ್ನುಡಿ | vi |
| ಎರಡು ನುಡಿ | vii |
| ಪ್ರಕಾಶಕರ ಮಾತು | viii |
| ಆಯ್ಕೆ ಸಮಿತಿ | ix |
| ಜ್ವಾಲಾಮುಖಿಯ ಮೇಲೆ | ೧-೪೦೨ |

# ಜ್ವಾಲಾಮುಖಿಯ ಮೇಲೆ

# ೧

ಕಟ ಕಟಟ್ ಢಕ್
ಕಟ ಕಟಟ್ ಢಕ್

ರಂಗಯ್ಯನ ಮುದ್ರಣಯಂತ್ರ ಗೊಣಗಿಕೊಳ್ಳುತ್ತ ಕೆಲಸ ಮಾಡುತ್ತಿತ್ತು. ಹತ್ತು ವರ್ಷಗಳಿಂದ ಅದು ಹಾಗೆಯೇ ಕೆಲಸ ಮಾಡುತ್ತ ಬಂದಿದೆ. ಯಾವುದೋ ಒಂದು ಸಣ್ಣ ಊರಿನಲ್ಲಿ ಬೀಡಿ ಕರಪತ್ರ ಅಚ್ಚು ಹಾಕುವವರ ಹತ್ತಿರ ಕತ್ತೆಯಂತೆ ದುಡಿದು ದುಡಿದು ಬಡವಾಗಿದ್ದ ಆ ಯಂತ್ರವನ್ನು ರಂಗಯ್ಯ ಐದುನೂರು ರೂಪಾಯಿಗಳಿಗೆ ಕೊಂಡು ತಂದಂದಿನಿಂದ ಆಗಾಗ ಅದಕ್ಕೆ ಎಣ್ಣೆಯ ಸ್ನಾನವಾದರೂ ಆಗುತ್ತಿದೆ. ಆದರೂ ಅದರ ಗೊಣಗಾಟವೇನೂ ನಿಂತುಹೋಗಿಲ್ಲ. ರಂಗಯ್ಯನಿಗೂ ಬೇಸರವಿಲ್ಲ. ಅದರೊಂದಿಗೆ ತಾನೂ ಗೊಣಗಿಕೊಳ್ಳುತ್ತ ಆತ ಕೆಲಸ ಸಾಗಿಸುತ್ತ ಬಂದಿದ್ದಾನೆ.

ರಂಗಯ್ಯನೊಬ್ಬನನ್ನು ಬಿಟ್ಟರೆ ಆ ಮಹಾನಗರದಲ್ಲಿ ಇನ್ನಾವ ಮುದ್ರಕರ ಹತ್ತಿರವೂ ಅಂಥ ಯಂತ್ರವಿಲ್ಲ. ಅವನನ್ನು ಬಿಟ್ಟರೆ ಬೇರಾರಿಗೂ ಅದರಿಂದ ಕೆಲಸ ತೆಗೆದುಕೊಳ್ಳುವುದೂ ಸಾಧ್ಯವಿಲ್ಲ. ಕೆಲವು ಜಾತಿಯ ಕುದುರೆಗಳನ್ನು ವಸ್ತಾದರು ಮಾತ್ರವೆ ಪಳಗಿಸಬಲ್ಲರಂತೆ. ಹಾಗೆಯೇ ಈ ಯಂತ್ರವನ್ನು ವಸ್ತಾದ ರಂಗಯ್ಯನೊಬ್ಬ ಮಾತ್ರ ನಡೆಸಬಲ್ಲ. ಕಾಲಿನಿಂದ ತುಳಿದರೆ ಕೆಲಸ ಕೊಡುವ ಜಾತಿಯದಲ್ಲ ಈ ಯಂತ್ರ; ಇದರ ರೀತಿಯೆ ಬೇರೆ. ಎಡಗಡೆ ಉದ್ದವಾಗಿ ಕೊಂಬಿನಂತಿದ್ದ ಅದರ ಕೈಯನ್ನು ರಭಸದಿಂದ ಎಳೆದು ರಪ್ಪನೆ ಬೀಸಿದಾಗ ಅದು ಅಚ್ಚು ಮಾಡುವುದು. ಅದರ ಕೈಯನ್ನೆಳೆಯುವುದೂ ಸಾಮಾನ್ಯವಾದ ವಿಷಯವಲ್ಲ. ಎಳೆಯುವವನ ತೋಳಿನಲ್ಲಿ ಸಾಕಷ್ಟು ಬಲವಿದ್ದರೆ ಮಾತ್ರ ಅದು ಸಾಧ್ಯವಾದೀತು. ಶಕ್ತಿಯೊಂದೇ ಸಾಲದು; ಯುಕ್ತಿಯೂ ತಿಳಿದಿರಬೇಕು. ಅನುಭವವೂ ಬೇಕು. ಆ ವಿದ್ಯೆಯ ಎಲ್ಲ ವರಸೆಗಳನ್ನೂ ಅರಿತಿರಬೇಕು. ರಂಗಯ್ಯ ಗಟ್ಟಿಮುಟ್ಟಾದ ಆಳು. ಮೂವತ್ತೈದು ವರ್ಷ ವಯಸ್ಸಿನವ

ನಾಗಿದ್ದರೂ ಇಪ್ಪತ್ತರ ತರುಣರನ್ನೂ ನಾಚಿಸುವಂಥ ದೃಢಕಾಯ ಆತನದು. ತಾರುಣ್ಯದ ಹೊಸದರಲ್ಲಿ ಗರಡಿಯಲ್ಲಿ ಬೆವರಿಳಿಸಿದ ಪುಷ್ಟಗೊಂಡ ಮೈ. ಇಪ್ಪತ್ತು ವರ್ಷಗಳವರೆಗೆ ಮುದ್ರಣಾಲಯಗಳ ಗಾಣಕ್ಕೆ ಸಿಕ್ಕಿ ಬಿದ್ದಿದ್ದರೂ ಆತನ ಶಕ್ತಿ ಕುಂದಿರಲಿಲ್ಲ. ಅವರಿವರ ಹತ್ತಿರ ಗುಲಾಮಗಿರಿ ಮಾಡಿ ಬೇಸರಗೊಂಡು ಆತ ತನ್ನದೇ ಆದ ಈ ಮುದ್ರಣಾಲಯವನ್ನು ಸ್ಥಾಪಿಸಿದಂದಿನಿಂದ ಆತನ ಉತ್ಸಾಹವೂ ದ್ವಿಗುಣಿತವಾಗಿದ್ದಿತು. ಆತನ ತೋಳುಗಳಲ್ಲಿ ಶಕ್ತಿಯೂ ಹೆಚ್ಚಿದ ಹಾಗಿದ್ದಿತು. ಬೆಳಗಿನ ಆರು ಗಂಟೆಯಿಂದ ರಾತ್ರಿ ಹತ್ತು ಗಂಟೆಯವರೆಗೆ ಒಂದೆಸಮನೆ ದುಡಿಯ ಬೇಕಾಗಿದ್ದಿತಾದರೂ ಆತನಿಗೆ ಕೊಂಚವೂ ಬೇಸರವಾಗುತ್ತಿರಲಿಲ್ಲ. ಆ ದುಡಿತದಲ್ಲೂ ಅಪಾರ ಆನಂದವಿತ್ತು. ಮುದ್ರಣಾಲಯ ಎಂಥದಾಗಿದ್ದರೇನು, ಅದು ತನ್ನದೇ ಆದ ಸ್ವಂತ ಮುದ್ರಣಾಲಯ; ಹೃದಯಹೀನರಾದ ಸಾಹುಕಾರರ ಮುದ್ರಣಾಲಯಗಳಲ್ಲಿ ಕೆಲಸಗಾರನಾಗಿ ಮೈ ಬಗ್ಗಿಸಿ, ತಲೆ ತಗ್ಗಿಸಿ, ಎದೆ ಕುಗ್ಗಿಸಿ ನರಳುವುದು ತಪ್ಪಿಹೋಗಿದ್ದಿತು. ಸ್ವಂತ ಮುದ್ರಣಾಲಯವೊಂದನ್ನು ನಡೆಸಬೇಕೆಂದು ಆತನ ಬಹುದಿನಗಳ ಕನಸು ನನಸಾಗಿದ್ದಿತು. ಅಂತೆಯೆ, ಎಷ್ಟು ಬೆಮರಿಳಿಸಬೇಕಾಗಿ ಬಂದರೂ ಆತನಿಗೆ ಬೇಸರ ವಾಗುತ್ತಿರಲಿಲ್ಲ; ದಣಿವಾಗುತ್ತಿರಲಿಲ್ಲ. ಯಂತ್ರದ ಕೈಯನ್ನೆಳೆದು ಎಳೆದು ಆತನ ಎಡದೋಳು ಸೋತುಹೋಗುವುದು. ಆಗ ಒಂದೆರಡು ಕ್ಷಣ ವಿರಮಿಸಿಕೊಂಡು ತನ್ನ ಪ್ರೀತಿಯ ಗಣೇಶ ಬೀಡಿಯನ್ನು ಹತ್ತಿಸಿ ಹೊಗೆಯನ್ನೆಳೆಯುತ್ತ ದಣಿವಾರಿಸಿಕೊಳ್ಳುವನು, ಮುಖದ ಮೇಲೆಲ್ಲ ಸುರಿಯುವ ಬೆಮರ ಹನಿಗಳನ್ನು ಅಂಗಿಯಿಂದ ಒರೆಸಿಕೊಂಡು ಮತ್ತೆ ಕೆಲಸಕ್ಕಾರಂಭಿಸುವನು.

ಕಟ ಕಟಟ್ ಢಕ್
ಕಟ ಕಟಟ್ ಢಕ್

ಯಂತ್ರ ಗೊಣಗಿಕೊಳ್ಳುತ್ತ ತನ್ನ ಕೆಲಸಕ್ಕೆ ತೊಡಗುವುದು. ಅದರೊಂದಿಗೆ ರಂಗಯ್ಯ ದುಡಿತದಲ್ಲಿ ಮೈ ಮರೆಯುವನು.

ಆತನ ಬಲಬದಿಯಲ್ಲಿ ಎಳವರಯದ ಹುಡುಗನೊಬ್ಬ ನಿಂತುಕೊಂಡು ಅಚ್ಚಿನ ಯಂತ್ರಕ್ಕೆ ಬಿಳಿಯ ಹಾಳೆಗಳನ್ನು ಹಾಕಿ, ಅವು ಅಚ್ಚುಗೊಂಡ ಮೇಲೆ ಎತ್ತಿ ಆಚೆಗಿರಿಸುವ ಕೆಲಸದಲ್ಲಿ ತೊಡಗಿರುವನು. ಹುಡುಗ ಬಡಕಲು ಶರೀರಿ. ಇನ್ನೂ ಚಿಕ್ಕವ. ಹನ್ನೆರಡು ಹದಿಮೂರು ವರ್ಷ ವಯಸ್ಸಿನವನಿರಬಹುದು. ಇದ್ದಿಲು ಬಣ್ಣ. ಕೋಲಿನಂತಹ ಕಾಲುಗಳು. ಮುಖವೂ ಅಷ್ಟೆ ತೆಳ್ಳಗೆ ಕಳಾಹೀನವಾದುದು. ರಕ್ತದ

ಅಭಾವದಿಂದ ಒಳಸೇರಿ ಗೂಡು ಕಟ್ಟಿಕೊಂಡ ಕಣ್ಣುಗಳು. ಮೂಳೆಗಳನ್ನು ಎತ್ತಿ ತೋರಿಸುವ ಕೆನ್ನೆಗಳು, ಚೂಪುಗಲ್ಲಿನಂತೆ ಎದ್ದು ಕಾಣಿಸುವ ಮೂಗು, ಎಣ್ಣೆ ನೀರುಗಳನ್ನು ಕಾಣದೆ ಹೊಲಸೆದ್ದು ಗೊಮ್ಮೆಂದು ನಾರುವ ತಲೆಗೂದಲು. ಆತನ ಶರೀರದ ಮೇಲೆ ಯಾವಾಗಲೂ ಕಾಣಿಸುವ ಬಟ್ಟೆ ಒಂದೇ ಒಂದು – ಹರಿದು ಛಿದ್ರ ಛಿದ್ರವಾದ ಒಂದು ಚಡ್ಡಿ. ಸೊಂಟದ ಮೇಲಿನ ಭಾಗವೆಲ್ಲ ಯಾವಾಗಲೂ ಬರಿಯದಾಗಿರುವುದು. ವಾರದಲ್ಲಿ ಒಂದು ಸಲವೂ ನೀರು ಕಾಣದಿದ್ದ ಶರೀರ ಬೆಮರಿನಿಂದಲೂ ಹೊಲಸಿನಿಂದಲೂ ತುಂಬಿಕೊಂಡು ದುರ್ಗಂಧ ಬೀರುತ್ತಿರುವುದು. ಅದಾವುದರ ಕಡೆಗೂ ಆ ಹುಡುಗ ಲಕ್ಷ್ಯ ಹಾಕುವಾತನಲ್ಲ. ಮೂರು ಹೊತ್ತು ಹೊಟ್ಟೆ ತುಂಬಾ ಊಟ ದೊರೆತರಾಯಿತು; ಇನ್ನಾವುದರ ಪರವೆಯೂ ಆತನಿಗಿಲ್ಲ. ರಂಗಯ್ಯನ ಮನೆಯಲ್ಲಿ ದೊರೆಯುವ ಮೂರು ಹೊತ್ತಿನ ಊಟಕ್ಕಾಗಿ ಆತ ಆ ಮುದ್ರಣ ಯಂತ್ರದೊಂದಿಗೆ ತಾನೂ ಒಂದು ಯಂತ್ರದಂತಾಗಿ ಕೆಲಸ ಮಾಡುತ್ತಿರುವನು.

ಆ ದುರ್ಗಂಧದಿಂದಾಗಿ ರಂಗಯ್ಯನಿಗಾದರೂ ಬೇಸರವುಂಟಾಗುತ್ತಿದ್ದಿತೇ? ಇಲ್ಲ. ಆತನಿಗೂ ಅದರ ಕಡೆಗೆ ಗಮನವಿರುತ್ತಿರಲಿಲ್ಲ. ಇದಕ್ಕಿಂತ ಸಾವಿರ ಪಾಲು ಹೆಚ್ಚು ದುರ್ಗಂಧವಿರುತ್ತಿದ್ದ ಸ್ಥಳಗಳಲ್ಲಿ ಹಗಲಿರುಳೂ ದುಡಿದವನಾತ. ಈ ಮುದ್ರಣಾಲಯಕ್ಕಾಗಿ ಒಳ್ಳೆಯ ಸ್ಥಳ ದೊರಕಿಸುವುದೂ ಕಷ್ಟವಾಗಿತ್ತು. ಚಿಕ್ಕಪೇಟೆ, ದೊಡ್ಡಪೇಟೆಗಳಂಥ ಮುಖ್ಯ ಬೀದಿಗಳಲ್ಲಿ ನೂರಾರು ರೂಪಾಯಿ ಬಾಡಿಗೆಗೆ ಸರಿಯಾದ ಸ್ಥಳ ದೊರಕಿಸುವ ಯೋಗ್ಯತೆ ಅವನಿಗಿರಲಿಲ್ಲ. ಅಂತೆಯೆ, ಶೇಷಾದ್ರಿಪುರದ ಕೆಳಗಡೆ, ಸಾರ್ವಜನಿಕ ಚರಂಡಿಯ ಎದುರಿಗೆ, ಗಿರಣಿಯ ಕೂಲಿಕಾರರು ವಾಸಿಸುವ ಗುಡಿಸಲುಗಳ ಹತ್ತಿರ, ಕೂಲಿಕಾರರಿಗೂ ಬೇಡವಾಗಿ ಉಳಿದಿದ್ದ ಪುಟ್ಟ ಗುಡಿಸಲೊಂದರಲ್ಲಿ ಆತ ತನ್ನ ''ವೆಂಕಟರಮಣ ಮುದ್ರಣಾಲಯ''ವನ್ನು ಹೂಡಿದ್ದುದು. ಹೆಚ್ಚು ಬಾಡಿಗೆ ತೆರಬೇಕಾದ ತಾಪತ್ರಯ ಇರಲಿಲ್ಲ. ತಿಂಗಳಿಗೆ ಎಂಟು ರೂಪಾಯಿ ಕೊಟ್ಟರೆ ಮುಗಿದು ಹೋಗುತ್ತಿತ್ತು. ಎಂಟು ರೂಪಾಯಿನ ಆ ಗುಡಿಸಲಿನಲ್ಲಿ ಎರಡು ಭಾಗ. ಬಾಗಿಲಿಗೆ ಹೊಂದಿಕೊಂಡು ಒಂದು ಪಡಸಾಲೆ; ಅದರಾಚೆ ಅಡುಗೆಯ ಕೊಠಡಿ. ಪಡಸಾಲೆಯಲ್ಲಿಯೆ ಆತನ ಮುದ್ರಣಾಲಯ. ಒಂದೆರಡು 'ಕೇಸು'ಗಳು, ಅದೊಂದು ಹಳೆಯ ಮುದ್ರಣ ಯಂತ್ರ. ಅಲ್ಲಿ ಇಲ್ಲಿ 'ಗ್ಯಾಲಿ'ಗಳು, 'ಸ್ಟಿಕ್ಕು'ಗಳು, ಕಾಗದದ ಕಟ್ಟುಗಳು, ಮುದ್ರಣ ಶಾಯಿಯ ಡಬ್ಬಗಳು, ಅಚ್ಚಾಗಿ ಸಿದ್ಧವಾದ 'ಫಾರ್ಮು'ಗಳು, 'ಬ್ಲಾಕು'ಗಳು, ನಡುವೆ ಒಂದು 'ಸ್ಟೂಲು', ಅದರ ಮೇಲೆ ಬೆನ್ನು ಬಾಗಿಸಿ ಕುಳಿತುಕೊಂಡು ಮೊಳೆ ಜೋಡಿಸುವವನು ಕಂಪೋಜಿಟರ್ ರಾಮಯ್ಯ.

ಪಡಸಾಲೆಯನ್ನೂ ಅಡುಗೆಯ ಕೊಠಡಿಯನ್ನೂ ಐದು ಅಡಿ ಎತ್ತರವಾದ ಗೋಡೆಯೊಂದು ಬೇರ್ಪಡಿಸುವುದು. ನಡುವೆ ಬಾಗಿಲೇನೂ ಇಲ್ಲ. ಅದಕ್ಕೆ ಪ್ರತಿಯಾಗಿ ರಂಗಯ್ಯನ ಹಳೆಯ ಲುಂಗಿಯೊಂದು ಅಡುಗೆಯ ಗಡಿಗೆ ಮಡಿಕೆಗಳನ್ನು ಮರೆಮಾಡುವ ಕೆಲಸ ಮಾಡುವುದು. ರಂಗಯ್ಯನ ಮೈಮೇಲಿರುತ್ತಿದ್ದಾಗ ಆ ಲುಂಗಿಗೆ ಎರಡು ದಿನಗಳಿಗೊಂದು ಸಲವಾದರೂ ನೀರಿನ ಸಹವಾಸ ಲಭಿಸುತ್ತಿದ್ದಿತು. ಆದರೆ ಆ ಕೆಲಸದಿಂದ ನಿವೃತ್ತನಾದ ಬಳಿಕ, ಅಡುಗೆಯ ಮನೆಯ ಪ್ರವೇಶದ್ವಾರದಲ್ಲಿ ನೇತಾಡ ತೊಡಗಿದಂದಿನಿಂದ ಅದು ನೀರನ್ನು ಕಾಣದೆ, ಹೊಗೆಯಿಂದ ಏಟು ತಿಂದು ತಿಂದು ಹೊಗೆಯಂತೆಯೆ ಕಾಣಿಸತೊಡಗಿದೆ, ಹೊಗೆಗಿಂತಲೂ ಕಪ್ಪಾಗಿದೆ, ಕಪ್ಪಿಗಿಂತಲೂ ಬಣ್ಣಗೆಟ್ಟಿದೆ. ಹೊಗೆಯ ಸಹವಾಸ ಮಾತ್ರವಲ್ಲ; ರಂಗಯ್ಯನ ಮನೆಯಾಕೆಯ ಮುಸುರೆಗೈಯ ಸಹವಾಸವೂ ಆ ಲುಂಗಿಗೇ. ಮೊಳೆ ಜೋಡಿಸುವ ರಾಮಯ್ಯ ತನ್ನ ಕೈಯನ್ನೊರೆಸುವುದೂ ಆ ಲುಂಗಿಗೇ. ರಂಗಯ್ಯನ ಬೆಮರು, ಹಾಳೆಗಳನ್ನು ಕೊಡುವ ಹುಡುಗನ ಸಿಂಬುಳ – ಎಲ್ಲವೂ ಆ ಲುಂಗಿಯ ಮೇಲೇ. ಹಲವು ಬಗೆಯ ಎಳೆಯನ್ನು ಹೊತ್ತು ವಿಲಕ್ಷಣ ರೂಪು ತಳೆದಿದೆ ಅದು. ಅದರಿಂದ ಹೊರಡುವ ದುರ್ಗಂಧವೂ ವಿಲಕ್ಷಣವಾದುದೇ.

ಆದರ ಮರೆಯಲ್ಲಿ ಕುಳಿತು ರಂಗಯ್ಯನ ಪತ್ನಿ ದೇವಮ್ಮ ಅಡುಗೆ ಮಾಡುತ್ತಾಳೆ. ಎಂಟು ಅಡಿ ಉದ್ದ ನಾಲ್ಕು ಅಡಿ ಅಗಲವಾದ ಆ ಪುಟ್ಟ ಕೊಠಡಿಯಲ್ಲಿ ಅವರ ಸಂಸಾರದ ಸಮಗ್ರ ಸಾಮಗ್ರಿಗಳೂ ತುಂಬಿಕೊಂಡಿವೆ. ಗಡಿಗೆ ಮಡಿಕೆಗಳು, ಡಬ್ಬಗಳು, ತಟ್ಟೆ ಲೋಟಗಳು, ಸೌದೆ ಇದ್ದಿಲು ಎಲ್ಲವೂ ಅಲ್ಲಿಯೆ. ಒಲೆಯ ಎದುರಿನ ಮೂಲೆಯಲ್ಲಿ ಹಳೆಯ ಮುರುಕಲು ಪೆಟ್ಟಿಗೆಯೊಂದು ಅವರ ಬಟ್ಟೆ ಬರೆಗಳನ್ನು ಹೊತ್ತು ಕುಳಿತಿದೆ. ಅದರ ಮೇಲೆ ಕೊಳಕು ಹಾಸುಗೆಯೊಂದು–ಅವರ ಏಕಮಾತ್ರ ಹಾಸುಗೆ. ಗೋಡೆಗುಂಟ ತೂಗುಹಾಕಲಾದ ಬಿದಿರುಗಳದ ಮೇಲೆ ಒಂದೆರಡು ಹಳೆಯ ಸೀರೆ, ಒಂದೆರಡು ಹರಿದ ರವಕೆ...

ಪಶ್ಚಿಮದ ಕಡೆಯಿಂದ ಗಾಳಿ ಬೀಸಿದಾಗ ಎದುರಿನ ಚರಂಡಿಯಿಂದ ಕೊಳೆತ ನೀರಿನ ದುರ್ವಾಸನೆ ಘೊಮ್ಮೆಂದು ಬೀಸಿ ಬರುವುದು. ಅದರೊಂದಿಗೆ ನೊಣಗಳ ದಂಡಿಗೆ ದಂಡೇ ದಾಳಿಯಿಡುವುದು. ಬಾಗಿಲು ಮುಚ್ಚಿಬಿಟ್ಟರೆ ಆ ತೊಂದರೆಗಳು ತಪ್ಪಿ ಹೋಗುವಂತಿದ್ದರೂ ಅದನ್ನು ಮುಚ್ಚಿದರೆ ಕೆಲಸ ಸಾಗುವಂತಿರಲಿಲ್ಲ. ಮುದ್ರಣಾಲಯಕ್ಕೆಲ್ಲ ಬೆಳಕು ಬರಬೇಕಾದುದು ಆ ಬಾಗಿಲಿನಿಂದಲೇ. ಅದನ್ನು ಬಿಟ್ಟರೆ ಮನೆಗೆ ಒಂದು ಕಿಟಕಿಯೂ ಇಲ್ಲ. ಛಾವಣಿಗಂತೂ ತಗಡಿನ ಹೊದಿಕೆ. ಅಂತೆಯೇ ಒಳಗಿನಿಂದ

ಸಾಯಂಕಾಲದವರೆಗೂ ತೆರೆದುಕೊಂಡೇ ಇರಬೇಕು ಆ ಬಾಗಿಲು. ಅದರೊಳಗಿನಿಂದ ನೊಣ ನುಗ್ಗಿದರೂ ಸರಿ, ದನ ನುಗ್ಗಿದರೂ ಸರಿ, ದುರ್ವಾಸನೆ ಬಂದರೂ ಸರಿ, ಬಿರುಮಳೆ ಜಡಿದರೂ ಸರಿ, ಯಾವುದನ್ನೂ ಗಮನಿಸದೆ ಕೆಲಸವಾಗಬೇಕು.

ಅದೆಲ್ಲ ಅಭ್ಯಾಸವಾಗಿ ಹೋಗಿದೆ ರಂಗಯ್ಯನಿಗೆ; ಆ ಅಂಗೈಯಗಲದ ಸ್ಥಳ, ಎದುರಿಗಿರುವ ಆ ಹೊಲಸು ಚರಂಡಿ, ಅದರ ಮೇಲಿನಿಂದ ಬೀಸಿ ಬರುವ ಆ ದುರ್ಗಂಧ, ನೊಣ – ಸೊಳ್ಳೆಗಳ ದಾಳಿ, ಹೊಗೆಯ ಹಾವಳಿ, ಬಿಸಿಲಿನ ಬೇಗೆ, ಪಕ್ಕದಲ್ಲಿರುವ ಹುಡುಗನ ತಲೆಗೂದಲಿನ ಹೊಲಸು ವಾಸನೆ – ಎಲ್ಲವೂ ಅಭ್ಯಾಸವಾಗಿದೆ. ಇಪ್ಪತ್ತೈದು ವರ್ಷಗಳಿಂದ ಬೀಡಿಯ ಉಗ್ರ ಹೊಗೆಯನ್ನು ಎಳೆದುದರಿಂದಾಗಿ ಆತನ ಘ್ರಾಣೇಂದ್ರಿಯದ ಶಕ್ತಿಯೂ ಕುಗ್ಗಿ ಹೋಗಿದೆ. ಇಂಥ ವಾತಾವರಣದಲ್ಲಿ ಕೆಲಸ ಮಾಡುವವರಿಗೆ ಇದೂ ಒಂದು ಅನುಕೂಲತೆಯೇ ಸರಿ.

ಕಟ ಕಟಟ್ ಥಕ್
ಕಟ ಕಟಟ್ ಥಕ್...

ಯಂತ್ರ ತನ್ನಷ್ಟಕ್ಕೆ ತಾನು ಕೆಲಸ ಮಾಡುತ್ತಿತ್ತು. ಹಣೆಯಿಂದ ಇಳಿಯುವ ಬೆವರ ಹನಿಗಳನ್ನು ಬಲಗೈಯಿಂದ ನೀವಿಕೊಳ್ಳುತ್ತ ರಂಗಯ್ಯ ಎಡಗೈಯಿಂದ ಯಂತ್ರವನ್ನೆಳೆಯುತ್ತಿದ್ದ. ಮಧ್ಯಾಹ್ನ ಹನ್ನೆರಡು ಗಂಟೆಯಾಗಿರಬಹುದು. ಪಕ್ಕದಲ್ಲಿ ಸ್ಟೂಲಿನ ಮೇಲೆ ಕುಳಿತುಕೊಂಡು ನಿಧಾನವಾಗಿ ಮೊಳೆ ಜೋಡಿಸುತ್ತಿದ್ದ ರಾಮಯ್ಯನ ಹೊಟ್ಟೆ ಹಸಿವಿನಿಂದ ಕೂಗಿಕೊಳ್ಳುತ್ತಿದ್ದಿತು. ಹಾಳೆಗಳನ್ನೆತ್ತಿ ಇಡುವ ಹೈದನೂ ನಿಧಾನವಾಗಿ ಕೈಗಳನ್ನಾಡಿಸುತ್ತಿದ್ದ. ರಂಗಯ್ಯನಿಗೆ ಮಾತ್ರ ಹಸಿವಾದ ಹಾಗಿರಲಿಲ್ಲ. ಸುತ್ತಮುತ್ತಲಿನ ಪ್ರಪಂಚವನ್ನೆಲ್ಲ ಮರೆತು ಆತ ತನ್ನ ಯಂತ್ರದೊಂದಿಗೆ ಸಮರಸವಾಗಿ ದುಡಿಯುತ್ತಿದ್ದ. ಮೊದಲಿನಿಂದಲೂ ಆತನ ಸ್ವಭಾವವೇ ಹಾಗೆ. ಅದೊಂದು ವಿಲಕ್ಷಣ ದುಡಿತ. ಆತನ ಏಕಾಗ್ರತೆಗೆ ಹೆದರಿ ಹಸಿವೂ ಸಹ ತೆಪ್ಪಗೆ ಬಾಯಿ ಮುಚ್ಚಿಕೊಂಡು ಬಿದ್ದಂತಿದ್ದಿತು.

"ರೀಽಽಽಽ"

ಅದು ದೇವಮ್ಮನ ಕೂಗು; ಕೆಲಸದಲ್ಲಿ ತನ್ಮಯನಾಗಿದ್ದ ರಂಗಯ್ಯನಿಗೆ ಅದು ಕೇಳಿಸಲಿಲ್ಲ.

ಒಲೆಯನ್ನು ಬಿಟ್ಟು ಮೇಲಕ್ಕೆದ್ದು ದೇವಮ್ಮ ಲಂಗಿಯ ಪರದೆಯನ್ನು ಬದಿಗೆ

ಸರಿಸಿ ಮತ್ತೆ ಕೂಗಿದಳು : "ರೀSS ಇವರೇ!"

ಈ ಸಲ ಕೂಗು ಇನ್ನೂ ಗಟ್ಟಿಯಾಗಿದ್ದಿತು. ಮೊಳೆ ಜೋಡಿಸುತ್ತಿದ್ದ ರಾಮಯ್ಯ ತಲೆಯೆತ್ತಿ ಆಕೆಯ ಕಡೆಗೆ ಹೊರಳಿದ. ಹಾಳೆಯನ್ನೆತ್ತಿ ಇಡುತ್ತಿದ್ದ ಹುಡುಗನೂ ಹಿಂದಿರುಗಿ ಆಕೆಯನ್ನೊಮ್ಮೆ ನಿಟ್ಟಿಸಿ ನೋಡಿದ. ಆತ ಹಿಂದೆ ಹೊರಳಿದುದರಿಂದ ಯಂತ್ರದ ಗತಿ ತಪ್ಪಿಹೋಯಿತು. ಅದರೊಂದಿಗೆ ರಂಗಯ್ಯನ ಕೈಯೂ ತಡೆದು ನಿಂತುಕೊಂಡಿತು. ಆತ ಹೊರಳಿ ಪತ್ನಿಯನ್ನು ಕಂಡು – "ಏನೇ?" ಎಂದ.

"ಉಪ್ಪು ತೀರಿಹೋಗೈತೆ. ಮುದ್ದೆಗೆ ಹಾಕೋದಕ್ಕೂ ಇಲ್ಲ..."

ರಂಗಯ್ಯ ಗೊಣಗಿಕೊಳ್ಳುತ್ತ ಯಂತ್ರವನ್ನು ಬಿಟ್ಟು ಈಚೆಗೆ ಬಂದ. ಪಂಚೆಯಿಂದ ಮುಖವನ್ನೊರೆಸಿಕೊಳ್ಳುತ್ತ "ಮುದ್ದೆಗೆ ಇಟ್ಟ ಮೇಲೇ ಹೇಳಬೇಕೇನೊ! ಬೆಳಿಗ್ಗೆ ಹೇಳಿದ್ದರೇನಾಗುತ್ತಿತ್ತು?" ಎಂದ.

"ನಿನ್ನ ಸಾಯಂಕಾಲಾನೇ ಹೇಳಿರಲಿಲ್ಲವೇ ತನ್ನಿ ಅಂತ. ಆಗಲಿ ಅಂದು ಬಿಟ್ಟು ಹೋದವನು ಪಿರಿ ಪಿರಿ ತಿರಿಗಿಕೊಂಡು ಬರಿಗೈಯಾಗೆ ಮನೆಗೆ ಬಂದಿರಿ. ನಾನೇನು ಮಾಡಲಿ?"

ರಂಗಯ್ಯ ಹುಬ್ಬು ಗಂಟು ಹಾಕಿಕೊಂಡು – "ನಿನ್ನೆ ಸಾಯಂಕಾಲದ ಮಾತು ಹೇಳಲಿಲ್ಲ ನಾನು. ಇಂದು ಬೆಳಗಾಗ ಮತ್ತೆ ಹೇಳಿದ್ದರೇನಾಗುತ್ತಿತ್ತು ಅಂದೆ. ಯಾವಾಗಲೂ ಹೀಗೇ ನೀನು. ಒಲೆಯ ಮೇಲೆ ಅಡಿಗೆಗಿಟ್ಟು ಆಮೇಲೆ ಅದಿಲ್ಲ ಇದಿಲ್ಲ ಅಂತ ಪ್ರಾಣ ತೆಗೆಯುವವಳು..." ಎಂದು ಗೊಣಗಿಕೊಳ್ಳುತ್ತ – "ಹೋಗು ಹೈದ... ಆ ಸೆಟ್ಟಿಯ ಅಂಗಡಿಗೆ ಹೋಗಿ ಒಂದು ಸೇರು ಉಪ್ಪು ತೆಗೆದುಕೊಂಡು ಬಾ," ಎಂದು ನುಡಿದು ದುಡ್ಡಿನ ಅಂಗಿಯ ಜೇಬಿಗೆ ಕೈ ಹಾಕಿದ.

ಕೈ ಜೇಬಿನಲ್ಲಿಯೇ ಉಳಿಯಿತು; ಹೊರಕ್ಕೆ ಬರಲು ಹಿಂಜರಿಯತೊಡಗಿತು.

ಅವನ ಜೇಬಿನಲ್ಲಿ ಆಗ ಇದ್ದ ಹಣವೆಂದರೆ ಕೇವಲ ಆರು ಕಾಸು! ಒಂದು ಸೇರಿ ಉಪ್ಪಿಗೆ ಎರಡಾಣೆ ಬೇಕು. ಆಗ ಅವನ ಹತ್ತಿರ ಅಷ್ಟು ಹಣವೂ ಇರಲಿಲ್ಲ.

ರಂಗಯ್ಯನ ಮುಖದ ಮೇಲೆ ವಿಷಾದಪೂರ್ಣ ನಗೆಯ ಅಲೆಯೊಂದು ಸುಳಿಯಿತು. ಜೇಬಿನಿಂದ ಕೈಯನ್ನು ತೆಗೆದು ಕೆಳಗಡೆ ಬಿದ್ದಿದ್ದ ಕಾಗದವೊಂದಕ್ಕೆ ಮಸಿಯನ್ನೊರಸುತ್ತ – "ನೀನು ಊಟ ತೀರಿಸಿಕೊಂಡು ಬಾ ಹೋಗು ರಾಮಯ್ಯ,"

ಎಂದು ಹೇಳಿ ಅವನನ್ನು ಕಳುಹಿಸಿಕೊಟ್ಟು ತಾನು ನೆಲದ ಮೇಲೆ ಕುಳಿತುಕೊಂಡ.

''ಯಾಕೆ ಕೂತುಕೊಂಡುಬಿಟ್ಟಿರಿ ದೇವರ ಕೂತ ಹಾಗೆ? ಉಪ್ಪಿಗೇನು ಮಾಡಲಿ? ಸೇರಿಸಬೇಕು ಅಂತೀರೋ ಇಲ್ಲವೋ? ಮುದ್ದೆ ಬೇಯ್ದು ಹೋಯ್ತು...''

''ನಿನ್ನ ಹತ್ತಿರ ಏನಾದರೂ ಕಾಸಿದ್ದರೆ ನೋಡು. ಕೊಟ್ಟು ಕಳಿಸು,'' ಎಂದ ರಂಗಯ್ಯ.

''ನೀವು ತಂದು ತಂದು ಕೊಡ್ತೀರಿ. ನಾನು ಗಂಟು ಮಾಡಿ ಇಟ್ಟಿರುತ್ತೇನೆ. ನನ್ನ ಹತ್ತಿರ ಇರುತ್ತೆ! ಉಪ್ಪಿಗೆ ಎರಡಾಣೆ ಇಲ್ಲಾಂದರೆ ಎಂಥ ನಾಚಿಕೆಗೇಡು. ಮತ್ತೆ ಮೇಲೆ ಒಂದು ಪ್ರೆಸ್ಸಿನ ಮಾಲೀಕರಂತೆ. ಏನು ಪ್ರೆಸ್ಸೋ ಏನು ಮಾಲೀಕರೋ, ಆ ಪತ್ರಿಕೆಯವ ರೊಬ್ಬರು ಗಂಟುಬಿದ್ದಿದ್ದಾರೆ ನಿಮಗೆ. ಹಗಲಿರುಳೂ ಅವರ ಕೆಲಸ ಮಾಡುತ್ತೀರಿ. ಹೊತ್ತಿಗೆ ಸರಿಯಾಗಿ ಹಣ ಮಾತ್ರ ಬರುವಂತಿಲ್ಲ, ಅದಕ್ಕೆ ಬದಲಾಗಿ ಬೇರೆ ಕೆಲಸ ಮಾಡಿದ್ದರೆ ಇಂಥ ಸ್ಥಿತಿಯೇಕೆ ಬರುತ್ತಿತ್ತು?''

''ಅದೆಲ್ಲಾ ನಿನಗರ್ಥವಾಗದು ದೇವೂ. ಸುಮ್ಮನೆ ಬಾಯಿ ಹರಿಬಿಡಬೇಡ. ಅವರ ಬಗ್ಗೆ ಹೀಗೆಲ್ಲ ಮಾತನಾಡಬಾರದು. ಅವರ ಕೆಲಸ ಬೇರೆ, ನನ್ನ ಕೆಲಸ ಬೇರೆಯಲ್ಲ, ಆ ಪತ್ರಿಕೆ ಬರೀ ಅವರ ಪತ್ರಿಕೆಯಲ್ಲ, ಅದು ನಮ್ಮೆಲ್ಲರ ಪತ್ರಿಕೆ. ಅದೆಲ್ಲ ನಿನಗರ್ಥವಾಗುವಂತಿಲ್ಲ, ಈಗ ನಿನ್ನ ಹತ್ತಿರ ದುಡ್ಡಿದ್ದರೆ ಉಪ್ಪು ತರಿಸು. ನಾಳೆ ಅವರು ಹಣ ಕೊಟ್ಟಾರು. ಇಂದೇ ಸಿಕ್ಕಿದರೆ ಇಂದೇ ಕೊಡುವುದಾಗಿ ಹೇಳಿದ್ದಾರೆ. ಅವರು ಕೊಡುತ್ತಲೂ ನಿನ್ನ ಕೈಗೆ ಕೊಡುತ್ತೇನೆ...''

''ಹೋ ಹೋ! ಅವರು ಕೊಟ್ಟರು, ನೀವು ತೆಗೆದುಕೊಂಡಿರಿ, ನಾನು ಕಂಡೆ! ಒಂದು ವರ್ಷದಿಂದ ಕಾಣುತಾ ಇಲ್ಲವೆ ಅವರು ಕೋಡೋದನ್ನ! ಆಗ ಐದು, ಈಗ ಮೂರು, ಒಮ್ಮೆ ಎರಡು, ನಾಳೆ ಒಂದು, ನಾಳಿದ್ದು ಒಂದೂವರೆ! ಅವರು ಕೊಡೋದು ಆ ರಾಮಯ್ಯನ ಸಂಬಳಕ್ಕಾಗದರೂ ಸಾಲುತ್ತದೆಯೇ?''

''ಇರಲಿ ಇರಲಿ ಹೆಚ್ಚು ಹರಟಬೇಡ. ಈಗ ಉಪ್ಪು ಬೇಕಿದ್ದರೆ ಏನಾದರೂ ಮಾಡಿ ತರಿಸು. ಬೇಡವಾದರೆ ಬಿಟ್ಟುಬಿಡು. ಇದೊಂದು ದಿನ ಉಪ್ಪಿಲ್ಲದೆ ತಿಂದರಾಯಿತು. ಏನೋ ಹೈದ, ಸಪ್ಪೆಯ ಮುದ್ದೆ ತಿನ್ನಲು ಆಗದೆ ನಿನಗೆ?''

ಸಪ್ಪಗಿನದಾದರೇನು, ರುಚಿಕಟ್ಟಾದುದಾದರೇನು – ಹೈದನಿಗೆ ಎಲ್ಲ ಒಂದೇ. ಹಳಸಿದ ಮುದ್ದೆ ಮುಸುರೆಯನ್ನ, ತಂಗಳು ರೊಟ್ಟಿ ತಿಂದು ಬೆಳೆದ ಪರದೇಶಿ ಜೀವ

ಅದು. ರಂಗಯ್ಯನ ಆಶ್ರಯಕ್ಕೆ ಬಂದಂದಿನಿಂದ ಮೂರು ಹೊತ್ತು ಊಟವಾದರೂ ಸಿಕ್ಕುತ್ತಿದೆ. ಎಂಥ ಊಟವಾದರೇನಂತೆ, ಅದರಿಂದ ಆತನ ಹಸಿವು ಮಾಯವಾದ ರಾಯಿತು. ಹೈದ ಏನು ಉತ್ತರ ಕೊಡಬಲ್ಲ? ಆತ ಮೌನವಾಗಿದ್ದ.

''ನಿಮಗೇನು, ಉಪ್ಪಿದ್ದರೂ ನಡೆದೀತು, ಇಲ್ಲದಿದ್ದರೂ ನಡೆದೀತು. ನಿಮ್ಮಿಂದಾಗಿ ನಾನೂ ಸಾಯಬೇಕಾಗಿ ಬಂದಿತು. ನನ್ನ ದುರದೃಷ್ಟ ನೀವೇನು ಮಾಡೀರಿ. ಉಪ್ಪಿಲ್ಲದ ಮುದ್ದೆ ಮುಕ್ಕುವ ಗತಿ ಬಂದಿತೇ ನನಗೆ!'' ಎನ್ನುತ್ತ ದೇವಮ್ಮ ಬಿಕ್ಕುತ್ತ ಬಿಕ್ಕುತ್ತ ಒಲೆಯೆದುರು ಕುಕ್ಕರಿಸಿದಳು.

ರಂಗಯ್ಯನ ತುಟಿಗಳ ಮೇಲೆ ವಿಷಾದಪೂರ್ಣ ನಗೆ ನರ್ತಿಸತೊಡಗಿತು. ಇಂತ ಸನ್ನಿವೇಶ ಅವನಿಗೆ ಅಪರಿಚಿತವಾದುದೇನೂ ಆಗಿರಲಿಲ್ಲ. ಸಂಸಾರಕ್ಕಾರಂಭಿಸಿದ ಈ ಹದಿನೈದು ವರ್ಷಗಳಲ್ಲಿ ಇಂಥ – ಇದಕ್ಕಿಂತ ಕಟುತರವಾದ ಎಷ್ಟೋ ಸನ್ನಿವೇಶ ಗಳನ್ನಾತ ಎದುರಿಸಿದ್ದ. 'ಅತಂತ್ರ ಕರ್ನಾಟಕ' ವಾರಪತ್ರಿಕೆಯ ಆ ಚಂಡಕಶಾಸ್ತ್ರೀಯ ಮುದ್ರಣಾಲಯದಲ್ಲಿ ಕೆಲಸಕ್ಕಿದ್ದಾಗ ಎಷ್ಟೋ ಸಲ ಎರಡು ಮೂರು ದಿನಗಳವರೆಗೆ ಗಂಡ ಹೆಂಡತಿ ಇಬ್ಬರೂ ಉಪವಾಸ ಬೀಳುವ ಪ್ರಸಂಗ ಬರುತ್ತಿತ್ತು. ಶಾಸ್ತ್ರಿ ಮಹಾಲೋಭಿ. ವಾರ ವಾರವೂ ಸಂಬಳ ಕೊಡಬೇಕಾದರೆ ಆತನ ಪ್ರಾಣವೇ ಹೋದ ಹಾಗಾಗುತ್ತಿತ್ತು. ಭಾನುವಾರ ದೊರೆಯಬೇಕಾದ ಸಂಬಳ ಬುಧವಾದರೂ ಕೈಗೆ ಬರುತ್ತಿರಲಿಲ್ಲ. ಸಂಬಳದ ಹಣ ಬಂದ ಬಳಿಕ ಆಹಾರ ಸಾಮಗ್ರಿಗಳನ್ನು ಕೊಂಡು ತಂದು ಅಡಿಗೆಗಿಡಬೇಕಾದ ಪರಿಸ್ಥಿತಿಯಿತ್ತು. ಅಂಗಡಿಗಳಲ್ಲಿ ಸಾಲ ಹುಟ್ಟುವಂತಿರಲಿಲ್ಲ. ಅಕ್ಕಪಕ್ಕದ ಮನೆಗಳಲ್ಲಿ ದಟ್ಟ ದಾರಿದ್ರ್ಯ. ಎಲ್ಲಿಯೂ ಯಾವ ವಸ್ತುವೂ ಕಡ ದೊರೆಯುವಂತಿರಲಿಲ್ಲ. ಸಂಬಳ ಬಂದರೆ ಊಟ; ಇಲ್ಲದಿದ್ದರೆ ಉಪವಾಸ. ಅದೂ ಅವರಿಗೆ ಅಭ್ಯಾಸವಾಗಿ ಹೋಗಿತ್ತು!

ಈ ಮೂರು ಹೊತ್ತು ಊಟಕ್ಕಂತೂ ಕೊರತೆಯಿಲ್ಲ. ಉಪ್ಪು ಖಾರ – ಇವೆಲ್ಲ ಚಿಲ್ಲರೆ ವಿಷಯಗಳು... ದೇವೂಗೆ ಬುದ್ಧಿ ಕಡಮೆ, ತಿಳಿವಳಿಕೆ ಕಡಮೆ. ಅವಳ ಸ್ವಭಾವವೇ ಹಾಗೆ. ಅದಕ್ಕೆ ಉಪಾಯವಿಲ್ಲ.

ರಂಗಯ್ಯ ಬೀಡಿಯೊಂದನ್ನು ತೆಗೆದು ಹೊತ್ತಿಸಿದ. ಅದರ ಉಗ್ರ ಮಾದಕತೆಯಲ್ಲಿ ಪ್ರಪಂಚದ ತಾಪತ್ರಯಗಳನ್ನು ಮರೆಯತೊಡಗಿದ.

# ೨

ಅದೇ ಸಮಯದಲ್ಲಿ-

ಆ ಮುದ್ರಣಾಲಯದಿಂದ ನೂರು ಅಡಿ ದೂರದಲ್ಲಿದ್ದ 'ಕ್ರಾಂತಿ' ಪತ್ರಿಕೆಯ ಕಾರ್ಯಾಲಯದಲ್ಲಿ, ಆ ಪತ್ರಿಕೆಯ ಸಂಪಾದಕ ಚಂದ್ರಣ್ಣ ಕುರ್ಚಿಯಲ್ಲೊರಗಿ ಕುಳಿತುಕೊಂಡು ಕಾಲುಗಳೆರಡನ್ನೂ ಮೇಜಿನ ಮುಂಭಾಗಕ್ಕೆ ಅನಿಸಿ ನಿಲ್ಲಿಸಿ ಸಿಗರೇಟಿನ ಹೊಗೆಯಲ್ಲಿ ತನ್ನ ತಾಪತ್ರಯಗಳನ್ನು ಮರೆಸಲು ಯತ್ನಿಸುತ್ತಿದ್ದ.

ರಂಗಯ್ಯನ ಮುದ್ರಣಾಲಯಕ್ಕಿಂತ ಉತ್ತಮವಾದ ಸ್ಥಳವೇನೂ ಆಗಿರಲಿಲ್ಲ ಅದು. ಚಿಕ್ಕ ಸಂದಿಯೊಂದರಲ್ಲಿ ಸೈಕಲ್ ಅಂಗಡಿಯೊಂದರ ಅಟ್ಟದ ಮೇಲೆ ಆ ಕೊಠಡಿ. ಎಂಟು ಜನ ಕುಳಿತುಕೊಂಡರೆ ತುಂಬಿಹೋಗುವಷ್ಟು ಸಂಕುಚಿತವಾದ ಸ್ಥಳ. ತಿಂಗಳಿಗೆ ಹತ್ತು ರೂಪಾಯಿ ಬಾಡಿಗೆಗೆ ಆ ಕೊಠಡಿಯನ್ನು ಹಿಡಿದು ಚಂದ್ರಣ್ಣ ಅಲ್ಲಿ ತನ್ನ ಪತ್ರಿಕೆಯ ಸಂಸಾರ ಹೂಡಿದ್ದ.

ಯಾರಿಂದಲೋ ಕಡ ತಂದ ಕುರ್ಚಿಯೊಂದು; ಗೆಳೆಯ ಗುಬ್ಬಣ್ಣ ತಂದು ಕೊಟ್ಟ ಒಂದು ಹಳೆಯ ಮೇಜು, ಧೂಳು ಹರಡಿದ ನೆಲದ ಮೇಲೆ ಕೊಳೆ ತುಂಬಿದ ಒಂದು ಚಾಪೆ. ಗೋಡೆಗಿದ್ದ ಕಪಾಟಿನಲ್ಲಿ ಪುಸ್ತಕಗಳೂ ಫೈಲುಗಳೂ ಒಂದು ಮೇಲೊಂದರಂತೆ ಬಿದ್ದಿದ್ದುವು. ಒಂದು ಮೂಲೆಯಲ್ಲಿ ಅಚ್ಚಿನ ಕಾಗದದ 'ರೀಮು' ಗಳು. ಅವುಗಳ ಮೇಲೆ ಪತ್ರಿಕೆಯ ಹಳೆಯ ಸಂಚಿಕೆಗಳು ಚೆಲ್ಲಾಪಿಲ್ಲಿಯಾಗಿ ಹರಡಿಕೊಂಡಿದ್ದುವು. ಗೋಡೆಗಳ ಮೇಲೆ ಐದಾರು ಪಟಗಳು; ಗಾಂಧೀಜಿ, ನೆಹರೂ, ವಿವೇಕಾನಂದ, ಟಾಗೂರ್, ಕುವೆಂಪು. ಕೊಠಡಿಯ ತುಂಬಾ ವೃತ್ತಪತ್ರಿಕೆಗಳು ಅಸ್ತವ್ಯಸ್ತ ವಾಗಿ ಹರಡಿದ್ದುವು. ಬಾಗಿಲ ಬಳಿ ಸಿಗರೇಟಿನ ಕೊರೆ ತುಂಡುಗಳು. ಚಾಪೆಯ ತುದಿಯಲ್ಲಿ ಜಮಖಾನವೊಂದು ಸುರಳಿ ಸುತ್ತಿ ಮಲಗಿತ್ತು. ಅದರ ಮೇಲಿನ ಗೋಡೆಯ ಮೊಳೆಗಳಿಗೆ ಒಂದು ಖಾದಿ ಜುಬ್ಬ ಒಂದು ಪೈಜಾಮಾ ನೇತಾಡುತ್ತಿದ್ದುವು.

ಸಿಗರೇಟನ್ನೆಳೆದು ಹೊಗೆಯನ್ನುಗುಳುತ್ತ ಚಂದ್ರಣ್ಣ ಕಣ್ಣುಗಳನ್ನು ಅರ್ಧ ಮುಚ್ಚಿಕೊಂಡು ಒರಗಿದ್ದಾನೆ. ಊಟದ ಸಮಯ ಮೀರಿಹೋಗುತ್ತಿರುವುದರ ಅರಿವೂ ಆತನಿಗಿಲ್ಲ. ಹೊತ್ತಿಗೆ ಸರಿಯಾಗಿ ಊಟಕ್ಕೆ ಹೋಗದಿದ್ದರೆ ಹೋಟೆಲಿನಲ್ಲಿ ಅನ್ನ ಆರಿ ತಂಗಳಾಗಿರುತ್ತದೆ. ಸಾರು, ಪಲ್ಯ, ಚಟ್ನಿ ಮಜ್ಜಿಗೆ ಯಾವುದೂ ಉಳಿದಿರುವುದಿಲ್ಲ. ಆತನಿಗೆ ಹಸಿವೆಯಾಗಿಲ್ಲವೆಂದೇನೂ ಅಲ್ಲ. ಬೆಳಗ್ಗೆ ಒಂದು ಲೋಟ ಕಾಫಿ

ಕುಡಿದಿದ್ದುದೆಷ್ಟೋ ಅಷ್ಟೆ ಇನ್ನು ಹಸಿವೆ ಆಗದಿರುತ್ತದೆಯೆ? ಆದರೂ ಅದನ್ನಾತ ಮರೆತುಬಿಟ್ಟಂತಿದೆ.

- ಪತ್ರಿಕೆಯ ಮುಖಪತ್ರಕ್ಕೆ ಪಡಿಯಚ್ಚು ಮಾಡಿಸಬೇಕು; ಅದಕ್ಕಾಗಿ ಹದಿನೈದು ರೂಪಾಯಿ ಬೇಕು. ಕವರಿಗೆ ಕಾಗದ ಕೊಳ್ಳಬೇಕು; ಅದಕ್ಕಾಗಿ ಮೂವತ್ತು ರೂಪಾಯಿ ಬೇಕು. ಕಳೆದ ತಿಂಗಳಿನ ಸಂಚಿಕೆಯ ಮುದ್ರಣದ ಬಗ್ಗೆ ರಂಗಯ್ಯನಿಗೆ ಇನ್ನೂ ಹಣ ಕೊಟ್ಟಿಲ್ಲ; ಅದಕ್ಕಾಗಿ ನೂರಾಐವತ್ತು ರೂಪಾಯಿ ಬೇಕು. ಈ ತಿಂಗಳಿನ ಸಂಚಿಕೆ ಇಂದೋ ನಾಳೆಯೋ ಹೊರಡಬೇಕು; ಅದನ್ನು ಏಜೆಂಟರಿಗೆ ಕಳುಹಿಸಲು, ಅಂಚೆಗೆ ಹಾಕಲು ಹಣ ಬೇಕು. ಇದೆಲ್ಲ ಪತ್ರಿಕೆಯ ಸಂಸಾರವಾಯಿತು. ಸುದೈವ - ತನ್ನ ಸ್ವಂತ ಸಂಸಾರ ತಾಪತ್ರಯವಿಲ್ಲ. ಇರುವುದು ತಾನೊಬ್ಬನೇ ಒಬ್ಬ. ಹೆಚ್ಚು ವೆಚ್ಚವಿಲ್ಲ. ಆದರೂ ಊಟಕ್ಕಾದರೂ ಹಣ ಕೊಡಬೇಕಲ್ಲವೆ? ಕಳೆದ ತಿಂಗಳಿನ ಊಟದ ಬಗ್ಗೆ ಹೋಟೆಲಿಗೆ ಇನ್ನೂ ಹಣ ಕೊಟ್ಟಿಲ್ಲ. ಅದಕ್ಕಾಗಿ ಇಪ್ಪತ್ತೈದು ರೂಪಾಯಿ ಬೇಕು...

ರೂಪಾಯಿ... ರೂಪಾಯಿ...

ಝುಕ್ ಝುಕ್ ಝುಕ್...

ಚಂದ್ರಣ್ಣ ವೇಗವಾಗಿ ಸಿಗರೇಟು ಸೇದತೊಡಗಿದ.

ಮೊದಲನೆಯ ಅಂಚೆ ಬಂದುದಕ್ಕೆ ಒಂದು ಗಂಟೆಯಾಗಿ ಹೋಯಿತು. ಇನ್ನೂ ಎರಡನೆಯ ಅಂಚೆ ಬರಲಿಲ್ಲ. ಅದಕ್ಕಾಗಿಯೇ ಚಂದ್ರಣ್ಣ ಇಷ್ಟು ಹೊತ್ತು ಕಾಯ್ದು ಕುಳಿತಿದ್ದ. ಇಂದಾದರೂ ಏನಾದರೂ ಮನಿ ಆರ್ಡರ್ ಬಂದಾವು... ಆ ದಾವಣಗೆರೆಯ ಏಜೆಂಟ್ ನೂರು ರೂಪಾಯಿ ಕೊಡುವುದಿದೆ. ಧಾರವಾಡದಿಂದ ಇಪ್ಪತ್ತೈದು ರೂಪಾಯಿ ಬರಬೇಕಾಗಿದೆ. ಒಬ್ಬಿಬ್ಬರು ಚಂದಾದಾರರಿಗೆ ವಿ.ಪಿ. ಮಾಡಿದೆ. ಅವರು ಬಿಡಿಸಿಕೊಂಡಿದ್ದರೆ... ಚಂದ್ರಣ್ಣ ಕಾತರನಾಗಿ ಕಾಯುತ್ತಿದ್ದ. ಇವೊತ್ತು ಸ್ವಲ್ಪವಾದರೂ ಹಣ ಬಂದರೆ ರಂಗಯ್ಯನಿಗೆ ಕೊಡಬಹುದು. ಪಾಪ - ಆತನಿಗೂ ಬಹಳ ತೊಂದರೆ - ನಮ್ಮಿಂದಾಗಿ ಇನ್ನೂ ತೊಂದರೆ. ಕೇವಲ ಒಂದು ಆತ್ಮೀಯತೆಯಿಂದ ಆತ ಪತ್ರಿಕೆಯನ್ನು ಅಚ್ಚು ಮಾಡಿ ಕೊಡುತ್ತಾನೆ. ಹಣಕ್ಕಾಗಿ ಒಂದು ದಿನವೂ ಪೀಡಿಸುವುದಿಲ್ಲ. ಆತನ ಸಹಾಯವಿಲ್ಲದಿರುತ್ತಿದ್ದರೆ 'ಕ್ರಾಂತಿ' ಕೇವಲ ಭ್ರಾಂತಿ-ಯಾಗುತ್ತಿತ್ತು. ಮುಂಗಡ ಹಣವಿಲ್ಲದೆ ಕೆಲಸವನ್ನೇ ಮುಟ್ಟದಿರುವ ಮುದ್ರಣಾಲಯಗಳು! 'ಅತಂತ್ರ ಕರ್ನಾಟಕ' ಮುದ್ರಣಾಲಯದ ಆ ಚಂಡಕಶಾಸ್ತ್ರಿ! ತನ್ನದೊಂದು ಪುಸ್ತಕವನ್ನು ಅಚ್ಚು ಮಾಡಿಸಲು ಅವನ ಹತ್ತಿರ ಹೋದಾಗ ಹಣಕ್ಕಾಗಿ ಆತ ಹೇಗೆ

ಬಾಯಿಬಿಟ್ಟಿದ್ದ. ಮೂರುನೂರು ರೂಪಾಯಿ ಮುಂಗಡ ಹಣ ಕೊಟ್ಟರೆ ಮಾತ್ರ ಕೆಲಸ ಸ್ವೀಕರಿಸುವುದಾಗಿ ಹೇಳಿದ್ದ. ಅಷ್ಟು ಹಣವನ್ನು ಮುಂಗಡವಾಗಿ ಕೊಟ್ಟರೂ ಮತ್ತೆ ವಾರ ವಾರವೂ ಹಣಕ್ಕಾಗಿ ಪೀಡಿಸುವುದೇನೂ ತಪ್ಪಿರಲಿಲ್ಲ. "ನಿಮ್ಮ ಪುಸ್ತಕ ಐದು ಫಾರಂ ಆಯಿತು. ನೂರು ರೂಪಾಯಿ ಕೊಡಿ. ಎಂಟು ಫಾರಂ ಆಯಿತು. ಐವತ್ತು ರೂಪಾಯಿ ಕೊಡಿ," ಎಂಬ ಕಾಟವಿದ್ದೇ ಇರುತ್ತಿತ್ತು. ಅವನ ಹತ್ತಿರ ಕೆಲಸ ಕೊಟ್ಟ ತಪ್ಪಿಗೆ ಮೂರು ತಿಂಗಳ ಕಾಲ ಗೋಳಾಡಿ ಹೇಗೋ ಪುಸ್ತಕ ಮುಗಿಸಿಕೊಂಡು ಬರಬೇಕಾದರೆ ಸಾಕು ಸಾಕೆನ್ನಿಸಿ ಹೋಗಿತ್ತು. ಅನಂತರ ಅವನ ಮುದ್ರಣಾಲಯದ ಕಡೆಗೆ ಹೊರಳಿ ನೋಡುವ ಮನಸ್ಸೂ ಬಂದಿರಲಿಲ್ಲ...

– ರಂಗಯ್ಯನಾದರೋ ತಮ್ಮಂತೆಯೇ ಬಡವ. ಇಷ್ಟು ದಿನ ತುಂಬಾ ಕಷ್ಟಪಟ್ಟು ಈಚೆಗೆ ಸ್ವಂತ ಮುದ್ರಣಾಲಯ ಸ್ಥಾಪಿಸಿಕೊಂಡವ. ಕೊಂಚವೂ ಜಂಬವಿಲ್ಲ, ದರ್ಪವಿಲ್ಲ, ಬಡವರಿಗೆ ಬಡವರೇ ಸಹಾಯ ಮಾಡಬೇಕು. ಮೊದಲಿನಿಂದಲೂ ಆತನ ಮುದ್ರಣಾಲಯದಲ್ಲಿಯೇ ಅಚ್ಚಾಗುತ್ತಿದೆ. ಒಂದೆರಡು ತಿಂಗಳುಗಳ ಕಾಲ ಹಣದ ತೊಂದರೆಯೇನೂ ಇರಲಿಲ್ಲ. ರಾಜಣ್ಣ ಸಾಲ ಮಾಡಿ ತಂದ ಹಣದ ಮೇಲೆ ಹೇಗೊ ಪತ್ರಿಕೆಯ ಖರ್ಚು ನಡೆಯುತ್ತಿತ್ತು. ಆಗ ರಂಗಯ್ಯನಿಗೂ ಹಣವನ್ನು ಸಕಾಲಕ್ಕೆ ಮುಟ್ಟಿಸಲು ಸಾಧ್ಯವಾಗುತ್ತಿತ್ತು. ಆದರೆ ಬರಬರುತ್ತ ಆರ್ಥಿಕ ಸ್ಥಿತಿ ಕೆಡುತ್ತ ಬಂದ ಹಾಗೆ ಆತನಿಗೆ ಹಣ ಕೊಡುವುದೂ ನಿಧಾನವಾಗತೊಡಗಿತು. ಏಜೆಂಟರೋ ಚಂದಾದಾರರೋ ಹಣ ಕಳುಹಿಸುವುದನ್ನು ಕಾಯುತ್ತಿದ್ದು ಅದು ಬಂದಾಗ ರಂಗಯ್ಯನಿಗೆ ಮುಟ್ಟಿಸ ಬೇಕಾಗುತ್ತಿತ್ತು. ಆತನೂ ಪಿಟ್ಟೆಂದು ಮಾತನಾಡಲಿಲ್ಲ, ಅಂದಿನಿಂದ ಇಂದಿನವರೆಗೂ ಒಂದೇ ರೀತಿ ನಡೆದುಕೊಂಡು ಬಂದಿದಾನೆ. ಆದರೂ – ಆತನಿಗೂ ತೊಂದರೆ ಗಳಿಲ್ಲವೆ? ಕೆಲಸಗಾರರಿಗೆ ಸಂಬಳ ಕೊಡಬೇಕು, ಮಸಿ ಇತ್ಯಾದಿ ಕೊಳ್ಳಬೇಕು, ಮನೆಯ ಖರ್ಚು ಸಾಗಿಸಬೇಕು. ನಮ್ಮ ಕೆಲಸ ಮಾಡುವುದನ್ನು ಬಿಟ್ಟು ಅದೇ ಸಮಯವನ್ನು ಬೇರೆ ಕೆಲಸಗಳಿಗಾಗಿ ವಿನಿಯೋಗಿಸಿದರೆ, ಬೀಡಿ ಲೇಬಲ್ ಇತ್ಯಾದಿ ಗಳನ್ನು ಅಚ್ಚು ಹಾಕಿಕೊಟ್ಟರೆ ಆತನಿಗಾವ ತೊಂದರೆಯೂ ಇರಲಾರದು. ಸಾಕಷ್ಟು ಹಣ ಸರಿಯಾದ ಸಮಯಕ್ಕೆ ದೊರೆತೀತು. ಆದರೆ ಆತ ಒಂದು ಅಭಿಮಾನದಿಂದ ಪತ್ರಿಕೆಯ ಕೆಲಸ ಮಾಡುತ್ತಿದ್ದಾನೆ. ಅವನಿಗೆ ಕೊಂಚವಾದರೂ ಹಣ ಕೊಡದಿದ್ದರೆ ಹೇಗೆ? ಇಂದು ಏನಾದರೂ ಮನಿಯಾರ್ಡರ್ ಬಂದರೆ... ತಕ್ಷಣ ಒಯ್ದು ಆತನಿಗೆ ಕೊಟ್ಟುಬಿಡಬಹುದು. ಆತನಿಗೆಷ್ಟು ಸಂತೋಷವಾದೀತು... ಆತನ ಮುಖ ಅರಳಿದುದನ್ನು ಕಂಡು ತನಗೆಷ್ಟು ಸಂತೋಷವಾದೀತು!

ಮೆಟ್ಟಲುಗಳ ಮೇಲೆ ಸದ್ದಾಗುತ್ತಿತ್ತು. ಯಾರೋ ಬರುತ್ತಿದ್ದಾರೆ. ಇಂಥ ಹೊತ್ತಿನಲ್ಲಿ ಇನ್ಯಾರು ಬರಬೇಕು ಇಲ್ಲಿಗೆ? ಅಂಚೆಯವನೇ ಇರಬೇಕು. ತುದಿಯವರೆಗೂ ಬೂದಿಯಾಗಿ ಹೋಗಿದ್ದ ಸಿಗರೇಟನ್ನು ನೆಲಕ್ಕೆಸೆದು, ಕಾಲಿನಿಂದ ಆದರ ಬೆಂಕಿಯನ್ನಾರಿಸಿ ಚಂದ್ರಣ್ಣ ಸರಿಯಾಗಿ ಕುಳಿತುಕೊಂಡ. ಮೇಜಿನ ಮೇಲಿದ್ದ ಲೇಖನಿಯನ್ನು ಕೈಯಲ್ಲಿ ಹಿಡಿದುಕೊಂಡು ಮನಿಯಾರ್ಡರ್ ಕಾಗದಕ್ಕೆ ಸಹಿ ಹಾಕಲು ಸಿದ್ಧನಾಗಿ ಕುಳಿತ.

"ಇನ್ನೂ ಇಲ್ಲೇ ಇದೀರಾ?"

ಆತ ಅಂಚೆಯವನಲ್ಲ; ಗೆಳೆಯ ರಾಜಣ್ಣ. ಆತನ ಹಿಂದೆ ಹಿಂದೆಯೆ ಗುಬ್ಬಣ್ಣನೂ ಬಂದ.

ಅವರಿಬ್ಬರೂ ಇನ್ನು ವಿದ್ಯಾರ್ಥಿಗಳು; ಬಿ.ಎಸ್.ಸಿ.ಯಲ್ಲಿ ಓದುತ್ತಿದ್ದರು. ಚಂದ್ರಣ್ಣನಿಗಿಂತ ನಾಲ್ಕೈದು ವರ್ಷಗಳಿಗೆ ಚಿಕ್ಕವರು. ಗುಬ್ಬಣ್ಣನಿಗೆ ಮಾತ್ರ ಇಪ್ಪತ್ತು ವರ್ಷ ವಯಸ್ಸಾಗಿದ್ದರೂ ಹದಿನೇಳರ ಹುಡುಗನಂತೆ ಕಾಣಿಸುತ್ತಿದ್ದ. ಚಿಕ್ಕಂದಿನಿಂದಲೂ ತುಂಬಾ ತೊಂದರೆಗಳಿಗೆ ಸಿಲುಕಿ, ಉಚಿತ ಪ್ರಸಾದನಿಲಯಗಳಲ್ಲಿ ಊಟ ಮಾಡಿ ಬೆಳೆದುದರಿಂದ ಆತ ತೀರ ಬಡಕಲು ಶರೀರದವನಾಗಿದ್ದ. ರಾಜಣ್ಣನಿಗೆ ಅಂಥ ತೊಂದರೆ ಯಾವುದೂ ಇರಲಿಲ್ಲ. ಆತ ಶ್ರೀಮಂತರ ಮಗ. ಸುಖವಾಗಿ ಬೆಳೆದವ. ಆದರೂ ತನ್ನ ವಯಸ್ಸಿಗೆ ತಕ್ಕ ಹಾಗೆ ಆತ ದಷ್ಟಪುಷ್ಟವಾಗಿರಲಿಲ್ಲ-ರಾತ್ರಿಯೆಲ್ಲ ನಿದ್ರೆಕೆಟ್ಟು ಪುಸ್ತಕ ಓದುವ ಆತನ ಚಟವೂ ಅದಕ್ಕೆ ಮುಖ್ಯ ಕಾರಣವಾಗಿರಬೇಕು.

ಇವರಿಬ್ಬರೂ ಬಾಲ್ಯ ಸ್ನೇಹಿತರು. ಮಾಧ್ಯಮಿಕ ಶಾಲೆಯಿಂದಲೂ ಕೂಡಿ ಓದುತ್ತ ಬಂದವರು. ಇಬ್ಬರಿಗೂ ವಾಚನಾಭಿರುಚಿ ವಿಪರೀತ. ಕತೆ, ಕಾದಂಬರಿ, ನಾಟಕ, ಹರಟೆ, ಕವಿತೆ ಎಲ್ಲವನ್ನೂ ತಿರುವಿಹಾಕುವರು. ಕನ್ನಡ ಇಂಗ್ಲೀಷು ಯಾವುದಾದರೂ ಸರಿಯೆ. ಪುಸ್ತಕವೆಂದರೆ ಮುಗಿಯಿತು. ಅಂಥ ಗೀಳು, ವಾಚನಾಭಿರುಚಿಯೊಂದಿಗೆ ಬರೆಯುವ ಚಟವೂ ಅಂಟಿಕೊಂಡಿತು. ಆಗಾಗ ಹಲವು ಕತೆ ಬರೆದರು. ಅದೇ ಸಂದರ್ಭದಲ್ಲಿ ಚಂದ್ರಣ್ಣನೊಂದಿಗೆ ಪರಿಚಯವಾಯಿತು. ಎರಡು ವರ್ಷಗಳ ಹಿಂದಿನ ಮಾತು ಅದು. ಆಗ ಆತ 'ಉದಯ' ಪತ್ರಿಕೆಯ ಸಂಪಾದಕನಾಗಿ ಕೆಲಸ ಮಾಡುತ್ತಿದ್ದ. ಅದು ಅವನ ಸ್ವಂತ ಪತ್ರಿಕೆಯೇನೂ ಆಗಿರಲಿಲ್ಲ. ಸಂಚಾಲಕರು ಇನ್ನೊಬ್ಬರಿದ್ದರು. ಈತ ಸಂಬಳದ ಮೇಲೆ ಸಂಪಾದಕನಾಗಿ ಕೆಲಸ ಮಾಡುತ್ತಿದ್ದ. ಮೂರು ವರ್ಷಗಳ ಅವಧಿಯಲ್ಲಿ ಪತ್ರಿಕೆಯನ್ನು ಕರ್ನಾಟಕದಲ್ಲೆಲ್ಲ

ಲೋಕಪ್ರಿಯವನ್ನಾಗಿ ಮಾಡಿದ್ದ. ರಾಜಣ್ಣ ಗುಬ್ಬಣ್ಣ ಸಹ 'ಉದಯ'ವನ್ನೋದಿ ಮೆಚ್ಚಿಕೊಂಡಿದ್ದರು. ಒಂದು ಸಲ ಆಕಸ್ಮತ್ತಾಗಿ ಚಂದ್ರಣ್ಣನೊಂದಿಗೆ ಪರಿಚಯ ಬೆಳೆಯಿತು. ಪರಿಚಯ ಸ್ನೇಹದಲ್ಲಿ ರೂಪಾಂತರಿತವಾಯಿತು. ಕೆಲವು ತಿಂಗಳು ಕಳೆದ ಮೇಲೆ ಚಂದ್ರಣ್ಣ 'ಉದಯ' ಪತ್ರಿಕೆಯನ್ನು ಬಿಡುವ ಸಂದರ್ಭ ಬಂದಾಗ ರಾಜಣ್ಣ ಗುಬ್ಬಣ್ಣ ಹೊಸ ಪತ್ರಿಕೆಯನ್ನು ಹೊರಡಿಸುವ ಯೋಜನೆ ಹೂಡಿದರು. ರಾಜಣ್ಣ ಯಾರ ಹತ್ತಿರವೋ ಸಾಲ ಮಾಡಿ ಒದಗಿಸಿದ. 'ಕ್ರಾಂತಿ' ಪ್ರಾರಂಭವಾಯಿತು. ರಾಜಣ್ಣ ಹಣ ಒದಗಿಸದಿದ್ದಲ್ಲಿ ಪತ್ರಿಕೆ ಹೊರಡಲು ಸಾಧ್ಯವಿರಲಿಲ್ಲ. ಚಂದ್ರಣ್ಣನೊಬ್ಬನೆ ಆರ್ಥಿಕ ಹೊಣೆ ಹೊರುವಂತಿರಲಿಲ್ಲ.

''ಹನ್ನೆರಡೂವರೆಯಾಗಿ ಹೋಯ್ತು. ಇನ್ನೂ ಊಟವಾದ ಹಾಗೆ ಕಾಣುವುದಿಲ್ಲವಲ್ಲ!'' ಎನ್ನುತ್ತ ಅವರಿಬ್ಬರೂ ಕೊಠಡಿಯೊಳಕ್ಕೆ ಬಂದರು.

''ಇಲ್ಲ, ಕಾಯುತ್ತ ಕೂತಿದ್ದೆ.''

''ಯಾರನ್ನು? ಪೋಸ್ಟ್‌ಮ್ಯಾನನ್ನೆ? ಒಳ್ಳೆಯ ಕೆಲಸ. ಆತನ ದಾರಿ ಕಾಯ್ದು ಬದುಕಿದವರುಂಟೇ? ಹೋಗಿ ಊಟ ಮಾಡಿಕೊಂಡು ಬಂದು ಬಿಡಿ. ಹಸಿವೆ ಯಾಗಿಲ್ಲವೇ?'' ಎಂದ ರಾಜಣ್ಣ.

''ಅಂಥ ಹಸಿವೇನೂ ಇಲ್ಲ, ನಿಧಾನವಾಗಿ ಹೋದರಾಯಿತು ಅಂತ ಕೂತಿದ್ದೆ.''

ಗೆಳೆಯರಿಬ್ಬರೂ ಚಂದ್ರಣ್ಣನ ಮುಖವನ್ನೇ ನಿಟ್ಟಿಸಿ ನೋಡುತ್ತಿದ್ದರು. ಬೆಳಗಿನಿಂದ ಹೊಟ್ಟೆಗೆ ಏನೂ ಬಿದ್ದಿಲ್ಲವೆನ್ನುವುದನ್ನು ಸ್ಪಷ್ಟವಾಗಿ ಸೂಚಿಸುವಂತಿದ್ದಿತು ಆ ಮುಖ. ಅವರಿಬ್ಬರಿಗೂ ಕಳವಳವಾಗದಿರಲಿಲ್ಲ. ಚಂದ್ರಣ್ಣ ಕಷ್ಟಜೀವಿಯೆಂಬುದನ್ನು ಅವರು ಬಲ್ಲರು. ಪತ್ರಿಕೆಗಾಗಿ ಆತ ಹಸಿವು ನೀರಡಿಕೆಗಳನ್ನು ಮರೆತು ಕೆಲಸ ಮಾಡುವುದನ್ನೂ ಅವರು ಬಲ್ಲರು. ಆದರೆ – ಈ ಕೆಲಸಕ್ಕಾಗಿ – ಅಂಚೆಯವ ಬರುವುದನ್ನು ಕಾಯುವುದಕ್ಕಾಗಿ ಆತ ಹಸಿವೆಯಿಂದ ಬಳಸುವ ಪ್ರಸಂಗ! – ಅಂಥ ಪ್ರಸಂಗ ಬರಲು ಕಾರಣವೇನೆಂಬುದನ್ನು ಅವರು ಅರಿಯದವರಲ್ಲ.

''ಕಾಫಿಗಾದರೂ ಹೇಳಿ ಬಾ ಗುಬ್ಬಣ್ಣ, ತೆಗೆದುಕೊಂಡರಾಯಿತು...'' ಎಂದು ನುಡಿದು ರಾಜಣ್ಣ ಒಂದು ಕ್ಷಣ ಬಿಟ್ಟು– ''ಹಾಗೇ ಒಂದು ಪ್ಯಾಕ್ ಪಾಸಿಂಗ್ ಶೋ ತರಹೇಳು...'' ಎಂದ.

ಪಾಸಿಂಗ್ ಶೋ...

ಅವರಿಬ್ಬರಲ್ಲಿ ಯಾರೂ ಅದನ್ನು ಮುಟ್ಟುವವರಲ್ಲ. ಸಿಗರೇಟಿನ ಚಟ ಅವರಿಗಿನ್ನೂ ಅಂಟಿಕೊಂಡಿಲ್ಲ. ಅದು ಚಂದ್ರಣ್ಣನಿಗಾಗಿ.

ಚಂದ್ರಣ್ಣನ ತುಟಿಗಳ ಮೇಲೆ ಮೃದು ಹಾಸ್ಯ ಮೂಡಿತು. ತನ್ನ ಹತ್ತಿರ ಸಿಗರೇಟುಗಳಿಲ್ಲದಿರುವುದು ಎಷ್ಟು ಸುಲಭವಾಗಿ ಗೊತ್ತಾಗುತ್ತದೆ ರಾಜಣ್ಣನಿಗೆ! ಸಿಗರೇಟಿನ ಅಭಾವದಿಂದ ತಾನು ತೊಂದರೆಪಡುವುದನ್ನು ತಪ್ಪಿಸಲೆಂದು ಆತ ಹೇಗೆ ಉಪಾಯವಾಗಿ ಪ್ರಯತ್ನಿಸುತ್ತಾನೆ! ತನ್ನ ತೊಂದರೆಗಳನ್ನು ತಪ್ಪಿಸಲು, ತನಗೆ ಕೊಂಚ ವಾದರೂ ನೆಮ್ಮದಿ ದೊರೆಯುವಂತೆ ಮಾಡಲು ಅವರಿಬ್ಬರೂ ಯಾವಾಗಲೂ ಹೆಣಗುತ್ತಾರೆ. ಆ ಅಕೃತ್ರಿಮ ಸ್ನೇಹವೇ ಆತನನ್ನು ದೃಢವಾಗಿ ನಿಲ್ಲಿಸಿರುವುದು. ಅವರ ಸ್ನೇಹದ ಸಹಕಾರ ಹಸ್ತ ಮುಂದೆ ಬಂದಿರಲಿಲ್ಲವಾದರೆ 'ಕ್ರಾಂತಿ' ಹೊರಡುತ್ತಿರಲಿಲ್ಲ. ಹೊರಟಿದ್ದರೂ ಬಹುದಿನ ಬದುಕಿ ಉಳಿಯುತ್ತಿರಲಿಲ್ಲ. ಆ ರಾಜಣ್ಣ ಗುಬ್ಬಣ್ಣ ಆ ರಂಗಯ್ಯ – 'ಕ್ರಾಂತಿ'ಯ ರಥಕ್ಕೆ ಜೋಡಿಸಿದ ಮೂರು ಚಕ್ರಗಳ ಹಾಗಿದ್ದರು. ಈ ಮೂರು ಚಕ್ರಗಳ ಜೊತೆಯಿರದಿದ್ದರೆ ತನ್ನೊಬ್ಬನಿಂದ ಏನೂ ಆಗುವಂತಿರಲಿಲ್ಲ.

"ಇದೀರಾ ಸಾರ್?"

ಓ! ಪೋಸ್ಟ್‌ಮನ್! ಬಂದ. ಕೊನೆಗೂ ಬಂದುಬಿಟ್ಟ ಗೆಳೆಯರಿಬ್ಬರೂ ಮುಗುಳುನಗೆಯೊಂದಿಗೆ ಆತನನ್ನು ಸ್ವಾಗತಿಸಿದರು.

"ಒಳ್ಳೆಯ ಸಮಯಕ್ಕೆ ಬಂದೆ ಕಣಯ್ಯ. ಒಂದು ನಿಮಿಷದೊಳಗಾಗಿ ಕಾಫಿ ಬರುತ್ತೆ. ಈಗ ತಾನೆ ಹೇಳಿ ಕಳಿಸಿದ್ದೇವೆ. ನಿನಗಾಗಿಯೇ ಹೇಳಿಕಳಿಸಿದಂತೆ!" ಎಂದು ನಗುತ್ತ ನುಡಿದ ರಾಜಣ್ಣ.

"ಬೇಡಿ ಸಾರ್, ಇನ್ನು ಮುಂದೆ ನಾವು ಹೀಗೆಲ್ಲ ಬಿಟ್ಟಿ ಕಾಫಿ ಕುಡಿಯು ವಂತಿಲ್ಲ. ಈಗ ನಿಮ್ಮ ರಾಜ್ಯ ಬಂತು – ಕಾಂಗ್ರೆಸ್ ರಾಜ್ಯ. ಇನ್ನು ಮುಂದೆ ಲಂಚ – ಕಾಫಿ ಯಾವುದೂ ಕೇಳಬೇಡಿ!" ಎಂದು ಅಂಚೆಯವನೂ ನಗುತ್ತ ನುಡಿದ.

"ಪರವಾಯಿಲ್ಲಯ್ಯ ನೀನು ಪೋಸ್ಟ್‌ಮನ್ ಅಂತ ನಾವೇನೂ ಕಾಫಿ ಕೊಡುವು ದಿಲ್ಲ. ನಮ್ಮ ವಿಶ್ವಾಸದ ಮನುಷ್ಯ ಅಂತ ಕೊಡ್ತೇವೆ. ಅದಕ್ಕೆ ಯಾರೇನೂ ಬೇಡ ಅನ್ನಲಾರರು..."

"ಬೇಡಿ ಸಾರ್. ಪತ್ರಿಕೆಯವರ ಸಹವಾಸ ಕಷ್ಟ ಒಂದು ಗುಟುಕು ಕಾಫಿಗಾಗಿ

ಕೆಲಸ ಕಳೆದುಕೊಳ್ಳಬೇಕಾದ ಪ್ರಸಂಗ ಬರಬಹುದು. ಅದನ್ನೇ ನೀವೇನಾದರೂ ಬರೆದುಹಾಕಿದರೆ ಕತ್ತಿಗೆ ಬರೋದು ಪ್ರಸಂಗ... ಕೆಲದಿನಗಳಿಗೆ ಹಿಂದೆ ಹೀಗೆ ಒಂದು ಸಂದರ್ಭ ಬಂದು ನನ್ನ ಕೆಲಸವೇ ಹೋಗುವುದರಲ್ಲಿತ್ತು. ಆ ಚಂಡಕಶಾಸ್ತ್ರೀ...''

''ಯಾರು? ಅತಂತ್ರ ಕರ್ನಾಟಕದ ಸಂಪಾದಕರೇ?''

''ಅದೇ ಪುಣ್ಯಾತ್ಮ. ಆಗ ನಾನು ಅವರ ಬೀದಿಯ ಡ್ಯೂಟಿಯ ಮೇಲಿದ್ದೆ. ಸುಮಾರು ಒಂದು ವರ್ಷದಿಂದ ಅಲ್ಲಿಗೆ ಹೋಗುತ್ತಿದ್ದರೂ ಒಂದು ಸಲವೂ ಒಂದು ಕಾಫಿಯನ್ನೂ ಕೇಳಿದವನಲ್ಲ ನಾನು. ಒಮ್ಮೆ ಒಂದು ಮನಿಯಾರ್ಡರು ಬಂತು – ಐವತ್ತು ರೂಪಾಯಿನದು ಅದು 'ವಿಚಿತ್ರ ಕರ್ನಾಟಕ' ಪತ್ರಿಕೆಗೆ ಹೋಗಬೇಕಾದದ್ದು ಕಣ್ಣು ತಪ್ಪಿ 'ಅತಂತ್ರ ಕರ್ನಾಟಕ'ಕ್ಕೆ ಬಂತು. ದಿನವೂ ನೂರಾರು ಮನಿಯಾರ್ಡರು ಗಳಿರುತ್ತವಾದ್ದರಿಂದ ನಾನೂ ಅದನ್ನು ಸರಿಯಾಗಿ ನೋಡಿಕೊಂಡಿರಲಿಲ್ಲ. ಚಂಡಕಶಾಸ್ತ್ರಿಗೆ ಮಾತ್ರ ಆ ತಪ್ಪು ಗೊತ್ತಾಗಿದ್ದಿರಬೇಕು. ಆತ ವಿಲಕ್ಷಣವಾಗಿ ನಗುತ್ತ ಮನಿಯಾರ್ಡರ್ ಮೇಲೆ ಸಹಿ ಹಾಕಿ ಹಣ ತೆಗೆದುಕೊಂಡ. ಆತ ನಕ್ಕದ್ದೇಕೆ ಎಂಬುದು ನನಗಾಗ ಗೊತ್ತಾಗಲಿಲ್ಲ. ನಾನು ಹಣ ಎಣಿಸಿಕೊಟ್ಟ ಮೇಲೆ ಆತ ಸಂತೋಷದಿಂದ ನಗುತ್ತಾ – 'ಕಾಫಿ ತೆಗೆದುಕೊಂಡು ಹೋಗಯ್ಯ' ಎಂದು ಹೇಳಿದ. ನನಗೆ ಆಶ್ಚರ್ಯವಾಗದಿರಲಿಲ್ಲ. ಆತ ನನಗೆ ಕಾಫಿ ಕೊಡಲು ಬಂದದ್ದು ಅದೇ ಮೊದಲನೆಯ ಸಲ. ಕೊನೆಯ ಸಲವೂ ಅನ್ನಿ. ನಾನು ಬೇಡ ಬೇಡ ಅಂದರೂ ಕೇಳದೆ ಹೋಟಲಿನಿಂದ ಕಾಫಿ ತರಿಸಿ ಒತ್ತಾಯ ಮಾಡಿ ಕುಡಿಸಿದ. ಆ ಆದರಾತಿಥ್ಯವನ್ನು ಕಂಡು ನನಗೆ ಸಂದೇಹ ಬರದಿರಲಿಲ್ಲ. ಆತ ಸಹಿ ಮಾಡಿಕೊಟ್ಟ ಫಾರ್ಮು ತೆಗೆದು ನೋಡಿದಾಗ ನನ್ನ ತಪ್ಪು ಒಮ್ಮೆಲೇ ಗೊತ್ತಾಯಿತು. ವಿಚಿತ್ರ ಕರ್ನಾಟಕಕ್ಕೆ ಸಲ್ಲಬೇಕಾದ ಹಣವನ್ನು ಚಂಡಕಶಾಸ್ತ್ರಿ ತಾನೇ ತೆಗೆದುಕೊಂಡುಬಿಟ್ಟಿದ್ದ...''

ಗೆಳೆಯರಿಬ್ಬರೂ ಕುತೂಹಲದಿಂದ ಆಲಿಸುತ್ತಿದ್ದರು. ''ಕಠಿಣ ಪ್ರಸಂಗವೇ ಸರಿ. ಆಮೇಲೆ?'' ಎಂದ ರಾಜಣ್ಣ.

''ಆತ ದೊಡ್ಡ ಮನುಷ್ಯನೆಂದು ಹೇಳಿಕೊಳ್ಳುವ, ಒಂದು ಪತ್ರಿಕೆಯ ಸಂಪಾದಕ, ಪ್ರೆಸ್ಸಿನ ಮಾಲೀಕ, ಸಾಹಿತಿ. ಕಣ್ಣುತಪ್ಪಿನಿಂದ ನಾವು ಬೇರೆಯವರ ಹಣ ಕೊಟ್ಟರೆ ಆತ ತೆಗೆದುಕೊಳ್ಳಬಾರದು ತಾನೇ? ನಮ್ಮ ತಪ್ಪನ್ನು ನಮಗೆ ತೋರಿಸಿಕೊಟ್ಟು ಫಾರ್ಮನ್ನು ವಾಪ್ಸು ಕೊಡಬೇಕು. ಶಾಸ್ತ್ರಿ ಹಾಗೆ ಮಾಡಲಿಲ್ಲ. ಅದು ವಿಚಿತ್ರ ಕರ್ನಾಟಕದ್ದು ಎಂದು ಗೊತ್ತಿದ್ದರೂ ಸಹ ಫಾರ್ಮಿಗೆ ಸಹಿ ಹಾಕಿ ನೋಟುಗಳನ್ನು ಕೈಗೆ

ತೆಗೆದುಕೊಂಡ. ಆಮೇಲೆ ತನ್ನ ತಪ್ಪು ತಿಳಿದಾಗ – 'ಇದು ತಮ್ಮದಲ್ಲ, ಹಣ ವಾಪ್ಸು ಕೊಡಿ' – ಎಂದು ಹೇಳಿದರೆ ಆತನ ನನ್ನೊಡನೆ ಜಗಳಕ್ಕೇ ನಿಂತುಕೊಂಡು ಬಿಟ್ಟ 'ನನ್ನದಲ್ಲದ ಹಣ ನಾ ತೆಗೆದುಕೊಳ್ಳುತ್ತೇನೆಯೇ? ನನ್ನ ಏನಂತ ತಿಳಿದಿದ್ದೀಯಾ? ನಾನು ಅಂಥ ಬಿಕಾರಿಯೆ? ಆತಂತ್ರ ಕರ್ನಾಟಕದ ಸಂಪಾದಕನಿದ್ದೇನೆ ನಾನು. ನಿನ್ನ ಮೇಲೆ ಲೇಖನ ಬರೆದು ನಿನ್ನನ್ನು ಮನೆಗೇ ಕಳುಹಿಸಿಬಿಡುತ್ತೇನೆ' – ಎಂದು ಗದರಿಸಿದ್ದಲ್ಲದೆ ಆ ಪ್ರಕಾರ ಬರೆದೂಬಿಟ್ಟ, ಅಂದು ನನಗೆ ಕಾಫಿ ಕೊಟ್ಟ ವಿಷಯ ಬರೆದು ನಾನು ಪ್ರತಿನಿತ್ಯವೂ ಕಾಫಿಗಾಗಿ ಪೀಡಿಸುತ್ತಿದ್ದೆ – ಎಂದು ಗೀಚಿಬಿಟ್ಟ... ನೀವು ಕಾಫಿ ಎಂದಾಗ ಈ ಹಳೆಯ ವಿಷಯ ಜ್ಞಾಪಕಕ್ಕೆ ಬಂತು. ತಗೊಳ್ಳಿ ಸಹಿ ಹಾಕಿ...'' ಎಂದು ನುಡಿದು ಆತ ಒಂದು ಮನಿಆರ್ಡರ್ ಫಾರ್ಮನ್ನೂ ಎರಡು ವಿ.ಪಿ. ರಸೀತಿಗಳನ್ನೂ ಮುಂದೆ ಮಾಡಿದ.

ಮೂರು ರೂಪಾಯಿಗಳಿಗೆ ಮನಿಆರ್ಡರು! ನಿರಾಕರಿಸಲ್ಪಟ್ಟು ತಿರುಗಿ ಬಂದ ಎರಡು ವಿ.ಪಿ.!

''ಮೂರೇ ರೂಪಾಯಿ ರಾಜಣ್ಣ, ವಿ.ಪಿ. ವಾಪ್ಸು'' ಎಂದು ಇಳಿದ ಧ್ವನಿಯಲ್ಲಿ ನುಡಿದ ಚಂದ್ರಣ್ಣ.

''ವಿ.ಪಿ. ಕಳಿಸಿರಿ ಅಂತ ದೊಡ್ಡ ಮನುಷ್ಯರ ಹಾಗೆ ಕಾಗದ ಬರೆದು ತರಿಸಿಕೊಳ್ಳೋದು, ವಾಪಸು ಬಿಡೋದು. ಈ ಜನಕ್ಕೆ ಇದೊಂದು ಆಟವಾಯಿತಲ್ಲ, ಇವರಿಗೆ ಸಜ್ಜನಿಕೆ ಅನ್ನೋದು ಸ್ವಲ್ಪವಾದರೂ...'' ಎಂದ ರಾಜಣ್ಣ.

''ಹಣದ ತೊಂದರೆಯಿಂದಾಗಿ ವಾಪಾಸು ಬಿಡುವರೆ ಎಂದರೆ ಹಾಗೂ ಇಲ್ಲ. ಇವರಿಬ್ಬರೂ ದೊಡ್ಡ ಸಾಹುಕಾರರು. ಒಬ್ಬರು ಜಮೀನುದಾರರು, ಇನ್ನೊಬ್ಬರು ದೇಸಾಯಿಗಳು...'' ಎಂದು ನುಡಿದು ಚಂದ್ರಣ್ಣ ರಸೀತಿಗಳಿಗೆ ಸಹಿ ಹಾಕತೊಡಗಿದ.

''ಏಜೆಂಟರಿಂದ ಏನೂ ಬರಲಿಲ್ಲವಲ್ಲ ಚಂದ್ರಣ್ಣನವರೆ. ಬಂದಿದ್ದರೆ ಎಷ್ಟೋ ಸಹಾಯವಾಗುತ್ತಿತ್ತು.''

''ರಾಜರಪ್ಪ ಅವರು. ಅವರನ್ನು ಕೇಳುವವರಾರು? ಕಳಿಸಬೇಕೆಂಬ ಮನಸ್ಸು ಬಂದಾಗ ಹಣ ಕಳಿಸುವ ಜನ ಅದು. ಇಂಥವರು ಒಬ್ಬಿಬ್ಬರು ಆಗಾಗ ತಾವಾಗಿಯೇ ಚಂದಾ ಹಣ ಕಳುಹಿಸುವವರಿರುವುದು ನಮ್ಮ ಸುದೈವ. ಇಂಥವರಿಂದಲೇ ಪತ್ರಿಕೆ ಬದುಕಬೇಕು... ಇಲ್ಲವಾದರೆ...''

''ಪತ್ರಿಕೆ ಕೈಯಲ್ಲಿದ್ದರೆ ಪಲ್ಲಕ್ಕಿಯಲ್ಲಿ ಮೆರೆಯಬಹುದು. ಆ ಚಂಡಕಶಾಸ್ತ್ರಿ ಇದಾನಲ್ಲ - ಆತನಿಗೇನಿತ್ತು ಮೊದಲು? ಒಂದು ಕುರುಡು ಕಾಸಿರಲಿಲ್ಲ, ಇದೊಂದು ಪತ್ರಿಕೆಯಾದ ಮೇಲೆ ಪ್ರೆಸ್ ಮಾಡಿಕೊಂಡ. ಮನೆ ಕೊಂಡುಕೊಂಡ. ಈಗ ಕಾರು ಇಟ್ಟುಕೊಳ್ಳುವ ಸ್ಥಿತಿಗೂ ಬಂದಿದಾನೆ. ನಿಮಗೆ ಈ ಗೋಳಾಟವೇಕೆ ಅನ್ನೋದೆ ನನಗರ್ಥವಾಗುವುದಿಲ್ಲ'' ಎಂದ ಅಂಚೆಯವ.

''ಅರ್ಥ ಮಾಡಿಕೊಳ್ಳುವುದು ಬಹಳ ಸುಲಭ. ಎಲ್ಲರೂ ಚಂಡಕಶಾಸ್ತ್ರಿಯ ಹಾಗೆ ವರ್ತಿಸುವುದಕ್ಕಾಗಿಯೇ? 'ಕ್ರಾಂತಿ' ಆತಂತ್ರ ಕರ್ನಾಟಕದ ಉದಾಹರಣೆ ಯನ್ನು ಅನುಸರಿಸಲಾರದು. ಶಾಸ್ತ್ರಿಯ ಹಾಗೆ ನಾವೂ ಶ್ರೀಮಂತರ ಮತ್ತು ಮಂತ್ರಿಗಳ ಬಾಲ ಬಡಿಯಲು ಕಲಿತಿದ್ದರೆ, ಇಲ್ಲ - ಮನಸ್ಸು ಮಾಡಿದ್ದರೆ ಈ ತೊಂದರೆಯೇನೂ ಇರುತ್ತಿರಲಿಲ್ಲ'' ಎಂದ ಚಂದ್ರಣ್ಣ.

''ಬಾಲ ಬಡಿಯುವುದು ಅಂದರೆ?''

''ಭಟ್ಟಂಗಿತನ ಮಾಡುವುದು. ನೀನೇ ಇಂದ್ರ, ನೀನೇ ಚಂದ್ರ, ನಿನಗೆ ಸರಿ ಯಾರು ಅಂತ ಹೊಗಳುವುದು. ಪತ್ರಿಕೆಯಲ್ಲಿ ಅವರ ಫೋಟೋ ಹಾಕುವುದು. ಅವರಿಗೆ ಸತ್ಕಾರಕೂಟ ಏರ್ಪಡಿಸುವುದು. ಅವರಿಗೆ ಮಾನಪತ್ರಗಳನ್ನು ಕೊಡಿಸುವುದು. ಹೀಗೆಲ್ಲ ಮಾಡುವವರಿಗೆ ಹಣದ ಕೊರತೆಯೇನು? ಇಂಥ ಲಾಂಗೂಲಚಾಲನ ವೃತ್ತಿಯಿಂದ ಹಣ ಗಳಿಸುವ ಮನಸ್ಸು ನಮಗಿಲ್ಲ, ನಮಗೆ ಈ ಬಡತನವೇ ಇರಲಿ. ಚಿಂತೆಯಿಲ್ಲ...''

''ಅದಿರಲಿ, ಆ ಮನಿ ಆರ್ಡರ್ ಹಣ ಏನಾಯಿತು? ವಾಪ್ಸು ಬಂತೇ ಇಲ್ಲವೇ? ಅಥವಾ ಅದನ್ನೂ ಶಾಸ್ತ್ರಿ ನುಂಗಿಬಿಟ್ಟನೋ?''

''ನುಂಗಲು ಪ್ರಯತ್ನಿಸಿದ. ಆದರೆ ದಕ್ಕಬೇಕಲ್ಲ? ಪೋಸ್ಟ್‌ಮಾಸ್ತರಿಂದ ದಬಾಯಿಸಿಕೊಂಡ ಮೇಲೆ ಹಣ ವಾಪಾಸು ಕಳಿಸಿದ. ಆದರೆ ಇನ್ನೂ ನನ್ನ ಮೇಲೆ ಕುನಸಿಟ್ಟುಕೊಂಡೇ ಇದಾನೆ...''

''ಇರಲಿ ಇರಲಿ. ಆತನ ಕುನಸಿನಿಂದೇನಾಗಬೇಕು? ಆತ ಪತ್ರಿಕೆಯಲ್ಲಿ ಗೀಚಿದ್ದರಿಂದ ನಿಮಗೇನಾದರೂ ಆಯಿತೇ?''

''ಕೊಂಚ ತೊಂದರೆಯಾಯಿತು. ಆತನಿಂದ ಕಾಫಿ ಏಕೆ ತೆಗೆದುಕೊಂಡೆ ಎಂದು ಪೋಸ್ಟ್‌ಮಾಸ್ತರರು ಗದರಿಸಿದರು. ದೂರು ಮೇಲಾಧಿಕಾರಿಗಳವರೆಗೂ

ಹೋಗಿತ್ತು. ಎಲ್ಲಿ ಕೆಲಸಕ್ಕೆ ಕಲ್ಲು ಬೀಳುವುದೋ ಎಂದು ಭಯವಾಗುತ್ತಿತ್ತು. ಆದರೆ ಶಾಸ್ತ್ರಿ ಬೇಕೆಂತಲೇ ಮನಿಆರ್ಡರು ತೆಗೆದುಕೊಂಡನೆಂಬುದು ಸಿದ್ಧವಾದಾಗ ಎಲ್ಲವೂ ಸರಿಹೋಯಿತು. ನಾನು ಉಳಿದುಕೊಂಡೆ... ಆದಕ್ಕೇ ಅಪ್ಪ – ಈಚೆಗೆ ಪತ್ರಿಕೆಯವರ ಸಹವಾಸ ಅಂದರೆ ನನಗೆ ಕೊಂಚ ಮೈ ನಡುಕವೇ..."

"ಎಲ್ಲರೂ ಆ ಶಾಸ್ತ್ರಿಯಂಥವರೇ ಇರುತ್ತಾರೆಯೆ? ನಾವಂತೂ ನಿಮ್ಮಂಥ ಕೆಲಸಗಾರರ ಪರವಾಗಿ ದುಡಿಯುವ ಜನ. ನಮ್ಮ ಪತ್ರಿಕೆಯೂ ಹಾಗೇ. ಬಡವರ ಪತ್ರಿಕೆ... ನೀವೇ ನೋಡುತ್ತೀರಲ್ಲ – ನಮಗೆ ಬರುವುದು ಬರೀ ಮೂರು ರೂಪಾಯಿನ ಮನಿಆರ್ಡರು..."

"ಯಾರಪ್ಪ ಅವರು ಕಳಿಸಿದವರು?" ಎನ್ನುತ್ತಾ ಗುಬ್ಬಣ್ಣ ಮೇಲೆ ಬಂದ. ಅವನ ಹಿಂದೆ ಕಾಫಿ ಲೋಟಗಳನ್ನು ಹಿಡಿದುಕೊಂಡು ಮಾಣಿ ಬರುತ್ತಿದ್ದ.

"ಯಾರೋ ವಿದ್ಯಾರ್ಥಿನಿಯ ಹಾಗೆ ತೋರುತ್ತೆ. ರತ್ನಮ್ಮ ಅಂತೆ."

"ರತ್ನಮ್ಮ? ಹೆಸರೇನೋ ಸೊಗಸಾಗಿದೆ ಕಣ್ರಿ! ಕಾಲೇಜು ವಿದ್ಯಾರ್ಥಿನಿಯಾಗಿದ್ದರೂ ಇರಬಹುದು. ಯಾವ ಊರು?"

"ಧರ್ಮಪುರ."

"ಅಲ್ಲಿ ಕಾಲೇಜು ಇದೆಯಲ್ಲವೆ?"

"ಇದೆ. ಕಳೆದ ವರ್ಷವೇ ಹೊಸದಾಗಿ ಪ್ರಾರಂಭವಾಗಿದೆ."

"ಹಾಗಾದರೆ ಕಾಲೇಜು ವಿದ್ಯಾರ್ಥಿನಿಯೇ ಇರಬೇಕು" ಎಂದ ಗುಬ್ಬಣ್ಣ.

"ನಿನಗೆ ಕಾಲೇಜು ವಿದ್ಯಾರ್ಥಿನಿಯರೆಂದರೆ ಪ್ರಾಣ ಹೋಗುತ್ತೆ. ಆಕೆ ಕಾಲೇಜು ವಿದ್ಯಾರ್ಥಿನಿಯೇ ಅಂತ ಹೇಗೆ ಹೇಳುತ್ತೀಯೆ? ಬೇರೆ ಯಾರಾದರೂ ಏಕಿರಬಾರದು?" ಎಂದ ರಾಜಣ್ಣ.

"ನಮ್ಮ ಪತ್ರಿಕೆ ಏನು ಮಹಿಳೆಯರ ಪತ್ರಿಕೆಯೆ ಬೇರೆ ಮಹಿಳೆಯರು ಚಂದಾದಾರರಾಗಲಿಕ್ಕೆ? ನಮಗೆ ಚಂದಾ ಹಣ ಕಳಿಸುವವರೆಂದರೆ ಕಾಲೇಜು ಹುಡುಗಿಯರೇ ಸರಿ. ಬೇರೆ ಯಾರೂ 'ಕ್ರಾಂತಿ'ಯನ್ನು ಮೆಚ್ಚಿಕೊಳ್ಳಲಿಕ್ಕಿಲ್ಲ" ಎಂದ ಗುಬ್ಬಣ್ಣ.

''ಹೌದು, ಅದೂ ನಿಜ. ಕಾಲೇಜು ವಿದ್ಯಾರ್ಥಿ ವಿದ್ಯಾರ್ಥಿನಿಯರೇ ನಮ್ಮ ಪತ್ರಿಕೆಗೆ ಆಧಾರ'' ಎಂದ ಚಂದ್ರಣ್ಣ.

''ಬರೀ ಚಂದಾಹಣ ಅಲ್ಲ ಸಾರ್. ಅವರೇ ಒಂದು ಕವಿತೆಯನ್ನೂ ಕಳಿಸಿದಾರೆ. ಅದಕ್ಕೆ ಒಂದೂವರಾಣೆ ದಂಡ...'' ಎಂದ ಅಂಚೆಯವ.

''ಏಕಯ್ಯ ದಂಡ?''

''ಬುಕ್‌ಪೋಸ್ಟ್ ಅಂತ ಕವರಿನ ಮೇಲೆ ಬರೆದು ಒಳಗಡೆ ಕಾಗದ ಇಟ್ಟಿದ್ದಾರೆ...''

''ಓ! ಹೀಗೋ! ಸರಿಹೋಯಿತು. ಮೂರು ರೂಪಾಯಿಯಲ್ಲೇ ಆಗಲೇ ಒಂದೂವರಾಣೆ ಹೋಯಿತು. ಇದು ಖಂಡಿತವಾಗಿಯೂ ಕಾಲೇಜು ಹುಡುಗಿಯರ ಕೆಲಸವೇ. ಬೇರೆ ಯಾರೂ ಹೀಗೆ ಮಾಡಲಾರರು'' ಎಂದ ಗುಬ್ಬಣ್ಣ.

ಅಂಚೆಯವನು ಕೊಟ್ಟ ಕವರಿನಿಂದ ಚಂದ್ರಣ್ಣ ಕಾಗದಗಳನ್ನು ಹೊರದೆಗೆದ. ಕಾಫಿಯನ್ನು ಗುಟುಕರಿಸುತ್ತಿದ್ದ ಹಾಗೆ ಎಲ್ಲರೂ ಆತನನ್ನೇ ಕುತೂಹಲದಿಂದ ದಿಟ್ಟಿಸುತ್ತಿದ್ದರು.

ಚಂದ್ರಣ್ಣ ತನ್ನಷ್ಟಕ್ಕೆ ತಾನೇ ಕಾಗದವನ್ನೋದುತ್ತಿದ್ದ. ಓದಿದ ಹಾಗೆಲ್ಲ ಆತನ ಮುಖ ಆನಂದದಿಂದ ಅರಳತೊಡಗಿದುದನ್ನು ಕಂಡು ಗುಬ್ಬಣ್ಣನಿಗೆ ಕುತೂಹಲವನ್ನು ತಡೆದು ಹಿಡಿಯಲಾಗಲಿಲ್ಲ.

''ಏನದು ಚಂದ್ರಣ್ಣ ಒಬ್ಬರೇ ಓದಿ ಸಂತೋಷಿಸುವುದೇ? ನಮಗೂ ಸ್ವಲ್ಪ ಸಂತೋಷವಾಗಲಿ ಓದಿ ಹೇಳಿ,'' ಎಂದ.

ಚಂದ್ರಣ್ಣ ನಕ್ಕು ಆ ಕಾಗದವನ್ನು ಗುಬ್ಬಣ್ಣನ ಕೈಗೆ ಕೊಟ್ಟು: ''ಓದಿಕೊಳ್ಳಿ. ಅಂತೂ ಇಂಥವರ ನಾಲ್ಕು ಉತ್ಸಾಹದ ಮಾತುಗಳಿಂದಲೇ ನಮ್ಮಂಥವರಿಗೆ ಸ್ಫೂರ್ತಿ ಬರಬೇಕು'' ಎಂದ.

''ಏನು ಬರೆದಿದಾರೆ ಸಾರ್?'' ಎಂದು ಅಂಚೆಯವನೂ ಕುತೂಹಲದಿಂದ ಕೇಳಿದ.

ಗುಬ್ಬಣ್ಣ ಗಟ್ಟಿಯಾಗಿ ಓದತೊಡಗಿದ :

"ನನ್ನ ಬಡತನದ ಬಾಳಿನಲ್ಲೂ ಕಷ್ಟಪಟ್ಟು ಈ ಮೂರು ರೂಪಾಯಿ ಉಳಿಸಿ ಅದನ್ನು ನನ್ನ ಅಚ್ಚುಮೆಚ್ಚಿನ ಪತ್ರಿಕೆಯಾದ 'ಕ್ರಾಂತಿ'ಗೆ ಕಳುಹಿಸಲು ಹಿಡಿಸಲಾರದಷ್ಟು ಸಂತೋಷವಾಗುತ್ತಿದೆ. ಇದುವರೆಗೆ ಪ್ರತಿ ತಿಂಗಳೂ ಇಲ್ಲಿಯ ಏಜೆಂಟರಿಂದ ಕೊಂಡು ಓದುತ್ತಿದ್ದೆ. ಚಂದಾದಾರಳಾಗಬೇಕೆಂಬ ಬಹುದಿನದ ಬಯಕೆ ಇಂದು ಕೈಗೂಡಿದೆ, ದಯವಿಟ್ಟು ಹಣವನ್ನು ಸ್ವೀಕರಿಸಬೇಕು."

ಪತ್ರವನ್ನೋದಿ ಮುಗಿಸಿ ಗುಬ್ಬಣ್ಣ ಆನಂದದಿಂದ ನುಡಿದ; "ಪರವಾಯಿಲ್ಲ ರಾಜಣ್ಣ, ನಾವೆಲ್ಲ ಪತ್ರಿಕೆ ಹೊರಡಿಸಲು ಕಷ್ಟಪಡುವುದು ಸಾರ್ಥಕವಾದಂತಾಯಿತು. ನಮ್ಮ ಕೆಲಸವನ್ನು ಇಂಥವರು ಕೆಲವರು ಮೆಚ್ಚಿದರೆ ಸಾಕು. ಇಂಥವರಿಂದ ಆಗಾಗ ಮೂರು ಮೂರು ರೂಪಾಯಿ ಬಂದರೆ ಸಾಕು. ಈ ಸೆಟ್ಟರು ಈ ದೇಸಾಯಿಗಳ ಮುಖ ನೋಡಬೇಕಾದ ಅಗತ್ಯವಿಲ್ಲ."

ಹಣವನ್ನು ಕೊಟ್ಟು ಅಂಚೆಯವ ಹೊರಟುಹೋದ. ದುಡ್ಡು ತೆಗೆದುಕೊಂಡು ಕಾಫಿಯ ಹುಡುಗನೂ ಹೊರಟು ನಡೆದ. ಮೂವರು ಗೆಳೆಯರೂ ಉತ್ಸಾಹದಿಂದ ಎಷ್ಟೋ ಹೊತ್ತಿನವರೆಗೆ ಮಾತನಾಡುತ್ತ ಕುಳಿತಿದ್ದರು. ಚಂದ್ರಣ್ಣನ ಊಟವಿನ್ನೂ ಆಗಿರಲಿಲ್ಲವೆಂಬ ವಿಚಾರವನ್ನು ಎಲ್ಲರೂ ಮರೆತುಬಿಟ್ಟ ಹಾಗಿದ್ದಿತು. ಆತನಿಗಂತೂ ಅದರ ನೆನಪೇ ಇರಲಿಲ್ಲ. ದೂರದ ಊರಿನಲ್ಲಿದ್ದ ಅಪರಿಚಿತ ಬಾಂಧವಿಯೊಬ್ಬಾಕೆ ಬರೆದ ಆ ಸರಳ ಕಾಗದ ಅವನನ್ನು ಆನಂದದ ತೆರೆಗಳ ಮೇಲೆ ತೇಲಿಸಿಕೊಂಡು ಹೊರಟಿದ್ದಿತು. "ನನ್ನ ಬಡತನದ ಬಾಳಿನಲ್ಲೂ ಮೂರು ರೂಪಾಯಿ ಉಳಿಸಿದೆ," ಎಂಬ ಆ ಹೃದಯಸ್ಪರ್ಶಿಯಾದ ನುಡಿ! ಸುತ್ತಲೂ ಅಸಹಕಾರದ ಉರಿ ಮುಖಗಳನ್ನೇ ನೋಡಿ ನೋಡಿ ಬೇಸರಗೊಂಡಿದ್ದ ಆ ತರುಣರಿಗೆ ಸಹಾನುಭೂತಿಯಿಂದ ತುಂಬಿದ ಈ ಒಂದು ಮುಖವನ್ನು ಕಂಡಾಗ ತುಂಬಾ ಸಂತೋಷವಾದುದೂ ಸ್ವಾಭಾವಿಕ ವಾಗಿದ್ದಿತು.

"ಈಕೆ ಕಾಲೇಜು ವಿದ್ಯಾರ್ಥಿನಿಯ ಹಾಗೆ ಕಾಣುವುದಿಲ್ಲ ನನಗಂತೂ!" ಎಂದ ರಾಜಣ್ಣ.

"ಅದು ಹೇಗೆ ಗೊತ್ತಾಯಿತು ನಿನಗೆ?" ಎಂದ ಗುಬ್ಬಣ್ಣ.

"ಅಷ್ಟು ಗೊತ್ತಾಗುವುದಿಲ್ಲವೇ? ಒಂದು ಇಂಗ್ಲೀಷು ಶಬ್ದವನ್ನೂ ಬೆರೆಸದೆ ಕಾಗದ ಬರೆಯುವುದುಂಟೇ ಕಾಲೇಜು ವಿದ್ಯಾರ್ಥಿನಿಯರು?"

''ನಮ್ಮ ಸಂಪಾದಕರಿಗೆ ಅಂಥ ಬೆರಕೆ ಭಾಷೆ ಕಂಡರೆ ಕಡುಕೋಪ ಎಂಬುದು ಆಕೆಗೆ ತಿಳಿದಿರಬೇಕು. ಅಂತೆಯೇ ಎಚ್ಚರಿಕೆಯಿಂದ ಬರೆದಿರಬಹುದು.''

''ಖಂಡಿತವಾಗಿಯೂ ಈಕೆ ಕಾಲೇಜು ವಿದ್ಯಾರ್ಥಿನಿಯಲ್ಲ, ಇಂಥ ಸರಳತನ, ಇಂಥ ಬಿಚ್ಚುಹೃದಯ ಆ ಬಣ್ಣದ ಚಿಟ್ಟೆಗಳಿಗೆಲ್ಲಿಂದ ಬರಬೇಕು?''

''ಕಾಲೇಜು ಕುಮಾರಿಯರೆಲ್ಲಾ ಚಿಟ್ಟೆಗಳಲ್ಲ, ಅವರಲ್ಲೂ ಸರಳ ಹೃದಯ ದವರು ಬೇಕಾದಷ್ಟು ಜನ ಇರುತ್ತಾರೆ', ಎಂದು ಚಂದ್ರಣ್ಣ ನಡುವೆ ಬಾಯಿ ಹಾಕಿದ.

''ಸರಳ ಹೃದಯದವರೆಂದು ಅಭಿನಯಿಸುವವರು – ಎಂದು ಹೇಳ ಬಹುದು. ನಾನರಿಯೆನೇ ಈ ಷೋಕಿ ಬೊಂಬೆಗಳನ್ನು? ಕ್ರಾಂತಿಯಂಥ ಪತ್ರಿಕೆಯಲ್ಲಿ ತನ್ನ ಕವಿತೆ ಪ್ರಕಟವಾಗಲಿ ಅಂತ ಯಾರಿಗೆ ಆಸೆಯಿಲ್ಲ? ಇವರಿಗೂ...''

''ಛೆ! ಇವರಿಗಂತೂ ಅಂಥ ಆರೋಪ ಸಲ್ಲದು. ಬಡವರಿಗೆ ಇಂಥ ನಟನೆ ತಿಳಿಯುವುದಿಲ್ಲ. ಅಲ್ಲದೆ ಕವಿತೆ ಅಚ್ಚಾಗಿ ಬರಬೇಕೆಂಬ ಹವ್ಯಾಸ ಅವರಿಗಿದ್ದಿದ್ದರೆ ತಮ್ಮ ಕವಿತೆಯನ್ನು ಕುರಿತು – 'ಇದು ಕವಿತೆಯೋ ಅಲ್ಲವೊ ತಿಳಿಯದು. ನಿಮ್ಮ ಕಣ್ಣಿಗೆ ಹಾಕಬೇಕೆಂದು ಕಳಿಸಿದ್ದೇನೆ. ನೀವೇ ಏನಾದರೂ ಮಾಡಬಹುದು' ಎಂದು ಬರೆಯುತ್ತಿರಲಿಲ್ಲ. 'ಇದನ್ನು ನಮ್ಮ ಮೇಷ್ಟರು ಓದಿ ನೋಡಿದರು. ಬಹಳ ಚೆನ್ನಾಗಿದೆ ಯೆಂದು ಹೊಗಳಿದರು, ನಿಮ್ಮ ಪತ್ರಿಕೆಗೆ ಕಳಿಸಲು ಸೂಚಿಸಿದರು, ಅವರ ಸೂಚನೆಯ ಮೇರೆಗೆ ಕಳಿಸಿದ್ದೇನೆ – ಎಂದು ಮುಂತಾಗಿ ಬರೆಯುತ್ತಿದ್ದರು. ಹೀಗೆ ಬರೆಯುವವರ ಕವಿತೆಯನ್ನು ನಾವು ಕಂಡಿಲ್ಲವೆ? ಆದರೆ ಇವರದು ಹಾಗಲ್ಲ – ಸಾಧಾರಣ ಚೆನ್ನಾಗಿಯೆ ಇದೆ. ಅಚ್ಚು ಹಾಕಬಹುದು...'' ಎಂದ ಚಂದ್ರಣ್ಣ.

ರಾಜಣ್ಣ ಆ ಕವಿತೆಯನ್ನೋದಿ ನೋಡಿ, ''ಹೌದು, ಚೆನ್ನಾಗಿದೆ,'' ಎಂದು ದನಿಗೂಡಿಸಿದ.

''ಸರಿ ನಿಮ್ಮಿಬ್ಬರನ್ನೂ ಗೆದ್ದುಕೊಂಡಳು ಆ ಕವಯಿತ್ರಿ. ತನ್ನಿ ಇಲ್ಲಿ ನೋಡೋಣ ಆ ಕವಿತಾರತ್ನವನ್ನು. ಓ! 'ಜಯವಾಗಲಿ ಕ್ರಾಂತಿಗೆ! ಬಡವರ ಕೈವಾರಿಗೆ! ದುಡಿವರ ಕೆದೀವಿಗೆ, ಜಯವಾಗಲಿ ಕ್ರಾಂತಿಗೆ!' ಏನು ಪಲ್ಲವಿ, ಏನು ಕವಿತೆ? ಆಹಾಹಾ!'' ಎಂದು ನಗತೊಡಗಿದ ಗುಬ್ಬಣ್ಣ.

''ಈ ಗುಬ್ಬಣ್ಣ ಯಾವಾಗಲೂ ಹೀಗೇ – ಸ್ತ್ರೀದ್ವೇಷಿ. ಇದೇ ಕವಿತೆಯನ್ನೇ ತರುಣರಾರಾದರೂ ಬರೆದಿದ್ದರೆ ತಲೆಯ ಮೇಲಿಟ್ಟುಕೊಂಡು ಹಾಡುತ್ತ

ಕುಣಿಯುತ್ತಿದ್ದ. ಬರೆಯುವುದಕ್ಕೂ ಸ್ವಲ್ಪ ಬುದ್ಧಿ ಬೇಕು. ನಮ್ಮ ಸ್ತ್ರೀಯರಲ್ಲಿ ಎಷ್ಟು ಜನ ಇಂಥ ಕವಿತೆ ರಚಿಸಬಲ್ಲರು?'' ಎಂದ ರಾಜಣ್ಣ.

''ನಮ್ಮಲ್ಲಿ ಸ್ತ್ರೀಲೇಖಕರಾದರೂ ಎಷ್ಟು ಜನ ಇದ್ದಾರೆ? ಕವಿತೆ ರಚಿಸುವುದು ಹಾಗಿರಲಿ, ಓದಿ ಅರ್ಥ ಮಾಡಿಕೊಳ್ಳಬಲ್ಲವರಾದರೂ ಎಷ್ಟು ಜನ ಇರಬಹುದು? ಇವರ ಸೀರೆ, ಇವರ ರವಿಕೆ, ಇವರ ಫ್ಯಾಶನ್, ಇವರ ತಿರುಗಾಟ, ಇವರ ಸಿನಿಮಾ, ನಾಟಕ, ಇವರ ಹರಟೆ... ಕವಿತೆ, ಕತೆಗಳಿಗೆ ಬಿಡುವಾದರೂ ಎಲ್ಲಿ ದೊರೆತೀತು ಪಾಪ!''

''ಅದಕ್ಕೇ ಮತ್ತೆ! ಯಾರೂ ಇಲ್ಲದಿರುವಾಗ ಇಂಥವರು ಒಬ್ಬಿಬ್ಬರು ಮುಂದೆ ಬಂದು ಬರೆಯತೊಡಗಿವುದು ಸಂತೋಷದ ವಿಷಯವಲ್ಲವೆ? ಅವರ ಕೃತಿಗಳನ್ನು ಸ್ವಾಗತಿಸಿ ಪ್ರೋತ್ಸಾಹಿಸಬೇಕೋ? ನಿನ್ನ ಹಾಗೆ ಮೂಗು ಮುರಿದು ನಗಬೇಕೋ?''

''ಆಕೆಯ ಮೂಗಿನ ತಂಟೆಯೇಕಪ್ಪ? ಈ ಹುಡುಗಿಯರ ಮಾತೇ ಬೇಡ ಬಿಡಿ,'' ಎಂದು ಗುಬ್ಬಣ್ಣ ಗಟ್ಟಿಯಾಗಿ ನಗತೊಡಗಿದ.

ಕೆಲಹೊತ್ತು ಕೊಠಡಿಯಲ್ಲಿ ಗೆಳೆಯರ ನಗು ದುಮುದುಮಿಸುತ್ತಿತ್ತು. ಹಣದ ಅಭಾವ, ಪತ್ರಿಕೆಯ ತೊಂದರೆ ತಾಪತ್ರಯಗಳು ಎಲ್ಲವನ್ನೂ ಮರೆತು ಅವರು ನಗೆಯ ಕಡಲಿನಲ್ಲಿ ಮುಳುಗಿಹೋಗಿದ್ದರು.

ಮತ್ತೆ ಮೆಟ್ಟಿಲುಗಳ ಮೇಲೆ ಸದ್ದಾಗುವುದು ಕೇಳಿಬಂದಿತು. ಕೊಂಚ ಹೊತ್ತಿನಲ್ಲಿಯೇ ರಂಗಯ್ಯನ ಬಾಡಿದ ಮುಖ ಬಾಗಿಲಿನಲ್ಲಿ ಕಾಣಿಸಿಕೊಂಡಿತು.

ಆತ ಒಳಗೆ ಬಂದು ಚಾಪೆಯ ಮೇಲೆ ಕುಳಿತುಕೊಳ್ಳುತ್ತ ಮುಖದ ಮೇಲೆ ಕೃತ್ರಿಮ ನಗೆಯನ್ನು ತರುವ ವ್ಯರ್ಥ ಪ್ರಯತ್ನ ಮಾಡುತ್ತ ಚಂದ್ರಣ್ಣನನ್ನು ಕುರಿತು – ''ಊಟ ಆಯ್ತೆ ಚಂದ್ರಣ್ಣನವರೇ?'' ಎಂದ.

ಚಂದ್ರಣ್ಣ ಬೆಚ್ಚಿ ಬಿದ್ದು – ''ಊಟ?'' ಎಂದ.

''ಇನ್ನೂ ಹೋಗಿಲ್ಲ ಹಾಗಾದರೆ ಹೋಟೆಲಿಗೆ? ನೀವು ಅಲ್ಲಿಯೇ ಇರಬಹುದೆಂದು ತಿಳಿದು ನಾನು ಈಗ ತಾನೆ ಅಲ್ಲಿಗೆ ಹೋಗಿಬಂದೆ. ನೀವು ಬಂದೇ ಇಲ್ಲವೆಂದು ಸುಬ್ಬಯ್ಯ ಹೇಳಿದ. ಏಕೆ? ಇವತ್ತು ಏಕಾದಶಿಯೋ ಏನು?''

''ಹಾಗೇನೂ ಇಲ್ಲ, ಮನಿಆರ್ಡರಿನ ದಾರಿ ಕಾಯುತ್ತ ಕೂತಿದ್ದೆ, ಅಷ್ಟು

ಹೊತ್ತಿಗೆ ಇವರೂ ಬಂದರು. ಮಾತನಾಡುತ್ತ ಕೂತಿದ್ದೆವು. ಇವೊತ್ತು ಬಂದ ಹಣ ಎಷ್ಟು ಗೊತ್ತೇ ರಂಗಯ್ಯ? ಮೂರು ರೂಪಾಯಿ..'' ಎಂದ ಚಂದ್ರಣ್ಣ.

''ಮೂರು ರೂಪಾಯಿ?''

''ಒಂದೂವರೆ ಆಣೆ ಕಡಿಮೆ ಮೂರು ರೂಪಾಯಿ'', ಎಂದು ಗುಬ್ಬಣ್ಣ ಸೇರಿಸಿದ. ಯಾಚಿಸುವ ಧ್ವನಿಯಲ್ಲಿ ಚಂದ್ರಣ್ಣನೆಂದ : ''ಹೀಗೆ ಎರಡು ಮೂರು ರೂಪಾಯಿ ಕೊಡಬೇಕಾದ ಪ್ರಸಂಗ ಬಂದುದಕ್ಕೆ ನನಗೆ ತೀರ ನಾಚಿಕೆಯಾಗುತ್ತೆ ರಂಗಯ್ಯ. ಕಳೆದ ತಿಂಗಳಿನ ನಿಮ್ಮ ಬಿಲ್ ಹಣವನ್ನು ಇನ್ನೂ ನಾವು ಮುಟ್ಟಿಸಲಿಲ್ಲ. ನೀವು ಅಂತ ಸುಮ್ಮನಿದ್ದೀರಿ – ಬೇರೆಯವರಾರಾದರೂ ಆಗಿದ್ದರೆ... ಪತ್ರಿಕೆ ಎಂದೋ ನಿಂತುಹೋಗುತ್ತಿತ್ತು. ದಯವಿಟ್ಟು ಏನೂ ತಿಳಿದುಕೊಳ್ಳಬೇಡಿ. ನಮ್ಮ ತೊಂದರೆಗಳು ನಿಮಗೆ ತಿಳಿದೇ ಇವೆ...''

ಆತನನ್ನು ನಡುವೆಯೆ ತಡೆದು ರಂಗಯ್ಯ ಹೇಳಿದ : ''ಪರವಾಯಿಲ್ಲ ಬಿಡಿ ಚಂದ್ರಣ್ಣ, ನನಗೇನೂ ಅಸಮಾಧಾನವಿಲ್ಲ, ನಿಮ್ಮ ಹತ್ತಿರ ಹಣ ಇದ್ದಾಗ ಕೊಡಿ. ತೊಂದರೆಪಟ್ಟುಕೊಳ್ಳಬೇಡಿ. ಸಂಕೋಚವೂ ಬೇಡ. ಪತ್ರಿಕೆಯ ಕಷ್ಟ ನಷ್ಟಗಳ ವಿಚಾರ ನಾನರಿಯೆನೇ? ಅದರಿಂದ ನಿಮಗೆ ಬರುವ ಲಾಭವೂ ಅಷ್ಟರಲ್ಲೇ ಇದೆ. ಇಷ್ಟೆಲ್ಲ ಶ್ರಮ ವಹಿಸಿ ನೀವು ಪತ್ರಿಕೆ ಹೊರಡಿಸಲು ದುಡಿಯುತ್ತಿರುವಾಗ ನನ್ನಂಥವನು ಕೊಂಚ ವಾದರೂ ನೆರವಾಗಬೇಡವೆ? ಕ್ರಾಂತಿ ಕೇವಲ ನಿಮ್ಮ ಪತ್ರಿಕೆಯಲ್ಲ; ಅದು ನನ್ನದೂ ಹೌದು. ನಮ್ಮಂಥ ಬಡವರ ಪತ್ರಿಕೆ ಅದು. ಅದು ಬದುಕಿ ಬಾಳಿದರೆ ಸಾಕು...''

''ಕ್ರಾಂತಿ ಬದುಕಬೇಕು, ನಿಜ. ಆದರೆ ಅದಕ್ಕಾಗಿ ದುಡಿಯುವವರೂ ಬದುಕಬೇಕಲ್ಲ? ಉಪವಾಸವಿದ್ದು ಮುದ್ರಣ ಕೆಲಸ ಮಾಡಲಾಗುತ್ತೆಯೆ?''

''ಹಾಗೆ ಉಪವಾಸ ಬೀಳುವ ಸಂದರ್ಭವೇನೂ ಬಂದಿಲ್ಲವಲ್ಲ? ನಾವು ಹೇಗಾದರೂ ಸಾಗಿಸುತ್ತೇವೆ. ನಿಮಗೇಕೆ ಅದರ ಯೋಚನೆ? ಇಂಥ ಚಿಂತೆ ನಿಮ್ಮ ತಲೆಯಲ್ಲಿ ಸುತ್ತುತ್ತಿದ್ದರೆ ನಿಮ್ಮಿಂದ ಸ್ಫೂರ್ತಿದಾಯಕ ಲೇಖನಗಳು ಬರಲಿಕ್ಕಿಲ್ಲ. ಆದ್ದರಿಂದ ನೀವು ಹಣದ ವಿಚಾರ ತಲೆಗೆ ಹಾಕಿಕೊಳ್ಳಲೇಬೇಡಿ. ಸರಿ ನಾನೀಗ ಹೊರಡುತ್ತೇನೆ. ಆರನೆಯ ಫಾರಂ ಅಚ್ಚಾಗುತ್ತಿದೆ. ಇನ್ನೇನು ಮುಗಿಯುತ್ತಾ ಬಂತು,'' ಎಂದು ನುಡಿದು ರಂಗಯ್ಯ ಹೊರಟುಹೋದ.

ಆ ಮಧ್ಯಾಹ್ನ ಆತನ ಹತ್ತಿರ ಉಪ್ಪಿಗಾಗಿ ಎರಡಾಣೆಯಿರಲಿಲ್ಲವೆಂಬ ವಿಷಯ

ಆ ಗೆಳೆಯರಿಗೆ ಹೇಗೆ ಗೊತ್ತಾಗಬೇಕು! ಅಂಥ ವಿಷಯಗಳನ್ನು ಬಾಯಿಬಿಟ್ಟು ಹೇಳುವ ಸ್ವಭಾವವೂ ಆತನದಲ್ಲ.

ಆತ ಹೊರಟುಹೋದ ತರುವಾಯ ಮೂವರೂ ಒಂದೆರಡು ನಿಮಿಷ ಮೌನವಾಗಿ ಕುಳಿತಿದ್ದರು. ಚಂದ್ರಣ್ಣನ ಬೆರಳುಗಳ ಮಧ್ಯೆ ಸಿಗರೇಟು ಹೊಗೆ ಯಾಡುತ್ತಿತ್ತು. ಸುರುಳಿ ಸುರುಳಿಯಾಗಿ ಮೇಲಕ್ಕೆದ್ದು ಗಾಳಿಯಲ್ಲಿ ಕರಗಿ ಹೋಗುತ್ತಿದ್ದ ಆ ಹೊಗೆಯನ್ನು ಶೂನ್ಯವಾಗಿ ದಿಟ್ಟಿಸುತ್ತ ಚಂದ್ರಣ್ಣನೆಂದ :

''ಇನ್ನು ಎಷ್ಟು ದಿನ ಹೀಗೇ ನಡೆದೀತು ರಾಜಣ್ಣ? ತೊಂದರೆಗಳ ಪರಮಾವಧಿಗೆ ಮುಟ್ಟಿದಂತಾಯಿತು.''

''ಹೌದು. ಏನು ಮಾಡುವುದು! ಬೇರಾವ ಉಪಾಯವೂ ಇಲ್ಲ. ಪತ್ರಿಕೆ ತನ್ನ ಕಾಲ ಮೇಲೆ ತಾನು ನಿಲ್ಲುವಂತಿಲ್ಲ. ಅದರ ಖರ್ಚು ನಡೆಯಬೇಕಾದರೆ ತಿಂಗಳು ತಿಂಗಳಿಗೂ ಸಾಲ ಮಾಡಿ ತಂದು ಹಾಕಬೇಕು. ಈ ಒಂದು ವರ್ಷದಲ್ಲಿ ಒಂದೂವರೆ ಸಾವಿರದ ಮೇಲೆ ಸಾಲ ಬೆಳೆದಿದೆ. ಅದನ್ನು ತೀರಿಸುವುದು ಹೇಗೆಂಬುದೇ ದೊಡ್ಡ ಸಮಸ್ಯೆಯಾಗಿ ಕುಳಿತಿದೆ. ಪತ್ರಿಕೆಯಿಂದ ಲಾಭ ಬಂದೀತು, ಈ ಸಾಲ ತೀರಿಸಬಹುದು ಎಂಬ ಭರವಸೆ ನನಗೆ ಉಳಿಯಲಿಲ್ಲ. ಈಗ ಮಾಡಿರುವ ಸಾಲವನ್ನು ತೀರಿಸಿದ ಹೊರತು ಹೊಸದಾಗಿ ಸಾಲ ಹುಟ್ಟುವಂತಿಲ್ಲ...''

''ಹುಟ್ಟಿದರೂ ಈ ರೀತಿ ಮತ್ತೆ ಸಾಲ ಮಾಡಲು ನನ್ನ ಒಪ್ಪಿಗೆಯಿಲ್ಲ. ತಿಂಗಳು ತಿಂಗಳಿಗೂ ನೂರೈವತ್ತು ರೂಪಾಯಿ ನಷ್ಟ ಮಾಡಿಕೊಂಡು ಪತ್ರಿಕೆ ಹೊರಡಿಸುತ್ತಿದ್ದೇವೆ. ಹೀಗೇ ಎಷ್ಟು ದಿನ? ಸಾಲ ತಂದರೂ ಅದನ್ನು ತೀರಿಸುವ ಹೊಣೆ ಹೊರಬೇಕಲ್ಲವೆ? ತನ್ನ ಕಾಲ ಮೇಲೆ ತಾನು ನಿಂತುಕೊಳ್ಳಲಾರದ ಪತ್ರಿಕೆಗಾಗಿ ಸಾಲ ಮಾಡಿ ಪ್ರಯೋಜನ ವೇನು?'' ಎಂದ ಚಂದ್ರಣ್ಣ.

''ಅದೇನೋ ನಿಜವೆ. ಆದರೆ ಅಷ್ಟು ಉತ್ಸಾಹದಿಂದ ನಾವು ಹೊರಡಿಸಿದ ಪತ್ರಿಕೆ... ಕನ್ನಡನಾಡಿನಲ್ಲೆಲ್ಲ ಇಷ್ಟೊಂದು ಲೋಕಪ್ರಿಯವಾಗಿರುವ ಪತ್ರಿಕೆ... ಕ್ರಾಂತಿಯ ಹೆಸರನ್ನರಿಯದ ಜನ ಇದೆಯೆ ಕರ್ನಾಟಕದಲ್ಲಿ? ನಮ್ಮ ಪತ್ರಿಕೆಯ ಮಾತು ಹೊರಟೊಡನೆಯೆ ನಡುಗದಿರುವ ಪ್ರತಿಗಾಮಿಗಳಿದಾರೆಯೇ? ತರುಣ ವರ್ಗಕ್ಕಂತೂ ಕ್ರಾಂತಿ ಅಚ್ಚುಮೆಚ್ಚಿನದಾಗಿದೆ. ಇಂಥ ಪತ್ರಿಕೆಯನ್ನು ನಿಲ್ಲಿಸುವುದೇ? ನಿಲ್ಲಿಸಿದೆವು ಅನ್ನಿ – ಎಷ್ಟು ಜನಕ್ಕೆ ಅಸಂತೋಷ, ಎಷ್ಟು ಜನಕ್ಕೆ ನಿರಾಸೆ! ನಮ್ಮಿಂದ ಟೀಕೆಗೊಳ

ಗಾಗುತ್ತಿರುವ ಪ್ರತಿಗಾಮಿಗಳು ಮಾತ್ರ ಹಾಲು ಸಕ್ಕರೆ ಸವಿದಾರು. ಆಮೇಲೆ ಅವರನ್ನಾರು ಕೇಳಬೇಕು. ಆ ಪ್ರತಿಗಾಮಿಗಳಿಗೆಲ್ಲ ಒಂದು ದೊಣ್ಣೆಯಿದ್ದ ಹಾಗಿದೆ ನಮ್ಮ ಪತ್ರಿಕೆ. ಅದೂ ಮಾಯವಾದರೆ... ಅವರನ್ನು ಕೊಚ್ಚುವುದಕ್ಕಾಗಿಯಾದರೂ ಬದುಕಿರಲೇಬೇಕು ಕ್ರಾಂತಿ...'' ಎಂದ ಗುಬ್ಬಣ್ಣ.

''ಬದುಕಿರಬೇಕು, ಸರಿಯೆ. ಆದರೆ ಹೇಗೆ ತಾನೆ ಬದುಕಬೇಕು? ಕಾಗದ ಕೊಳ್ಳಲು ಹಣವಿಲ್ಲ, ಪ್ರೆಸ್ಸಿಗೆ ಕೊಡಲು ಹಣವಿಲ್ಲ, ಬ್ಲಾಕ್ ಮಾಡಿಸಲು ಹಣವಿಲ್ಲ, ಅಷ್ಟೇಕೆ, ಅಂಚೇ ಟಿಕೆಟ್ಟು ಕೊಳ್ಳಲು ಸಹ ಹಣವಿಲ್ಲ, ಹಣ ಬೇಕಾದರೆ ಸಾಲ ಮಾಡಿ ರಬೇಕು. ಸಾಲ ಸಿಕ್ಕುವಂತಿಲ್ಲ, ಸಿಕ್ಕಿದರೂ ತರುವಂತಿಲ್ಲ, ಮುಂದೆ?'' ಎಂದ ಚಂದ್ರಣ್ಣ.

''ಕೆಲವು ಜಾಹೀರಾತುಗಳಾದರೂ ಸಿಕ್ಕಿದ್ದರೆ?'' ಎಂದು ರಾಜಣ್ಣ ರಾಗ ಎಳೆದ.

''ಜಾಹೀರಾತು! ಅವು ಸಿಕ್ಕಬೇಕಾದರೆ ಪತ್ರಿಕೆ ಕೀಳುತರಗತಿಯದಾಗಬೇಕು. ಮುಖಪುಟದ ಮೇಲೆ ಸಿನಿಮಾ ತಾರೆಯರ ಫೋಟೋ ಬರಬೇಕು. ಒಳಗಡೆ ನಟನಟಿಯರ ಚಿತ್ರಗಳು, ಮಾಸಭವಿಷ್ಯ, ಅರ್ಥಹೀನ ಚುಟುಕ, ಎಲ್ಲಾ ಇರಬೇಕು. ಅಂಥ ಪತ್ರಿಕೆ ತೆಗೆದುಕೊಂಡು ಜಾಹೀರಾತು ಕೊಡುವ ಶೇಟುಗಳ ಹತ್ತಿರ ಹೋಗಿ ಹತ್ತು ಸಲ ನೂರು ಸಲಾಂ ಹಾಕಿ ಲಾಂಗೂಲಚಾಲನ ಮಾಡಿ ಅವರು ಬರಹೇಳಿದಾಗಲೆಲ್ಲ ಹೋಗಿ, ಮುಖಭಂಗವಾದರೂ ಸಹಿಸಿಕೊಂಡು ಸುಮ್ಮನಿದ್ದು ಅವರು ಹೇಳಿದ ದರಕ್ಕೆ ಒಪ್ಪಿಕೊಂಡು ಅವರು ಕೊಟ್ಟಾಗ ಹಣ ಪಡೆಯಲು ಸಿದ್ಧವಾಗಿರಬೇಕು, ಅವರು ಹಂಚಿಕೆಗೆ ತೆಗೆದುಕೊಂಡ ಕೀಳುದರ್ಜೆಯ ಚಿತ್ರಗಳನ್ನು ಉತ್ಕೃಷ್ಟ ಕಲಾಕೃತಿಗಳೆಂದು ಹೊಗಳಿ ಬರೆಯಬೇಕು. ಕ್ರಾಂತಿ ಇಂಥ ಕೆಲಸಕ್ಕೆ ಕೈ ಹಾಕಲಾರದು. ಅಂತೆಯೇ ಅದಕ್ಕೆ ಜಾಹೀರಾತು ಸಿಕ್ಕಲಾರದು...'' ಎಂದ ಚಂದ್ರಣ್ಣ.

''ಅಂತೂ ಇಂತೂ ಕುಂತೀಮಕ್ಕಳಿಗೆ... ಅಂದ ಹಾಗೆ ನಮ್ಮಂಥವರಿಗೆ ಈ ಪತ್ರಿಕಾ ವ್ಯವಹಾರ ಸಾಧ್ಯವಿಲ್ಲ...'' ಎಂದ ರಾಜಣ್ಣ.

''ನಿಜ ಧ್ಯೇಯ, ತತ್ವ, ಗುರಿ ಅಂತ ಮೂಗಿನ ಉದ್ದಕ್ಕೆ ನೇರವಾದ ದಾರಿಯಲ್ಲಿ ಹೋಗುವವರಿಗಲ್ಲ ಈ ವ್ಯವಹಾರ. ಆತಂತ್ರ ಕರ್ನಾಟಕದ ಚಂಡಕಶಾಸ್ತ್ರಿಯಂಥವರಿಗೇ ಇದು ಲಾಭದಾಯಕ. ನೋಡಿ, ಹೇಗೆ ಹಣ ಮಾಡಿಕೊಂಡ...'' ಎಂದ ಗುಬ್ಬಣ್ಣ.

''ಹಣವನ್ನೇನೋ ಮಾಡಿಕೊಂಡ, ನಿಜ. ಆದರೆ ಅದರೊಂದಿಗೆ ಮಾನ

ಮರ್ಯಾದೆಗಳನ್ನು ಮಾರಿಕೊಂಡ. ನಗರದಲ್ಲಿ ಆತನಿಗಿರುವ ಬೆಲೆ ಏನು ಎನ್ನುವುದು ನಮಗೆ ತಿಳಿಯದೇ? ಆತನ ಹಾಗೆ ಲಾಭ ಮಾಡಿಕೊಳ್ಳುವ ವಿಚಾರವೂ ನಮಗೆ ಬೇಡ. ನಮ್ಮ ಪಾಡು ನಮಗಿರಲಿ ಇದ್ದ ಸ್ಥಿತಿಯಲ್ಲೇ ನಾವು ಹೋರಾಡೋಣ,'' ಎಂದ ಚಂದ್ರಣ್ಣ.

''ಅದು ಸರಿ, ಆದರೆ ಹೇಗೆ?''

''ಪತ್ರಿಕೋದ್ಯೋಗ ಯಶಸ್ವಿಯಾಗಿ ನಡೆಯಬೇಕಾದರೆ ಯಾವಾಗಲೂ ಬಂಡವಾಳ ಸಾಕಷ್ಟು ಬೇಕು. ಒಂದು ಮಾಸಪತ್ರಿಕೆಗೂ ಹತ್ತುಸಾವಿರ ರೂಪಾಯಿ ಬೇಕಾಗುತ್ತದೆ. ನಾವು ಬಂಡವಾಳ ಹಾಕದೆ ಹಾಗೇ ಪತ್ರಿಕೆ ಮಾಡಲು ಹೊರಟು ಹೀಗಾಯಿತು. ಇದೇ ನಮ್ಮ ಮೊದಲನೆಯ ತಪ್ಪು. ಇಂಥ ಕೆಲಸಗಳೆಲ್ಲ ದೊಡ್ಡ ಪ್ರಮಾಣದಲ್ಲಿ ನಡೆಯಬೇಕು.''

''ನಿಜ. ಆದರೆ ಬಂಡವಾಳ ಎಲ್ಲಿಂದ ಬರಬೇಕು?''

''ಎಲ್ಲಿಂದ ಬರಬೇಕು ಎಂದು ಯೋಚನೆ ಮಾಡುತ್ತ ಸುಮ್ಮನೆ ಕುಳಿತಿದ್ದರೆ ಯಾವುದೂ ತಾನಾಗಿಯೇ ಬರುವುದಿಲ್ಲ, ಪ್ರಯತ್ನಪಡಬೇಕು. ಕೆಲದಿನಗಳ ಹಿಂದೆ ನನ್ನ ಸ್ನೇಹಿತರೊಬ್ಬರು ಈ ವಿಚಾರದಲ್ಲಿ ಒಂದು ಸಲಹೆ ಕೊಟ್ಟರು. ಅದು ಯಶಸ್ವಿಯಾದೀತೇ ಎಂದು ಯೋಚಿಸುತ್ತಿದ್ದೇನೆ....'' ಎಂದ ಚಂದ್ರಣ್ಣ.

''ಅದೇನಪ್ಪ ಅಂಥ ಕಾಮಧೇನು ಯೋಚನೆ ಅದು? ಯಾರಾದರೂ ಶ್ರೀಮಂತರು ನಿಮಗೆ ಹೆಣ್ಣು ಕೊಡಲು ಬಂದಿರುವರೋ ಹೇಗೆ?'' ಎಂದು ನಗುತ್ತ ಕೇಳಿದ ಗುಬ್ಬಣ್ಣ.

ಚಂದ್ರಣ್ಣನಿಗೂ ನಗೆ ಬರದಿರಲಿಲ್ಲ. ಆತನೆಂದ : ''ನಿಮಗೆ ಯಾವಾಗಲೂ ಹೆಣ್ಣಿನ ಯೋಚನೆಯೇ! ಅಂಥದೇನೂ ಇಲ್ಲವಪ್ಪ ಸದ್ಯ. ಪತ್ರಿಕೆಯ ಸಂಸಾರವನ್ನೇ ನಡೆಸಲಾರದ ನಾನು ಆ ಭಯಂಕರ ಸಂಸಾರದ ಭಾರ ಹೇಗೆ ಹೊರಲಿ? ನನ್ನಂಥವನನ್ನು ಮದುವೆಯಾಗಲು ಸಿದ್ಧವಾಗುವ ವಧುಗಳಾದರೂ ಸಿಕ್ಕಬಹುದೇ ಕರ್ನಾಟಕದಲ್ಲಿ?''

''ಸುಮ್ಮನೆ ಏಕೆ ತಮಾಷೆ ಮಾಡುತ್ತೀರಿ? ಇವೊತ್ತು ಮದುವೆಯಾಗುವುದಾಗಿ ನನ್ನ ಹತ್ತಿರ ಮಾತು ಕೊಡಿ. ನಾಳೆಯೇ ನೂರು ಹೆಣ್ಣು ತಂದು ಕೊಡ್ತೇನೆ ನಾನು...'' ಎಂದ ಗುಬ್ಬಣ್ಣ.

"ನೂರು ಹೆಣ್ಣು ಕಟ್ಟಿಕೊಂಡು ನಾನೇನು ಕೆರೆ ಬಾವಿ ಕಾಣಲಾ? ನಿಮ್ಮದು ಮುಗಿಯಲಿ ಮೊದಲು. ನಿಮ್ಮಿಬ್ಬರ ತಲೆಯ ಮೇಲೂ ಅಕ್ಷತೆ ಬಿದ್ದ ಬಳಿಕ ನನಗೆ ಹೆಣ್ಣು ಹುಡುಕೋಣವಂತೆ. ಈಗಲೇ ಏನವಸರ? ಅಂಥ ವಯಸ್ಸೂ ಆಗಿಲ್ಲವಲ್ಲ! ಹೆಣ್ಣಿನ ವಿಚಾರವಲ್ಲ ನಾ ಹೇಳುತ್ತಿದ್ದುದು, ಹಣದ ವಿಚಾರ. ಪತ್ರಿಕೆಯನ್ನಂತೂ ಉಳಿಸಬೇಕು, ಈಗ ಇರುವುದಕ್ಕಿಂತ ಚೆನ್ನಾಗಿ ನಡೆಸಬೇಕು – ಸಾಧ್ಯವಾದರೆ ಇದನ್ನೇ ವಾರಪತ್ರಿಕೆಯನ್ನಾಗಿ ಮಾಡಬೇಕು. ಅದಕ್ಕೆಲ್ಲ ಹಣ ಎಲ್ಲಿಂದ ಒದಗಿಸಬೇಕು ಎಂದು ಯೋಚಿಸುತ್ತಿದ್ದೆ."

ಗೆಳೆಯರಿಬ್ಬರೂ ಮೌನವಾಗಿ ಕುಳಿತುಕೊಂಡು ಕೇಳುತ್ತಿದ್ದರು. ಚಂದ್ರಣ್ಣ ಮಾತು ಮುಂದುವರಿಸಿದ : "ವಾರಪತ್ರಿಕೆಯೊಂದನ್ನು ಹೊರಡಿಸಬೇಕೆಂದು ನನಗೆ ಬಹು ದಿನಗಳಿಂದಲೂ ಅಪೇಕ್ಷೆಯಿದೆ. ಅದಕ್ಕೆ ಹೆಚ್ಚು ಹಣವೂ ಬೇಕಾಗಿಲ್ಲ, ಐವತ್ತು ಸಾವಿರವಾದರೆ ಸಾಕು. ಮೂವತ್ತು ಸಾವಿರದಲ್ಲಿ ಮುದ್ರಣಾಲಯ ಏರ್ಪಡಿಸಿ, ಇಪ್ಪತ್ತು ಸಾವಿರವನ್ನು ಕೈಯಲ್ಲಿಟ್ಟುಕೊಂಡು ಪತ್ರಿಕೆ ಹೊರಡಿಸಬಹುದು. ಒಂದೆರಡು ತಿಂಗಳಲ್ಲೇ ಅದನ್ನು ಲೋಕಪ್ರಿಯವಾಗಿ ಮಾಡಬಲ್ಲೆನೆಂಬ ಆತ್ಮವಿಶ್ವಾಸ ನನಗಿದೆ."

"ಇರಬೇಕಾದುದೇ. ನನಗೂ ಆ ಬಗ್ಗೆ ಸಂದೇಹವೇನೂ ಇಲ್ಲ, ಆದರೆ..." ಎಂದ ರಾಜಣ್ಣ.

"... ಆದರೆ ಹಣವಿಲ್ಲ..." ಎಂದು ನಕ್ಕು ನುಡಿದ ಗುಬ್ಬಣ್ಣ.

"ಅದನ್ನೂ ಒದಗಿಸಿಕೊಳ್ಳಬೇಕು ಗುಬ್ಬಣ್ಣ. ನಮ್ಮಲ್ಲಿ ಹಣವಿಲ್ಲವಲ್ಲಾ ಅಂತ ಸುಮ್ಮನೆ ಕುಳಿತಿದ್ದರೆ ಹಾಗೇ ಸಾಯುವವರೆಗೂ ಕುಳಿತಿರಬೇಕಾದುದೇ. ಏನಾದರೂ ದಾರಿ ತೆಗೆಯಬೇಕು ಎಂದು ಯೋಚಿಸುತ್ತಿದ್ದಾಗ ನಮ್ಮ ಸ್ನೇಹಿತರು ಶಿವಯೋಗೀಶ್ವರರು ಒಂದು ಸಲಹೆ ಕೊಟ್ಟರು..."

"ಯಾರು ಧರ್ಮಪುರದವರೇ?"

"ಹೌದು. ಈಚೆಗೆ ಕೆಲದಿನಗಳಿಂದ ಅವರು ಇಲ್ಲಿಯೆ ಇದಾರೆ. ಅವರಿಗೂ ನನಗೂ ಎರಡು ಮೂರು ವರ್ಷಗಳಿಂದ ಸ್ನೇಹ. ಅವರೂ ನಮ್ಮ ಅಭಿಮಾನಿಗಳಲ್ಲೊಬ್ಬರು. ಕ್ರಾಂತಿಯ ಬಗ್ಗೆ ತುಂಬಾ ಪ್ರೀತಿ. ಅದು ಆರ್ಥಿಕ ತೊಂದರೆಗೆ ಸಿಕ್ಕಿ ಬಿದ್ದಿರುವ ವಿಚಾರ ತಿಳಿದಾಗ ಅವರಿಗೆ ಬಲು ವ್ಯಥೆಯಾಯಿತು. ಏನಾದರೂ ಮಾಡಿ ಪತ್ರಿಕೆ ಸರಿಯಾಗಿ ನಡೆಸುವಂತೆ ಮಾಡೋಣ ಎಂದು ಹೇಳಿದರು. ಹಣದ ವ್ಯವಸ್ಥೆ

ಹೇಗೆಂದು ಕೇಳಿದಾಗ ಲಿಮಿಟೆಡ್ ಕಂಪನಿ ಮಾಡಿದರಾಯಿತೆಂದರು!''

ಲಿಮಿಟೆಡ್ ಕಂಪನಿ!

ರಾಜಣ್ಣ ಗುಬ್ಬಣ್ಣ ಇಬ್ಬರಿಗೂ ಆಶ್ಚರ್ಯವಾಗದಿರಲಿಲ್ಲ. ಒಂದು ಸಣ್ಣ ಮಾಸಪತ್ರಿಕೆಯನ್ನು ಹೊರಡಿಸಲಾರದೆ ಒದ್ದಾಡುತ್ತಿರುವವರು ಲಿಮಿಟೆಡ್ ಕಂಪನಿಯಂಥ ಬಾರಿ ಉದ್ಯಮಕ್ಕೆ ಕೈಹಾಕುವುದು ಸಾಧ್ಯವೆ?

''ಲಿಮಿಟೆಡ್ ಕಂಪನಿ ಅಂದರೆ ಸಾಮಾನ್ಯ ಕೆಲಸವಲ್ಲ. ಅದಕ್ಕೂ ಲಕ್ಷಾಂತರ ರೂಪಾಯಿ ಬೇಕು. ಅದನ್ನು ಕೂಡಿಸುವವರಾರು? ಆ ಕಂಪನಿಯಲ್ಲಿ ನೀವು ಸೇರುವ ಬಗೆ ಹೇಗೆ? ಹಣ?''

''ಇನ್ನೂ ಯಾವುದೂ ನಿಶ್ಚಿತವಾಗಿ ತಿಳಿದಿಲ್ಲ. ಡೈರೆಕ್ಟರಾಗಿ ಸೇರಬೇಕಾದರೆ ಒಂದು ಸಾವಿರ ರೂಪಾಯಿ ಶೇರ್ ಕೊಳ್ಳಬೇಕಾಗುವುದು. ಅದನ್ನು ಹೇಗೆ ಹೊಂದಿಸಿ ಕೊಳ್ಳಬೇಕೋ ನೋಡಬೇಕು.''

''ಆ ವಿಚಾರ ಇನ್ನೂ ಮುಗಿದಿಲ್ಲವೆ?''

''ಇಲ್ಲ, ಇವೊತ್ತು ಸಾಯಂಕಾಲ ಮುಗಿದೀತು.''

## ೩

ಬೆಂಗಳೂರು ನಗರದ ರೈಲ್ವೆ ನಿಲ್ದಾಣದಿಂದ ಮೆಜೆಸ್ಟಿಕ್ ಚೌಕಕ್ಕೆ ಹೋಗುವ ದಾರಿಯಲ್ಲಿ ಬಲಗಡೆಗೆ ಪುಟ್ಟ ಉದ್ಯಾನವೊಂದು ಕಾಣಸುತ್ತದೆ. ಅದಕ್ಕೆ ಇಳಿದು ಹೋಗಲು ಮೆಟ್ಟಿಲುಗಳನ್ನೂ ಏರ್ಪಡಿಸಲಾಗಿದೆ. ಉದ್ಯಾನ ಕೊಂಚ ವಿಶಾಲವಾಗಿಯೇ ಇದೆಯಾದರೂ ಅಗಲ ಕಡಿಮೆ. ಪಶ್ಚಿಮ ದಿಕ್ಕಿನಲ್ಲಿ ರೇಡಿಯೋ ವ್ಯವಸ್ಥೆಯಿದ್ದು ಎರಡು ಧ್ವನಿವಾಹಕಗಳೂ ಬಾಯಿ ತೆರೆದುಕೊಂಡು ನಿಂತಿವೆ. ಅಲ್ಲಲ್ಲಿ ಹಲವು ಉದ್ದನೆಯ ಗಿಡಗಳಿವೆ. ಶಿಲಾಶಾಸನಗಳಂತೂ ಸರಿಯೆ. ಜನಗಳು ಕೂತು ಹರಟಲು ಅನುಕೂಲ ವಾದಂಥ ಹುಲ್ಲಿನ ಹಾಸುಗೆಯೂ ಇದೆ. ಅಕ್ಕೀಪೇಟೆ, ಅರಳೇಪೇಟೆ, ತುಳಸೀ ತೋಟಗಳ ವಿಭಾಗದಲ್ಲಿ ವಾಸಿಸುವ ಮಧ್ಯಮವರ್ಗದ ಹಾಗೂ ಕೆಳವರ್ಗದ ಜನ ಸಾಯಂಕಾಲ ಅಲ್ಲಿಗೆ ವಿರಾಮಕ್ಕಾಗಿ ಬರುತ್ತಾರೆ. ಅಲ್ಲಲ್ಲಿ ಚಿಕ್ಕಮಕ್ಕಳು ಆಟ

ವಾಡುತ್ತಿರುತ್ತವೆ. ಗಿಡಗಳ ಕೆಳಗಡೆ ಎಷ್ಟೋ ಜನರು ಹಾಯಾಗಿ ಮಲಗಿಕೊಂಡಿರುವುದೂ ಉಂಟು.

ಉದ್ಯಾನದ ತುಂಬಾ ಕಡಲೇಕಾಯಿ ಸಿಪ್ಪೆ ಬೀಡಿ ಸಿಗರೇಟುಗಳ ಕೊರೆ ತುಂಡು, ಕಾಗದದ ಚೂರು, ಬಾಳೇಹಣ್ಣಿನ ಸಿಪ್ಪೆ ಸೂರೆಯಾಗಿರುತ್ತವೆ. ವಾರದಲ್ಲಿ ಒಂದು ಸಲವೊ ಎರಡು ಸಲವೊ ಈ ಕೊಳೆಯನ್ನು ಗುಣಪಡಿಸಲಾಗುವುದರಿಂದ ಮಿಕ್ಕ ದಿನಗಳಲ್ಲೆಲ್ಲ ಉದ್ಯಾನಕ್ಕೆ ಧರ್ಮಛತ್ರದ ಸ್ವರೂಪ ಬಂದಿರುತ್ತದೆ. ಅದನ್ನು ಉದ್ಯಾನವೆಂದು ಕರೆಯುವುದಕ್ಕಿಂತ ಧರ್ಮಛತ್ರವೆಂದರೇನೇ ಹೆಚ್ಚು ಸಮರ್ಪಕವಾದೀತು. ದರಿದ್ರರ ಧರ್ಮಛತ್ರ. ರಾತ್ರಿಯನ್ನು ಕಳೆಯಲು ಸ್ಥಳವಿಲ್ಲದ ದರಿದ್ರರು, ವಾಸಿಸಲು ಮನೆಗಳಿಲ್ಲದ ಭಿಕಾರಿಗಳು, ಅನಾಥರು, ದಿಕ್ಕಿಲ್ಲದವರು ಈ ಉದ್ಯಾನದಲ್ಲಿ ನಿರಾತಂಕವಾಗಿ ನೆಲೆಸುತ್ತಾರೆ. ರಾತ್ರಿ ಕಾಲದಲ್ಲಿ ಅಲ್ಲಿಗೆ ಹೋಗಿ ನೋಡಿದರೆ ಗಿಡಗಳ ಕೆಳಗಡೆ ನೂರಾರು ಜನ ಗಂಡಸರು, ಹೆಂಗಸರು ಮಲಗಿ ನಿದ್ರಿಸುವುದನ್ನು ಕಾಣಬಹುದು.

'ಚಿಕ್ಕ ಲಾಲ್‌ಬಾಗ್' ಎಂದು ಇದಕ್ಕೆ ಯಾರು ಹೆಸರಿಟ್ಟರೋ, ಏಕೆ ಇಟ್ಟರೋ ತಿಳಿಯದು. ಬೆಂಗಳೂರಿಗೆಲ್ಲ ಹೆಮ್ಮೆಯ ಉದ್ಯಾನವಾದ ಲಾಲಬಾಗಿಗೂ ಇದಕ್ಕೂ ಒಂದು ವಿಷಯದಲ್ಲೂ ಹೋಲಿಕೆಯಿಲ್ಲ. ಲಾಲಬಾಗಿನಲ್ಲಿರುವ ವಿಧವಿಧದ ಉನ್ನತ ವೃಕ್ಷಗಳು, ಜಗತ್ತಿನ ಎಲ್ಲ ಭಾಗಗಳಿಂದಲೂ ಆರಿಸಿ ತಂದು ಬೆಳೆಯಿಸಿದ ಹೂಗಿಡಗಳು, ಮನುಷ್ಯಾಕಾರದಲ್ಲಿ, ಹಕ್ಕಿಗಳ ಆಕಾರದಲ್ಲಿ, ಕತ್ತರಿಸಿ ನಿಲ್ಲಿಸಿದ ಸೊಬಗಿನ ಗಿಡಗಳು, ಯಾವಾಗಲೂ ಸ್ವಚ್ಛವಾಗಿ ಅಂದವಾಗಿ ಕಾಣಿಸುವ ಕಾಲುದಾರಿಗಳು, ವಿದ್ಯುದ್ದೀಪಗಳ ಬೆಡಗಿನ ಮಧ್ಯೆ ಹೊಳೆಯುವ ಗಾಜಿನ ಮನೆ, ಪ್ರಾಣಿ ಸಂಗ್ರಹಾಲಯ – ಇತ್ಯಾದಿಗಳಲ್ಲಿ ಯಾವುದೂ ಈ ಚಿಕ್ಕ ಲಾಲಬಾಗಿನಲ್ಲಿಲ್ಲ. ಆದರೂ ಇದನ್ನು ಈ ಹೆಸರಿನಿಂದ ಕರೆಯುವುದರಲ್ಲಿ ಬೆಂಗಳೂರಿನ ಜನದ ಹಾಸ್ಯಪ್ರಿಯತೆಯೆ ವ್ಯಕ್ತವಾಗುವಂತಿದೆ.

ಈ ನಗರಕ್ಕೆ ಬಂದ ಹೊಸದರಲ್ಲಿ ಚಂದ್ರಣ್ಣ ಈ ಉದ್ಯಾನವನ್ನು ಕಂಡು, ಈ ಹೆಸರನ್ನು ಕೇಳಿ ಅಚ್ಚರಿಗೊಂಡಿದ್ದ; ನಕ್ಕುಬಿಟ್ಟಿದ್ದ. 'ಚಿಕ್ಕ ಲಾಲಬಾಗ್' ಎನ್ನುವುದಕ್ಕಿಂತ ಇದನ್ನು 'ಪರದೇಶಿ ಪಾರ್ಕ್' ಎಂದು ಕರೆಯುವುದೇ ಹೆಚ್ಚು ಉಚಿತವೆಂದುಕೊಂಡಿದ್ದ. ರಾಜಣ್ಣ ಗುಬ್ಬಣ್ಣ ಇಬ್ಬರೂ ಅದೇ ಅಭಿಪ್ರಾಯದವರಾಗಿದ್ದರು. ಗುಬ್ಬಣ್ಣನಂತೂ ಅದಕ್ಕೆ 'ಪರದೇಶಿ ಪಾರ್ಕ್' ಎಂದು ನಾಮಕರಣ ಮಾಡಿಯೆ ಬಿಟ್ಟಂತಿದ್ದಿತು. ಯಾವುದಾದ

ರೊಂದು ಮಹತ್ವದ ವಿಷಯವನ್ನು ಕುರಿತು ಚರ್ಚಿಸುವುದಿದ್ದಾಗ ಅವರು ಮೂವರೂ ಅಲ್ಲಿಗೇ ಬರುತ್ತಿದ್ದರು. ಒಂದು ಮೂಲೆಯಲ್ಲಿ ಕುಳಿತುಕೊಂಡು ಕಡಲೇಕಾಯಿ ತಿನ್ನುತ್ತ ಮಾತುಕತೆ ನಡೆಸುತ್ತಿದ್ದರು. 'ಕ್ರಾಂತಿ'ಯನ್ನು ಹೊರಡಿಸುವ ವಿಚಾರ ಹೊರಟದ್ದೂ ಅಲ್ಲಿಯೆ; ಆ ಬಗೆಗೆ ನಿರ್ಧಾರವಾದದ್ದೂ ಅಲ್ಲಿಯೆ. 'ಕ್ರಾಂತಿ'ಯ ಭವಿತವ್ಯದ ನಿರ್ಧಾರವೂ ಅಲ್ಲಿಯೆ ಆಗಬೇಕಾಗಿದ್ದಿತು. ಅದಕ್ಕಾಗಿ ಅಂದು ಸಾಯಂಕಾಲ ಆರು ಗಂಟೆಗೆ ಚಂದ್ರಣ್ಣ ಶಿವಯೋಗೀಶ್ವರರ ಭೆಟ್ಟಿಯೂ ಅಲ್ಲಿಯೆ ನಡೆಯಬೇಕಾಗಿದ್ದಿತು.

ಆರು ಗಂಟೆಯ ಹೊತ್ತಿಗೆ ಚಂದ್ರಣ್ಣ ತೋಟಕ್ಕೆ ಬಂದು ಶಿವಯೋಗೀಶ್ವರನ ಬರವನ್ನು ಕಾಯುತ್ತ ಕುಳಿತಿದ್ದ. ಎಂದಿನಂತೆ ಬೆರಳುಗಳ ಮಧ್ಯೆ ಸಿಗರೇಟು ಉರಿಯುತ್ತಿತ್ತು. ಅವನ ಅಂತರ್ದೃಷ್ಟಿಯೆದುರಿಗೆ ಹಿಂದಿನ ದೃಶ್ಯಗಳೆಷ್ಟೋ ಸುಳಿದು ಹೋಗುತ್ತಿದ್ದವು.

'ಪರದೇಶಿ ಪಾರ್ಕ್'ಗೆ ತಾನು ಮೊದಲನೆಯ ಸಲ ಬಂದಂದಿನ ದೃಶ್ಯ! ಐದು ವರ್ಷಗಳಿಗೆ ಹಿಂದಿನ ಮಾತು. ನಲವತ್ತೆರಡರ ಚಳವಳಿ ಕೊನೆಗೊಂಡ ತರುವಾಯ, ಹತ್ತು ತಿಂಗಳುಗಳವರೆಗೆ ಸೆರೆಮನೆ ವಾಸವನ್ನನುಭವಿಸಿದ ಮೇಲೆ ತಾನು ಮೊದಲನೆಯ ಸಲ ಬೆಂಗಳೂರಿಗೆ ಬಂದಿದ್ದ – ದಿನಪತ್ರಿಕೆಯೊಂದರಲ್ಲಿ ಉಪ ಸಂಪಾದಕನಾಗಿ, ತಿಂಗಳಿಗೆ ಮೂವತ್ತು ರೂಪಾಯಿ ಸಂಬಳವೆಂದು ಗೊತ್ತಾಗಿದ್ದಿತಾದರೂ ಇಪ್ಪತ್ತು ರೂಪಾಯಿ ಸಹ ಕೈಗೆ ಬರುತ್ತಿರಲಿಲ್ಲ, ಆಗ ನಗರದಲ್ಲಿ ಯಾರ ಪರಿಚಯವೂ ತನಗಿರಲಿಲ್ಲ, ಹೋಟೆಲಿನಲ್ಲಿ ಊಟ; ಪತ್ರಿಕಾ ಕಚೇರಿಯಲ್ಲಿ ವಾಸ. ಎರಡು ತಿಂಗಳು ಕೆಲಸ ಮಾಡಿದ ಮೇಲೆ ಆಕಸ್ಮಾತ್ತಾಗಿ ಒಂದು ದಿನ ಕೆಲಸ ಕೈಬಿಟ್ಟು ಹೋಗಿದ್ದಿತು. ಮೂವತ್ತು ರೂಪಾಯಿ ಕೊಡಲು ಒಪ್ಪಿಕೊಂಡಿದ್ದ ಪತ್ರಿಕಾ ಸಂಚಾಲಕ ತನ್ನ ಮಾತನ್ನು ಮುರಿದು 'ಇಪ್ಪತ್ತು ರೂಪಾಯಿಗೆ ಕೆಲಸ ಮಾಡಲು ಇಷ್ಟವಿದ್ದರೆ ಇರು, ಇಲ್ಲವಾದರೆ ಹೊರಡು' ಎಂದು ಹೇಳಿಬಿಟ್ಟಿದ್ದ. ಆ ಇಪ್ಪತ್ತು ರೂಪಾಯಿಯೂ ಸಮಯಕ್ಕೆ ಸರಿಯಾಗಿ ಸಿಕ್ಕುವಂತಿರಲಿಲ್ಲ, ತನಗೆ ಕೋಪ ಬಂದುಬಿಟ್ಟಿತ್ತು. 'ನಿಮ್ಮಂಥ ಮೋಸಗಾರರ ಹತ್ತಿರ ನಾನು ಇರಲಾರೆ' ಎಂದು ನುಡಿದು ಆ ಕಚೇರಿಗೆ ಕೊನೆಯ ನಮಸ್ಕಾರ ಹಾಕಿ ಹೊರಟುಬಿಟ್ಟಿದ್ದ. ತನ್ನದೆಂದು ಹೇಳಿಕೊಳ್ಳಬಹುದಾದಂಥ ಸಾಮಾನುಗಳೂ ಹೆಚ್ಚಿಗಿರಲಿಲ್ಲ, ಒಂದು ನೆಹರೂ ಬನೀನು, ಒಂದು ಪಾಯಿಜಾಮಾ, ಹೊದೆದುಕೊಳ್ಳುವ ಬಟ್ಟೆಯೊಂದು. ಒಂದು ಹರಕು ಜಮಾಖಾನಾ. ಅವುಗಳನ್ನೆಲ್ಲ ಒಂದು ಸುರುಳಿ ಸುತ್ತಿಕೊಂಡು ಅದನ್ನು ಕಂಕುಳಲ್ಲಿರಿಸಿಕೊಂಡು ಈ ತೋಟಕ್ಕೆ ಬಂದು ಕುಳಿತಿದ್ದ. ಜೇಬಿನಲ್ಲಿ ಎಂಟು ಹತ್ತಾಣೆ ಇದ್ದಿರಬಹುದು. ಊರಿಗೆ ಹೊರಡಬೇಕೆಂದರೆ

ರೈಲಿಗೆ ತೆರಲು ಹಣವಿರಲಿಲ್ಲ. ಹೋಟೆಲಿನಲ್ಲಿ ಊಟ ಸಿಕ್ಕುವುದೂ ತಪ್ಪಿಹೋಗಿತ್ತು. ಈತನನ್ನು ಕೆಲಸದಿಂದ ತೆಗೆದು ಹಾಕಿರುವುದಾಗಿ ಪತ್ರಿಕಾ ಸಂಚಾಲಕ ಹೋಟೆಲಿನವರಿಗೆ ತಿಳಿಸಿಬಿಟ್ಟಿದ್ದ. ಮುಂದೆ ಏನು ಮಾಡಬೇಕೆಂಬುದು ತಿಳಿಯದೆ, ಎಲ್ಲಿಗೆ ಹೋಗಬೇಕೆಂಬುದು ಗೊತ್ತಾಗದೆ ಆತ ಆ ತೋಟದಲ್ಲಿಯೇ ಮೂರು ದಿನಗಳ ಕಾಲ ಬಿದ್ದುಕೊಂಡಿದ್ದ. ಮೂರು ದಿನವೂ ಹೊಟ್ಟೆಗೆ ಏನೂ ಬಿದ್ದಿರಲಿಲ್ಲ - ಆಗಾಗ ತೆಗೆದುಕೊಂಡ ಕಡಲೇಕಾಯಿಯನ್ನು ಬಿಟ್ಟರೆ. ದಿನವೂ ಎರಡಾಣೆಯ ಕಡಲೇಕಾಯಿ ತಿಂದು, ನಲ್ಲಿಯ ನೀರು ಕುಡಿದು ಕೆಲಸ ಹುಡುಕಲು ಬೀದಿ ಬೀದಿ ಅಲೆಯುತ್ತಿದ್ದ. ಎಲ್ಲಿಯೂ ಕೆಲಸ ದೊರೆಯಲಿಲ್ಲ. ಹಸಿವೆಯಿಂದ ಶಕ್ತಿಯೆಲ್ಲ ಕುಗ್ಗಿಹೋಗಿತ್ತು, ನಡೆಯುವುದಕ್ಕೂ ತ್ರಾಣವಿರಲಿಲ್ಲ...

ಚಂದ್ರಣ್ಣನ ದೃಷ್ಟಿ ಪಶ್ಚಿಮ ದಿಕ್ಕಿನಲ್ಲಿದ್ದ ಗಿಡದ ಕಡೆಗೆ ಹೋಯಿತು. ಆ ಗಿಡಕ್ಕೆ ಆತುಕೊಂಡು ಕುಳಿತು ಚಿಕ್ಕವಯಸ್ಸಿನಲ್ಲಿಯೆ ತನ್ನನ್ನು ಅನಾಥನನ್ನಾಗಿ ಮಾಡಿ ತೀರಿಕೊಂಡ ತಂದೆತಾಯಿಗಳನ್ನು ನೆನೆದು ತಾನು ಕಣ್ಣೀರು ಸುರಿಸಿದುದು ನೆನಪಾಯಿತು. ಅವನಿಗೆ ತಿಳಿಯದಂತೆಯೇ ಮತ್ತೆ ಅವನ ಕಣ್ಣುಗಳಲ್ಲಿ ನೀರೂರಿತು. ಅಂದಿನ ಆ ಭೀಕರ ದಿನಗಳು! ಆಗ ತಾನು ಬದುಕಿ ಉಳಿದುದೇ ದೊಡ್ಡ ವಿಷಯ. ಒಂದು ವಾರ ರೈಲ್ವೆ ಸ್ಟೇಶನ್ನಿನಲ್ಲಿ ಕೂಲಿ ಮಾಡಿದ್ದು - ಹೇಗೋ ಕಾಲ ನೂಕಿದ್ದು - ಅನಂತರ 'ಉದಯ'ದ ಸಂಚಾಲಕರ ಪರಿಚಯ - ಆ ಪತ್ರಿಕೆ ಅಲ್ಲಿ ಮೂರು ವರ್ಷ - ಅಲ್ಲಿಂದ ಬಿಡುಗಡೆ - 'ಕ್ರಾಂತಿ' - ಇನ್ನು ಮುಂದೆ...

"ಬಹಳ ಹೊತ್ತಾಯಿತೇನೋ ಬಂದು?"

ಶಿವಯೋಗೀಶ್ವರನ ಧ್ವನಿ ಆತನನ್ನು ನೆನಪಿನ ಲೋಕದಿಂದ ಈಚೆಗೆ ಎಳೆಯಿತು.

"ಓ! ಯಾವಾಗ ಬಂದಿರಿ?"

"ಕೊಂಚ ತಡವಾಯಿತು ಕ್ಷಮಿಸಿ. ಧರ್ಮಪುರದಿಂದ ಸ್ನೇಹಿತರೊಬ್ಬರು ಬಂದಿದಾರೆ. ನಿಮಗೆ ಗೊತ್ತಿದ್ದರೂ ಗೊತ್ತಿರಬಹುದು. ದೊಡ್ಡ ಸಾಹುಕಾರರು ಅವರು. ನೂಲಿನ ಗಿರಣಿಯೊಂದರ ಒಡೆಯರು."

"ಇಲ್ಲ ನನಗವರ ಪರಿಚಯವಿಲ್ಲ."

"ನಿಮಗೆ ಇರದಿದ್ದರೂ ಅವರಿಗೆ ನಿಮ್ಮ ವಿಷಯವೆಲ್ಲ ಗೊತ್ತುಂಟು. ಅವರಿಗೂ

ನಿಮ್ಮ ಬಗ್ಗೆ ತುಂಬ ಅಭಿಮಾನ. ನೀವು ಹೊರಡಿಸಿದ ಪತ್ರಿಕೆಗಳೆಲ್ಲವನ್ನೂ ಓದಿದ್ದಾರಂತೆ. ನಿಮ್ಮ ಪುಸ್ತಕಗಳನ್ನೂ ಕೊಂಡುಕೊಂಡಿದ್ದಾರಂತೆ. ನಿಮ್ಮ ಪರಿಚಯ ಮಾಡಿಕೊಳ್ಳ ಬೇಕೆಂಬ ಅಪೇಕ್ಷೆ ಬಹಳವಾಗಿದೆ ಅವರಿಗೆ.''

''ಅವರ ಹೆಸರು?''

''ಸದಾಶಿವಪ್ಪನವರು ಎಂದು. ಇನ್ನೂ ಚಿಕ್ಕ ವಯಸ್ಸು. ತಂದೆಗೆ ಒಬ್ಬನೇ ಮಗ. ತಂದೆಗೆ ವಯಸ್ಸಾಗುತ್ತ ಬಂತು. ಈಚೆಗೆ ಗಿರಣಿಯ ವ್ಯವಹಾರವನ್ನೆಲ್ಲ ಸದಾಶಿವಪ್ಪ ನವರೇ ನೋಡಿಕೊಳ್ಳುತ್ತಿದ್ದಾರೆ.''

''ಅವರ ತಂದೆಯ ಹೆಸರೇನು? ಸಂಗಪ್ಪ ಸೆಟ್ಟರೆಂದಲ್ಲವೆ?''

''ಹೌದು. ಕೇಳಿದ್ದಿರಾ ಅವರ ಹೆಸರನ್ನು?''

''ಮೊನ್ನೆ ಶಂಕರ್ ಹೇಳುತ್ತಿದ್ದರು. ಅವರ ಗಿರಣಿಯಲ್ಲಿ ಕೂಲಿಕಾರರಿಗೆ ತುಂಬ ತೊಂದರೆ ಕೊಡುತ್ತಾರಂತೆ.''

''ಛೆ! ಛೆ! ನಮ್ಮ ಸೆಟ್ಟರು ಅಂಥವರಲ್ಲ. ಅವರ ಹೃದಯ ಅಂದರೆ ಹೂವಿನ ಹಾಗಿದೆ. ಗಿರಣಿಯಲ್ಲಿ ಕೆಲಸ ಮಾಡುವವರನ್ನೆಲ್ಲ ತಮ್ಮ ಮಕ್ಕಳಂತೆಯೆ ನೋಡಿಕೊಳ್ಳು ತ್ತಾರೆ. ಅವರಿಗಾಗಿ ಅನೇಕ ಅನುಕೂಲತೆಗಳನ್ನು ಒದಗಿಸಿಕೊಟ್ಟಿದ್ದಾರೆ. ಆಗದವರು ಕೆಲವರು ಅವರ ಬಗ್ಗೆ ಅಪಪ್ರಚಾರ ಮಾಡುತ್ತಿರಬಹುದು. ಅದನ್ನೆಲ್ಲ ನಂಬಲಾಗು ತ್ತದೆಯೆ? ಶಂಕರ್ ಅಂದರೆ ಯಾರು? ಕಮ್ಯೂನಿಸ್ಟ್ ಅಂತ ಕಾಣುತ್ತೆ?''

''ಹೌದು. ಅವರೂ ಸಧ್ಯ ಧರ್ಮಪುರದಲ್ಲೇ ಇದಾರೆ.''

''ಏನು ಮಾಡುತ್ತಾರೆ?''

''ಸಂಗಪ್ಪ ಸೆಟ್ಟರ ಗಿರಣಿಯಲ್ಲಿಯೆ ಕೂಲಿಕಾರರಾಗಿದ್ದಾರೆ. ಕೂಲಿಕಾರ ಸಂಘದ ಅಧ್ಯಕ್ಷರೂ ಅವರೇ!''

''ಓಹೋ! ಈಗ ಗೊತ್ತಾಯಿತು ಬಿಡಿ. ತೆಳ್ಳಗೆ ಉದ್ದವಾಗಿ ಇರುವವರಲ್ಲ - ಅವರೇ ತಾನೆ! ಪಕ್ಕಾ ಪುಂಡ ಕಣ್ರೀ ಆತ. ಗಿರಣಿಯಲ್ಲಿ ಆತನ ಗಲಾಟೆಯೋ ಗಲಾಟೆ. ಹತ್ತಿಪ್ಪತ್ತು ಜನ ಹುಂಬರನ್ನು ಕಟ್ಟಿಕೊಂಡು ಗದ್ದಲ ಮಾಡುತ್ತ ತಿರುಗುತ್ತಿರುತ್ತಾನೆ. ಅಂಥವರ ಮಾತನ್ನೆಲ್ಲ ಕಿವಿಗೆ ಹಾಕಿಕೊಳ್ಳಲಾಗುತ್ತದೆಯೆ? ಅಲ್ಲದೆ ನಮ್ಮ ಸೆಟ್ಟರು ಕಾಂಗ್ರೆಸ್ಸಿನವರು. ನಿಮಗೆ ಗೊತ್ತಿದೆಯಲ್ಲ - ಕಾಂಗ್ರೆಸ್ಸಿಗರ ವಿರುದ್ಧ ಯದ್ವಾತದ್ವಾ

ಬೊಗಳುತ್ತ ತಿರುಗುವುದೇ ಈ ಕಮ್ಯೂನಿಸ್ಟರ ಕೆಲಸ. ಸರಿ ಬಿಡಿ. ಇವರಿಗೊಂದು ಉದ್ಯೋಗವಿಲ್ಲ. ನಮ್ಮ ಸೆಟ್ಟರನ್ನೂ ಅವರ ಮಕ್ಕಳು ಸದಾಶಿವಪ್ಪನವರನ್ನೂ ನೀವೊಮ್ಮೆ ನೋಡಿದರೆ ಸಾಕು – ಅವರೆಂಥ ಸಾಧುಪ್ರಾಣಿಗಳು ಎನ್ನುವುದು ತಿಳಿದೀತು. ಇಷ್ಟು ಹೊತ್ತು ನಾನೂ ಅವರೂ ಮಾತನಾಡುತ್ತಲೇ ಇದ್ದೆವು. ಅವರು ಸಿನೆಮಾಕ್ಕೆ ಹೊರಟಿದ್ದರು. ನನಗೂ ಬರಲು ಒತ್ತಾಯ ಮಾಡಿದರು. ಆದರೆ ನಿಮ್ಮನ್ನು ಕಾಣ ಬೇಕಾಗಿದೆಯೆಂದು ಹೇಳಿದ ಮೇಲೆ ಬಿಟ್ಟುಬಿಟ್ಟರು. ನಾಳೆ ಬೆಳಗ್ಗೆ ನಿಮ್ಮನ್ನು ಕರೆದು ತರಲು ತಿಳಿಸಿದ್ದಾರೆ.''

''ಎಲ್ಲಿಗೆ?''

''ಅವರು ಇಳಿದುಕೊಂಡಿರುವುದು ಮಾಡರ್ನ್ ಹಿಂದೂ ಹೋಟಲಲ್ಲಿ. ಅಲ್ಲಿಗೇ ಹೋಗೋಣ.''

ಚಂದ್ರಣ್ಣ ಒಂದೆರಡು ಕ್ಷಣ ಯೋಚಿಸುತ್ತಿದ್ದು – ''ನಾನು ಬರಲಾಗುವುದೋ ಇಲ್ಲವೋ ಹೇಳಲಾರೆ. ಈ ಶ್ರೀಮಂತರನ್ನು ಭೆಟ್ಟಿ ಮಾಡುವುದೆಂದರೆ ನನಗೆ ಏನೋ ದಿಗಿಲು!'' ಎಂದ.

ಶಿವಯೋಗಿ ನಗುತ್ತಾ – ''ಏನು, ಜನರನ್ನೇ ಕಾಣದಿರುವವರ ಹಾಗೆ ಮಾತನಾಡುತ್ತೀರಲ್ಲ ಚಂದ್ರಣ್ಣ! ಶ್ರೀಮಂತರಾದರೇನಾಯಿತು, ಅವರೇನು ನಿಮ್ಮನ್ನು ನುಂಗಿ ಬಿಡುವರೇ? ಅದಕ್ಕೇಕೆ ದಿಗಿಲು? ಪ್ರೀತಿಯಿಂದ ಕರೆಯುತ್ತಾರೆ. ಹೋಗಿ ಕಾಣಬೇಕು ತಾನೇ?'' ಎಂದ.

''ಅಂಥ ಪ್ರೀತಿಯಿರುವುದೇ ನಿಜವಾದರೆ ಅವರೇ ನಮ್ಮ ಕಾರ್ಯಾಲಯಕ್ಕೆ ಬಂದು ನನ್ನನ್ನು ಕಾಣಬೇಕಲ್ಲವೆ? ನಾನೇ ಅವರನ್ನು ಹುಡುಕಿಕೊಂಡು ಹೋಗಬೇಕಾದ ಅಗತ್ಯವೇನು?'' ಎಂದು ಹೇಳಬೇಕೆಂದು ಚಂದ್ರಣ್ಣನ ಮನಸ್ಸಿನಲ್ಲಿ ಬಂದಿದ್ದಿತು. ಆದರೆ ಏಕೋ ಏನೋ ಆ ಮಾತು ಆತನ ಮುಖದಿಂದ ಹೊರಬರಲಿಲ್ಲ.

''ಸದಾಶಿವಪ್ಪನವರೂ ನಾನೂ ಕೂಡಿ ನಿಮ್ಮ ವಿಚಾರವಾಗಿ ಬಹಳ ಹೊತ್ತು ಚರ್ಚೆ ಮಾಡಿದೆವು. ಪತ್ರಿಕೆ ನಿಂತುಹೋಗುವುದೆಂಬ ವಿಷಯವನ್ನು ತಿಳಿದು ಅವರಿಗೆ ತುಂಬಾ ವ್ಯಸನವಾಯಿತು. 'ಇಂಥ ಒಳ್ಳೆಯ ಪತ್ರಿಕೆಯನ್ನು ನಿಲ್ಲಿಸುವುದುಂಟೇ – ಅದೂ ನಾವಿರುತ್ತ?' ಎಂದು ಹೇಳಿದರು. ಲಿಮಿಟೆಡ್ ಕಂಪನಿಯ ವಿಚಾರವನ್ನು ನಾನು ತೆಗೆದಾಗ 'ಬಹಳ ಒಳ್ಳೆಯದು. ಇಂದೇ ಕೆಲಸ ಪ್ರಾರಂಭಿಸಿ ಬಿಡಿ, ನಾನು

ಹಣದ ವ್ಯವಸ್ಥೆ ಮಾಡುತ್ತೇನೆ' ಎಂದರು.''

''ಹಾಗಂದರೆ?''

''ಕಂಪನಿಯ ಶೇರ್ ಹಣ ಕೂಡಿಸುವ ತಾಪತ್ರಯ ತಪ್ಪಿದಂತಾಯಿತು. ಇಂಥ ದೊಡ್ಡ ಬಂಡವಾಳಗಾರರು ಕಂಪನಿಯ ಸೂತ್ರಚಾಲಕರಾದರೆ ಹಾಹಾ ಎನ್ನುವುದರಲ್ಲಿ ಶೇರುಗಳೆಲ್ಲ ಮಾರಾಟವಾಗಿ ಹೋಗುತ್ತವೆ.''

''ಅದು ಸರಿಯೆ. ಆದರೆ ಕಂಪನಿಗೂ ಅವರಿಗೂ ಯಾವ ಬಗೆಯ ಸಂಬಂಧ?''

''ಅದೇನು ಹೀಗೆ ಕೇಳುವಿರಲ್ಲ? ಅವರೇ ಕಂಪನಿಯ ಆಧಾರಸ್ತಂಭ ಇದ್ದ ಹಾಗೆ. ಹೆಚ್ಚು ಶೇರುಗಳನ್ನು ಅವರೇ ಕೊಳ್ಳುವರು. ತಮ್ಮ ಸ್ನೇಹಿತರಿಗೂ ಕೊಳ್ಳಲು ಹಚ್ಚುವರು.''

''ಅವರೇ ಡೈರೆಕ್ಟರಾಗುವರಲ್ಲವೆ?''

''ಅರ್ಥಾತ್ – ಆಗಲೇಬೇಕಲ್ಲವೆ? ಸದಾಶಿವಪ್ಪನವರು, ಅವರ ವಿಶ್ವಾಸ ಪಾತ್ರರಾದ ಮೂರು ನಾಲ್ಕು ಜನ ಕಾಂಗ್ರೆಸ್ ಮುಖಂಡರು ಧರ್ಮಪುರದಿಂದ ಡೈರೆಕ್ಟರಾಗುವರು. ಇನ್ನುಳಿದವರನ್ನು ನಾವು ಬೇರೆ ಕಡೆಯಿಂದ ತೆಗೆದುಕೊಳ್ಳಬಹುದು. ನಾವಿಬ್ಬರಂತೂ ಸರಿಯೆ – ನಾವು ಮ್ಯಾನೇಜಿಂಗ್ ಡೈರೆಕ್ಟರರು...''

''ನಾವೂ ಹಣ ಹಾಕಬೇಕಾಗುತ್ತದೆ ತಾನೆ?''

''ಡೈರೆಕ್ಟರಾಗಬೇಕಾದರೆ ಹಾಕಲೇಬೇಕಲ್ಲ?''

''ಸಾವಿರ ರೂಪಾಯಿ?''

''ಹೌದು. ಅಷ್ಟಂತೂ ಅಗತ್ಯ.''

''ಅದನ್ನೆಲ್ಲಿಂದ ತರುವುದು?''

''ಅದಕ್ಕೇಕೆ ಯೋಚನೆ ಮಾಡುತ್ತೀರಿ? ಹೇಗಾದರೂ ಮಾಡಿದರಾಯಿತು. ಸಾವಿರ ರೂಪಾಯಿ ಅಂದರೆ ಏನು ಮಹಾ!''

''ನಿಮಗೆ ಅದು ಸುಲಭವಾಗಿ ತೋರಬಹುದು. ಆದರೆ ನನಗೆ ಮಾತ್ರ ಕಷ್ಟವೇ. ನಾನು ಬಡವ. ಸಾವಿರ ರೂಪಾಯಿಗಳ ವ್ಯವಸ್ಥೆ ಮಾಡುವುದು ಸದ್ಯಕ್ಕಂತೂ

ನನ್ನಿಂದ ಆಗದ ಮಾತು. ಅಲ್ಲದೆ ಇದುವರೆಗೆ ಕ್ರಾಂತಿಗಾದ ಸಾಲವನ್ನೂ ತೀರಿಸಬೇಕು. ಆ ಜವಾಬ್ದಾರಿ ಬೇರೆ ಇದೆಯಲ್ಲವೆ?''

''ಎಷ್ಟು ಸಾಲವಾಗಿದೆ?''

''ಸುಮಾರು ಒಂದೂವರೆ ಸಾವಿರ.''

ಶಿವಯೋಗಿ ಹಣೆಯನ್ನು ತಟ್ಟಿಕೊಳ್ಳುತ್ತ – ''ಒಂದೂವರೆ ಸಾವಿರ? ಏತಕ್ಕಾಗಿ?'' ಎಂದು ಕೇಳಿದ.

''ಪತ್ರಿಕೆಯನ್ನು ನಡೆಸಲು.''

''ಪತ್ರಿಕೆಯಿಂದ ಏನೂ ಬರಲಿಲ್ಲವೆ?''

''ಬರುತ್ತದೆ, ಹೋಗುತ್ತದೆ. ಬರುವುದಕ್ಕಿಂತ ಹೋಗುವುದೇ ಹೆಚ್ಚು ಅಂತೆಯೇ ಈ ಸಾಲ.''

''ಯಾರ ಹೊಣೆಗಾರಿಕೆಯ ಮೇಲೆ ಈ ಸಾಲ ತಂದಿರುವುದು?''

''ಸಾಲ ಮಾಡಿದ್ದು ಪತ್ರಿಕೆಗಾಗಿಯೆ. ಆದರೆ ತಂದವರು ರಾಜಣ್ಣ.''

''ಅವರ ಹೆಸರಿನಲ್ಲಿ ತಾನೆ?''

''ಅರ್ಥಾತ್ ಅವರ ಹೆಸರಿನಲ್ಲೇ. ನನ್ನ ಹೆಸರಿನಲ್ಲಿ ಸಾಲವಾದರೂ ಹುಟ್ಟಬೇಕಲ್ಲ ಈ ಊರಲ್ಲಿ? ರಾಜಣ್ಣ ಸಾಹುಕಾರರ ಮನೆತನದವರು. ಊರಲ್ಲಿ ಪರಿಚಯವೂ ಸಾಕಷ್ಟಿದೆ. ಇಂದಿಲ್ಲ ನಾಳೆ ಹಣ ಹುಟ್ಟುವುದೆಂಬ ಭರವಸೆಯ ಮೇಲೆ ಸಾಲ ಕೊಟ್ಟಿದ್ದಾರೆ.''

ನಾಲ್ಕೈದು ನಿಮಿಷ ಯೋಚಿಸುತ್ತಿದ್ದು ಶಿವಯೋಗಿಯೆಂದ : ''ಪತ್ರಿಕೆ ಹೊರಡಿಸಬೇಕೆಂದು ಪ್ರಸ್ತಾಪ ತೆಗೆದವರಾರು?''

''ಇಂಥವರೇ ಎಂದು ಹೇಳುವುದು ಕಷ್ಟ ನಾನು 'ಉದಯ'ವನ್ನು ಬಿಟ್ಟು ಊರಿಗೆ ಹೊರಟು ನಿಂತಿದ್ದಾಗ ಈ ಇಬ್ಬರು ಗೆಳೆಯರು ನನ್ನ ಬಗೆಗಿದ್ದ ಅಭಿಮಾನಕ್ಕಾಗಿ ಹೊಸ ಪತ್ರಿಕೆಯ ಯೋಚನೆ ಹೂಡಿದರು. ಊರಿಗೆ ಹೋಗಿ ಸುಮ್ಮನೆ ಕುಳಿತು ಕೊಳ್ಳುವುದೇಕೆ, ಏನಾದರೂ ಮಾಡಿ ಇಲ್ಲಿಯೇ ಪತ್ರಿಕೆ ಹೊರಡಿಸೋಣ ಎಂದು ಒತ್ತಾಯ ಮಾಡಿ ನನ್ನನ್ನು ನಿಲ್ಲಿಸಿಕೊಂಡರು. ಬಂಡವಾಳದ ಪ್ರಶ್ನೆ ಬಂದಾಗ ರಾಜಣ್ಣ

ತಾನು ಆ ವಿಚಾರ ನೋಡಿಕೊಳ್ಳುವುದಾಗಿ ಹೇಳಿದರು. ಆಗಲೇ ಪತ್ರಿಕೆಯ ಯೋಜನೆಗಾರಂಭವಾದುದು.''

''ಅಂದರೆ? ಸದ್ಯ ಪತ್ರಿಕೆಯ ಒಡೆತನ ಯಾರದ್ದು?''

''ಒಡೆತನ? ನಿಜ ಹೇಳಬೇಕಾದರೆ ನಾವಾರೂ ಈ ವಿಷಯ ಯೋಚಿಸಿಯೆ ಇಲ್ಲ.''

''ನಿಮ್ಮ ನಿಮ್ಮಲ್ಲಿ ಕರಾರುಪತ್ರ ಇತ್ಯಾದಿ ಏನೂ ಆಗಿಲ್ಲವೆ?''

''ಆ ಯೋಚನೆಯೂ ನಮಗೆ ಬಂದಿಲ್ಲ.''

''ಅಂದರೆ - ಎಲ್ಲವೂ ಕೇವಲ ವಿಶ್ವಾಸದ ಮೇಲೆ ನಡೆದಿದೆ ಅನ್ನಿ.''

''ಹೌದು. ಪತ್ರಿಕೆಯನ್ನು ಪ್ರಾರಂಭಿಸಿದ್ದು ಮೂವರು ಸೇರಿ. ನಮ್ಮಲ್ಲೊಬ್ಬರು ತಮ್ಮ ಸ್ವಂತ ಜವಾಬ್ದಾರಿಯ ಮೇಲೆ ಸಾಲ ಮಾಡಿ ಹಣ ಹಾಕಿರುವರಾದರೂ ಅದರಿಂದಾಗಿ ಪತ್ರಿಕೆಯ ಒಡೆತನ ಅವರಿಬ್ಬರಿಗೇ ಸೇರುವಂತಿಲ್ಲ. ಆ ಸಾಲದ ಹೊಣೆ, ಪತ್ರಿಕೆಯ ಹೊಣೆ, ಅದರ ಲಾಭ ನಷ್ಟದ ಹೊಣೆ - ಎಲ್ಲಾ ಮೂವರದೂ ಹೌದು. ಇದಕ್ಕೆ ಕರಾರು ಪತ್ರದ ಅಗತ್ಯವಾದರೂ ಏನು?''

ಶಿವಯೋಗಿ ಕೊಂಚ ಕಾಲ ಸುಮ್ಮನೆ ಕುಳಿತಿದ್ದು ಅನಂತರ - ''ಅದೆಲ್ಲ ಸರಿಯೆ. ಆದರೆ ಈಗ ಕ್ರಾಂತಿಯ ಮುಂದಿರುವ ಪ್ರಶ್ನೆಯನ್ನು ತುಂಬಾ ಗಂಭೀರವಾಗಿ ಯೋಚಿಸೋಣ. ಪತ್ರಿಕೆ ನಿಂತುಹೋಗುವ ಪ್ರಸಂಗ ಬಂದಿದೆ. ಮತ್ತೆ ಸಾಲ ತೆಗೆಯುವಂತಿಲ್ಲ. ಸಾಲ ತೆಗೆಯದಿದ್ದರೆ ಪತ್ರಿಕೆ ನಡೆಯಲಾರದು. ಪತ್ರಿಕೆಯನ್ನಂತೂ ನಿಲ್ಲಿಸಕೂಡದು. ಅದನ್ನು ನಡೆಸುವುದು ಹೇಗೆ? ನಿಮ್ಮ ಗೆಳೆಯರು ಇದರ ಬಗ್ಗೆ ಏನೆನ್ನುತ್ತಾರೆ?'' ಎಂದ.

''ನಾವು ಈ ವಿಷಯ ಮಾತನಾಡಲೇ ಇಲ್ಲ. ಹೇಗೋ ಸಾಗಿಸಬೇಕು ಎಂಬುದು ಮಾತ್ರ ಎಲ್ಲರ ವಿಚಾರ.''

''ಆ ಹೇಗೋ ಎನ್ನುವುದಕ್ಕೂ ಒಂದು ಸಮಾಧಾನ ಬೇಕಲ್ಲವೆ? ಬೇರೆ ಏನಾದರೂ ಯೋಜನೆ ಹೂಡದಿದ್ದರೆ ಪತ್ರಿಕೆ ಉಳಿಯುವಂತಿಲ್ಲವೆನ್ನುವುದು ಸ್ಪಷ್ಟ ವಾಗಿದೆ. ಸದ್ಯದ ಪರಿಸ್ಥಿತಿಯಲ್ಲಿ ಬೇರೆ ಯೋಜನೆ ಇನ್ನೇನು ಬರಬೇಕು? ಲಿಮಿಟೆಡ್ ಕಂಪನಿ ಮಾಡಿ ಕ್ರಾಂತಿಯನ್ನು ಅದಕ್ಕೆ ತೆಗೆದುಕೊಳ್ಳಬೇಕು. ಇದುವರೆಗೆ ಆದ

ಸಾಲವೆಷ್ಟು ಅಂದಿರಿ?''

''ಒಂದೂವರೆ ಸಾವಿರ''

''ಸರಿ, ಆ ಒಂದೂವರೆ ಸಾವಿರ ರೂಪಾಯಿಗಳನ್ನು ಕಂಪನಿಯಿಂದ ನಿಮಗೆ 'ಗುಡ್‌ವಿಲ್' ಅಂತ ಕೊಡಿಸಬಹುದು. ಅದೇ ಹಣದ ಮೇಲೆ ನೀವು ಕಂಪನಿಗೆ ಡೈರೆಕ್ಟರಾಗಬಹುದು. ನೀವೂ ಹಣ ಹಾಕಬೇಕಾಗಿಲ್ಲ, ಕಂಪನಿಯೂ ನಿಮಗೆ ಕೊಡಬೇಕಾಗಿಲ್ಲ. ಅಕೌಂಟ್ ಪುಸ್ತಕ, ಅಗ್ರಿಮೆಂಟ್‌ಗಳಲ್ಲಿಯೆ ಬಗೆಹರಿಸಿಬಿಡಬಹುದು.''

ಚಂದ್ರಣ್ಣನಿಗೆ ಆ ವಿಚಾರವೊಂದೂ ಅರ್ಥವಾಗಲಿಲ್ಲ. ಲಿಮಿಟೆಡ್ ಕಂಪನಿಗಳ ವಿಷಯ ಆತನಿಗೆ ತೀರ ಅಪರಿಚಿತವಾದುದು. ಲೆಕ್ಕದ ಪುಸ್ತಕ, ಕರಾರು ಪತ್ರಗಳೂ ಅಷ್ಟೆ. ಈ ವಿಷಯದಲ್ಲಿ ಕೊಂಚವೂ ಅನುಭವವಿಲ್ಲದಿರುವಾಗ ತಾನು ಒಬ್ಬ ಮ್ಯಾನೇಜಿಂಗ್ ಡೈರೆಕ್ಟರಾಗಿ ಕಂಪನಿಗೆ ಸೇರಿಕೊಳ್ಳುವುದೆಂದರೇನು!

''ನೀವು ಹೇಳಿದ್ದು ನನಗರ್ಥವಾಗಲಿಲ್ಲ. ಗುಡ್‌ವಿಲ್ ಅಂದಿರಲ್ಲ ಅಂದರೆ?''

''ಪತ್ರಿಕೆ ಹೊರಟು ಒಂದು ವರ್ಷವಾಯಿತು. ಈಗಾಗಲೇ ಸಾಕಷ್ಟು ಲೋಕಪ್ರಿಯವಾಗಿದೆ. ಎಲ್ಲ ಕಡೆಗಳಲ್ಲೂ ಮಾರಾಟವಾಗುತ್ತಿದೆ. ಒಂದು ವರ್ಷದ ಪರಿಶ್ರಮಕ್ಕಾಗಿ ಕಂಪನಿ ನಿಮಗೆ ಅಷ್ಟು ಹಣವನ್ನು ಕೊಟ್ಟು ಪತ್ರಿಕೆಯನ್ನು ತನ್ನ ಒಡೆತನದಲ್ಲಿ ತೆಗೆದುಕೊಳ್ಳುವುದು.''

''ಹಣ ಕೊಡುವ ಹಾಗಿಲ್ಲ ಅಲ್ಲವೆ?''

''ನಗದು ಹಣ ಕೊಡಬೇಕಾಗಿಲ್ಲ. ಆದರೂ ಕೊಟ್ಟ ಹಾಗೆಯೇ. ಲೆಕ್ಕದ ಪುಸ್ತಕದಲ್ಲಿ ನಿಮ್ಮ ಹೆಸರಿನಲ್ಲಿ ಒಂದೂವರೆ ಸಾವಿರ ರೂಪಾಯಿ ಜಮಾ ಆಗಿ ಗುಡ್‌ವಿಲ್ ಖಾತೆಗೆ ಒಂದೂವರೆ ಸಾವಿರ ಖರ್ಚು ಬೀಳುತ್ತದೆ. ಆ ಪ್ರಕಾರ ಕರಾರು ಪತ್ರದಲ್ಲೂ ಬರೆಯಿಸಲಾಗುತ್ತದೆ.''

''ಕರಾರುಪತ್ರ?''

''ಕೆಲಸಕ್ಕಾರಂಭವಾಗುವುದಕ್ಕೆ ಮೊದಲು ಕಂಪನಿಗೂ ಮ್ಯಾನೇಜಿಂಗ್ ಏಜಂಟರಾದ ನಮಗೂ ಒಂದು ಒಪ್ಪಂದವಾಗುತ್ತದೆ. ಹತ್ತು ವರ್ಷಗಳ ಕಾಲ ತಿಂಗಳಿಗೆ ಇಂತಿಷ್ಟು ರೂಪಾಯಿ ವೇತನದ ಮೇಲೆ, ಇಲ್ಲವೆ ಕಮೀಷನ್ನಿನ ಮೇಲೆ ನಾವು ಮ್ಯಾನೇಜಿಂಗ್ ಏಜಂಟರಾಗಿ ಕೆಲಸ ಮಾಡತಕ್ಕದ್ದೆಂದು ಗೊತ್ತಾಗುತ್ತದೆ. ಆ ಕರಾರು

ಪತ್ರದಲ್ಲಿಯೆ ಈ ಗುಡ್‌ವಿಲ್ ವಿಷಯವೂ ನಮೂದಾಗಿರುತ್ತದೆ.''

''ಈ ಕರಾರುಪತ್ರಕ್ಕೆ ಯಾರು ಯಾರು ಸಹಿ ಹಾಕಬೇಕಾಗುತ್ತದೆ?''

''ಕಂಪನಿಯ ಡೈರೆಕ್ಟರರು ಮತ್ತು ನಾವು.''

''ಅವರು ಈ ಕರಾರುಗಳಿಗೆಲ್ಲ ಒಪ್ಪುವರೇ?''

''ಒಪ್ಪುವರೇ ಅಂದರೇನು? ಒಪ್ಪಿಸಬೇಕು.''

''ಒಪ್ಪಬಹುದೆಂಬ ಭರವಸೆ ನಿಮಗಿದೆಯೇ?''

''ಹೋ ನಿಮಗೇಕೆ ಆ ಯೋಚನೆ? ಅದನ್ನೆಲ್ಲ ನನಗೆ ಬಿಟ್ಟುಬಿಡಿ. ಪತ್ರಿಕೆಯನ್ನು ಮೊದಲು ನಿಮ್ಮ ಹೆಸರಿಗೆ ಬರೆಯಿಸಿಕೊಳ್ಳಬೇಕು. ಎಲ್ಲಕ್ಕೂ ಮೊದಲು ಆಗಬೇಕಾದ ಕೆಲಸ ಅದು.''

''ಅದೇ ಕಷ್ಟದ ಕೆಲಸ. ಮೂವರದ್ದೂ ಆಗಿರುವ ಪತ್ರಿಕೆಯನ್ನು ನನ್ನೊಬ್ಬನ ಹೆಸರಿಗೆ ಹೇಗೆ ಬರೆಯಿಸಿಕೊಳ್ಳುವುದು?''

''ಅದರಲ್ಲೇನು ಮಹಾ! ಇರುವ ವಿಷಯವನ್ನೆಲ್ಲ ನಿಮ್ಮ ಗೆಳೆಯರಿಗೆ ಸ್ಪಷ್ಟವಾಗಿ ತಿಳಿಸಿಬಿಟ್ಟು ಪತ್ರಿಕೆಯನ್ನು ಉಳಿಸುವುದಕ್ಕಾಗಿಯೆ ಈ ಪ್ರಯತ್ನವೆಲ್ಲ ನಡೆದಿರುವುದನ್ನು ವಿವರಿಸಿದರೆ ಅವರು ಒಪ್ಪಬಹುದು. ಒಪ್ಪಲಾರದಂಥ ಹಟಮಾರಿಗಳೇ ಅವರು?''

''ಹಟಮಾರಿಗಳೇನೂ ಅಲ್ಲ ಆದರೂ...''

''ನೋಡಿ ಪ್ರಯತ್ನ ಮಾಡಿ. ಅವರು ಒಪ್ಪಿದರಂತೂ ಸರಿಯೆ. ಒಪ್ಪದಿದ್ದರೂ ಚಿಂತೆಯಿಲ್ಲ, ಕ್ರಾಂತಿಯನ್ನು ಅವರೇ ನಡೆಸಿಕೊಳ್ಳಲಿ. ನಾವು ಕಂಪನಿಯ ವತಿಯಿಂದ ಬೇರೆ ಪತ್ರಿಕೆ ಹೊರಡಿಸೋಣ. ನಿಮ್ಮಂಥ ಸಮರ್ಥ ಸಂಪಾದಕರಿರುವಾಗ ಹೊಸ ಪತ್ರಿಕೆ ಅಂದರೇನು ಮಹಾ! ಈಗಾಗಲೇ ಎರಡು ಪತ್ರಿಕೆ ಹೊರಡಿಸಿ ಅಲ್ಪಾವಧಿಯಲ್ಲಿ ಯಶಸ್ವಿಯಾಗಿ ಮಾಡಿದ್ದೀರಿ. ಇದು ಮೂರನೆಯದಾದೀತು,'' ಎಂದು ನುಡಿದು ಶಿವಯೋಗಿ ಮೇಲಕ್ಕೆದ್ದ

''ಛೆ! ಹೊಸ ಪತ್ರಿಕೆಯ ವಿಚಾರವನ್ನೇ ಎತ್ತುವಂತಿಲ್ಲ, ಯೋಗಿಗಳೆ - ಇರುವುದನ್ನು ಬದುಕಿಸುವುದಕ್ಕಾಗಿಯೆ ಇಷ್ಟೆಲ್ಲ ಪ್ರಯತ್ನ ತಾನೆ? ಕಂಪನಿ ಮಾಡಿ ಡೈರೆಕ್ಟರಾಗಿ ಮೆರೆಯಬೇಕೆಂಬ ಅಪೇಕ್ಷೆಯೇನೂ ನನಗಿಲ್ಲ, ನಾವು ಇಷ್ಟು ಕಷ್ಟಪಟ್ಟು ಹೊರಡಿಸಿದ ಪತ್ರಿಕೆ ನಿಂತುಹೋಗುವುದಲ್ಲಾ ಎಂಬ ಕಳವಳದಿಂದ ಈ ವಿಚಾರಕ್ಕೆ

ಬಿದ್ದಿರುವುದು. ನಾನು ಬಿಟ್ಟುಬಿಟ್ಟರೆ ಅವರು ಕ್ರಾಂತಿಯನ್ನು ಹೊರಡಿಸಲಾರರು. ಅದರ ಅಗತ್ಯವೂ ಅವರಿಗಿಲ್ಲ. ನನಗಾಗಿಯೆ ತಾನೆ ಅವರು ಈ ಉದ್ಯಮಕ್ಕಿಳಿದದ್ದು? ಈಗ ನಾನು ಅವರ ಕೈಬಿಟ್ಟು ಬೇರೆ ಪತ್ರಿಕೆ ಹೊರಡಿಸುವುದೆಂದರೆ ಎಂಥ ನೀಚತನವಾದೀತು. ಛೆ! ನಾನಂಥ ಕೃತಘ್ನನಲ್ಲ ಯೋಗಿಗಳೆ. ನನ್ನನ್ನು ನಂಬಿರುವ ಗೆಳೆಯರಿಗೆ ನಾನೆಂದೂ ಹೀಗೆ ಮೋಸ ಮಾಡಲಾರೆ.''

''ಮೋಸದ ಪ್ರಶ್ನೆ ಎಲ್ಲಿ ಬರುತ್ತೆ ಚಂದ್ರಣ್ಣ ಇದರಲ್ಲಿ? ಸ್ವಲ್ಪ ಪ್ರಾಕ್ಟಿಕಲ್ ಆಗಿ ಯೋಚನೆ ಮಾಡಿ. ಕ್ರಾಂತಿಯಂತೂ ನಿಂತುಹೋಗುತ್ತೆ. ಮುಂದೆ ನೀವೇನನ್ನು ಮಾಡಬೇಕೆಂದಿದ್ದೀರಿ? ನಿಮ್ಮ ಭವಿಷ್ಯವೇನು?''

''ಏನೊ! ನನಗಾವುದೂ ಹೊಳೆಯಲೊಲ್ಲದು.''

''ಪೂರಾ ಐಡಿಯಲಿಸ್ಟ್ ಆದವರ ಹಣೆಬರಹವೇ ಇಷ್ಟು. ಆಗಲಿ ಈ ವಿಚಾರ ಶಾಂತವಾಗಿ ಕುಳಿತು ಯೋಚಿಸಿ. ನಾಳೆಯ ದಿನ ಬೆಳಿಗ್ಗೆ ಸದಾಶಿವಪ್ಪನವರನ್ನು ಕಾಣಲು ಹೋಗೋಣ. ಎಂಟೂವರೆಗೆ ಮೆಜೆಸ್ಟಿಕ್ ಹತ್ತಿರ ಬಂದುಬಿಡಿ'' ಎಂದು ಹೇಳಿ ಶಿವಯೋಗಿ ಬೀಳ್ಕೊಂಡ.

ಆತ ಹೊರಟುಹೋದ ಮೇಲೆ ತಾಸೆರಡು ತಾಸು ಕಳೆದರೂ ಚಂದ್ರಣ್ಣ ತೋಟವನ್ನು ಬಿಟ್ಟು ಹೊರಡಲಿಲ್ಲ. ಸಿಗರೇಟಿನ ಮೇಲೆ ಸಿಗರೇಟು ಸುಡುತ್ತಿದ್ದುವು. ಆತ ಕುಳಿತಲ್ಲಿಯೆ ಕುಳಿತುಕೊಂಡು ಆಳವಾದ ಯೋಚನೆಗಳಲ್ಲಿ ಮುಳುಗೇಳುತ್ತಿದ್ದ.

ಕೊನೆಗೆ ಆತ ಎದ್ದು ಹೊರಟಾಗ ಯಾವುದೋ ಒಂದು ನಿರ್ಧಾರಕ್ಕೆ ಮುಟ್ಟಿದ ಹಾಗಿತ್ತು. ''ಹೌದು, ಹಾಗೇ ಮಾಡುವುದು, ನಾಳೆ ಬೆಳಗ್ಗೆ ನಾರಾಯಣರಾಯರನ್ನು ಕಾಣುವುದು – ಅವರೇ ಒಂದು ದಾರಿ ತೋರಿಸಬಲ್ಲರು,'' ಎಂದುಕೊಳ್ಳುತ್ತ ಹೋಟೆಲಿನ ಕಡೆಗೆ ಹೆಜ್ಜೆ ಹಾಕಿದ.

೪

ನಾರಾಯಣರಾಯರ ಮನೆಯಿದ್ದುದು ಮಲ್ಲೇಶ್ವರದಲ್ಲಿ. ಮಲ್ಲೇಶ್ವರಕ್ಕಂತೂ ಸರಿಯೆ, ಇಡಿಯ ಬೆಂಗಳೂರಿಗೆಲ್ಲ ಅವರು ಪರಿಚಿತರು. ಬೆಂಗಳೂರು ಮಾತ್ರವಲ್ಲ,

ಕನ್ನಡ ನಾಡಿಗೆಲ್ಲ - ಅದೇಕೆ ಹೊರ ನಾಡುಗಳಲ್ಲಿ ಸಹ ಅವರು ಪ್ರಸಿದ್ಧ ವ್ಯಕ್ತಿ. ರಾಯರು ಹೆಸರಾಂತ ಲೇಖಕರು, ನುರಿತ ವಕ್ತಾರರು, ರಾಜಕಾರಣ ಪಟುಗಳು, ಹಲವಾರು ಚಳವಳಿಗಳಲ್ಲಿ ಭಾಗವಹಿಸಿ ಅನೇಕ ಸಲ ಕಾರಾಗಾರ ಕಂಡವರು. ಕನ್ನಡ, ತೆಲುಗು, ಉರ್ದೂ, ಇಂಗ್ಲೀಷು, ತಮಿಳು ಇತ್ಯಾದಿ ಅನೇಕ ಭಾಷೆಗಳಲ್ಲಿ ಪ್ರಭುತ್ವ ವುಳ್ಳವರು. ಕರ್ನಾಟಕದ ಎಲ್ಲ ಊರುಗಳನ್ನೂ ಸುತ್ತಿದ್ದಾರೆ. ಎಲ್ಲ ಕಡೆಗಳಲ್ಲಿ ಭಾಷಣ ಮಾಡಿದಾರೆ. ಭಾಷಣ ಎಂದರೆ ಅವರಿಗೆ ಸಂಭಾಷಣೆ ಇದ್ದ ಹಾಗೆ. ನಾಲ್ಕು ಜನರ ಕೂಟದಲ್ಲಿ ಮಾತನಾಡುವ ಹಾಗೆಯೆ ನಾಲ್ಕು ಸಾವಿರ ಜನರ ಸಮೂಹದಲ್ಲಿ ಮಾತನಾಡುವರು. ಎಲ್ಲ ಕಡೆಗೂ ಅದೇ ಸರಳತನದ, ಸಲುಗೆಯ, ಹಾಸ್ಯಪೂರ್ಣ ಮಾತುಗಾರಿಕೆ. ಮಾತನಾಡುವುದೂ ಒಂದು ಕಲೆಯೆಂದು ಹೇಳುವವರು ರಾಯ ರೊಂದಿಗೆ ಒಂದು ದಿನ ಇದ್ದು ನೋಡಬೇಕು; ತಮ್ಮ ಅಭಿಪ್ರಾಯ ತಪ್ಪಾದುದೆಂಬುದು ಅವರಿಗೆ ಮನವರಿಕೆಯಾಗದಿರದು. ಕಲೆ ಯಾವಾಗಲೂ ಕೃತಿಮತೆಯ ಕೂಸು. ರಾಯರ ಮಾತಿನಲ್ಲಾದರೋ ಕೃತಿಮತೆಯ ಒಂದು ಕಣವೂ ಕಾಣಸಿಗದು. ಝುರಿಯಿಂದ ಹರಿಯುವ ನೀರಿನ ಹಾಗೆ ಒಂದೆ ಸಮನೆ ಗಂಟೆ ಗಂಟೆಗಳ ಕಾಲ ಮಾತು ಹೊರಡುತ್ತಿರುತ್ತದೆ ಅವರ ಮುಖದಿಂದ.

ರಾಯರ ತಾಯಿನುಡಿ ತೆಲುಗು. ಆದರೆ ನಾಲ್ಕಾರು ತಲೆಮಾರುಗಳಿಂದ ಅವರ ಮನೆತನ ಕರ್ನಾಟಕದಲ್ಲೇ ನೆಲೆಸಿದೆಯಾದುದರಿಂದ ಅವರು ಅಚ್ಚ ಕನ್ನಡಿಗರೇ ಆಗಿದಾರೆ. ಮನೆಯಲ್ಲೇನೋ ಈಗಲೂ ತೆಲುಗು ಮಾತೇ. ಆದರೂ ರಾಯರು ಹದಿನಾರಾಣೆ ಕನ್ನಡಿಗರು. ಇಂಗ್ಲೀಷಿನ ಮೋಹದ ಬಲೆಗೆ ಬಿದ್ದು ತಾಯಿನುಡಿಯನ್ನು ಮರೆತು 'ಸಾಹೇಬ'ರಾಗುತ್ತಿದ್ದ ಮೈಸೂರಿನ ಕನ್ನಡಿಗರಿಗೆ ಹಲವು ಸಲ ಛೀಮಾರಿ ಹಾಕಿ ಅವರನ್ನು ಕನ್ನಡದ ಕಡೆಗೆ ತಿರುಗಿಸಿದವರು ರಾಯರೇ.

ಯಾವಾಗಲೂ ಕನ್ನಡದಲ್ಲೇ ಮಾತನಾಡಬೇಕೆಂಬ ಹಟವಾದಿಗೇನೂ ಅವರಲ್ಲ, ಕನ್ನಡ ಮಾತನಾಡುವಷ್ಟು ಚೆನ್ನಾಗಿಯೆ ಅವರು ತೆಲುಗು, ತಮಿಳು, ಇಂಗ್ಲೀಷು, ಉರ್ದೂ ಮಾತನಾಡುತ್ತಾರೆ. ಆದರೆ ಯಾವುದನ್ನೂ ಅನವಶ್ಯಕವಾಗಿ ಉಪಯೋಗಿಸುವುದಿಲ್ಲ, ಕನ್ನಡವನ್ನರಿಯದ ಜನರ ಹತ್ತಿರ ಮಾತ್ರ ಅವರಿಗೆ ತಿಳಿಯುವ ಭಾಷೆ ಉಪಯೋಗಿಸುತ್ತಾರೆ.

ರಾಯರು ಪ್ರಸಿದ್ಧ ಲೇಖಕರು ಎಂದು ಹೇಳಿತಲ್ಲ, ಅವರ ಬರವಣಿಗೆಯ ಶೈಲಿ ಬಲು ಮೋಹಕವಾದುದು. ವಿಷಯವನ್ನು ಹೇಳುವ ರೀತಿಯೂ ಅಷ್ಟೆ ಬಲು

ಸೊಗಸಾದುದು. ಅಂತೆಯೆ ಅವರ ಒಂದೊಂದು ಪುಸ್ತಕ ಎಂಟು ಹತ್ತು ಮುದ್ರಣ ಗಳನ್ನು ಕಂಡಿದೆ. ಮಕ್ಕಳು, ಯುವಕರು, ಪ್ರೌಢರು, ಮುದುಕರು ಎಲ್ಲರಿಗೂ ಅವರ ಪುಸ್ತಕಗಳೆಂದರೆ ಪ್ರೀತಿ.

ಸುಪ್ರಸಿದ್ಧ ಲೇಖಕರಾದರೂ ರಾಯರಿಗೆ ಜಂಬ ಎನ್ನುವುದು ಕೊಂಚವೂ ಇಲ್ಲ. ಅವರ ಮುಖವೇ ಅದನ್ನು ಸೂಚಿಸುತ್ತದೆ. ನಲವತ್ತೈದು ವರ್ಷ ವಯಸ್ಸಾಗಿದ್ದರೂ ಹಾಲುಗಲ್ಲದ ಹಸುಳೆಯಂತಿರುವ ಆ ಮುಖವನ್ನು ಕಂಡವರು ಅವರ ಸರಳ ಹೃದಯವನ್ನು ಅರಿತುಕೊಳ್ಳಬಲ್ಲರು. ಮೊದಲಿನಿಂದಲೂ ಸಾದಾ ಶುಭ್ರ ಜೀವನ ನಡೆಸಿಕೊಂಡು ಬಂದುದರ ಪರಿಣಾಮವಾಗಿ ಅವರ ದೇಹ ಪ್ರಕೃತಿಯೂ ಚೆನ್ನಾಗಿದೆ. ಕೆಂಪಗೆ ಟೊಮ್ಯಾಟೊ ಹಣ್ಣಿನ ಬಣ್ಣದಂತಿರುವ ಮೈ ಬಣ್ಣ. ಸಾಕಷ್ಟು ತುಂಬಿ ಬೆಳೆದಿರುವ ಶರೀರ. ಉಡುಗೆ ತೊಡಿಗೆ ತೀರ ಸಾದಾ. ಒಂದು ಖಾದಿಯ ಬನೀನು; ಖಾದಿಯ ಲುಂಗಿ. ಕಾಲುಗಳಲ್ಲಿ ಚಪ್ಪಲಿ ಸಹ ಇರುವುದಿಲ್ಲ. ಭುಜದ ಮೇಲೆ ಒಂದು ಪುಟ್ಟ ಶಲ್ಯ. ಅದೂ ಒಂದೊಂದು ಸಲ ಇರುತ್ತದೆ, ಒಂದೊಂದು ಸಲ ಇಲ್ಲ. ಕೈಯಲ್ಲೊಂದು ಚರ್ಮದ ಚೀಲ; ಅದರಲ್ಲಿ ಪುಸ್ತಕ ಪ್ರಪಂಚ.

ರಾಯರ ದಿನಚರಿಯೂ ವಿಲಕ್ಷಣವಾದುದೇ. ಅವರ ಮನೆಯಿರುವುದೇನೊ ಮಲ್ಲೇಶ್ವರದಲ್ಲಿ; ರಾಯರು ಮಾತ್ರ ಅಲ್ಲಿ ಸಿಕ್ಕಲಾರರು. ಅವರನ್ನು ಕಾಣಲೆಂದು ಅವರ ಮನೆಗೆ ಹೋದವರೆಲ್ಲ ನಿರಾಶರಾಗಿ ಹಿಂದಿರುಗಿ ಬರುತ್ತಾರೆ. ಬೆಳಗಿನ ಏಳು ಗಂಟೆ ಯೊಳಗಾಗಿ ಹೋದರೆ ಮಾತ್ರ ಮನೆಯಲ್ಲಿ ಅವರ ದರ್ಶನವಾದೀತು. ಏಳು ಗಂಟೆಯ ನಂತರ ಬೆಂಗಳೂರಿನಲ್ಲಿ ಎಲ್ಲಾದರೂ ಅವರನ್ನು ಕಾಣಬಹುದು. ಆರು ಗಂಟೆಗೆ ಹಾಸಿಗೆ ಬಿಟ್ಟು ಎದ್ದು ಸ್ನಾನ ತೀರಿಸಿಕೊಂಡು ಒಂದು ಲೋಟ ಕಾಫಿ ಕುಡಿದು ಕೈಯಲ್ಲಿ ಚರ್ಮದ ಚೀಲ ಹಿಡಿದು ಅವರು ಹೊರಟರೆ ಮುಗಿಯಿತು; ಮತ್ತೆ ಮನೆಯ ಮುಖ ನೋಡುವುದು ರಾತ್ರಿ ಹತ್ತು ಗಂಟೆಗೋ ಹನ್ನೆರಡಕ್ಕೊ. ಮಧ್ಯಾಹ್ನದ ಊಟ ಯಾರ ಮನೆಯಲ್ಲಾದರೂ ಆಗುತ್ತದೆ. ಆಗದಿದ್ದರೂ ಇಲ್ಲ. ಅವರಿಗೆ ಊಟದ ನೆನಪೇ ಇರುವುದಿಲ್ಲ.

ಏಳು ಗಂಟೆಯ ಹೊತ್ತಿಗೆ ರಾಯರು ಮನೆ ಬಿಟ್ಟು ಹೊರಟರೆಂದರೆ ಬಸ್‌ಸ್ಟ್ಯಾಂಡಿಗೆ ಬರುವುದರೊಳಗಾಗಿ ಎಂಟು ಹತ್ತು ಜನ ಅವರನ್ನು ಸುತ್ತುವರಿಯು ತ್ತಾರೆ. 'ನಮಸ್ಕಾರ ಸಾರ್', 'ನಮಸ್ತೇ', 'ಮಾರ್ನಿಂಗ್', 'ಸಲಾಂ ಸಾಬ್', 'ನಮೋ ನಮಃ', 'ಶರಣು ಶರಣಾರ್ಥಿ' ಇತ್ಯಾದಿ ಹಲವು ಬಗೆಯ ಉದ್ಗಾರ ಕೇಳಬರುತ್ತವೆ.

ಹನುಮಂತನ ಗುಡಿಯ ಪೂಜಾರಿಯಿಂದ ಮೊದಲು ಮಾಡಿಕೊಂಡು ತರಕಾರಿ ಮಾರುವ ಇಮಾಂಸಾಹೇಬನವರೆಗೂ ಅವರ ಪರಿಚಯ. ಆ ಜಾತಿ ಈ ಜಾತಿ ಎಂಬ ಭೇದಭಾವ ರಾಯರ ಮಟ್ಟಿಗಂತೂ ಇಲ್ಲವೇ ಇಲ್ಲ. ಎಲ್ಲ ಜಾತಿಯವರೂ ತುಂಬಾ ಆತ್ಮೀಯತೆಯಿಂದ ಅವರ ಹತ್ತಿರ ತಮ್ಮ ಸುಖ ದುಃಖ ಹೇಳಿಕೊಳ್ಳುತ್ತಾರೆ. ರಾಯರೂ ಅವರೆಲ್ಲರನ್ನು ಗೌರವದಿಂದಲೂ ಮಮತೆಯಿಂದಲೂ ಕಾಣುತ್ತಾರೆ. ಅವರ ಮಕ್ಕಳು ಮರಿಗಳ ವಿಚಾರ ಕೇಳುತ್ತಾರೆ. 'ನಿಮ್ಮ ಗೋಪಿಗೆ ಈಗ ಆರೋಗ್ಯವೆ?', 'ನಿಮ್ಮ ರುಸ್ತುಂ ಓಡಾಡುತ್ತಿರುವನೇ?', 'ಸರೋಜಳ ಮದುವೆಯ ವಿಚಾರ ಎಲ್ಲಿಗೆ ಬಂತು?', 'ನಿಮ್ಮ ಸಿದ್ಧಯ್ಯ ಶಾಲೆಗೆ ಹೋಗುತ್ತಿರುವನೇ?' ಇತ್ಯಾದಿ ಪ್ರಶ್ನೆ ಹಾಕುತ್ತಾರೆ. ಅವರು ಹೇಳುವುದನ್ನು ಸಮಾಧಾನದಿಂದ ಕೇಳಿಕೊಂಡು ಅಗತ್ಯವಿದ್ದಲ್ಲಿ ಸಲಹೆ ಕೊಡುತ್ತಾರೆ. ಈ ಮಾತುಕತೆಗಳಲ್ಲಿ ತಮ್ಮ ವೇಳೆ ಹಾಳಾಗುವುದಲ್ಲ ಎಂದು ಒಂದು ಸಲವೂ ಅವರಿಗೆ ವ್ಯಸನವಾಗುವುದಿಲ್ಲ. ಇದೆಲ್ಲವೂ ವ್ಯರ್ಥ ಎಂದು ಅವರಿಗನ್ನಿಸುವುದೇ ಇಲ್ಲ. ಅವರ ಮನೆಯಿಂದ ಬಸ್‌ಸ್ಟ್ಯಾಂಡಿಗೆ ಒಂದು ಫರ್ಲಾಂಗ್ ದೂರವಷ್ಟೆ. ಆದರೂ ಒಂದೊಂದು ದಿನ ಅವರು ಬಸ್‌ಸ್ಟ್ಯಾಂಡಿಗೆ ಬರುವುದರೊಳಗಾಗಿ ಹನ್ನೆರಡು ಗಂಟೆಯಾಗಿರುವುದೇ ಉಂಟು. ನಾಲ್ಕು ಗಂಟೆಗಳ ಕಾಲ ದಾರಿಯಲ್ಲೇ ಮಾತು ಕತೆ!

ಆ ದಿನವೂ ರಾಯರು ಹಲವರೊಂದಿಗೆ ಮಾತನಾಡುತ್ತ ಸಂಪಿಗೆ ರಸ್ತೆಯಲ್ಲಿ ಬರುತ್ತಿದ್ದಾಗ ಚಂದ್ರಣ್ಣ ಬಸ್ಸಿನಿಂದಿಳಿದು ಅವರ ಮನೆಗೆ ಹೊರಟವನು ದಾರಿಯಲ್ಲಿ ಅವರಿಗೆದುರಾದ. ಆತನನ್ನು ಕಂಡೊಡನೆಯೆ – "ಓ, ನೀವೋ! ಏನು ಸುದ್ದಿ? ಬಹಳ ದಿನಗಳಿಂದ ಕಾಣಲೇ ಇಲ್ಲವಲ್ಲ, ಎತ್ತ ಹೊರಟಿತ್ತು ಸವಾರಿ?" ಎಂದರು ರಾಯರು.

"ನಿಮ್ಮನ್ನು ನೋಡುವುದಕ್ಕಾಗಿಯೆ ಬಂದಿದ್ದೆ."

"ಸರಿ, ಸರಿ, ಚೆನ್ನಾಯಿತು. ನಾನೂ ಸಿಟಿಗೆ ಹೊರಟಿದ್ದೆ. ಇಬ್ಬರೂ ಕೂಡಿಯೆ ಹೋಗೋಣ ಬನ್ನಿ. ಏನಾದರೂ ವಿಶೇಷವೊ?"

"ಹೌದು. ಸ್ವಲ್ಪ ಮಾತನಾಡುವುದಿತ್ತು."

"ಆಯಿತು. ಹೊರಡೋಣ – ಒಂದು ನಿಮಿಷ" ಎಂದು ಹೇಳಿ ರಾಯರು ಜೊತೆಗಿದ್ದವರೊಡನೆ ಮಾತಿಗೆ ತೊಡಗಿದರು. ಆ ಮಾತುಗಳೆಲ್ಲ ಮುಗಿದ ಮೇಲೆ ನಾಲ್ಕೈದು ಅಡಿ ಮುಂದೆ ಬರುವಷ್ಟರಲ್ಲಿ ಇನ್ನು ನಾಲ್ಕು ಜನ 'ನಮಸ್ಕಾರ ಸಾರ್' ಎಂದು ಕೂಡಿದರು. ಅವರೊಂದಿಗೆ ಕುಶಲ ಪ್ರಶ್ನೆಗಳಾಗಿ ಮಾತು ಪ್ರಾರಂಭವಾಗಿ ಮುಗಿಯಬೇಕಾದರೆ ತಾಸೆರಡು ತಾಸು ಕಳೆಯಿತು. ನಿಂತು ನಿಂತು ಬೇಸರವಾಗಿತ್ತು

ಚಂದ್ರಣ್ಣನಿಗೆ ಮಧ್ಯೆ ಮಧ್ಯೆ ನಗೆ; ಸಿಟಿಗೆ ಹೋಗುವ ಹೊತ್ತಿಗೆ ಸಾಯಂಕಾಲವಾದರೂ ಆದೀತು ಎಂದುಕೊಂಡು.

ಸುಮಾರು ಹನ್ನೊಂದು ಗಂಟೆಯ ಹೊತ್ತಿಗೆ ಬಸ್ ಹತ್ತಿದ್ದೂ ಆಯಿತು. ಬಸ್ಸಿನಲ್ಲಿಯೂ ರಾಯರಿಗೆ ಎಲ್ಲರೂ ಪರಿಚಿತ ವ್ಯಕ್ತಿಗಳೇ. ಬಸ್ಸಿನ ಕಂಡಕ್ಟರು, ಡ್ರೈವರು ಗಳೂ ಪರಿಚಿತರೇ. ಅವರೊಂದಿಗೂ ಸಲುಗೆಯ ಮಾತೇ. ಬಸ್ಸಿನಲ್ಲಿದ್ದವರೊಬ್ಬರು ವಿಕ್ಟೋರಿಯಾ ಆಸ್ಪತ್ರೆಗೆ ಹೊರಟಿದ್ದರು – ಯಾವುದೇ ಕಾಯಿಲೆಗಾಗಿ ಡಾಕ್ಟರನ್ನು ಕಾಣಲು. ಆ ಡಾಕ್ಟರಿಗೂ ರಾಯರಿಗೂ ತುಂಬಾ ಸ್ನೇಹವೆಂಬುದು ಅವರಿಗೆ ತಿಳಿದಿತ್ತು. 'ದಯೆಯಿಟ್ಟು ನೀವೂ ಜತೆಗೆ ಬರಬೇಕು. ಬಹಳ ಉಪಕಾರವಾಗುತ್ತದೆ' ಎಂದು ಅವರು ಅಂಗಲಾಚಿದರು. ರಾಯರದು ದಾಕ್ಷಿಣ್ಯದ ಸ್ವಭಾವ. 'ಇಲ್ಲ' ಎನ್ನುವ ಪ್ರಕೃತಿ ಯಲ್ಲ – 'ಒಂದು ಕಾಗದ ಕೊಡುತ್ತೇನೆ. ತಗೊಂಡು ಹೋಗಿ – ಅಷ್ಟು ಸಾಕು' ಎಂದು ಹೇಳಿ ಅಲ್ಲಿಯೆ ಒಂದು ಚೀಟಿ ಬರೆದು ಕೊಟ್ಟರು.

ಮೆಜೆಸ್ಟಿಕ್ ಚೌಕದಲ್ಲಿ ಬಸ್ಸು ನಿಂತಾಗ ಅಲ್ಲಿಯೂ ನಾಲ್ಕು ಜನ ಕೂಡಿ ಕೊಂಡರು. ಅವರೊಂದಿಗೆ ಕಾಫಿ. ಇವರಿಬ್ಬರೇ ಉಳಿಯುವ ಹೊತ್ತಿಗೆ ಹನ್ನೆರಡು ಗಂಟೆ ಯಾಗಿ ಹೋಗಿತ್ತು. ''ಆಯಿತಲ್ಲ ಈಗ ಬಿಡುಗಡೆಯಾಯಿತು. ನಡೆಯಿರಿ. ಎಲ್ಲಿಗಾದರೂ ಹೋಗಿ ಕೂತುಕೊಳ್ಳುವ, ಏನು ಅತಿ ಮಹತ್ವದ ವಿಷಯವೋ?'' ಎಂದರು ರಾಯರು.

''ಅಂಥ ಮಹತ್ವದ್ದೇನೂ ಅಲ್ಲ, ಆದರೂ ನನಗೆ ಆ ಬಗ್ಗೆ ಏನೂ ಹೊಳೆಯ ದಾಗಿದೆ. ಅದಕ್ಕಾಗಿ ನಿಮ್ಮನ್ನು ಕೇಳೋಣವೆಂದು ಬಂದೆ.''

ಸನಿಯದಲ್ಲೇ ಇದ್ದ 'ಪರದೇಶೀ ಪಾರ್ಕ್'ಗೆ ಹೋಗಿ ಶಿಲಾಶಾಸನವೊಂದನ್ನು ಹುಡುಕಿ ಕುಳಿತುಕೊಂಡರು. ''ಹೂಂ, ಪ್ರಾರಂಭವಾಗಲಿ ಏನು ಸುದ್ದಿ? ನಿಮಗೂ ನಿಮ್ಮ ಸ್ನೇಹಿತರಿಗೂ ಏನಾದರೂ ವ್ಯಾಜ್ಯವೋ'' ಎಂದರು ರಾಯರು.

''ಇಲ್ಲ, ವ್ಯಾಜ್ಯದ ಪ್ರಶ್ನೆಯೇ ಇಲ್ಲ, ಆದರೆ...'' ಎಂದು ಪ್ರಾರಂಭಿಸಿ ಚಂದ್ರಣ್ಣ ಪತ್ರಿಕೆ ನಿಂತುಹೋಗುವ ಸಂದರ್ಭವನ್ನು ವಿವರಿಸಿ ಅದಕ್ಕಾಗಿ ಕಂಪನಿ ಮಾಡುವ ವಿಚಾರ ಬಂದಿರುವುದನ್ನು ತಿಳಿಸಿದ. ಹಾಗೆಯೆ ತನ್ನಿಂದ ಬಿಡಿಸಲಾಗದ ಸಮಸ್ಯೆಯನ್ನು ಅವರೆದುರಿಗಿಟ್ಟ

ರಾಯರು ಒಂದೆರಡು ನಿಮಿಷ ಮೌನವಾಗಿ ಕುಳಿತು ಯೋಚಿಸುತ್ತಿದ್ದು

ಅನಂತರ – ''ಕಂಪನಿ ಮಾಡುವುದಂತೂ ನಿರ್ಧಾರ ತಾನೆ?'' ಎಂದರು.

''ಹೌದು. ಅದನ್ನು ಬಿಟ್ಟರೆ ಬೇರೆ ದಾರಿಯಿಲ್ಲ.''

''ನನಗೂ ಅದೇ ಸರಿಯೆನ್ನಿಸುತ್ತದೆ. ಆದರೂ ಒಂದು ಕೆಲಸಕ್ಕೆ ಕೈ ಹಾಕುವುದಕ್ಕೆ ಮೊದಲು ಎಲ್ಲವನ್ನು ಸರಿಯಾಗಿ ಯೋಚಿಸುವುದು ಒಳ್ಳೆಯದು. ಮುಂದೆ ಆಕಸ್ಮಾತ್ತಾಗಿ ತೊಂದರೆಗಳುದ್ಭವಿಸಬಾರದಲ್ಲ. ಕಂಪನಿ ಮಾಡುವುದು ಯಾರ ಜೊತೆಗೆ?''

''ಶಿವ ಯೋಗೀಶ್ವರ ಅಂತ ನನ್ನ ಸ್ನೇಹಿತರೊಬ್ಬರಿದ್ದಾರೆ. ಅವರೇ ಈ ವಿಚಾರ ಹೇಳಿಕೊಟ್ಟರು. ಅವರೂ ನಾನೂ ಮ್ಯಾನೇಜಿಂಗ್ ಡೈರೆಕ್ಟರರು.''

''ಸರಿಯೆ. ಹಣ ಹಾಕುವವರು ಯಾರು?''

''ಸದಾಶಿವಪ್ಪನವರು ಅಂತ ಒಬ್ಬರು ಸಾಹುಕಾರರಿದ್ದಾರೆ. ಧರ್ಮಪುರದವರು – ಸಂಗಪ್ಪ ಶೆಟ್ಟರ ಮಕ್ಕಳು. ಅವರು ಸಹಾಯ ಮಾಡುವುದಾಗಿ ಹೇಳಿದ್ದಾರಂತೆ.''

''ಅವರಿಗೂ ನಿಮಗೂ ಪರಿಚಯವೇ?''

''ಮುಖತಃ ಪರಿಚಯವಿಲ್ಲ. ಆದರೆ ನನ್ನ ವಿಷಯವೆಲ್ಲ ಅವರಿಗೆ ಚೆನ್ನಾಗಿ ಗೊತ್ತು.''

''ನಿಮ್ಮ ವಿಷಯ ಅವರಿಗೆ ಗೊತ್ತಿರಬಹುದು. ಅವರ ವಿಷಯ ನಿಮಗೆ ಗೊತ್ತಿದೆಯೆ ಎನ್ನುವುದು ಮುಖ್ಯವಾದ ಅಂಶ.''

''ಅವರು ದೊಡ್ಡ ಸಾಹುಕಾರರು, ಒಳ್ಳೆಯವರು, ಅಭಿಮಾನಿಗಳು ಎನ್ನುವುದು ಮಾತ್ರ ಗೊತ್ತು.''

''ಅಭಿಮಾನಿಗಳಿರಬಹುದು. ಆದರೆ ಒಳ್ಳೆಯವರು ಎಂದು ಯಾವುದರ ಆಧಾರದಿಂದ ಹೇಳುವಿರಿ?''

ಚಂದ್ರಣ್ಣ ನಿರುತ್ತರನಾದ. ರಾಯರೇ ಮುಂದುವರಿಸಿದರು :

''ಪ್ರಪಂಚದಲ್ಲಿರುವವರೆಲ್ಲ ಒಳ್ಳೆಯವರೇ ಎಂದು ತಿಳಿದು ಹೊರಡುವುದೇನೊ ಒಳ್ಳೆಯದೇ. ಆದರೂ ವ್ಯವಹಾರದಲ್ಲಿ ಕಾಲಿಡುವಾಗ ಕೊಂಚ ಹುಷಾರಾಗಿರುವುದು ಕ್ಷೇಮ. ಇಲ್ಲವಾದರೆ ನಾವು ಕೈಸುಟ್ಟುಕೊಳ್ಳುವೆವು. ನಾವೇ

ಕೆಟ್ಟವರಾಗುವೆವು. ಅವರು ಮಾತ್ರ ಒಳ್ಳೆಯವರಾಗಿಯೇ ಉಳಿಯುತ್ತಾರೆ. ಸಾಹುಕಾರರ ಹತ್ತಿರವಂತೂ ಬಹಳ ಹುಷಾರಾಗಿರಬೇಕು. ಅದಿರಲಿ, ನಿಮ್ಮ ಈ ನಿಜಗುಣ ಶಿವಯೋಗಿಗಳು ಎಲ್ಲಿಯವರು? ಅವರಿಗೂ ನಿಮಗೂ ಎಷ್ಟು ದಿನಗಳ ಪರಿಚಯ?''

''ಎರಡು ವರ್ಷಗಳಾಗಿರಬಹುದು. ಅವರೂ ಧರ್ಮಪುರದವರೇ.''

''ಏನು ಕೆಲಸ ಮಾಡುತ್ತಾರೆ?''

''ಕೆಲಸ?'' ಚಂದ್ರಣ್ಣನಿಗೆ ಕೂಡಲೆ ಉತ್ತರ ಕೊಡಲಾಗಲಿಲ್ಲ. ''ಕೆಲಸ? ಅಂಥ ಕೆಲಸವೇನೂ ಅವರಿಗಿದ್ದಂತೆ ಕಾಣೆ. ಇಷ್ಟು ದಿನ ಕಾಶಿಯಲ್ಲಿ ಅಭ್ಯಾಸ ಮಾಡುತ್ತಿದ್ದರು. ಈಚೆಗೆ ಊರಿಗೆ ಬಂದಿದ್ದಾರೆ. ಸುಖವಸ್ತು ಎಂದು ತೋರುತ್ತದೆ. ಊಟ ಮಾಡಿಕೊಂಡು ತಿರುಗಾಡುತ್ತಾರೆ.''

''ಊಟಕ್ಕೆ ತೊಂದರೆಯೇನೂ ಇಲ್ಲ ಎಂದಾಯಿತಲ್ಲ? ಮನೆಯಿಂದ ಹೇಗೆ? ಶ್ರೀಮಂತರೋ?''

''ಮನೆಯ ಸಂಬಂಧವೇ ಅವರಿಗಿಲ್ಲ. ಅವರು ಸನ್ಯಾಸಿಯಿದ್ದ ಹಾಗೆ. ಚಿಕ್ಕ ವಯಸ್ಸಿನಲ್ಲೇ ದೀಕ್ಷೆಯಾಗಿದೆ. ಈಗ ಅವರು ಸ್ವಾಮಿಗಳಾಗಿಗಬೇಕಾಗಿತ್ತು. ಆದರೆ ಆ ಬಂಧನದಲ್ಲಿರುವುದು ಅವರಿಗಿಷ್ಟವಿಲ್ಲವಾದ್ದರಿಂದ ಮಠಕ್ಕೆ ಹೋಗದೆ ಸ್ವತಂತ್ರ ವಾಗಿದಾರೆ.''

''ಅವರ ಮಠ ಎಲ್ಲಿದೆ?''

''ಬೆಳಗಾವಿ ಜಿಲ್ಲೆಯಲ್ಲಿ ಎಲ್ಲೋ ಇದೆಯಂತೆ. ಅವರು ಒಂದು ಸಲವೂ ಅಲ್ಲಿಗೆ ಹೋಗಿಲ್ಲ. ಅದನ್ನು ತ್ಯಜಿಸಿದಂತೇ ಆಗಿದೆ.''

''ಅಂದರೆ – ಅವರೂ ಗೃಹಸ್ಥರಾಗಬೇಕೆಂಬ ವಿಚಾರದಲ್ಲಿರುವ ಹಾಗೆ ತೋರುತ್ತದೆ?''

''ಇರಬೇಕು. ಅಂತೆಯೇ ಏನಾದರೂ ವ್ಯವಹಾರ ಮಾಡಬೇಕೆಂದು ಹೊರಟಿದ್ದಾರೆ.''

''ಕೈಯಲ್ಲಿ ಬಂಡವಾಳ ಇದೆಯೇ?''

''ಇದ್ದ ಹಾಗೆ ತೋರುವುದಿಲ್ಲ.''

''ಬೆಂಗಳೂರಿಗೆ ಬಂದಾಗ ಎಲ್ಲಿ ವಾಸ ಮಾಡುತ್ತಾರೆ?''

''ಮಠದಲ್ಲಿ''

''ಊಟ?''

''ಅಲ್ಲಿಯೆ.''

''ಬಿಟ್ಟಿ ಊಟ ಹಾಕುತ್ತಾರೆಯೆ ಮಠದಲ್ಲಿ?''

''ಮಠದ ಸ್ವಾಮಿಗಳು ಒಳ್ಳೆಯವರು. ಊಟಕ್ಕೆ ಬಂದವರಾರಿಗೂ ಬೇಡ ಅನ್ನುವವರಲ್ಲ. ಇಂಥವರು ದಿನವೂ ಇಪ್ಪತ್ತು ಜನ ಇರುತ್ತಾರೆ. ಹೇಗೋ ನಡೆಯುತ್ತದೆ.''

''ಸರಿ. ಈಗ ಎಲ್ಲವೂ ಗೊತ್ತಾಯಿತು. ನಿಮ್ಮ ಈ ನಿಜಗುಣರಿಗೆ ಸಾಹಿತ್ಯ, ಪತ್ರಿಕೋದ್ಯಮಗಳಲ್ಲಿ ಏನಾದರೂ ಅನುಭವ?''

''ಇದ್ದ ಹಾಗೆ ಕಾಣೆ. ಆದರೂ ಅವರಿಗೆ ವಾಚನಾಭಿರುಚಿ ವಿಪರೀತ. ಪತ್ರಿಕೋದ್ಯಮವನ್ನಭ್ಯಸಿಸಬೇಕೆಂಬ ಅಪೇಕ್ಷೆಯೂ ಇದೆ.''

''ಒಳ್ಳೆಯದೇ ಕಂಪನಿಗಳ ವಿಚಾರ ಏನಾದರೂ ಅನುಭವ?''

''ಇರಲಿಕ್ಕಿಲ್ಲ. ಇದೇ ಮೊದಲು ಅವರು ವ್ಯವಹಾರಕ್ಕೆ ಕೈಹಾಕುವುದು.''

''ವ್ಯವಹಾರಕ್ಕೆ ಅವರೂ ಹೊಸಬರು, ನೀವೂ ಹೊಸಬರು. ಲಿಮಿಟೆಡ್ ಕಂಪನಿ ಅಂದರೆ ಸಾಮಾನ್ಯ ವ್ಯವಹಾರವಲ್ಲ. ಅದು ಸರಿಯಾಗಿ ನಡೆಯಬೇಕಾದರೆ ತುಂಬಾ ಅನುಭವ ಬೇಕು. ನೀವಿಬ್ಬರೂ ತರುಣರೇ, ನೋಡಿ. ಕೈಸುಟ್ಟುಕೊಂಡೀರಿ. ಒಂದು ವರ್ಷ ಅದನ್ನು ಮಾಡಿ ಆಮೇಲೆ ಹೊರಬೀಳುವ ಪ್ರಸಂಗ ಬರಬಾರದು.''

''ಹಾಗೇನೂ ಆಗಲಾರದು. ಕರಾರುಪತ್ರ ಇತ್ಯಾದಿ ಎಲ್ಲವೂ ಆಗುತ್ತದೆಯಲ್ಲ?''

''ಕರಾರುಪತ್ರ ಸುಮ್ಮನೆ ನೆಪಕ್ಕೆ. ಎಲ್ಲರೂ ಡೈರೆಕ್ಟರ್ ಬೋರ್ಡಿನ ಮೇಲೆ ಅವಲಂಬಿಸಿಕೊಂಡಿದೆ. ಡೈರೆಕ್ಟರರೆಲ್ಲ ನಿಮ್ಮ ಹಾಗೆಯೆ ಒಳ್ಳೆಯವರೂ ಧ್ಯೇಯವಾದಿಗಳೂ ಆಗಿದ್ದರೆ ಎಲ್ಲವೂ ಸರಿಹೋಗುವುದು. ಇಲ್ಲವಾದರೆ ಎಲ್ಲವೂ ವಿಪರೀತವಾಗುವುದು. ಕಂಪನಿ ಮಾಡಬಾರದು ಎಂದು ನನ್ನ ಅಭಿಪ್ರಾಯವಲ್ಲ. ಅಗತ್ಯವಾಗಿ

ಮಾಡಿ. ವಾರಪತ್ರಿಕೆಯನ್ನೂ ಹೊರಡಿಸಿ. ಆದರೆ ಎಲ್ಲವೂ ಒಂದು ಭದ್ರವಾದ ತಳಹದಿಯ ಮೇಲೆ ಸ್ಥಾಪಿತವಾಗಬೇಕು. ಆದಕ್ಕಾಗಿ ಜಾಗರೂಕತೆ ಅಗತ್ಯ. ಆಯಿತು, ನಿಮ್ಮ ಪಾಲುಗಾರರಿಬ್ಬರನ್ನೂ ಕರೆಯಿಸಿ ನಾನು ಮಾತನಾಡುತ್ತೇನೆ. ಅವರ ಅಭಿಪ್ರಾಯ ವೇನೆಂಬುದನ್ನು ತಿಳಿದುಕೊಂಡು ನಿಮಗೆ ತಿಳಿಸುತ್ತೇನೆ,'' ಎಂದು ನುಡಿದು ರಾಯರು ಮೇಲಕ್ಕೆದ್ದರು.

''ಅಂತೂ ಅವರಿಗೆ ನೋವಾಗದಂತೆ ಪ್ರಸಂಗ ಬಗೆಹರಿಸಬೇಕು,'' ಎಂದ ಚಂದ್ರಣ್ಣ.

''ಆ ಬಗ್ಗೆ ನಿಮಗೆ ಚಿಂತೆ ಬೇಡ. ನಾಡಿದ್ದು ಮನೆಯ ಹತ್ತಿರ ಬನ್ನಿ, ತಿಳಿಸುತ್ತೇನೆ.''

''ನಾನು ಬಂದಾಗ ನೀವು ಸಿಕ್ಕಿದರೆ ನನ್ನ ಪೂರ್ವಜನ್ಮದ ಪುಣ್ಯ,'' ಎಂದು ಚಂದ್ರಣ್ಣ ನಗತೊಡಗಿದ.

ರಾಯರೂ ನಗುತ್ತ – ''ಮನೆಯಲ್ಲಿ ಸಿಗದಿದ್ದರೂ ಅಲ್ಲೇ ಎಲ್ಲಿಯಾದರೂ ರಸ್ತೆಯ ಮೇಲೆ ಸಿಗುತ್ತೇನಲ್ಲ – ಇವೊತ್ತು ಸಿಕ್ಕ ಹಾಗೆ!'' ಎಂದರು.

## ೫

ಚಂದ್ರಣ್ಣನ ಹತ್ತಿರ ಹೇಳಿದ ಹಾಗೆ ರಾಯರು ಒಂದು ದಿನದಲ್ಲಿಯೆ ಆತನ ಕೆಲಸವನ್ನು ಮುಗಿಸಿಬಿಟ್ಟಿದ್ದರು. ಮತ್ತೆ ಆತನ ಭೆಟ್ಟಿಯಾದಾಗ ತಮಗೂ, ರಾಜಣ್ಣ ಗುಬ್ಬಣ್ಣರಿಗೂ ನಡೆದ ಮಾತುಕತೆಗಳನ್ನೆಲ್ಲ ವಿವರಿಸಿ – ''ಕ್ರಾಂತಿಯ ಕೈಬಿಡುವ ಮನಸ್ಸು ಅವರಿಗಿಲ್ಲ, ಆದರೂ ನೀವು ಕಂಪನಿ ಮಾಡಲು ಹೊರಟಾಗ ಬೇಡ ಎಂದು ಹೇಳಲು ಅವರಿಗೆ ಬಾಯಿ ಬರುವಂತಿಲ್ಲ. ಈಗ ಕ್ರಾಂತಿಗಾಗಿ ಮಾಡಿದ ಒಂದೂವರೆ ಸಾವಿರ ರೂಪಾಯಿಯ ಸಾಲದ ಪ್ರಶ್ನೆ ಬರುತ್ತದೆ. ಅದನ್ನು ಬಗೆಹರಿಸಿ ಕ್ರಾಂತಿಯನ್ನು ನಿಮ್ಮ ಹೆಸರಿಗೆ ಬರೆದುಕೊಡಬಹುದು–ಅಲ್ಲವೆ?'' ಎಂದರು.

ಚಂದ್ರಣ್ಣ ಮೌನವಾಗಿ ಕತ್ತು ಕೊಡಹಿದ.

''ಈ ಸಾಲ ಹೇಗೆ ಬಗೆಹರಿಸಬೇಕೆನ್ನುತ್ತೀರಿ?''

''ಸದ್ಯಕ್ಕಂತೂ ನನ್ನ ಹತ್ತಿರ ಹಣವಿಲ್ಲವೆನ್ನುವುದು ನಿಮಗೂ ಗೊತ್ತು. ಅವರಿಗೂ ಗೊತ್ತು. ಎರಡು ಮೂರು ವರ್ಷ ಅವಧಿ ಕೊಟ್ಟರೆ, ಅಷ್ಟರಲ್ಲಿ ಕಂಪನಿಯಿಂದ ಲಾಭ ಬಂದರೆ ನಾನು ಅದನ್ನು ತೀರಿಸಬಹುದು.''

''ಕಂಪನಿಯಿಂದ ಅಷ್ಟು ಬೇಗ ಲಾಭ ಬಂದೀತು ಎಂಬ ಭರವಸೆಯೇನು? ಕೆಲಸಕ್ಕಾರಂಭವಾಗಿ ಆರೇಳು ವರ್ಷ ಕಳೆದ ಮೇಲೆ ಲಾಭದ ಮುಖ ಕಾಣಬಹುದು. ಅದುವರೆಗೆ ಸಾಲ ಕೊಟ್ಟವರು ಹಾಗೇ ಕುಳಿತಿರಬೇಕೇನು?''

''ಹಾಗಾದರೆ ಏನು ಮಾಡಬೇಕೆನ್ನುತ್ತೀರಿ? ಪತ್ರಿಕೆಯನ್ನಂತೂ ನಿಲ್ಲಿಸಕೂಡದು. ಕಂಪನಿಯನ್ನೂ ಮಾಡಬೇಕು...''

''ಹಾಗಾದರೆ ಹೀಗೆ ಮಾಡಿ. ಸಾಲವಾಗಿರುವುದು ಒಂದೂವರೆ ಸಾವಿರ. ನಿಮಗಾಗಿಯೆ ಅವರು ಪತ್ರಿಕೆ ಹೊರಡಿಸಲು ಸಿದ್ಧರಾದರು. ಸಾಲವಾದದ್ದು ಪತ್ರಿಕೆಗಾಗಿ. ಮುಖ್ಯವಾಗಿ ಸಾಲದ ಹೊಣೆ ನಿಮ್ಮ ಮೇಲೇ ಬರುತ್ತದೆ. ಆದರೂ ಅವರಿಬ್ಬರದೂ ಕೊಂಚ ಹೊಣೆಯಿದೆಯಾದ್ದರಿಂದ ಎಲ್ಲ ಸಾಲವನ್ನು ನಿಮ್ಮ ಮೇಲೇ ಹಾಕಲು ಬರುವುದಿಲ್ಲ. ಅವರೂ ಸ್ವಲ್ಪ ಭಾರ ವಹಿಸಬೇಕು. ಒಂದು ಸಾವಿರದ ಹೊಣೆ ನಿಮಗಿರಲಿ. ಮಿಕ್ಕುದನ್ನು ಅವರಿಬ್ಬರೂ ನೋಡಿಕೊಳ್ಳಲಿ ಆಯಿತೇ?''

''ನೀವು ಹೇಳಿದ ಹಾಗೆ...''

''ಆ ಒಂದು ಸಾವಿರ ನೀವು ನಗದು ಕೊಡುವ ಹಾಗಿಲ್ಲ, ಅದರ ಬದಲು ಏನಾದರೂ ಆಸ್ತಿಗೀಸ್ತಿ ಬರೆದುಕೊಡಬಹುದು. ಊರಲ್ಲಿ ಏನಾದರೂ ಜಮೀನು ಇತ್ಯಾದಿ ಇಲ್ಲವೋ?''

''ನಿಮಗೆ ತಿಳಿಯದಿರುವುದೇನಿದೆ? ನನ್ನದೆನ್ನುವ ಆಸ್ತಿಯೇನೂ ಇಲ್ಲ - ನನ್ನೊಬ್ಬನನ್ನು ಬಿಟ್ಟು!''

''ಸರಿ ಕೇವಲ ಜಮೀನು ಮಾತ್ರವೆ ಆಸ್ತಿಯಲ್ಲ, ನಿಮ್ಮವು ಮೂರು ಪುಸ್ತಕ ಪ್ರಕಟವಾಗಿವೆ. ಅವೂ ಸಹ ಆಸ್ತಿಯಿದ್ದ ಹಾಗೇ!''

''ಅದೆಂಥ ಆಸ್ತಿ ರಾಯರೆ! ಇದುವರೆಗೆ ಈ ವಿಚಾರವೇ ಹೊಳೆದಿರಲಿಲ್ಲ ನನಗೆ.''

"ನಿಮಗೆ ಹೊಳೆಯಲಿಲ್ಲವೆಂತಲೇ ನೀವು ನನ್ನೆದುರಿಗೆ ಈ ಸಮಸ್ಯೆಯನ್ನಿಟ್ಟದ್ದು ತಾನೇ? ನನಗೂ ಹೊಳೆಯದಿದ್ದರೆ ಹೇಗೆ? ಈಗ ಒಂದೇ ಒಂದು ಉಪಾಯವಿದೆ. ನಿಮ್ಮ ಆ ಮೂರು ಪುಸ್ತಕಗಳ ಕಾಪಿರೈಟ್ ಅವರಿಗೆ ಬರೆದುಕೊಟ್ಟು ಬಿಡಬೇಕು - ಸಾವಿರ ರೂಪಾಯಿಗಳಿಗೆ ಪ್ರತಿಯಾಗಿ - ಅವರು ಕ್ರಾಂತಿಯನ್ನು ನಿಮ್ಮ ಹೆಸರಿಗೆ ಬರೆದುಕೊಡುವರು. ನೀವು ಅದನ್ನು ಕಂಪನಿಗೆ ಬರೆದುಕೊಡಬಹುದು. ಒಂದು ದಾರಿ ಸಿಕ್ಕಿತಷ್ಟೆ?"

"ಅಂದರೆ - ಮುಂದಿನ ಎಲ್ಲ ಆವೃತ್ತಿಗಳನ್ನು ಅಚ್ಚುಹಾಕಿಸುವ ಅಧಿಕಾರವನ್ನು ಅವರಿಗೆ ಬಿಟ್ಟುಕೊಟ್ಟ ಹಾಗೆ ತಾನೆ?"

"ಹೌದು. ಇದೊಂದೇ ದಾರಿಯಿದೆ. ಅವರ ಹತ್ತಿರವೂ ಇದೆಲ್ಲವನ್ನು ನಾನು ಹೇಳಿದ್ದೇನೆ. ನೀವು ಹೇಳಿದಂತೆ ಆಗಲಿ ಎಂದು ಹೇಳಿದ್ದಾರೆ. ಈಗ ನೀವು ಆಲೋಚನೆ ಮಾಡಿ ತಿಳಿಸಬೇಕು."

"ಇದರಲ್ಲಿ ಆಲೋಚನೆ ಏನು ಬಂತು? ನಿಮ್ಮ ಮಾತಿಗೆ ನನ್ನ ಒಪ್ಪಿಗೆಯಿದೆ."

"ದುಡುಕಬೇಡಿ. ಶಾಂತವಾಗಿ ಆಲೋಚನೆ ಮಾಡಿ ಮೂರು ದಿನ ಬಿಟ್ಟು ತಿಳಿಸಿರಿ," ಎಂದರು ರಾಯರು.

ಶಿವಯೋಗಿಯ ಎದುರಿಗೆ ಈ ವಿಷಯವನ್ನೆಲ್ಲ ತಿಳಿಸಿದಾಗ ಆತ ಕಾಪಿರೈಟ್ ಬಿಟ್ಟುಕೊಡುವುದಕ್ಕೆ ಒಮ್ಮೆಲೆ ಒಪ್ಪಲಿಲ್ಲ. "ಮೂರು ಪುಸ್ತಕಗಳ ಸರ್ವಾಧಿಕಾರ ಬಿಟ್ಟು ಕೊಡುವುದೆಂದರೆ ಸಾಮಾನ್ಯ ವಿಷಯವಲ್ಲ. ಒಂದೊಂದು ಪುಸ್ತಕಕ್ಕೇ ಒಂದೊಂದು ಸಾವಿರ ರೂಪಾಯಿ ಬೆಲೆ ಬಂದೀತು. ಇಂದೇನೋ ನೀವು ಒಬ್ಬರೇ ಇದ್ದೀರಿ. ಹೆಂಡಿರು ಮಕ್ಕಳಾರೂ ಇಲ್ಲ. ಇಂದು ಇಲ್ಲವಾದರೆ ನಾಳೆಯೂ ಹೀಗೇ ಇರಲಾದೀತೇ? ಇನ್ನೂ ಮದುವೆಯಾಗತಕ್ಕವರು, ಸಂಸಾರ ಕಟ್ಟಿಕೊಳ್ಳುವವರು. ಜಮೀನುಗಿಮೀನಂತೂ ಇಲ್ಲ. ನಿಮ್ಮವರಿಗೆ ಆಧಾರವಾಗಿ ಈ ಪುಸ್ತಕಗಳಾದರೂ ಉಳಿಯಲಿ. ಕಾಪಿರೈಟ್ ಬರೆದುಕೊಡುವ ವಿಷಯ ನನಗೇಕೋ ಮನಸ್ಸಿಗೆ ಬರುವುದಿಲ್ಲ. ಅದಕ್ಕೆ ಬದಲು ಸಾಲದ ಪತ್ರ ಬರೆದು ಕೊಡುವುದೇ ಮೇಲು ಎಂದು ನನಗನ್ನಿಸುತ್ತದೆ," ಎಂದ.

"ಅದಕ್ಕವರು ಒಪ್ಪಬೇಕಲ್ಲ?"

"ರಾಯರು ಮನಸ್ಸು ಮಾಡಿದರೆ ಒಪ್ಪಿಸಿಯಾರು. ಏನೂ ಆಧಾರವಿಲ್ಲದೆ ಬರೆಸಿಕೊಳ್ಳಲು ಒಪ್ಪದಿದ್ದರೆ ಈ ಪುಸ್ತಕಗಳನ್ನೇ ಆಧಾರವಾಗಿಟ್ಟು ಬರೆಯಿಸಿಕೊಳ್ಳಲಿ,

ಎಂಟು ಹತ್ತು ವರ್ಷ ಅವಧಿ ಹಾಕಿ. ಅಷ್ಟರೊಳಗಾಗಿ ಹಣ ಮುಟ್ಟದೆ ಹೋದರೆ ಪುಸ್ತಕಗಳ ಅಧಿಕಾರವೆಲ್ಲ ಅವರಿಗೇ ಎಂದು ಬರೆಯಿಸಬಹುದು ಬೇಕಾದರೆ...''

''ಏನೋ. ಈ ವ್ಯವಹಾರದ ವಿಷಯದಲ್ಲಿ ನನಗೆ ಬುದ್ಧಿ ಓಡುವುದಿಲ್ಲ. ರಾಯರಲ್ಲಿ ನನಗೆ ಪೂರಾ ನಂಬಿಕೆಯಿದೆ. ಅವರು ನನಗೆ ಗುರುಗಳಿದ್ದ ಹಾಗೆ. ನನ್ನ ಹಿತಕ್ಕೆ ವಿರುದ್ಧವಾಗಿ ಅವರೇನನ್ನೂ ಮಾಡಲಾರರು. ಈ ಪ್ರಶ್ನೆಯನ್ನು ಅವರೆದುರಿಗೆ ಇಟ್ಟದ್ದಂತೂ ಆಗಿದೆ – ಈಗ ಅವರು ಹೇಳಿದ್ದಕ್ಕೆ ಒಪ್ಪುವುದು ನನ್ನ ಕರ್ತವ್ಯ.''

ಆತ ಒಪ್ಪಿಕೊಂಡದ್ದೂ ಆಯಿತು. ನಾಲ್ಕೈದು ದಿನಗಳಲ್ಲಿ ಆ ಬಗೆಗೆ ಕಾಗದ ಪತ್ರಗಳೂ ಆಗಿ ಹೋದುವು. 'ಕ್ರಾಂತಿ' ಚಂದ್ರಣ್ಣನ ಹೆಸರಿಗೆ ಬಂದಿತು ಚಂದ್ರಣ್ಣನ ಮೂರು ಪುಸ್ತಕಗಳ ಅಧಿಕಾರ ರಾಜಣ್ಣ ಗುಬ್ಬಣ್ಣರಿಗೆ ಹೋಯಿತು. ಪ್ರಸಂಗ ಕೊನೆಗೊಂಡಿತಾದರೂ ಚಂದ್ರಣ್ಣ ಬಯಸುತ್ತಿದ್ದ ಸೌಹಾರ್ದತೆ ಮಾತ್ರ ಉಳಿಯಲಿಲ್ಲ. ಕಾಗದಗಳಿಗೆ ಸಹಿ ಬೀಳುವಾಗ ಮೂವರ ಮುಖಗಳೂ ಮಲಿನವಾಗಿದ್ದುವು. ಮೊದಲಿನ ಆತ್ಮೀಯತೆಯ ಮೇಲೆ ಅಡ್ಡಪರದೆಯೊಂದು ಬಿದ್ದ ಹಾಗಿತ್ತು. ಏಕತ್ರ ಕುಟುಂಬದಿಂದ ಒಡೆದು ಪಾಲು ಮಾಡಿಕೊಂಡು ಬೇರೆ ಸಂಸಾರ ಹೂಡುವ ಸಹೋದರರಂತೆ ಅವರ ಸ್ಥಿತಿಯಾಗಿತ್ತು.

ಆ ದಿನ ರಾತ್ರಿ ಚಂದ್ರಣ್ಣ ಊಟಕ್ಕೆ ಹೋಗಲಿಲ್ಲ.

ಹನ್ನೊಂದು ಗಂಟೆಯವರೆಗೂ ಪರದೇಶಿ ಪಾರ್ಕಿನಲ್ಲಿ ಆತ ಏಕಾಕಿಯಾಗಿ ಕುಳಿತಿದ್ದ. ಕೃಷ್ಣಪಕ್ಷದ ರಾತ್ರಿ. ಆಕಾಶದಲ್ಲಿ ಅಲ್ಲಲ್ಲಿ ಹಲವು ಕಪ್ಪು ಮೋಡಗಳು ಕಾಣಿಸುತ್ತಿದ್ದುವು. ಮುಗಿಲು ಉದಾಸೀನವಾಗಿತ್ತು. ತೋಟದಲ್ಲಿನ ಗಿಡ ಮರ ಬಳ್ಳಿಗಳೆಲ್ಲ ಮೂಕರೋದನ ಮಾಡುತ್ತಿದ್ದ ಹಾಗೆ ಭಾಸವಾಗುತ್ತಿತ್ತು ಚಂದ್ರಣ್ಣನಿಗೆ. ಪತ್ರಿಕೆಯನ್ನುಳಿಸಬೇಕೆಂದು ತಾನು ಮಾಡಿದ ಪ್ರಯತ್ನದಿಂದಾಗಿ ತನಗೆ ಸೋದರ ಸಮಾನರಾಗಿದ್ದ ಇಬ್ಬರು ಗೆಳೆಯರಿಂದ ದೂರವಾಗಬೇಕಾಯಿತೇ ಎಂದು ಆತ ಮರುಗುತ್ತಿದ್ದ. ತನ್ನ ತಂದೆತಾಯಿಗಳು ತೀರಿಕೊಂಡಾಗ ಸಹ ಆತನಿಗೆ ಇಷ್ಟು ವ್ಯಥೆಯಾಗಿರಲಿಲ್ಲ.

ರಾಜಣ್ಣನ ಧೀರೋದಾತ್ತ ಸ್ವಭಾವ! ಎಂಥ ತ್ಯಾಗಿ ಆತ. ತನ್ನ ಬಗೆಗೆ ಎಂಥ ಅಕೃತ್ರಿಮ ಅಭಿಮಾನ. 'ಉದಯ'ವನ್ನು ಬಿಟ್ಟು ತಾನು ಊರಿಗೆ ಹೊರಟುನಿಂತಾಗ ರಾಜಣ್ಣನ ಮತ್ತು ಗುಬ್ಬಣ್ಣನ ಒತ್ತಾಯಪೂರ್ವಕ ಪ್ರೀತಿಯೆ ತನ್ನನ್ನು ಇಲ್ಲಿ ನಿಲ್ಲಿಸುತ್ತಿತ್ತು. ಮೂರು ವರ್ಷಗಳ ಕಾಲ ಹಗಲಿರುಳು ಕಷ್ಟಪಟ್ಟು ದುಡಿದು ಬೆಳೆಯಿಸಿದ ಪತ್ರಿಕೆಯನ್ನು

ಒಮ್ಮಿಂದೊಮ್ಮಲೆ ಬಿಟ್ಟು ಹೊರಡಬೇಕಾದ ಪ್ರಸಂಗ ಬಂದುದರಿಂದ ಆಗ ತನ್ನ ಮನಸ್ಸು ಕಹಿಯಾಗಿ ಹೋಗಿತ್ತು. ಪ್ರಪಂಚದ ಕಪಟ, ಮೋಸ, ಡಾಂಭಿಕತನಗಳ ಅನುಭವ ಬಂದುದರಿಂದ ತನಗೆ ಎಲ್ಲದರ ಬಗೆಗೂ ಜಿಗುಪ್ಸೆ ಬಂದುಬಿಟ್ಟಿತ್ತು. ಜನಜಂಗುಳಿ ಯಿಂದ ದೂರ ಎಲ್ಲಿಗಾದರೂ ಹೊರಟು ಹೋಗಬೇಕೆಂದು ಮನಸ್ಸಿನಲ್ಲಿ ಬಂದಿತ್ತು. ಶಿವಯೋಗಮಂದಿರದಂಥ ಸಂಸ್ಥೆಗೆ ಸೇರಿಕೊಂಡು ಜೀವನವನ್ನೆಲ್ಲ ವ್ಯಾಸಂಗದಲ್ಲಿ ಕಳೆಯಬೇಕೆಂದೂ ತಾನು ಯೋಚಿಸಿಕೊಂಡಿದ್ದ ಆ ಸಮಯದಲ್ಲಿ ತನ್ನ ವಿವೇಕದ ತೂಕ ತಪ್ಪದಂತೆ ನೋಡಿಕೊಂಡು ಪಲಾಯನವಾದಕ್ಕೆ ಅಂಟಿಕೊಳ್ಳುವುದರಲ್ಲಿದ್ದ ತನ್ನನ್ನು ತಡೆದು ನಿಲ್ಲಿಸಿದ್ದು ಅವರ ಸ್ನೇಹ. "ಉದಯ ಹೋದರೆ ಹೋಯಿತು. ಬೇರೊಂದು ಪತ್ರಿಕೆ ಹೊರಡಿಸೋಣ. ಅದಕ್ಕಿಂತಲೂ ಚೆನ್ನಾಗಿ ಮಾಡಿಸೋಣ" ಎಂದು ಅವರು ಹುರಿದುಂಬಿಸಿದ್ದರು. ಹೊಸಪತ್ರಿಕೆ ಹೊರಡಿಸಬೇಕಾದರೆ ಆಗ ಸರಕಾರದ ವಿಶೇಷ ಅಪ್ಪಣೆ ಬೇಕಾಗುತ್ತಿತ್ತು. ಆರು ತಿಂಗಳುಗಳ ಕಾಲ ಗುಬ್ಬಣ್ಣ ಸರಕಾರೀ ಕಛೇರಿಗಳನ್ನು ಸುತ್ತಿ, ಅಧಿಕಾರಿಗಳನೇಕರಿಗೆ ಸಲಾಮು ಹೊಡೆದು, ಮಂತ್ರಿಗಳಿಗೆ ದಮ್ಮಯ್ಯ ಗುಡ್ಡೆ ಹಾಕಿ ಅಪ್ಪಣೆ ಚೀಟಿಯನ್ನು ದೊರಕಿಸಿ ತಂದಿದ್ದ. ಪತ್ರಿಕೆಯನ್ನು ಹೊರಡಿಸುವುದರಲ್ಲಿ ಅವರಿಬ್ಬರಿಗೂ ಯಾವ ಸ್ವಾರ್ಥವೂ ಇರಲಿಲ್ಲ. ಪತ್ರಿಕೆಯಲ್ಲಿ ಅವರ ಹೆಸರು ಸಹ ಬರುತ್ತಿರಲಿಲ್ಲ. ಆದರೂ ಅವರು ಆತ್ಮೀಯತೆಯಿಂದ ಪತ್ರಿಕೆಯ ಕೆಲಸ ಮಾಡುತ್ತಿದ್ದರು. ದಿನವೂ ಸಾಯಂಕಾಲ ಎರಡು ಗಂಟೆಗಳ ಕಾಲ ಅದಕ್ಕಾಗಿ ವಿನಿಯೋಗಿಸುತ್ತಿದ್ದರು. ಅದರಿಂದಾಗಿ ಅವರ ಕಾಲೇಜು ವ್ಯಾಸಂಗಕ್ಕೂ ತೊಂದರೆಯಾಗುತ್ತಿತ್ತು. ಅವರು ಅದನ್ನೂ ಗಮನಿಸುತ್ತಿರಲಿಲ್ಲ.

ಯಾರ ನಿಸ್ವಾರ್ಥ ದುಡಿತದಿಂದ ಪತ್ರಿಕೆ ಬೆಳೆಯಿತೋ, ಅವರನ್ನು ಬಿಟ್ಟು ಬೇರೆಯಾಗಬೇಕಾದ ಈ ಸಂದರ್ಭ! ಆ ಅಕೃತ್ರಿಮ ಬಾಂಧವ್ಯದ ಹಾಲಿಗೂ ಹುಳಿ ಬಿದ್ದಂತಾಯಿತು. ಅಂಥ ಸ್ನೇಹ ಅಪರೂಪ ಈ ಪ್ರಪಂಚದಲ್ಲಿ!

ಚಂದ್ರಣ್ಣನ ಹೃದಯ ಭಾರವಾಗಿತ್ತು. ಅವನಿಗರಿಯದಂತೆಯೆ ಅವನ ಕಣ್ಣುಗಳಲ್ಲಿ ನೀರು ತುಂಬಿ ಬಂದಿತ್ತು.

# ೬

ಶಿವಯೋಗಿ ನಿಧಾನವಾಗಿ ಮೆಟ್ಟಲುಗಳನ್ನಿಳಿದು ಬರುತ್ತಿದ್ದ.

ಶಿಲಾಶಾಸನದ ಮೇಲೆ ತಲೆ ಬಾಗಿಸಿಕೊಂಡು ಕುಳಿತಿದ್ದ ಚಂದ್ರಣ್ಣ ತಲೆಯೆತ್ತಿ ನೋಡಿದ.

ಶಿವಯೋಗಿಯ ಉಡುಗೆಯಲ್ಲಿ ಪೂರ್ಣ ಮಾರ್ಪಾಟಾದುದು ಕಂಡು ಬಂದಿತು. ಮೊದಲು ಮೊದಲು ಚಂದ್ರಣ್ಣನಿಗೆ ಆತನ ಗುರುತೇ ಆಗಲಿಲ್ಲ.

ಎರಡು ದಿನಗಳ ಕೆಳಗೆ ಹರಿದ ಜುಬ್ಬವೊಂದನ್ನು ತೊಟ್ಟು ಸಾದಾ ಲುಂಗಿಯೊಂದನ್ನು ಸುತ್ತಿಕೊಂಡಿದ್ದ ಶಿವಯೋಗಿ ಇಂದು ಹೊಸ ಖಾದಿಯ ಬಟ್ಟೆಗಳನ್ನು ಧರಿಸಿದ್ದ. ಬಿಳಿಯ ಜುಬ್ಬದ ಮೇಲೆ ನೆಹರೂ ಜಾಕೆಟ್ಟು! ಬಂಗಾಲೀ ರೀತಿಯಲ್ಲಿ ಉಟ್ಟ ಖಾದಿಯ ಪಂಚೆ. ತಲೆಯ ಮೇಲೆ ಗಾಂಧಿ ಟೋಪಿ. ದುಂಡಗೆ ತುಂಬಿಕೊಂಡ ಆತನ ಮುಖದ ಮೇಲೆ ಪ್ರಸನ್ನತೆಯ ಮೃದುಹಾಸ್ಯವೂ ಮೂಡಿತ್ತು. ಕಣ್ಣುಗಳಲ್ಲಿ ರಸಿಕತನದ ಕಳೆ ಹೊಳೆಯುತ್ತಿತ್ತು.

''ಅಂತೂ ಭೆಟ್ಟಿಯಾದಿರಲ್ಲ, ನೀವು ಎಲ್ಲಿ ಮಾಯವಾದಿರೋ ಎಂದು ದಿಗಿಲಾಗಿತ್ತು ನನಗೆ'' ಎನ್ನುತ್ತ ಶಿವಯೋಗಿ ಚಂದ್ರಣ್ಣನ ಹತ್ತಿರ ಬಂದು ಕುಳಿತುಕೊಂಡ.

''ಎಲ್ಲವೂ ಮುಗಿಯಿತಷ್ಟೆ?''

''ಮುಗಿಯಿತು.''

''ಕಾಗದಪತ್ರಗಳಿಗೆ ಸಹಿ ಬಿತ್ತೇ?''

ಜೇಬಿನಲ್ಲಿದ್ದ ಕಾಗದವೊಂದನ್ನು ತೆಗೆದು ಚಂದ್ರಣ್ಣ ಆತನ ಕೈಗಿತ್ತ.

ಶಿವಯೋಗಿ ಆ ಕಾಗದವನ್ನು ಓದಿನೋಡುತ್ತ – ''ಸರಿ. ಅಂತೂ ಒಂದು ಪ್ರಕರಣ ಬಗೆಹರಿಯಿತು. ಇನ್ನು ನಮ್ಮ ಕೆಲಸಕ್ಕಾರಂಭಿಸೋಣ – ಮೊನ್ನೆ ಸದಾಶಿವಪ್ಪನವರನ್ನು ನೋಡಲಾಗಲಿಲ್ಲ. ಇಂದು ಮಧ್ಯಾಹ್ನ ನಾಲ್ಕು ಗಂಟೆಗೆ ಬರಹೇಳಿದ್ದಾರೆ. ಹೋಗಿ ಕಂಪನಿಯ ವಿಚಾರವನ್ನೆಲ್ಲ ನಿರ್ಧರಿಸಿಬಿಡೋಣ–'' ಎಂದ.

ಚಂದ್ರಣ್ಣ ಮಾತನಾಡಲಿಲ್ಲ. ಸಮ್ಮತಿಯನ್ನು ಸೂಚಿಸಲು ಸುಮ್ಮನೆ ಹೂಂಗುಟ್ಟಿದ.

''ಮೊನ್ನೆ ಆ ಜರತಾರೀ ಪೀಠದ ಅಧಿಕಾರಕ್ಕೆ ಬಂದರಲ್ಲ - ಅವರು. ನಿಮಗೂ ಅವರ ಪರಿಚಯವಿರಬೇಕು.''

''ಹೌದು. ಒಮ್ಮೆ ನೋಡಿದ್ದೇನೆ.''

''ಸ್ವಾಮಿಗಳು ಮೊದಲಿನಿಂದಲೂ ಸಾಹಿತ್ಯ ಪ್ರೇಮಿಗಳು. ನಿಮ್ಮ ಬಗ್ಗೆ ಅವರಿಗೂ ಬಹಳ ಅಭಿಮಾನವುಂಟು. ನಿಮ್ಮ ಕೈಯಲ್ಲೊಂದು ವಾರಪತ್ರಿಕೆಯಿದ್ದರೆ ಒಳ್ಳೆಯದೆಂದು ಅವರಿಗೂ ಅನ್ನಿಸುತ್ತದೆ.''

''ನಿಮಗೂ ಅವರಿಗೂ ಚೆನ್ನಾಗಿ ಪರಿಚಯವೇನು?''

''ಹೌದು. ರಾಶಿಯಲ್ಲಿ ನಾವು ಅವರು ಕೂಡಿಯೆ ವ್ಯಾಸಂಗ ಮಾಡಿದವರು. ಇಬ್ಬರೂ ಅಣ್ಣತಮ್ಮಂದಿರ ಹಾಗಿದ್ದೆವು. ಮೊನ್ನೆ ಅಕಸ್ಮಾತ್ತಾಗಿ ಬೆಂಗಳೂರಿಗೆ ಬಂದಿದ್ದರು. ಕಂಡು ಎಲ್ಲವನ್ನೂ ಹೇಳಿದೆ. ಸಹಾಯ ಮಾಡುವುದಾಗಿ ಒಪ್ಪಿಕೊಂಡಿದ್ದೂ ಅಲ್ಲದೆ ತಕ್ಷಣ ಅರ್ಧ ಹಣವನ್ನೂ ಕೊಟ್ಟುಬಿಟ್ಟರು. ತಮ್ಮ ಒಬ್ಬಿಬ್ಬರು ಶಿಷ್ಯರಿಗೂ ಶೇರು ಕೊಳ್ಳಲು ಹೇಳಿದ್ದಾರೆ. ಅವರೂ ಕೊಳ್ಳುತ್ತಾರೆ.''

''ಹಣ ಕೊಟ್ಟರೆ? ಎಷ್ಟು?''

''ಎರಡು ಸಾವಿರ ಕೊಟ್ಟಿದ್ದಾರೆ. ಪ್ರಾರಂಭದ ಖರ್ಚುಗಳಿಗೆ ಬೇಕಲ್ಲವೆ? ಅದಕ್ಕಾಗಿಯೆ ತೆಗೆದುಕೊಂಡಿದ್ದೇನೆ.''

''ಸರಿ ಕಂಪನಿಯ ಕೆಲಸಕ್ಕಾರಂಭವಾದ ಹಾಗೇ ಆಯಿತು. ನೀವಂತೂ ಸ್ವಾಮಿಗಳ ಬಳಗದವರೇ. ಕರ್ನಾಟಕದ ಸ್ವಾಮಿಗಳನ್ನೆಲ್ಲ ಕಂಪನಿಯ ಶೇರ್ ಹೋಲ್ಡರನ್ನಾಗಿ ಮಾಡಬಹುದೋ ಏನೊ?''

''ಅಂಥ ಶ್ರೀಮಂತ ಸ್ವಾಮಿಗಳು ಹೆಚ್ಚು ಜನರಿಲ್ಲ ನಮ್ಮಲ್ಲಿ. ಆದರೂ ಕೆಲವರು ಉಳ್ಳವರು ಖಂಡಿತ ಸಹಾಯ ಮಾಡುವರು. ಹಾಗೇ ಕಾಂಗ್ರೆಸ್ ಮುಖಂಡರು. ಧರ್ಮಪುರ ಬೆಳೆಯುತ್ತಿರುವ ನಗರ. ಈಗಾಗಲೇ ಅಲ್ಲಿ ಏಳೆಂಟು ಲಿಮಿಟೆಟ್ ಕಂಪನಿಗಳಿವೆ. ಎರಡು ದೊಡ್ಡ ಗಿರಣಿಗಳಿವೆ. ಇನ್ನೂ ಎರಡು ಪ್ರಾರಂಭವಾಗಲಿವೆ. ಹೈಸ್ಕೂಲುಗಳಿವೆ, ಕಾಲೇಜಿದೆ, ಸುಶಿಕ್ಷಿತ ಜನರಿದ್ದಾರೆ. ಊರು ಕರ್ನಾಟಕದ ಕೇಂದ್ರ ಸ್ಥಳದಲ್ಲಿದೆ. ವ್ಯಾಪಾರ ವ್ಯವಹಾರದಲ್ಲಿ ಬಹಳ ಮುಂದುವರಿದಿದೆ. ಶ್ರೀಮಂತರೂ ಸಾಕಷ್ಟು ಜನರಿದ್ದಾರೆ. ಏಳೆಂಟು ವರ್ಷಗಳಲ್ಲಿಯೆ ಪಟ್ಟಣ ದೊಡ್ಡದಾಗಿ ಬೆಳೆಯುವ ಲಕ್ಷಣಗಳಿವೆ. ವಾರಪತ್ರಿಕೆಯೊಂದನ್ನು ಹೊರಡಿಸಲು, ಪ್ರೆಸ್ ಹಾಕಲು ಉತ್ತಮವಾದ ಸ್ಥಳ

ಆದು. ಜಾಬ್ ವರ್ಕ್ಸ್ ಸಹ ಸಾಕಷ್ಟು ಸಿಗುತ್ತವೆ. ಪ್ರೆಸ್ಸಿಗೂ ಲಾಭವುಂಟು. ಪತ್ರಿಕೆಗೂ ಉಂಟು. ನಾವು ಖಂಡಿತವಾಗಿಯೂ ಅಲ್ಲಿ ಯಶಸ್ವಿಯಾಗುವೆವು. ಅಲ್ಲಿನ ಕಾಂಗ್ರೆಸ್ ಮುಖಂಡರಂತೂ ನಮ್ಮ ದಾರಿಯನ್ನೇ ಕಾಯುತ್ತಿದ್ದಾರೆ. ಅವರಿಗೊಂದು ಪತ್ರಿಕೆ ತೀರ ಆಗತ್ಯವಾಗಿದೆ.''

''ಅದೇನು ಅಂಥ ಅಗತ್ಯ?''

''ಇನ್ನೇನೂ ಇಲ್ಲ. ತಮ್ಮದಾದ ಪತ್ರಿಕೆಯೊಂದು ಇದ್ದರೆ ಎಲ್ಲರಿಗೂ ಉಪಯೋಗವಾಗುವುದೆಂದು ಅವರ ಅಭಿಪ್ರಾಯ. ಕಾಂಗ್ರೆಸ್ ಸಂಸ್ಥೆಯ ಭದ್ರತೆಗೆ ಅದರಿಂದ ಸಹಾಯವಾಗುವುದು.''

ಅಂದು ಮಧ್ಯಾಹ್ನ ಸದಾಶಿವಪ್ಪನ ಭೆಟ್ಟಿಯಾದಾಗ ಆತನೂ ಅದೇ ಅಭಿಪ್ರಾಯವನ್ನು ವ್ಯಕ್ತಗೊಳಿಸಿದ.

''ನಮ್ಮ ಊರಿಗೊಂದು ವಾರಪತ್ರಿಕೆ ತಕ್ಷಣ ಬೇಕು. ಕಾಂಗ್ರೆಸ್ ಸಂಸ್ಥೆಯ ವಿರೋಧಿಗಳು ನಮ್ಮ ಬಗ್ಗೆ ಅಲ್ಲದ ಸಲ್ಲದ ಅಪಪ್ರಚಾರ ನಡೆಸುತ್ತಿದ್ದಾರೆ. ಕಮ್ಯೂನಿಸ್ಟರ ಗಲಭೆಗಂತೂ ಎಲ್ಲೆಯೇ ಇಲ್ಲ. ಕೆಲವರು ಪುಂಡರನ್ನು ಕಟ್ಟಿಕೊಂಡು ನಗರದಲ್ಲೆಲ್ಲ ಕಾಂಗ್ರೆಸ್ಸಿನ ವಿರುದ್ಧ ಶಂಖವಾದ್ಯ ಮಾಡುತ್ತಿದ್ದಾರೆ. ಈ ಗಲಭೆಗಾರರಿಂದ ನಮ್ಮ ಸಂಸ್ಥೆಯ ಪವಿತ್ರ ಹೆಸರು ಕೆಟ್ಟುಹೋದೀತೆಂದು ದಿಗಿಲಾಗುತ್ತಿದೆ. ಈ ಅಪಪ್ರಚಾರ ವನ್ನೆದುರಿಸಲು ನಮ್ಮ ಊರಲ್ಲೇ ಒಂದು ಪತ್ರಿಕೆಯಿದ್ದರೆ ಉತ್ತಮ. ನಿಮ್ಮಂಥ ನುರಿತ ಸಂಪಾದಕರು ಅದನ್ನು ಹೊರಡಿಸುತ್ತಿದ್ದರೆ ಇನ್ನೇನು ಬೇಕು? ಪತ್ರಿಕೆ ಹೊರಟ ಒಂದೆರಡು ವಾರಗಳಲ್ಲೇ ಆ ನಿಂದಕರ ಬಾಯಿಯನ್ನು ಕಟ್ಟಿಬಿಡಬಹುದು,'' ಎಂದು ಆತ ಒಂದು ಉಪನ್ಯಾಸವನ್ನೇ ಬಿಚ್ಚಿದ.

ಚಂದ್ರಣ್ಣ ಕೊಂಚ ಚಕಿತನಾಗಿ ಸದಾಶಿವಪ್ಪನನ್ನೇ ನಿರುಕಿಸಿ ನೋಡುತ್ತಿದ್ದ. ಆತನಿಗೆ ಮೂವತ್ತೈದು ವರ್ಷ ವಯಸ್ಸಾಗಿರಬಹುದು. ಸುಖದಲ್ಲಿ ಬೆಳೆದ ದೇಹ ಸ್ವಾಭಾವಿಕವಾಗಿಯೇ ಮಾಂಸ ತುಂಬಿಕೊಂಡು ದುಂಡಗೆ ಕಾಣುತ್ತಿದ್ದಿತು. ಆತ ತೊಟ್ಟಿದ್ದ ರೇಷ್ಮೆಯ ಜುಬ್ಬದೊಳಗಿಂದ ಗುಂಡಗಿನ ಹೊಟ್ಟೆಯೂ ಎದ್ದು ಕಾಣಿಸುತ್ತಿತ್ತು. ಆಕೃತಿ ಅಷ್ಟು ಎತ್ತರವಲ್ಲ, ಕೊಂಚ ಕುಳ್ಳು ದೇಹ. ಬಣ್ಣವೂ ಅಷ್ಟೆ – ಸಾದುಗಪ್ಪು. ಆ ಸಮಯದಲ್ಲಿ ಆತನ ಮುಖದ ಮೇಲೆ ಮುಗುಳುನಗೆ ಪಸರಿಸಿದ್ದಿತಾದರೂ ಆದು ಸ್ವಾಭಾವಿಕವಾದುದಲ್ಲವೆಂಬುದು ಚಂದ್ರಣ್ಣನಿಗೆ ಗೊತ್ತಾಗದಿರಲಿಲ್ಲ. ಒರಟುತನ ವನ್ನೂ ಕ್ರೌರ್ಯವನ್ನೂ ಸೂಚಿಸುವಂತಿದ್ದ ದಪ್ಪಗಿನ ತುಟಿ, ಚಪ್ಪಟೆ ಮೂಗು, ಕೆಂಪಗಿದ್ದ

ಕಣ್ಣು ಗಂಧದೆಣ್ಣೆ ಹಾಕಿ ಬಾಚಿದ್ದರೂ ಶಿಸ್ತಿನಿಂದ ಕೂತುಕೊಳ್ಳದೆ ಕೆದರಿ ನಿಂತಿದ್ದ ತಲೆಗೂದಲು. ಆತ ಉಟ್ಟಿದ್ದ ನಯವಾದ ಧೋತರವಾಗಲಿ, ಮೈಸೂರು ರೇಷ್ಮೆಯ ಜುಬ್ಬವಾಗಲಿ, ಕತ್ತಿನಲ್ಲಿ ಎದ್ದು ಕಾಣಿಸುವಂತೆ ಧರಿಸಿದ್ದ ಚಿನ್ನದೆಳೆಯಾಗಲಿ – ಯಾವುದೂ ಆತನಿಗೆ ಶೋಭೆಯನ್ನುಂಟುಮಾಡುತ್ತಿರಲಿಲ್ಲ. ಆತನ ಕೈಬೆರಳುಗಳಲ್ಲಿ ಲಕಲಕಿಸುತ್ತಿದ್ದ ಹರಳಿನುಂಗುರಗಳೂ ಅಷ್ಟೆ ಚಂದ್ರಣ್ಣನ ಮನಸ್ಸಿನ ಮೇಲೆ ಅವುಗಳಿಂದ ಯಾವ ಒಳ್ಳೆಯ ಪರಿಣಾಮವೂ ಉಂಟಾಗಲಿಲ್ಲ.

''ಒಂದು ದಿನಪತ್ರಿಕೆಯನ್ನೇ ಪ್ರಾರಂಭಿಸಬೇಕೆಂಬ ಯೋಚನೆಯೂ ನನಗಿದೆ. ನಾನು ಮನಸ್ಸು ಮಾಡಿದರೆ ಅದೇನೂ ದೊಡ್ಡದಲ್ಲ. ಐದು ಲಕ್ಷ ರೂಪಾಯಿ ಬಂಡವಾಳ ಹಾಕಿದರೆ ಸಾಕು. ಯಾಕ್ರೀ ಶಿವಯೋಗಿಗಳೆ, ನಾನು ಮಾಡಲಾರೆನೇ ಒಂದು ದಿನಪತ್ರಿಕೆಯನ್ನು?'' ಎಂದು ಸದಾಶಿವಪ್ಪ.

''ನಿಮಗೆ ಅಸಾಧ್ಯವಾದುದೇನಿದೆ? ಐವತ್ತು ಲಕ್ಷ ರೂಪಾಯಿಯ ಗಿರಣಿ ನಡೆಸುತ್ತಿರುವವರಿಗೆ ಐದು ಲಕ್ಷ ಅಂದರೆ ಏನು ದೊಡ್ಡದು. ಕಣ್ಣು ಮುಚ್ಚಿ ತೆರೆಯುವುದರೊಳಗಾಗಿ ಏನು ಬೇಕಾದ್ದನ್ನು ಮಾಡೀರಿ ನೀವು!'' ಎಂದ ಶಿವಯೋಗಿ.

''ಆದರೂ ಸದ್ಯ ಅಂಥ ತಾಪತ್ರಯದ ಕೆಲಸಕ್ಕೆ ಕೈಹಾಕುವುದು ಬೇಡ. ಗಿರಣಿಯ ಕೆಲಸವನ್ನೇ ನೋಡಿಕೊಳ್ಳಲು ಪುರುಸೊತ್ತಿರುವುದಿಲ್ಲ ನನಗೆ – ಇನ್ನು ಈ ಹೊಣೆಯೊಂದನ್ನು ಎಲ್ಲಿ ಹೊರಲಿ? ಮೊದಲು ವಾರಪತ್ರಿಕೆಯನ್ನು ಪ್ರಾರಂಭಿಸಿ ಬಿಡೋಣ. ನೀವಿಬ್ಬರೂ ನೋಡಿಕೊಳ್ಳಬಲ್ಲಿರಿ. ಹೇಗೂ ಮೇಲ್ವಿಚಾರಣೆ ಮಾಡಲು ನಮ್ಮ ತಮ್ಮಣ್ಣನವರಿರುತ್ತಾರೆ.''

''ತಮ್ಮಣ್ಣನವರು?''

''ಹೋ! ಅವರ ವಿಷಯ ನಿಮಗೆ ಗೊತ್ತಿಲ್ಲವಲ್ಲವೆ? ತಮ್ಮಣ್ಣನವರೆಂದರೆ ಸಾಹುಕಾರರ ಬಲಗೈ ಇದ್ದ ಹಾಗೆ. ಧರ್ಮಪುರ ಟೌನ್ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರು. ಈ ಮೊದಲು ನಾಲ್ಕೈದು ವರ್ಷಗಳವರೆಗೆ ನಗರಸಭೆಗೂ ಅಧ್ಯಕ್ಷ ರಾಗಿದ್ದವರು. ಮುಂದಿನ ವರ್ಷವೂ ಅವರೇ ಅಧ್ಯಕ್ಷರಾಗುವವರು,'' ಎಂದು ಶಿವಯೋಗಿ ಹೇಳಿದ.

''ಅಂದರೆ? ಈ ವರ್ಷ ಹೊಸದಾಗಿ ಚುನಾವಣೆ ನಡೆಯುವುದೇ?''

''ಹೌದು. ಇನ್ನು ಕೆಲವು ತಿಂಗಳುಗಳಲ್ಲೇ ನಡೆಯಬೇಕಾಗಿದೆ. ಈ ವರ್ಷ

ಸ್ಪರ್ಧೆ ಬಿರುಸಾಗುತ್ತದೆ. ಈ ಮೊದಲು ಕಾಂಗ್ರೆಸ್ಸಿನಲ್ಲೇ ಇದ್ದು ಈಚೆಗೆ ಅದರಿಂದ ಸಿಡಿದು ಹೋಗಿರುವ ಸ್ವಾರ್ಥಿಗಳು ಕೆಲವರು ಈ ಸಲ ಸ್ವತಂತ್ರವಾಗಿ ನಿಂತುಕೊಳ್ಳುತ್ತಾರೆ. ಅವರ ಪ್ರಚಾರ ಕಾರ್ಯವೂ ಈಗಾಗಲೇ ಆರಂಭವಾಗಿದೆ. ಕಾಂಗ್ರೆಸ್ಸಿನ ಹೆಸರು ಕೆಡಿಸಲು ಏನು ಬೇಕೋ ಎಲ್ಲವನ್ನೂ ಮಾಡುತ್ತಿದ್ದಾರೆ ಅವರು. ಆ ಅಪಪ್ರಚಾರವನ್ನೆದುರಿಸುವುದಕ್ಕೂ ಪತ್ರಿಕೆಯ ಅಗತ್ಯವಿದೆ. ಧರ್ಮಪುರದಲ್ಲಿ ಪತ್ರಿಕೆ ಹೊರಡಿಸಲು ಅತ್ಯುತ್ತಮ ಸಮಯವೆಂದರೆ ಇದೇ. ಮಳೆಯಾಗಿದೆ, ನೆಲ ಹದಗೊಂಡಿದೆ. ಬೀಜ ಬಿತ್ತುವುದಷ್ಟೇ ಬಾಕಿ,'' ಎಂದ ಸದಾಶಿವಪ್ಪ.

''ನಮ್ಮ ಸಾಹುಕಾರರು ಕಂಪನಿಗೆ ಆಧಾರವಾಗಿರುವಾಗ ನಮಗೆ ಯಾವುದರ ಬಗೆಗೂ ಸಂದೇಹವಿರಬೇಕಾದ ಅಗತ್ಯವಿಲ್ಲ. ಇವರೂ ಅಷ್ಟೆ ಇವರ ತಂದೆಯವರೂ ಅಷ್ಟೆ ಶ್ರೀಮಂತರಾಗಿದ್ದಷ್ಟೂ ಉದಾರಿಗಳು. ದಾನಶೂರರು, ಆಸ್ಪತ್ರೆ, ಕ್ಲಬ್ಬು, ಸ್ಕೂಲು, ಕಾಲೇಜುಗಳಿಗೆಲ್ಲ ಲಕ್ಷಾಂತರ ರೂಪಾಯಿ ದಾನ ಮಾಡಿದ್ದಾರೆ. ಮೊನ್ನೆ ಮಹಾರಾಜರಿಂದ ಧರ್ಮಪ್ರಕಾಶ ಎಂಬ ಬಿರುದೂ ದೊರೆತಿದೆ. ಈ ವಿಷಯ ನಿಮಗೆ ಗೊತ್ತಿರಬೇಕಲ್ಲ? ಎಲ್ಲ ದಿನಪತ್ರಿಕೆಗಳಲ್ಲೂ ಸೆಟ್ಟರ ಫೋಟೋ ಬಂದಿತ್ತು. ಅವರ ಜೀವನ ಚಿತ್ರವೂ ಪ್ರಕಟವಾಗಿತ್ತು,'' ಎಂದ ಶಿವಯೋಗಿ.

''ಹೌದು – ನೋಡಿದ್ದೆ.''

''ಅಂಥವರ ಆಶ್ರಯ ದೊರೆಯುವುದೇ ಒಂದು ಭಾಗ್ಯ. ಅವರ ಬೆಂಬಲ ನಮಗಿರುವಾಗ ಎಂಥ ಕೆಲಸಗಳನ್ನಾದರೂ ನಾವು ಸಾಧಿಸಬಹುದು,'' ಎಂದ ಶಿವಯೋಗಿ.

ಪ್ರಶಂಸಾಪೂರ್ಣವಾದ ಈ ಮಾತುಗಳಿಂದಾಗಿ ಸದಾಶಿವಪ್ಪನ ಮುಖ ಪ್ರಸನ್ನತೆಯಿಂದ ಅರಳುತ್ತಿದ್ದುದನ್ನು ಚಂದ್ರಣ್ಣ ಗುರುತಿಸದಿರಲಿಲ್ಲ. ಶ್ರೀಮಂತರನ್ನು ಹೊಗಳಿ ಕೆಲಸ ಸಾಧಿಸಿಕೊಳ್ಳುವ ಕಲೆಯಲ್ಲಿ ಶಿವಯೋಗಿ ನುರಿತವನೆಂಬುದು ಸ್ಪಷ್ಟವಾಗಿ ಕಂಡು ಬರುತ್ತಿತ್ತು.

''ನಮ್ಮ ಹತ್ತಿರ ನೀವು ಯಾವ ಸಂಕೋಚವನ್ನೂ ಇಟ್ಟುಕೊಳ್ಳಬೇಕಾಗಿಲ್ಲ. ನೀವು ನಮ್ಮವರು, ನಾವು ನಿಮ್ಮವರು ಎಂಬ ಅಭಿಮಾನವಿದ್ದರೆ ಸರಿ, ನಾವೆಲ್ಲ ಅಣ್ಣ ತಮ್ಮಂದಿರ ಹಾಗೆ ಕೂಡಿಕೊಂಡು ಕೆಲಸ ಮಾಡೋಣ. ನಮ್ಮ ತಂದೆಯವರೂ ನಿಮ್ಮನ್ನು ನೋಡಲು ಆತುರರಾಗಿದ್ದಾರೆ. ಧರ್ಮಪುರಕ್ಕೆ ಎಂದು ಹೊರಡುವಿರಿ?'' ಎಂದು ಸದಾಶಿವಪ್ಪ ಕೇಳಿದ.

"ನಾಳೆ ನಾಡಿದ್ದು ಹೊರಟರಾದೀತಲ್ಲವೇ?" ಎಂದ ಶಿವಯೋಗಿ.

"ಏನಷ್ಟು ಅವಸರ? ಇನ್ನೂ ಕೆಲವು ಕೆಲಸಗಳಿವೆ. ಎಲ್ಲ ಮುಗಿಸಿಕೊಂಡು ಮುಂದಿನ ವಾರ ಹೋದರಾಯಿತು," ಎಂದ ಚಂದ್ರಣ್ಣ.

"ಆಯಿತು, ಹಾಗೇ ಮಾಡಿ. ನಿಮಗೆ ಅನುಕೂಲವಾದಾಗ ಹೊರಡಿ. ಅಂತೂ ತಡವಾಗದಿರಲಿ. ಶುಭಸ್ಯ ಶೀಘ್ರಂ!" ಎಂದ ಸದಾಶಿವಪ್ಪ.

ಆತನನ್ನು ಬೀಳ್ಕೊಂಡು ಹೊರಡುವಾಗ ಚಂದ್ರಣ್ಣನ ಮನಸ್ಸು ಅವ್ಯಕ್ತ ಆಶಂಕೆ ಯೊಂದರಿಂದ ಪೀಡಿತವಾಗಿದ್ದಿತು. ಬೇಟೆಯನ್ನು ಉಪಾಯವಾಗಿ ಬಲೆಗೆ ಬೀಳಿಸಿದ ಬೇಟೆಗಾರನ ತುಟಿಗಳ ಮೇಲೆ ನರ್ತಿಸುವ ತೃಪ್ತಿಯ ನಗು ಸದಾಶಿವಪ್ಪನ ಮುಖದ ಮೇಲೆ ಬಿಂಬಿತವಾದ ಹಾಗೆ ತೋರಿತ್ತು ಚಂದ್ರಣ್ಣನಿಗೆ.

## ೭

ಮಾರನೆಯ ದಿನ ಚಂದ್ರಣ್ಣ ರಂಗಯ್ಯನನ್ನು ಕಾಣಲು ಆತನ ಮುದ್ರಣಾಲಯಕ್ಕೆ ಹೋದ.

ಕಟ ಕಟಟ್ ಥಕ್
ಕಟ ಕಟಟ್ ಥಕ್

ರಂಗಯ್ಯನ ಯಂತ್ರ ಎಂದಿನಂತೆ ಸದ್ದು ಮಾಡುತ್ತ ಕೆಲಸ ಸಾಗಿಸಿದ್ದಿತು. ಆತನ ಮುಖದ ಮೇಲೆಲ್ಲ ಬೆವರುಹನಿಗಳು ಮೂಡಿದ್ದುವು. ಅಂಗಿಯೂ ಬೆವರಿನಿಂದ ತೋಯ್ದು ಹೋಗಿತ್ತು. ಯಂತ್ರವನ್ನು ನಿಲ್ಲಿಸಿ ಅಂಗಿಯ ತೋಳಿನಿಂದ ಬೆವರನ್ನೊರೆಸಿ ಕೊಳ್ಳುತ್ತ ರಂಗಯ್ಯ ಚಂದ್ರಣ್ಣನನ್ನು ಸ್ವಾಗತಿಸಿ "ಬನ್ನಿ ಕೂತುಕೊಳ್ಳಿ" ಎಂದು ನುಡಿದ. ಆತನ ಧ್ವನಿಯಲ್ಲಿ ವಿಷಾದ ಬೆರೆತಿದ್ದುದು ಸ್ಪಷ್ಟವಾಗುತ್ತಿತ್ತು.

ಚಾಪೆಯೊಂದನ್ನೆಳೆದುಕೊಂಡು ಚಂದ್ರಣ್ಣ ಕುಳಿತುಕೊಂಡ. ಆತನ ಮುಖ ದಿಂದ ಮಾತೇ ಹೊರಡುವಂತಿರಲಿಲ್ಲ. ಏನು ಮಾತನಾಡುವುದು, ಹೇಗೆ ಮಾತನಾಡು ವುದು! ಪತ್ರಿಕೆ ಕಂಪನಿಗೆ ಹೋಗುವ ವಿಚಾರ, ಚಂದ್ರಣ್ಣ ಧರ್ಮಪುರಕ್ಕೆ ಹೊರಡುವ

ವಿಚಾರ ಎಲ್ಲವೂ ರಂಗಯ್ಯನಿಗೆ ಆಗಲೇ ಗೊತ್ತಾಗಿಹೋಗಿತ್ತು. ನಾಲ್ಕೈದು ದಿನಗಳ ಹಿಂದೆ ಹೊರಡಲಿದ್ದ ಆ ತಿಂಗಳ ಸಂಚಿಕೆಯನ್ನು ಅದಕ್ಕಾಗಿಯೇ ತಡೆಹಿಡಿಯಲಾಗಿದ್ದಿತು. ಆ ಸಲದ ಸಂಪಾದಕೀಯ ಲೇಖನದ ಕೊನೆಗೆ ಈ ವಿಷಯವನ್ನೆಲ್ಲ ವಿವರಿಸಿ ಕಂಪನಿಯ ಪ್ರಾರಂಭದ ಸಿದ್ಧತೆಯೆಲ್ಲ ಮುಗಿದು ಮುದ್ರಣಾಲಯ ಸ್ಥಾಪಿತವಾದ ನಂತರ 'ಕ್ರಾಂತಿ' ವಾರಪತ್ರಿಕೆಯಾಗಿ ಹೊರಡುವುದೆಂದೂ ಅದುವರೆಗೆ ಪ್ರಕಟನೆಯನ್ನು ನಿಲ್ಲಿಸಲಾಗುವುದೆಂದೂ ಚಂದಾದಾರರಿಗೆ ಮತ್ತು ಏಜೆಂಟರಿಗೆ ಸೂಚನೆ ಕೊಡಲಾಗಿದ್ದಿತು.

ಕೈಗೆ ಹತ್ತಿದ ಮಸಿಯನ್ನು ಒರೆಸಿಯಾದ ಬಳಿಕ ರಂಗಯ್ಯ ತಾನೂ ಕುಳಿತುಕೊಂಡ. ಒಂದು ಸಲ ತೋಳುಗಳನ್ನು ಹಾಗೆ ಹೀಗೆ ಹೊರಳಿಸಿ ಮೈಮುರಿದುಕೊಂಡ ಹಾಗೆ ಮಾಡಿದ. ಅಂಗಿಯ ಜೇಬಿನಿಂದ ಬೀಡಿಯ ಕಟ್ಟನ್ನು ಹೊರದೆಗೆದು ಒಂದು ಬೀಡಿಯನ್ನು ಕೈಗೆ ತೆಗೆದುಕೊಂಡ, ಅದರ ಮುಂಭಾಗವನ್ನು ಬೆರಳುಗಳಿಂದ ಒತ್ತಿ ಹದಗೊಳಿಸಿದ, ಮತ್ತೆ ಅಂಗಿಯ ಜೇಬಿಗೆ ಕೈಹಾಕಿ ಬೆಂಕಿಪೆಟ್ಟಿಗೆಗಾಗಿ ಹುಡುಕಿ ನೋಡಿದ, ಅದು ಸಿಕ್ಕದಿರಲು ಹೆಂಡತಿಯನ್ನು ಕೂಗಿ ಒಂದು ಬೆಂಕಿಯ ಕೆಂಡವನ್ನು ತರಿಸಿಕೊಂಡು ಬೀಡಿಯನ್ನು ಅದಕ್ಕೆ ಹಿಡಿದು ಹೊತ್ತಿಸಿದ, ಒಂದು ಸಲ ಜೋರಿನಿಂದ ಹೊಗೆಯನ್ನು ಹೀರಿ ಮೂಗಿನ ಹೊರಳೆಗಳ ಮೂಲಕ ಅದನ್ನು ಹೊರಗೆ ಹಾಕುತ್ತ ಚಂದ್ರಣ್ಣನ ಕಡೆಗೆ ದೃಷ್ಟಿ ತೂರಿದ.

ಅಚ್ಚುಗೊಂಡ ಹಾಳೆಗಳನ್ನು ಜೋಡಿಸಿ ಇಡುವುದರಲ್ಲಿ ತೊಡಗಿದ್ದ ಹೈದನೂ ಚಂದ್ರಣ್ಣನನ್ನು ನೋಡುತ್ತಿದ್ದ. ಅಡುಗೆಯ ಮನೆಯಲ್ಲಿ, ಕೊಳಕು ಲುಂಗಿಯ ಪರದೆಯ ಮರೆಯಲ್ಲಿ ನಿಂತುಕೊಂಡು ದೇವಮ್ಮನೂ ಆತನನ್ನೇ ನಿಟ್ಟಿಸುತ್ತಿದ್ದಳು.

''ಅಂತೂ ನಮ್ಮನ್ನು ಬಿಟ್ಟು ಹೊರಟಿರಲ್ಲ?'' ಎಂದ ರಂಗಯ್ಯ.

''ಏನು ಮಾಡುವುದು ರಂಗಯ್ಯ. ಬೇರೆ ದಾರಿ ಯಾವುದೂ ಕಾಣಿಸಲಿಲ್ಲವಾದ್ದರಿಂದ ಈ ದಾರಿಗೆ ಹೊರಟುಬಿಟ್ಟೆ. ಇಲ್ಲಿಯೆ ಇದ್ದಿದ್ದರೆ ಇನ್ನು ಒಂದೆರಡು ತಿಂಗಳಲ್ಲಿಯೆ ಪತ್ರಿಕೆಯನ್ನು ನಿಲ್ಲಿಸಿಬಿಡಬೇಕಾಗುತ್ತಿತ್ತು. ನಿಮ್ಮ ಬಿಲ್ ಹಣವನ್ನೂ ಕೊಡಲಾಗುತ್ತಿರಲಿಲ್ಲ, ನಿಮಗೂ ಬಹಳ ತೊಂದರೆಯಾಗುತ್ತಿತ್ತು.''

''ನಮಗೇನು – ಇಂಥ ತೊಂದರೆಗಳು ಹೊಸವಲ್ಲ. ಹುಟ್ಟಿದಂದಿನಿಂದ ಇದ್ದೇ ಇವೆ. ಹೇಗೋ ನಡೆಯುತ್ತಿತ್ತು ಅನ್ನಿ. ಆದರೂ ಈಗ ಆದದ್ದೂ ಒಳ್ಳೆಯದೇ ಆಯಿತಲ್ಲ, ದೊಡ್ಡ ಮುದ್ರಣಾಲಯ, ದೊಡ್ಡ ವಾರಪತ್ರಿಕೆ. ನೀವು ಇನ್ನೂ ಚೆನ್ನಾಗಿ ಕೆಲಸ ಮಾಡಲು

ಅನುಕೂಲವಾದೀತು. ನಿಮ್ಮ ತೊಂದರೆಗಳೂ ತಪ್ಪುವವು. ಈ ಬಗ್ಗೆ ನನಗೇನೋ ತುಂಬಾ ಸಂತೋಷವೇ. ಆದರೂ ಇಷ್ಟು ದಿನ ಕೂಡಿಕೊಂಡಿದ್ದವರು ಈಗ ಅಗಲುವ ಹಾಗಾಯಿತಲ್ಲಾ ಅಂತ ವ್ಯಸನ. ಇಷ್ಟು ದಿನ ಪತ್ರಿಕೆಯನ್ನು ನಾನೇ ನನ್ನ ಕೈಯಿಂದ ಅಚ್ಚು ಮಾಡುತ್ತಿದ್ದೆ ಅಂತ ಸಮಾಧಾನವಿತ್ತು. ಇನ್ನು ಮುಂದೆ ಆ ಸಮಾಧಾನವಿರುವುದಿಲ್ಲ ಅಷ್ಟೆ. ಆದರೂ – ಅದು ಎಲ್ಲಿದ್ದರೇನು, ನಮ್ಮದು ಎನ್ನುವ ಅಭಿಮಾನ ಎಲ್ಲಿ ಹೋಗುತ್ತದೆ? ಪತ್ರಿಕೆ ದೊಡ್ಡದಾಗಲಿ, ಬೆಳೆಯಲಿ...'' ಎಂದ ರಂಗಯ್ಯ.

''ನೋಡಬೇಕು ಏನೇನಾಗುವುದೊ. ನಿಮ್ಮೆಲ್ಲರ ವಿಶ್ವಾಸವಿರಬೇಕು. ನಾವು ಪ್ರೆಸ್ಸು ಹಾಕಿದ ಮೇಲೆ ನೀವು ಧರ್ಮಪುರಕ್ಕೆ ಬಂದುಬಿಡಬೇಕು. ಪ್ರೆಸ್ಸಿನ ಕೆಲಸದ ಹೊಣೆಯನ್ನೆಲ್ಲ ವಹಿಸಿಕೊಳ್ಳಬೇಕು.''

ರಂಗಯ್ಯ ನಕ್ಕು ನುಡಿದ : ''ನೀವೇನೋ ಪ್ರೀತಿಯಿಂದ ಕರೆಯುತ್ತೀರಿ. ಆದರೆ – ಈ ಸಂಸಾರವೊಂದನ್ನು ಗಂಟುಹಾಕಿಕೊಂಡಿದ್ದೇನಲ್ಲ! ಅದೆಲ್ಲಿ ಬಿಡುತ್ತದೆ ನನ್ನನ್ನು?''

''ಸಂಸಾರವಿದ್ದರೇನಾಯಿತು? ಅಲ್ಲಿಗೇ ಕರೆದುಕೊಂಡು ಬರಬಹುದಲ್ಲ?''

''ಆ ಸಂಸಾರವಲ್ಲ ಸಾರ್ ನಾನು ಹೇಳಿದ್ದು. ಅದೇನು ಬಿಡಿ. ಬಸವನ ಹಿಂದೆ ಬಾಲ ಅಂದ ಹಾಗೆ ರಂಗಯ್ಯ ಹೊರಟಲ್ಲಿಗೆ ಹೊರಡುತ್ತದೆ. ಆದರೆ ಈ ಸಂಸಾರ – ಸ್ವಂತ ಮುದ್ರಣಾಲಯದ ಸಂಸಾರ – ಇದನ್ನೆಲ್ಲ ಅಲ್ಲಿಗೆ ಕಟ್ಟಿಕೊಂಡು ಬರಲಾಗುತ್ತದೆಯೆ? ಬಹಳ ದಿನಗಳಿಂದ ಬಯಕೆಯಿತ್ತು – ಸ್ವಂತ ಮುದ್ರಣಾಲಯ ಮಾಡಿಕೊಳ್ಳಬೇಕೆಂದು. ಕೊನೆಗೂ ಆ ಬಯಕೆ ಕೈಗೂಡಿತು. ಏನೋ ಸ್ವಲ್ಪ ತಳಹದಿ ಬಿದ್ದ ಹಾಗಾಗಿದೆ. ಇದುವರೆಗೆ ಕ್ರಾಂತಿಯನ್ನು ಮುದ್ರಿಸುವೆನೆಂಬ ಹೆಮ್ಮೆಯಿತ್ತು. ಇನ್ನು ಮೇಲೆ ಬೀಡಿಯ ಲೇಬಲ್ಲುಗಳೇ ತೃಪ್ತಿಪಟ್ಟುಕೊಳ್ಳಬೇಕಾಗುವುದು. ಚಿಂತೆಯಿಲ್ಲ ಹೇಗೂ ನಮ್ಮ ರಥ ಸಾಗುತ್ತದಲ್ಲವೆ! ಕಂಪನಿಯ ಪ್ರೆಸ್ಸಿನಲ್ಲಿ ಕೆಲಸಕ್ಕೆ ನಿಂತರೆ ಇದರ ಗತಿಯೇನು? ಇದೂ ಅಲ್ಲದೆ ನನಗೆ ಚಾಕರಿಯೆಂದರೆ ರೋಸಿ ಹೋಗಿದೆ. ಬೇಸರವಾಗಿದೆ. ಇನ್ನು ಮುಂದೆ ಈ ದೇಹ ಬೀಳುವ ತನಕ ಯಾರಲ್ಲೂ ಚಾಕರಿಗೆ ನಿಲ್ಲಬಾರದೆಂದು ನಿರ್ಧರಿಸಿದ್ದೇನೆ...''

''ನಿರ್ಧಾರವೇನೋ ಒಳ್ಳೆಯದೇ. ಆದರೆ ನಮ್ಮ ಪ್ರೆಸ್ಸಿಗೆ ನಿಮ್ಮಂಥ ಅನುಭವಿಕ ಕೆಲಸಗಾರರು ದೊರೆತರೆ ಚೆನ್ನಾದೀತು ಅಂತ ಹೇಳಿದೆ, ಅಷ್ಟೆ. ನೀವು ಇದ್ದರೆ ವಾರಪತ್ರಿಕೆಯನ್ನು ಚೆನ್ನಾಗಿ ಮಾಡಬಹುದು.''

''ಎಲ್ಲವನ್ನೂ ಮಾಡಬಹುದು. ಆದರೆ ಯೋಗ ಕೂಡಿಬರಬೇಕಲ್ಲ? ಯೋಗ ಬಂದರೆ...'' ಎಂದು ನುಡಿದು ರಂಗಯ್ಯ ತನ್ನ ಮಾತನ್ನು ಅಷ್ಟಕ್ಕೇ ನಿಲ್ಲಿಸಿದ.

''ಯಾಕೆ ಸುಮ್ಮನಾದಿರಿ?''

''ಸುಮ್ಮನೆ. ನನ್ನ ಯೋಚನೆಗಳನ್ನು ತೆಗೆದುಕೊಂಡು ಏನು ಮಾಡುತ್ತೀರಿ ಬಿಡಿ. ವಿಚಿತ್ರ ಯೋಚನೆ ನನ್ನವು!''

''ಅದೇನಪ್ಪ ಅಂಥ ವಿಚಿತ್ರ?''

''ಅಂಥದೇನೂ ಇಲ್ಲ. ಆದರೆ ನನಗೇಕೋ ಈ ಕಂಪನಿಯ ಬಗ್ಗೆ ಅಷ್ಟು ಭರವಸೆಯಿಲ್ಲ. ಆ ಶ್ರೀಮಂತರಿಗೂ ನಿಮಗೂ ಕೂಡಿ ನಡೆಯಬಹುದೇ ಎಂದು ಸಂಶಯ ಬರುತ್ತಿದೆ.''

ತನ್ನ ಎದೆಯಲ್ಲಿ ಆಗಾಗ ಸುಳಿಯುತ್ತಿದ್ದ ಸಂದೇಹವನ್ನೇ ರಂಗಯ್ಯನೂ ವ್ಯಕ್ತಗೊಳಿಸುತ್ತಿದ್ದುದನ್ನು ಕಂಡಾಗ ಚಂದ್ರಣ್ಣನಿಗೆ ಆಶ್ಚರ್ಯವಾಗದಿರಲಿಲ್ಲ. ತನ್ನಲ್ಲೂ ಆ ಬಗೆಯ ಸಂದೇಹವಿದೆಯೆಂಬುದನ್ನು ತೋರಿಸದೆ ಆತ ಮಾರ್ಮಿಕವಾಗಿ ಪ್ರಶ್ನೆ ಮಾಡಿದ : ''ಅದೇನು ರಂಗಯ್ಯ, ಹೀಗೆ ಹೇಳುತ್ತೀರಿ? ಶ್ರೀಮಂತರಾದರೇನಾಯಿತು? ಅವರೂ ನಮ್ಮವರೇ ಅಲ್ಲವೇ? ತುಂಬಾ ಅಭಿಮಾನಿಗಳಪ್ಪ ಅವರು. ಅಲ್ಲದೆ ಎಲ್ಲರೂ ಕಾಂಗ್ರೆಸ್ಸಿಗರೇ. ಆ ಸಂಸ್ಥೆಯ ಭದ್ರತೆಗಾಗಿಯೆ ಎಲ್ಲರೂ ದುಡಿಯುವವರು. ಅಂದ ಮೇಲೆ ಕೂಡಿ ನಡೆಯಲು ಆತಂಕವೇನು?''

ರಂಗಯ್ಯ ಮತ್ತೊಂದು ಬೀಡಿಯನ್ನು ಹೊತ್ತಿಸಿ ಒಂದೆರಡು ಕ್ಷಣ ಹೊಗೆಯನ್ನೆಳೆಯುತ್ತಿದ್ದು ಅನಂತರ – ''ಕಾಂಗ್ರೆಸ್ಸಿಗರೆಂಬುದೇನೋ ನಿಜ. ಆದರೆ ಈಗ ಕಾಂಗ್ರೆಸ್ಸಿನಲ್ಲಿ ಎಂಥೆಂಥ ಜನ ಸೇರಿಕೊಂಡಿರುವರೆಂಬುದು ನೀವು ಅರಿಯದ ಮಾತೇನೂ ಅಲ್ಲವಲ್ಲ? ಇಷ್ಟು ವರ್ಷಗಳ ಕಾಲ ಕಾಂಗ್ರೆಸ್ಸಿನ ಕಡುವೈರಿಗಳಾಗಿದ್ದವರು, ತಮ್ಮ ಸ್ವಾರ್ಥಕ್ಕಾಗಿ ಪರಕೀಯ ಸರಕಾರದ ಬೂಟು ಒರೆಸುತ್ತಿದ್ದವರು ಸ್ವಾತಂತ್ರ್ಯ ಬಂದೊಡನೆ ಒಮ್ಮೆಲೆ ಟೋಪಿ ಬದಲಾಯಿಸಿ ಕಾಂಗ್ರೆಸ್ಸಿಗರಾಗಿದ್ದಾರೆ. ಅದೂ ಸಹ ಸ್ವಾರ್ಥಕ್ಕಾಗಿಯೆ ಎಂಬುದನ್ನು ನಿಮಗೆ ಹೇಳಬೇಕಾಗಿಲ್ಲ. ಕ್ರಾಂತಿಯ ಸಂಪಾದಕರಿಗೆ ನಾನು ರಾಜಕೀಯ ಹೇಳಿಕೊಡುವುದಂಟೇ? – ನಾನು? ನಿಮಗೆಲ್ಲವೂ ಗೊತ್ತಿದೆ. ಸ್ವಾರ್ಥಕ್ಕಾಗಿ ಬಡಜನರನ್ನು ಸುಲಿದು ಶ್ರೀಮಂತರಾಗುತ್ತಿರುವ ನೀಚರನೇಕರು ಇಂದು ಖಾದಿಬಟ್ಟೆ ಧರಿಸಿ ಗಾಂಧಿಟೋಪಿ ಹಾಕಿಕೊಂಡು ಕಾಂಗ್ರೆಸ್ಸಿಗರಾಗಿ ಮೆರೆಯುತ್ತಿದ್ದಾರೆ.

ಇಂಥ ಕಾಂಗ್ರೆಸ್ಸಿಗರಿಗೂ ನಿಮಗೂ ಕೂಡಿ ನಡೆಯುವುದು ಸಾಧ್ಯವೇ? ನೀವೇ ಹೇಳಿ.''

ಚಂದ್ರಣ್ಣ ನಿರುತ್ತರನಾದ. ರಂಗಯ್ಯನಾಡಿದ ಮಾತುಗಳಲ್ಲಿ ನೂರಕ್ಕೆ ನೂರ ರಷ್ಟು ಸತ್ಯತೆಯಿತ್ತು; ವಾಸ್ತವತೆಯಿತ್ತು. ಅಂಥ ಸೋಗಲಾಡಿಗಳಾದ ಕಾಂಗ್ರೆಸ್ಸಿಗ ರೊಂದಿಗೆ ತಾನು ಕೂಡಿ ಕೆಲಸ ಮಾಡುವುದು ಸಾಧ್ಯವೇ ಇರಲಿಲ್ಲ. ತನ್ನ ಸ್ವಭಾವಕ್ಕೇ ವಿರುದ್ಧವಾದ, ವಿಸಂಗತವಾಗಿ ವಿಷಯ ಅದು. ತನ್ನ ಮಟ್ಟಿಗೆ ತಾನು ನಿಷ್ಠುರ ಧ್ಯೇಯ ವಾದಿ; ಪ್ರಾಮಾಣಿಕ, ಖಂಡಿತವಾದಿ. ಸ್ವಾತಂತ್ರ್ಯ ಬಂದರೂ ಹಿಂದೂಸ್ಥಾನದ ಬಹುಸಂಖ್ಯಾತ ಜನತೆಗೆ ಆರ್ಥಿಕ ಸ್ವಾತಂತ್ರ್ಯವಿನ್ನೂ ಲಭಿಸಲಿಲ್ಲ, ಅವರ ದಾರಿದ್ರ್ಯ, ಅವರ ಕಷ್ಟಪರಂಪರೆ ದೂರವಾಗಲಿಲ್ಲ. ದರಿದ್ರ ನಾರಾಯಣನ ದುಃಖಿಗಳನ್ನು ಹೋಗಲಾಡಿಸಿ ರೈತ ಕೂಲಿಕಾರ ಪ್ರಜಾರಾಜ್ಯವನ್ನು ಸ್ಥಾಪಿಸುವುದೇ ಕಾಂಗ್ರೆಸ್ಸಿನ ಅಂತಿಮ ಗುರಿಯೆಂದು ಆತ ನಂಬಿದ್ದ. ಆ ಗುರಿಯನ್ನು ಸಾಧಿಸಲು ಕೆಲಸ ಮಾಡುವವರೊಂದಿಗೆ ತಾನು ಸಹಕರಿಸಿ ದುಡಿಯುವುದಾಗಿ ನಿರ್ಧರಿಸಿದ್ದ. ಆದರೆ ಈಚೆಗೆ ಕಾಂಗ್ರೆಸ್ ಸಂಸ್ಥೆಯಲ್ಲಿ ಸೇರಿಕೊಂಡ ಸ್ವಾರ್ಥಿಗಳ ತಂಡವನ್ನು ನಿರೀಕ್ಷಿಸಿದಾಗ ಆತನಿಗೆ ಅ ಶಂಕೆಯುಂಟಾಗದಿರುತ್ತಿರಲಿಲ್ಲ. ಲಾಭಕೋರರಾದ ವ್ಯಾಪಾರಿಗಳು, ಕಾಳಸಂತೆಯ ಕದೀಮರು, ಕಾಸಿಗಾಗಿ ಬಡವರನ್ನು ಸುಲಿಯುವ ಕೃಪಣರು, ಅಧಿಕಾರ ದಾಸೆಗಾಗಿ ಪರಿತಪಿಸುವ ಅಯೋಗ್ಯರು – ಹಿಂಡುಹಿಂಡಾಗಿ ಕಾಂಗ್ರೆಸ್ ಸಂಸ್ಥೆಯಲ್ಲಿ ನುಗ್ಗುತ್ತಿದ್ದರು. ಬಡವರ ಆಶ್ರಯಸ್ಥಾನವಾಗಿರಬೇಕಾಗಿದ್ದ ಕಾಂಗ್ರೆಸ್ ಕಳ್ಳಕಾಕರ, ದರೋಡೆಗಾರರ ವಾಸಸ್ಥಾನವಾಗತೊಡಗಿದ್ದಿತು. ಅದಕ್ಕೆ ತಡೆ ಹಾಕುವುದೂ ಸಾಧ್ಯವಿರಲಿಲ್ಲ. ಒಬ್ಬೊಬ್ಬರಾಗಿ ಒಳಸೇರಿದ್ದ ಆ ಕಳ್ಳರು ದಿನೇ ದಿನೇ ಪ್ರಬಲರಾಗಿ ಸಂಸ್ಥೆಯನ್ನು ತಮ್ಮ ಕೈಯಲ್ಲಿಯೆ ಹಿಡಿದುಕೊಳ್ಳಲು ಪ್ರಯತ್ನಿಸುತ್ತಿದ್ದರು. ಚಂದ್ರಣ್ಣನಂಥ ನಿಷ್ಠಾವಂತ ಯುವಕರ ಆಟವೇನೂ ನಡೆಯದಂತಾಗಿದ್ದಿತು!

''ನೀವು ಹೇಳುವುದರಲ್ಲಿ ನಿಜವಿಲ್ಲದಿಲ್ಲ. ಆದರೂ ರಂಗಯ್ಯ, ಕೆಲವರು ಸ್ವಾರ್ಥಿಗಳು ಸೇರಿಕೊಂಡ ಮಾತ್ರಕ್ಕೆ ನಾವು ನಿರಾಶರಾಗಿ ಪ್ರಯೋಜನವಿಲ್ಲ. ಕಾಂಗ್ರೆಸ್ಸಿ ನಲ್ಲಿ ಸೇರಿಕೊಂಡಿರುವ ಕೊಳೆಯನ್ನು ತೆಗೆದುಹಾಕಬೇಕು. ಲಕ್ಷಾವಧಿ ಜನರ ರಕ್ತದಿಂದ ಬೆಳೆದ ಸಂಸ್ಥೆ ಹಾಳಾಗದಂತೆ ನೋಡಿಕೊಳ್ಳಬೇಕು. ನಮ್ಮಂಥವರೆಲ್ಲ ಅದಕ್ಕಾಗಿಯೆ ದುಡಿಯಬೇಕಲ್ಲವೆ?''

ರಂಗಯ್ಯನಿಗೆ ನಗು ಉಕ್ಕಿಬಂತು. ಆತನೆಂದ : ''ಉದ್ದೇಶವೇನೋ ಒಳ್ಳೆಯದೇ. ಆದರೆ ನೂರು ಜನ ಸ್ವಾರ್ಥಿಗಳ ಎದುರಿಗೆ ನಿಮ್ಮಂಥ ಒಬ್ಬಿಬ್ಬರು

ಧ್ಯೇಯವಾದಿಗಳು ಏನು ಮಾಡಬಲ್ಲರು? ತಮ್ಮ ಸ್ವಾರ್ಥಕ್ಕಾಗಿ ಅವರು ನಿಮ್ಮನ್ನು ಉಪಯೋಗಿಸಿಕೊಳ್ಳುವ ಸಂಭವವೇ ಹೆಚ್ಚು. ಈ ಕಂಪನಿಯೂ ಹಾಗೇ ಆಗುವುದೊ ಏನೊ. ಅದರ ಸೂತ್ರಗಳೆಲ್ಲ ಅವರ ಕೈಯಲ್ಲೇ ತಾನೆ?''

ಚಂದ್ರಣ್ಣ ಬೆಚ್ಚಿಬಿದ್ದು – ''ಅವರ ಕೈಯಲ್ಲೇ ಅಂದರೆ? ಅವರು ಶ್ರೀಮಂತ ರಾದ ಮಾತ್ರಕ್ಕೆ ಸ್ವಾರ್ಥಿಗಳೇ ಆಗಿರುತ್ತಾರೆಯೆ?'' ಎಂದು ಕೇಳಿದ.

''ಹಾಗಲ್ಲ ನನ್ನ ಅಭಿಪ್ರಾಯ. ಆದರೂ ಚಂದ್ರಣ್ಣ ನನ್ನ ಈ ಇಪ್ಪತ್ತೈದು ವರ್ಷಗಳ ಕಟು ಅನುಭವಗಳಿಂದ ನಾ ಹೇಳಬಲ್ಲೆ – ಶ್ರೀಮಂತರು ಶ್ರೀಮಂತರೇ, ಬಡವರು ಬಡವರೇ. ಇಬ್ಬರಿಗೂ ಹೊಂದಿಕೆಯಾಗುವುದು ಸಾಧ್ಯವಿಲ್ಲ.''

''ಆ್ಞಂ?'' ಎಂದ ಚಂದ್ರಣ್ಣ.

''ಹೌದು ಇದು ನನ್ನ ಖಂಡಿತವಾದ ಅಭಿಪ್ರಾಯ. ಬಡವರನ್ನು ಬಡವ ರನ್ನಾಗಿಯೆ ಇಟ್ಟು ಶ್ರೀಮಂತರು ಶ್ರೀಮಂತರಾಗುವುದು ತಾನೆ? ಸಾಮಾನ್ಯ ಜನರನ್ನು ಸುಲಿದು ಅವರು ಹಣವಂತರಾಗುತ್ತಾರೆ. ಸುಲಿಗೆ ಮಾಡದಿದ್ದರೆ ಅವರ ಹತ್ತಿರ ಹಣ ಎಲ್ಲಿಂದ ಬರಬೇಕು ಹೇಳಿ.''

''ಸುಲಿಗೆ?''

''ಹೌದು, ಸುಲಿಗೆ–ಲೂಟಿ. ಹಗಲುದರೋಡೆ. ಬೆವರಿಳಿಸುವವರು ನಾವು, ಬಡವರು. ನಮ್ಮ ದುಡಿತದಿಂದ ಬರುವ ಆದಾಯವನ್ನು ತಮ್ಮ ಜೇಬಿಗೆ ಬಿಟ್ಟು ಶ್ರೀಮಂತರಾಗುವವರು ಅವರು. ನೀವು ಹಳ್ಳಿಯಲ್ಲೇ ಹುಟ್ಟಿ ಬೆಳೆದವರು ಚಂದ್ರಣ್ಣ, ಕಬ್ಬಿನ ಗಾಣವನ್ನು ಕಂಡಿರಬಹುದು. ಪ್ರಪಂಚದಲ್ಲಿ ಈ ಶ್ರೀಮಂತರು ನಡೆಸುತ್ತಿರುವುದೂ ಗಾಣವೇ – ದುಡ್ಡಿನ ಗಾಣ. ಕಬ್ಬಿನ ಗಾಣದಿಂದ ರಸ ಹೊರಡುತ್ತದೆ. ಅದರಿಂದ ಬೆಲ್ಲದ ಪೆಂಟೆಗಳಾಗುತ್ತವೆ. ಈ ದುಡ್ಡಿನ ಗಾಣದಲ್ಲಿ ಸಿಕ್ಕಿ ಬೀಳುವ ಬಡವರ ಮೈಯಿಂದ ನೆತ್ತರು ಹೊರಡುತ್ತದೆ. ಆ ನೆತ್ತರಿನಿಂದ ರೂಪಾಯಿಯ ರಾಶಿಗಳಾಗುತ್ತವೆ. ಆ ರೂಪಾಯಿಗಳ ರಾಶಿಗಳ ಮೇಲೆ ಕುಳಿತು ಗಹಗಹಿಸಿ ನಗುತ್ತಾರೆ ಶ್ರೀಮಂತರು. ಗಾಣ! ದುಡ್ಡಿನ ಗಾಣ! ಹೌದೋ ಅಲ್ಲವೋ ರಾಮಯ್ಯ? ಏನೋ ಹೈದ, ನಿನಗರ್ಥವಾಯಿತೇ ನಾ ಹೇಳುವುದು? ಕೇಳಿಸಿತೇ ದೇವೂ, ನಿನಗೆ ತಿಳಿಯಿತೇ?'' ಎಂದು ಹೇಳಿ ರಂಗಯ್ಯ ವಿಲಕ್ಷಣವಾಗಿ ನಗತೊಡಗಿದ. ಅಡುಗೆಯ ಮನೆಯಿಂದ ದೇವಮ್ಮನ ನಗುವೂ ಕೇಳಬರತೊಡಗಿತು. ರಾಮಯ್ಯನೂ ನಕ್ಕ. ಹೈದನೂ ಹಲ್ಲು

ಕಿರಿದ. ಚಂದ್ರಣ್ಣನಿಗೆ ಮಾತ್ರ ನಗು ಬರುವುದು ಸಾಧ್ಯವಿರಲಿಲ್ಲ.

''ನೋಡಿ, ಇಂಥ ಶ್ರೀಮಂತರ ಕೈಯಲ್ಲಿ ದುಡಿದು ದುಡಿದು ನರಳಿದ ಕಟು ಅನುಭವದಿಂದ ಹೀಗೆಲ್ಲ ಮಾತನಾಡಿದೆ. ಇಪ್ಪತ್ತೈದು ವರ್ಷಗಳ ಕಾಲ ಬೇರೆ ಬೇರೆಯವರು ನಮ್ಮನ್ನು ತಮ್ಮ ಗಾಣಗಳಲ್ಲಿ ಹಾಕಿ ಹಿಂಡಿದರು. ಆದರೂ ಬದುಕಿ ಉಳಿದಿದ್ದೇನೆ. ನನ್ನ ಹಾಗೆ ನಿಮ್ಮನ್ನೂ ಅವರು ಗಾಣಕ್ಕೆ ಹಾಕಿ ಹಿಂಡಿಯಾರು ಎಂಬ ಭಯದಿಂದ ಇಷ್ಟೆಲ್ಲ ಹೇಳಿದೆ. ದಯವಿಟ್ಟು ಏನೂ ತಿಳಿದುಕೊಳ್ಳಬೇಡಿ. ನೀವು ಕಂಪನಿ ಮಾಡಬಾರದೆಂದು ನನ್ನ ಅಭಿಪ್ರಾಯವಲ್ಲ. ಆದರೆ ಹುಷಾರಾಗಿ ಇರಿ. ಎಲ್ಲಿದ್ದರೂ ನಿಮ್ಮ ನಮ್ಮ ವಿಶ್ವಾಸಕ್ಕೇನೂ ಆತಂಕವಿಲ್ಲವಲ್ಲ. ಪ್ರಸಂಗ ಬಂದರೆ ಮತ್ತೆ ಕೂಡಬಹುದು. ಕೂಡಿ ಕೆಲಸ ಮಾಡಬಹುದು. ಏನಾದರೂ ನಾವು ನೀವೆಲ್ಲ ಒಂದು ವರ್ಗದವರು. ಇಂದಿಲ್ಲ ನಾಳೆ ಮತ್ತೆ ಜೊತೆಯಾಗಿಯೆ ಕೆಲಸ ಮಾಡಬೇಕಾಗುವುದು!''

''ಆಗಲಿ ರಂಗಯ್ಯ. ನಾನೀಗ ಹೊರಡುತ್ತೇನೆ. ಕ್ರಾಂತಿಯ ಬಗ್ಗೆ ನಾವು ನಿಮಗೆ ಕೊಡಬೇಕಾದ ಹಣದ ಬಗ್ಗೆ ಏನು ಏರ್ಪಾಟು ಮಾಡೋಣ?'' ಎಂದ ಚಂದ್ರಣ್ಣ.

''ನಿಮಗೆ ತಿಳಿದ ಹಾಗೆ ಮಾಡಿ ಸಾರ್.''

''ಸದ್ಯಕ್ಕಂತೂ ನನ್ನ ಹತ್ತಿರ ಹಣವಿಲ್ಲವೆನ್ನುವುದು ನಿಮಗೆ ಗೊತ್ತಿದೆ. ಎಲ್ಲಾ ಸೇರಿ ನಾವು ನಿಮಗೆ ಸುಮಾರು ಮೂರು ನೂರು ರೂಪಾಯಿ ಕೊಡಬೇಕಾಗುತ್ತದೆ. ಅದೂ ನನ್ನದೆ ಜವಾಬ್ದಾರಿ. ನನ್ನ ಹತ್ತಿರ ಹಣ ಬರುವುದು ಎಂದೋ ಹೇಳಲಾರೆ.''

''ಬಂದಾಗ ಕೊಡಿ ಸಾರ್. ಏನೂ ಅವಸರವಿಲ್ಲ. ಹಣ ಎಲ್ಲಿ ಹೋಗುತ್ತೆ?'' ಎಂದ ರಂಗಯ್ಯ.

ಅಂದು ಸಾಯಂಕಾಲ ಶಿವಯೋಗಿಯ ಹತ್ತಿರ ಮಾತನಾಡುವಾಗ ಚಂದ್ರಣ್ಣ ರಂಗಯ್ಯನಿಗೆ ಕೊಡಬೇಕಾದ ಹಣದ ವಿಷಯ ಪ್ರಸ್ತಾಪಿಸಿದ. ಶಿವಯೋಗಿ ಕೊಂಚ ಹೊತ್ತು ಯೋಚಿಸುತ್ತಿದ್ದು - ''ಹೇಗೂ ಕಂಪನಿಯನ್ನು ಮಾಡಿದ್ದೇವೆ. ರಂಗಯ್ಯನೂ ಮೂವತ್ತು ಶೇರು ಕೊಂಡುಬಿಡಲಿ. ಈ ಮೂರುನೂರು ರೂಪಾಯಿಗಳನ್ನು ಅವನ ಹೆಸರಿಗೆ ಜಮೆ ಹಿಡಿದುಬಿಟ್ಟರಾಯಿತು!'' ಎಂದು ಹೇಳಿದ.

ಚಂದ್ರಣ್ಣ ಬೆಚ್ಚಿಬಿದ್ದು - ''ಅದು ಹೇಗಾದೀತು ಯೋಗಿ! ಆತ ಬಡವ. ಎರಡು ತಿಂಗಳುಗಳ ಕಾಲ ಬೆವರಿಳಿಸಿ ದುಡಿದಿದ್ದಾನೆ. ಷೇರ್ ಕೊಳ್ಳುವಂಥ ಸ್ಥಿತಿ ಅವನಿಗಿನ್ನೂ ಬಂದಿಲ್ಲ. ಅವನನ್ನು ಕೇಳದೆ ಈ ಕೆಲಸ ಮಾಡಬಾರದು'' ಎಂದ.

''ನಿಧಾನವಾಗಿ ಕೇಳಿದರಾಯಿತು. ಶೇರ್ ಫಾರ್ಮಿಗೆ ಆತನ ಸಹಿಯಾಗು ವಾಗಲಂತೂ ಕೇಳಲೇಬೇಕಾಗುವುದಲ್ಲ? ಆ ಮುನ್ನೂರು ರೂಪಾಯಿಗಳ ಬಗ್ಗೆ ನೀವು ಚಿಂತೆ ಮಾಡಬಾರದೆಂದು ನಾನೀಗ ಈ ಮಾತು ತೆಗೆದೆ ಅಷ್ಟೆ''

''ಅಂತೂ ಇಂದಿಲ್ಲ ನಾಳೆ ನಾನು ಕೊಡಲೇಬೇಕಾಗುವುದಲ್ಲವೆ? ಆತನಿಗೆ ಕೊಡದಿದ್ದರೂ ಆತನ ಶೇರುಗಳ ಬಗ್ಗೆ ಕಂಪನಿಗಾದರೂ ಕೊಡಲೇಬೇಕಲ್ಲ?''

ಶಿವಯೋಗಿ ಗಟ್ಟಿಯಾಗಿ ನಕ್ಕುಬಿಟ್ಟ – ''ಕಂಪನಿಗೆ? ನಮಗೇ ಸಾವಿರಾರು ರೂಪಾಯಿ ಬರಬೇಕಾಗುತ್ತದೆ ಕಂಪನಿಯಿಂದ. ಇನ್ನು ಈ ಮುನ್ನೂರು ರೂಪಾಯಿನ ಲೆಕ್ಕವೆಲ್ಲಿ? ನೀವಿನ್ನೂ ಹಸುಮಕ್ಕಳಂತಿದ್ದೀರಿ. ವ್ಯವಹಾರ ಸ್ವಲ್ಪವೂ ತಿಳಿಯದು!'' ಎಂದ. ಒಂದೆರಡು ಕ್ಷಣ ಬಿಟ್ಟು – ''ಧರ್ಮಪುರದಲ್ಲಿ ಬಿಲ್ಡಿಂಗ್ ಕಂಪನಿ ಮಾಡಿರುವ ನಮ್ಮ ತುಂಗಭದ್ರಯ್ಯನವರ ಹೆಸರು ನೀವು ಕೇಳಿಲ್ಲವೆ? ಎಂಥ ಚಾಣಾಕ್ಷ ಆತ! ವ್ಯವಹಾರವನ್ನು ಕಲಿತುಕೊಳ್ಳಬೇಕಾದರೆ ಆವರಿಂದ ಕಲಿಯಬೇಕು,'' ಎಂದ.

''ತುಂಗಭದ್ರಯ್ಯ?''

''ತೆಳ್ಳಗೆ ಉದ್ದವಾಗಿರುವರಲ್ಲ? ಆಗಾಗ ಬೆಂಗಳೂರಿಗೂ ಬರುತ್ತಿರುತ್ತಾರೆ. ನೀವು ನೋಡಿರಬಹುದು...''

''ಇಲ್ಲ.''

''ಅಗತ್ಯವಾಗಿ ನೋಡಬೇಕು. ಧರ್ಮಪುರಕ್ಕೆ ಹೋಗುತ್ತಲೂ ಮೊದಲು ಅವರ ಪರಿಚಯ ಮಾಡಿಸಿಕೊಡುತ್ತೇನೆ. ಎಂದು ಹೊರಡುವುದು ಧರ್ಮಪುರಕ್ಕೆ?''

''ಹೊರಡೋಣ ಇಷ್ಟರಲ್ಲೇ.''

## ೮

''ಮೂವತ್ತು ಜನ ಕೂಡ್ರುವದು.''

ರೈಲು ಡಬ್ಬಿಯಲ್ಲಿ ದೀಪದ ಬೆಳಕಿನಲ್ಲಿ ಎದ್ದು ಕಾಣುತ್ತಿದ್ದ ಆ ಬರಹ ದೃಷ್ಟಿಗೆ ಬಿದ್ದಾಗ ಚಂದ್ರಣ್ಣನಿಗೆ ನಗು ಬರದಿರಲಿಲ್ಲ. ಎಪ್ಪತ್ತಕ್ಕಿಂತ ಹೆಚ್ಚು ಜನ ತುಂಬಿದ್ದರು ಆ

ಡಬ್ಬಿಯಲ್ಲಿ, ಇಂಟರ್ ವರ್ಗದಲ್ಲಿ ಹೋದರಾಯಿತೆಂದು ಶಿವಯೋಗಿ ಸೂಚಿಸಿದ್ದರೂ ಚಂದ್ರಣ್ಣ ಅದಕ್ಕೊಪ್ಪಿಕೊಂಡಿರಲಿಲ್ಲ. ಇದುವರೆಗಿನ ತನ್ನ ಜೀವಮಾನದಲ್ಲೇ ಆತ ಮೂರನೆಯ ವರ್ಗವನ್ನು ಬಿಟ್ಟು ಬೇರೆ ಕಡೆ ಅಡಿಯಿರಿಸಿರಲಿಲ್ಲ. ಮೂರನೆಯ ವರ್ಗದ ಟಿಕೆಟ್ಟಿಗೆ ಸಹ ಹಣವಿಲ್ಲದೆ ಗೋಳಾಡಿದ ದಿನಗಳನ್ನು ಆತ ಕಂಡಿದ್ದ. ಆದುದರಿಂದ ಒಮ್ಮಿಂದೊಮ್ಮೆಲೆ ತನ್ನ ಜೀವನದ ಅಂತಸ್ತನ್ನು ಬೆಳೆಸಲು ಆತನಿಗೆ ಸಂಕೋಚವೆನ್ನಿಸಿದ್ದಿತು.

ಜನರಿಂದ ಕಿಕ್ಕಿರಿದು ತುಂಬಿದ್ದ ಆ ಡಬ್ಬಿಯಲ್ಲಿ ಅವರಿಬ್ಬರೂ ಹೇಗೋ ಸ್ಥಳ ಹುಡುಕಿಕೊಂಡು ಕುಳಿತುಕೊಂಡಿದ್ದರು. ಹದಿನೈದು ನಿಮಿಷಗಳವರೆಗೆ ಕಷ್ಟಪಟ್ಟ ಮೇಲೆ ಅವರ ಸಾಮಾನುಗಳಿಗೂ ಸ್ಥಳ ದೊರೆತಿದ್ದಿತು. 'ಕ್ರಾಂತಿ'ಯ ಸಂಸಾರವೆಲ್ಲವೂ ಚಂದ್ರಣ್ಣನನ್ನು ಹಿಂಬಾಲಿಸಿಕೊಂಡು ಬಂದಿದ್ದಿತು. ಪತ್ರಿಕೆಗೆ ಸಂಬಂಧಪಟ್ಟ ಕಾಗದ ಪತ್ರಗಳು, ಚಂದಾದಾರರ ಯಾದಿ, ಏಜಂಟರ ಯಾದಿ, ಇತ್ಯಾದಿ ಪುಸ್ತಕಗಳು, ಪತ್ರಿಕೆಯ ಹಳೆಯ ಸಂಚಿಕೆಗಳು, ಫೈಲುಗಳು, ಮಹತ್ವದ ವೃತ್ತಪತ್ರಿಕೆಗಳ ಕಟ್ಟುಗಳು, ಪತ್ರಿಕೆಯ ಹೆಸರಿನ ಹಲಗೆ – ಕಾರ್ಯಾಲಯದ ಎದುರಿಗೆ ಒಂದು ವರ್ಷದವರೆಗೆ ತೂಗಾಡುತ್ತಿದ್ದ ಹಲಗೆ – ಎಲ್ಲವನ್ನೂ ಕಟ್ಟಿಕೊಂಡು ಬರಬೇಕಾಗಿದ್ದಿತು. ಅವನದಾದ ಸಾಮಾನು ಮಾತ್ರ ಹೆಚ್ಚಿಗಿರಲಿಲ್ಲ, ಹಾಸುಗೆಯ ಸುರುಳಿಯೊಂದರಲ್ಲಿ ಎಲ್ಲವೂ ಮುಚ್ಚಿಹೋಗಿದ್ದಿತು.

"ರಾತ್ರಿಯೆಲ್ಲ ನಿದ್ರೆಗೆ ಚಕ್ಕರು. ಬೆಳಗಿನ ರೈಲಿಗೆ ಬಂದಿದ್ದರೆ ಚೆನ್ನಾಗಿರುತ್ತಿತ್ತೋ ಏನೊ!" ಎಂದ ಚಂದ್ರಣ್ಣ.

"ಬೆಳಗಿನ ಗಾಡಿಯಲ್ಲಿ ಗದ್ದಲವಿರುವುದಿಲ್ಲವೆಂದು ತಿಳಿದಿದ್ದೀರಾ? ಇದಕ್ಕಿಂತ ಹತ್ತು ಪಟ್ಟು ಹೆಚ್ಚು ಗದ್ದಲ ಅದಕ್ಕೇ. ಹಗಲು ಸೆಕೆ ಬೇರೆ. ಜನದ ಗಲಾಟೆಯಲ್ಲಿ ಉಸಿರಾಡುವುದೂ ಕಷ್ಟವಾಗುತ್ತದೆ. ರಾತ್ರಿ ಗಾಡಿಯೆ ವಾಸಿ. ತಂಪಾಗಿಯಾದರೂ ಇರುತ್ತದೆ," ಎಂದ ಶಿವಯೋಗಿ.

"ಧರ್ಮಪುರದವರೆಗೂ ಹೀಗೇ ಅನ್ನಿ."

"ಹಾಗೇನೂ ಇಲ್ಲ. ನಡುವೆ ಅರಸೀಕೆರೆಗೆ ಅರ್ಧಕ್ಕರ್ಧ ಜನ ಇಳಿದು ಹೋಗುತ್ತಾರೆ. ತುಮಕೂರಿಗೆ ಇಳಿಯುವ ಜನವೂ ಬಹಳ. ಮುಂದೆ ಕೊಂಚ ಕಾಲು ಚಾಚಿ ಒರಗಿಕೊಳ್ಳಬಹುದು."

"ಅಲ್ಲಿಯವರೆಗೆ?"

"ಶಿವರಾತ್ರಿ," ಎಂದು ನಕ್ಕ ಶಿವಯೋಗಿ.

ಕಂಪನಿ, ಧರ್ಮಪುರ, ಅಲ್ಲಿನ ಜನ, ಪತ್ರಿಕೆ ಇತ್ಯಾದಿ ವಿಷಯ ಮಾತನಾಡುತ್ತ ಇಬ್ಬರೂ ಹೊತ್ತು ಕಳೆಯತೊಡಗಿದರು. ತುಮಕೂರು ನಿಲ್ದಾಣವನ್ನು ಬಿಟ್ಟು ಗಾಡಿ ಮುಂದೆ ಹೊರಡುವುದರಲ್ಲಿದ್ದಾಗ ಯುವಕನೊಬ್ಬ ಡಬ್ಬಿಯನ್ನೇರಿ ಬಂದ. ಆತನಿಗೆ ಸುಮಾರು ಇಪ್ಪತ್ತೇಳು ವರ್ಷ ವಯಸ್ಸಿರಬಹುದು. ಆತ ತೊಟ್ಟಿದ್ದೆಂದರೆ ಒಂದು ಅಂಗಿ, ಒಂದು ಪ್ಯಾಂಟು. ತಲೆಗೂದಲು ಚೆಲ್ಲಾಪಿಲ್ಲಿಯಾಗಿ ಹರಡಿ ಅಸ್ತವ್ಯಸ್ತವಾಗಿದ್ದಿತು.

ಡಬ್ಬಿಯೊಳಕ್ಕೆ ಬರುತ್ತಲೂ ಆತನ ತೀಕ್ಷ್ಣದೃಷ್ಟಿ ಮಿಂಚಿನಂತೆ ಅತ್ತ ಇತ್ತ ಹರಿದು ಕುಳಿತಿದ್ದ ಜನರನ್ನೆಲ್ಲ ನಿರೀಕ್ಷಿಸಿತು. ಚಂದ್ರಣ್ಣನನ್ನು ಕಂಡೊಡನೆ ಆತನ ಮುಖದ ಮೇಲೆ ಮಂದಹಾಸ ಸುಳಿದಂತಾಯಿತು. ಹತ್ತಿರ ಬರುತ್ತಾ – "ಹಲೋ," ಎಂದು ಕೂಗಿದ.

ಕಣ್ಣುಗಳನ್ನು ಅರ್ಧಕ್ಕೆ ಮುಚ್ಚಿಕೊಂಡು ನಿದ್ರೆಯ ಆರಾಧನೆಯಲ್ಲಿ ತೊಡಗಿದ್ದ ಚಂದ್ರಣ್ಣ ಬೆಚ್ಚಿ ಬಿದ್ದು ಎಚ್ಚತ್ತುಕೊಂಡ, ಕಣ್ಣುಗಳನ್ನು ಅಗಲವಾಗಿ ತೆರೆದು ಆ ಯುವಕನನ್ನು ನಿಟ್ಟಿಸಿನೋಡಿದ, ಗುರುತು ತಿಳಿಯಿತೇನೋ – "ಓಹ್ಹೊ! ನೀವೊ! ಬನ್ನಿ, ಎಲ್ಲಿಂದ ಎಲ್ಲಿಗೆ?" ಎಂದು ನುಡಿಯುತ್ತ ಕೊಂಚ ಸರಿದು ಆತನಿಗೂ ಸ್ಥಳ ಮಾಡಿಕೊಟ್ಟ

"ಇವರು ನಮ್ಮ ಸ್ನೇಹಿತರು ಶಿವಯೋಗಿಗಳು ಇವರು..." ಎಂದು ಚಂದ್ರಣ್ಣ ಪರಿಚಯ ಕಾರ್ಯಕ್ಕೆ ಮೊದಲು ಮಾಡಿದಾಗ ಶಿವಯೋಗಿ ಆತನನ್ನು ನಡುವೆಯೆ ತಡೆದು "ನಾನಿವರನ್ನು ಎಲ್ಲೋ ನೋಡಿದ ಹಾಗಿದೆ," ಎಂದ.

ಆ ಯುವಕ ಮುಗುಳುನಗೆ ಬೀರುತ್ತ – "ಯಾವುದಾದರೂ ಸಭೆಯಲ್ಲಿ ನೋಡಿರಬಹುದು ಅಲ್ಲವೆ?" ಎಂದ.

"ಹಾಂ. ಈಗ ನೆನಪಾಯಿತು, ಧರ್ಮಪುರದಲ್ಲಿ ಮೊನ್ನೆ ಮೊನ್ನೆ ನಡೆದ ಸಾರ್ವಜನಿಕ ಸಭೆಯೊಂದರಲ್ಲಿ ನೀವು ಮಾತನಾಡಿದಿರಲ್ಲವೆ? ಅಂದು ನಾನು ಆ ಸಭೆಗೆ ಬಂದಿದ್ದೆ, ನಿಮ್ಮ ಹೆಸರೂ ಸಹ ನಾನು ಕೇಳಿದ್ದೇನೆ. ಆದರೆ ಮರೆತುಬಿಟ್ಟೆ..."

"ಇವರು ಶಂಕರ್. ಪ್ರಸಿದ್ಧ ಕಮ್ಯೂನಿಸ್ಟ್ ಕಾರ್ಯಕರ್ತರು. ಧರ್ಮಪುರ ಗಿರಣಿ ಕೂಲಿಕಾರ ಸಂಘದ ಅಧ್ಯಕ್ಷರು..." ಎಂದ ಚಂದ್ರಣ್ಣ

''ಗೊತ್ತಾಯಿತು, ಗೊತ್ತಾಯಿತು. ಇವರ ವಿಷಯ ಎಲ್ಲಾ ಗೊತ್ತಿದೆ ನನಗೆ. ಪರಿಚಯವಿರಲಿಲ್ಲ ಅಷ್ಟೆ ನಿಮ್ಮನ್ನು ಕಂಡು ಬಹಳ ಸಂತೋಷವಾಯಿತು,'' ಎಂದು ಬಾಯಿ ತೆರೆದು ನಗೆಯ ಬುಗ್ಗೆಯೊಂದನ್ನು ಹೊರದೂಡಿದ ಶಿವಯೋಗಿ.

''ಹ ಹ ಹಿ ಹಿ,'' ಎಂದು ಶಂಕರನೂ ಮನಃಪೂರ್ವಕವಾಗಿ ನಕ್ಕ. ಅವನ ಕಣ್ಣುಗಳೂ ನಗುತ್ತಿದ್ದ ಹಾಗೆ ತೋರುತ್ತಿತ್ತು.

ಚಂದ್ರಣ್ಣ ವಿಸ್ಮಯದಿಂದ ಶಿವಯೋಗಿಯ ಮುಖವನ್ನೇ ಮಿಕಿಮಿಕಿ ನೋಡುತ್ತಿದ್ದ. ''ನಿಮ್ಮನ್ನು ಕಂಡು ಬಹಳ ಸಂತೋಷವಾಯಿತು!'' ಎಂಬ ಮಾತು ಎಷ್ಟು ಸಹಜವಾಗಿ ಬಂದಿತ್ತು ಆತನ ಮುಖದಿಂದ! ಅಂದು ಪರದೇಶಿ ಪಾರ್ಕಿನಲ್ಲಿ ಗಿರಣಿಯ ಕೂಲಿಕಾರರ ಮಾತು ಬಂದಾಗ ಇದೇ ಶಿವಯೋಗಿ ಶಂಕರನನ್ನು ಕುರಿತು ಆಡಿದ ವಾಕ್ಯಗಳು ಚಂದ್ರಣ್ಣನ ನೆನಪಿಗೆ ಬಂದವು – 'ಪಕ್ಕಾ ಪುಂಡ ಕಣ್ರೀ ಆತ. ಗಿರಣಿಯಲ್ಲಿ ಆತನ ಗಲಾಟೆಯೋ ಗಲಾಟೆ. ಹತ್ತಿಪ್ಪತ್ತು ಜನ ಹುಂಬರನ್ನು ಕಟ್ಟಿಕೊಂಡು ಗದ್ದಲ ಮಾಡುತ್ತ ತಿರುಗುತ್ತಿರುತ್ತಾನೆ' – ಎಂಬ ಆ ಮಾತುಗಳೆಲ್ಲಿ! ಯಾವ ಮಾತು ನಂಬಬೇಕು? ಯಾವುದನ್ನು ನಂಬದಿರಬೇಕು? ಆತ ಪಕ್ಕಾ ಪುಂಡನೆಂಬ ಬಗ್ಗೆ ಶಿವಯೋಗಿಗೆ ನಂಬಿಕೆಯಾಗಿದೆಯೆ? ಆ ಪುಂಡನನ್ನು ಕಂಡು ಈ ನಿಜಕ್ಕೂ ಆತನಿಗೆ ಸಂತೋಷವಾಗಿದೆಯೆ?

ಶಿವಯೋಗಿ ಮಾತನಾಡುತ್ತಿದ್ದ:

''ನಿಮ್ಮ ಭಾಷಣ ಕೇಳಿ ನಾನು ಮೆಚ್ಚಿಕೊಂಡಿದ್ದೇನೆ. ಬಹಳ ಸೊಗಸಾಗಿ ಮಾತನಾಡುತ್ತೀರಿ. ಭಾಷಣವೆಂದರೆ ಜೋಗದ ಜಲಪಾತದಂತೆ. ಅಂಥ ರಭಸ, ಮಶೀನ್‌ಗನ್ನಿನಿಂದ ಗುಂಡು ಸಿಡಿಯುವ ಹಾಗೆ ಮಾತು ಬರುತ್ತದೆ ನಿಮ್ಮ ಮುಖದಿಂದ!''

ಸಂತೋಷದಿಂದ ಮುಖಸ್ತುತಿಗೆ ಹಾರುತ್ತಿದ್ದ ಶಿವಯೋಗಿ! ಚಂದ್ರಣ್ಣ ಕೌತುಕದಿಂದ ಶಂಕರನ ಮುಖವನ್ನೇ ನಿಟ್ಟಿಸುತ್ತಿದ್ದ. ಆತ ತುಟಿಗಳಲ್ಲಿಯೆ ನಗುತ್ತಿದ್ದ! ಶಿವಯೋಗಿಯ ಸ್ವಭಾವವನ್ನು ಆತ ಅರ್ಥ ಮಾಡಿಕೊಂಡಂತೆ ತೋರುತ್ತಿತ್ತು.

''ತುಮಕೂರಿನಿಂದ ಬಂದಿರಾ?'' ಎಂದ ಶಿವಯೋಗಿ.

''ಇಲ್ಲ, ಬೆಂಗಳೂರಿನಿಂದಲೇ ಬಂದೆ, ಇಷ್ಟು ಹೊತ್ತು ಬೇರೊಂದು ಡಬ್ಬಿಯಲ್ಲಿದ್ದೆ. ಅಲ್ಲಿ ನಿಂತುಕೊಳ್ಳಲು ಸಹ ಸ್ಥಳವಿರಲಿಲ್ಲ. ಆದಕ್ಕಾಗಿ ಇಲ್ಲಿ ಹತ್ತಿದೆ. ನಿಮಗೆ

ತೊಂದರೆ ಕೊಟ್ಟಂತಾಯಿತು. ಇದ್ದುದರದಲ್ಲೇ ಸ್ವಲ್ಪ ಹಾಯಾಗಿ ಕಾಲು ಚಾಚಿಕೊಂಡು ಹೋಗುತ್ತಿದ್ದಿರಿ, ನಾನು ಬಂದುದರಿಂದ ಇನ್ನೂ ಅಡಚಣೆಯಾಯಿತು!'' ಎಂದ ಶಂಕರ.

''ಛೆ! ಛೆ! ಹಾಗೇನೂ ಇಲ್ಲ. ನಿಮ್ಮಂಥವರ ಪರಿಚಯ, ಸಹವಾಸ ಲಭಿಸುವುದೇ ಒಂದು ದೊಡ್ಡ ವಿಷಯ. ಆಕಸ್ಮಾತ್ತಾಗಿ ಭೆಟ್ಟಿಯಾದಿರಲ್ಲ, ಧರ್ಮಪುರ ದವರೆಗೂ ಮಾತನಾಡುತ್ತ ಹೋಗಬಹುದು. ಅಂದ ಹಾಗೆ ನೀವು ಬಹಳ ಪ್ರವಾಸ ಮಾಡಬೇಕಾಗುವುದೇನು?''

''ಆಗಾಗ ಹೋಗಬೇಕಾಗುತ್ತದೆ. ಈಗ ನೋಡಿ ಆಕಸ್ಮಾತ್ತಾಗಿ ಬೆಂಗಳೂರಿಗೆ ಬರಬೇಕಾಯಿತು, ಲೇಬರ್ ಕಮೀಷನರನ್ನು ಕಾಣುವುದಕ್ಕೆ. ಅಲ್ಲಿ ಗಿರಣಿಯ ಕೆಲಸ ಬೇರೆ ಕಾದಿರುತ್ತದೆ. ನಾಳೆ ಬೆಳಿಗ್ಗೆ ಕೆಲಸಕ್ಕೆ ಹಾಜರಾಗಬೇಕು.''

''ಬೆಂಗಳೂರಿಗೆ ಬಂದದ್ದು ಯಾವಾಗ?''

''ನಿನ್ನೆ ರಾತ್ರಿ ಗಾಡಿಗೆ ಬಂದೆ. ಈ ದಿನವೆಲ್ಲ ಬೆಂಗಳೂರು ರಾತ್ರಿ ಪುನಃ ರೈಲು.''

''ಅಂದರೆ! ಎರಡು ರಾತ್ರಿ ನಿದ್ರೆ ಬಿಟ್ಟ ಹಾಗೇ ಅನ್ನಿ.''

''ಹಾಗೇನೂ ಇಲ್ಲ. ಎಲ್ಲಾದರೂ ಸ್ಥಳ ಹುಡುಕಿ ಒಂದು ನಿದ್ರೆ ತೆಗೆದೇ ಬಿಟ್ಟಿರುತ್ತೇನೆ. ನಿನ್ನೆ ರಾತ್ರಿ ಬರುವಾಗ ಮೇಲೆ ಒಂದು ಹಲಗೆ ಸಿಕ್ಕಿತ್ತು. ಸುಖವಾಗಿ ಬೆಂಗಳೂರಿನವರೆಗೂ ನಿದ್ರೆ ಮಾಡಿಕೊಂಡು ಬಂದೆ. ಇಂದೂ ಸಿಗಬಹುದು. ನೋಡೋಣ.''

''ಕೂಲಿಕಾರರ ಸಂಘ ನಿಮ್ಮ ಕೈಗೆ ಬಂದು ಎಷ್ಟು ದಿನವಾಯಿತು?'' ಎಂದು ಕೇಳಿದ ಚಂದ್ರಣ್ಣ.

''ಆರು ತಿಂಗಳಾಗುತ್ತ ಬಂತು. ಆಗಲೇ ಶಕ್ತಿಯುತವಾಗಿದೆ. ಎಂಟು ನೂರು ಜನ ಸದಸ್ಯರಿದ್ದಾರೆ.''

''ಗಿರಣಿಯಲ್ಲಿರುವ ಕೂಲಿಕಾರರೆಷ್ಟು ಜನ?''

''ಸುಮಾರು ಹನ್ನೆರಡುನೂರು ಜನ ಇರಬಹುದು.''

''ಹನ್ನೆರಡು ನೂರು ಜನರಲ್ಲಿ ಎಂಟು ನೂರು ಜನ ಸಂಘಕ್ಕೆ ಸೇರಿರುವ ರೆಂದರೆ ಪರವಾಯಿಲ್ಲ. ಚೆನ್ನಾಗಿ ಸಂಘಟನೆ ಮಾಡಿದ್ದೀರಿ. ಕೆಲಸಗಾರರಲ್ಲಿ ಒಗ್ಗಟ್ಟು ಇದೆ ತಾನೆ?''

''ಅದೇನು ಹೀಗೆ ಕೇಳುತ್ತೀರಿ? ಕೆಂಪು ಬಾವುಟಕ್ಕಾಗಿ ಪ್ರಾಣವನ್ನು ಕೊಡಬಲ್ಲವರು!''

''ಸೋಷಲಿಸ್ಟರು ಬೇರೆ ಕೆಲಸಗಾರರನ್ನು ಹೊಡೆಯುತ್ತಿರುವರೆಂದು ಕೇಳಿದೆ. ನಿಜವೆ?'' ಎಂದ ಶಿವಯೋಗಿ.

''ಅವರಿಂದೇನಾದೀತು ಬಿಡಿ. ಕೂಲಿಕಾರರಿಗೆ ಕೊಂಚವೂ ವಿಶ್ವಾಸವಿಲ್ಲ ಆ ದ್ರೋಹಿಗಳ ಬಗ್ಗೆ ಅವರು ಮಾತ್ರವಲ್ಲ – ಮಾಲೀಕರೂ ಅಂಥ ಪ್ರಯತ್ನ ನಡೆಸಿದ್ದಾರೆ. ಕೆಲವರು ಕೆಲಸಗಾರರಿಗೆ ಕುಡಿತದ ಚಟ ಕಲಿಸಿ ಅವರನ್ನು ಬಲೆಗೆ ಹಾಕಿಕೊಂಡು ಸಂಘವನ್ನು ಮುರಿಯಲು ಸಂಚು ಹೂಡುತ್ತಿದ್ದಾರೆ. ಆದರೆ ಇವರ ಪ್ರಯತ್ನವೊಂದೂ ಯಶಸ್ವಿಯಾಗಲು ಸಾಧ್ಯವಿಲ್ಲ.''

''ಮಾಲೀಕರಿಗೆ ಸರಕಾರದ ಬೆಂಬಲವೂ ಇದೆಯಂತಲ್ಲ?''

''ಇರಬೇಕಾದುದೇ. ಹೇಳಿ ಕೇಳಿ ಬಂಡವಾಳಶಾಹಿ ಸರಕಾರ.''

''ಸರಕಾರದ ಬೆಂಬಲ, ಕಾಂಗ್ರೆಸ್ಸಿನ ಬೆಂಬಲ ಎರಡೂ ಮಾಲೀಕರಿಗಿರುವಾಗ ಅವರ ಶಕ್ತಿ ಹೆಚ್ಚುವುದಿಲ್ಲವೆ?''

''ಅದು ನಿಜವಾದ ಶಕ್ತಿಯಲ್ಲ. ನಿಜವಾದದ್ದು ಜನತೆಯ ಶಕ್ತಿ. ಸಾಮಾನ್ಯ ಜನದ ಶಕ್ತಿ. ಬೆವರಿಳಿಸಿ ದುಡಿಯುವ ಕೂಲಿಕಾರರ ಶಕ್ತಿ. ಈ ಶಕ್ತಿಯೆದುರಿಗೆ ಯಾರ ಆಟ ಏನೂ ನಡೆಯಲಾರದು. ಇಂದಿಲ್ಲ ನಾಳೆ ನಮ್ಮ ಕೆಂಪು ಬಾವುಟಕ್ಕೆ ಎಲ್ಲರೂ ಮಣಿಯಬೇಕಾಗುವುದು.''

ಕೆಂಪು ಬಾವುಟದ ಬಗೆಗೆ ಆತನಿಗಿದ್ದ ಆ ಪೂರ್ಣ ಅಭಿಮಾನವನ್ನು ಕಂಡು ಚಂದ್ರಣ್ಣನಿಗೆ ವಿಸ್ಮಯವಾಗದಿರಲಿಲ್ಲ. ''ಹಿಂದೂಸ್ಥಾನ ಈಗ ಸ್ವತಂತ್ರವಾಗಿದೆ. ನಮ್ಮ ರಾಷ್ಟ್ರಧ್ವಜವನ್ನು ನೀವು ಮನ್ನಿಸುತ್ತೀರೋ ಇಲ್ಲವೋ?'' ಎಂದು ಆತ ಕೇಳಿದ.

''ಇಲ್ಲ''

''ಅದೇಕೆ?''

''ಜನತೆಯ ನಿಜವಾದ ಪ್ರತಿನಿಧಿಗಳಿಂದ ಆರಿಸಲ್ಪಟ್ಟ ಘಟನಾಸಭೆ ಗೊತ್ತು ಮಾಡಿದ ಧ್ವಜಕ್ಕೆ ಮಾತ್ರ ನಾವು ಮನ್ನಣೆ ಕೊಡುವೆವು.''

''ಅಂದರೆ? ಈ ಘಟನಾಸಭೆ ನಿಜವಾದ ಪ್ರತಿನಿಧಿಗಳಲ್ಲವೆಂದು ನಿಮ್ಮ ಅಭಿಪ್ರಾಯವೋ?''

''ಹೌದು. ಜನರು ಆರಿಸಿ ಕಳುಹಿಸಿದ ಪ್ರತಿನಿಧಿಗಳದಲ್ಲ ಈ ಘಟನಾಸಭೆ. ಇದನ್ನು ಬ್ರಿಟೀಷರು ನಿಯಮಿಸಿದರು. ಈಗಿನ ಕೇಂದ್ರ ಮಂತ್ರಿಮಂಡಲವೂ ಅಷ್ಟೆ ಮೌಂಟ್‌ಬ್ಯಾಟನ್ನರ ಮಂತ್ರಿಮಂಡಲ. ಬಂಡವಾಳಗಾರರ ಕೈಗೊಂಬೆಗಳೂ, ಜಾತೀಯವಾದಿಗಳೂ, ಅಧಿಕಾರಲಲಾಸೆಯವರೂ ತುಂಬಿಕೊಂಡಿರುವ ಮಂತ್ರಿ ಮಂಡಲ.''

''ಇವರನ್ನು ಹಿಡಿತದಲ್ಲಿಡಲು ನೆಹರೂ ಪಟೇಲರಿರುವರಲ್ಲ?''

''ಪಟೇಲರು ಬಂಡವಾಳಗಾರರ ಪ್ರತಿನಿಧಿ ಎಂಬುದು ದೇಶಕ್ಕೆಲ್ಲ ಗೊತ್ತಿರುವ ವಿಷಯ. ಆರ್.ಎಸ್.ಎಸ್.ನಂಥ ಸಂಸ್ಥೆಗಳ ಬಗೆಗೆ ಅವರಿಗಿರುವ ಅಭಿಮಾನ ನಿಮಗೆ ತಿಳಿಯದೇ? ಈ ಪ್ರತಿಗಾಮಿಗಳ ಗುಂಪಿಗೆ ಸೇರಿಕೊಂಡು ನೆಹರೂ ಸಹ ಪ್ರತಿಗಾಮಿ ಯಾಗಿದ್ದಾರೆ, ಜನತೆಯಿಂದ ಅವರು ದೂರ ಹೋಗಿದ್ದಾರೆ. ನವದೆಹಲಿಯಲ್ಲಿ ಕುಳಿತು ದರಬಾರು ನಡೆಸುತ್ತಿರುವ ಈ ಮುಖಂಡರಿಗೆ ಸಾಮಾನ್ಯ ಜನದ ಕಷ್ಟ ದುಃಖಗಳ ಅರಿವಿಲ್ಲ. ನಮ್ಮಲ್ಲೂ ಅಷ್ಟೆ ಜವಾಬ್ದಾರಿ ಸರಕಾರ ಬಂತು ಅಂತ ಹೇಳುತ್ತಾರೆ. ನಿಜಕ್ಕೂ ಬಂದಿರುವುದು ಬೇಜವಾಬ್ದಾರಿ ಸರಕಾರವೆ. ಜನರ ಕಷ್ಟಗಳ ಕಡೆಗೆ ಗಮನವಿದೆಯೆ ಈ ಮಂತ್ರಿಗಳಿಗೆ? ಹೊಸ ಹೊಸ ಮೋಟಾರು ಕಾರುಗಳಲ್ಲಿ ಮೆರೆಯುವುದರಲ್ಲೇ ಇವರ ಕಾಲಹರಣವಾಗುತ್ತಿದೆ...''

''ಮೆರೆಯಬೇಕೆನ್ನುವುದು ಮಾನವಸಹಜವಾದ ಮನೋಭಾವ.''

''ಇರಬಹುದು. ಆದರೆ ಸುತ್ತುಮುತ್ತಲು ಲಕ್ಷಾವಧಿ ಜನ ಅನ್ನವಿಲ್ಲದೆ ನರಳುತ್ತಿರುವಾಗ ಅವರಿಗೆ ಅನ್ನ ಒದಗಿಸಬೇಕಾದುದು ಮೊದಲನೆಯ ಕೆಲಸ. ಅದನ್ನು ಕಡೆಗಣಿಸಿ, ಮೋಟಾರುಗಳಿಗಾಗಿ ಲಕ್ಷಾಂತರ ರೂಪಾಯಿಗಳನ್ನು – ಅದೆಲ್ಲವೂ ಬಡವರ ಹಣವೇ – ಹಾಳು ಮಾಡುವುದು ಅಕ್ಷಮ್ಯ ಅಪರಾಧವೇ ಸರಿ. ಕಾಂಗ್ರೆಸ್ ಮಂತ್ರಿಗಳೆಂದು ಹೇಳಿಕೊಳ್ಳುವ ಈ ಜನ, ಗಾಂಧೀ ಶಿಷ್ಯರೆಂದು ಕರೆದುಕೊಳ್ಳುವ ಈ ಜನ ಇಂಥ ದುಂದುಗಾರಿಕೆ ನಡೆಸಲು ಏಕೆ ನಾಚುವುದಿಲ್ಲ? ಜವಾಬ್ದಾರಿ ತಿಳಿದವರು ಮಾಡುವ

ಕೆಲಸವೇ ಇದು?''

''ನೀವು ಹೇಳುವುದು ಸರಿ. ಈ ಕಾಂಗ್ರೆಸ್ ಮಂತ್ರಿಗಳ ದುಂದುಗಾರಿಕೆಯನ್ನು ಯಾರೂ ಒಪ್ಪಲಾರರು,'' ಎಂದ ಶಿವಯೋಗಿ.

''ಇವರು ಅಧಿಕಾರಸ್ಥಾನಗಳಿಗೇರಬೇಕಾದರೆ ಸಾಮಾನ್ಯ ಜನ ಮಾಡಿದ ತ್ಯಾಗವೆಷ್ಟು, ಸಹಿಸಿದ ಕಷ್ಟವೆಷ್ಟು! ಅದನ್ನೆಲ್ಲ ಮರೆತುಬಿಟ್ಟು ಈ ಜನ ವರ್ತಿಸುವ ರೀತಿಯನ್ನು ಕಂಡರೆ ಯಾರಿಗೆ ತಿರಸ್ಕಾರ ಬರಲಿಕ್ಕಿಲ್ಲ? ಇವರು ಅಧಿಕಾರ ಸ್ವೀಕರಿಸಿದ ಹೊಸದರಲ್ಲಿ ದುರ್ಗದಲ್ಲಿ ಎ.ಎಂ.ಸಿ.ಸಿ. ಸಭೆ ನಡೆದುದು ನಿಮಗೆ ಗೊತ್ತಿದೆಯಲ್ಲ? ನಾನೂ ಹೋಗಿದ್ದೆ ಅದನ್ನು ನೋಡುವುದಕ್ಕೆ. ಮಂತ್ರಿಗಳಾದ ಮೇಲೆ ತಮಗೆ ದೊರೆತ ವೈಭವವನ್ನು ಪ್ರದರ್ಶಿಸುವುದಕ್ಕಾಗಿಯೆ ಬಂದ ಹಾಗಿತ್ತು ಈ ಜನ. ಎ.ಎಂ.ಸಿ.ಸಿ.ಯ ಅಧಿವೇಶನಕ್ಕೆಂದು ಬೆಂಗಳೂರಿನಿಂದ ಒಂದು ಸ್ಪೆಷಲ್ ರೈಲುಗಾಡಿಯನ್ನೆ ಬಿಡಲಾಗಿದ್ದಿತು. ಜನಗಳೆಲ್ಲ ಈ ಗಾಡಿಯಲ್ಲಿ ಬಂದರು. ಒಬ್ಬರು ಮಂತ್ರಿಗಳಾದರೂ ಬಂದರೆನ್ನುತ್ತೀರಾ ಆ ಗಾಡಿಯಲ್ಲಿ? ಹೊಸದಾಗಿ ತಮಗೆ ದೊರೆತ ದೊಡ್ಡ ದೊಡ್ಡ ಪಾಂಟಿಯಾಕ್, ಶವರಲೆಟ್ ಕಾರುಗಳನ್ನು ಬೆಂಗಳೂರಿನಿಂದ ದುರ್ಗಕ್ಕೆ ತೆಗೆದು ಕೊಂಡು ಬಂದಿದ್ದರು. ಎಲ್ಲ ಮಂತ್ರಿಗಳೂ ದುರ್ಗದಲ್ಲಿ ಇವರ ಮೋಟರುಗಳ ಮೆರವಣಿಗೆಯಾದದ್ದೇ ಆದದ್ದು. ಸ್ಪೆಷಲ್ ರೈಲಿಗೆ ಬಂದ ಜನ ಒಬ್ಬ ಮಂತ್ರಿಯಾದರೂ ಬಂದಾರು ನಮ್ಮ ಜೊತೆಗೆ ಎಂದು ಆಶಿಸಿದ್ದರು. ಅವರ ಆಶೆ ವ್ಯರ್ಥವಾಯ್ತು. ದುರ್ಗದಲ್ಲಿ ಥಳ ಥಳ ಹೊಳೆಯುವ ಕಾರುಗಳಲ್ಲಿ ಸೆಟೆದು ಕುಳಿತು ಓಡಾಡುತ್ತಿದ್ದ ಈ ಮಂತ್ರಿಗಳನ್ನು ಕಂಡಾಗ ಎಲ್ಲರಿಗೂ ಜಿಗುಪ್ಸೆಯಾಗಿರಲು ಸಾಕು. ಮಂತ್ರಿ ಮಹಾಶಯರುಗಳು ಇಳಿದುಕೊಂಡ ಬಂಗಲೆಗೂ ಅಧಿವೇಶನದ ಸ್ಥಳಕ್ಕೂ ಒಂದು ಫರ್ಲಾಂಗ್ ಸಹ ದೂರವಿರಲಿಲ್ಲ. ಅಷ್ಟು ಅಂತರವನ್ನು ಕ್ರಮಿಸಬೇಕಾದರೆ ಕಾರುಗಳೇ ಬೇಕಾಗುತ್ತಿದ್ದುವು ಇವರಿಗೆ. ಇದಕ್ಕಿಂತ ಹಾಸ್ಯಾಸ್ಪದವಾದ ವಿಷಯವಿನ್ನೊಂದಿದೆಯೆ?''

''ಇರಲಾರದು. ಇವರು ಮಾಡಿದ್ದೆಲ್ಲವೂ ಶುದ್ಧ ಹುಡುಗುತನ,'' ಎಂದ ಶಿವಯೋಗಿ.

''ಹುಡುಗತನವಲ್ಲ. ಹುಡುಗರಾದರೋ ತಿಳಿಯದೆ ಮಾಡುತ್ತಾರೆ. ದರಿದ್ರ ನಾರಾಯಣನ ಸೇವೆ, ಸಾದಾತನಗಳಲ್ಲಿ ಗಾಂಧೀಜಿಯಿಂದ ಶಿಕ್ಷಣ ಪಡೆದ, ಐವತ್ತು ವರ್ಷ ದಾಟಿದ ಈ ಮುಖಂಡರು ತಿಳಿಯದೆ ಇಂಥ ಕೆಲಸ ಮಾಡುವರೆನ್ನಲಾದೀತೇ? ಅಧಿಕಾರದ ಮದ ಇದು – ಮದ! ಅದು ತಲೆಗೇರಿದ್ದರಿಂದ ಹೀಗೆ ಆಚರಿಸುತ್ತಾರೆ.

ಇನ್ನೊಂದು ತಮಾಷೆಯಿದೆ ಕೇಳಿ ಈಗ ಮಂತ್ರಿಗಳಾಗಿರುವವರೊಬ್ಬರು – ಕೇವಲ ಆರು ತಿಂಗಳುಗಳ ಕೆಳಗೆ ವಿನಯವೇ ಮೂರ್ತಿವೆತ್ತು ಬಂದಂತಿದ್ದರು. ಕಂಡ ಜನಕ್ಕೆಲ್ಲ ಬಾಗಿ ಕೈಮುಗಿಯುತ್ತ ಕುಶಲ ಪ್ರಶ್ನೆಗಳನ್ನು ಕೇಳುತ್ತ ಹೋಗುತ್ತಿದ್ದರು. ಯಾವಾಗಲೂ ಕಾಲು ನಡಿಗೆಯಲ್ಲೇ ಬೆಂಗಳೂರನ್ನು ಸುತ್ತುತ್ತಿದ್ದರು. ಮಲ್ಲೇಶ್ವರದಿಂದ ಸಿಟಿಗೆ ಬರ ಬೇಕಾದರೂ ನಡೆದುಕೊಂಡೇ ಬರುತ್ತಿದ್ದರು. ಬಸ್ಸಿಗೆ ಕೊಡಲು ಕಾಸಿರುತ್ತಿರಲಿಲ್ಲ. ಇಂಥವರು ಮಂತ್ರಿಗಳಾದೊಡನೆ ಎಲ್ಲವೂ ಬದಲಾಯಿಸಬೇಕೇ? ಒಂದು ಫರ್ಲಾಂಗ್ ಹೋಗಬೇಕಾದರೂ ಆ ಮಹಾಶಯರಿಗೀಗ ಕಾರು ಬೇಕು. ಕಾರಿನಲ್ಲಿ ಕುಳಿತು ಅವರು ಹೊರಟಿರುವಾಗ ದಾರಿಯಲ್ಲಿ ಅವರನ್ನು ಕಂಡ ಪರಿಚಿತರಾರಾದರೂ ನಮಸ್ಕಾರ ಎಂದರೆ ಇವರು ತಲೆ ಬಾಗಿ ಕೈಮುಗಿಯುವುದು ಹಾಗಿರಲಿ, ನಮಸ್ಕಾರ ಸ್ವೀಕರಿಸುವುದು ಕೂಡ ಅಲ್ಲ. ಕತ್ತು ಉಬ್ಬಿಸಿಕೊಂಡು ಕಾರಿನ ಒರಗುದಿಂಬಿಗೆ ಆತು ಕುಳಿತವರು ಕತ್ತನ್ನು ಕೊಂಚ ಹೊರಳಿಸಿದ ಹಾಗೆ ಮಾಡುತ್ತಾರೆ. ನಮಸ್ಕಾರವನ್ನು ಅವರು ಸ್ವೀಕರಿಸಿದುದಕ್ಕೆ ಅದೇ ಸೂಚನೆಯೆಂದು ತಿಳಿಯಬೇಕು ಜನ. ಈ ಬದಲಾವಣೆ ಯನ್ನು ಕಂಡ ಜನ ಈಚೆಗೆ ಅವರನ್ನು ನೋಡಿದರೂ ನೋಡದವರಂತೆ ಸುಮ್ಮನೆ ಹೊರಟುಹೋಗುತ್ತಾರೆ. ಅವರಿಗೆ ನಮಸ್ಕಾರ ಮಾಡುವುದಂತೂ ದೂರ ಉಳಿಯಿತು. ಇಂಥವರ ಕೈಗೆ ಅಧಿಕಾರ ಬಂದರೆ ಪ್ರಜೆಗಳ ಗತಿಯೇನು? ನೀವೇ ಹೇಳಿ.''

''ಅಧಿಕಾರ ಮನುಷ್ಯನನ್ನು ಹಾಳು ಮಾಡುತ್ತದೆ ಎಂಬ ಮಾತೇ ಇದೆಯಲ್ಲ. ಇವರ ವಿಷಯದಲ್ಲೂ ಹಾಗೇ ಆಗಿರಬೇಕು,'' ಎಂದ ಚಂದ್ರಣ್ಣ.

''ಇಂಥವರನ್ನು ಅಧಿಕಾರ ಸ್ಥಾನಗಳಿಂದ ಎಷ್ಟು ಬೇಗ ಓಡಿಸಿದಷ್ಟೂ ಒಳ್ಳೆಯದೇ. ಈಗಾಗಲೇ ಪ್ರಜೆಗಳ ತೊಂದರೆ ತಾಪತ್ರಯ ಮುಗಿಲಿನುದ್ದಕ್ಕೆ ಬೆಳೆದು ನಿಂತಿವೆ. ಲಂಚಕೋರತನ ಹೆಚ್ಚಾಗುತ್ತಿದೆ. ಕಾಳಸಂತೆಯ ಕದೀಮರಿಗೆ ಯಾವ ತಡೆಯೂ ಇಲ್ಲವಾಗಿದೆ. ಮಂತ್ರಿಗಳ ಸಂಬಂಧಿಕರು, ಆಪ್ತಮಿತ್ರರಿಗೆಲ್ಲ ಅಧಿಕಾರಸ್ಥಾನ ಗಳು, ಪರ್ಮಿಟ್ಟುಗಳು ದೊರೆಯತೊಡಗಿವೆ. ಬಂಡವಾಳಗಾರರೂ ಸಂತೋಷದಿಂದ ಬೀಗುತ್ತಿದ್ದಾರೆ. ಕೂಲಿಕಾರರ ಮೇಲೆ ಎಡೆಬಿಡದೆ ದಬ್ಬಾಳಿಕೆ ನಡೆಯುತ್ತಿದೆ. ಪೋಲೀಸಿನವರನ್ನು ಕೇಳುವವರೇ ಇಲ್ಲ. ಧರ್ಮಪುರದ ಸಮಾಚಾರವನ್ನೇ ತೆಗೆದುಕೊಳ್ಳಿ. ಅಲ್ಲಿನ ಗಿರಣಿ ಕೂಲಿಕಾರರ ಮೇಲೆ ಮಾಲೀಕರು ಭೀಕರ ದಬ್ಬಾಳಿಕೆ ನಡೆಸಿದ್ದಾರೆ. ನೂರಾರು ಜನರನ್ನು ಕೆಲಸದಿಂದ ತೆಗೆದುಹಾಕಲಾಗಿದೆ. ದಿನವೊಂದಕ್ಕೆ ಪ್ರತಿಯೊಬ್ಬ ಮನುಷ್ಯನಿಗೆ ಕೇವಲ ಎಂಟು ತಾಸು ಮಾತ್ರ ಕೆಲಸವಿರಬೇಕೆಂಬ ನಿಯಮವಿದ್ದರೂ ಅಲ್ಲಿ ಎಲ್ಲರೂ ಹತ್ತು ಹನ್ನೊಂದು ತಾಸು ಕೆಲಸ ಮಾಡಬೇಕಾಗಿದೆ. ಈ ಅನ್ಯಾಯದ

ವಿರುದ್ಧ ದನಿ ಎತ್ತಿದವರನ್ನೆಲ್ಲ ಕೆಲಸದಿಂದ ತೆಗೆದುಬಿಡಲಾಗುತ್ತಿದೆ. ಸರಕಾರ ಇದೆಲ್ಲವನ್ನೂ ನೋಡುತ್ತ ತೆಪ್ಪಗೆ ಕುಳಿತಿರುವುದು ಮಾತ್ರವಲ್ಲ - ಧರ್ಮಪುರದ ಪೊಲೀಸಿನವರಿಂದ ಮಾಲೀಕರಿಗೆ ಎಲ್ಲ ವಿಧದ ನೆರವೂ ದೊರೆಯುತ್ತಿದೆ.''

''ಈ ವಿಷಯ ಲೇಬರ್ ಕಮೀಷನರಿಗೆ ಗೊತ್ತಿದೆಯೆ?''

''ಅವರಿರುವುದು ಬೆಂಗಳೂರಿನಲ್ಲಿ. ಧರ್ಮಪುರದಲ್ಲಿ ನಡೆಯುವುದೆಲ್ಲ ಅವರಿಗೆ ಹೇಗೆ ತಿಳಿದೀತು? ನಾವು-ಕೂಲಿಕಾರರ ಸಂಘದವರು ಅಲ್ಲಿಯ ವಿದ್ಯಮಾನ ಗಳನ್ನೆಲ್ಲ ತಿಳಿಸಿ ಬರೆದ ಕಾಗದಗಳೂ ಕಮೀಷನರಿಗೆ ಮುಟ್ಟದ ಹಾಗೆ ವ್ಯವಸ್ಥೆ ಮಾಡಿದಾರೆ ಮಾಲೀಕರು!''

''ಅಬ್ಬ!'' ಎಂದ ಚಂದ್ರಣ್ಣ.

''ಆಶ್ಚರ್ಯಪಟ್ಟುಕೊಳ್ಳುವಂಥದೇನೂ ಇಲ್ಲ ಈ ವಿಷಯದಲ್ಲಿ. ಈ ಬಂಡವಾಳಗಾರರು ಏನು ಬೇಕಾದ್ದನ್ನೂ ಮಾಡಬಲ್ಲರು. ಲೇಬರ್ ಕಮೀಷನರ ಕಚೇರಿಯಲ್ಲಿನ ಕಾರಕೂನರನ್ನು ಬಲೆಗೆ ಹಾಕಿಕೊಂಡು...''

''ಮುಖ್ಯಮಂತ್ರಿಗಳಿಗೆ ಇಂಥ ವಿಷಯಗಳು ತಿಳಿದಿರಲಾರವು. ಅವರು ಕೂಲಿಕಾರರ ಬಗ್ಗೆ ತುಂಬ ಸಹಾನುಭೂತಿಯುಳ್ಳವರು. ಸಂಘದವರು ಅವರ ಬಳಿಗೆ ಶಿಷ್ಟಮಂಡಲವೊಂದನ್ನು ಒಯ್ದು ಎಲ್ಲ ವಿಷಯಗಳನ್ನು ಅವರಿಗೆ ನಿವೇದಿಸಿದರೆ ಹೇಗೆ?'' ಎಂದ ಚಂದ್ರಣ್ಣ.

''ಆ ಬಗೆಗೂ ಪ್ರಯತ್ನಿಸಿದೆವು. ಶಿಷ್ಟಮಂಡಲವನ್ನು ಕಾಣಲು ಮುಖ್ಯ ಮಂತ್ರಿಗಳಿಗೆ ಬಿಡುವಿಲ್ಲವೆಂಬುದಾಗಿ ಉತ್ತರ ದೊರೆಯಿತು. ಪಾಪ ಅವರಿಗೆ ಕೈತುಂಬ ಕೆಲಸಗಳು! ಕೂಲಿಕಾರರನ್ನು ಕಾಣಲು ಹೇಗೆ ಬಿಡುವು ದೊರೆತೀತು! ಪಾರ್ಟಿಯ ಪ್ರಶ್ನೆ ಬೇರೆ ಇದೆಯಲ್ಲ? ಕಮ್ಯೂನಿಸ್ಟ್ ಪಾರ್ಟಿಯ ಕೈಯಲ್ಲಿ ಸಂಘ ಇರುವವರೆಗೆ ಸರಕಾರ ಯಾವುದಕ್ಕೂ ಮನಸ್ಸು ಮಾಡಲಾರದು. ನಮ್ಮಿಂದ ಸಂಘವನ್ನು ತಪ್ಪಿಸಿಬಿಡಲು ಮಾಲೀಕರು ನಡೆಸಿರುವ ಪ್ರಯತ್ನಗಳಿಗೆ ಸರಕಾರವೂ ನೆರವಾದೀತು.''

''ಸಂಘವನ್ನು ನಿಮ್ಮಿಂದ ತಪ್ಪಿಸಿ ಏನು ಮಾಡಬೇಕೆನ್ನುತ್ತಾರೆ ಮಾಲೀಕರು?''

''ತಮ್ಮ ಮಾತು ಕೇಳಿಕೊಂಡು ನಡೆಯುವ ಬಗಲಗೂಸುಗಳ ಕೈಗೆ ಕೊಡ ಬೇಕೆನ್ನುತ್ತಾರೆ. ಅವರು ಹನ್ನೆರಡು ತಾಸು ದುಡಿಯ ಹೇಳಿದರೂ ದುಡಿಯಬೇಕು, ಹೆಚ್ಚು ಸಂಬಳಕ್ಕಾಗಿ ಪೀಡಿಸಬಾರದು, ಬೋನಸ್ ಗೀನಸ್ ಎಂದು ಮಾತನಾಡ

ಬಾರದು. ಎಷ್ಟು ಜನ ಕೆಲಸಗಾರರನ್ನು ತೆಗೆದು ಹಾಕಿದರೂ ಯಾರೂ ದನಿಯೆತ್ತ ಬಾರದು. ಅಂತೂ, ಅವರ ಗುಲಾಮರಂತೆ ತೆಪ್ಪಗೆ ದುಡಿಯಬೇಕು. ಅಂಥ ಜನರ ಕೈಗೆ ಸಂಘವನ್ನು ಕೊಟ್ಟು ತಾವು ಹಿಂದೆ ನಿಂತುಕೊಂಡು ಸೂತ್ರ ಚಾಲನೆ ಮಾಡಬೇಕೆಂದು ಅವರ ಅಭಿಲಾಷೆ''

''ಮಾಲಕರೇ ಸೂತ್ರಧಾರಿಗಳಾದರೆ ಇನ್ನು ಕೂಲಿಕಾರ ಸಂಘ ಎಂಬ ಹೆಸರಾದರೂ ಏತಕ್ಕೆ?''

''ಸೋಗಿಗೆ ಜನದ ಕಣ್ಣಿಗೆ ಮಣ್ಣೆರಚಲಿಕ್ಕೆ ನಾಟಕಕ್ಕೆ.''

''ಅಂತೂ ಕೂಲಿಕಾರ ಸಮಸ್ಯೆ ಬಲು ಕಷ್ಟ ಈಗ ಅಲ್ಲಿನ ವಾತಾವರಣ ಹೇಗಿದೆ? ಗಲಾಟೆಯೇನೂ ಇಲ್ಲವಷ್ಟೆ?''

''ಹಾಗೆ ಬಡೆದಾಟ ಹೊಡೆದಾಟವೇನೂ ಇಲ್ಲ, ಆದರೂ-ಕೂಲಿಕಾರ ಹೃದಯ ಅಸಂತೋಷದ ಅತೃಪ್ತಿಯ ಜ್ವಾಲಾಮುಖಿಯಂತಾಗಿದೆ. ಅವರ ಸಹನೆ ಮೀರಿ ಕೂಲಿಕಾರರ ಈ ಅತೃಪ್ತಿಯ ಜ್ವಾಲಾಮುಖಿಯನ್ನು ಗುರುತಿಸದೆ ಮಾಲೀಕ ಅವರ ಉದರದ ಮೇಲೆ ನಿಂತು ತನ್ನ ನೃತ್ಯ ನಡೆಸಿದ್ದಾನೆ. ಕುದಿದು ಕುದಿದು ಹೊರಳಿ ಹೊರಳಿ ತಪ್ತವಾಗಿರುವ ಆ ಲಾವಾರಸ ಹಠಾತ್ತಾಗಿ ಚಿಮ್ಮಿ ನೆಗೆದು ಈ ಮಾಲೀಕರ ಹುಟ್ಟಡಗಿಸಿ ಬಿಡುವ ಕಾಲ ಸಮೀಪಿಸುತ್ತಿದೆ. ಅದುವರೆಗೆ ಸಾಗುವುದು ಇವರ ನರ್ತನ – ಇವರಿಗೆ ಬೆಂಬಲವಾಗಿರುವ ಈ ಸರಕಾರದ ನರ್ತನ...''

ಇಷ್ಟು ಹೇಳಿ ಶಂಕರ ನಾಲ್ಕೈದು ನಿಮಿಷ ಮೌನವಾಗಿ ಕುಳಿತಿದ್ದ. ಕತ್ತಲೆಯನ್ನು ಭೇದಿಸಿಕೊಂಡು ರೈಲು ಭರದಿಂದ ಮುನ್ನುಗ್ಗುತ್ತಿತ್ತು. ತಿಪಟೂರು ಸಮೀಪಿಸುತ್ತಿದ್ದ ಹಾಗಿದ್ದಿತು. ದೂರದಿಂದ ನಗರದ ವಿದ್ಯುದ್ದೀಪಗಳು ಪ್ರಖರ ಚಿಕ್ಕೆಗಳ ಹಾಗೆ ಕಾಣಿಸುತ್ತಿದ್ದುವು.

ಕುಳಿತ ಸ್ಥಳದಿಂದೆದ್ದು ಶಂಕರ ಮೇಲಿನ ಹಲಗೆಯೊಂದನ್ನು ತೆರವು ಮಾಡಿ ಅಲ್ಲಿ ಮಲಗಿಕೊಳ್ಳುವ ಸಿದ್ಧತೆಗಾರಂಭಿಸಿದ.

''ನೀವೂ ಧರ್ಮಪುರಕ್ಕೆ ತಾನೆ?''

''ಹೌದು.''

''ಮತ್ತೆ ವಾಪಾಸು ಹೋಗುವುದು ಎಂದು?''

"ಸದ್ಯಕ್ಕಂತೂ ಇಲ್ಲ, ಧರ್ಮಪುರದಲ್ಲೇ ನೆಲೆಸಲು ಹೊರಟಿದ್ದೇನೆ" ಎಂದ ಚಂದ್ರಣ್ಣ.

"ಹೀಗೋ? ಪತ್ರಿಕೆ?"

"ಅದನ್ನೂ ಅಲ್ಲಿಂದಲೇ ಹೊರಡಿಸಬೇಕು."

ಸಂತೋಷದಿಂದ ಚಂದ್ರಣ್ಣನ ಕೈಕುಲುಕಿಸಿ ಶಂಕರನೆಂದ : "ಬಹಳ ಒಳ್ಳೆಯದಾಯಿತು ಬಿಡಿ. ನಿಮ್ಮಂಥ ಪ್ರಗತಿಶೀಲರು ಅಲ್ಲಿ ಪತ್ರಿಕೆ ಹೊರಡಿಸುತ್ತಿದ್ದರೆ ನಮಗೆಲ್ಲ ಉಪಯೋಗವಾದೀತು. ಕೂಲಿಕಾರರ ಮೇಲೆ ದಬ್ಬಾಳಿಕೆ ನಡೆಸುತ್ತಿರುವ ಆ ಬಂಡವಾಳಶಾಹಿಯನ್ನು ಮಟ್ಟ ಹಾಕಬಹುದು ನೀವು. ಆಗಲಿ, ನಾನೀಗ ಮಲಗಲಾ? ಬೆಳಗಾಗುವುದರೊಳಗಾಗಿ ಸ್ವಲ್ಪ ನಿದ್ರೆ ತೆಗೆಯುತ್ತೇನೆ. ಮತ್ತೆ ಬೆಳಿಗ್ಗೆ ಕೆಲಸಕ್ಕೆ ಹೋಗಬೇಕಲ್ಲ? ಕೇಳಿದಾಗಲೆಲ್ಲ ರಜವೂ ಸಿಕ್ಕುವಂತಿಲ್ಲ, ಮೊದಲೇ ನನ್ನ ಮೇಲೆ ಭಾರಿ ಸಿಟ್ಟು ಅವರಿಗೆ. ನಾಲ್ಕೈದು ದಿನ ಕೆಲಸಕ್ಕೆ ಚಕ್ಕರ್ ಆದರೆ ಮನೆಗೇ ಕಳಿಸಿಬಿಟ್ಟಾರು!" ಎಂದು ನುಡಿದು ಆತ ಮೇಲಕ್ಕೇರತೊಡಗಿದ.

"ರೈಲಿನಲ್ಲಿ ಹೇಗಾದರೂ ನಿದ್ರೆ ಬರುತ್ತದೆಯೊ ನಿಮಗೆ. ನನಗಂತೂ ಸಾಧ್ಯವಿಲ್ಲ ಅದು," ಎಂದ ಶಿವಯೋಗಿ.

"ನಮಗೇನ್ರಿ! ರೈಲು ಜೈಲು ಎರಡೂ ಅಷ್ಟೇ. ನಿದ್ರೆ ಬರಲಿಕ್ಕೇನು ಧಾಡಿ?" ಎಂದು ನಗುತ್ತ ನುಡಿದು ಶಂಕರ ಹಲಗೆಯ ಮೇಲೆ ದೇಹವನ್ನೊರಗಿಸಿದ. ನಾಲ್ಕೈದು ನಿಮಿಷಗಳಲ್ಲಿಯೆ ಆತ ಎಳೆಮಗುವಿನಂತೆ ಸುಖನಿದ್ರೆಯಲ್ಲಿ ಮುಳುಗಿಹೋದ.

## ೯

ಆ ಕಮ್ಯೂನಿಸ್ಟ್ ಯುವಕನ ವಿಲಕ್ಷಣ ಜೀವನವನ್ನು ಕುರಿತು ಯೋಚಿಸುತ್ತಲೇ ಚಂದ್ರಣ್ಣ ಹಾಗೆ ಹೀಗೆ ತೂಕಡಿಸುತ್ತಿದ್ದ. ಎಂಥ ಬಾಳು ಆತನದು! ಒಂದು ಗುರಿಯನ್ನು ಸಾಧಿಸುವುದಕ್ಕಾಗಿ ತನ್ನೆಲ್ಲ ಶಕ್ತಿಯನ್ನು ಆತ ಸಮರ್ಪಿಸಿಬಿಟ್ಟಿದ್ದ. ರೈಲು ಮತ್ತು ಜೈಲು! ಅಲ್ಲಿಂದ ಇಲ್ಲಿಗೆ – ಇಲ್ಲಿನಿಂದ ಅಲ್ಲಿಗೆ! ಬೇಜವಾಬ್ದಾರಿ ಸರಕಾರವಿದ್ದಾಗಲೂ ಅಷ್ಟೆ

ಜವಾಬ್ದಾರಿ ಸರಕಾರ ಬಂದ ಮೇಲೂ ಅಷ್ಟೆ ಬ್ರಿಟಿಷರಿದ್ದಾಗಲೂ ಅಷ್ಟೆ ರಾಷ್ಟ್ರೀಯ ಸರಕಾರ ಬಂದ ಮೇಲೂ ಅಷ್ಟೆ ಅವರ ರಾಜ್ಯ-ಕಮ್ಯೂನಿಸ್ಟ್ ರಾಜ್ಯ ಬರುವವರೆಗೂ ಈತನ ಹಾಗೂ ಈತನಂಥ ಲಕ್ಷಾವಧಿ ಯುವಕರ ಈ ವನವಾಸದ ಬಾಳಿನಲ್ಲಿ ಬದಲಾವಣೆಯಿಲ್ಲ. ಹೊತ್ತಿಗೆ ಸರಿಯಾಗಿ ಊಟವಿಲ್ಲ, ನಿದ್ರೆಯಿಲ್ಲ, ವಿರಾಮವಿಲ್ಲ. ಯಾವಾಗಲೂ ದುಡಿತ. ಅವರ ಎದುರಿಗಿರುವುದೊಂದೇ ಗುರಿ; ಕಮ್ಯೂನಿಸ್ಟ್ ರಾಜ್ಯ ಸ್ಥಾಪನೆ, ಕೆಂಪು ಬಾವುಟದ ವಿಜಯ...

ಕಮ್ಯೂನಿಜಂ ಅಪರಿಚಿತ ವಿಷಯವೇನೂ ಆಗಿರಲಿಲ್ಲ ಚಂದ್ರಣ್ಣನಿಗೆ. ಆಗಸ್ಟ್ ಚಳವಳಿಯ ಕಾಲಕ್ಕೆ ಸೆರೆಮನೆಯಲ್ಲಿದ್ದಾಗ ಕಮ್ಯೂನಿಸ್ಟ್ ಯುವಕನೊಬ್ಬನ ಸ್ನೇಹ ಲಭಿಸಿದ್ದಿತು. ಆತನ ಹತ್ತಿರ ಇದ್ದ ಕಮ್ಯೂನಿಸ್ಟ್ ವಾಙ್ಮಯವನ್ನೂ ಓದಿಕೊಂಡಿದ್ದ. ಮಾರ್ಕ್ಸ್‌ವಾದ, ಅದನ್ನು ರಷ್ಯದಲ್ಲಿ ಪ್ರಯೋಗಿಸಿದ ಬಗೆ, ಕಮ್ಯೂನಿಸ್ಟ್ ಇಂಟರ್ ನ್ಯಾಷನಲ್, ಹಲವೇ ವರ್ಷಗಳಲ್ಲಿ ರಷ್ಯ ಸಾಧಿಸಿದ ಅದ್ಭುತ ಪ್ರಗತಿ - ಎಲ್ಲವನ್ನೂ ಅರಿತುಕೊಂಡಿದ್ದ ಚಂದ್ರಣ್ಣ. ಕ್ರಾಂತಿಗೆ ಮೊದಲು ಭಾರತಕ್ಕಿಂತ ಕೀಳುಸ್ಥಿತಿಯಲ್ಲಿದ್ದ ರಷ್ಯ ಅಷ್ಟು ಬೇಗ ಮುಂದುವರಿದುದನ್ನು ಕಂಡು ಚಕಿತನಾಗಿದ್ದ. ಆ ಪುಸ್ತಕಗಳನ್ನೋದಿದ ಹಾಗೆಲ್ಲ ಇಷ್ಟು ದಿನ ತಾನು ಕಂಡರಿಯದಿದ್ದ ನೂತನ ಸತ್ಯವೊಂದು ಹಠಾತ್ತಾಗಿ ಕಾಣಿಸಿಕೊಂಡು ತನ್ನ ಉಜ್ವಲ ಪ್ರಕಾಶದಿಂದ ಕಣ್ಣು ಕುಕ್ಕುಂತಾಗಿದ್ದಿತು. ಜಗತ್ತಿನ ಶ್ರಮಜೀವಿಗಳೆಲ್ಲ ಒಂದು; ರಾಷ್ಟ್ರ, ಖಂಡ, ಧರ್ಮ, ಜಾತಿ, ಭಾಷೆ ಯಾವುದಿದ್ದರೂ ಎಲ್ಲ ಕೆಲಸಗಾರರೂ ಒಂದು; ಭೂಮಿ ಅವರದು, ಸಂಪತ್ತು ಅವರದು, ಎಲ್ಲ ಅಧಿಕಾರವೂ ಅವರಿಗೇ ಸೇರಬೇಕಾದುದು ಎಂಬ ಆ ಅದ್ಭುತ ಸತ್ಯ! ಸಮತಾವಾದದ ಆ ಗ್ರಂಥಗಳನ್ನೋದಿದ ಹೊಸದರಲ್ಲಿ ಚಂದ್ರಣ್ಣನೂ ಮುಕ್ಕಾಲುಪಾಲು ಕಮ್ಯೂನಿಸ್ಟ್ ಆಗಿದ್ದನೆಂದು ಹೇಳಬಹುದು. ಸೆರೆಮನೆಯಲ್ಲಿನ ಆ ಕಮ್ಯೂನಿಸ್ಟ್ ಯುವಕನ ಪ್ರಭಾವ ಬೇರೆ ಚಂದ್ರಣ್ಣನ ಹೃದಯವನ್ನು ಆತ ಆಕರ್ಷಿಸಿಕೊಂಡು ಕಮ್ಯೂನಿಸ್ಟ್ ಪಾರ್ಟಿಯ ಕಡೆಗೆ ಆತನನ್ನು ತಿರುಗಿಸಲು ಪ್ರಯತ್ನಪಡುತ್ತಿದ್ದ.

ಸೆರೆಮನೆಯಿಂದ ಹೊರಬಂದ ತರುವಾಯ ಚಂದ್ರಣ್ಣ ಕೆಲದಿನಗಳವರೆಗೆ ಅತ್ತ ಇತ್ತ ಹೊಯ್ದಾಡುತ್ತಿದ್ದ. ಆತ ಬೆಂಗಳೂರಿಗೆ ಬಂದು 'ಉದಯ' ಪತ್ರಿಕೆಯ ಸಂಪಾದಕನಾದ ಬಳಿಕ ಅಲ್ಲಿನ ಕಮ್ಯೂನಿಸ್ಟ್ ಯುವಕರನೇಕರೊಂದಿಗೆ ಪರಿಚಯ ಬೆಳೆಯಿತು. ಚಂದ್ರಣ್ಣನನ್ನು ಪಾರ್ಟಿಗೆ ಸೇರಿಸಲು ಅವರೆಲ್ಲರೂ ಬಲವಾಗಿ ಪ್ರಯತ್ನಿಸಿದರು. ಆಗಲೆ ಆತನಿಗೆ ಶಂಕರನೊಂದಿಗೆ ಪರಿಚಯವಾದುದು. ಶಂಕರ ಬೆಂಗಳೂರಿನಲ್ಲಿರುವಷ್ಟು ದಿನವೂ ಚಂದ್ರಣ್ಣನ ಜೊತೆಗೇ ಓಡಿಯಾಡುತ್ತಿದ್ದು ಅವನ ಮೇಲೆ ಪ್ರಭಾವ ಬೀರಲು

ಉಪಾಯವಾಗಿ ಪ್ರಯತ್ನಿಸಿದ್ದ. ಆದರೆ ಚಂದ್ರಣ್ಣ ಹಾಗೆ ಅನ್ಯರ ಪ್ರಭಾವಕ್ಕೊಳಗಾಗುವ ವ್ಯಕ್ತಿಯೇನೂ ಅಲ್ಲ. ಒಂದು ಪಾರ್ಟಿಗೆ ಸೇರಿಕೊಂಡು ಅದರ ಮಹಾಯಂತ್ರದಲ್ಲಿ ಒಂದು ಭಾಗವಾಗಿಬಿಡುವ ಅಪೇಕ್ಷೆ ಆತನಿಗಿರಲಿಲ್ಲ. ಅಲ್ಲದೆ ಈಚೆಗೆ ಕಮ್ಯೂನಿಸ್ಟರ ವರ್ತನೆ, ಧೋರಣೆ, ರೀತಿ ನೀತಿಗಳ ಬಗೆಗೆ ಆತನಲ್ಲಿ ಹಲವು ಸಂದೇಹಗಳೂ ಹುಟ್ಟಿಕೊಂಡಿದ್ದುವು. ಲೆನಿನ್ನನ ಮರಣದ ತರುವಾಯ ಸರ್ವಾಧಿಕಾರ ಹಿಡಿದು ಕೊಳ್ಳಲು ಸ್ಟಾಲಿನ್ ನಡೆಸಿದ ಹಿಂಸಾಕೃತ್ಯಗಳು, ಟ್ರಾಟಿಸ್ಕಿಯೆ ಮೊದಲಾದವರಿಗೆ ಬಂದೊದಗಿದ ಅಪಮೃತ್ಯು, ಸಮತಾವಾದದ ಹೆಸರಿನಲ್ಲಿ ರಷ್ಯಗಲ್ಲಿ ನಡೆದ ಕ್ರೂರ ಆಡಳಿತ; ಇಲ್ಲಿ ಭಾರತದಲ್ಲಿ ಆಗಸ್ಟ್ ಚಳವಳಿಯ ಕಾಲಕ್ಕೆ ಕಮ್ಯೂನಿಸ್ಟರು ತಳೆದ ದೇಶದ್ರೋಹಿ ಧೋರಣೆ, ಚಳವಳಿಗಾರರನ್ನು ಸರಕಾರಕ್ಕೆ ಹಿಡಿದುಕೊಟ್ಟ ರೀತಿ - ಇವೆಲ್ಲವುಗಳನ್ನು ಕುರಿತು ಶಂಕರನ ಬಳಿ ಪ್ರಸ್ತಾಪಿಸಿದಾಗ ಆತನಿಂದ ಸಮಾಧಾನಕರ ವಾದ ಉತ್ತರ ಬಂದಿರಲಿಲ್ಲ. ಕಮ್ಯೂನಿಸ್ಟ್ ಪಾರ್ಟಿಯ ಪ್ರಸಿದ್ಧ ಕಾರ್ಯಕರ್ತ ರೆಲ್ಲರನ್ನೂ ಚಂದ್ರಣ್ಣ ಈ ವಿಚಾರವಾಗಿ ಪ್ರಶ್ನಿಸಿದ್ದ. ಎಲ್ಲರಿಂದಲೂ ಹಾರಿಕೆಯ ಉತ್ತರವೇ ಬಂದಿದ್ದಿತು. ಆದರಿಂದಾಗಿ ಆತನಿಗೆ ಪಾರ್ಟಿಯ ಬಗೆಗೆ ಅಂಥ ಆಸಕ್ತಿ ಯೇನೂ ಉಳಿಯಲಿಲ್ಲ. ಹಿಂಸೆ, ರಕ್ತಪಾತ, ಸುಳ್ಳು, ಕಪಟ, ದ್ರೋಹ ಅವನಿಗೆ ಒಪ್ಪಿಗೆ ಯಾಗುವಂತಿರಲಿಲ್ಲ. ದುಡಿಯುವವರ ರಾಜ್ಯ ಬರಬೇಕು; ಜನಸಾಮಾನ್ಯರ ಕೈಗೆ ಅಧಿಕಾರ ಬರಬೇಕು - ನಿಜ. ಅದಕ್ಕಾಗಿ ಹೋರಾಟವೂ ನಡೆಯಬೇಕು. ಆದರೆ ಶಾಂತರೀತಿಯಲ್ಲಿ ಆ ಹೋರಾಟ ನಡೆಸಲು ಸಾಧ್ಯವಿಲ್ಲವೆ? ಈ ದ್ವೇಷ, ಈ ಗಲಭೆ, ಈ ರಕ್ತಪಾತ ಇದೆಲ್ಲ ಏತಕ್ಕಾಗಿ? ಎಂದು ಆತನ ವಿಚಾರ. ತನ್ನ ಮನಸ್ಸಿನಲ್ಲಿದ್ದ ಈ ವಿಚಾರಗಳನ್ನು ಆತ ಒಂದು ಸಲ ಶಂಕರನೆದುರಿಗೆ ಆಡಿ ತೋರಿಸಿದಾಗ ಆತ ನಕ್ಕು ಬಿಟ್ಟು-"ನಿಮ್ಮ ಮೇಲೆ ಇನ್ನೂ ಗಾಂಧೀ ಪ್ರಭಾವವಿದ್ದಂತಿದೆ. ವಿನೋಬಾ ಮಾತನಾಡಿದ ಹಾಗೆ ಮಾತನಾಡುತ್ತೀರಿ!" ಎಂದು ಹಾಸ್ಯ ಮಾಡಿದ್ದ. ಈ ವ್ಯಕ್ತಿ ಪಾರ್ಟಿಗೆ ಸೇರುವುದು ಸಾಧ್ಯವಿಲ್ಲ, ಸೇರಿದರೂ ಆತನಿಂದ ಪಾರ್ಟಿಗೆ ಏನೂ ಉಪಯೋಗವಾಗಲಾರದು ಎಂಬುದು ಶಂಕರನಿಗೂ ಆತನ ಇನ್ನಿತರ ಸ್ನೇಹಿತರಿಗೂ ಮನವರಿಕೆಯಾಗಿ ಹೋಗಿದ್ದಿತು.

ತಾನು ಪಾರ್ಟಿಯಿಂದ ದೂರವಿದ್ದರೂ ಚಂದ್ರಣ್ಣನಿಗೆ ಪಾರ್ಟಿಯ ಧ್ಯೇಯವಾದಿ ಯುವಕರ ಬಗೆಗೆ ಮೆಚ್ಚುಗೆಯಿರದಿರಲಿಲ್ಲ. ಶಂಕರ, ಉಪಾಧ್ಯಾಯ, ರಾಮರಾವ್ ಮೊದಲಾದ ನಿಷ್ಠಾವಂತ ಕಾರ್ಯಕರ್ತರ ಬಗೆಗಂತೂ ಆತನಲ್ಲಿ ತುಂಬಾ ಆದರದ ಭಾವನೆಯಿದ್ದಿತು. ಅವರೂ ಸಹ ಆತನನ್ನು ವಿಶ್ವಾಸದಿಂದಲೇ ನೋಡುತ್ತಿದ್ದರು. ಪಕ್ಷದ ಕೆಲಸಗಳಿಗೆ 'ಕ್ರಾಂತಿ'ಯಿಂದ ಉಪಯೋಗವಾಗುವಂತಿದ್ದ

ಸಂದರ್ಭಗಳಲ್ಲೆಲ್ಲ ಅವರು ಚಂದ್ರಣ್ಣನ ಸಹಕಾರವನ್ನು ಕೋರದಿರುತ್ತಿರಲಿಲ್ಲ. ಚಂದ್ರಣ್ಣನೂ ಸಂತೋಷದಿಂದ ಅವರೊಂದಿಗೆ ಸಹಕರಿಸುತ್ತಿದ್ದ.

ಧರ್ಮಪುರದ ನಿಲ್ದಾಣದಲ್ಲಿ ರೈಲು ನಿಂತಾಗ ಶಂಕರನನ್ನು ಕಾಣಲು ಕಮ್ಯೂನಿಸ್ಟ್ ಕಾರ್ಯಕರ್ತರದೊಂದು ಗುಂಪೇ ಸೇರಿದಂತಿದ್ದಿತು. ಕೂಲಿಕಾರ ಸಂಘದ ಕಾರ್ಯದರ್ಶಿ ದುರುಗಪ್ಪ, ಕಾರ್ಯಕಾರಿ ಸಂಘದ ಸದಸ್ಯರಾದ ಇಬ್ರಾಹೀಮ್, ಯಲ್ಲಪ್ಪ, ಮಲ್ಲಪ್ಪ, ನಾಗೋಜಿ ಮೊದಲಾದವರನ್ನು ಚಂದ್ರಣ್ಣನಿಗೆ ಪರಿಚಯ ಮಾಡಿಕೊಟ್ಟ ಶಂಕರ. ಮತ್ತೆ ಕಾಣುವುದಾಗಿ ಹೇಳಿ ಅವರನ್ನು ಬೀಳ್ಕೊಂಡು ಚಂದ್ರಣ್ಣ ಸಾಮಾನುಗಳನ್ನಿಳಿಸಿಕೊಳ್ಳತೊಡಗಿದ.

ಧರ್ಮಪುರದ ನಿಲ್ದಾಣವೂ ಒಂದು ವಿಲಕ್ಷಣತೆಯಿಂದ ಕೂಡಿದ್ದಂತೆ ಕಂಡುಬಂದಿತು ಚಂದ್ರಣ್ಣನಿಗೆ. ಬೇರಾವ ನಿಲ್ದಾಣದಲ್ಲೂ ಕಾಣಲಾರದಂಥ ಜನಸಂದಣಿಯನ್ನು ಅಲ್ಲಿ ಕಾಣಬಹುದು. ಪ್ಲಾಟ್‌ಫಾರ್ಮ್ ದೊಡ್ಡದಲ್ಲ. ಪ್ರಯಾಣಿಕರಿಗೇ ಸಾಲದಂಥ ಸ್ಥಳ. ಕೆಲಸವಿಲ್ಲದ ಜನವೆಲ್ಲ ಅಲ್ಲಿ ನೆರೆದಿರುತ್ತಾರೆ. ಆಗ ತಾನೆ ಕಾಫಿ ಕುಡಿದು ಸಿಗರೇಟು ಸೇದುತ್ತ ನಿಲ್ದಾಣಕ್ಕೆ ನುಗ್ಗಿ ಮೂರು ನಾಲ್ಕು ಸಲ ರೈಲಿನ ಎದುರಿಗೆ ಹಾಯ್ದು ಸುಂದರ ಮುಖಗಳನ್ನು ಕಂಡು ಕಣ್ಣಿಗೆ ಹಬ್ಬ ಮಾಡಿಕೊಳ್ಳುತ್ತ ತಿರುಗಾಡುವವರು ಕೆಲವರು. ಊರ ಹೊರಗಿನ ಕೆರೆಗೆ ಹೋಗಿ ಬರುವಾಗ ಬೇವಿನ ಕಡ್ಡಿಯಿಂದ ಹಲ್ಲುಜ್ಜಿಕೊಳ್ಳುತ್ತಿರುವ ಹಾಗೇ ಪ್ಲಾಟ್‌ಫಾರ್ಮಿನ ಮೇಲೆ ಒಂದೆರಡು ಸಲ ಅಲೆದು ಹೋಗುವವರು ಕೆಲವರು. ಆ ಗಾಡಿಯಿಂದ ಬರುವ ಬೆಂಗಳೂರಿನ ದಿನಪತ್ರಿಕೆಗಳ ಕಟ್ಟುಗಳನ್ನು ತೆಗೆದುಕೊಂಡು ಏಜಂಟರು ಬಿಚ್ಚುತ್ತಿರುವಾಗಲೆ ಸಂಚಿಕೆ ಗಳನ್ನು ತೆಗೆದುಕೊಂಡು ಬಿಸಿ ಬಿಸಿ ಸುದ್ದಿಗಳನ್ನೋದುತ್ತ ತಿರುಗುವವರು ಹಲವರು. ಪ್ರಯಾಣಿಕರನ್ನು ಕಳುಹಿಸಿ ಕೊಡುವುದಕ್ಕೂ ಬರಮಾಡಿಕೊಳ್ಳುವುದಕ್ಕೂ ಹಿಂಡು ಹಿಂಡಾಗಿ ನುಗ್ಗುವ ಕುಟುಂಬಗಳು ಬೇರೆ, ಗೆಳೆಯರ ತಂಡಗಳು ಬೇರೆ. ಒಬ್ಬ ವ್ಯಕ್ತಿ ಪ್ರಯಾಣ ಹೊರಟಿದ್ದರೆ ಆತನನ್ನು ಕಳುಹಿಸಲು ಇಪ್ಪತ್ತು ಜನ ಬಂದಿರುವುದೂ ಉಂಟು. ಅಂತೂ ಧರ್ಮಪುರದ ನಿಲ್ದಾಣವನ್ನು ಮೊದಲನೆಯ ಸಲ ಕಂಡವರಿಗೆ ಬೆಂಗಳೂರಿನ ಕರಗ, ಹಂಪೆಯ ರಥೋತ್ಸವಗಳ ನೆನಪು ಬರದಿರುವುದಿಲ್ಲ. ವರ್ಷದಲ್ಲಿ ಒಂದು ಪ್ಲಾಟ್‌ಫಾರ್ಮ್ ಟಿಕೆಟ್ ಕೂಡ ಮಾರಾಟವಾಗುವುದಿಲ್ಲ ಆ ನಿಲ್ದಾಣದಲ್ಲಿ. 'ಪ್ಲಾಟ್‌ಫಾರ್ಮ್ ಟಿಕೆಟ್' ಎಂಬ ಶಬ್ದವನ್ನು ಕೇಳಿದರೂ ಸಹ ನಕ್ಕುಬಿಡುತ್ತಾರೆ ಅಲ್ಲಿನ ಜನ. "ನಮಗೆ ಪ್ಲಾಟ್‌ಫಾರಂ ಟಿಕೆಟ್ ಕೇಳಿ ಈ ರೈಲಿನವರು ಬದುಕಿಕೊಳ್ಳು ವುದುಂಟೇ?" ಎಂದು ಹಾಸ್ಯ ಮಾಡುತ್ತಾರೆ. ಅಲ್ಲಿನ ಪೊಲೀಸಿನವರಂತೂ ಈ ಜನರ

ತಂಟೆಗೆ ಬರುವುದಿಲ್ಲ. 'ಅಪ್ಪಾ, ಅಯ್ಯಾ, ಅಣ್ಣಾ' ಎನ್ನುತ್ತ ದೂರದಲ್ಲೇ ಇದ್ದುಬಿಡುತ್ತಾರೆ. ಅಂತೂ ಜನರನ್ನು ತಡೆಹಿಡಿಯುವವರಾರೂ ಇರುವುದಿಲ್ಲ. ಅಲ್ಲಿ ಅವರದೇ ರಾಜ್ಯ.

ಆ ಗದ್ದಲದಲ್ಲಿ ದಾರಿ ತೆಗೆಯುತ್ತ ಚಂದ್ರಣ್ಣ ಶಿವಯೋಗಿ ಹೊರಟಿದ್ದ ಹಾಗೆ ಹದಿನೆಂಟು ವರ್ಷ ವಯಸ್ಸಿನ ಹುಡುಗನೊಬ್ಬ ಅವರಿಗೆದುರಾದ. ಆತನ ಲಂಡ ಅಂಗಿ, ಲಂಡ ಚಲ್ಲಣ, ಕೆದರಿದ ತಲೆಗೂದಲು, ಆತನ ಕೈಯಲ್ಲಿದ್ದ ದಿನಪತ್ರಿಕೆಗಳ ಕಟ್ಟು ಆತನೊಬ್ಬ ಪತ್ರಿಕಾ ಏಜಂಟನೆಂಬುದನ್ನು ಸೂಚಿಸಿದ್ದವು. 'ಕ್ರಾಂತಿ'ಯ ಏಜೆಂಟ್ ಆಗಿದ್ದ ಕೊಟ್ರಪ್ಪ ಚಂದ್ರಣ್ಣನಿಗೂ ಆತನಿಗೂ ಬಹಳ ದಿನಗಳ ಪರಿಚಯ. ಹುಡುಗ ಬಹಳ ಉತ್ಸಾಹಿ. ತುಂಬಾ ಅಭಿಮಾನದಿಂದ ಪತ್ರಿಕೆಯನ್ನು ಮಾರುತ್ತಿದ್ದ.

''ಏನು ಕೊಟ್ರಣ್ಣ ಸೌಖ್ಯವೇ?''

''ಏನೋ ಹೀಗೆ ನಿಮ್ಮ ದಯದಿಂದ. ಏನು ಶಿವಯೋಗೀಶ್ವರ ಸ್ವಾಮಿಗಳೂ ಬಂದರಲ್ಲ! ಎಲ್ಲಿ ಕ್ಯಾಂಪ್ ಹಾಕುವುದು?''

''ಛತ್ರಕ್ಕೆ ಹೋದರಾದೀತಲ್ಲ?'' ಎಂದ ಶಿವಯೋಗಿ.

''ಛೆ! ಈ ಸಾಮಾನುಗಳನ್ನೆಲ್ಲ ಕಟ್ಟಿಕೊಂಡು ಅಲ್ಲಿಗೇತಕ್ಕೆ ಹೋಗಬೇಕು? ಬೇರೆ ಕೊಠಡಿ ಸಿಕ್ಕುವವರೆಗೆ ಕೊಟ್ರಪ್ಪನ ಕೊಠಡಿಯಲ್ಲೇ ಧ್ವಜ ಊರಿದರಾಯಿತು. ಏನು ಕೊಟ್ರಪ್ಪ ನಿಮ್ಮಲ್ಲೇ ಕ್ಯಾಂಪ್ ಹಾಕಿದರೆ ಹೇಗೆ?''

''ಬಹಳ ಸಂತೋಷ ಬನ್ನಿ.''

ಕಂಪನಿಯನ್ನು ಸ್ಥಾಪಿಸುವ ವಿಚಾರ ತಿಳಿದಾಗ ಕೊಟ್ರಪ್ಪನಿಗೂ ಆನಂದವಾಗದಿರಲಿಲ್ಲ. ಆತ ಉತ್ಸಾಹದಿಂದ ನುಡಿದ : ''ಬಹಳ ಚಲೋ ಆಯ್ತು ಬಿಡಿರಿ. ಈ ಊರಿನಲ್ಲಿ ಕಂಪನಿಯನ್ನು ಯಶಸ್ವಿಯಾಗಿ ಕಟ್ಟಬಹುದು. ಇಲ್ಲಿನ ಜನ ನಿಮಗೆ ಸಂತೋಷದಿಂದ ಸಹಾಯ ಮಾಡುವರು. ಕಾಂಗ್ರೆಸ್ ಮುಖಂಡರಾದ ತಮ್ಮಣ್ಣನವರೂ ಅವರ ಪಂಗಡದವರೂ ಪೂರ್ಣವಾಗಿ ನೆರವಾಗಬಹುದು... ನಿಮ್ಮನ್ನು ಕಂಡರೆ ಅವರಿಗೆಲ್ಲ ಬಹಳ ಅಭಿಮಾನ...''

''ನಾವು ಅವರನ್ನು ಕಾಣಬೇಕಲ್ಲ ಕೊಟ್ರಪ್ಪ?''

''ಏನವಸರ? ತಡೆಯಿರಿ. ಅವರೂ ಸಹ ನಿಮ್ಮನ್ನು ನೋಡಬೇಕು ಅಂತಲೇ

ಇದಾರೆ. ನೀವು ಬಂದಿರುವ ಸುದ್ದಿ ತಿಳಿದರೆ ನಮ್ಮ ಕೊಠಡಿಗೇ ಬಂದು ಕಾಣುತ್ತಾರೆ. ಮಧ್ಯಾಹ್ನ ನಾನು ಕಾಂಗ್ರೆಸ್ ಕಚೇರಿಗೆ ಹೋಗಿ ತಿಳಿಸುತ್ತೇನೆ.''

''ಅವರಿಗೇಕೆ ತೊಂದರೆ ಪಾಪ! ನಾವೇ ಹೋದರಾಯಿತು.''

''ತೊಂದರೆಯೇನು ಬಂತು? ಸದ್ಯ ಅವರಿಗೂ ಯಾವ ಕೆಲಸವೂ ಇರುವುದಿಲ್ಲ. ಸಾಯಂಕಾಲ ಹೇಗೂ ಗಾಳಿ ಸಂಚಾರ ಹೊರಟಿರುತ್ತಾರೆ. ಹಾಗೇ ಬಂದು ಹೋದಾರು,'' ಎಂದ.

## ೧೦

ಕೊಟ್ರಪ್ಪ ಹೇಳಿದ್ದ ಹಾಗೆ ಸಾಯಂಕಾಲ ಬಿಳಿಟೋಪಿಯ ಜನರ ಗುಂಪೊಂದು ಆತನ ಕೊಠಡಿಯ ಕಡೆಗೆ ಬಂತು.

ತಮ್ಮಣ್ಣನವರಿಗೆ ಐವತ್ತು ವರ್ಷಕ್ಕೆ ಮೇಲ್ಪಟ್ಟು ವಯಸ್ಸಾದ ಹಾಗೆ ತೋರುತ್ತಿತ್ತು. ಆಳು ಸಾಕಷ್ಟು ಎತ್ತರವಾಗಿ ಹೃಷ್ಟಪುಷ್ಟವಾಗಿದ್ದಿತು. ಗಡ್ಡ-ಮೀಸೆ, ತಲೆಗೂದಲು ಅರ್ಧಕ್ಕರ್ಧ ನರೆತಿದ್ದರೂ ಅವರ ಮುಖದ ಮೇಲ ವೃದ್ಧಾಪ್ಯದ ಲಕ್ಷಣಗಳಾವುವೂ ಮೂಡಿರಲಿಲ್ಲ. ಅವರು ತೊಟ್ಟಿದ್ದ ಬಟ್ಟೆಗಳೆಲ್ಲ ಅರ್ಥಾತ್ ಖಾದಿಯವು; ಷರ್ಟು, ಕೋಟು, ಧೋತರ, ಗಾಂಧೀಟೋಪಿ. ಅವರು ಮಾತನಾಡುವ ರೀತಿಯಲ್ಲೂ ಒಂದು ಠೀವಿಯಿತ್ತು, ಅವರದೇ ಆದ ಒಂದು ವೈಶಿಷ್ಟ್ಯವಿತ್ತು. ಅವರ ನಡಿಗೆಯೂ ಹಾಗೇ. ಗಂಭೀರ. ಮದ್ದಾನೆಯ ಹಾಗೆ.

ತಮ್ಮಣ್ಣನವರು ನಾಟಕ ಕಂಪನಿ ಸೇರಿಕೊಂಡಿದ್ದರೆ ಶ್ರೇಷ್ಠ ನಟರಾಗುತ್ತಿದ್ದರೋ ಏನೊ. ನಟನಿಗಿರಬೇಕಾದ ನೈಸರ್ಗಿಕ ಗುಣಗಳೆಲ್ಲ ಅವರದಲ್ಲಿದ್ದುವು. ಮಾತಿಗೆ ತಕ್ಕಂತೆ ಹಾವಭಾವ, ಪ್ರಭಾವಶಾಲಿಯಾದ ಅಭಿನಯ ತೀರ ಸ್ವಾಭಾವಿಕವಾಗಿಯೆ ಸಾಧಿಸಿತ್ತು ಅವರಿಗೆ. ಸಾಮಾನ್ಯ ವಿಷಯಗಳನ್ನು ಚರ್ಚಿಸುವಾಗ ಅವರು ಹಸನ್ಮುಖರಾಗಿ ಇನಿ ದನಿಯಿಂದ ಮಾತನಾಡುತ್ತಿದ್ದರೆ ಗಂಭೀರ ಹಾಗೂ ವಿವಾದಾಸ್ಪದ ವಿಷಯಗಳು ಬಂದಾಗ ಅವರ ಮುಖ ಹಠಾತ್ತಾಗಿ ಬದಲಾವಣೆ ಹೊಂದುವುದು, ಹುಬ್ಬು

ಗಂಟಿಕ್ಕುವುದು, ಮೂಗಿನ ಹೊರಳೆಗಳು ಥಕಥೈ ಎಂದು ನರ್ತಿಸುವುವು, ಕತ್ತಿನ ನರಗಳು ಉಬ್ಬಿ ಮೇಲಕ್ಕೇಳುವುವು, ಧ್ವನಿ ಬಿರುಸಾಗುವುದು, ಕರ್ಕಶವಾಗುವುದು, ಕಠೋರವಾಗುವುದು, ವಾದಕ್ಕೆ ರಭಸ ಬಂದಾಗ ಯಾರಾದರೊಬ್ಬರು ಅವರನ್ನು ಕೆರಳಿಸಿದರಾಯಿತು – ಆಸಾಮಿ ರೌದ್ರಾವತಾರ ತಳೆಯುವುದು, ಅವರು ತಾರಕ ಸ್ವರದಲ್ಲಿ ಧ್ವನಿಯನ್ನೇರಿಸಿ ಮನೆಯ ಹೆಂಚುಗಳು ಹಾರಿಹೋಗುವ ಹಾಗೆ ಅಬ್ಬರಿಸಿ ಎದುರಾಳಿಯನ್ನು ತೆಪ್ಪಗಾಗಿಸುವವರು. ಹತ್ತಿರ ಕುಳಿತವರನ್ನೆಲ್ಲ ತಮ್ಮ ದೈತ್ಯ ಶಕ್ತಿಯಿಂದ ಆಕರ್ಷಿಸಿಕೊಂಡು ಅವರನ್ನು ಮೂಕವಾಗಿಸುವ ಕಲೆ ತಮ್ಮಣ್ಣನವರಿಗೆ ಚೆನ್ನಾಗಿ ಸಾಧಿಸಿದ್ದಿತು. ಅವರೊಂದಿಗೆ ಪರಿಚಯವಾದ ಅರ್ಧ ತಾಸಿನೊಳಗಾಗಿಯೆ ಚಂದ್ರಣ್ಣನಿಗೆ ಆದರ ಅನುಭವ ಬಂದಿತು. ಯಾವ ಗುಂಪಿನಲ್ಲಿದ್ದರೂ ಸರಿಯೆ, ಈ ಆಸಾಮಿ ತನ್ನ ಮುಖಂಡತ್ವ ಸ್ಥಾಪಿಸಲು ಪ್ರಯತ್ನ ಪಡುವನೆಂಬುದೂ ಮನವರಿಕೆಯಾಯಿತು.

ಚಂದ್ರಣ್ಣನನ್ನು ಕಾಣಲು ಅಲ್ಲಿಗೆ ಬಂದಿದ್ದ ಎಂಟು ಹತ್ತು ಜನರೆಲ್ಲ ತಮ್ಮಣ್ಣನವರ ಮುಖಂಡತ್ವವನ್ನು ಒಪ್ಪಿಕೊಂಡ ಹಾಗಿದ್ದಿತು. ಗುಂಪಿನ ಪರವಾಗಿ ತಮ್ಮಣ್ಣನವರೇ ಎಲ್ಲ ಮಾತುಗಳನ್ನೂ ಆಡುತ್ತಿದ್ದರು. ಅವರು ಹೇಳಿದುದನ್ನು ಅನುಮೋದಿಸುವವರಂತೆ ಇನ್ನುಳಿದವರು ಆಗಾಗ ಒಂದೆರಡು ಶಬ್ದ ನುಡಿಯುತ್ತಿದ್ದುದೆಷ್ಟೋ ಅಷ್ಟೆ. ''ತಮ್ಮಣ್ಣನವರ ಮಾತು ನಿಜ,'' ''ತಮ್ಮಣ್ಣನವರು ಸರಿಯಾಗಿ ಹೇಳಿದರು,'' ''ತಮ್ಮಣ್ಣನವರು ಹೇಳಿದ ಮೇಲೆ ನಾವು ಹೇಳಬೇಕಾದ್ದೇನಿದೆ?'' ಇತ್ಯಾದಿ.

ಬಂದಿದ್ದವರಲ್ಲಿ ಹೆಚ್ಚು ಜನ ವ್ಯಾಪಾರಸ್ಥರು. ಸರಾಫಿ ಅಂಗಡಿಯ ಶಿವರುದ್ರಪ್ಪನವರು ತುಂಬಾ ಗಂಭೀರ ವ್ಯಕ್ತಿ. ಮಧ್ಯಮ ವಯಸ್ಸಿನ ಸ್ಥೂಲ ಆಕೃತಿಯ ಶರೀರ. ಮುಖದ ಮೇಲೆ ಯಾವಾಗಲೂ ಮುಗುಳುನಗೆ. ಕಣ್ಣುಗಳಲ್ಲಿ ಪ್ರಶಾಂತ ಕಳೆ. ವಾದ ವಿವಾದಕ್ಕೆ ಪೂರ ಬಂದ ಸಮಯದಲ್ಲೂ ಅವರ ಮುಖದ ಮೇಲಿನ ಮುಗುಳುನಗೆ ಮಾಯವಾಗುತ್ತಿರಲಿಲ್ಲ. ದೃಷ್ಟಿ ಕೊಂಚವೂ ಚಲನವಲನ ಮಾಡುತ್ತಿರಲಿಲ್ಲ. ಅವರದೇ ಆದ ಒಂದು ವೈಶಿಷ್ಟ್ಯವೆಂದರೆ ಅವರ ಮೌನ. ನಡೆದಿದ್ದ ಮಾತುಕತೆಗಳನ್ನೆಲ್ಲ ಕೇಳುತ್ತ ಕುಳಿತವರು ಎಲ್ಲೋ ಅಪರೂಪವಾಗಿ ಒಂದೆರಡು ಮಾತುಗಳನ್ನಾಡುವವರಷ್ಟೆ ಮುತ್ತು ರತ್ನಗಳನ್ನು ತೂಗಿಕೊಡುವ ರೀತಿಯಲ್ಲೇ ಮಾತನ್ನೂ ಆಡುತ್ತಿದ್ದವರು!

ಇನ್ನೊಬ್ಬರು ಕಿರಾಣಿ ಅಂಗಡಿಯ ಗುರುಶಾಂತಪ್ಪನವರು. ಅವರದೂ ಸ್ಥೂಲ ಆಕೃತಿಯೆ. ಮಾತನಾಡುವಾಗ ಅವರ ಮುಖ, ಮೈ, ಕೈ ಎಲ್ಲವೂ ತಿರುಗುತ್ತಿದ್ದುದು ಅವರದೊಂದು ವೈಶಿಷ್ಟ್ಯ. ಕಾಳಸಂತೆಯ ವರ್ತಕರ ಬಗೆಗೆ ಅವರಿಗೆ ವಿಪರೀತ ಕೋಪ

ಬಿದ್ದುದು ಎದ್ದು ಕಾಣುತ್ತಿತ್ತು. ಆ ಕದೀಮರನ್ನು ಉಗ್ರವಾಗಿ ಟೀಕಿಸಿ ಚಂದ್ರಣ್ಣ 'ಕ್ರಾಂತಿ' ಯಲ್ಲಿ ಬರೆದಿದ್ದ ಲೇಖನಗಳ ವಿಚಾರವನ್ನೆತ್ತಿ ಅವರು ಆತನನ್ನು ಮುಕ್ತಕಂಠದಿಂದ ಹೊಗಳಿದರು. ''ಈ ನಮ್ಮ ನಗರ ಅಂದರೆ ಕಾಳಸಂತೆಕೋರರ ಸ್ವರ್ಗವಿದ್ದ ಹಾಗೆ. ಇಲ್ಲಿನ ಕದೀಮರ ವಿಷಯವಾಗಿಯೂ ನೀವು ಬರೆಯಬೇಕಾದ್ದು ತುಂಬಾ ಇದೆ,'' ಎಂದ ಹೇಳಿದರು. ''ಅದೆಲ್ಲಾ ಈಗಲೆ ಬೇಡ. ನಿಧಾನವಾಗಿ ಹೇಳಿದರಾಯಿತು,'' ಎಂದು ತಮ್ಮಣ್ಣನವರು ಅಡ್ಡಬಾಯಿ ಹಾಕಿದುದರಿಂದ ಅವರ ಮಾತು ಅಷ್ಟಕ್ಕೇ ನಿಂತುಹೋಯಿತು.

ಗುರುಶಾಂತಪ್ಪನವರಿಂದ ಆಗಾಗ ಬೀಡಿಗಳನ್ನು ಕೇಳಿ ತೆಗೆದುಕೊಂಡು ಸೇದುತ್ತಿದ್ದ ವ್ಯಕ್ತಿಯೊಂದಿತ್ತು. ಮಾರ್ತಾಂಡಪ್ಪ ಎಂದು ಆತನ ಹೆಸರು. ಆತನಿಗೆ ಇಷ್ಟೇ ವರ್ಷ ವಯಸ್ಸು ಎಂದು ಯಾರೂ ಹೇಳಲು ಸಾಧ್ಯವಿರಲಿಲ್ಲ. ಮೂವತ್ತೈದರಿಂದ ಐವತ್ತರ ಮಧ್ಯೆ ಎಷ್ಟಾದರೂ ಆದವರ ಹಾಗೆ ಕಾಣಿಸುತ್ತಿದ್ದನಾತ. ತೆಳ್ಳಗಿನ ಎಣ್ಣೆಗೆಂಪು ಬಣ್ಣದ ಶರೀರ, ಬಿಳಿಯ ಖಾದಿಯ ಪ್ಯಾಂಟ್ ಹಾಕಿ ಬಿಳಿಯ ಖಾದಿಯ ಕೋಟು ತೊಟ್ಟು, ನರೆತು ಬೆಳ್ಳಗಾದ ಕ್ರಾಪು ಕೂದಲನ್ನು ಅಂದವಾಗಿ ಬಾಚಿಕೊಂಡು ಬೈತಲೆಯ ಗೆರೆ ಹೊರಗಡೆ ಕಾಣಿಸುವ ಹಾಗೆ ಓರೆಯಾಗಿ ಗಾಂಧಿಟೋಪಿ ಇಟ್ಟುಕೊಂಡಿದ್ದನಾತ. ಕೈಯಲ್ಲಿ ಕೊಡೆಯೂ ಇತ್ತು. ಹಿಂದೆ ಸೇವಾದಳದಲ್ಲಿ ಆತ ಶಿಕ್ಷಣ ಪಡೆದುದೂ, ಮೂರು ನಾಲ್ಕು ಸಲ ಸೆರಮನೆಯನ್ನು ಕಂಡಿದ್ದುದೂ ತಿಳಿಯಿತು. ''ನಿಮ್ಮನ್ನು ನಾನು ಜೈಲಿನಲ್ಲಿ ನೋಡಿದ್ದೇನೆ. ನಮ್ಮ ಬರಾಕಿನ ಎದುರಿನ ಬರಾಕಿನಲ್ಲಿಯೆ ನೀವು ಇದ್ದಿರಿ'' ಎಂದು ಆತ ಹೇಳಿದ. ''ಇರಬೇಕು ಅಂತೂ ನೆನಪಿನಲ್ಲಿಟ್ಟುಕೊಂಡಿದ್ದೀರಲ್ಲ, ಪರವಾಯಿಲ್ಲ'' ಎಂದ ಚಂದ್ರಣ್ಣ ''ಮಹಾದೇವ ಮೈಲಾರರಿಗೂ ನನಗೂ ತುಂಬಾ ಸ್ನೇಹವಿತ್ತು. ಅವರೂ ನೀವೂ ಸ್ನೇಹಿತರು. ಅರ್ಥಾತ್ ನಾವೂ ನೀವೂ ಸ್ನೇಹಿತ ರಾದಂತಾಯಿತಲ್ಲ!'' ಎಂದು ಹೇಳಿ ಆತ ತನ್ನಷ್ಟಕ್ಕೆ ತಾನೆ ನಕ್ಕು ತನ್ನ ಮಾತಿನಿಂದಾಗಿ ಗುಂಪಿನವರೂ ನಗಬಹುದೆಂಬ ನಿರೀಕ್ಷೆಯಿಂದ ಅವರನ್ನೆಲ್ಲ ನಿಟ್ಟಿಸಿ ನೋಡಿದ. ಅವನ ಮಾತು ಯಾರಿಗೂ ನಗೆ ಹುಟ್ಟಿಸಲಿಲ್ಲ. ತಮ್ಮಣ್ಣನವರ ಹುಬ್ಬು ಮೇಲಕ್ಕೇರಿ ಕೆಳಕ್ಕಿಳಿದ ಹಾಗೆ ತೋರುತ್ತಿದ್ದಿತು. ಮಾರ್ತಾಂಡಪ್ಪ ಮಾತು ನಿಲ್ಲಿಸಿ ಮತ್ತೆ ಬೀಡಿಯ ಆರಾಧನೆಗೆ ತೊಡಗಿದ.

ತಮ್ಮಣ್ಣನವರ ಎಡಗಡೆಗೆ ಗೋಡೆಗೆ ಆತುಕೊಂಡು ಕುಳಿತಿದ್ದ ವ್ಯಕ್ತಿಯೊಂದಿತ್ತು. ಆಸಾಮಿ ಗರಡಿಯಾಳಿನಂತೆ. ಉಬ್ಬಿದ ಎದೆ, ತುಂಬಿದ ದೇಹ, ಚೆಂಡಿನಂತೆ ಊದಿ ಕೊಂಡ ಕೆನ್ನೆಗಳು, ಯಾವಾಗಲೂ ಕೆಂಪಗಿರುವ ಕಣ್ಣುಗಳು. ಅವರು ಜಮೀನ್ದಾರ್

ಮರಿಯಪ್ಪನವರು. ಯಾವುದೊಂದು ಕೆಲಸದ ಗೊಡವೆಗೂ ಹೋಗದೆ ಸುಖವಾಗಿ ಕಾಲ ಕಳೆಯುವವರು. ನಗರದಲ್ಲಿ ಅವರದೇ ಆದ ಹತ್ತು ಹದಿನೈದು ಮನೆಗಳಿದ್ದು ಅವುಗಳಿಂದಲೂ ನೂರಾರು ರೂಪಾಯಿ ಬಾಡಿಗೆ ಬರುತ್ತಿತ್ತು. ಜಮೀನುಗಳಿಂದ ಬರುವ ಆದಾಯ ಬೇರೆ. ಅವರ ಭಾರೀ ದೇಹವೊಂದನ್ನು ಬಿಟ್ಟರೆ ಅವರಲ್ಲಿ ಬೇರಾವ ವೈಶಿಷ್ಟ್ಯವೂ ಎದ್ದು ಕಾಣುವಂತಿರಲಿಲ್ಲ. ಮಾತೂ ಅಷ್ಟೇ, 'ಎಲಾ ಇವನ!', 'ಇವನಪ್ಪನ' ಇತ್ಯಾದಿ ಪ್ರಯೋಗಗಳು ಅವರ ನಾಲಗೆಯ ಮೇಲೇ ನಲಿಯುತ್ತಿದ್ದ ಹಾಗಿದ್ದಿತು.

ನಸ್ಯದ ಡಬ್ಬಿಯನ್ನು ತೆಗೆದು ಅದರಿಂದ ಒಂದು ಚಿಟಿಕೆ ನಸ್ಯವನ್ನು ಬೆರಳುಗಳಲ್ಲಿ ಎತ್ತಿಕೊಂಡು ಮೂಗಿನ ಹೊರಳೆಗಳಿಗೇರಿಸಿ ತಮ್ಮಣ್ಣನವರು ಗಂಭೀರ ಸ್ವರದಲ್ಲಿ ಹೇಳತೊಡಗಿದರು : ''ಈ ಊರಿನಲ್ಲಿ ಸಾರ್ವಜನಿಕ ಕೆಲಸ ಅಂದರೆ ಬಹಳ ಕಷ್ಟ ಏನು ಮಾಡುವುದಿದ್ದರೂ ಎಲ್ಲವನ್ನೂ ನಾವು ನಾಲ್ಕು ಜನರೇ ಮಾಡಬೇಕು. ಕಾಂಗ್ರೆಸ್ ಕೆಲಸಕ್ಕಂತೂ ಈ ನಮ್ಮ ಗುಂಪನ್ನು ಬಿಟ್ಟರೆ ಬೇರೆ ಜನರಿಲ್ಲ. ಈ ಊರಲ್ಲಿರುವುದು ಮುಕ್ಕಾಲು ಪಾಲು ವ್ಯಾಪಾರಸ್ಥರು. ತಮ್ಮ ಅಂಗಡಿ, ತಮ್ಮ ಮನೆಮಾರು, ತಮ್ಮ ಆಸ್ತಿಪಾಸ್ತಿಗಳನ್ನು ಬಿಟ್ಟರೆ ಮುಂದಕ್ಕೆ ಅವರಿಗೆ ದೃಷ್ಟಿಯೇ ಓಡುವುದಿಲ್ಲ. ಇನ್ನುಳಿದವರೆಂದರೆ ಲಾಯರುಗಳು, ಚಿಕ್ಕಪುಟ್ಟ ನೌಕರುಗಳು. ಲಾಯರುಗಳ ವಿಷಯ ನಿಮಗೆ ಗೊತ್ತೇಯಿರಬೇಕು. ಅವರಿಗೆ ಕೆಲಸ ಮಾಡುವುದೆಂದರೆ ಬೇಡ – ಮುಖಂಡತ್ವ ಮಾತ್ರ ಬೇಕು. ಏನಾದರೂ ಸಭೆ, ಟೀ ಪಾರ್ಟಿ, ಅಧ್ಯಕ್ಷ ಪದ, ಚುನಾವಣೆ ಇದ್ದರೆ ಮಾತ್ರ ಅವರು ಕುಣಿಯುತ್ತ ಬಂದಾರು. ಏನಾದರೂ ಕೆಲಸವಾಗಬೇಕೆಂದರೆ ಒಬ್ಬರೂ ಮುಖ ತೋರಿಸುವುದಿಲ್ಲ. ಎಲ್ಲರಿಗೂ ತಾತ್ಸಾರ. ಅಂತೂ ಸೋಮಾರಿತನ ಇವರಿಗೆ ಮೈಗೂಡಿ ಹೋಗಿದೆ.''

''ಸಭೆ ಗಿಭೆ ಆದರೆ ಜನ ಬರುತ್ತಾರೆ ತಾನೆ?''

''ನಿಮ್ಮಂಥವರು ಯಾರಾದರೂ ಲೇಖಕರೋ, ಮುಖಂಡರೋ ಮೊದಲನೆಯ ಸಲ ಈ ಊರಿಗೆ ಬಂದಾಗ ಮಾತ್ರ ಜನ ಸೇರುತ್ತಾರೆ. ಹೆಚ್ಚು ಜನ ಬರುವುದು ನಿಮ್ಮನ್ನು ನೋಡಲಿಕ್ಕಾಗಿಯೆ. ಆಸಾಮಿ ಹೇಗಿದೆಯೊ ನೋಡಿಕೊಂಡು ಬರೋಣ ಬಾರೋ ಎಂದು ಬಂದಿರುತ್ತಾರೆ. ನೀವು ಮಾತನಾಡುವುದು ಅವರಿಗೆ ಅರ್ಥವಾಗುವಂತಿದ್ದರೆ, ಅವರನ್ನು ನಗಿಸಲು ನೀವು ಸಮರ್ಥರಾಗಿದ್ದರೆ ಸ್ವಲ್ಪ ಹೊತ್ತು ಕೂತಿರುತ್ತಾರೆ. ನೀವೇನಾದರೂ ಪಾಂಡಿತ್ಯಪೂರ್ಣವಾಗಿ ಗಂಭೀರವಾಗಿ ಮಾತನಾಡುತ್ತಿದ್ದರೆ ಮುಗಿಯಿತು – ಒಬ್ಬೊಬ್ಬರೇ ಮೆಲ್ಲಗೆ ಎದ್ದು ಬೀಡಿ ಹತ್ತಿಸಿಕೊಂಡು ಸೇದುತ್ತ ಗಾಡಿ ಬಿಡುತ್ತಾರೆ.''

''ಅಂತೂ ಸಾಹಿತಿಗಳು, ತತ್ವಜ್ಞಾನಿಗಳು ಇಲ್ಲಿ ಭಾಷಣ ಮಾಡುವ ಹಾಗೇ ಇಲ್ಲ ಅನ್ನಿ!''

''ಗಹನವಾದ ವಿಷಯ ಯಾವುದಿದ್ದರೂ ಸರಿಯೆ, ನಮ್ಮೂರವರ ತಲೆಗೆ ಹಿಡಿಸಲಾರದು. ಇವರಿಗೆ ನಗಿಸುವ ಭಾಷಣಕಾರರೆಂದರೆ ಬಹಳ ಪ್ರೀತಿ. ಅಡ್ಡಿತಿಡ್ಡ ಕತೆ ಹೇಳಿ ಸರ್ಕಸ್ಸಿನಲ್ಲಿಯ ಗೊಡ್ಡಿಗಳ ಹಾಗೆ ನಕಲಿ ಅಭಿನಯ ಮಾಡುತ್ತ ಮನರಂಜನೆ ಮಾಡುವವರು ಬಂದರೆ ಸಾವಿರ ಸಾವಿರದ ಸಂಖ್ಯೆಯಲ್ಲಿ ಹಿಂಡುಗಟ್ಟಿಕೊಂಡು ನೆರೆಯುತ್ತಾರೆ. ಇವರಿಗೆ ಹೇಗಿರಬೇಕು ಅಂದರೆ – ಒಂದು ಬಿಟ್ಟೀ ಸಿನಿಮಾ ಇದ್ದ ಹಾಗಿರಬೇಕು!'' ಎಂದ ಮಾರ್ತಾಂಡಪ್ಪ.

ಗುರುಶಾಂತಪ್ಪನವರು ನಗುತ್ತ ಹೇಳತೊಡಗಿದರು : ''ನಮ್ಮ ಜನ ವಿಚಿತ್ರ ಜನ. ಬೈಯ್ಯುವುದು ಅಂದರೆ ಬಲು ಪ್ರೀತಿ ಇಲ್ಲಿಯ ಜನಗಳಿಗೆ. ಅವರ ಮೆಚ್ಚುಗೆಗೆ ಪಾತ್ರರಾದವರು ಬೈಯ್ಯತೊಡಗಿದಾಗ ಕೇಕೆ ಹಾಕುತ್ತ-ಎಷ್ಟು ಸೊಗಸಾಗಿ ಬಯ್ಯುತ್ತಾರಲ್ಲಯ್ಯ! – ಎಂದು ಹೊಗಳುವರು.''

''ಬೇರೆ ಯಾರಾದರೂ ಬಯ್ದರೆ?''

''ಅವರ ತಲೆ ಉಳಿಯಲಿಕ್ಕಿಲ್ಲ, ಕಲ್ಲಿನಿಂದ ಬಡಿದು ತೀರಿಸಿಬಿಟ್ಟಾರು. ಹೂಂ, ಬಡಿಯುವುದು ಹೊಡೆಯುವುದು ಅಂದರೂ ಬಲು ಪ್ರೀತಿ ಇಲ್ಲಿನ ಜನಕ್ಕೆ. ಮೊನ್ನೆ ಏನಾಯಿತು ಅಂತೀರಿ, ಇಲ್ಲೊಂದು ದ್ಯಾಮವ್ವನ ಗುಡಿಯಿದೆ. ಜಾತ್ರೆಯ ಕಾಲಕ್ಕೆ ಒಂದು ಕೋಣನ ಬಲಿಯೂ ಆಗುತ್ತದೆ. ಈ ಸಲ ಈ ಪ್ರಾಣಬಲಿಯನ್ನು ತಪ್ಪಿಸಬೇಕೆಂದು ಒಬ್ಬ ಹುಡುಗ ಒಂದು ಸಭೆ ಮಾಡಿ ಕೋಣನನ್ನು ಬಲಿ ಕೊಡುವುದು ಪಾಪ, ಮೂಢತನ ಎಂದು ಮುಂತಾಗಿ ಟೀಕಿಸಿದ. ಆದರಿಂದ ಕೆರಳಿದ ಆ ದ್ಯಾಮವ್ವನ ಭಕ್ತರು ಆ ಹುಡುಗನನ್ನು ಹಿಡಿದುಕೊಂಡು ಬೀದಿಯಲ್ಲಿಯೇ ಯದ್ವಾತದ್ವಾ ಬಡಿದು ಆತನ ಕಾಲು ಹಿಡಿದು ದರದರ ಎಳೆಯುತ್ತಾ ದ್ಯಾಮವ್ವನ ಗುಡಿಗೆ ತಂದು ಆತನನ್ನೇ ಕೋಣದ ಹಾಗೆ ಕಡಿಯಲು ಸಿದ್ಧವಾಗಿದ್ದರು!'' ಎಂದ ಮಾರ್ತಾಂಡಪ್ಪ.

''ಪೋಲೀಸಿನವರಿಲ್ಲವೆ ಈ ಊರಲ್ಲಿ? ಅವರೇನು ನಿದ್ದೆ ಮಾಡುತ್ತಿದ್ದರೇ?''

''ಬೇರೆ ಉದ್ಯೋಗವೇನು ಅವರಿಗೆ? ಅಲ್ಲದೆ ಆ ತರುಣನ ಬಗ್ಗೆ ಅವರಿಗೂ ಕೋಪವೆ. ಆತ ಫಾರ್ವರ್ಡ್ ಬ್ಲಾಕಿನವ. ಸುಭಾಷರ ಅನುಯಾಯಿ. ನಾಲ್ಕೈದು ಸಲ ಆತ ಪೋಲೀಸಿನವರನ್ನು ಕಟುವಾಗಿ ಟೀಕಿಸಿದ್ದ. ಕಾನೂನಿನ ಪ್ರಕಾರ ಪೊಲೀಸರು ಆತನ

ಮೇಲೆ ಯಾವ ಕ್ರಮವನ್ನೂ ತೆಗೆದುಕೊಳ್ಳುವಂತಿರಲಿಲ್ಲ. ಹೊಟ್ಟೆಯೊಳಗಿನ ಸಿಟ್ಟು ರಟ್ಟೆಯಲ್ಲಿಲ್ಲ ಅಂತ ಸುಮ್ಮನಿದ್ದರು. ಆಕಸ್ಮಾತ್ತಾಗಿ ಇಂಥದೊಂದು ಸಂದರ್ಭವೊದಗಿ ಬಂದು ಆ ಹುಡುಗನಿಗೆ ಚೆನ್ನಾಗಿ ಏಟು ಬಿದ್ದು ಫಜೀತಿಯಾದಾಗ ಪೊಲೀಸರಿಗೂ ಸಮಾಧಾನವಾಗಿರಬೇಕು. ಸಾಯಲಿ ಮುಠ್ಠಾಳ ಅಂತ ಸುಮ್ಮನಿದ್ದರು...''

''ಇದೇನು ಸರಕಾರವೊ ತೊಗಲಕ ಮಹಮ್ಮದನ ಕಾರಭಾರವೋ?'' ಎಂದು ವಿಸ್ಮಯದಿಂದ ಕೇಳಿದ ಚಂದ್ರಣ್ಣ.

''ಯಾವ ಸರಕಾರ ಬಂದರೂ ನಮ್ಮೂರಿನ ಮಟ್ಟಿಗೆ ಮಾತ್ರ ಮಹಮ್ಮದನ ದರಬಾರವೇ ಸರಿ. ಇಲ್ಲಿನ ವಾತಾವರಣವೇ ಹೀಗೆ. ಈ ಅವ್ಯವಸ್ಥೆಯನ್ನೆಲ್ಲ ಸರಿಪಡಿಸುವುದಾಗಿ ಪಣತೊಟ್ಟು ಬಹಳ ದರ್ಪದಿಂದ ಇಲ್ಲಿಗೆ ಬಂದ ಪೊಲೀಸು ಅಧಿಕಾರಿಗಳೂ ಸಹ ಎರಡು ಮೂರು ತಿಂಗಳಲ್ಲೇ ಪೆಟ್ಟುತಿಂದು ನಿರಾಶರಾಗಿ ತಾವಾಗಿಯೇ ಬೇರೆ ಕಡೆಗೆ ವರ್ಗ ಮಾಡಿಸಿಕೊಂಡು ಹೋದದ್ದುಂಟು...'' ಎಂದು ತಮ್ಮಣ್ಣನವರು.

ಈ ಅವ್ಯವಸ್ಥೆ ಈ ಪುಂಡಾಟಿಕೆ, ಈ ಹುಂಬತನಗಳ ಕತೆ ಕೇಳಿದಾಗ ಚಂದ್ರಣ್ಣನಿಗೆ ಇಲ್ಲಿ ಕಂಪನಿ ಸ್ಥಾಪಿಸಿ ಪತ್ರಿಕೆ ಹೊರಡಿಸುವುದು ಉಚಿತವಾದೀತೇ ಇಲ್ಲವೇ ಎಂಬ ಸಂದೇಹ ಬರದಿರಲಿಲ್ಲ. ಬೆಂಗಳೂರಿನಲ್ಲಿ ಇಂಥ ಘಟನೆಗಳು ನಡೆದರೆ ಪೋಲೀಸು ಶಾಖೆಯ ಬಗೆಗೆ ಜನ ಕೋಲಾಹಲವೆಬ್ಬಿಸುತ್ತಿತ್ತು. ಇಲ್ಲಿ ಹಗಲು ಹಾಡೇ ಕೊಲೆ ನಡೆದರೂ ಯಾರೂ ಗಮನಿಸದೆ ತಪ್ಪಗಿದ್ದುಬಿಡುವರಲ್ಲ! ಇದೆಂಥ ಊರು? ಇದೆಂಥ ಮನೋವೃತ್ತಿ! ಬೆಂಗಳೂರು ಮೈಸೂರುಗಳಂಥ ನಗರಗಳಿಗೆ ಎಷ್ಟು ನೂರು ವರ್ಷ ಹಿಂದುಳಿದಿದೆಯೊ ಈ ಊರು, ಎಂದುಕೊಂಡ ಚಂದ್ರಣ್ಣ.

ಅಂದು ರಾತ್ರಿ ತಮ್ಮಣ್ಣನವರ ಮನೆಯಲ್ಲಿಯೇ ಅವರಿಗೆ ಊಟದ ವ್ಯವಸ್ಥೆಯಾಗಿದ್ದಿತು.

ಕೊಟ್ರಪ್ಪನ ಕೊಠಡಿಯಿಂದ ಒಂದೆರಡು ಫರ್ಲಾಂಗ್ ದೂರದಲ್ಲಿ ವಿಶಾಲವಾದ ಸ್ಥಳದಲ್ಲಿತ್ತು ಅವರ ಮನೆ. ಎರಡು ಅಂತಸ್ತುಗಳ ಕಾಂಕ್ರೀಟ್ ಕಟ್ಟಡ ಅದು. ಎದುರಿಗೆ ಪುಟ್ಟದೊಂದು ಹೂದೋಟವೂ ಇತ್ತು. ಅದರ ಎದುರಿಗೆ ಬಣವೆ, ದನಗಳ ಕೊಠಡಿ. ನೇಗಿಲು ಬಂಡಿ ಇತ್ಯಾದಿ ಕಮತದ ಸಾಮಾನುಗಳೂ ಅಲ್ಲಿ ಇಲ್ಲಿ ಕಾಣಿಸುತ್ತಿದ್ದವು. ಅಂಗಳದಲ್ಲಿ ದೊಡ್ಡದೊಂದು ಬಾವಿಯೂ ಇತ್ತು.

''ಈ ಸಾಮಾನುಗಳನ್ನು ನೋಡಿದರೆ ಕಮತ ದೊಡ್ಡದಿರಬೇಕೆಂದು

ತೋರುತ್ತದೆ!'' ಎಂದ ಚಂದ್ರಣ್ಣ.

''ತಮ್ಮಣ್ಣನವರು ಬಾರೀ ಜಮೀನುದಾರರು. ನೂರಾರು ಎಕರೆ ಹೊಲ ಇವೆ ಅವರಿಗೆ,'' ಎಂದ ಶಿವಯೋಗಿ.

''ಛೆ! ಛೆ! ಈಗ ಅಷ್ಟೇನೂ ಇಲ್ಲ. ಎಲ್ಲವೂ ಮಾರಿಹೋಯಿತು. ಏನೋ ಸ್ವಲ್ಪ ಉಳಿದಿದೆ ಅಷ್ಟೆ'' ಎಂದರು ತಮ್ಮಣ್ಣನವರು.

''ಮಾರಬೇಕಾಯಿತೇ? ಏಕೆ?''

''ಕೂತು ತಿನ್ನಲು ಬೇಕಲ್ಲ ಸಾರ್? ಹತ್ತು ಹನ್ನೆರಡು ವರ್ಷವಾಯಿತು ನಾನು ಕಾಂಗ್ರೆಸ್ಸಿಗೆ ಸೇರಿ. ಅಂದಿನಿಂದ ಅದರದೇ ಕೆಲಸ ಹಗಲು ರಾತ್ರಿ. ಮನೆಯ ಕಡೆಗೆ ಲಕ್ಷ್ಯ ಕೊಡಲು ಪುರುಸೊತ್ತಿಲ್ಲ. ಹೊಲಗಳನ್ನು ನೋಡಿಕೊಳ್ಳಲಾಗಲಿಲ್ಲ. ನನ್ನನ್ನು ಬಿಟ್ಟರೆ ಮನೆಯಲ್ಲಿ ಬೇರೆ ಗಂಡಸರಾರೂ ಇಲ್ಲ. ಮಕ್ಕಳೆಲ್ಲ ಇನ್ನೂ ಚಿಕ್ಕವರು. ಆಳುಗಳಿಂದ ಏನಾಗಬೇಕು? ಬರಬೇಕಾದಷ್ಟು ಆದಾಯ ಬರಲಿಲ್ಲ. ಜೀವನ ಸಾಗಬೇಕಲ್ಲ. ಸಾಲ ವಾಯಿತು ಆ ಸಾಲ ತೀರಿಸಲು ಒಂದೊಂದೇ ಹೊಲವನ್ನು ಮಾರಿದ್ದಾಯಿತು. ಮಾರಿದರೂ ಸಾಲಲಿಲ್ಲ. ಕಾಂಗ್ರೆಸ್ಸಿನ ಕೆಲಸ, ಟೌನ್ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷ ಬೇರೆ, ಊರಿಗೆ ಯಾರಾದರೂ ಮುಖಂಡರು, ಕಾರ್ಯಕರ್ತರು ಬಂದರೆ ಅವರಿಗೆ ಊಟ, ವಸತಿ, ಟೀ, ಕಾಫಿ ಎಲ್ಲವೂ ಇಲ್ಲಿಯೆ ಆಗಬೇಕಲ್ಲವೆ? ಹೀಗಾಗಿ ಇದ್ದುದೆಲ್ಲ ತೊಳೆದುಹೋಯಿತು. ಈಗ ಏನೋ ಸ್ವಲ್ಪ ಮಕ್ಕಳಿಗೆ ಆಧಾರವಾಗಿ ಉಳಿದಿದೆ. ಒಂದು ಗಂಡು ಹುಡುಗ ಇದಾನೆ. ಇನ್ನೂ ಚಿಕ್ಕವ. ಏಳೆಂಟು ವರ್ಷ ವಯಸ್ಸು ಆತನಿಗಿನ್ನೂ ವಿದ್ಯಾಭ್ಯಾಸವಾಗಬೇಕು. ಎರಡು ಹೆಣ್ಣುಮಕ್ಕಳು, ಅವೂ ತೀರ ಚಿಕ್ಕವು. ಅವರೂ ಬೆಳೆದು ದೊಡ್ಡವರಾಗಬೇಕು. ಮದುವೆಗಳಾಗಬೇಕು. ಅಂತೂ ಎಲ್ಲ ಕಷ್ಟವೇ. ಹೇಗೋ ಸಾಗಿದೆ ಅನ್ನಿ. ಈ ವರ್ಷ ಚುನಾವಣೆ ಬೇರೆ ಆಗಬೇಕಲ್ಲ. ಆದರ ಖರ್ಚು ಬೇರೆ...''

ಬಣವೆಯ ಹತ್ತಿರ ಗುಡಾರ ಹಾಸಿಕೊಂಡು ಕುಳಿತು ಅವರು ಮಾತನಾಡುತ್ತಿದ್ದರು. ಒಳಗಡೆ ಅಡುಗೆಯ ಸಿದ್ಧತೆಗಾರಂಭವಾಗಿದ್ದಿತು. ಇನ್ನೂ ಊಟದ ಸಮಯವಾಗಿರಲಿಲ್ಲ. ಚಂದ್ರಣ್ಣ ಶಿವಯೋಗಿ ಇಬ್ಬರೂ ಕುತೂಹಲದಿಂದ ತಮ್ಮಣ್ಣನವರ ಮಾತು ಕೇಳುತ್ತ ಕುಳಿತಿದ್ದರು.

ಊಟ ನಡೆಯುತ್ತಿದ್ದಾಗಲೂ ಅವರ ಮಾತು ಒಂದೆ ಸಮನೆ ಸಾಗಿದ್ದಿತು.

''ನೀವು ಈ ಊರಿಗೆ ಬಂದದ್ದು ಬಹಳ ಒಳ್ಳೆಯದಾಯಿತು. ನಿಮ್ಮಿಂದ

ನಮಗೆಲ್ಲ ತುಂಬ ಸಹಾಯವಾದೀತು. ಪತ್ರಿಕೆಯೊಂದು ಜರೂರಾಗಿ ಬೇಕಾಗಿದೆ ಈ ಊರಿಗೆ. ನಮ್ಮ ವಿರೋಧಿಗಳ ಸಂಖ್ಯೆ ದಿನೇ ದಿನೇ ಹೆಚ್ಚುತ್ತಿದೆ. ಹನುಮಣ್ಣ ಅಂತ ಒಬ್ಬ ಲಾಯರು ಇದಾನೆ. ಆತ ಬೇರೆ ಕತ್ತಿ ಮಸೆಯುತ್ತಿದಾನೆ ನಮ್ಮ ವಿರುದ್ಧ. ಹಿಂದೆ ಆತನೂ ಕಾಂಗ್ರೆಸ್ಸಿನಲ್ಲೇ ಇದ್ದ. ಯುದ್ಧಕಾಲದಲ್ಲಿ ಕಾಳಸಂತೆ ವ್ಯಾಪಾರ ಮಾಡಿ ಲಕ್ಷಾಂತರ ರೂಪಾಯಿ ಗಳಿಸಿದ. ಕಾಂಗ್ರೆಸ್ಸಿನವರು ಕಾಳಸಂತೆ ಮಾಡಬಾರದೆಂದು ನಾನು ಹೇಳಿದಾಗ ನನ್ನ ಮೇಲೆ ಸಿಟ್ಟಾದ. ಅಂಥವರು ಇನ್ನೂ ಕೆಲವರಿದಾರೆ. ಇವರನ್ನೆಲ್ಲ ಮಟ್ಟ ಹಾಕಲು ಒಂದು ಪತ್ರಿಕೆ ಬೇಕು...''

ಊಟ ಮುಗಿಸಿಕೊಂಡು ಗೆಳೆಯರಿಬ್ಬರೂ ಕೊಟ್ರಪ್ಪನ ಕೊಠಡಿಯ ಕಡೆಗೆ ಹೊರಟಿದ್ದ ಹಾಗೆ ಚಂದ್ರಣ್ಣನೆಂದ : ''ಅಂತೂ ಪರಿಸ್ಥಿತಿ ವಿಚಿತ್ರವಾಗಿದೆ ಶಿವಯೋಗಿ!''

ಹೊಟ್ಟೆತುಂಬಾ ಊಟ ಹೊಡೆದು ತಾಂಬೂಲ ಸವಿಯುತ್ತ ನಿಧಾನವಾಗಿ ಅಡಿಯಿಡುತ್ತ ಬರುತ್ತಿದ್ದ ಶಿವಯೋಗಿ ಕೊಂಚ ಅಸಡ್ಡೆಯಿಂದಲೇ, ''ಏನು ವಿಚಿತ್ರ ಕಂಡಿರಿ?'' ಎಂದು ಕೇಳಿದ.

''ಅಲ್ಲ! ನಾವು ಪತ್ರಿಕೆ ಮಾಡುವುದು ಏತಕ್ಕಾಗಿ? ಕೂಲಿಕಾರರನ್ನೂ ಕಮ್ಯೂನಿಸ್ಟರನ್ನೂ ಮಟ್ಟ ಹಾಕಲು ಸೆಟ್ಟರಿಗೆ ಪತ್ರಿಕೆ ಬೇಕು. ಹನುಮಣ್ಣನಂಥ ವಿರೋಧಿಗಳನ್ನು ಮಟ್ಟ ಹಾಕಲು ತಮ್ಮಣ್ಣನವರಿಗೆ ಪತ್ರಿಕೆ ಬೇಕು...''

''ನಮಗೆ ತುಂಬ ಅನುಕೂಲವೇ ಆಯಿತಲ್ಲ! ಇವರನ್ನೆಲ್ಲ Exploit ಮಾಡಿ ಮಜಾ ಮಾಡಬಹುದು!'' ಎಂದ ಶಿವಯೋಗಿ.

''ಅಂಥ ದುರ್ವಿದ್ಯೆಯನ್ನು ನಾನು ಕಲಿತಿಲ್ಲ ಶಿವಯೋಗಿ!'' ಎಂದು ಗಂಭೀರ ಸ್ವರದಲ್ಲಿ ನುಡಿದ ಚಂದ್ರಣ್ಣ.

''ಸುಖವಾಗಿ ಬದುಕಬೇಕೆಂದಿದ್ದರೆ ಎಲ್ಲವನ್ನೂ ಕಲಿತುಕೊಳ್ಳಬೇಕು. ನಿಮ್ಮ ಆ ಆದರ್ಶವಾದದಿಂದ ಏನೂ ಉಪಯೋಗವಿಲ್ಲ. ಇದು ವ್ಯವಹಾರೀ ನಗರವೆಂಬುದನ್ನು ಮರೆಯಬೇಡಿ. ಇಲ್ಲಿ ಎಲ್ಲರೂ ತಮ್ಮ ಬೇಳೆ ಹೇಗೆ ಬೇಯಬಹುದೆಂಬುದನ್ನು ಮಾತ್ರ ಯೋಚಿಸುವವರು. ಇಂಥ ಸ್ವಾರ್ಥಿಗಳ ಹತ್ತಿರ ವ್ಯವಹರಿಸುವಾಗ ನಾವೂ ಸ್ವಾರ್ಥಿಗಳಾಗಿಯೆ ಇರಬೇಕಾಗುವುದು. ಇಲ್ಲವಾದರೆ ಈ ಊರಲ್ಲಿ ನೀವು ಬದುಕುವುದೇ ಕಷ್ಟ-''

ಶಿವಯೋಗಿಯ ಆ ವಿಲಕ್ಷಣ ತತ್ವಜ್ಞಾನವನ್ನು ಕಂಡು ಚಂದ್ರಣ್ಣನಿಗೆ

ವಿಸ್ಮಯವೂ ಆಯಿತು, ವಿಷಾದವೂ ಉಂಟಾಯಿತು. ಶಿವಯೋಗಿ ಇಂಥ ವಿಚಾರ ಸರಣಿಯವನಾಗಿರಬಹುದೆಂಬುದು ಬೆಂಗಳೂರಿನಲ್ಲಿಯೇ ತಿಳಿದಿದ್ದರೆ! ಇಂಥವನ ಜೊತೆಗೆ ಸೇರಿಕೊಂಡು ಕಂಪನಿ ಮಾಡುವ ವಿಚಾರಕ್ಕೇ ಬರುತ್ತಿರಲಿಲ್ಲ. ಆದರೆ... ಮಾತು ಮಿಂಚಿ ಹೋಗಿತ್ತು. ಪುಸ್ತಕಗಳನ್ನು ಕೊಟ್ಟು ಪತ್ರಿಕೆಯನ್ನು ಕಟ್ಟಿಕೊಂಡು ಬೆಂಗಳೂರನ್ನು ತ್ಯಜಿಸಿ ಧರ್ಮಪುರದ ಕಡಲಿಗೆ ಅಡಿಯಿರಿಸಿದ್ದ. ಈಗ ಹಿಂದೆ ಹೊರಳುವುದು ಸಾಧ್ಯವಿರಲಿಲ್ಲ. ನೀರಿನಲ್ಲಿ ಮುಳುಗಿದುದಾಗಿತ್ತು; ಅಲ್ಲಿಯೆ ಬದುಕಬೇಕಾಗಿತ್ತು.

''ಪ್ರಪಂಚದ ಅನುಭವ ನಿಮಗೆ ಕಡಿಮೆ ಚಂದ್ರಣ್ಣ. ಇಲ್ಲಿನ ಜನವೆಲ್ಲ ಮೀನುಗಳ ಹಾಗೆ. ಸಣ್ಣ ಮೀನನ್ನು ತಿಂದು ದೊಡ್ಡ ಮೀನು ಬದುಕುತ್ತದೆ. ಅದಕ್ಕಿಂತ ದೊಡ್ಡ ಮೀನು ಈ ಮೀನನ್ನು ತಿನ್ನುತ್ತದೆ. ಹೀಗೇ... ಇದು ವ್ಯವಹಾರೀ ಜಗತ್ತು... ಇದು ಪ್ರಪಂಚ!'' ಎಂದು ನುಡಿದು ಶಿವಯೋಗಿ ಗಟ್ಟಿಯಾಗಿ ನಗತೊಡಗಿದ.

ಚಂದ್ರಣ್ಣನಿಗೆ ನಗು ಬರುವುದು ಸಾಧ್ಯವಿರಲಿಲ್ಲ. ಆತ ಆಳವಾದ ಯೋಚನೆಯಲ್ಲಿ ಮುಳುಗಿಹೋಗಿದ್ದ.

## ೧೧

''ಇಂದು ಸಾಯಂಕಾಲ ಐದು ಗಂಟೆಗೆ ಸೆಟ್ಟರು ಬರಹೇಳಿದ್ದಾರೆ.''

ಶಿವಯೋಗಿಯ ಆ ಮಾತು ಚಂದ್ರಣ್ಣನನ್ನು ಎಚ್ಚರಗೊಳಿಸಿತು. ಆತ ಕಣ್ಣುಗಳನ್ನು ಪೂರ್ಣವಾಗಿ ತೆರೆದು ಹಾಸುಗೆಯ ಮೇಲೆದ್ದು ಕುಳಿತ. ಮೇಜಿನ ಮೇಲಿದ್ದ ಗಡಿಯಾರದಲ್ಲಿ ಮೂರು ಗಂಟೆಯಾಗಿದ್ದುದು ಕಾಣಿಸಿತು.

''ಎರಡು ತಾಸು ಮಲಗಿಕೊಂಡಂತಾಯಿತಲ್ಲ! ಹಗಲಿನಲ್ಲಿ ಇಷ್ಟು ಹೊತ್ತು ಎಂದೂ ಮಲಗಿದವನಲ್ಲ ನಾನು. ನಿನ್ನೆ ರಾತ್ರಿ ನಿದ್ರೆಯೇ ಬರಲಿಲ್ಲ. ಅದರ ಪರಿಣಾಮವಿರಬೇಕು ಇದು,'' ಎನ್ನುತ್ತ ಚಂದ್ರಣ್ಣ ಮೇಲಕ್ಕೆದ್ದ.

ಶಿವಯೋಗಿ ಕುರ್ಚಿಯ ಮೇಲೆ ಕುಳಿತುಕೊಳ್ಳುತ್ತ – ''ಬೆಳಿಗ್ಗೆ ಸದಾಶಿವಪ್ಪ

ನವರು ಸಿಕ್ಕಿದರು. ಸಂಜೆ ನಿಮ್ಮನ್ನು ಕರೆದುತರಲು ಹೇಳಿದ್ದಾರೆ. ಸೆಟ್ಟರು ನಿಮ್ಮನ್ನು ಕಾಣಲು ಆತುರರಾಗಿರುವರಂತೆ,'' ಎಂದ.

''ಈ ಶ್ರೀಮಂತರನ್ನು ಕಾಣುವುದೆಂದರೆ ನನಗೆ ಏನೋ ದಿಗಿಲು. ಆಸಕ್ತಿ ಯೆನ್ನುವುದೇ ಇರುವುದಿಲ್ಲ'' ಎಂದ ಚಂದ್ರಣ್ಣ.

''ಅದೊಂದು ತರದ Inferiority Complex ಚಂದ್ರಣ್ಣ, ಆ ದೋಷ ವನ್ನು ನೀವು ಎಷ್ಟು ಬೇಗ ಹೋಗಲಾಡಿಸಿಕೊಂಡಷ್ಟೂ ಉತ್ತಮ. ಈಗ ನೀವು ಕೇವಲ ಒಂದು ಮಾಸಪತ್ರಿಕೆಯ ಸಂಪಾದಕರಲ್ಲ–ಲಿಮಿಟೆಡ್ ಕಂಪನಿಯೊಂದರ ಮ್ಯಾನೇಜಿಂಗ್ ಡೈರೆಕ್ಟರರು ಎನ್ನುವುದನ್ನು ಲಕ್ಷ್ಯದಲ್ಲಿಟ್ಟುಕೊಳ್ಳಬೇಕು. ಈ ಸ್ಥಾನಕ್ಕೆ ತಕ್ಕ ಹಾಗೆ ವರ್ತಿಸಬೇಕು. ನಾನು ಹೀಗೆ ಹೇಳುವುದಕ್ಕಾಗಿ ದಯವಿಟ್ಟು ತಪ್ಪು ತಿಳಿದುಕೊಳ್ಳಬೇಡಿ. ನಿಮ್ಮ ಡ್ರೆಸ್ ಸಹ ಬದಲಾಗಬೇಕು. ಈ ಪಾಯಿಜಾಮ ನಿಮಗೆ ಶೋಭಿಸುವು ದಿಲ್ಲ, ಧೋತರವನ್ನಾದರೂ ಉಟ್ಟುಕೊಳ್ಳಿ–ಇಲ್ಲ –ಜುಬ್ಬವನ್ನು ಬಿಟ್ಟುಬಿಟ್ಟು ಸೂಟನ್ನಾದರೂ ಹಾಕಿ. ಅಂತೂ ಟ್ರಿಮ್ಮಾಗಿ ಡ್ರೆಸ್ ಮಾಡಿ ಅಪ್–ಟು–ಡೇಟ್ ಆಗಿರಬೇಕು. ಅಂದರೇನೇ ಇಂಪ್ರೆಶನ್ ಬೀಳುತ್ತೆ. ಈ ಸಡಿಲು ಜುಬ್ಬಾ ಈ ದೊಗಲೆ ಪಾಯಿಜಾಮಾ ಹಾಕಿಕೊಂಡು ಹೊರಟರೆ ಕಾಲೇಜು ವಿದ್ಯಾರ್ಥಿ ಕಂಡ ಹಾಗೆ ಕಾಣುತ್ತೀರಿ ನೀವು!'' ಎಂದು ನಕ್ಕ ಶಿವಯೋಗಿ.

''ಏನೋ! ಮೊದಲಿನಿಂದಲೂ ನನ್ನದು ಸಾದಾ ಜೀವನ. ಸೂಟ್‌ಗೀಟ್ ನನಗೆ ಹಿಡಿಸುವುದಿಲ್ಲ.''

''ನಮಗೆ ಹಿಡಿಸುವುದನ್ನೇ ನಡೆಸಹೊರಟರೆ ಈ ಪ್ರಪಂಚದಲ್ಲಿ ನಮ್ಮನ್ನಾರೂ ಮಾತನಾಡಿಸಲಿಕ್ಕಿಲ್ಲ ಚಂದ್ರಣ್ಣ, ವ್ಯವಹಾರದಲ್ಲಿ ಬಂದ ಮೇಲೆ ನಮ್ಮ ತತ್ವಗಳನ್ನು ಕೊಂಚವಾದರೂ ತ್ಯಜಿಸಬೇಕಾಗುತ್ತದೆ. ಬೇರೆ ಉಪಾಯವೇ ಇರುವುದಿಲ್ಲ. ಈಗ ನೋಡಿ, ನಾವು ಸಂಗಪ್ಪ ಶೆಟ್ಟರನ್ನು ಕಾಣಲು ಹೋಗಬೇಕಾಗಿದೆ. ಅವರು ಲಕ್ಷಾಧೀಶರು. ಯಾವಾಗಲೂ ಸಿಲ್ಕು ಬಟ್ಟೆಗಳಲ್ಲೇ ದಿನಗಳೆಯುವವರು. ಈಚೆಗೆ ಅವರು ಕಾಂಗ್ರೆಸ್ಸಿಗೆ ಸೇರಿಕೊಂಡಿರುವುದೇನೋ ನಿಜವಾದರೂ ಶ್ರೀಮಂತರ ಮನೋವೃತ್ತಿಯೇನೂ ಮಾಯವಾಗಿರುವುದಿಲ್ಲ. ಅಂಥವರ ಮೇಲೆ ಇಂಪ್ರೆಷನ್ ಹೊಡೆಯಬೇಕಾದರೆ ಜಬರ್ಾಗಿ ಡ್ರೆಸ್ ಮಾಡಿರಬೇಕಾದ್ದೂ ಅಗತ್ಯ. ಜೇಬಿನಲ್ಲಿ ಒಂದು ಕಾಸಿರದಿದ್ದರೂ ಚಿಂತೆಯಿಲ್ಲ, ಜೋರಾಗಿ ಡ್ರೆಸ್ ಮಾಡಿದರೆ ಸಾಕು. ನಮ್ಮ ಹತ್ತಿರ ಹಣವಿಲ್ಲ ವೆನ್ನುವುದನ್ನು ಅವರ ಹತ್ತಿರ ಹೇಳಬಾರದು, ಈ ವಿಷಯವೇ ಅವರಿಗೆ ಗೊತ್ತಾಗದಂತಿರ

ಬೇಕು. ಸೂಟು ಹಾಕಿದರೆ ಪಕ್ಕಾ ಸಾಹೇಬರಂತೆ ಕಾಣಿಸಬೇಕು. ಖಾದೀ ಹಾಕಿದರೆ ಥೇಟ್ ಜವಾಹರಲಾಲ ನೆಹರೂ ಕಂಡ ಹಾಗೆ ಕಾಣಬೇಕು. ಅಂಥ ರೀತಿಯಿಂದ ಡ್ರೆಸ್ ಮಾಡಬೇಕು. ಅದಕ್ಕೆ ಸರಿಯಾಗಿ ಬಿಂಕದ ನಡಿಗೆ, ರೀತಿಯ ಮಾತುಕತೆ, ಸದಾ ಮುಗುಳುನಗೆ ಬೇಕು. ಶ್ರೀಮಂತರನ್ನು ಬುಟ್ಟಿಗೆ ಬೀಳಿಸುವ ಕಲೆಯನ್ನೂ ತಿಳಿದಿರಬೇಕು. ಒಮ್ಮೆ ನೀವು ಅದರ ಮೇಲೆ ಪ್ರಭಾವ ಕೆಡವಿದಿರೋ, ಗೆದ್ದಿರಿ! ಆಮೇಲೆ ಅವರ ಮೂಗಿಗೆ ದಾರ ಕಟ್ಟಿ ಕುಣಿಸಬಹುದು!''

''ಅದೆಲ್ಲ ನನಗೆ ಸೇರುವುದಿಲ್ಲ ಶಿವಯೋಗಿ.''

''ಮತ್ತೆ ಅದೇ ಮಾತೇ! ನಿಮಗೆ ಇಂಥದೆಲ್ಲ ಹಿಡಿಸುವುದಿಲ್ಲ, ನೀವು ಬಹಳ ಆದರ್ಶವಾದಿಗಳು, ಧ್ಯೇಯವಾದಿಗಳು ಎಲ್ಲವೂ ನಿಜ. ಆ ಬಗ್ಗೆ ನನಗೆ ಮೆಚ್ಚುಗೆಯೂ ಇದೆ. ಆದರೆ–ಕಂಪನಿ ಅಂದರೆ ಒಂದು ವ್ಯವಹಾರ. ಮ್ಯಾನೇಜಿಂಗ್ ಡೈರೆಕ್ಟರಾಗಿರುವ ವರಿಗೆ ನಾಲ್ಕು ಜನರನ್ನು ಉಪಾಯವಾಗಿ ಒಲಿಸಿಕೊಳ್ಳುವ ಕಲೆ ಗೊತ್ತಿರಬೇಕಾದ್ದು ಅತ್ಯಗತ್ಯ. ಇಲ್ಲವಾದರೆ ಕಂಪನಿಯ ಪ್ರಗತಿ ಅಸಾಧ್ಯ. ನಮ್ಮ ಸ್ನೇಹಿತ ತುಂಗಭದ್ರಯ್ಯ ನವರಿದಾರಲ್ಲ – ಅವರಿಗೂ ಹೆಚ್ಚು ವಯಸ್ಸೇನೂ ಆಗಿಲ್ಲ, ಈಗಾಗಲೇ ನಲವತ್ತು ಐವತ್ತು ಸಾವಿರ ರೂಪಾಯಿ ನಗದು ಹಣ ಮಾಡಿಕೊಂಡಿದ್ದಾರೆ. ಒಂದೆರಡು ವರ್ಷ ಗಳ ಕೆಳಗೆ ಇದೇ ತುಂಗಭದ್ರಯ್ಯನವರ ಹತ್ತಿರ ಕಾಫಿ ಕುಡಿಯಲು ಕಾಸಿರುತ್ತಿರಲಿಲ್ಲ. ಈ ಮಾತು ಕೇಳಿ ನಿಮಗೆ ಆಶ್ಚರ್ಯವಾಗಬಹುದು. ಆದರೆ ಇದರಲ್ಲಿ ಸುಳ್ಳೇನೂ ಇಲ್ಲ. ತುಂಗಭದ್ರಯ್ಯನವರನ್ನು ಒಮ್ಮೆ ನೀವು ಕಂಡರೆ ಸಾಕು – ಬೆರಗಾಗಿ ಹೋಗುವಿರಿ. ಹಾಗಿದೆ ಆಸಾಮಿ!''

ನಿಜವಾಗಿಯೂ ತುಂಗಭದ್ರಯ್ಯ ನೋಡುವ ಹಾಗೇ ಇದ್ದ. ವ್ಯಕ್ತಿಯ ಆಕೃತಿಯಲ್ಲೇನೂ ಅಂಥ ಆಕರ್ಷಣೆಯಿರಲಿಲ್ಲ. ಮಧ್ಯಮ ನಿಲುವು. ಕಪ್ಪು ಬಣ್ಣ. ಮುಖದ ಮೇಲೆ ಸಿಡುಬಿನ ಕಲೆ. ಇಪ್ಪತ್ತೇಳು ಇಪ್ಪತ್ತೆಂಟು ವರ್ಷ ವಯಸ್ಸಿಗಾಗಲೇ ತಲೆಗೂದಲು ನರೆಯತೊಡಗಿದ್ದುವು. ಸೆಟ್ಟರನ್ನು ಕಾಣಲು ಚಂದ್ರಣ್ಣ ಶಿವಯೋಗಿ ಯೊಂದಿಗೆ ಹೊರಟಾಗ ದಾರಿಯಲ್ಲಿ ಬೈಸಿಕಲ್ ಮೇಲೆ ಬರುತ್ತಿದ್ದ ತುಂಗಭದ್ರಯ್ಯ ಅವರನ್ನು ಕಂಡೊಡನೆ ಕುದುರೆಯಿಂದಿಳಿಯುವ ರೀತಿಯಲ್ಲಿ ಬೈಸಿಕಲ್ಲಿನಿಂದಿಳಿದು ಅದನ್ನು ಎಡಗೈಯಲ್ಲಿ ಹಿಡಿದುಕೊಂಡು, ಮುಖದ ಮೇಲೆ ಆನಂದವನ್ನು ತುಳುಕಿಸುತ್ತ ಮೋಹಕವಾಗಿ ನಗುಬೀರುತ್ತ, ಅಚ್ಚ ಐರೋಪ್ಯರನ್ನೂ ನಾಚಿಸುವ ಬೆಡಗಿನಿಂದ ಶಿವಯೋಗಿಯ ಹಸ್ತಾಂದೋಲನ ಮಾಡಿ, ಚಂದ್ರಣ್ಣನ ಕಡೆಗೆ ದೃಷ್ಟಿ ಹೊರಳಿಸಿ,

ಆತನನ್ನು ಕಂಡು ಅತ್ಯಾನಂದವಾದ ಹಾಗೆ ಮುಖವನ್ನರಳಿಸಿ ನಕ್ಕ. ಆತ ನಕ್ಕಾಗ ಆತನ ಮುಖವೆಲ್ಲವೂ ನಗುತ್ತಿತ್ತು. ದೇಹವೆಲ್ಲವೂ ಆ ನಗೆಗೆ ತಕ್ಕ ಹಾಗೆ ತೀರ ಸೂಕ್ಷ್ಮವಾಗಿ ನಕ್ಕಂತೆ ಭಾಸವಾಗುತ್ತಿತ್ತು. ಆತನನ್ನು ಕಂಡೊಡನೆ ಹಾಲಿವುಡ್ ಚಿತ್ರವೊಂದರಲ್ಲಿನ ನಾಯಕನನ್ನು ಕಂಡಂತೆ ಭಾಸವಾಯಿತು ಚಂದ್ರಣ್ಣನಿಗೆ. ಲೋಕಪ್ರಿಯ ನಟರ ವ್ಯಕ್ತಿ ವೈಶಿಷ್ಟ್ಯಗಳನ್ನೆಲ್ಲ ಆತ ಸೂಕ್ಷ್ಮವಾಗಿ ಅಭ್ಯಸಿಸಿ ಅವುಗಳನ್ನು ತೀರ ಸಹಜವಾಗಿ ಮೈಗೂಡಿಸಿಕೊಂಡ ಹಾಗಿದ್ದಿತು.

ಶಿವಯೋಗಿ ಚಂದ್ರಣ್ಣನ ಪರಿಚಯ ಮಾಡಿಕೊಟ್ಟ ಕೂಡಲೆ ತುಂಗಭದ್ರಯ್ಯ 'ಹೌಡುಯುಡು' ಎಂದು ಇಂಗ್ಲೀಷಿನಲ್ಲಿ ಪ್ರಾರಂಭಿಸಿದವ ಐದು ನಿಮಿಷಗಳ ಕಾಲ ಒಂದೆ ಸಮನೆ ಮಾತನಾಡುತ್ತಿದ್ದ. ''ನಿಮ್ಮನ್ನು ಕಂಡು ನನಗೆ ಅತ್ಯಾನಂದವಾಯಿತು. ನಿಮ್ಮ ವಿಷಯವನ್ನೆಲ್ಲ ನಾನು ಮೊದಲೇ ಕೇಳಿದ್ದೇನೆ. ನಿಮ್ಮನ್ನು ಎಂದಾದರೂ ಕಾಣುವೆನೊ ಎಂದು ಹಾರೈಸುತ್ತಿದ್ದೆ. ಕೊನೆಗೂ ಕಂಡೆನಲ್ಲಾ–ಅದು ನನ್ನ ಭಾಗ್ಯ. ನೀವು ಈ ಊರಿಗೆ ಬಂದದ್ದು ಈ ಊರವರ ಪುಣ್ಯ. ಇಲ್ಲಿ ಸಾಹಿತಿಗಳು, ಸುಸಂಸ್ಕೃತರು ತೀರ ವಿರಳ. ನೀವು ಬಂದುದರಿಂದ ಆ ಕೊರತೆ ತುಂಬಿ ಬಂದಂತಾಯಿತು. ದಯವಿಟ್ಟು ಬಿಡುವಿದ್ದಾಗ ನಮ್ಮ ಆಫೀಸಿಗೆ ಬಂದು ನಮ್ಮ ಅಲ್ಪ ಸತ್ಕಾರವನ್ನು ಸ್ವೀಕರಿಸಬೇಕು. ನಮ್ಮ ಮನೆಗೂ ಒಂದು ದಿನ ದಯಮಾಡಿಸಬೇಕು,'' ಇತ್ಯಾದಿ ಇತ್ಯಾದಿ.

ಆತನನ್ನು ಬೀಳ್ಕೊಂಡು ಗೆಳೆಯರಿಬ್ಬರೂ ಸೆಟ್ಟರ ಮನೆಯ ಕಡೆಗೆ ಹೊರಟರು. ಗಿರಣಿಗೆ ಹೋಗುವ ದಾರಿಗೆ ಹೊಂದಿಕೊಂಡು ಸಂಗಪ್ಪ ಸೆಟ್ಟರ ಮನೆ. ಅದನ್ನು 'ಮನೆ' ಎಂದು ಕರೆಯುವುದಕ್ಕಿಂತ 'ಅರಮನೆ' ಎಂದು ಕರೆಯುವುದೇ ಉಚಿತವಾದೀತು. ಅರಮನೆಗೆ ಯಾವ ದೃಷ್ಟಿಯಲ್ಲಿಯೂ ಕಡಿಮೆಯದಾಗಿರಲಿಲ್ಲ ಅದು. ಮಹಾ ದ್ವಾರವೇ ತುಂಬಾ ವಿಶಾಲವಾದುದು. ಯಾವಾಗಲೂ ಇಬ್ಬರು ಗೂರ್ಖಾ ಸಿಪಾಯಿಗಳು ಅಲ್ಲಿ ಕಾವಲು ನಡೆಸುತ್ತಿರುವರು. ಒಳಗಡೆ ಪ್ರವೇಶಿಸಿದೊಡನೆಯೆ ಬಲಗಡೆಗೆ ಶಿವಾಲಯವೊಂದು ಕಾಣಿಸುವುದು. ಸೆಟ್ಟರ ಮನೆಯ ಆವಾರದಲ್ಲಿ ಅವರ ಪರಿವಾರಕ್ಕಾಗಿಯೆ ಕಟ್ಟಿಸಲ್ಪಟ್ಟ ಸುಂದರವಾದ ದೇವಾಲಯ ಅದು. ಅದರ ಬಹುಭಾಗ ಸಂಗಮದವರಿ ಶಿಲೆಗಳಿಂದ ನಿರ್ಮಿತವಾಗಿದ್ದು ಗೋಪುರದ ಮೇಲೆ ಚಿನ್ನದ ತಗಡನ್ನು ಹೊದ್ದಿಸಿದ ಕಲಶ ಕಂಗೊಳಿಸುವುದು. ಅಮೃತ ಶಿಲೆಗಳನ್ನು ಹಾಸಿ ತಯಾರಿಸಿದ ನೆಲ. ಒಳಗಡೆ ಹಜಾರದಲ್ಲಿ ಬಿಳಿಯ ಕಲ್ಲಿನಲ್ಲಿ ಕೆತ್ತಿದ ವೃಷಭಮೂರ್ತಿ. ಅದರೆದುರಿಗೆ ಗರ್ಭ ಗುಡಿಯಲ್ಲಿ ಹಾಲುಗಲ್ಲಿನಲ್ಲಿ ಸಿದ್ಧಗೊಳಿಸಿದ ಶಿವಲಿಂಗ. ದಿನವೂ ಎರಡು ಸಲ, ಬೆಳಿಗ್ಗೆ ಮತ್ತು ಸಾಯಂಕಾಲ ಮೂರ್ತಿಗೆ ಹಾಲಿನ ಅಭಿಷೇಕವಾಗುವುದು. ಮೃಷ್ಟಾನ್ನದ

ನೈವೇದ್ಯವಾಗುವುದು. ಪೂಜೆ-ಪುನಸ್ಕಾರಗಳನ್ನು ನೋಡಿಕೊಳ್ಳಲು ಒಬ್ಬ ಪೂಜಾರಿಯೂ ನಿಯಮಿಸಲ್ಪಟ್ಟಿದ್ದಾನೆ. ಇಪ್ಪತ್ನಾಲ್ಕು ಗಂಟೆಗಳ ಕಾಲವೂ ಅಲ್ಲಿ ನಂದಾದೀಪ ಎಡೆಬಿಡದೆ ಉರಿಯುತ್ತಿರುತ್ತದೆ. ಅದರೊಂದಿಗೆ ಬಣ್ಣ ಬಣ್ಣದ ವಿದ್ಯುದ್ದೀಪಗಳ ಝಗಝಗಾಟ.

ದೇವಾಲಯವನ್ನು ದಾಟಿ ಮುಂದೆ ಹೋದರೆ ಸುಂದರವಾದ ಹೂದೋಟ ಕಣ್ಣಿಗೆ ಬೀಳುವುದು. ವರ್ಷದ ಹನ್ನೆರಡು ತಿಂಗಳುಗಳ ಕಾಲವೂ ಅಲ್ಲಿ ಬಗೆಬಗೆಯ ಹೂಗಳು ಅರಳಿ ತಂಪು ಬೀರುತ್ತಿರುವುವು. ಆ ಹೂದೋಟಕ್ಕೆ ಹೊಂದಿಕೊಂಡು ಗಿರಣಿಯ ಕಚೇರಿಯ ಕಟ್ಟಡವಿದೆ – ಒಳಗಡೆ ನೂರಾರು ಜನ ಕೊಂಚವೂ ಸದ್ದಾಗ ದಂತೆ ಕೆಲಸ ಮಾಡುತ್ತಿರುತ್ತಾರೆ. ಟೈಪ್‌ರೈಟರುಗಳ ಕಡಕಡಾಟದ ಸಪ್ಪಳವನ್ನುಳಿದು ಇನ್ನಾವ ಸದ್ದೂ ಅಲ್ಲಿ ಕೇಳಿಸಲಾರದು. ಎಲ್ಲರೂ ತೀರ ಪಿಸುದನಿಯಲ್ಲಿ ಮಾತನಾಡಿ ಕೊಳ್ಳುತ್ತಾರೆ. ಕಟ್ಟಡದ ಒಂದು ಭಾಗದಲ್ಲಿ ಸದಾಶಿವಪ್ಪನ ಕೊಠಡಿ. ಅಲ್ಲಿ ಕುಳಿತು ಕೊಂಡು ಆತ ಗಿರಣಿಗೆ ಸಂಬಂಧಪಟ್ಟ ಎಲ್ಲ ಕಾರ್ಯಕಲಾಪಗಳ ಮೇಲ್ವಿಚಾರಣೆ ಮಾಡುತ್ತಿರುತ್ತಾನೆ.

ಈ ಕಟ್ಟಡದಿಂದ ಇಪ್ಪತ್ತು ಅಡಿ ಮುಂದೆ ಹೋದರೆ ಸೆಟ್ಟರ ಸಂಸಾರದ ಮನೆ ಸಿಗುತ್ತದೆ. ಕಟ್ಟಡವೆಲ್ಲ ಕಲ್ಲಿನಲ್ಲಿಯೆ ನಿರ್ಮಿಸಲ್ಪಟ್ಟಿದ್ದು ಮೂರು ಅಂತಸ್ತುಗಳನ್ನೊಳ ಗೊಂಡು ತುಂಬಾ ವಿಶಾಲವಾಗಿದೆ. ಮೂವತ್ತು ಕೊಠಡಿಗಳಾದರೂ ಇರಬಹುದು. ಕೆಳಭಾಗದಲ್ಲಿ ಅಡುಗೆಯ ಮನೆ, ಪೂಜಾಗೃಹ, ಸ್ನಾನದ ಮನೆ, ಸಂಗ್ರಹಾಲಯ ಗಳಿವೆ. ಮೊದಲನೆಯ ಅಂತಸ್ತಿನಲ್ಲಿ ಸಂಗಪ್ಪ ಶೆಟ್ಟರು, ಅವರ ಧರ್ಮಪತ್ನಿ ಶಿವನಾಗಮ್ಮ ನವರ ಕೊಠಡಿಗಳು. ನಡುವೆ ಇರುವ ಒಂದು ದೊಡ್ಡ ಪಡಸಾಲೆಯನ್ನು ಅತಿಥಿಗೃಹ ವಾಗಿ ಉಪಯೋಗಿಸಲಾಗುತ್ತದೆ. ಸ್ವಾಮಿಗಳೊ, ಜಗದ್ಗುರುಗಳೊ ಬಂದಾಗ ಅವರು ಅಲ್ಲಿಯೆ ಉಳಿದುಕೊಳ್ಳುತ್ತಾರೆ. ಎರಡನೆಯ ಅಂತಸ್ತಿನಲ್ಲಿ ಸೆಟ್ಟರ ಏಕಮಾತ್ರ ಕುಮಾರಿ ಶಾರದಾಮಣಿ ರಾಜಕುಮಾರಿಯವರನ್ನು ಮೀರಿಸುವ ವೈಭವದಲ್ಲಿ ನೆಲೆಸಿದ್ದಾಳೆ. ಮೂರನೆಯ ಅಂತಸ್ತು ಸದಾಶಿವಪ್ಪನಿಗೆ ಸೇರಿದ್ದು. ಆತ, ಆತನ ಪತ್ನಿ ಇಬ್ಬರನ್ನುಳಿದರೆ ಬೇರೆ ಯಾರಿಗೂ ಅಲ್ಲಿ ಪ್ರವೇಶವಿಲ್ಲ.

ಶೆಟ್ಟರೂ ಅವರ ಇಬ್ಬರು ಮಕ್ಕಳೂ ಚಂದ್ರಣ್ಣನ ಆಗಮನವನ್ನೇ ನಿರೀಕ್ಷಿಸುತ್ತಿದ್ದ ಹಾಗಿದ್ದಿತು. ತನ್ನ ಕೊಠಡಿಯಲ್ಲಿ ಕುಳಿತುಕೊಂಡು ಕಾಗದ ಪತ್ರಗಳನ್ನು ನೋಡುವುದರಲ್ಲಿ ತೊಡಗಿದ್ದ ಸದಾಶಿವಪ್ಪ ಒಡನೆಯೆ ಆ ಕೆಲಸ ಬಿಟ್ಟು ಹೊರಗಡೆ ಬಂದು ವಿನಯದಿಂದ ಅವರನ್ನು ಸ್ವಾಗತಿಸಿ ಮನೆಗೆ ಕರೆದು ತಂದ. ಮೊದಲನೆಯ

ಅಂತಸ್ತಿನ ಮೆಟ್ಟಿಲುಗಳನ್ನೇರಿ ಅವರು ಮೇಲೆ ಹೋಗುತ್ತಿದ್ದ ಹಾಗೆ ಮೆಟ್ಟಲುಗಳ ತುದಿಯಲ್ಲಿ ನಿಂತುಕೊಂಡಿದ್ದ ಸೆಟ್ಟರು ಕೈಜೋಡಿಸಿ ನಮಸ್ಕಾರ ಮಾಡಿ ''ಬನ್ನಿ'' ಎಂದರು. ಅಂಥ ಭಾರಿ ಸಾಹುಕಾರರು ಅಷ್ಟೊಂದು ವಿನಯದಿಂದ ತಮ್ಮನ್ನು ಸ್ವಾಗತಿಸುವುದನ್ನು ಕಂಡಾಗ ಚಂದ್ರಣ್ಣನಿಗೆ ವಿಸ್ಮಯವಾಗದಿರಲಿಲ್ಲ. ಶ್ರೀಮಂತರಲ್ಲಿ ಅಂಥ ವಿನಯವನ್ನು ಕಾಣುವುದು ಆತನ ಅನುಭವದಲ್ಲಿ ಅದೇ ಮೊದಲು.

ತಮ್ಮ ಕೂಡ್ರುವ ಕೊಠಡಿಗೆ ಎಲ್ಲವನ್ನೂ ಕರೆತಂದರು ಸೆಟ್ಟರು. ಆ ಕೊಠಡಿಯ ಬಾಗಿಲಲ್ಲಿ ನೇತಾಡುತ್ತಿದ್ದ ತೆಳ್ಳಗಿನ ಪರದೆಯನ್ನು ಓರೆ ಮಾಡಿ ಚಂದ್ರಣ್ಣ ಒಳಗಡೆ ಅಡಿಯಿರಿಸಿದಾಗ ಹಂಸತುಪ್ಪಳದ ಹಾಸುಗೆಯ ಮೇಲೆ ನಡೆಯುತ್ತಿರುವ ಹಾಗೆ ಭಾಸವಾಯಿತು. ಕೊಠಡಿಯ ನೆಲ ಕೊಂಚವೂ ದೃಷ್ಟಿಗೆ ಬೀಳದಂತೆ ಎಲ್ಲ ಕಡೆಗೂ ಮಿದುವಾದ ರತ್ನಕಂಬಳಿಗಳನ್ನು ಹಾಸಲಾಗಿದ್ದಿತು. ಅದರ ಮೇಲೆ ಗೋಡೆಗಳ ಗುಂಟ ಬೆಲೆಬಾಳುವ ಸೋಫಾಗಳು. ಉತ್ತರಕ್ಕಿದ್ದ ಕಿಟಕಿಗಳಿಂದ ಗಾಳಿ ಬೆಳಕು ವಿಪುಲವಾಗಿ ಬರುತ್ತಿದ್ದಿತು. ಆ ಬೆಳಕಿನಲ್ಲಿ ಕೊಠಡಿಯೆಲ್ಲವೂ ಅದ್ಭುತ ವೈಭವದಿಂದ ಎದ್ದು ಕಾಣುತ್ತಿತ್ತು. ಗೋಡೆಗಳ ಮೇಲೆ ಅಲ್ಲಲ್ಲಿ ಅಮೂಲ್ಯ ಕಲಾಕೃತಿಗಳ ಪಟಗಳು ಕಂಡು ಬರುತ್ತಿದ್ದುವು. ಬಾಗಿಲಿಗೆ ಎದುರಾಗಿ ಕಿಟಕಿಯ ಮೇಲೆ ಗಾಂಧೀಜಿ ಮತ್ತು ನೆಹರೂ ರವರ ಎರಡು ದೊಡ್ಡ ಪಟಗಳೂ ಇದ್ದುವು. ಆ ಪಟಗಳ ಸುತ್ತು ಮುತ್ತ ಏಲಕ್ಕಿಯ ಹಾರ ನೇತಾಡುತ್ತಿದ್ದುವು.

ಇಷ್ಟೊಂದು ವಿಜೃಂಭಣೆಯಿಂದ ಸಜ್ಜುಗೊಳಿಸಲ್ಪಟ್ಟ ಕೊಠಡಿಯನ್ನು ಚಂದ್ರಣ್ಣ ಈ ಮೊದಲೆಂದೂ ಕಂಡಿರಲಿಲ್ಲ. ರತ್ನಗಂಬಳಿಯ ಮೇಲೆ ಆತ ಅಡಿಯಿಟ್ಟುದು, ಸೋಫಾದ ಮೇಲೆ ಕುಳಿತುಕೊಂಡುದು – ಅದೇ ಮೊದಲು ಆತನ ಜೀವನದಲ್ಲಿ. ಕನಸಿನ ಲೋಕದಲ್ಲಿ ಅಲೆಯುತ್ತಿರುವವರ ಹಾಗೆ ಆತ ದಿಙ್ಮೂಢನಾಗಿದ್ದ; ದಿಗಿಲು ಗೊಂಡಿದ್ದ. ಶಿವಯೋಗಿಗೆ ಮಾತ್ರ ಅದಾವುದೂ ಹೊಸದಾಗಿದ್ದಂತೆ ತೋರುತ್ತಿರಲಿಲ್ಲ. ದಿನವೂ ಅಂಥ ವಾತಾವರಣದಲ್ಲಿಯೆ ಕಾಲ ಕಳೆಯುವವರಷ್ಟು ಸ್ವಾಭಾವಿಕವಾದ ರೀತಿಯಲ್ಲಿ ಕೊಠಡಿಯೊಳಕ್ಕೆ ನಡೆದು ಬಂದು 'ಕೂತುಕೊಳ್ಳಿ' ಎಂದು ಸೆಟ್ಟರು ಹೇಳುವುದಕ್ಕೆ ಮೊದಲೇ ಒಂದು ಸೋಫಾದ ಮೇಲೆ ಠೀವಿಯಿಂದ ಕುಳಿತುಕೊಂಡು ಬಲಗಾಲನ್ನು ಎಡಗಾಲ ಮೇಲೆ ಹಾಕಿ ಸಹಜವಾದ ದಿಟ್ಟತನದಿಂದ ಕಿಟಕಿಯ ಮೇಲಿದ್ದ ಗಾಂಧೀನೆಹರೂ ಪಟಗಳನ್ನು ನಿಟ್ಟಿಸಿನೋಡಿ ಮುಗುಳುನಗೆ ಬೀರುತ್ತ ಸೆಟ್ಟರ ಕಡೆಗೆ ತಿರುಗಿ ತೀರ ಸಲುಗೆಯ ಧ್ವನಿಯಲ್ಲಿ – ''ಏನು ಸೆಟ್ಟರೆ, ಈ ಪಟಗಳು ಯಾವಾಗ ಬಂದುವು ಇಲ್ಲಿ?'' ಎಂದ. ಹಿಂದೆ ಅನೇಕ ಸಲ ಆತ ಅಲ್ಲಿಗೆ ಬಂದು ಹೋದ ಮೇಲೆ

ಆ ಪಟಗಳನ್ನು ಅಲ್ಲಿ ಹಾಕಲಾಗಿದ್ದುದೂ ಆ ಪ್ರಶ್ನೆಯಿಂದ ಸ್ಪಷ್ಟವಾಯಿತು. ಸೆಟ್ಟರೊಂದಿಗೆ ಶಿವಯೋಗಿಗೆ ಇಷ್ಟೊಂದು ಸಲುಗೆಯಿದೆಯೆ! ಎಂದು ಚಕಿತನಾಗಿ ಚಂದ್ರಣ್ಣ ಅವರಿಬ್ಬರನ್ನೂ ಮಿಕಿ ಮಿಕಿ ನೋಡುತ್ತಿದ್ದ. ಶಿವಯೋಗಿಯ ಪ್ರಶ್ನೆಯಿಂದಾಗಿ ಸೆಟ್ಟರ ಮುಖಭಾವದಲ್ಲಿ ಯಾವ ವಿಧವಾದ ಮಾರ್ಪಾಡೂ ಕಂಡುಬರಲಿಲ್ಲ. ಅವರು ನಗುನಗುತ್ತಲೇ ಉತ್ತರವಿತ್ತರು :

"ಈ ಪ್ರಶ್ನೆಗೆ ಉತ್ತರ ಕೊಡೋದಕ್ಕೆ ಮೊದಲು ವಿಷಯವೇನೆಂಬುದನ್ನು ಚಂದ್ರಣ್ಣನವರಿಗೆ ಸ್ವಲ್ಪದರಲ್ಲಿ ತಿಳಿಸೋಣ. ಇಲ್ಲಿ ನೋಡಿ, ಚಂದ್ರಣ್ಣನವರೆ, ಎಂಟು ತಿಂಗಳು ಕೆಳಗೆ ಇಲ್ಲಿ ಈ ಫೋಟೋ ಇರಲಿಲ್ಲ. ಅವುಗಳಿಗೆ ಬದಲಾಗಿ ಜಾರ್ಜ್ ರಾಜ ರಾಣಿಯರ ಪಟಗಳಿದ್ದುವು. ಆಗಸ್ಟ್ ಹದಿನಾಲ್ಕನೇ ತಾರೀಖು ಸಾಯಂಕಾಲ ಅವುಗಳನ್ನು ತೆಗೆದು ಬೇರೆ ಕಡೆಗೆ ಸಾಗಿಸಿ ಈ ಪಟಗಳನ್ನು ಇಲ್ಲಿ ಹಚ್ಚಬೇಕಾಯಿತು. ಮೊದಲಿನಿಂದಲೂ ನಾನೊಂದು ತತ್ವಕ್ಕೆ ಅಂಟಿಕೊಂಡಿದ್ದೇನೆ. ಆಳುವ ಸರಕಾರ ಯಾವುದಿದ್ದರೂ ಸರಿ, ಅದಕ್ಕೆ ನಿಷ್ಠೆಯಿಂದಿರುವುದು. ಬ್ರಿಟಿಷ್ ಸರಕಾರವಿರುವವರೆಗೆ ಚಕ್ರವರ್ತಿಗಳ ಪಟ ಹಾಕುತ್ತಿದ್ದೆ. ಈಗ ಅವರೇ ನೆಹರೂರವರಿಗೆ ಅಧಿಕಾರ ಕೊಟ್ಟು ಹೊರಟುಹೋದರು. ಸರಿ, ನಾವೂ ಗಾಂಧಿ ನೆಹರೂ ಪಟ ಹಾಕಿದೆವು. ಅಂದೇ ನಾಲ್ಕಾಣೆ ಕೊಟ್ಟು ನಾನು ಕಾಂಗ್ರೆಸ್ ಸದಸ್ಯನಾದದ್ದೂ ಆಯಿತು. ಪರದೇಶೀ ಬಟ್ಟೆ ತ್ಯಜಿಸಿಬಿಟ್ಟು ಖಾದೀ ಬಟ್ಟೆ ಹಾಕಿದ್ದೂ ಆಯಿತು."

ಅವರು ತೊಟ್ಟುಕೊಂಡಿದ್ದ ರೇಷ್ಮೆಯ ಅಂಗಿಯನ್ನು ನಿಟ್ಟಿಸಿ ನೋಡುತ್ತ ಯೋಗಿಯೆಂದ : "ಇದು ಖಾದೀನೇ?"

"ಹೌದು. ಖಾದೀ ಅಂಗಡಿಯಿಂದಲೇ ತರಿಸಿದ್ದು" ಎಂದು ಗಂಭೀರವಾಗಿ ಉತ್ತರವಿತ್ತರು ಸಂಗಪ್ಪಸೆಟ್ಟರು.

ಒಂದೆರಡು ನಿಮಿಷಗಳ ಕಾಲ ಮೌನವಾಗಿದ್ದು ಅವರು ಹೇಳತೊಡಗಿದರು

"ನಿಜ ಹೇಳಬೇಕಾದರೆ ಈ ಖಾದೀ ಒಂದು ಹುಚ್ಚು ಅಂತಲೇ ನನಗನ್ನಿಸುತ್ತದೆ. ಕೈಯಿಂದ ನೂಲುವುದರಿಂದ ಎಲ್ಲಾದರೂ ದೇಶದ ಉದ್ಧಾರವಾಗುವುದುಂಟೇ? ಇದೆಲ್ಲ ಆ ಘಾಟೀ ಮುದುಕನ ಉಪಾಯ ಅಷ್ಟೆ. ಬ್ರಿಟಿಷರನ್ನೋಡಿಸಲು ಒಂದು ಸ್ಟಂಟ್ ಮಾಡಬೇಕಾಗಿತ್ತು. ಮಾಡಿದ ಚರಖಾ ಚಲಾ ಚಲಾಕೆ – ಎಂದ. ನಮ್ಮ ದೇಶದ ಮಂದಿ – ಕುರಿಗಳ ಮಂದೆ! ಸುರು ಮಾಡಿದರು ಚರಕಾ. ಯಾಕೆ? ಗಾಂಧೀ ಹೇಳುತ್ತಾನೆ – ಮಹಾತ್ಮಾಗಾಂಧೀ. ಸರಿ ಪ್ರಾರಂಭವಾಯಿತು ಹುಚ್ಚು, ಖಾದಿ

ಸ್ವರಾಜ್ಯಕ್ಕೆ ಹಾದಿ, ಕೈನೂಲಿನ ಎಳೆಯ ಬುಡದಲ್ಲಿ ಸ್ವರಾಜ್ಯ ನೇತಾಡುತ್ತಿದೆ. ಇತ್ಯಾದಿ ವಿಲಕ್ಷಣ ಘೋಷಣೆಗಳು ಕೇಳಿಬಂದುವು. ಆದರೂ ಸ್ವರಾಜ್ಯವೇನೂ ಬರಲಿಲ್ಲ. ಕೊನೆಗೆ ದ್ವಿತೀಯ ಮಹಾಯುದ್ಧ ಮುಗಿದ ಮೇಲೆ ಬ್ರಿಟಿಷರು ತಾವಾಗಿಯೇ ತಮ್ಮ ಸಂತೋಷದಿಂದ ಅಧಿಕಾರ ಬಿಟ್ಟುಕೊಟ್ಟು ಹೊರಟುನಿಂತಾಗ ಈ ಜನ – ಚರಕಾದ ಮಹಿಮೆಯನ್ನು ನೋಡಿದಿರಾ! ನೂಲಿನ ಎಳೆಯಿಂದಲೇ ಸ್ವರಾಜ್ಯ ಬಂತು – ಎಂದು ಹಾಡಿದರು. ಆದರೂ ಏನು ವಿಚಿತ್ರ ಅಂತೀರಿ! ಇದುವರೆಗೆ ಕಾಂಗ್ರೆಸ್ ಧ್ವಜದ ಮೇಲಿದ್ದ ಚರಕಕ್ಕೆ ಚಕ್ರ ಕೊಟ್ಟು ಆಚೆ ತಳ್ಳಿಬಿಟ್ಟರು. ಚರಕದಲ್ಲಿ ಅವರಿಗೆ ಎಷ್ಟರಮಟ್ಟಿಗೆ ನಂಬಿಕೆಯಿದ್ದಿತೆಂಬುದು ಇಷ್ಟರಿಂದಲೇ ಗೊತ್ತಾಗುವಂತಿಲ್ಲವೆ?''

''ಘಟನಾಸಭೆಯ ವಿಶೇಷ ಸಮಿತಿಯ ನಿರ್ಣಯ ಅದು. ಕಾಂಗ್ರೆಸ್ ಏನು ಮಾಡೀತು?'' ಎಂದ ಶಿವಯೋಗಿ.

''ಆ ವಿಶೇಷ ಸಮಿತಿಯಲ್ಲಿ ವಿಶೇಷವಾಗಿ ಇದ್ದವರಾರು? ಕಾಂಗ್ರೆಸ್ಸಿನವರೇ ಅಲ್ಲವೇ? ಘಟನಾಸಭೆಯಲ್ಲಿ ಬಹುಮತವೂ ಅವರದೇ. ಅವರು ಮನಸ್ಸು ಮಾಡಿದ್ದರೆ ಚರಕವನ್ನೇ ಕಾಯಂ ಮಾಡಬಹುದಾಗಿತ್ತು ಧ್ವಜದ ಮೇಲೆ, ಏಕೆ ಮಾಡಲಿಲ್ಲ? ಅದೊಂದು ಹುಚ್ಚು ಎಂದು ಅವರಿಗೂ ಗೊತ್ತಿದ್ದಿತು ಅಂತಲೇ ಅಲ್ಲವೇ? ನನಗಂತೂ ಅದು ಹುಚ್ಚು ಅನ್ನುವುದರಲ್ಲಿ ಯಾವ ಸಂದೇಹವೂ ಇರಲಿಲ್ಲ – ಈಗಲೂ ಇಲ್ಲ.''

''ಆದರೂ ನೀವೇ ಖಾದಿಗೆ ಹೊರಳಿದಿರಲ್ಲ!''

''ಹೊರಳದಿದ್ದರೆ ವಿಧಿಯಿಲ್ಲ, ಇಷ್ಟು ದೊಡ್ಡ ಗಿರಣಿ, ಇಂಥ ಪ್ರಚಂಡ ವ್ಯವಹಾರ ನಡೆಸುತ್ತಿದ್ದರೆ ನಿಮಗೆ ಗೊತ್ತಾಗುತ್ತಿತ್ತು – ನಾನೇಕೆ ಖಾದಿಯ ಕಡೆಗೆ ಹೊರಳಿದೆನೆಂಬುದು, ವ್ಯವಹಾರ ಕಣ್ರೀ ಇದು! ವ್ಯವಹಾರ. ಕಾಂಗ್ರೆಸ್ಸಿನವರ ರಾಜ್ಯದಲ್ಲಿ ಕಾಂಗ್ರೆಸ್ಸಿನವರ ಹಾಗೇ ಇರಬೇಕು. ಇಲ್ಲವಾದರೆ ನಮ್ಮಂಥ ವ್ಯವಹಾರಸ್ಥರಿಗೆ ಏನಾದರೊಂದು ತಾಪತ್ರಯವಿದ್ದೇ ಇರುತ್ತದೆ. ಈ ಸೋಶಲಿಸ್ಟ್ ಕಮ್ಯೂನಿಸ್ಟರ ಗಲಾಟೆ ಬೇರೆ. ಆಗಾಗ ಮುಷ್ಕರದ ಬೆದರಿಕೆ, ಹೆಚ್ಚು ಸಂಬಳಕ್ಕಾಗಿ ಒತ್ತಾಯ, ಬೋನಸ್ಸುಗಳ ಬೇಡಿಕೆ – ಇಂಥವೆಲ್ಲಾ ಇರುತ್ತವೆ. ಇವುಗಳಲ್ಲದೆ ಇನ್ನೂ ಅನೇಕ ಸೂಕ್ಷ್ಮ ವಿಷಯಗಳಿರುತ್ತವೆ. ಅವುಗಳನ್ನೆಲ್ಲ ಎದುರಿಸಬೇಕಾದರೆ ಈ ಖಾದಿ ಒಂದು ಚಿಲಕತ್ತು ಇದ್ದ ಹಾಗೆ. ಗಾಂಧೀಟೋಪಿ ಒಂದು ಆಯುಧವಿದ್ದ ಹಾಗೆ. ಏನು ಮಾಡುವುದು! ಉಪಾಯವಿಲ್ಲ, ಭಾರಿ ಗಿರಣಿಯ ಜವಾಬ್ದಾರಿಯನ್ನು ಹೊತ್ತುಕೊಂಡಿದ್ದೇನೆ.

ಹದಿನೈದು ನೂರು ಸಂಸಾರಗಳು ನನ್ನನ್ನು ಅವಲಂಬಿಸಿಕೊಂಡಿವೆ. ಈ ಸಂಸಾರಗಳ ಹಿತಕ್ಕಾಗಿ ನಾನು ಇಷ್ಟಾದರೂ ಮಾಡದಿದ್ದರೆ ಹೇಗೆ? ನನ್ನ ಮನಸ್ಸಿಗೆ ವಿರುದ್ಧವಾಗಿ ನಾನು ಈ ಖಾದಿ ಹಾಕುತ್ತಿದ್ದೇನೆ. ನನ್ನ ಇಚ್ಛೆಗೆ ವಿರುದ್ಧವಾಗಿಯೆ ಕಾಂಗ್ರೆಸ್ ಸದಸ್ಯನಾಗಿದ್ದೇನೆ. ನಿಜಕ್ಕೂ ನನಗೆ ಇವುಗಳಲ್ಲಿ ಕೊಂಚವೂ ನಂಬಿಕೆಯಿಲ್ಲ.. ಕೊಂಚವೂ ಇಲ್ಲ..'' ಎಂದು ನುಡಿದು ಸೆಟ್ಟರು ಕೈ ಬೀಸಿದರು.

ಅಷ್ಟು ಹೊತ್ತಿಗೆ ಒಬ್ಬ ಆಳು ತಿಂಡಿಗಳ ತಟ್ಟೆಗಳನ್ನು ತಂದು ಸೋಫಾಗಳ ಮಧ್ಯೆ ಇದ್ದ ಪುಟ್ಟ ಮೇಜುಗಳ ಮೇಲಿರಿಸಿದ. ''ತಗೊಳ್ಳಿ,'' ಎಂದು ನುಡಿದ ಸೆಟ್ಟರು ತಿಂಡಿಗೆ ಕೈಹಚ್ಚಿದರು. ಚಂದ್ರಣ್ಣ ವಿಸ್ಮಯದಿಂದ ಆ ಪದಾರ್ಥಗಳನ್ನು ನಿರೀಕ್ಷಿಸುತ್ತಿದ. ಮೂರು ಸಿಹಿ, ಎರಡು ಖಾರ, ನಾಲ್ಕು ಬಗೆಯ ಹಣ್ಣುಗಳು, ಬಿಸ್ಕತ್ತು! ಆ ಸಿಹಿ ಪದಾರ್ಥಗಳ ಹೆಸರುಗಳನ್ನೂ ಆತ ಅರಿತವನಾಗಿರಲಿಲ್ಲ. ಇದುವರೆಗಿನ ತನ್ನ ಆಯುಷ್ಯದಲ್ಲಿ ಒಂದು ಸಲವೂ ಅವುಗಳ ರುಚಿ ಕಂಡಿರಲಿಲ್ಲ ಹಣ್ಣುಗಳೂ ಅಷ್ಟೆ ಧರ್ಮಪುರದ ಮಾರ್ಕೆಟ್ಟಿನಲ್ಲಿ ಸಿಕ್ಕಲಾರದ ಹಣ್ಣುಗಳೆಲ್ಲ ಅಲ್ಲಿದ್ದುವು. ಮುಂಬಯಿಯಿಂದಲೋ ಬೆಂಗಳೂರಿನಿಂದಲೋ ಆ ಹಣ್ಣುಗಳನ್ನು ತರಿಸಿದ್ದಂತೆ ತೋರುತ್ತಿತ್ತು. ಪಕ್ಕದ ಸೋಫಾದಲ್ಲಿದ್ದ ಶಿವಯೋಗಿ ಕೊಂಚವೂ ಸಂಕೋಚಪಟ್ಟುಕೊಳ್ಳದೆ ಒಂದೊಂದಾಗಿ ಎಲ್ಲ ಪದಾರ್ಥಗಳನ್ನೂ ಬಾಯಿಗಿಳಿಸುತ್ತಿದ್ದ. ಚಂದ್ರಣ್ಣನಿಗೆ ಮಾತ್ರ ತುಂಬಾ ಸಂಕೋಚಕ್ಕಿಟ್ಟುಕೊಂಡಿದ್ದಿತು. ತಬ್ಬಿಬ್ಬಾಗಿ ಕೊಂಚ ಕೊಂಚ ಬಾಯಿಗಿಟ್ಟುಕೊಳ್ಳುತ್ತಿದ್ದ.

ಆತನ ಸಂಕೋಚವನ್ನು ಸೆಟ್ಟರು ಗುರುತಿಸಿಕೊಂಡರೇನೋ – ಸಲುಗೆಯ ಧ್ವನಿಯಲ್ಲಿ ನುಡಿದರು : ''ಏನೂ ಸಂಕೋಚ ಮಾಡಿಕೊಳ್ಳಬೇಡಿ ಚಂದ್ರಣ್ಣನವರೆ, ಇದು ನಿಮ್ಮದೇ ಮನೆಯೆಂದು ತಿಳಿದುಕೊಳ್ಳಿ. ನೀವು ನಮ್ಮವರು, ಮೇಲಾಗಿ ನಮ್ಮ ಜಾತಿಯವರು. ನಮ್ಮ ಮನೆಯಲ್ಲಿ ನಿಮಗೆ ಯಾವ ಬಗೆಯ ಸಂಕೋಚವೂ ಬೇಡ.''

ಚಂದ್ರಣ್ಣನಿಗೆ ಇನ್ನೂ ವಿಸ್ಮಯವಾಯಿತು. ''ನಮ್ಮವರು! ನಮ್ಮ ಜಾತಿಯವರು!'' ಸೆಟ್ಟರ ಅಂತರಂಗದ ಇನ್ನೊಂದು ಭಾಗ ಮೆಲ್ಲಮೆಲ್ಲನೆ ಹೊರಬೀಳತೊಡಗಿದ್ದಿತು.

ಸೇಬಿನ ಹಣ್ಣೊಂದನ್ನು ಬಾಯಿಗಿಟ್ಟುಕೊಳ್ಳುತ್ತ ಸೆಟ್ಟರು ಮಾತನಾಡತೊಡಗಿದರು : ''ನೀವು ನಮ್ಮವರಾದುದರಿಂದ ಈ ವಿಷಯ ನಿಮ್ಮೆದುರಿಗೆ ಮಾತನಾಡಲು ಅಡ್ಡಿಯೇನೂ ಇಲ್ಲ. ನಿಜ ಹೇಳಬೇಕಾದರೆ ನಾವು – ವೀರಶೈವರು ಎಲ್ಲ ವಿಷಯಗಳಲ್ಲೂ ಹಿಂದುಳಿದಿದ್ದೇವೆ. ನಮ್ಮಲ್ಲಿ ಸುಶಿಕ್ಷಿತರು ಕಡಿಮೆ, ಬುದ್ಧಿವಂತರು

ಕಡಿಮೆ, ಕಾರ್ಯಕರ್ತರು ಕಡಿಮೆ, ದೊಡ್ಡ ದೊಡ್ಡ ವ್ಯವಹಾರಗಳಲ್ಲಿ ತೊಡಗಿರುವವರು ಕಡಿಮೆ. ಎರಡು ಹೊತ್ತಿನ ಊಟಕ್ಕಾಗಿ ಯಾವುದಾದರೊಂದು ಕೆಲಸ ಮಾಡುತ್ತ ಕೊಳೆಯುತ್ತಿರುವವರೇ ಹೆಚ್ಚು ಜನ. ನಮ್ಮ ಜಾತಿಯನ್ನು ಇಂಥ ಕೀಳು ಸ್ಥಿತಿಯಲ್ಲೇ ಇರಿಸಲು ಬೇರೆ ಜಾತಿಯವರು ಪ್ರಯತ್ನಿಸುವುದು ಬೇರೆ. ನೀವೇ ಹೇಳಿ, ನಮ್ಮವರೆಷ್ಟು ಜನ ಔದ್ಯೋಗಿಕ ಕ್ಷೇತ್ರದಲ್ಲಿ ಮುಂದುವರಿದಿದ್ದಾರೆ? ಎಷ್ಟು ಜನ ಪತ್ರಿಕಾಕರ್ತರಿದ್ದಾರೆ?''

ಉಪಾಹಾರದ ಮೇಲಿದ್ದ ಅಲ್ಪಸ್ವಲ್ಪ ಲಕ್ಷ್ಯವೂ ಇಲ್ಲದಂತಾಯಿತು ಚಂದ್ರಣ್ಣನಿಗೆ. ಆತ ಚಕಿತನಾಗಿ ಬಾಯಿಬಿಟ್ಟುಕೊಂಡು ಸೆಟ್ಟರ ಮಾತುಗಳನ್ನಾಲಿಸುತ್ತಿದ್ದ. ಶಿವಯೋಗಿ ಮಾತ್ರ ಯಾವುದನ್ನೂ ಗಮನಿಸದೆ ತಟ್ಟೆಯನ್ನು ತೆರವು ಮಾಡುವುದರಲ್ಲಿ ತೊಡಗಿದ್ದ. ಸೆಟ್ಟರ ಈ ಮಾತುಗಳು ಆತನಿಗೆ ಅಪರಿಚಿತವಾದುವೇನೂ ಆಗಿರಲಿಲ್ಲ.

ಸೆಟ್ಟರು ಹೇಳುತ್ತಿದ್ದರು : ''ಬ್ರಿಟಿಷ್ ಸರಕಾರ ಇರುವವರೆಗೆ ನಮ್ಮ ಜಾತಿಯವರಿಗೆ ವಿಶೇಷ ಸೌಕರ್ಯ, ಸೌಲಭ್ಯಗಳಿದ್ದುವು. ಅದು ಹೊರಟುಹೋದ ಬಳಿಕ ಈ ಬಿಳಿಟೋಪಿಯವರ ರಾಜ್ಯ ಬಂದ ಬಳಿಕ ಎಲ್ಲವೂ ಬದಲಾಯಿತು. ಜಾತಿಗಳ ಭೇದವಿರಕೂಡದೆಂದು ಗದ್ದಲವೆಬ್ಬಿಸಿ ಜಾತ್ಯಾತೀತ ಧೋರಣೆಯ ಶಂಖವಾದ್ಯಕ್ಕಾರಂಭಿಸಿದರು. ಎಲ್ಲವೂ ಕೇವಲ ಮೋಸಗಾರಿಕೆ. ಜನರ ಕಣ್ಣಿಗೆ ಮಣ್ಣೆರಚಿ ತಮ್ಮ ಜಾತಿಯವರನ್ನು ಮೇಲೆತ್ತಲು ಬ್ರಾಹ್ಮಣರು ಹೂಡಿದ ಕಪಟ ಕಾರಸ್ಥಾನ ಇದು!''

''ಆ್ಞಂ'' ಎಂದ ಚಂದ್ರಣ್ಣ. ಆ ಉದ್ಗಾರ ಆತನ ಮುಖದಿಂದ ತೀರ ಸ್ವಾಭಾವಿಕವಾಗಿಯೆ ಹೊರಟಿದ್ದಿತು.

''ನೀವು ಬೆಚ್ಚಿ ಬೀಳುವಿರಲ್ಲವೆ ನನ್ನ ಈ ಮಾತಿನಿಂದ? ನಿಮ್ಮ ಹಾಗೇ ಇನ್ನೂ ಅನೇಕ ಜನ ಬೆರಗಾದದ್ದುಂಟು. ಆದರೆ ಸ್ವಲ್ಪ ಯೋಚನೆ ಮಾಡಿದರೆ ಈ ಮಾತುಗಳಲ್ಲಿ ಸತ್ಯವಿದೆಯೆಂದು ನೀವು ಮನಗಾಣಬಹುದು. ಕೇಂದ್ರ ಮಂತ್ರಿಮಂಡಲದ ವಿಷಯವನ್ನೇ ತೆಗೆದುಕೊಳ್ಳಿ, ಪ್ರಧಾನ ಮಂತ್ರಿ ಯಾರು? ಕಾಶ್ಮೀರೀ ಬ್ರಾಹ್ಮಣ. ಇನ್ನುಳಿದವರೆಲ್ಲೂ ಹೆಚ್ಚು ಜನ ಬ್ರಾಹ್ಮಣರೇ. ಸರಕಾರಗಳ ಮಾತು ಬದಿಗಿಟ್ಟು ರಾಜಕೀಯ ಪಕ್ಷಗಳ ವಿಚಾರ ಎತ್ತಿಕೊಳ್ಳಿ. ಕಾಂಗ್ರೆಸ್–ಅದರ ಅಧ್ಯಕ್ಷ, ಕಾರ್ಯದರ್ಶಿ, ಕೋಶಾಧ್ಯಕ್ಷ, ಕಾರ್ಯಕಾರಿ ಸಮಿತಿಯಲ್ಲೂ ಹೆಚ್ಚು ಜನ ಎಲ್ಲ ಬ್ರಾಹ್ಮಣರೇ. ಸೋಷಲಿಸ್ಟ್ ಪಾರ್ಟಿಯಂಥ ಪಕ್ಷದಲ್ಲೂ ಅವರೇ – ಪ್ರತಿಯೊಂದು ಪ್ರಾಂತದ ಶಾಖೆಗಳಲ್ಲೂ ಅವರೇ ಮುಂದಾಳುಗಳು. ಕಮ್ಯೂನಿಸ್ಟ್ ಪಾರ್ಟಿಯಲ್ಲಾದರೂ ಹೆಚ್ಚು

ಜನ ಯಾರಿದ್ದಾರೆ ಅಂತೀರಿ? ಅವರೇ! ಬ್ರಾಹ್ಮಣರೇ. ಇನ್ನು ಹಿಂದೂ ಮಹಾಸಭೆ ಅದಂತೂ ಹೇಳಿ ಕೇಳಿ ಭಟ್ಟರ ಸಂಸ್ಥೆ. ಪೇಶ್ವೆರಾಜ್ಯವನ್ನು ಮತ್ತೆ ಸ್ಥಾಪಿಸಲು ಹೊರಟ ಉಂಡೀ ಬಾಜೀರಾಯರ ಸಂಸ್ಥೆ. ಇನ್ನು ಆರ್.ಎಸ್.ಎಸ್. ಹಿಂದೂ ಮಹಾಸಭೆಯ ಮರಿ ಅದು. ತಲೆಯಲ್ಲಿ ಮೆದುಳಿಲ್ಲವದರು – ಕೆಲವರು ಬೇರೆ ಜಾತಿಯ ಮೂರ್ಖ ಹುಡುಗರು ಅದರಲ್ಲಿದ್ದ ಮಾತ್ರಕ್ಕೆ ಅದೇನೂ ಜಾತ್ಯಾತೀತ ಸಂಸ್ಥೆಯಾಗುವುದಿಲ್ಲ. ಫಾರ್ವರ್ಡ್ ಬ್ಲಾಕ್, ರ್‍ಯಾಡಿಕಲ್ ಪಾರ್ಟಿ, ಸೇವಾದಲ, ಮಹಿಲಾದಲ, ಸಾಹಿತ್ಯ ಪರಿಷತ್ತು, ಕಲಾಕೇಂದ್ರ ಎಲ್ಲಿ ನೋಡಿದರೂ ಬ್ರಾಹ್ಮಣರೇ. ಎಲ್ಲ ಸೂತ್ರಗಳೂ ಅವರ ಕೈಯಲ್ಲಿ. ದೇಶದ ನಾಡಿಗಳೇ ಅವರ ಕೈಯಲ್ಲಿ. ಅವರೇ ಮಂತ್ರಿಗಳು, ಅವರೇ ಮುಖಂಡರು, ಅವರೇ ನಾಯಕರು, ಅವರೇ ಶ್ರೇಷ್ಠರು, ಅವರೇ ಸುಸಂಸ್ಕೃತರು, ಅವರೇ ಸರ್ವಾಧಿಕಾರಿಗಳು! ಹೇಗಿದೆ ಚಾಣಕ್ಯತನ! ಪರವಾಯಿಲ್ಲ ತಾನೆ! ಸ್ವರಾಜ್ಯ ಬಂದುದರ ಪರಿಣಾಮ ಇದು! ಇನ್ನೂ ನೋಡುವಿರಂತೆ. ಬ್ರಾಹ್ಮಣರ ಅಧಿಕಾರ ಲಲಾಸೆಯ ಈ ದಾಹ ಎಲ್ಲಿಯವರೆಗೆ ಹೋಗಿ ಎಂಥೆಂಥ ಅನಾಹುತ ಗಳಾಗುವವೋ!''

''ಏನಪ್ಪ! ಸುರು ಮಾಡಿದ್ದಿಯೇನು ರಾಯರ ಮೇಲೆ ಫೈರಿಂಗ್!''

ಚಂದ್ರಣ್ಣ ವಿಸ್ಮಯದಿಂದ ಕತ್ತೆತ್ತಿ ಆ ಮಾತು ಕೇಳಿ ಬಂದ ಕಡೆಗೆ ಹೊರಳಿದ. ಆ ಅಲಂಕೃತ ಕೊಠಡಿಯನ್ನೂ ಇನ್ನೂ ಅಲಂಕೃತಗೊಳಿಸಲೆಂದೋ ಏನೋ, ಹದಿನೆಂಟು ವರ್ಷದ ಹರಯದ ಹುಡುಗಿಯೊಬ್ಬಳು ಬಳುಕುತ್ತ ಬಳುಕುತ್ತ ಬರುತ್ತಿದ್ದುದು ಕಾಣಿಸಿತು.

''ಬಾ ಅಮ್ಮಯ್ಯ, ವೇಳೆಗೆ ಸರಿಯಾಗಿ ಬಂದೆ. ಇದೋ, ಇವರೇ ನೋಡು ನೀನು ಬಲುದಿನಗಳಿಂದ ನೋಡಬಯಸುತ್ತಿದ್ದ ಚಂದ್ರಣ್ಣನವರು,'' ಎಂದು ನುಡಿದು ಸೆಟ್ಟರು ಚಂದ್ರಣ್ಣನ ಕಡೆಗೆ ತಿರುಗಿ – ''ಈಕೆ ನನ್ನ ಮಗಳು ಶಾರದಾಮಣಿ, ಈ ಸಲ ಇಂಟರಿನಲ್ಲಿ ಓದುತ್ತಿದ್ದಾಳೆ,'' ಎಂದು ಪರಿಚಯ ಮಾಡಿಕೊಟ್ಟರು.

ನರ್ತಕರ ರೀತಿಯಲ್ಲಿ ಕೈಗಳೆರಡನ್ನೂ ಕೆಳಕ್ಕೆ ಬಾಗಿಸಿ ಜೋಡಿಸಿ ಶಾರದಾಮಣಿ ಅತ್ಯಂತ ಮೋಹಕವಾದ ಧ್ವನಿಯಲ್ಲಿ – ''ನಮಸ್ಕಾರ'' ಎಂದಳು. ಚಂದ್ರಣ್ಣ ತಬ್ಬಿಬ್ಬಾಗಿ ಸೋಫಾದಿಂದ ಎದ್ದು ಪ್ರತಿಯಾಗಿ ನಮಸ್ಕರಿಸುತ್ತಿದ್ದ ಹಾಗೆ ಆಕೆ ಆತನ ಪಕ್ಕದಲ್ಲಿದ್ದ ಸೋಫಾದ ಮೇಲೆ ಒರಗಿ ಕುಳಿತುಕೊಳ್ಳುತ್ತ – ''ಓ! ಕೂತುಕೊಳ್ಳಿ, ಕೂತುಕೊಳ್ಳಿ,'' ಎಂದು ನುಡಿಯುತ್ತಾ ಆತನನ್ನು ಎವೆಯಿಕ್ಕದೆ ನೋಡತೊಡಗಿದಳು.

ಅವಳ ದೃಷ್ಟಿಗೆ ದೃಷ್ಟಿ ಬೆರೆಸುವ ಸಾಹಸವಾಗಲಿಲ್ಲ ಚಂದ್ರಣ್ಣನಿಂದ. ಎಷ್ಟು ವಿಶಾಲವಾಗಿದ್ದುವು ಅವಳ ಕಣ್ಣು! ಅವುಗಳ ಸೌಂದರ್ಯವಾದರೂ ಎಂಥದು! ಕೊಂಚ ಕಂದುಬಣ್ಣಕ್ಕೆ ತಿರುಗಿದ್ದ ಆ ಕಣ್ಣ ಬೊಂಬೆಗಳಂತೂ ಮಿಂಚಿನಿಂದ ತುಂಬಿ ಕೊಂಡಂತಿದ್ದುವು. ಆ ಬೊಂಬೆಗಳು ತನ್ನ ಕಡೆಗೆ ತಿರುಗಿದಾಗ ಕಣ್ಣು ಕೋರೈಸುವ ವಿದ್ಯುತ್ಪ್ರಕಾಶವೇ ತನ್ನ ಮೇಲೆ ಹಠಾತ್ತಾಗಿ ಎರಗಿದಂತಾಯಿತು ಚಂದ್ರಣ್ಣನಿಗೆ. ಮಾರ್ಲಿನ್ ಡೀಟ್ರಿಚ್, ಗ್ರೇಟಾ ಗಾರ್ಬೊ, ನಾರ್ಮಾ ಷೀರರ್ ಇತ್ಯಾದಿ ಹಾಲಿವುಡ್ ನಟಿಯರ ಸಿಂಗರಿಸಿದ ಕಣ್ಣೆವೆಗಳನ್ನೂ ನಾಚಿಸುವಂಥ ಹರವಾದ ಆ ಕಣ್ಣೆವೆಗಳೊ! ಅವುಗಳ ಮೇಲ್ಭಾಗದ ಆ ಹೊಳೆ ಹೊಳೆವ ಕಪ್ಪು ಬಣ್ಣವೊ! ಅದರ ಮೇಲಿನ ಆ ತೆಳ್ಳಗಿನ ಹುಬ್ಬು ಅದರ ಮೇಲೆ ತುಂಟತನದಿಂದ ಥಕ ಥಕ ಕುಣಿಯುವ ರೇಶಿಮೆ ಯಂಥ ಮುಂಗುರುಳು! ಬಂಗಾಲಿ ಫ್ಯಾಶನ್ನಿನಂತೆ ಬಾಚಿ ಬೈತಲೆ ತೆಗೆದಿದ್ದ ಮಿರುಗುವ ತಲೆಗೂದಲು. ಕಪ್ಪು ಕೂದಲಿಗೆ ಒಪ್ಪವಿಡುವಂತಿದ್ದ ಗುಲಾಬಿ ಬಣ್ಣದ ಹಣೆ, ಬೆಣ್ಣೆಯ ಮುದ್ದೆಯಂತಿದ್ದ ನುಣುಪಾದ ಕೆನ್ನೆ, ಕಲ್ಲಿನಲ್ಲಿ ಕಟೆದಂತಿದ್ದ ಮಾಟವಾದ ತುಟಿಗಳ ಮೇಲೆ ಸರಳರೇಖೆಯಂತೆ ಕಾಣಿಸುತ್ತಿದ್ದ ಪ್ರಮಾಣಬದ್ಧವಾದ ಮೂಗು – ಅದರ ಎಡಬದಿಯಲ್ಲಿ ಥಳಥಳನೆ ಹೊಳೆಯುವ ವಜ್ರದ ನತ್ತು. ಹಣೆಯ ಮಧ್ಯೆ ಚಿಕ್ಕದಾಗಿ ಇಟ್ಟ ತಿಲಕದ ಚುಕ್ಕೆ. ಕತ್ತಿನಲ್ಲಿ ಬಿಳಿಯ ಮುತ್ತುಗಳ ಸೊಗಸಾದ ಹಾರ. ಅಚ್ಚ ಬಿಳಿಯ ಬಣ್ಣದ ರೇಷ್ಮೆ ಸೀರೆಯೊಂದನ್ನು ಉಟ್ಟು ಅದೇ ಬಣ್ಣದ ರವಕೆಯೊಂದನ್ನಾಕೆ ತೊಟ್ಟುಕೊಂಡಿದ್ದಳು. ಸೆರಗು ಸ್ವಚ್ಛಂದವಾಗಿ ಬೆನ್ನ ಹಿಂದೆ ನೇತಾಡುತ್ತ ಎದೆಯ ಭಾಗ ವೆಲ್ಲವನ್ನೂ ಮುಕ್ತಗೊಳಿಸಿ ಬಿಟ್ಟಿದ್ದಿತು. ಹೊಸ ಫ್ಯಾಶನ್ನಿಗನುಸಾರವಾಗಿ ಹೊಲಿಯಲ್ಪಟ್ಟ ರವಕೆ ಎದೆಯ ಮಾಂಸದ ಭಾಗವನ್ನು ಹೆಮ್ಮೆಯಿಂದ ತೆರೆದು ತೋರಿಸುವಂತಿದ್ದಿತು. ದಂತದಿಂದ ಮಾಡಿದಂತಿದ್ದ ನೀಳವಾದ ಕೈಗಳು, ಬಲಗೈಯಲ್ಲಿ ಎರಡೇ ಎರಡು ತೆಳ್ಳಗಿನ ಚಿನ್ನದ ಬಳೆ. ಎಡಗೈಯಲ್ಲಿ ಒಂದು ಪುಟ್ಟ ಗಡಿಯಾರ.

ಶಾರದಾಮಣಿ ಮಾತನಾಡುತ್ತಲೇ ಇದ್ದಳು; ''ನಿಮ್ಮ ಕತೆಗಳನ್ನೂ ಕಾದಂಬರಿ ಗಳನ್ನೂ ಒಂದನ್ನೂ ಬಿಡದೆ ಓದಿದ್ದೇನೆ ನಾನು. ನಿಮ್ಮ ಗುಲಾಬಿ ಹೂವಿನ ಪಕಳೆ ಎಂಬ ಕತೆಯಂತೂ ನನ್ನನ್ನು ಎಷ್ಟೋ ದಿನ ಹುಚ್ಚಿಯನ್ನಾಗಿ ಮಾಡಿತ್ತು. ನಿಮ್ಮ ಪತ್ರಿಕೆಗಳೆಂದರೂ ನನಗೆ ಬಹಳ ಪ್ರೀತಿ. ಟೀಕೆ ಮಾಡುವುದರಲ್ಲಿ ಸವ್ಯಸಾಚಿಯಪ್ಪ ನೀವು!''

ಚಂದ್ರಣ್ಣನಿಗೆ ಏನು ಹೇಳುವುದಕ್ಕೂ ಬಾಯಿ ಬರಲಿಲ್ಲ. ರತ್ನಗಂಬಳಿಯ ಮೇಲೆ ದೃಷ್ಟಿಯನ್ನು ಚೆಲ್ಲಿ ಆತ ಮಂತ್ರಮುಗ್ಧನ ಹಾಗೆ ಕುಳಿತುಕೊಂಡಿದ್ದ.

''ನಿಮ್ಮ ಬರಹಗಳನ್ನೋದಿದಾಗ ನೀವು ನಲವತ್ತು ನಲವತ್ತೈದು ವರ್ಷದವರಾದರೂ ಇರಬಹುದೇನೊ ಅಂದುಕೊಂಡಿದ್ದೆ ನಾನು. ನೀವಿಷ್ಟು ಚಿಕ್ಕ ವಯಸ್ಸಿನವರಾಗಿರಬಹುದೆಂದು ನನ್ನ ಕನಸು ಮನಸ್ಸಿನಲ್ಲೂ ಬಂದಿರಲಿಲ್ಲ!'' ಎಂದಳು ಶಾರದಾಮಣಿ.

ಸೆಟ್ಟರೂ ನಗುನಗುತ್ತ – ''ಹೌದು, ನನಗೂ ಸಹ ಆಶ್ಚರ್ಯವೇ ಆಯಿತು. ನೀವು ವಯಸ್ಸಿನಲ್ಲಿ ಹಿರಿಯರಾಗಿರಬಹುದೆಂದೇ ನಾನು ಮೊದಲು ತಿಳಿದಿದ್ದೆ. ಇನ್ನೂ ತರುಣರೆಂದು ಸದಾಶಿವಪ್ಪ ಹೇಳಿದಾಗ ನಿಜವಾಗಿಯೂ ನನಗೆ ನಂಬಲಾಗಲಿಲ್ಲ. ನಿಮಗೆ ಈಗ ಬಹಳವಾದರೆ ಇಪ್ಪತ್ತೈದು ವರ್ಷ ಆಗಿದ್ದೀತು. ಅಲ್ಲವೇನು?'' ಎಂದರು.

''ಹೌದು,'' ಎಂದ ಚಂದ್ರಣ್ಣ.

''ಇದೇನಪ್ಪ ಸೆಟ್ಟರು ನೇರವಾಗಿ ವಯಸ್ಸಿಗೆ ಇಳಿದು ಬಂದರಲ್ಲ!'' ಎಂದು ಚಕಿತನಾದ ಶಿವಯೋಗಿ.

''ನಮ್ಮ ಅಮ್ಮಯ್ಯನಿಗೆ ಕತೆ ಕಾದಂಬರಿ ಓದುವುದೆಂದರೆ ಬಹಳ ಇಷ್ಟ ಕನ್ನಡ ಇಂಗ್ಲಿಷ್ ಮಾತ್ರವಲ್ಲ– ಹಿಂದೀ ಪುಸ್ತಕಗಳನ್ನೂ ಆಕೆ ಓದುತ್ತಾಳೆ. ಒಂದು ಕೊಠಡಿಯ ತುಂಬಾ ಆಕೆಯ ಲೈಬ್ರೆರಿಯೇ ಆಗಿದೆ. ಬಟ್ಟೆ ಬರೆಗಳಿಗೆ ಖರ್ಚು ಮಾಡುವುದಕ್ಕಿಂತ ಹೆಚ್ಚಾಗಿ ಆಕೆ ಕಾದಂಬರಿಗಳಿಗೆ ಖರ್ಚು ಮಾಡುತ್ತಾಳೆ. ಜಗತ್ತಿನ ಯಾವುದೇ ಶ್ರೇಷ್ಠ ಕಾದಂಬರಿಕಾರನ ಕೃತಿಗಳನ್ನೆಲ್ಲ ನೀವು ಅಲ್ಲಿ ನೋಡಬಹುದು. ಎಲ್ಲಿ ಅಮ್ಮಯ್ಯ, ನಿನ್ನ ಆ ಪ್ರಸಿದ್ಧ ಲೇಖಕರ ಹೆಸರುಗಳನ್ನು ಸ್ವಲ್ಪ ಹೇಳಮ್ಮ!''

ಶಾರದಾಮಣಿ ಕೊಂಚವೂ ಸಂಕೋಚಪಟ್ಟುಕೊಳ್ಳದೆ – ಶಿಕ್ಷಕರ ಪ್ರಶ್ನೆಗೆ ಉತ್ತರವೀಯುವ ಜಾಣ ವಿದ್ಯಾರ್ಥಿನಿಯಂತೆ – ಸರಸರನೆ ಹೇಳತೊಡಗಿದಳು :

''ಡಿಕೆನ್ಸ್, ಸ್ಕಾಟ್, ಗೋಲ್ಡ್‌ಸ್ಮಿತ್, ಥಾಮಸ್ ಹಾರ್ಡಿ, ವಿಕ್ಟರ್ ಹ್ಯೂಗೋ, ಟಾಲ್‌ಸ್ಟಾಯ್, ಡಿಕೋಬ್ರಾ, ಪುಷ್ಕಿನ್, ಗೊಗೋಲ್, ಬ್ರಾಂಟೆ, ಗಾಲ್ಸ್‌ವರ್ದಿ, ಫ್ಲಾಬೊ, ಫ್ರಾನ್ಸ್, ಝೋಲಾ, ಆಸ್ಕರ್ ವಿಲ್ಡೆ ಬಾಲ್ಝಾಕ್, ಮೋಪಾಸಾ, ಪರ್ಲ್‌ಬಕ್, ವಿಕಿ ಬಾಮ್, ಸಾಮರ್‌ಸೆಟ್ ಮಾಮ್, ಜೇಮ್ಸ್ ಹಿಲ್ಟನ್, ವಾರ್ವಿಕ ಡೀಪಿಂಗ್, ಲಾರೆನ್ಸ್ ವೋಡ್‌ಹೌಸ್, ಓ ಹೆನ್ರಿ...''

''ಸಾಕಮ್ಮ, ಅಷ್ಟು ಜನರೇ ಸಾಕು... ಇನ್ನೂ ನೂರಾರು ಲೇಖಕರ ಹೊಸ ಹೊಸ ಕಾದಂಬರಿ ಕತೆಗಳೆಲ್ಲ ಇವೆ ನಮ್ಮ ಅಮ್ಮಯ್ಯನ ಹತ್ತಿರ. ಹೇಳಿದರೆ ಮುಗಿಯು

ವಂತಿಲ್ಲ, ನೀವು ನೋಡಿಯೆ ಕಂಡುಕೊಳ್ಳಬೇಕು'' ಎಂದರು ಸೆಟ್ಟರು.

''ಗಾರ್ಕಿಯ ಪುಸ್ತಕಗಳನ್ನು ನೀವು ಓದಿಲ್ಲವೆ?'' ಅದು ಚಂದ್ರಣ್ಣನ ಪ್ರಶ್ನೆ. ಬಹಳ ಧೈರ್ಯದಿಂದ ಆತ ಪ್ರಶ್ನಿಸಿದ್ದ. ಇಂಥ ಸುಂದರಿಯರೊಂದಿಗೆ ಮಾತನಾಡು ವುದೂ ಆತನಿಗೊಂದು ಹೊಸ ಅನುಭವವೇ.

ಶಾರದಾಮಣಿ ತನ್ನ ಹುಬ್ಬುಗಳನ್ನು ಮೇಲಕ್ಕೇರಿಸಿ, ಕಣ್ಣುಗಳನ್ನರಳಿಸಿ, ಕಣ್ಣ ಬೊಂಬೆಗಳನ್ನು ಕುಣಿಸಿ ವಿಸ್ಮಯಗೊಂಡವರ ಹಾಗೆ ನಟಿಸುತ್ತ – ''ಯಾರು ಆ ಗಾರ್ಕಿ ಅಂದರೆ? ರಶಿಯನ್ ಲೇಖಕನೋ ಏನು?'' ಎಂದಳು.

''ಮದರ್ ಎಂಬ ಪ್ರಸಿದ್ಧ ಕಾದಂಬರಿ ಬರೆದ ಅಮರ ಲೇಖಕ.''

''ಓ! ಆತನೇ? ಗೊತ್ತು ಗೊತ್ತು. ಮದರ್ ನನ್ನ ಹತ್ತಿರ ಇದೆ. ಆದರೆ ಅದೇನೂ ನನಗೆ ಹಿಡಿಸಲಿಲ್ಲ. ಮೂವತ್ತು ಪುಟ ಓದುವುದರೊಳಗಾಗಿ ಬೇಸರ ಬಂದುಬಿಟ್ಟಿತು. ಅದೇನು ಕಾದಂಬರಿಯೊ, ಉದ್ದುದ್ದ ಭಾಷಣಗಳ ಸಂಗ್ರಹವೊ!''

ಶಾರದಾಮಣಿಯ ಆ ಟೀಕೆಗಳನ್ನು ಕೇಳಿದಾಗ ಚಂದ್ರಣ್ಣನಿಗೆ ಕೊಂಚ ನಗು ಬರದಿರಲಿಲ್ಲ. ಗಾರ್ಕಿಯ ನಗ್ನ ವಾಸ್ತವತೆಯನ್ನು ಮೆಚ್ಚದ ಈ ಯುವತಿ ತನ್ನ ಕೃತಿಗಳನ್ನಾದರೂ ಹೇಗೆ ತಾನೆ ಮೆಚ್ಚಿಕೊಂಡಾಳು! ತನ್ನದೂ ವಾಸ್ತವತೆಯ ದಾರಿಯೆ. ಗಾರ್ಕಿ, ಅಪ್ಟನ್ ಸಿಂಕ್ಲೇರ್, ಸ್ಟೀನ್‌ಬೆಕ್ ತುಳಿದ ದಾರಿಯಲ್ಲೇ ತಾನೂ ಹೊರಟಿದ್ದುದು. ತನ್ನ ಕೃತಿಗಳನ್ನಾದರೂ ಆಕೆ ಓದಿರಬಹುದೆಂದು ಹೇಗೆ ಹೇಳಬೇಕು!

''ನಿಮ್ಮ ಮೆಚ್ಚುಗೆಯ ಕಾದಂಬರಿಕಾರ ಯಾರು?'' ಎಂದು ಕುತೂಹಲದಿಂದ ಆತ ಪ್ರಶ್ನೆ ಮಾಡಿದ.

''ಕನ್ನಡದಲ್ಲೊ ಇಂಗ್ಲೀಷಿನಲ್ಲೊ?''

''ಎರಡರಲ್ಲೂ.''

''ಕನ್ನಡದಲ್ಲಿ ಒಳ್ಳೆಯ ಕಾದಂಬರಿಗಳೇ ಬಂದಿಲ್ಲವೆಂದು ನನ್ನ ಅಭಿಪ್ರಾಯ. ಕಾನೂರು ಸುಬ್ಬಮ್ಮ ಹೆಗ್ಗಡತಿ, ಚೋಮನ ದುಡಿ ಇಂಥ ಒಂದೆರಡು ಕೃತಿಗಳನ್ನು ಬಿಟ್ಟರೆ ಇನ್ನುಳಿದವೆಲ್ಲ ರಗಳೆಯ ಪುರಾಣಗಳು. ಈ ಕಾದಂಬರಿಕಾರರೊಬ್ಬರನ್ನೂ ನಾನು ಮೆಚ್ಚಲು ಸಾಧ್ಯವಿಲ್ಲ. ಮೋಪಾಸಾ, ಝೋಲಾ, ಬಾಲ್ಝಾಕ್, ಹಾರ್ಡಿ ಮೊದಲಾದವ ರೆದುರಿಗೆ ನಮ್ಮ ಈ ಕಾದಂಬರಿಕಾರರನ್ನು ನಿಲ್ಲಿಸಿದರೆ ಕನ್ನಡಿಗರೆಲ್ಲರೂ ನಾಚಿಕೆಯಿಂದ

ತಲೆ ಕೆಳಕ್ಕೆ ಬಾಗಿಸಬೇಕಾದೀತು. ಅರ್ಥಾತ್ – ನಿಮ್ಮ ಕಾದಂಬರಿಗಳನ್ನು ನಾನು ಮನಸಾರೆ ಮೆಚ್ಚಿದ್ದೇನೆ,'' ಎಂದಳು ಶಾರದಾಮಣಿ.

''ವಿದೇಶೀಯ ಕಾದಂಬರಿಕಾರರೋ?''

''ಹಾರ್ಡಿ ಎಂದರೆ ನನಗೆ ತುಂಬ ಪ್ರೀತಿ. ಬೇರೆ ಅನೇಕರನ್ನೂ ನಾನು ಮೆಚ್ಚುತ್ತೇನೆ. ಆದರೂ ಹಾರ್ಡಿಯ ಬಗೆಗಿರುವಷ್ಟು ಪ್ರೀತಿ ಉಳಿದವರ ಬಗೆಗೆ ಬರಲಾರದು.''

''ತ್ರೀ ಕ್ಯಾಸಲ್ಸ್'' ಸಿಗರೇಟು ಸೇದುತ್ತ ಇವರ ಮಾತುಗಳನ್ನು ಕೌತುಕದಿಂದ ಆಲಿಸುತ್ತಿದ್ದ ಸೆಟ್ಟರು ತಮ್ಮ ಕುಮಾರಿಯನ್ನು ವಾತ್ಸಲ್ಯಪೂರ್ಣ ದೃಷ್ಟಿಯಿಂದ ನಿಟ್ಟಿಸುತ್ತ – ''ನೋಡಿದಿರಾ! ಸಾಹಿತ್ಯ ಅಂದರೆ ಹೇಗೆ ಸರಾಗವಾಗಿ ಮಾತನಾಡುವಳು ನಮ್ಮ ಅಮ್ಮಯ್ಯ! ಇನ್ನೂ ಒಂದು ವಿಚಾರವಿದೆ. ನಿಮಗದನ್ನು ಹೇಳಲೇಬೇಕು ಎಂದೆನಿಸುತ್ತೆ. ಆದರೆ...'' ಎಂದು ನುಡಿದು ಸೆಟ್ಟರು ಮಗಳನ್ನು ಕುರಿತು ಕೇಳಿದರು : ''ಏನು ಅಮ್ಮಯ್ಯ, ಹೇಳಲೇ?''

ಶಾರದಾಮಣಿ ಒಯ್ಯಾರದಿಂದ ಬಳುಕುತ್ತ – ''ಅಂಥ ಅಗತ್ಯವೇನು ಬಿಡಪ್ಪ ಅವರೆದುರಿಗೆ ಹೇಳುವಂಥ ಮಹತ್ವದ ವಿಷಯವೆ!'' ಎಂದಳು.

ಶಿವಯೋಗಿ ಕೌತುಕದಿಂದ ಪ್ರಶ್ನೆ ಮಾಡಿದ : ''ಅದೇನ್ರೀ ಅದು ಅಂಥಾ ಗುಟ್ಟು?''

''ಗುಟ್ಟೇನೂ ಇಲ್ಲ. ಅಂದರೆ ಹೀಗೆ : ಬರೀ ಓದುವುದು ಮಾತ್ರವಲ್ಲ – ನಮ್ಮ ಅಮ್ಮಯ್ಯನಿಗೆ ಬರೆಯುವ ಚಟವೂ ಇದೆ. ಆಕೆಯೂ ಕತೆ ಕವಿತೆ ಬರೆದಿದ್ದಾಳೆ.''

''ಹೀಗೇನು! ಇದೊಂದು ಹೊಸ ವಿಷಯವೇ. ಇಷ್ಟು ದಿನ ನನಗೆ ಗೊತ್ತೇ ಇರಲಿಲ್ಲವಲ್ಲ!'' ಎಂದ ಶಿವಯೋಗಿ.

''ನಿಜ ಹೇಳಬೇಕಾದರೆ ನನಗೂ ಗೊತ್ತಿರಲಿಲ್ಲ. ಮೊನ್ನೆ ಇವರ ಮೇಷ್ಟರು ನನ್ನನ್ನು ಕಾಣಲು ಬಂದಾಗ ಮಾತಿಗೆ ಮಾತು ಬಂದು ಈಕೆ ಕತೆ ಬರೆಯುವ ವಿಷಯ ಹೇಳಿದರು. ನನಗೆ ಆಶ್ಚರ್ಯವಾಯಿತು. ಅಮ್ಮಯ್ಯನಿಗೆ ಕೇಳಿದಾಗ ಬಹಳ ಸಂಕೋಚ ಪಟ್ಟುಕೊಂಡು ಅವುಗಳನ್ನು ತೋರಿಸಿದಳು.''

''ಏನೋ ಈಚೆಗೆ ಬರೆಯುತ್ತಿದ್ದೇನೆ ಅಷ್ಟೆ. ನಮ್ಮ ಮೇಷ್ಟರಿಗೆ ನನ್ನ ಬಗ್ಗೆ ಬಹಳ

ವಿಶ್ವಾಸ. ಅವನ್ನೆಲ್ಲ ಓದಿನೋಡಿ ತುಂಬ ಚೆನ್ನಾಗಿವೆ – ನೀವು ಹೀಗೇ ಬರೆಯಬೇಕು – ಪರ್ಲ್‌ಬಕ್ ಅನ್ನು ಮೀರಿಸುವಂಥ ಲೇಖಕಿಯಾಗಬಲ್ಲಿರಿ, ಎಂದು ಹೇಳಿದರು. ನಮ್ಮ ಯೂನಿಯನ್‌ನವರು ಏರ್ಪಡಿಸಿದ್ದ ಕಥಾಸ್ಪರ್ಧೆಯಲ್ಲಿ ನನ್ನದೊಂದು ಕತೆಗೆ ಮೊದಲನೆಯ ಬಹುಮಾನ ಬಂತು..." ಎಂದಳು ಶಾರದಾಮಣಿ.

"ಓ! ಹಾಗಾದರೆ ನಾನು ನೋಡಲೇಬೇಕು ಆ ಕತೆಗಳನ್ನು" ಎಂದ ಶಿವಯೋಗಿ. ಚಂದ್ರಣ್ಣ ಮೌನವಾಗಿದ್ದ.

"ತೋರಿಸುತ್ತೇನೆ ಬನ್ನಿ, ನನ್ನ ಕೊಠಡಿಗೆ ಹೋಗೋಣ," ಎಂದು ಎದ್ದು ನಿಂತಳು ಶಾರದಾಮಣಿ. ಶಿವಯೋಗಿ ಆತುರತೆಯಿಂದ ಮೇಲಕ್ಕೆದ್ದ. ಚಂದ್ರಣ್ಣನೂ ಏಳಲೇಬೇಕಾಯಿತು.

ಸೆಟ್ಟರೂ ಮೇಲಕ್ಕೇಳುತ್ತ – "ಹೋಗಿ ಬನ್ನಿ ಎಲ್ಲವನ್ನೂ ನೋಡಿಕೊಂಡು ಬನ್ನಿ" ಎಂದರು.

ಸೆಟ್ಟರ ಕೊಠಡಿಯಿಂದ ಹೊರಟು ಅವರು ಮೂವರೂ ಎರಡನೆಯ ಅಂತಸ್ತಿನ ಮೆಟ್ಟಲುಗಳನ್ನೇರಿ ಮೇಲೆ ಹೋದರು. "ಈ ಅಂತಸ್ತಿನಲ್ಲಿರುವ ಮೂರು ಕೊಠಡಿಗಳೂ ನನ್ನವೇ!" ಎಂದೆನ್ನುತ್ತ ಶಾರದಾಮಣಿ ತನ್ನ ಕೂಡ್ರುವ ಕೊಠಡಿಗೆ ಅವರನ್ನು ಕರೆದೊಯ್ದಳು.

"ಮೂರು ಕೊಠಡಿಗಳೂ!" ಎಂದ ಚಂದ್ರಣ್ಣ.

"ಹೌದು. ಎಲ್ಲವೂ ನನಗೇ ಸೇರಿದುವು. ಆದರೂ ಸಾಲದಾಗಿವೆ. ಇನ್ನೂ ಮೂರು ನಾಲ್ಕು ಆದರೂ ಬೇಕೇ ಬೇಕು," ಎನ್ನುತ್ತ ಆಕೆ ಸೋಫಾಗಳ ಕಡೆಗೆ ಕೈ ತೋರಿಸಿ ಕುಳಿತುಕೊಳ್ಳಲು ಸೂಚಿಸಿದಳು.

ಚಂದ್ರಣ್ಣ ಸಂಕೋಚದಿಂದಲೇ ಕುಳಿತುಕೊಂಡು ವಿಸ್ಫುರಿತ ನೇತ್ರಗಳನ್ನು ಆ ಕೊಠಡಿಯಲ್ಲೆಲ್ಲ ಓಡಿಯಾಡಿಸತೊಡಗಿದ. ಮುಗಿಲ ನೀಲಿಯ ಬಣ್ಣದಿಂದ ರಂಜಿತ ವಾದ ಗೋಡೆಗಳ ಮೇಲೆ ಒಂದು ಗೋಡೆಗೆ ಒಂದರಂತೆ ನಾಲ್ಕೇ ನಾಲ್ಕು ಪಟಗಳನ್ನು ಅಲ್ಲಿ ತೂಗುಹಾಕಲಾಗಿದ್ದಿತು. ಒಂದು ವಿಜಯಲಕ್ಷ್ಮಿ ಪಂಡಿತರ ಭಾವಚಿತ್ರ. ಇನ್ನೊಂದು ಕಮಲಾದೇವಿಯದು, ಮತ್ತೊಂದು ಸರೋಜಿನಿ ನಾಯ್ಡುರವರದು, ಮಗದೊಂದು ಶಾರದಾಮಣಿಯದು! ಆ ಮೂರು ಪಟಗಳನ್ನು ಕಂಡು ಅನಂತರ ಆಕೆಯ ಪಟದ ಕಡೆಗೆ ದೃಷ್ಟಿ ತೂರಿ ಚಂದ್ರಣ್ಣ ಮುಗುಳುನಗೆ ಬೀರಿದ.

''ಇದು ನನ್ನ ಕೂಡ್ರುವ ಕೊಠಡಿ, ದಿವಾನಖಾನೆ, ಡ್ರಾಯಿಂಗ್ ರೂಂ. ಯಾರಾದರೂ ಸ್ನೇಹಿತರೋ ಅತಿಥಿಗಳೋ ಬಂದರೆ ಇಲ್ಲಿ ಕುಳಿತು ಮಾತನಾಡುತ್ತೇವೆ. ಸೊಂಪಾಗಿ ಹರಟೆ ಕೊಚ್ಚಲು ಪ್ರಶಸ್ತವಾಗಿದೆಯಲ್ಲವೆ ಈ ಸ್ಥಳ? ಸೋಫಾಗಳೂ ಚೆನ್ನಾಗಿವೆಯಲ್ಲವೆ?'' ಎಂದಳು ಶಾರದಾಮಣಿ.

''ಪ್ರಿನ್ಸೆಸ್ ಎಲಿಜಬೆತ್ ಕೂಡ ಇಂಥ ವೈಭವದಿಂದ ವಾಸಿಸುತ್ತಿರುವಳೊ ಇಲ್ಲವೊ ಅಂತ ಸಂಶಯ ನನಗೆ'' ಎಂದು ನುಡಿದ ಶಿವಯೋಗಿ. ಶಾರದಾಮಣಿ ನಕ್ಕು – ''ಬನ್ನಿ ಮೊದಲು ನನ್ನ ಕೊಠಡಿಗಳೆಲ್ಲವನ್ನೂ ತೋರಿಸುತ್ತೇನೆ,'' ಎಂದು ಮೇಲಕ್ಕೆದ್ದಳು.

ಶಾರದಾಮಣಿ ಅವರನ್ನು ತನ್ನ ಬರೆಯುವ ಕೋಣೆಗೆ ಕರೆದುತಂದಳು. ಆ ಕೊಠಡಿಯ ಗೋಡೆಗಳಿಗೆ ತಿಳಿನೀಲಿ ಬಣ್ಣ ಬಳಿದು ನಾಲ್ಕು ಚಿತ್ರಗಳನ್ನು ತೂಗು ಹಾಕಲಾಗಿದ್ದಿತು. ಅವರನ್ನು ಚಿತ್ರಗಳ ಬಳಿ ಕರೆದುತಂದು ಶಾರದಾಮಣಿ ಒಂದು ಭಾವಚಿತ್ರದೆದುರಿಗೆ ನಿಂತು – ''ಇದು ಯಾರದು ಹೇಳಿ ನೋಡುವಾ,'' ಎಂದಳು.

ಚಂದ್ರಣ್ಣ ಮಾತನಾಡದೆ ಆ ಚಿತ್ರವನ್ನೆ ಎವೆಯಿಕ್ಕದೆ ನಿಟ್ಟಿಸುತ್ತಿದ್ದ. ವಿದೇಶೀಯ ಲೇಖಕನೊಬ್ಬನ ಚಿತ್ರವೆಂಬುದೇನೊ ತಿಳಿದು ಬರುವಂತಿದ್ದಿತಾದರೂ ಇಂಥವರದೇ ಎಂದು ಹೇಳುವಂತಿರಲಿಲ್ಲ. ಹಿಂದೆ ಎಂದೂ ಈ ಚಿತ್ರ ಚಂದ್ರಣ್ಣನಿಗೆ ಕಣ್ಣಿಗೆ ಬಿದ್ದಿರಲಿಲ್ಲ. ಶಿವಯೋಗಿಗಂತೂ ವಿದೇಶೀಯ ಲೇಖಕರ ವಿಷಯವೇ ಅಪರಿಚಿತ ವಾದುದಾಗಿತ್ತು.

''ಥಾಮಸ್ ಹಾರ್ಡಿ,'' ಎಂದಳು ಶಾರದಾಮಣಿ.

''ಓ! ಎಲ್ಲಿ ದೊರಕಿಸಿದಿರಿ ಇದನ್ನು! ಇದುವರೆಗೆ ಹಾರ್ಡಿಯ ಚಿತ್ರವನ್ನೇ ಕಂಡಿರಲಿಲ್ಲ ನಾನು!'' ಎಂದ ಚಂದ್ರಣ್ಣ.

''ನಮ್ಮ ಶಾರದಾದೇವಿ ಅಂದರೆ ಸಾಮಾನ್ಯರು ಅಂತ ತಿಳೀಬೇಡಿ ಚಂದ್ರಣ್ಣ. ಒಂದು ಕೆಲಸ ಮಾಡಬೇಕೆಂದು ಅವರ ಮನಸ್ಸಿನಲ್ಲಿ ಬಂದರೆ ಅದನ್ನು ಕೊನೆಗಾಣಿಸುವ ವರೆಗೂ ಬಿಡುವವರಲ್ಲ ಅವರು. ಇನ್ನು ಒಂದು ಚಿತ್ರ ದೊರಕಿಸುವುದು ಏನು ಮಹಾ!'' ಎಂದ ಶಿವಯೋಗಿ.

''ಹಿಂದೂಸ್ಥಾನದಲ್ಲಿ ಎಲ್ಲೂ ಸಿಕ್ಕಲಿಲ್ಲ ಈ ಫೋಟೋ. ಇಂಗ್ಲೆಂಡಿನಿಂದ ತರಿಸಿದೆ ಬಹಳ ಕಷ್ಟಪಟ್ಟು'' ಎಂದಳು ಶಾರದಾಮಣಿ.

''ಬಹಳ ಖರ್ಚಾಗಿರಬೇಕಲ್ಲ?''

''ಖರ್ಚಿಗೆ ನಾನೆಂದೂ ಲಕ್ಷ್ಯ ಕೊಡುವಾಕೆಯಲ್ಲ. ನಮ್ಮ ಸ್ನೇಹಿತರೊಬ್ಬರು ಇಂಗ್ಲೆಂಡಿಗೆ ಹೋಗಿದ್ದರು. ಅವರಿಗೆ ಪತ್ರ ಬರೆದು ತರಿಸಿಕೊಂಡೆ, ಅವರೂ ಬಹಳ ಕಷ್ಟಪಟ್ಟು ಇದನ್ನು ಸಂಪಾದಿಸಿದರಂತೆ. ಚಿತ್ರ ಕೈಗೆ ಬಂದಾಗ ನನಗೆಷ್ಟು ಆನಂದ ವಾಯಿತು ಅಂತೀರಿ! ಮೂರು ದಿನ ಊಟದ ಕಡೆಗೂ ಗಮನವಿರಲಿಲ್ಲ ನನಗೆ!''

ಹಾರ್ಡಿಯ ಭಾವಚಿತ್ರವಲ್ಲದೆ ಅಲ್ಲಿ ಶೆಲ್ಲಿ, ಬೈರನ್ ಕವಿಗಳ ಚಿತ್ರಗಳೂ ಇದ್ದುವು. ನಾಲ್ಕನೆಯದು ಶಾರದಾಮಣಿಯದೇ. ಲೇಖಿಕರಂಥ ಗಂಭೀರ ಮುದ್ರೆ ಯಲ್ಲಿ ಎಡಗೈಯನ್ನು ಗದ್ದಕ್ಕೆ ಆನಿಸಿಕೊಂಡು ಈ ಚಿತ್ರ ತೆಗೆಯಿಸಿದ್ದಳಾಕೆ. ಬರೆಯಲು ಕುಳಿತುಕೊಳ್ಳುವ ಮೇಜಿನ ಎದುರಿಗೆ ಆ ಚಿತ್ರವನ್ನು ಹಾಕಲಾಗಿದ್ದಿತು. ಅಂದವಾದ ಮರದಿಂದ ಮಾಡಿದ ಹೊಳೆ ಹೊಳೆಯುವ ಮೇಜು. ವಿದೇಶದಿಂದ ತರಿಸಿದಂತಿದ್ದ ಕುರ್ಚಿ. ಅದೊಂದೇ ಒಂದು ಕುರ್ಚಿಯಿದ್ದುದು ಆ ಕೊಠಡಿಯಲ್ಲಿ. ಬರೆಯುವ ಕೊಠಡಿಯಲ್ಲಿ ಬೇರೇನನ್ನೂ ಸೇರಿಸಕೂಡದೆಂಬ ಯೋಚನೆಯಿಂದಲೇ ಅಲ್ಲಿ ಒಂದೇ ಕುರ್ಚಿಯನ್ನಿಟ್ಟುದು ಸ್ಪಷ್ಟವಾಗಿದ್ದಿತು.

''ಇದು ನಾನು ಬರೆಯುವ ಕೋಣೆ – ನಾನು ಏನನ್ನಾದರೂ ಬರೆಯ ಬೇಕಾದರೆ ಯಾವ ಗದ್ದಲವೂ ಇರಕೂಡದು. ಕಿವಿಗೆ ಏನಾದರೂ ಸದ್ದು ಸೇರಿದ ರಾಯಿತು – ಪೆನ್ನು ಮುಂದಕ್ಕೋಡುವುದೇ ಇಲ್ಲ. ಅದಕ್ಕೆ ಕಾರಣವೇನೊ ತಿಳಿಯದು. ನಮ್ಮ ಮೇಷ್ಟರಿಗೆ ಕೇಳಿದಾಗ ಅವರು ಕವಿ, ಕತೆಗಾರರಿಗೆಲ್ಲ ಹಾಗೇ ಆಗುತ್ತದೆ, ಅದೊಂದು ತರಹ ಸ್ವಭಾವ – ಎಂದರು. ಬರೀ ಸದ್ದು ಮಾತ್ರವಲ್ಲ, ಬರೆಯುವ ಕೊಠಡಿಯಲ್ಲಿ ಅನವಶ್ಯಕ ಸಾಮಾನುಗಳಿದ್ದರೂ ಸಹ ನನಗೆ ತೊಂದರೆಯೇ. ಕಾಗದ, ಪೆನ್ನು, ಈ ನಾಲ್ಕು ಚಿತ್ರಗಳು, ಇದೊಂದು ಮೇಜು, ಒಂದು ಕುರ್ಚಿ – ಜೊತೆಗೆ ಬೆಳಕು... ಇವಿಷ್ಟು ಇದ್ದರೆ ಕೈ ಸರಾಗವಾಗಿ ಓಡುತ್ತೆ. ಬೇರೆ ಯಾರಾದರೂ ಬಂದರೆ, ಬೇರಾವ ವಸ್ತುವಾದರೂ ಎದುರಿಗೆ ಕಾಣಿಸಿದರೆ ಹೋಯಿತು – ಎಲ್ಲವೂ ಮಟಾಮಾಯ...''

ಚಂದ್ರಣ್ಣನಿಗೆ ವಿಸ್ಮಯವಾಗದಿರಲಿಲ್ಲ. ಇಂಥ ಏಕಾಂತ, ಇಂಥ ಶಾಂತತೆ, ಇಂಥ ಅನುಕೂಲತೆ ಆತನಿಗೆಂದೂ ದೊರೆತಿರಲಿಲ್ಲ. ಅವುಗಳ ಅಗತ್ಯವಿದೆಯೆಂದೂ ಆತನಿಗನ್ನಿಸಿರಲಿಲ್ಲ. ಜನರ ಕೂಗು, ಗಲಭೆಗಳಿಂದ ನಿನದಿಸುತ್ತಿದ್ದ ಮನೆಗಳಲ್ಲಿ ಕುಳಿತು ತಾನು ಕತೆ ಬರೆದುದುಂಟು. ಮುದ್ರಣ ಯಂತ್ರಗಳ ಗಡಗಡಾಟ, ಮುದ್ರಣ

ಕೆಲಸಗಾರರ ಕೂಗಾಟಗಳ ಮಧ್ಯ ಲೇಖನಿ ಬರೆದುದುಂಟು. ಪರದೇಶಿ ಪಾರ್ಕಿನಲ್ಲಿ ಕಳ್ಳೇಕಾಯಿ ತಿನ್ನುವಾಗ, ರೈಲಿನಲ್ಲಿ ಮೂರನೆಯ ವರ್ಗದ ಜನಸಂದಣಿಯ ಮಧ್ಯೆ ಕುಳಿತು ಹೋಗುವಾಗ, ರೈಲ್ವೆ ನಿಲ್ದಾಣದಲ್ಲಿ ರಾತ್ರಿಯನ್ನು ಕಳೆಯುತ್ತಿದ್ದಾಗ, ಹೊಲಗಳಲ್ಲಿ, ಬಯಲುಗಳಲ್ಲಿ ಅಲೆಯುತ್ತಿದ್ದಾಗ ತಾನು ಬರವಣಿಗೆಯ ಕಾರ್ಯವನ್ನು ಕೊಂಚವೂ ತಡೆಯಿಲ್ಲದೆ ನಡೆಸಿಕೊಂಡು ಬಂದುದುಂಟು, ಶಾರದಾಮಣಿಯ ಮೇಷ್ಟರು ಹೇಳಿದ ಈ ಒಂದು ತರದ ಸ್ವಭಾವ! ಚಂದ್ರಣ್ಣನಿಗೆ ಕೊಂಚ ನಗು ಬಂದಿತು.

''ನೀವು ಬರೆಯುವ ಕೋಣೆಯೂ ಹೀಗೆಯೆ ಪ್ರಶಾಂತವಾಗಿರಬೇಕಲ್ಲವೆ?'' ಎಂದು ಕೇಳಿದಳು ಶಾರದಾಮಣಿ.

''ಇನ್ನೂ ನನ್ನದೆನ್ನುವ ಒಂದು ಕೋಣೆಯೇ ಸಿಕ್ಕಿಲ್ಲ'' ಎಂದು ನಕ್ಕು ನುಡಿದ ಚಂದ್ರಣ್ಣ.

''ಇಲ್ಲಿಯ ಕೋಣೆಯಲ್ಲ ನಾ ಹೇಳಿದ್ದು ಬೆಂಗಳೂರಿನಲ್ಲಿ?''

'ಕ್ರಾಂತಿ' ಪತ್ರಿಕೆಯ ಆ ಅಸ್ತವ್ಯಸ್ತ ಕಾರ್ಯಾಲಯದ ನೆನಪಾಗಿ ಚಂದ್ರಣ್ಣನಿಗೆ ಮತ್ತೆ ನಗು ಬಂದಿತು. ಆ ಹಳೆಯ ಮೇಜು, ಆ ಮುರುಕಲು ಕುರ್ಚಿ, ಅಲ್ಲಿನ ಧೂಳು, ಆ ಸಿಗರೇಟಿನ ಕೊರೆಗಳು, ಅಲ್ಲಿ ಇಲ್ಲಿ ಚೆಲ್ಲಾಪಿಲ್ಲಿಯಾಗಿ ಬಿದ್ದ ಕಾಗದ, ಪತ್ರಿಕೆ, ಪುಸ್ತಕ, ಫೈಲುಗಳು, ಗೋಡೆಗೆ ನೇತಾಡುವ ಅಂಗಿ ಪೈಜಾಮಗಳು! ಆಕೆಗೆ ಏನು ಉತ್ತರವೀಯಬೇಕೆಂಬುದೇ ಆತನಿಗೆ ಹೊಳೆಯದಾಯಿತು. ಶಿವಯೋಗಿಯೆ ಮಾತನಾಡಿದ :

''ಕ್ರಾಂತಿ ಪತ್ರಿಕೆಯ ಕಾರ್ಯಾಲಯ ಅಂದರೆ ಅದಕ್ಕೆ ಅನುರೂಪವಾಗೇ ಇರಬೇಕಲ್ಲವೆ? ಕ್ರಾಂತಿಯಿದ್ದ ಹಾಗೇ ಇತ್ತು ಅದೂ!''

''ಅಂದರೆ?''

''ಅವರ್ಣನೀಯ. ಕೊಠಡಿ ಇದ್ದುದು ಸಾರ್ವಜನಿಕ ರಸ್ತೆಯಲ್ಲಿ, ಬರು ಹೋಗುವವರ ಗದ್ದಲ, ಸೈಕಲ್ಲು ಟಾಂಗಾ ಮೋಟಾರುಗಳ ಸಪ್ಪಳ... ನೀವೇನಾದರೂ ಅಂಥ ಕೊಠಡಿಯಲ್ಲಿರಬೇಕಾಗಿ ಬಂದಿದ್ದರೆ ದೇವರೇ ಕಾಪಾಡಬೇಕಾಗುತ್ತಿತ್ತು. ಮಕ್ಕಳು ಕಿರಿಚಿಕೊಂಡರೆ, ನಾಯಿ ಬೊಗುಳಿದರೆ ಸಹ ನಿಮಗೆ ತೊಂದರೆಯಾಗುತ್ತೆ. ನಾಲ್ಕೈದು ತಿಂಗಳುಗಳಿಗೆ ಹಿಂದೆ ಒಂದು ದೊಡ್ಡ ಚಳವಳಿಯನ್ನೆ ಎಬ್ಬಿಸಿಬಿಟ್ಟಿದ್ದಿರಲ್ಲ...''

''ಚಳವಳಿ?'' ಎಂದ ಚಂದ್ರಣ್ಣ.

ನಗುವ ಕಣ್ಣುಗಳಿಂದ ಶಾರದಾಮಣಿಯನ್ನು ನಿರುಕಿಸುತ್ತ ಶಿವಯೋಗಿ - ''ಚಳವಳಿ ಅಂದರೆ ಅಂಥಿಂಥ ಚಳವಳಿಯಲ್ಲ! ಊರನ್ನೆಲ್ಲ ನಡುಗಿಸಿಬಿಟ್ಟಿತು! ಅದೋ, ಆ ಕಂಪೌಂಡಿನಾಚೆ ಬಯಲು ಜಾಗ ಇದೆಯಲ್ಲ - ಅದು ನಗರಸಭೆಗೆ ಸೇರಿದ್ದು. ಗಿರಣಿಯ ಕೂಲಿಕಾರರು, ರೈತರು, ಇನ್ನು ಕೆಲವರು ಬಡವರು ಅಲ್ಲಿ ಗುಡಿಸಲು ಕಟ್ಟಿಕೊಂಡು ವಾಸಿಸುತ್ತಿದ್ದರು. ಅಶಿಕ್ಷಿತ ಜನ ಅಂದರೆ ಕೇಳಬೇಕೇ! ಬೆಳಗಿನಿಂದ ರಾತ್ರಿಯವರೆಗೆ ಗದ್ದಲವೋ ಗದ್ದಲ. ಮೆಲ್ಲಗಿನ ಧ್ವನಿಯಲ್ಲಾದರೂ ಗದ್ದಲ ಮಾಡುವರೇ ಅವರು! ಯಾರನ್ನಾದರೂ ಕರೆಯಬೇಕಾದರೆ ಊರಿಗೆಲ್ಲ ಕೇಳಿಸುವ ಹಾಗೆ ತಾರಸ್ವರದಲ್ಲಿ ಕೂಗುವವರು. ಅವರ ನಾಯಿ, ಮೇಕೆ, ಕುರಿ, ಕೋಳಿಗಳ ಕೂಗಾಟ ಬೇರೆ. ಬಿಟ್ಟುಬಿಡದೆ ಅಳುವ ಮಕ್ಕಳ ಕಾಟವೂ ಸರಿಯೆ. ಸಂಜೆಯಾಗುತ್ತಲೂ ಹೆಂಡ ಕುಡಿದು ಬಂದ ಗಂಡಸರು ಹೆಂಡರನ್ನು ಬಡಿಯುವುದು, ಅಶ್ಲೀಲವಾಗಿ ಬಯ್ಯುವುದು, ಅದಕ್ಕೆ ಅವರೂ ಅಷ್ಟೇ ಅಶ್ಲೀಲವಾಗಿ ಉತ್ತರ ಕೊಡುವುದು, ಮತ್ತೆ ಬಡಿತ, ಅಯ್ಯೋ ಎಂಬ ಭಯಂಕರ ಕೂಗು, ಯಾರಾದರೂ ಸತ್ತಾಗ ಅಳುವಂಥ ಅಳು... ಈ ಗದ್ದಲವನ್ನೆಲ್ಲ ಸಹಿಸಿ ಸಹಿಸಿ ಶಾರದಾದೇವಿಯವರಿಗೆ ಸಾಕಾಗಿ ಹೋಗಿ ಒಂದು ದಿನ ಗೂರ್ಖಾಗಳನ್ನು ಕಳಿಸಿ ಆ ಗುಡಿಸಲುಗಳನ್ನೆಲ್ಲ ಖಾಲಿ ಮಾಡಿಸಿಬಿಟ್ಟರು!''

''ಅವರು ಪ್ರತಿಭಟನೆ ಮಾಡಲಿಲ್ಲವೆ?''

''ಮಾಡದಿರುತ್ತಾರೆಯೆ? ಅತ್ತುಕೊಂಡರು, ಗೋಳಾಡಿದರು. ಕೊನೆಗೆ ಸತ್ಯಾಗ್ರಹ ಮಾಡುವುದಾಗಿಯೂ ಬೆದರಿಕೆ ಹಾಕಿದರು. ಯಾವುದಕ್ಕೂ ನಮ್ಮ ದೇವಿಯವರು ಸೊಪ್ಪು ಹಾಕಲಿಲ್ಲ. ನಗರ ಸಭಾಧ್ಯಕ್ಷರು, ಪೋಲೀಸು ಅಧಿಕಾರಿಗಳನ್ನು ಕರೆಯಿಸಿ ಕಂಪ್ಲೇಂಟ್ ಕೊಟ್ಟರು. ಅವರು ಪೋಲಿಸಿನವರೊಂದಿಗೆ ಬಂದು ಎಲ್ಲರನ್ನೂ ಒತ್ತಾಯದಿಂದ ಓಡಿಸಿಬಿಟ್ಟರು. ಊರಿಗೆ ಊರೆಲ್ಲ ಈ ಅದ್ಭುತ ದೃಶ್ಯವನ್ನು ನೋಡಲು ನೆರೆದಿತ್ತು. ನಮ್ಮ ದೇವಿಯರು ಕೊನೆಗೂ ಜಯಶಾಲಿಗಳಾದರು!''

''ಆ ಜನಗಳೆಲ್ಲ ಎಲ್ಲಿಗೆ ಹೋದರು?''

''ಎಲ್ಲಿಗೊ ದೇವರೇ ಬಲ್ಲ, ಗುಡಿಸಲು ಹಾಕಿಕೊಂಡಿರುವವರಿಗೆ ಯಾವ ಸ್ಥಳವಾದರೇನಂತೆ! ಅವರಿಗೆ ಆ ಜೀವನ ಮೈಗೂಡಿಹೋಗಿರುತ್ತದೆ. ಶ್ರೀಮಂತರಿಗೇ ತೊಂದರೆಗಳು ಹೆಚ್ಚು. ಇಂಥದೊಂದು ಅರಮನೆಯಂಥ ಮನೆ ಕಟ್ಟಿಸಿರುವಾಗ, ಇಂಥ

ಸುಂದರ ಕೊಠಡಿಗಳಲ್ಲಿ ವಾಸವಾಗಿರುವಾಗ, ಅದರಲ್ಲೂ ಕವಯತ್ರಿಯೊಬ್ಬರು ಬರವಣಿಗೆಯಲ್ಲಿ ತೊಡಗಿರುವಾಗ ಸುತ್ತುಮುತ್ತಲಿನ ವಾತಾವರಣವೂ ಅದಕ್ಕೆ ಸರಿಯಾಗಿಯೆ ಇರಬೇಕಲ್ಲವೇ?''

ಉತ್ತರವೇನೊ ಸಿದ್ಧವಾಗಿದ್ದಿತು ಚಂದ್ರಣ್ಣ ಮನಸ್ಸಿನಲ್ಲಿ, ಆದರೆ ಅದು ಹೊರ ಬೀಳಲಿಲ್ಲ.

''ಬರೆಯುವ ಕೋಣೆಯನ್ನು ನೋಡಿಯಾಯಿತಲ್ಲ, ಬನ್ನಿ, ನನ್ನ ಪುಸ್ತಕಾಲಯ ವನ್ನು ತೋರಿಸುತ್ತೇನೆ,'' ಎಂದು ಶಾರದಾಮಣಿ ಎದುರಿಗಿದ್ದ ಬಾಗಿಲನ್ನು ತೆರೆದಳು.

ಕೂಡ್ರುವ ಕೊಠಡಿ, ಬರೆಯುವ ಕೊಠಡಿಗಳಿಗಿಂತ ದೊಡ್ಡದಾಗಿತ್ತು ಈ ಕೊಠಡಿ. ಗೋಡೆಗಳಿಗೆ ಪಟಗಳಾವುವೂ ಇರಲಿಲ್ಲ. ಬಾಗಿಲುಗಳ ಹತ್ತಿರದ ಸ್ಥಳ ವನ್ನುಳಿದು ಮಿಕ್ಕ ಕಡೆಗಳಲ್ಲೆಲ್ಲ ಸುಂದರವಾದ ಕಪಾಟುಗಳನ್ನು ಸಾಲಾಗಿ ಇರಿಸಿ ಅವುಗಳಲ್ಲಿ ಪುಸ್ತಕಗಳನ್ನು ಜೋಡಿಸಿ ಓರಣವಾಗಿ ಇಡಲಾಗಿದ್ದಿತು. ಕನ್ನಡ ಪುಸ್ತಕ ಗಳಿಗಾಗಿ ಮೂರು ಕಪಾಟು; ಇಂಗ್ಲೀಷು ಪುಸ್ತಕಗಳಿಗಾಗಿ ಆರು, ಕತೆ, ಕಾದಂಬರಿ, ಕವಿತೆ, ನಾಟಕ ಎಂದು ನಾಲ್ಕು ವಿಭಾಗಗಳನ್ನು ಮಾಡಲಾಗಿದ್ದಿತು. ಈ ಪುಸ್ತಕಾಲಯ ಕ್ಕಾಗಿಯೆ ತೀರ ಕಡಿಮೆಯೆಂದರೂ ಏಳೆಂಟು ಸಾವಿರ ರೂಪಾಯಿ ಖರ್ಚು ಮಾಡಿದಂತೆ ತೋರುತ್ತಿದ್ದಿತು. ಇಂಗ್ಲೆಂಡ್ ಅಮೇರಿಕಗಳಲ್ಲಿ ಪ್ರಕಟವಾದ ಬೆಲೆಬಾಳುವ ಪುಸ್ತಕಗಳನ್ನೆಲ್ಲ ಅಲ್ಲಿ ಶೇಖರಿಸಲಾಗಿದ್ದಿತು.

ಕಪಾಟುಗಳಿಗಿದ್ದ ಕನ್ನಡಿಯ ಬಾಗಿಲುಗಳನ್ನು ತೆಗೆದು ಶಾರದಾಮಣಿ ಪುಸ್ತಕ ಗಳನ್ನು ತೋರಿಸುತ್ತಿದ್ದಳು. ಸೆಟ್ಟರ ಕೊಠಡಿಯಲ್ಲಿ ಆಕೆ ಹೇಳಿದ್ದ ಎಲ್ಲ ಲೇಖಕರ ಪುಸ್ತಕ ಗಳೂ ಅಲ್ಲಿದ್ದುದು ಮಾತ್ರವಲ್ಲ; ಚಂದ್ರಣ್ಣ ಇದುವರೆಗೂ ಕೇಳಿ ಅರಿಯದಿದ್ದ ಅನೇಕ ಲೇಖಕರ ಕೃತಿಗಳೂ ಇದ್ದುವು. ಅವುಗಳನ್ನೆಲ್ಲ ನೋಡುತ್ತ ಹೋದ ಹಾಗೆ ಆತನಿಗೆ ತನ್ನ ನಲವತ್ತು ಐವತ್ತು ಪುಸ್ತಕಗಳ ಅಲ್ಪ ಸಂಗ್ರಹದ ನೆನಪಾಗಿ ಮತ್ತೆ ನಗು ಬಂದಿತು – ವಿಷಾದಪೂರ್ಣ ನಗು! ಪುಸ್ತಕಗಳನ್ನು ಕೊಂಡು ಸಂಗ್ರಹಿಸಬೇಕೆಂಬ ಬಯಕೆಯೇನೊ ಆತನಿಗಿದ್ದಿತಾದರೂ ಅದಕ್ಕೆ ಅಗತ್ಯವಾದ ಹಣವೇ ಆತನಲ್ಲಿರಲಿಲ್ಲ. ಆತನ ಹತ್ತಿರ ಇದ್ದ ಆ ಕೆಲವು ಪುಸ್ತಕಗಳೂ ಮೂಲಬೆಲೆ ಕೊಟ್ಟು ಕೊಂಡವುಗಳಲ್ಲ. ಅಂಥ ಶಕ್ತಿ ಆತನಿಗಿರಲಿಲ್ಲ. ಸಿಟಿ ಮಾರ್ಕೆಟ್ಟಿನ ಹಳೆಯ ಪುಸ್ತಕಗಳ ಅಂಗಡಿಗಳಲ್ಲಿ, ಮೆಜೆಸ್ಟಿಕ್ ಚೌಕದ ಬಳಿ ಕಾಲುದಾರಿಯ ಮೇಲೆ ಹಳೆಯ ಪುಸ್ತಕ ಮಾರುವವರಲ್ಲಿ ನಾಲ್ಕಾಣೆ, ಮೂರಾಣೆಗಳಿಗೊಂದರಂತೆ ಕೊಂಡ ಪುಸ್ತಕಗಳವು! ಸಾರ್ವಜನಿಕ ಪುಸ್ತಕಾಲಯದಿಂದ

ಗ್ರಂಥಗಳನ್ನು ತಂದು ಆತ ಓದಿಯೇ ತೃಪ್ತಿಪಡಬೇಕಾಗಿದ್ದಿತು. ಶಾರದಾಮಣಿಯ ಈ ಸ್ವಂತ ಗ್ರಂಥಾಗಾರ...!

''ಕರ್ನಾಟಕದ ಯಾವ ಲೇಖಕರ ಬಳಿ ಇಂಥ ಲೈಬ್ರೆರಿ ಇದೆ?'' ಅದು ಶಿವಯೋಗಿಯ ಮಾತು.

''ನಮ್ಮ ಲೇಖಕರೆಲ್ಲ ಬಡವರು. ಇಷ್ಟೊಂದು ಪುಸ್ತಕ ಕೊಳ್ಳಲು ಅವರಿಗೆ ಹಣವೆಲ್ಲಿಂದ ಬರಬೇಕು?'' ಎಂದ ಚಂದ್ರಣ್ಣ.

''ಅದೂ ಒಂದು ಕಾರಣವೆ. ಮುಖ್ಯವಾಗಿ ಯಾವುದಕ್ಕೂ ಪಡೆದು ಬಂದಿರಬೇಕು. ಇನ್ನು ಏಳೆಂಟು ವರ್ಷಗಳಲ್ಲಿ ನಮ್ಮ ದೇವಿಯವರು ಏನಾಗಬಹುದು, ಏನಾಗಲಿಕ್ಕಿಲ್ಲ! ಸರೋಜಿನಿ ನಾಯ್ಡುರವರನ್ನು ಮೀರಿಸುವ ಕವಯಿತ್ರಿಯಾದಾರು!'' ಎಂದ ಶಿವಯೋಗಿ.

ಶಾರದಾಮಣಿ ಆತನ ಕಡೆಗೆ ತಿರುಗಿ ಮೋಹಕ ನಗೆ ಹೂವೊಂದನ್ನು ಚಿಮ್ಮಿಸಿದಳು. ''ಬನ್ನಿ, ನನ್ನ ಕಲಾಭವನವನ್ನು ತೋರಿಸುತ್ತೇನೆ.''

ಪುಸ್ತಕಾಲಯದ ಪಕ್ಕದಲ್ಲಿದ್ದ ಕೊಠಡಿಯೆ ಆಕೆಯ 'ಕಲಾಭವನ'ವಾಗಿದ್ದಿತು. ಗೋಡೆಗಳ ಮೇಲೆ ಐವತ್ತು ಅರವತ್ತು ಕಲಾಕೃತಿಗಳನ್ನು ನೇತುಹಾಕಲಾಗಿದ್ದಿತು. ರಜಪೂತ, ಮೊಗಲ್, ಬಂಗಾಲೀ ಸಂಪ್ರದಾಯಗಳ ಬಗೆ ಬಗೆಯ ಬಣ್ಣ ಬಣ್ಣಗಳ ಚಿತ್ರಗಳು, ವಿದೇಶೀಯ ಕಲಾವಿದರ ಕೃತಿಗಳನ್ನು ಅಲ್ಲಿ ಕಾಣಬಹುದಾಗಿದ್ದಿತು. ಅಲ್ಲಲ್ಲಿ ಇರಿಸಿದ ಪುಟ್ಟ ಮೇಜುಗಳ ಮೇಲೆ ಯೇಸುಕ್ರಿಸ್ತ, ಬುದ್ಧದೇವ, ಠಾಕೂರ್, ಸರೋಜಿನಿ ದೇವಿ, ಬರ್ನಾರ್ಡ್ ಷಾ ಮೊದಲಾದವರ ಮೂರ್ತಿಗಳೂ ಕಾಣಿಸುತ್ತಿದ್ದುವು. ಕೊಠಡಿ ಯಲ್ಲೆಲ್ಲ ಎದ್ದು ಕಾಣಿಸುವ ಹಾಗೆ ಶಾರದಾಮಣಿಯ ದೊಡ್ಡ ತೈಲಚಿತ್ರವೊಂದು ಕಿಟಕಿಯ ಬೆಳಕಿಗೆದುರಾಗಿ ನೇತಾಡುತ್ತಿತ್ತು.

ಆ ಚಿತ್ರವನ್ನು ಬೆರಗುಗೊಂಡ ಕಂಗಳಿಂದ ನಿಟ್ಟಿಸುತ್ತ ಶಿವಯೋಗಿ – ''ಎಷ್ಟು ಸುಂದರವಾಗಿ ಬಂದಿದೆ ಈ ಚಿತ್ರ! ನೀವು ಹೇಗಿದ್ದೀರೋ ಹಾಗೇ ಇದೆ. ಯಾರು ತೆಗೆದರು ಇದನ್ನು?'' ಎಂದ.

''ಶಾಂತಿನಿಕೇತನದ ಪ್ರಖ್ಯಾತ ಕಲಾವಿದರೊಬ್ಬರು.''

''ಇಲ್ಲಿಗೇ ಬಂದಿದ್ದರೇ?''

''ಹೌದು. ಈ ಕೆಲಸಕ್ಕಾಗಿಯೆ ಅವರನ್ನು ಕರೆಯಿಸಿದ್ದೆ.''

''ಅಬ್ಬ! ಇದೊಂದೇ ಚಿತ್ರಕ್ಕೆ ಸಾವಿರಾರು ರೂಪಾಯಿ ಖರ್ಚಾಗಿರ ಬಹುದಲ್ಲ!'' ಎಂದ ಶಿವಯೋಗಿ.

''ಒಂದು ತಿಂಗಳವರೆಗೂ ಅವರು ಈ ಕೆಲಸದಲ್ಲಿ ತೊಡಗಿದ್ದರು – ಇಲ್ಲಿ – ಇದೇ ಕೊಠಡಿಯಲ್ಲಿ ಕುಳಿತುಕೊಂಡು. ಚಿತ್ರಕ್ಕಾಗಿ ಒಂದು ಸಾವಿರ ರೂಪಾಯಿ ಕೊಟ್ಟು ಒಂದು ತಿಂಗಳಿನ ಖರ್ಚಿಗೆಂದು ಮತ್ತೊಂದು ಸಾವಿರ ಕೊಡಲಾಯಿತು. ಆದರೂ ಅವರ ಶ್ರಮಕ್ಕೆ ಅವರ ಕಲೆಗೆ ಅದು ಹೆಚ್ಚೇನೂ ಅಲ್ಲವೆಂದೇ ನನಗೆನ್ನಿಸುತ್ತೆ...''

ಕಲಾಭವನದ ಒಂದು ಮೂಲೆಯಲ್ಲಿ ದೊಡ್ಡದೊಂದು ಹಾರ್ಮೋನಿಯಂ. ಒಂದು ದುಂಡುಮೇಜಿನ ಮೇಲೆ ರೇಷ್ಮೆಯ ಬಟ್ಟೆಯಲ್ಲಿ ಮರೆಯಾಗಿ ಕುಳಿತ ವೀಣೆ. ಎರಡು ಪಿಟೀಲುಗಳನ್ನು ಅಕ್ಕಪಕ್ಕದಲ್ಲಿ ಒಂದು ಮೇಜಿನ ಮೇಲಿರಿಸಲಾಗಿದ್ದಿತು.

''ದಿನವೂ ಒಂದು ಗಂಟೆಯ ಕಾಲ ಇಲ್ಲಿ ಕುಳಿತು ಸರಸ್ವತಿಯ ಆರಾಧನೆ ಯಲ್ಲಿ ತೊಡಗಿರುತ್ತೇನೆ ನಾನು. ಪುಸ್ತಕಾಲಯ, ಬರೆಯುವ ಕೊಠಡಿಗಳಲ್ಲಿ ಬೇಸರ ವಾದರೆ ಇಲ್ಲಿಗೆ ಬಂದು ಒಂದೆರಡು ನಿಮಿಷ ಪಿಟೀಲು ನುಡಿಸುತ್ತಿದ್ದರೆ ಎಲ್ಲವೂ ಮಾಯವಾಗುತ್ತೆ'' ಎಂದಳಾಕೆ.

ಒಂದು ಮೂಲೆಯಲ್ಲಿದ್ದ ಇನ್ನೊಂದು ಕಪಾಟಿನ ಬಾಗಿಲು ತೆರೆದು ಆಕೆ ''ಇದೋ ನೋಡಿ. ಈ ಷೂಗಳ ಅಂಗಡಿ!'' ಎಂದಳು. ಚಂದ್ರಣ್ಣ ಅತ್ತ ದೃಷ್ಟಿ ಹೊರಳಿಸಿದ. ಬೇರೆ ಬೇರೆ ಫ್ಯಾಷನ್ನಿನ, ಬಗೆಬಗೆಯ ಬಣ್ಣಗಳ ನೂರಾರು ಪಾದರಕ್ಷೆಗಳ ಪ್ರದರ್ಶನವೇ ಅಲ್ಲಿ ನಡೆದಿದ್ದ ಹಾಗೆ ತೋರುತ್ತಿದ್ದಿತು.

ಹಠಾತ್ತಾಗಿ ಆತನ ದೃಷ್ಟಿ ತಾನು ಆಗ ಹಾಕಿಕೊಂಡಿದ್ದ ಆ ಹಳೆಯ ಪಂಚಾಬಿಗಳ ಕಡೆಗೆ ಹೊರಳಿತು. ಒಂದು ವರ್ಷವಾಗಿದ್ದಿತು ಅವುಗಳನ್ನಾತ ಕೊಂಡು. ನಡುವೆ ಎರಡು ಸಲ ಮೋಟಾರು ಟಯರಿನ ತುಂಡುಗಳಿಂದ ರಿಪೇರಿ ಮಾಡಿಸಿ ಯಾಗಿದ್ದಿತು. ಏಳೆಂಟು ತಿಂಗಳುಗಳಿಂದ ಪಾಲಿಶ್ ಕಾಣದೆ ಬಣ್ಣಗೆಟ್ಟು ವಿದ್ರೂಪ ವಾಗಿದ್ದ ಆ ಷೂಗಳು!

ಈ ಷೂಗಳ ರಾಶಿ...!

''ಹೊತ್ತಾಗುತ್ತ ಬಂತು ಶಿವಯೋಗಿ ಹೊರಡೋಣ,'' ಎಂದ ಚಂದ್ರಣ್ಣ.

ಹುಬ್ಬುಗಳನ್ನು ಮೇಲಕ್ಕೇರಿಸಿ ಶಾರದಾಮಣಿ ಚಂದ್ರಣ್ಣನನ್ನು ದಿಟ್ಟಿಸುತ್ತ – ''ಅದೇನ್ರೀ ಅಷ್ಟು ಅವಸರ? ನನ್ನ ಕತೆ ನೋಡುವುದಿಲ್ಲವೇ?'' ಎಂದು ನುಡಿದು ಅವರನ್ನು ಬರೆಯುವ ಕೊಠಡಿಗೆ ಕರೆದು ತಂದು, ಕಪಾಟಿನೊಳಗಿಂದ ಒಂದು ಸಣ್ಣ ಪುಸ್ತಕವನ್ನು ಹೊರದೆಗೆದು ಅವರ ಎದುರಿಗಿಟ್ಟು – ''ಆಗಾಗ ನಾ ಬರೆದ ಕತೆಗಳಿವು. ನಮ್ಮ ಕನ್ನಡ ಮೇಷ್ಟ್ರು ಓದಿ ನೋಡಿ ಮೆಚ್ಚಿಕೊಂಡಿದ್ದಾರೆ. ಇದರಲ್ಲಿನ ಒಂದು ಕತೆಗೆ ಬಹುಮಾನವೂ ಬಂದಿದೆ,'' ಎಂದಳು.

''ಹೀಗೇನು? ಯಾವ ಕತೆಗೆ?'' ಎಂದ ಶಿವಯೋಗಿ.

ಶಾರದಾಮಣಿ ಮೇಜಿನ ಮೇಲೆ ಬಾಗಿ ಪುಸ್ತಕದ ಪುಟಗಳನ್ನು ಮಗುಚಿ ಹಾಕಿ – ''ಇದೋ ನೋಡಿ, ಇದೇ ಕತೆ. ಇದಕ್ಕೆ ಮೊದಲನೆಯ ಬಹುಮಾನ ಬಂತು,'' ಎಂದಳು.

ಚಂದ್ರಣ್ಣ ಆ ಪುಟದ ಮೇಲೆ ದೃಷ್ಟಿಯನ್ನೋಡಿಸಿದ. ಆ ಕತೆಯ ಹೆಸರು ''ವಿರಹೀ ಜೀವನ.''

''ವಿರಹೀ ಜೀವನ! ಹೆಸರಂತೂ ತುಂಬ ಸೊಗಸಾಗಿದೆ ಕಣ್ರೀ! ಇದೇನು ಪ್ರಣಯಕತೆಯೋ?'' ಎಂದ ಶಿವಯೋಗಿ. ಆತನ ತುಟಿಗಳ ಮೇಲೆ ತುಂಟನಗೆ ಮಿನುಗುತ್ತಿತ್ತು.

ಶಾರದಾಮಣಿ ಕೊಂಚವೂ ಸಂಕೋಚಪಟ್ಟುಕೊಳ್ಳದೆ ನುಡಿದಳು : ''ಹೆಸರೇ ಹೇಳುವುದಿಲ್ಲವೆ ಅದೆಂಥ ಕತೆಯೆಂಬುದನ್ನು!''

''ಲೈಲಾ ಮಜನೂ ಪ್ರಣಯದ ಧಾಟಿಯದೋ?''

''ಆ ಹಳೆಯ ಕಾಲದ ಕಟ್ಟುಕತೆಗಳ ಮಾತೇಕೆ ಬಿಡಿ. ಈಗ – ಈ ಆಧುನಿಕ ಕಾಲದಲ್ಲಿ ವಿರಹದುರಿಯಿಂದ ಬಳಲುವವರಿಗೇನು ಕೊರತೆ? ಅಂಥ ಒಂದು ಜೀವದ ಚಿತ್ರ ಈ ಕತೆಯಲ್ಲಿದೆ...''

''ಅದೆಲ್ಲ ನಿಮಗೆ ಹೇಗೆ ಗೊತ್ತಾಯಿತು? ಕತೆ ಬರೆಯಲು ಸ್ವಾನುಭವ ಬೇಕಾಗುತ್ತದೆ ತಾನೆ?'' ಎಂದು ದಿಟ್ಟತನದಿಂದ ಕೇಳಿದ ಶಿವಯೋಗಿ.

ಮಾತು ಬಲು ದೂರಹೋಯಿತು; ಶಾರದಾಗೆ ಕೋಪ ಬಂದರೂ ಬಂದೀತು ಎಂದುಕೊಂಡ ಚಂದ್ರಣ್ಣ. ಆದರೆ ಹಾಗೇನೂ ಆಗಲಿಲ್ಲ. ಬಲಗೈಯ ಬೆರಳುಗಳಿಂದ

ಶಿವಯೋಗಿಯ ಬೆನ್ನಿಗೆ ಒಂದು ಮೆಲ್ಲಗಿನ ಏಟು ಹಾಕಿ ಶಾರದಾಮಣಿ – ''ಇದೆಲ್ಲ ಎಂಥ ಅನುಭವ? ವಯಸ್ಸಿನಲ್ಲಿ ಸ್ವಾಭಾವಿಕವಾಗಿಯೆ ಇಂಥ ಅನುಭವವಾಗುತ್ತೆ ತಾನೆ,'' ಎಂದಳು.

ಶಾರದಾಮಣಿ ವ್ಯಕ್ತಗೊಳಿಸಿದ ಸಲುಗೆಯಿಂದ ಉತ್ತೇಜಿತನಾದ ಶಿವಯೋಗಿ ಆಕೆಯನ್ನು ನಟ್ಟ ದಿಟ್ಟಿಯಿಂದ ನಿರುಕಿಸುತ್ತ – ''ಹಾಗಾದರೆ ಈ ಕತೆಯೆಂದರೆ ತಮ್ಮ ಆತ್ಮಚರಿತ್ರೆಯೆಂದು ತಿಳಿಯಬಹುದೋ?'' ಎಂದ.

''ತನ್ನ ಕಾವ್ಯದ ಹಿನ್ನೆಲೆಯಲ್ಲಿ ಕವಿಯಿರುತ್ತಾನೆ ಎಂಬ ಇಂಗ್ಲೀಷು ವಾಕ್ಯವೊಂದಿದೆ, ನಿಮಗೆ ತಿಳಿಯದೇ?'' ಎಂದಳಾಕೆ.

''ಇಲ್ಲ, ನಾನು ನಿಮ್ಮಷ್ಟು ಇಂಗ್ಲೀಷು ಓದಿದವನಲ್ಲ.''

''ಆಗಲಿ, ನಾವೀಗ ಹೊರಡುತ್ತೇವೆ,'' ಎಂದು ಚಂದ್ರಣ್ಣ ಎದ್ದು ನಿಂತ.

''ನೋಡಿದಿರಾ ನನ್ನ ಕತೆಗಳನ್ನ?''

''ನಿಧಾನವಾಗಿ ನೋಡುತ್ತೇನೆ.''

''ಆಗಲಿ, ಹಾಗೇ ಮಾಡಿ. ಬೇಗ ಓದಿ ನೋಡಿ ನಿಮ್ಮ ಅಭಿಪ್ರಾಯ ತಿಳಿಸಿ. ಈ ಕತೆಗಳನ್ನೆಲ್ಲ ಸೇರಿಸಿ ಒಂದು ಪುಸ್ತಕ ಮಾಡಬೇಕೆಂದು ನಮ್ಮ ಮೇಷ್ಟ್ರು ಸೂಚಿಸಿದ್ದಾರೆ. ನೀವೇ ಒಂದು ಮುನ್ನುಡಿ ಬರೆಯುವಂತಾದರಂತೂ ಬಹಳ ಉತ್ತಮವೇ.''

''ಆಗಲಿ ಯೋಚಿಸೋಣ.''

''ಹೇಗೂ ನಮ್ಮದೇ ಒಂದು ಪತ್ರಿಕೆಯಾಗುತ್ತದಲ್ಲ ಇನ್ನು ಮೇಲೆ. ವಾರ ವಾರ ಒಂದೊಂದು ಕತೆ ಅಚ್ಚುಹಾಕಬಹುದಲ್ಲವೆ?'' ಎಂದಳಾಕೆ.

''ಮೊದಲು ಪತ್ರಿಕೆಯಾದರೂ ಹೊರಡಲಿ.''

''ಎಷ್ಟು ಹೊತ್ತಿನ ಕೆಲಸ ಅದು. ನಮ್ಮ ತಂದೆಯವರು ಮನಸ್ಸು ಮಾಡಿದರೆ ಒಂದೆರಡು ವಾರಗಳಲ್ಲೇ ಪತ್ರಿಕೆ ಹೊರಟೀತು!''

''ಅವರಿಗೆ ಅಸಾಧ್ಯವಾದುದೇನಿದೆ ಬಿಡಿ! ಅದರಲ್ಲೂ ಸ್ವತಃ ನೀವೇ ಈ ಬಗ್ಗೆ ಆಸಕ್ತಿ ವಹಿಸಿದರಂತೂ ಇನ್ನೂ ಬೇಗ ಮುಗಿದೀತು ಕೆಲಸ,'' ಎಂದ ಶಿವಯೋಗಿ.

''ಬಲು ದಿನಗಳಿಂದ ನಾನೂ ಯೋಚಿಸುತ್ತಿದ್ದೇನೆ. ನನ್ನ ಕೈಯಲ್ಲೊಂದು

ಪತ್ರಿಕೆಯಿದ್ದರೆ ಎಷ್ಟು ಚೆನ್ನಾದೀತು ಅಂತ! ಈ ಕನ್ನಡ ಪತ್ರಿಕೆಗಳ ಸಂಪಾದಕರ ಸಹವಾಸ ಬಹಳ ಕಷ್ಟ ನಮ್ಮಂಥ ಉದಯೋನ್ಮುಖ ಲೇಖಕರನ್ನು ಇವರು ಕಣ್ಣುಬಿಟ್ಟು ನೋಡುವುದೇ ಇಲ್ಲ. ಆ 'ಬದುಕು' ಎಂಬ ಮಾಸಪತ್ರಿಕೆಗೆ ನಾನು ನಾಲ್ಕಾರು ಕತೆ ಕಳಿಸಿದ್ದೆ. ಪ್ರಕಟಿಸುವ ಮಾತು ಹಾಗಿರಲಿ, ಕತೆ ಮುಟ್ಟಿದ್ದಕ್ಕೆ ಒಂದು ಕಾರ್ಡು ಸಹ ಬರೆಯಲಿಲ್ಲ, ಎಲ್ಲರೂ ಹೀಗೇ..." ಎಂದು ನುಡಿದು ಆಕೆ ಚಂದ್ರಣ್ಣನ ಕಡೆಗೆ ಅರ್ಥಪೂರ್ಣ ಕಟಾಕ್ಷವೊಂದನ್ನೆಸೆದಳು. ಚಂದ್ರಣ್ಣನಿಗೆ ಅದರ ಅರ್ಥ ವಾಯಿತಾದರೂ ಉತ್ತರವೀಯಲು ಆತನಿಗೆ ಮನಸ್ಸು ಬರಲಿಲ್ಲ. ಆ ಪುಸ್ತಕವನ್ನು ಕೈಯಲ್ಲಿ ಹಿಡಿದುಕೊಂಡು ಆತ ಕೊಠಡಿಯಿಂದ ಹೊರಟ.

"ನೀವು ಇಳಿದುಕೊಂಡಿರೋದೆಲ್ಲಿ?" ಎಂದಳು ಶಾರದಾಮಣಿ.

"ಕೊಟ್ರಪ್ಪ ಅಂತ ನಮ್ಮ ಏಜೆಂಟ್ ಇದಾನೆ, ಆತನ ಕೊಠಡಿಯಲ್ಲಿ."

"ಅಲ್ಲೇಕೆ ತೊಂದರೆಪಟ್ಟುಕೊಳ್ಳುತ್ತೀರ? ಬೇರೆ ವ್ಯವಸ್ಥೆಯಾಗುವವರೆಗೂ ನಮ್ಮ ಮನೆಗೇ ಬಂದು ಇದ್ದುಬಿಡಿ. ಕೆಳಗೆ ಅತಿಥಿಗೃಹವಿದೆ. ಅಲ್ಲಿ ನಿಮಗೆಲ್ಲ ಅನುಕೂಲ ಮಾಡಿಕೊಡುತ್ತೇನೆ. ನೀವು ಬಂದರೆ ಅಪ್ಪ ಅಣ್ಣ ಇಬ್ಬರಿಗೂ ತುಂಬ ಸಂತೋಷ ವಾಗುವುದು."

ಉತ್ತರ ಕೊಡಲರಿಯದ ಚಂದ್ರಣ್ಣ ತಬ್ಬಿಬ್ಬಾಗಿ – "ಏನೂ ಬೇಡಿ, ಥ್ಯಾಂಕ್ಸ್ – ಅಲ್ಲಿಯೆ ಎಲ್ಲವೂ ಅನುಕೂಲವಾಗಿದೆ," ಎಂದ.

ಸೆಟ್ಟರನ್ನು ಬೀಳ್ಕೊಂಡು ಬರಲು ಅವರ ಕೊಠಡಿಗೆ ಹೋದಾಗ ಅವರೂ ಅದೇ ಮಾತನ್ನೇ ಆಡಿದರು. "ಇದು ನಿಮ್ಮದೇ ಮನೆಯೆಂದು ತಿಳಿದುಕೊಳ್ಳಿ. ಬೇಕಾದಷ್ಟು ವಿಶಾಲವಾದ ಸ್ಥಳವಿದೆ. ಯಾವ ಸಂಕೋಚಕ್ಕೂ ಎಡೆಗೊಡದೆ ಸುಖವಾಗಿ ಇದ್ದು ಬಿಡಿ."

"ಥ್ಯಾಂಕ್ಸ್ ನಿಮ್ಮ ಮನಸ್ಸು ತುಂಬ ದೊಡ್ಡದು," ಎಂದು ಮಾತು ಹಾರಿಸಿ ಬಿಟ್ಟು ಚಂದ್ರಣ್ಣ ಹೊರಡಲಣಿಯಾದ. ಆತನ ಕೈ ಕುಲುಕುತ್ತ ಸೆಟ್ಟರು – "ನಿಮ್ಮ ಚಿತ್ತಕ್ಕೆ ಬಂದ ಹಾಗೆ ಮಾಡಿ. ಕಂಪನಿಯ ಕೆಲಸವಂತೂ ಇಂದಿನಿಂದಲೇ ಆರಂಭವಾಗಲಿದೆ. ಹಣಕ್ಕಾಗಿ ಯೋಚಿಸಬೇಕಾಗಿಲ್ಲ, ಈ ಬಗ್ಗೆ ತಮ್ಮಣ್ಣನವರ ಹತ್ತಿರ ನಾನೆಲ್ಲವನ್ನೂ ಹೇಳಿದ್ದೇನೆ," ಎಂದರು.

"ಆಗಲಿ, ಬರುತ್ತೇನೆ," ಎಂದು ಹೇಳಿ ಚಂದ್ರಣ್ಣ ಹೊರಡುತ್ತಿದ್ದ ಹಾಗೆ

ಸೆಟ್ಟರು ಆತನನ್ನು ತಡೆದು – ''ಕೊಂಚ ತಾಳಿ ಸದಾಶಿವಪ್ಪ ಕಾರು ತೆಗೆದುಕೊಂಡು ಬಂದು ನಿಮ್ಮನ್ನು ಬಿಟ್ಟು ಬರುತ್ತಾನೆ,'' ಎಂದರು.

ಚಂದ್ರಣ್ಣ ದಿಗಿಲುಗೊಂಡು – ''ಕಾರು?'' ಎಂದ.

''ಮನೆಗೆ ಬಂದ ಮಾನ್ಯ ಅತಿಥಿಗಳನ್ನು – ಅದರಲ್ಲೂ ಕೇವಲ ನಮ್ಮವರಾದ ನಿಮ್ಮನ್ನು ಹಾಗೇ ಕಾಲುನಡಿಗೆಯಲ್ಲಿ ಕಳಿಸುವುದುಂಟೇ?''

''ಕಾರಿನಲ್ಲಿ ಕುಳಿತು ನನಗೆ ಅಭ್ಯಾಸವಿಲ್ಲ, ನಡೆದುಕೊಂಡೇ ಹೋಗುತ್ತೇನೆ,'' ಎಂದು ಸಂಕೋಚದಿಂದ ನುಡಿದ ಚಂದ್ರಣ್ಣ.

ಶಾರದಾಮಣಿ ಗಟ್ಟಿಯಾಗಿ ನಗುತ್ತ – ''ಕರೆದು ಹೆಣ್ಣು ಕೊಟ್ಟರೆ ಅಳಿಯನಿಗೆ ಮಲರೋಗ ಬಂದಿತಂತೆ. ಲೇಖಕರ ಜಾತಿಯೇ ಹೀಗೆ ವಿಚಿತ್ರವೊ ಏನೊ! ಅಭ್ಯಾಸ ವಿಲ್ಲವಾದರೆ ಇನ್ನು ಮುಂದೆ ಮಾಡಿಕೊಳ್ಳಬೇಕು. ಇನ್ನು ಮೇಲೆ ನೀವು ಕಾರಿನಲ್ಲೇ ಓಡಾಡಬೇಕು,'' ಎಂದಳು.

ಅವಳ ಮಾತಿನಿಂದಾಗಿ ಸೆಟ್ಟರು, ಶಿವಯೋಗಿ ಇಬ್ಬರೂ ನಗತೊಡಗಿದರು. ಚಂದ್ರಣ್ಣ ಸಂಕೋಚದಿಂದ ತಲೆ ಬಾಗಿಸಿ ನಿಂತುಕೊಂಡ. ಅಷ್ಟರಲ್ಲಿ ಸದಾಶಿವಪ್ಪ ಕಾರು ತೆಗೆದುಕೊಂಡು ಬಂದುದರಿಂದ ಆ ಪ್ರಸಂಗ ಅಲ್ಲಿಗೇ ಕೊನೆಗೊಂಡಿತು.

''ಬರ್ತೇನೆ ಶಾರದಾದೇವಿ!'' ಎಂದು ನುಡಿದು ಚಂದ್ರಣ್ಣ ತಂದೆ – ಮಗಳು ಇಬ್ಬರಿಗೂ ನಮಸ್ಕರಿಸಿ ವಾಹನವನ್ನೇರಿದ.

''ಬನ್ನಿ, ನಾಳೆ ನಿಮ್ಮ ಕೊಠಡಿಗೆ ಬರುತ್ತೇನೆ. ಅಷ್ಟರೊಳಗಾಗಿ ಕತೆಗಳನ್ನು ನೋಡಿ ಇಡಬೇಕು,'' ಎಂದಳಾಕೆ.

''ನಿಮಗೇಕೆ ವೃಥಾ ತೊಂದರೆ? ನಾನೇ ಬಂದು ಹೇಳುತ್ತೇನೆ,'' ಎಂದು ಗಾಬರಿಗೊಂಡು ನುಡಿದ ಚಂದ್ರಣ್ಣ.

''ತೊಂದರೆಯೇನು ಬಂತು? ಕಾಲೇಜಿನಿಂದ ಬರುವಾಗ ಹಾಗೇ ಹಾಯ್ದು ಬರುತ್ತೇನಂತೆ. ಸಾಯಂಕಾಲ ಕೊಠಡಿಯಲ್ಲೇ ಇರುತ್ತೀರಾ?''

''ಆಗಲಿ.''

ಕಾರು ಹೊರಟಿತು. ತುಂಬಾ ಠೀವಿಯಿಂದ ಅದನ್ನು ಅಲ್ಲಿ ಇಲ್ಲಿ ಸರಕ್ಕನೆ

ಹೊರಳಿಸಿ ಸದಾಶಿವಪ್ಪ ಮಹಾದ್ವಾರದಿಂದ ಕಾರನ್ನು ಹೊರಗೆ ಬೀದಿಗೆ ತಂದು ಒಮ್ಮಿಂದೊಮ್ಮೆಲೆ ಪೂರ್ಣವೇಗದಿಂದ ನಡೆಸತೊಡಗಿದ. ಜನ ಹೋಗುತ್ತಿತ್ತು, ಬರುತ್ತಿತ್ತು. ಜಟಕಾ ಗಾಡಿಗಳು ಓಡಿಯಾಡುತ್ತಿದ್ದುವು. ಎತ್ತಿನ ಬಂಡಿಗಳು ಮೆಲ್ಲ ಮೆಲ್ಲನೆ ಸಾಗಿದ್ದುವು. ತುಂಬಿದ ಬೀದಿಯಲ್ಲಿ ಸದಾಶಿವಪ್ಪ ಅಂಥ ವೇಗದಲ್ಲಿ ಮೋಟಾರು ನಡೆಸುವುದನ್ನು ಕಂಡು ಚಂದ್ರಣ್ಣನಿಗೆ ದಿಗಿಲಾಗದಿರಲಿಲ್ಲ. ಬೀದಿಯಲ್ಲಿ ಹೋಗಿ ಬರುವ ಜನ, ಗಾಡಿ ಯಾವುದನ್ನೂ ಗಣನೆಗೆ ತಂದುಕೊಳ್ಳದೆ ರಸ್ತೆಯೆಲ್ಲವೂ ತನಗಾಗಿಯೆ ಕಾದಿರಿಸಲ್ಪಟ್ಟಿದೆಯೆಂದು ನಂಬಿದನವನಂತೆ ಸದಾಶಿವಪ್ಪ ವರ್ತಿಸುತ್ತಿದ್ದ.

ನಾಲ್ಕು ರಸ್ತೆಗಳ ಕೂಟಸ್ಥಳವಾದ ಗಾಂಧೀ ಚೌಕದ ಹತ್ತಿರ ಕಾರು ಬಂದೊಡನೆ ಆತ ಅದನ್ನು ಬಲಗಡೆಗೆ ತಿರುಗಿಸುತ್ತಿದ್ದಾಗಲೂ ವೇಗವನ್ನು ತಗ್ಗಿಸಿರಲಿಲ್ಲ. ಅಪಘಾತವಾಗುವುದೊ ಏನೊ ಎಂದು ದಿಗಿಲುಗೊಂಡು ಕುಳಿತಿದ್ದ ಚಂದ್ರಣ್ಣ. ಆತನ ಆ ಶಂಕೆಯೂ ಹುಸಿ ಹೋಗಲಿಲ್ಲ. ಕಾರಿನ ಸಪ್ಪಳ ಕೇಳಿಸುತ್ತಲೂ ಪಾದಚಾರಿಗಳೆಲ್ಲ ಚಂಗನೆ ಹಾರಿ ನೆಗೆದು ಆಚೆಗೆ ಸರಿದರಾದರೂ ಕೈಯಲ್ಲೊಂದು ಕೋಲು ಹಿಡಿದು ಕೊಂಡು ನಿಧಾನವಾಗಿ ಹೆಜ್ಜೆ ಹಾಕುತ್ತ ಹೊರಟಿದ್ದ ವಯೋವೃದ್ಧೆಯೊಬ್ಬಳು ಅಷ್ಟು ತ್ವರೆಯಿಂದ ದೂರ ಸರಿಯಲು ಅಸಮರ್ಥಳಾದುದರಿಂದ ಕಾರಿಗೆ ಸಿಕ್ಕಿಬಿದ್ದಳು. ಒಡನೆಯೆ 'ಬ್ರೇಕ್' ಹಾಕಿ ಸದಾಶಿವಪ್ಪ ವಾಹನವನ್ನು ನಿಲ್ಲಿಸಿದರೂ ಮುದುಕಿ ಅಪಘಾತದಿಂದ ತಪ್ಪಿಸಿಕೊಳ್ಳಲಿಲ್ಲ. ಕಾರಿನ ಮುಂಭಾಗದಿಂದ ಆಕೆಯ ಹಣೆಗೆ ಬಲವಾದ ಏಟು ಬಿದ್ದಿತು. ರಕ್ತವೂ ಸುರಿಯತೊಡಗಿತು. ಆಕೆಯ ಬಲಗೈಯಲ್ಲಿದ್ದ ಕೋಲು, ಎಡಗಡೆಯ ಕಂಕುಳದಲ್ಲಿದ್ದ ಒಂದು ಪುಡಿಕೆ ದೂರ ಹಾರಿಬಿದ್ದುವು.

"ಈ ಪಾಪಿ ದರಿದ್ರರಿಗೆ ಇಂಥ ದೊಡ್ಡ ರಸ್ತೆಯೆಲ್ಲಾ ಬೇಕೆಂದು ತೋರುತ್ತೆ. ಪಕ್ಕದಲ್ಲಿ ಹಾಯ್ದು ಹೋದರೆ ಇವರಪ್ಪನ ಗಂಟೇನು ಹೋಗುವುದೊ!" ಎಂದು ಗೊಣಗಿಕೊಳ್ಳುತ್ತ ಸದಾಶಿವಪ್ಪ ಕಾರಿನಿಂದ ಕೆಳಕ್ಕಿಳಿದ. ಆತನಿಗಿಂತ ಮೊದಲೇ ಚಂದ್ರಣ್ಣ ಇಳಿದು ಆ ಮುದುಕಿಯ ಹತ್ತಿರ ಹೋಗಿ ಆಕೆಯನ್ನು ಮೇಲಕ್ಕೆಬ್ಬಿಸುತ್ತಿದ್ದ. ಅಷ್ಟು ಹೊತ್ತಿಗೆ ಅಲ್ಲೊಂದು ದೊಡ್ಡ ಗುಂಪೇ ಸೇರಿಕೊಂಡಿದ್ದಿತು. ಚೌಕದ ಹತ್ತಿರ ಬೀಡಿ ಸೇದುತ್ತ ನಿಂತಿದ್ದ ಪೋಲೀಸಿನವನೂ ಮೂಗಿನಿಂದ ಹೊಗೆ ಬಿಡುತ್ತ ಮೆಲ್ಲ ಮೆಲ್ಲನೆ ಹೆಜ್ಜೆಗಳನ್ನಿಡುತ್ತ ಬರುತ್ತಿದ್ದ.

"ಈ ಜನರಿಗೆ ಬೇರೆ ಏನೂ ಉದ್ಯೋಗವಿಲ್ಲವೆಂದು ತೋರುತ್ತೆ. ಸ್ವಲ್ಪ ಏನಾದರೂ ಆದರಾಯಿತು, ಕಾಗೆ ಮುಕುರಿದ ಹಾಗೆ ಮುಕುರುತ್ತಾರೆ. ಬನ್ನಿ ಚಂದ್ರಣ್ಣ

ನವರೆ, ಹೋಗೋಣ. ಆ ಮುದುಕಿಗೇನೂ ಧಾಡಿಯಾಗಿಲ್ಲ,'' ಎಂದು ನುಡಿದು ಸದಾಶಿವಪ್ಪ ಕಾರನ್ನೇರಿ ಕುಳಿತುಕೊಂಡ.

''ನಾನು ಇಲ್ಲೇ ಇಳಿಯುತ್ತೇನೆ. ನೀವು ನಡೆಯಿರಿ,'' ಎಂದ ಚಂದ್ರಣ್ಣ.

''ಇಲ್ಲೇಕೆ? ಬನ್ನಿ ಬನ್ನಿ, ಹೋಗೋಣ,'' ಎಂದ ಶಿವಯೋಗಿ.

''ನೀವು ನಡೆಯಿರಿ, ನಾನು ಬರುತ್ತೇನೆ,'' ಎಂದು ನುಡಿದು ಚಂದ್ರಣ್ಣ ಆ ಮುದುಕಿಯನ್ನು ಹತ್ತಿರದ ಅಂಗಡಿಯೊಂದಕ್ಕೆ ಕರೆದೊಯ್ದು ಅದರ ಮುಂಭಾಗದ ಕಟ್ಟೆಯ ಮೇಲೆ ಮಲಗಿಸಿದ. ಸುತ್ತಲೂ ಜನ ನೆರೆದು ಆಕೆಗಾದ ಗಾಯವನ್ನು ನಿರೀಕ್ಷಿಸುತ್ತಿದ್ದಿತು.

''ಯಾರದೋ ಅದು ಕಾರು? ಹೀಗೆಲ್ಲಾ ಯದ್ವಾ ತದ್ವಾ ಕಾರು ಹೊಡೆಯೋದೆಂದರೇನು? ಎಂಥ ಸೊಕ್ಕು ಅವರಿಗೆ!'' ಎಂದೊಬ್ಬರು ಉದ್ವೇಗದಿಂದ ನುಡಿದರು.

''ಬಿಡಬೇಡ್ರಿ ಆ ಮೋಟಾರನ್ನು, ಹಿಡಿದು ನಿಲ್ಲಿಸಿರಿ,'' ಎಂದು ಇನ್ನೊಬ್ಬರು ದನಿಗೂಡಿಸಿದರು.

''ಅವರನ್ನೇನು ಹಿಡೀತೀರಿ ಬಿಡಿರಪ್ಪ, ಅವರನ್ನಾರು ಕೇಳಬೇಕು? ಸದಾಶಿವಪ್ಪ ನವರ ಕಾರು ಅದು!'' ಎಂದರೊಬ್ಬರು.

''ಯಾವ ಸದಾಶಿವಪ್ಪ? ಸಂಗಪ್ಪ ಸೆಟ್ಟರ ಮಗನೋ?'' ಎಂದೊಬ್ಬರು ಕೇಳಿದರು.

''ಹೌದು, ಅವರನ್ನಾರಪ್ಪ ಮಾತನಾಡಿಸುವವರು? ಹಣದ ಸೊಕ್ಕು ತಲೆಗೇರಿ ಅವರ ಕಣ್ಣು ನೆತ್ತಿಗೆ ಬಂದಿವೆ. ಪೋಲೀಸಿನವರಂತೂ ಅವರ ಜೇಬಿನಲ್ಲಿ ಬಿದ್ದಿದ್ದಾರೆ,'' ಎಂದು ಒಬ್ಬರು ಉತ್ತರಿಸಿದರು.

''ಈ ಪೋಲೀಸಿನವರಿರೋದು ಶ್ರೀಮಂತರನ್ನು ಕಾಪಾಡುವುದಕ್ಕೇ ಏನು? ಹಿಡಿಯಿರಿ ಆ ಕಾರನ್ನು!'' ಎಂದೊಬ್ಬರು ಕೂಗಿದರು. ಅದರೊಂದಿಗೆ ಜನ ಜಂಗುಳಿ ಕಾರಿನತ್ತ ನುಗ್ಗಿ ಅದನ್ನು ಸುತ್ತುವರಿಯಿತು.

''ಏನು ಸಾಹುಕಾರರೆ, ಮನ ಬಂದ ಹಾಗೆ ಕಾರು ನಡೆಸಲು ಇದೇನು ನಿಮ್ಮ ಆಟದ ಬೈಲು ಅಂತ ತಿಳಿದಿದ್ದೀರಾ? ಇಳೀರಿ ಕೆಳಗೆ. ಆ ಮುದುಕಿಯನ್ನು ಆಸ್ಪತ್ರೆಗೆ

ಕಳಿಸಿ,'' ಎಂದೊಬ್ಬರು ಕೂಗಿದರು.

''ಏನ್ರೀ ಪೋಲೀಸರೆ, ನೀವೂ ಸುಮ್ಮನೆ ನಿಂತಿದ್ದೀರಲ್ಲ? ಇವರನ್ನೇಕೆ ಸ್ಟೇಷನ್ನಿಗೆ ಕರೆದೊಯ್ಯಬಾರದು?'' ಎಂದೊಬ್ಬರು ನುಡಿದರು.

''ಹಾಗೆಲ್ಲ ಮಾಡಲು ಬರೋದಿಲ್ಲ. ಇವರ ಹೆಸರು, ಕಾರಿನ ನಂಬರು ಎಲ್ಲ ಬರೆದುಕೊಂಡಾಗಿದೆ. ದಾರಿ ಬಿಡಿರಿ ಅವರಿಗೆ!'' ಎಂದು ಆ ಪೋಲೀಸಿನವನು ಗದರಿಸಿದ.

''ಈ ಮುದುಕಿಯನ್ನಿವರು ಆಸ್ಪತ್ರೆಗೆ ಕಳಿಸಿ ಆಕೆಯ ಉಪಚಾರಕ್ಕೆ ವ್ಯವಸ್ಥೆ ಮಾಡುವವರೆಗೂ ಅವರನ್ನು ಬಿಡುವುದಿಲ್ಲ ನಾವು,'' ಎಂದು ಒಬ್ಬರು ಘೋಷಿಸಿದರು. ಅದರೊಂದಿಗೆ ಜನರೆಲ್ಲ ಕಾರಿನ ಮುಂಭಾಗದಲ್ಲಿ ಅಡ್ಡವಾಗಿ ನಿಂತರು. ಶಿವಯೋಗಿ ಕಕ್ಕಾಬಿಕ್ಕಿಯಾಗಿ ಕಣ್ಣು ಕಣ್ಣು ಬಿಡುತ್ತ ಕುಳಿತಿದ್ದ ಸದಾಶಿವಪ್ಪನಿಗೂ ಭಯ ಹುಟ್ಟಿದಂತೆ ತೋರುತ್ತಿದ್ದಿತು. ಏನು ಮಾಡಬೇಕೆಂಬುದು ಹೊಳೆಯದೆ ಪೊಲೀಸಿನವ ಬೀಡಿಯ ಕೊನೆಯನ್ನು ಕಚ್ಚುತ್ತ ನಿಂತುಕೊಂಡಿದ್ದ. ಅಷ್ಟರಲ್ಲಿ ಪೋಲೀಸ್ ಅಧಿಕಾರಿಯೊಬ್ಬರು ಬೈಸಿಕಲ್ ಮೇಲೆ ಬರುತ್ತಿದ್ದವರು ಈ ಗಲಭೆಯನ್ನು ಕಂಡು ಕೆಳಕ್ಕಿಳಿದು ಕಾರಿನ ಬಳಿ ಬಂದರು. ನಡೆದುದೆಲ್ಲವನ್ನು ತಿಳಿದುಕೊಂಡ ಮೇಲೆ ಅವರು ಸದಾಶಿವಪ್ಪನ ಹತ್ತಿರ ಬಂದು ಆತನ ಕೈಕುಲುಕಿ ಪಿಸುದನಿಯಲ್ಲಿ ಏನನ್ನೋ ಮಾತನಾಡಿದರು. ಸದಾಶಿವಪ್ಪನ ಕೈ ಆತನ ಜೇಬಿಗೆ ನುಗ್ಗಿ ಹೊರಗ್ಗೆ ಬಂದು ಅಧಿಕಾರಿಯ ಕೈಗೆ ಹಲವು ನೋಟುಗಳನ್ನಿಟ್ಟುದು ನೆರೆದವರಲ್ಲಿ ಕೆಲವರಿಗಾದರೂ ಸ್ಪಷ್ಟವಾಗಿ ಕಾಣಿಸಿತು.

ಮೀಸೆಯ ಮೇಲೆ ಬೆರಳುಗಳನ್ನಾಡಿಸುತ್ತ ಸದಾಶಿವಪ್ಪ ಯಂತ್ರವನ್ನು ಜೀವಿತಗೊಳಿಸಿದ. ಕಂಕುಳಲ್ಲಿದ್ದ ದಂಡವನ್ನು ಮೇಲಕ್ಕೆತ್ತಿ ಪೋಲೀಸು ಅಧಿಕಾರಿ ಜನದ ಗುಂಪಿಗೆ ನುಗ್ಗಿ ಅವರನ್ನೆಲ್ಲ ಚದುರಿಸಿ – ''ಇಂಥ ಸಂಭಾವಿತರ ಕಾರು ತಡೆದು ನಿಲ್ಲಿಸಿ ಗಲಭೆ ಮಾಡುತ್ತೀರಾ ಪುಂಡರೇ! ನಿಮ್ಮನ್ನೆಲ್ಲ ಜೈಲಿಗೆ ಹಾಕಿಸೇನು, ನಡೆಯಿರಿ!'' ಎಂದು ದರ್ಪದಿಂದ ಕೂಗಿದರು. ಅಷ್ಟು ಹೊತ್ತಿಗೆ ಕಾರೂ ಹೊರಟಿತು. ಅಧಿಕಾರಿ ಸೆಟೆದು ನಿಂತು ಸದಾಶಿವಪ್ಪನಿಗೆ ಸಲಾಮು ಹೊಡೆದು ತಮ್ಮ ಬೈಸಿಕಲ್ ಹತ್ತಿ ಹೊರಟು ನಡೆದರು. ಅಂಗಡಿಯ ಕಟ್ಟೆಯ ಮೇಲೆ ತೀರ ಕಷ್ಟದಿಂದ ಉಸಿರಾಡಿಸುತ್ತ ಬಿದ್ದುಕೊಂಡಿದ್ದ ಆ ಬಡ ಮುದುಕಿಯ ಕಡೆಗೆ ಅವರು ಒಂದು ಸಲವೂ ಹೊರಳಿ ನೋಡಲಿಲ್ಲ. ಆಕಸ್ಮಾತ್ತಾಗಿ ಜೇಬಿಗೆ ಬಿದ್ದ ಹಣ ಅವರನ್ನು ಆನಂದದಿಂದ

ಮೈಮರೆಯಿಸಿದ್ದಿತು. ಕೊಂಚ ದೂರ ಹೋದ ಬಳಿಕ ಆ ಪೋಲೀಸನನ್ನು ಹತ್ತಿರ ಕರೆದು ಆತನಿಗೆ ಎರಡು ರೂಪಾಯಿಗಳನ್ನು ಕೊಟ್ಟು – "ಮಜಾ ಮಾಡಿಕೋ ಹೋಗು," ಎಂದು ನಗುತ್ತ ನುಡಿದು ಹೊರಟುಬಿಟ್ಟರು.

## ೧೨

ಆ ಮುದುಕಿಗೆ ಅರವತ್ತಕ್ಕಿಂತಲೂ ಹೆಚ್ಚು ವಯಸ್ಸಾಗಿರಬಹುದು. ಆಕೆಯ ತಲೆಗೂದಲುಗಳೆಲ್ಲ ಬೆಳ್ಳಿಯ ಬಣ್ಣಕ್ಕೆ ತಿರುಗಿದ್ದುವು – ವೃದ್ಧಾಪ್ಯದ ಗೆರೆಗಳಿಂದಾಗಿ ಮುಖವೆಲ್ಲ ವಿಕೃತವಾಗಿತ್ತು. ಉಟ್ಟುಕೊಂಡಿದ್ದ ಒರಟು ಬಟ್ಟೆಯ ಸೀರೆ ಹಲವಾರು ಕಡೆಗಳಲ್ಲಿ ಹರಿದುಹೋಗಿತ್ತು. ತೊಟ್ಟುಕೊಂಡಿದ್ದ ಕುಪ್ಪುಸದ ತೋಳುಗಳೂ ಹರಿದು ಛಿದ್ರಗಳನ್ನು ತೋರಿಸುತ್ತಿದ್ದುವು. ಆಕೆಯ ಹಣೆಯ ಮೇಲಾದ ಗಾಯದಿಂದ ಸುರಿದ ನೆತ್ತರು ಮೂಗಿನಿಂದ ಇಳಿದು ಬಾಯ ಮೇಲೆ ಹರಿದು ಕತ್ತಿನ ಮೇಲೆ ಚೆಲ್ಲಿತ್ತು.

ತನ್ನ ಕರವಸ್ತ್ರದಿಂದ ಆ ರಕ್ತವನ್ನೊರಸಿ ಚಂದ್ರಣ್ಣ ಮುದುಕಿಗೆ ಗಾಳಿ ಹಾಕ ತೊಡಗಿದ. ಹತ್ತಿರದಲ್ಲಿದ್ದ ಚಹದಂಗಡಿಯಿಂದ ಯಾರೋ ಒಬ್ಬರು ಒಂದು ಲೋಟ ನೀರು ತಂದುಕೊಟ್ಟರು. ಕರವಸ್ತ್ರವನ್ನು ನೀರಿನಲ್ಲಿ ಮುಳುಗಿಸಿ ಗಾಯವನ್ನೂ ರಕ್ತವನ್ನೂ ತೊಳೆದು ಹಾಕಿದ. ಆ ವಸ್ತ್ರವನ್ನೇ ಹರಿದು ಗಾಯಕ್ಕೆ ಪಟ್ಟಿ ಕಟ್ಟಿದುದೂ ಆಯಿತು. ಅಷ್ಟರಲ್ಲಿ ಮುದುಕಿ ಚೇತರಿಸಿಕೊಂಡು ಕಣ್ಣುಬಿಟ್ಟು ನೋಡಿತು. ತಾನು ಎಂಥ ಸ್ಥಿತಿ ಯಲ್ಲಿ, ಎಲ್ಲಿ ಬಿದ್ದುಕೊಂಡಿದ್ದೇನೆಂಬುದು ಮೊದಲು ಅರ್ಥವಾಗಲಿಲ್ಲ. ಒಂದೆರಡು ಕ್ಷಣ ಕಳೆದಾಗ ಎಲ್ಲವೂ ನೆನಪಿಗೆ ಬಂದಿತು. ಚೌಕದಲ್ಲಿ ಹಾಯ್ದು ತಾನು ಹೊರಟಿದ್ದಾಗ ಹಿಂದಿನಿಂದ ಯಮದೂತನಂತೆ ಬಂದೆರಗಿದ ಆ ಭಾರಿ ಮೋಟರು ಕಾರು... ತಾನು ಆಕಸ್ಮಾತ್ತಾಗಿ ನೆಲಕ್ಕುರುಳಿದುದು... ಕಣ್ಣಿಗೆ ಕತ್ತಲೆ ಕವಿದುದು... ಮುದುಕಿ ಚೇತರಿಸಿ ಕೊಂಡು ನಿಧಾನವಾಗಿ ಮೇಲಕ್ಕೆದ್ದಳು. ಉರುಳಿ ಹೋಗಿದ್ದ ಸೆರಗನ್ನು ತಲೆಯ ಮೇಲಕ್ಕೆಳೆದುಕೊಂಡು ನೆರೆದಿದ್ದ ಜನರನ್ನೂ, ಹತ್ತಿರ ಕುಳಿತು ಕರುಣಾಮಯ ದೃಷ್ಟಿಯಿಂದ ತನ್ನನ್ನು ನಿಟ್ಟಿಸುತ್ತಿದ್ದ ಆ ಯುವಕನನ್ನೂ ನೋಡಿದಳು. ಹಠಾತ್ತಾಗಿ ಆಕೆಗೆ ಯಾವುದೊ ವಸ್ತುವೊಂದರ ನೆನಪಾಗಿ – "ನನ್ನ ನೂಲು.. ನನ್ನ ನೂಲಿನ ಲಡಿಗಳು... ಎಲ್ಲಿ ಬಿದ್ದವೊ ದೇವರೆ!" ಎಂದು ಕೂಗಿಕೊಂಡಳು.

"ನೂಲಿನ ಲಡಿ ತೆಗೆದುಕೊಂಡು ಬರ್ತಿದ್ದೆಯೇನಮ್ಮ?" ಎಂದು ಕೇಳಿದ ಚಂದ್ರಣ್ಣ.

"ಹೌದು ಕಣಪ್ಪ ಅವನ್ನು ಕೊಟ್ಟು ರೊಕ್ಕ ತರೋದಕ್ಕ ಖಾದೀ ಅಂಗಡಿಗೆ ಹೊರಟಿದ್ದೆ. ಅಷ್ಟರಾಗ ಈ ಕುತ್ತು ಬಂತು. ಒಂದು ವಾರ ಎಲ್ಲಾ ಕೂತು ನೂತಿದ್ದೆನಪ್ಪ ಮೂರು ರೂಪಾಯಿಯ ಲಡಿ ಅವು ಎಲ್ಲಿ ಹೋದವೊ! ಶಿವನೆ, ಮುಂದೇನು ಗತಿ? ಅಯ್ಯೋ ನನ್ನ ಸೋಮಣ್ಣ! ಅಯ್ಯೋ ನನ್ನ ರತ್ನವ್ವ! ಇನ್ನು ಹ್ಯಾಂಗ ಮಾಡೋದು?" ಎಂದು ನುಡಿದು ಆಕೆ ಮೇಲಕ್ಕೇಳತೊಡಗಿದಳು.

"ನೀನೇನೂ ಚಿಂತೆ ಮಾಡಬೇಡಮ್ಮ, ನಾನು ಹುಡುಕುತ್ತೇನೆ ನಿಲ್ಲು" ಎಂದು ನುಡಿದು ಚಂದ್ರಣ್ಣ ಕಟ್ಟೆಯನ್ನು ಬಿಟ್ಟು ಬೀದಿಗೆ ಬಂದು ಅಪಘಾತ ಸಂಭವಿಸಿದ ಸ್ಥಳಕ್ಕೆ ಹೋಗಿ ಸುತ್ತುಮುತ್ತಲು ಶೋಧಿಸಿ ನೋಡಿದ. ಬೀದಿಯ ಎಡಗಡೆಗಿದ್ದ ಚರಂಡಿಯಲ್ಲಿ ಆ ಮುದುಕಿಯ ಕೋಲು ಬಿದ್ದುಕೊಂಡಿದ್ದುದು ಕಂಡು ಬಂದಿತು. ಅದಕ್ಕೆ ಕೊಂಚ ದೂರದಲ್ಲಿ, ಚರಂಡಿಯ ಹೊಲಸು ನೀರಿನಲ್ಲಿ ನೂಲಿನ ಲಡಿಗಳು ಚೆಲ್ಲಾಪಿಲ್ಲಿಯಾಗಿ ಹರಡಿದ್ದುದು ಕಾಣಿಸಿತು.

ಆ ಲಡಿಗಳನ್ನೂ ಕೋಲನ್ನೂ ಎತ್ತಿಕೊಂಡು ಚಂದ್ರಣ್ಣ ಮುದುಕಿಯ ಬಳಿ ಬಂದ. ಚರಂಡಿಯ ನೀರಿನಿಂದ ಬಣ್ಣಗೆಟ್ಟು ವಿದ್ರೂಪವಾಗಿದ್ದ ಆ ಲಡಿಗಳ ಕಡೆಗೆ ದೃಷ್ಟಿ ಹೋಗುತ್ತಲೂ ಮುದುಕಿಯ ಕಣ್ಣುಗಳಲ್ಲಿ ನೀರು ತುಂಬಿ ಬಂದಿತು. "ಇನ್ನು ಮ್ಯಾಲ ಅಂಗಡಿಯವರು ಅವನ್ನ ಕೊಳ್ಳುವ ಹಾಂಗಿಲ್ಲ, ಒಂದು ವಾರ ದುಡಿದದ್ದೆಲ್ಲ ವ್ಯರ್ಥ ವಾದ ಹಾಂಗಾಯ್ತು. ಇನ್ನು ಸೋಮಣ್ಣನ ಔಷಧ ಎಲ್ಲಿಂದ ಒಯ್ಯೋದು! ಅಯ್ಯೊ ನನ್ನ ಮಗನೆ, ಇನ್ನು ಹ್ಯಾಂಗ ಮಾಡಲಿ?" ಎಂದು ಆಕೆ ಬಿಕ್ಕತೊಡಗಿದಳು.

"ಯಾರಮ್ಮ ಸೋಮಣ್ಣ ಅಂದರೆ? ನಿನ್ನ ಮಗನೇ?" ಎಂದು ಕೇಳಿದ ಚಂದ್ರಣ್ಣ.

"ಹೌದಪ್ಪ ನನ್ನ ಮಗ ಒಬ್ಬನೇ ಒಬ್ಬ ಮಗ. ಕೈ ಕಳಕೊಂಡು ಹಾಸಿಗೆ ಹಿಡಿದು ಮಲಗಿದಾನೆ. ಮೂರು ತಿಂಗಳಾಯ್ತಪ್ಪ ತಮ್ಮ. ಅವನ ಸಂಕಟಾ ನೋಡಿದರ ಕರುಳು ಕುದಿದು ಹೊರಗೆ ಬರುತ್ತೈತಿ..."

"ಕೈ ಕಳಕೊಂಡಿದಾನೆ? ಅದೇಕಮ್ಮ?" ಎಂದು ವಿಸ್ಮಯದಿಂದ ಕೇಳಿದ ಚಂದ್ರಣ್ಣ.

"ಯಾಕಂತ ಏನು ಹೇಳಲಪ್ಪ? ಗಿರಣ್ಯಾಗ ಕೆಲಸಾ ಮಾಡುವಾಗ ಯಂತ್ರ ದಾಗ ಕೈಸಿಕ್ಕಿ ತುಂಡಾಗಿಹೋಯ್ತು. ನಮ್ಮ ಹಣೇಬರಹ. ಯಾರೇನು ಮಾಡಿಯಾರು ತಮ್ಮ! ಮೂರು ತಿಂಗಳಿಂದ ಒಂದು ತುತ್ತು ಅನ್ನ ಕೂಡಾ ಬಾಯಾಗ ಹಾಕಿಲ್ಲ. ಶಿವನೇ, ಇನ್ನೂ ಯಾಕೆ ಒಯ್ಯಲೊಲ್ಲೆ ಈ ಪಾಪಿಯನ್ನ! ಮೋಟರ ಕೆಳಗ ಸಿಕ್ಕರೂ ಸಾವು ಬರಲಿಲ್ಲಲ್ಲ ಈ ಹಾಳು ಮಂಡೆಗೆ!"

"ಹಾಗೆಲ್ಲ ಮಾತನಾಡಬಾರದು ತಾಯಿ. ಏಳು, ಮನೆಗೆ ಹೋಗೋಣ ಎಲ್ಲಿದೆ ನಿಮ್ಮ ಮನೆ?" ಎಂದ ಚಂದ್ರಣ್ಣ.

"ಬರಿಗೈಯಾಗ ಹ್ಯಾಂಗಾದರೂ ಹೋಗಲಪ್ಪ ಮನೆಗೆ! ಔಷಧ ಇಲ್ಲದೆ ಸಾಯುತಾ ಬಿದ್ದಾನೆ ನನ್ನ ಮಗ ಇವೊತ್ತಾದರೂ ಔಷಧ ಸಿಕ್ಕೀತು ಅನ್ನುವದರೊಳಗಾಗಿ ನನ್ನ ನೂಲು ಹೀಂಗ ಹಾಳಾಗಿಹೋಯ್ತು... ಆ ಶಿವನಿಗೂ ದಯ ಇಲ್ಲಪ್ಪ ನಮ್ಮಂಥ ಬಡವರ ಮ್ಯಾಲ; ಒಂದರ ಹಿಂದೊಂದು ಗೋಳು ತಂದು ಹಾಕತಾನೆ ನಮ್ಮ ತಲೆಯ ಮ್ಯಾಲ ಅಯ್ಯೋ..."

"ಅಳಬೇಡಮ್ಮ ಯಾವ ಔಷಧ ಅದು ಹೇಳು. ನಾನು ತೆಗೆದುಕೊಂಡು ಬರುತ್ತೇನೆ. ಡಾಕ್ಟರು ಚೀಟಿ ಕೊಟ್ಟಿರಬೇಕಲ್ಲ?"

ಮುದುಕಿಯ ಕಣ್ಣುಗ್ಗಳೆರಡೂ ಆಶ್ಚರ್ಯದಿಂದ ಅಗಲವಾದವು.

"ನೀನು? ನೀನು ತರುತ್ತೀಯಾ?" ಎಂದು ಕೇಳಿದಳಾಕೆ.

"ಹೌದು, ನಾನು ತರುತ್ತೇನೆ ಚೀಟಿ ಎಲ್ಲಿದೆ ಕೊಡಮ್ಮ."

ಕುಪ್ಪಸದೊಳಗಡೆ ಮಡಿಚಿ ಇಟ್ಟಿದ್ದ ಚೀಟಿಯನ್ನು ಹೊರದೆಗೆದು ಮುದುಕಿ ಅದನ್ನಾತನ ಕೈಗೆ ಕೊಡುತ್ತ – "ನೀನು ಯಾರೋ ಗೊತ್ತಿಲ್ಲಪ್ಪ, ದೇವರು ಬಂದಾಗ ಬಂದಿದ್ದೀ. ಶಿವನೆ, ತಪ್ಪಾಯಿತು–ನಿನಗ ದಯ ಇಲ್ಲ ಅಂತ ಬೈದುಕೊಂಡದ್ದು ತಪ್ಪಾಯಿತು. ನಿನ್ನ ದಯಾನೇ ಈ ತಮ್ಮಯ್ಯನ್ನ ಕಳಿಸಿರಬೇಕು!" ಎಂದಳು.

ಕೊಂಚ ದೂರದಲ್ಲಿದ್ದ ಔಷಧಿ ಅಂಗಡಿಗೆ ಹೋಗಿ ಚಂದ್ರಣ್ಣ ಆ ಔಷಧವನ್ನು ಕೊಂಡುಕೊಂಡು; ಬೀದಿಯಲ್ಲಿ ಹೊರಟಿದ್ದ ಕುದುರೆ ಗಾಡಿಯೊಂದನ್ನು ನಿಲ್ಲಿಸಿ ಮುದುಕಿಯಿದ್ದಲ್ಲಿಗೆ ಬಂದು ಆಕೆ ಬೇಡಬೇಡವೆನ್ನುತ್ತಿದ್ದರೂ ಬಲವಂತದಿಂದ ಗಾಡಿ ಯಲ್ಲಿ ಕೂಡ್ರಿಸಿ ತಾನು ಕುಳಿತುಕೊಂಡ.

"ಎಲ್ಲಿಗೆ ಸಾರ್?" ಎಂದ ಜಟಕಾಸಾಬಿ.

"ಎಲ್ಲಿಗಮ್ಮ?"

"ಕೂಲೀ ವಸ್ತಿಗೆ ಹೊಡಿಯಣ್ಣ."

"ಯಾವ ಕೂಲೀ ವಸ್ತಿ?"

"ಕರಿಯನ ಕೂಲೀ ವಸ್ತಿಯಪ್ಪ."

"ಆಚ್ಛಾ" ಎಂದು ಹೇಳಿ ಸಾಬಿ ಚಬಕವನ್ನೆತ್ತಿ ಚಟಕ್ ಎನ್ನಿಸಿ "ಹೇ, ಹೇ," ಎಂದು ರಾಗ ತೆಗೆಯುತ್ತ ಅಕಸ್ಮಾತ್ತಾಗಿ ಹಿಂದೆ ಹೊರಳಿ – "ಏನಾಯ್ತು ಸ್ವಾಮೀ ಈ ಅಮ್ಮನಿಗೆ?" ಎಂದು ಕೇಳಿದ.

ಅಪಘಾತದ ವಿಷಯವನ್ನೆಲ್ಲ ಸ್ವಲ್ಪದರಲ್ಲಿಯೇ ವಿವರಿಸಿ ಚಂದ್ರಣ್ಣ – "ಇಂಥ ಅಪಘಾತಗಳಿಗೆ ಜಟ್ಕಾಗಳು ಎಂದೂ ಸಿಗುವುದಿಲ್ಲವಷ್ಟೆ?" ಎಂದು ಕೇಳಿದ.

"ಎಷ್ಟೋ ಸಲ ಸಿಕ್ಕುವ ಪ್ರಸಂಗ ಬರ್ತಾವೆ ಸ್ವಾಮೀ. ಆದರೆ ನಮಗೆ ಇದರಲ್ಲೆಲ್ಲ ಬಹಳ ಅನುಭವವಿರುವುದರಿಂದ ತಪ್ಪಿಸಿಕೊಂಡು ಬಿಡ್ತೇವೆ. ಆ ಶ್ರೀಮಂತ ಸೂಳೇ ಮಕ್ಕಳಿಗೆ ಸೊಕ್ಕು ನೆತ್ತಿಗೇರಿ ಹೋಗಿದೆ. ಬಡಜನರು ಅವರ ಕಣ್ಣಿಗೆ ಕಾಣೋದೆ ಇಲ್ಲ. ಮೊನ್ನೆ ನಮ್ಮದೊಂದು ಹುಡುಗ ಹೀಗೇ ಮೋಟರಿಗೆ ಸಿಕ್ಕು ಒಂದು ಕಾಲನ್ನೇ ಕಳಕೊಂಡಿತು," ಎಂದು ಹೇಳಿ ಸಾಬಿ ಒಂದು ಸಲ ಥೊಕ್ಕೆಂದು ಉಗುಳಿದ.

"ಏನಾಯ್ತು ಆ ಹುಡುಗನಿಗೆ?"

"ಮನೆಯ ಮುಂದಿನ ಬೀದಿಯಲ್ಲಿ ಬಿದ್ದ ಸಗಣಿ ಹಿಡಿಯಾಕೆ ಹೊರಟಿತ್ತು ಹುಡುಗ. ಹತ್ತು ಹನ್ನೆರಡು ವರ್ಷ ವಯಸ್ಸಿನದು. ಎಡಗೈಯಾಗೆ ಬುಟ್ಟಿ ಹಿಡಕೊಂಡು ಹೋಗುತ್ತಿದ್ದಾಗ ಎದುರಿಂದ ಒಂದು ಮೋಟರು ಭರ‍್ರಂತ ಬಂದು ಡಿಕ್ಕಿ ಹೊಡೆಯಿತು. ಸ್ವಲ್ಪದರಲ್ಲಿ ಹುಡುಗನ ಜೀವ ಉಳೀತು. ಆದರೂ ಒಂದು ಕಾಲೇ ಹೋಯ್ತು. ಈ ಹರಾಮ್‌ಖೋರ್ ಶ್ರೀಮಂತರು..."

"ನಿನಗೇನಾಗಬೇಕು ಆ ಹುಡುಗ?"

"ನಮ್ಮ ಚಿಕ್ಕಪ್ಪನ ಮಗು. ಇನ್ನು ನಾಲ್ಕೈದು ವರ್ಷದಾಗ ಬೆಳೆದು ದೊಡ್ಡವನಾಗಿ ಕೆಲಸಕ್ಕೆ ಹೋಗುವುದರಲ್ಲಿದ್ದ ಹುಡುಗ ಕಾಲು ಕುಂಟಾಗಿ ನರಳುತ್ತ ಬಿದ್ದಿದ್ದಾನೆ

ಸ್ವಾಮೀ. ಪೋಲೀಸರಿಗೆ ಕಂಪ್ಲೇಂಟ್ ಕೊಟ್ಟರೆ ಯಾರೂ ದಾದು ಮಾಡಲಿಲ್ಲ. ಆ ಸಾಹುಕಾರನ ಮ್ಯಾಲ ಖಟ್ಲೆ ಹಾಕಲೇ ಇಲ್ಲ..''

''ಯಾವ ಸಾಹುಕಾರರು?''

''ಈ ಊರಿನ ದೊಡ್ಡ ವ್ಯಾಪಾರಸ್ಥರು ಅವರು. ಕಾಳಾ ಬಜಾರಿನಲ್ಲಿ ಲಕ್ಷಾಂತರ ಲಾಭ ಹೊಡೆದಿದ್ದಾರೆ...''

''ಹೇಗೆ?''

''ಲಢಾಯಿ ನಡೆದಾಗ ಬಟ್ಟೆಯ ಮೇಲೆ ಕಂಟ್ರೋಲ್ ಇತ್ತಲ್ಲ ಸ್ವಾಮೀ ಆಗ. ಒಂದಕ್ಕೆ ಇಪ್ಪತ್ತರಂತೆ ಮಾರಿ ಲಾಭ ಮಾಡಿಕೊಂಡರು. ಎಂಟಾಣೆಗೆ ಒಂದು ಗಜದಂತಿದ್ದ ಬಟ್ಟೆಯನ್ನು ನಾವೇ ಎರಡು ರೂಪಾಯಿ ಕೊಟ್ಟು ಕೊಳ್ಳಬೇಕಾಗಿತ್ತು ಈ ಸಾಹುಕಾರರ ಹತ್ತಿರವೇ. ಏನ್ಮಾಡೋದು ಸಾರ್! ಈಗ ಅಂಥವರದೇ ರಾಜ್ಯ. ನಮ್ಮಂತ ಗರೀಬರನ್ನ ಕೇಳುವವರಾರೂ ಇಲ್ಲ. ಈಗ ನೋಡಿ, ಈ ಅಮ್ಮ ಗಾಯಗೊಂಡು ಬಿದ್ದರೂ ಯಾರೂ ಬರಲಿಲ್ಲ, ಪೋಲೀಸರೂ ಸುಮ್ಮನಾದರು. ನಿಮ್ಮಂಥ ಜನ ಒಬ್ಬಿಬ್ಬರು ಇರುವರೆಂದು ನಮ್ಮಂಥವರು ಏನೋ ಸ್ವಲ್ಪ ಸಮಾಧಾನ ಹಚ್ಚಿಕೋ ಬೇಕು...'' ಎಂದು ನುಡಿದು ಆತ ಮತ್ತೆ ಚಬಕವನ್ನೆತ್ತಿ ಸದ್ದು ಮಾಡುತ್ತ ''ಹೇ! ಹೇ!'' ಎಂದು ಕೂಗಿದ.

ಡಾಂಬರಿನ ರಸ್ತೆಯನ್ನು ಹಿಂದೆ ಹಾಕಿ ಗಾಡಿ ಕಲ್ಲು ಮಣ್ಣಿನ ಬೀದಿಗೆ ಬಂದಿತ್ತು. ಕೊಂಚ ಏರು ಬಂದುದರಿಂದ ಕುದುರೆ ಮುಂದಕ್ಕೆ ನಡೆಯಲಾರದೆ ನಿಂತು ಕೊಂಡಿದ್ದಿತು. ಸಾಬಿ ಚಬಕದಿಂದ ಏಟು ಹಾಕಿದರೂ ಅದು ಮುಂದೆ ನಡೆಯಲಿಲ್ಲ. ಕತ್ತನ್ನು ಅತ್ತ ಇತ್ತ ಹೊರಳಿಸಿ ಹಿಂಗಾಲುಗಳನ್ನು ಮೇಲಕ್ಕೆತ್ತಿ ಝಾಡಿಸಿ ತನ್ನ ಅಸಮರ್ಥತೆ ಯನ್ನು ಸೂಚಿಸಿತು. ಆದರ ಬೆನ್ನು ತಟ್ಟಿ ಮೃದು ಸ್ವರದಲ್ಲಿ ಆದರ ಹೆಸರೆತ್ತಿ ಕೂಗಿ ಸಾಬಿ ಉಪಾಯದಿಂದ ಅದನ್ನು ಮುಂದಕ್ಕೊಯ್ಯಲು ಪ್ರಯತ್ನಿಸತೊಡಗಿದ.

''ಏನಯ್ಯ, ಕುದುರೆಗೇನಾಯಿತು?'' ಎಂದ ಚಂದ್ರಣ್ಣ.

''ಏನೂ ಇಲ್ಲ ಸ್ವಾಮೀ. ಬೆಳಗಿನಿಂದ ದುಡಿದು ದುಡಿದು ದಣಿದಿರ್ತದೆ ಪಾಪ. ಅದಕ್ಕೂ ವಯಸ್ಸಾಗುತ್ತ ಬಂತು. ಈಚೆಗೆ ಸಾಕಷ್ಟು ಹುರುಳೀನೂ ಸಿಕ್ಕುವ ಹಾಗಿಲ್ಲ. ಅದಕ್ಕೂ ವಿಪರೀತ ಬೆಲೆ. ಏನ್ಮಾಡೋದು, ಎಲ್ಲಾ ಕಷ್ಟ..''

''ಮುಂಜಾನೆಯಿಂದ ಸಂಜೆಯವರೆಗೆ ಎಷ್ಟು ರೂಪಾಯಿ ಸಂಪಾದನೆ ಯಾಗುತ್ತೆ ಸಾಹೇಬು?''

ಸಾಬಿ ಬೀಡಿಯೊಂದನ್ನು ಹತ್ತಿಸಿ ಹೊಗೆಯನ್ನೆಳೆಯುತ್ತ ಹೇಳತೊಡಗಿದ :

''ಎಂಥ ಸಂಪಾದನೆ ಬಿಡಿ ಸ್ವಾಮೀ! ಜಟ್ಕಾ ಗಾಡಿಗಳಿಗೆ ಸಂಪಾದನೆ ಅಂದರೆ ರೈಲ್ವೆ ಸ್ಟೇಷನ್ನುಗಳ ಹತ್ತಿರ ಆಗಬೇಕು. ಆದರೆ ಈ ಊರಿಗೆ ಸ್ಟೇಷನ್ನು ದೂರವಿಲ್ಲ, ನಾಲ್ಕು ಹೆಜ್ಜೆ ನಡೆದರೆ ಬಂದುಬಿಡುತ್ತೆ. ಹೆಚ್ಚು ಜನ ಗಾಡಿ ಮಾಡುವುದಿಲ್ಲ. ಸಾಮಾನು ಗೀಮಾನು ಇದ್ದರೂ ಅಷ್ಟೇ. ಕೂಲಿ ಮಾಡಿಕೊಂಡು ನಡೆದುಕೊಂಡು ಹೋಗುತ್ತಾರೆಯೆ ಹೊರತು ನಮ್ಮನ್ನು ಮಾತನಾಡಿಸೋದಿಲ್ಲ. ಇನ್ನು ಊರಲ್ಲಿ ಆ ತುದಿಯಿಂದ ಈ ತುದಿಯವರೆಗೆ ಹೋಗಲಿಕ್ಕಾದರೂ ಗಾಡಿ ಮಾಡುವರೇ ಅಂದರೆ ಅದೂ ಇಲ್ಲ. ಊರು ಅಷ್ಟು ದೊಡ್ಡದೂ ಅಲ್ಲ. ಬೆಂಗಳೂರು ಮೈಸೂರುಗಳಂಥ ನಗರಗಳ ಮಾತು ಬೇರೆ. ಈ ಊರಿನ ಮಾತು ಬೇರೆ. ಅಪರೂಪವಾಗಿ ಯಾರಾದರೂ ಗಾಡಿ ಮಾಡಿದರೆ ಅರ್ಧ ತಾಸು ಚೌಕಾಸಿ ಮಾಡಿ ಆರಾಣೆ ಬಾಡಿಗೆ ಕೊಟ್ಟು ಬಯ್ದುಕೊಳ್ಳುತ್ತಲೇ ಹೊರಟುಹೋಗುತ್ತಾರೆ. ಬಹಳ ಕಷ್ಟ ಸ್ವಾಮೀ ನಮ್ಮ ಬಾಳು... ಈ ಜನ ಕೊಡುವ ಆರಾಣೆ ಎಳಾಣೆಗಳಲ್ಲಿ ನಮ್ಮ ಕುದುರೆಗೆ ಹುರುಳಿ ಸಹ ಸಿಕ್ಕುವ ಹಾಗಿಲ್ಲ. ಮನೆಯಲ್ಲಿ ಹತ್ತು ಮಂದಿ ತಿನ್ನುವವರಿರುತ್ತಾರೆ. ದಿನವೊಂದಕ್ಕೆ ತೀರ ಕಷ್ಟಪಟ್ಟರೆ ಎರಡು ರೂಪಾಯಿ ಸಿಕ್ಕಬಹುದು. ಹತ್ತು ಜನರ ಹೊಟ್ಟೆಗೆ ಯಾತಕ್ಕಾದೀತು ಸಾಮೀ ಈ ಎರಡು ರೂಪಾಯಿ?''

ಹಠಾತ್ತಾಗಿ ಮಾತು ನಿಲ್ಲಿಸಿ ಸಾಬಿ ಚಬಕವನ್ನೆತ್ತಿ ಕುದುರೆಯನ್ನು ಒಂದು ಸಲ ಬಲವಾಗಿ ಥಳಿಸಿ ಅದು ನಾಗಾಲೋಟದಿಂದ ನೆಗೆಯುವಂತೆ ಮಾಡಿದ. ಆ ಏಟಿ ನಿಂದಾಗಿ ಅದರ ಬೆನ್ನ ಮೇಲೆ ಸ್ಫುಟವಾಗಿ ಮೂಡಿದ ಬಾಸುಂಡೆಯನ್ನು ವಿಷಾದ ಪೂರ್ಣ ದೃಷ್ಟಿಯಿಂದ ನಿರುಕಿಸುತ್ತ – ''ಕುದುರೆಯನ್ನು ಹೀಗೆ ಹೊಡೆಯೋದು ಪಾಪ ಅನ್ನೋದು ಗೊತ್ತಿದ್ದರೂ ಹೊಡೆಯಬೇಕಾಗುತ್ತೆ ಸ್ವಾಮೀ. ಹೊಡೆಯುವಾಗ ಕರುಳು ಕುದಿಯುತ್ತೆ. ತಳಮಳವಾಗುತ್ತೆ. ಆದರೂ ಹೊಡೆಯುತ್ತೇನೆ. ಬಡತನದ ಬವಣೆ ಅಂದರೆ ಹೀಗೇ... ಹೇ! ಹೇ! ಚಲ್ ಚಲ್‌ರೆ ಮೇರೇ ಸರದಾರ್! ಹೋ... ಬಂತು ಬಂತು ಸಾಮೀ ಕೂಲಿಕಾರ ವಸ್ತಿ... ಯಾವ ಓಣಿ ನಿಮ್ಮದು ಮುದುಕಮ್ಮ?'' ಎಂದ.

''ಹೀಂಗೇ ನೆಟ್ಟಗೆ ಹೊಡೆದು ನಾಲ್ಕನೇ ಓಣಿಯೊಳಗೆ ತಿರುಗಿಸಿಕೊಳ್ಳಪ್ಪ.''

ಸೂರ್ಯಾಸ್ತವಾದುದಕ್ಕೆ ಅರ್ಧ ಗಂಟೆ ಕಳೆದುಹೋಗಿತ್ತು. ಮೆಲ್ಲ ಮೆಲ್ಲನೆ

ಕತ್ತಲೆ ಪಸರಿಸುತ್ತಿದ್ದಿತು. ಊರಿನ ಹೊರಗಡೆ ವಿಸ್ತರಣವೊಂದಕ್ಕೆ ಹೊಂದಿಕೊಂಡು ಬೆಳೆದಿದ್ದ ಆ ಕೂಲಿಕಾರರ ವಸತಿಯಲ್ಲಿ ನಗರಸಭೆ ವಿದ್ಯುದ್ದೀಪಗಳನ್ನೇರ್ಪಡಿಸಿದ್ದಂತೆ ತೋರುತ್ತಿರಲಿಲ್ಲ. ಧರ್ಮಪುರದ ಬೀದಿಗಳನ್ನೂ ಚೌಕಗಳನ್ನೂ ಬೆಳಗುತ್ತಿದ್ದ ದೀಪಗಳ ಸುಳಿವೂ ಸಹ ಇರಲಿಲ್ಲ ಅಲ್ಲಿ. ನಗರದ ಬೀದಿಗಳಿದ್ದಂತೆ ಈ ವಸತಿಯ ಬೀದಿಗಳಿಗೆ ಡಾಂಬರಿನ ಸಂಪರ್ಕವೂ ಇರಲಿಲ್ಲ. ಅಲ್ಲಲ್ಲಿ ಚಿಕ್ಕಪುಟ್ಟ ತಗ್ಗುಗಳು. ಆ ತಗ್ಗುಗಳಲ್ಲಿ ಗಾಡಿ ಹಾಯ್ದು ಹೋಗುವಾಗ ಮುದುಕಿಯ ಶರೀರ ಆಕಸ್ಮಾತ್ತಾಗಿ ಹೊರಳಿದುದರಿಂದ ಗಾಡಿಯೊಳಗಿದ್ದ ಕನ್ನಡಿಗೆ ಹಣೆ ತಾಕಿ ಮತ್ತೆ ರಕ್ತ ಸುರಿಯಲಾರಂಭಿಸಿತು.

"ಸ್ವಲ್ಪ ಹುಷಾರಾಗಿ ಹೊಡೆ ಸಾಹೇಬು," ಎಂದ ಚಂದ್ರಣ್ಣ.

"ಆಗಲಿ ಸ್ವಾಮೀ, ಏನ್ಮಾಡೋದು ಹೇಳಿ. ಈ ಬೀದಿಗಳೇ ಹಾಗೆ. ಇಪ್ಪತ್ತು ವರ್ಷಗಳಲ್ಲಿ ಒಂದು ಸಲವಾದರೂ ಇವುಗಳನ್ನು ರಿಪೇರಿ ಮಾಡಿಸಿರುವರೋ ಇಲ್ಲೋ ಅಲ್ಲಾನೇ ಬಲ್ಲ. ಮಳೆಗಾಲದಲ್ಲಂತೂ ಇಲ್ಲಿ ಕಾಲಿಡುವ ಹಾಗೇ ಇಲ್ಲ. ಮೊಳಗಾಲಿನುದ್ದ ರಾಡಿ ತುಂಬಿರುತ್ತೆ."

"ಈ ಭಾಗದಲ್ಲಿ ನಗರಸಭೆಯ ಸದಸ್ಯರಾರೂ ಇಲ್ಲವೊ?"

ಸಾಬಿ ಗಹಗಹಿಸಿ ನಗುತ್ತ – "ನಗರಸಭೆ? ಈ ಕೂಲಿಕಾರರು ಪಾಪ, ಇಲೆಕ್ಷನ್ನಿಗೆ ಹೇಗೆ ನಿಂತಾರು? ಹೊಟ್ಟೆ ತುಂಬಿಸಿಕೊಳ್ಳೋದೇ ಅವರಿಗೆ ದೊಡ್ಡ ಕೆಲಸವಾಗಿರುವಾಗ ಮೆಂಬರ್ ಗಿಂಬರ್ ಆಗಲು ಯಾರಿಗೆ ಮನಸ್ಸು ಬಂದೀತು ಸಾಮೀ?" ಎಂದ.

"ಇವರಿಗೆ ವೋಟುಗಳಿರಬೇಕಲ್ಲ?"

"ಕೆಲವರಿಗಿದೆ ಕೆಲವರಿಗಿಲ್ಲ."

"ಯಾರಿಗೆ ಕೊಡುತ್ತಾರೆ ಇವರು ವೋಟುಗಳನ್ನು?"

"ಇಲೆಕ್ಷನ್ ಕಾಲಕ್ಕೆ ಮೂರು ನಾಲ್ಕು ಜನ ಬಂದು ನೂರಾರು ಸುಳ್ಳು ಹೇಳಿ ನಿಮಗೆ ಅದು ಮಾಡಿಸುತ್ತೇವೆ, ಇದು ಮಾಡಿಸುತ್ತೇವೆ ಅಂತ ಬುರುಡೆ ಹಾರಿಸಿ ಹೋಗುತ್ತಾರೆ. ಜನ ಮನಸ್ಸಿಲ್ಲದ ಮನಸ್ಸಿನಿಂದ ಹೋಗಿ ಯಾರಾದರೊಬ್ಬರಿಗೆ ವೋಟು ಹಾಕಿ ಬರುತ್ತಾರೆ. ಯಾರು ಆರಿಸಿ ಬಂದರೂ ತಮಗೆ ತಮ್ಮ ಗೋಳು ತಪ್ಪಿದ್ದಲ್ಲ ಅನ್ನೋದು ಇವರಿಗೆ ಗೊತ್ತು. ಇಲೆಕ್ಷನ್ನಿನ ದಿನ ಯಾರು ಹೆಚ್ಚು ಚಹ ಕುಡಿಸುವರೋ, ಯಾರು ಹೆಚ್ಚು ಹೆಂಡ ಕೊಡಿಸುವರೋ, ಅವರಿಗೆ ವೋಟು ಹಾಕಿ ಅವರ ಉಪಕಾರಕ್ಕೆ

ಉಪಕಾರ ಮಾಡಿ ಬರುತ್ತಾರೆ. ಹೋದ ಸಲ ತಮ್ಮಣ್ಣನವರಿಗೆ ಹೆಚ್ಚು ವೋಟು ಬಿದ್ದಿದ್ದುವು. ಈ ಸಲ ಏನಾಗುವುದೋ ನೋಡಬೇಕು''.

''ಅವರಿಗೆ ವಿರುದ್ಧವಾಗಿ ಇಲ್ಲಿಯೆ ಯಾರಾದರೊಬ್ಬರು ಏಕೆ ನಿಂತು ಕೊಳ್ಳಬಾರದು?''

''ಈ ಸಲ ನಿಂತಾರು ಅಂತ ಅನ್ನಿಸುತ್ತೆ. ನಮ್ಮ ಶಂಕರ್ ಸಾಮಿ ನಿಂತರೂ ನಿಂತಾರು...''

''ಶಂಕರ್ ಸಾಮೀ? ಯಾರು ಅವರು?''

''ಶಂಕರ್ ಸಾಮಿ ಅಂದರೆ ನಿಮಗೆ ಗೊತ್ತಿಲ್ಲವೇನು ಸಾರ್? ಈ ಊರಿಗೆ ಹೊಸಬರಿರಬೇಕು ಹಾಗಾದರೆ ನೀವು. ಅವರು ನಮಗೆಲ್ಲಾ ಪುಢಾರಿ ಆಗಿದ್ದಾರೆ. ಕೂಲಿಕಾರರಂತೂ ಅವರು ಹಾಕಿಕೊಟ್ಟ ಗೆರೆ ದಾಟುವದಿಲ್ಲ. ಅಷ್ಟು ವಿಶ್ವಾಸ ಅವರ ಬಗ್ಗೆ...''

''ಹೋ! ಹೋ! ಗೊತ್ತಾಯಿತು ಬಿಡು. ಕಮ್ಯೂನಿಸ್ಟ್ ಅಲ್ಲವೇ ಅವರು?''

''ಕಮ್ಯೂನಿಸ್ಟೋ ಸೋಶಲಿಸ್ಟೋ ಅದಾವುದೂ ಗೊತ್ತಿಲ್ಲ ನಮಗೆ. ಅಂತೂ ಅವರು ನಮ್ಮವರು, ನಮ್ಮ ಹಿತಕ್ಕಾಗಿ ಕೆಲಸ ಮಾಡುವವರು ಇಷ್ಟು ಮಾತ್ರ ಗೊತ್ತು. ಹೇ! ಹೇ! ಹೆ! ಏ ಬಚ್ಚಾ, ಹಾದೀ ಬಿಡು ಮಗೂ...'' ಎಂದು ಸಾಬಿ ಕೂಗಿದ. ಬೀದಿಯಲ್ಲಿ ಆಡುತ್ತಿದ್ದ ಮಕ್ಕಳು ಚಂಗನೆ ಹಾರಿ ಆಚೆಗೆ ಸರಿದುವು. ಗಾಡಿ ಕುಣಿಯುತ್ತ ಕುಣಿಯುತ್ತ ಮುಂದೆ ಸಾಗಿತು.

''ಇದೇನೋ ವಿಪರೀತ ವಾಸನೆ ಬರುತ್ತದಲ್ಲ ಸಾಬಿ? ಎಲ್ಲಿಯದಿದು?'' ಎಂದ ಚಂದ್ರಣ್ಣ.

''ಧರ್ಮಪುರದ ಚರಂಡಿಗಳ ಹೊಲಸನ್ನೆಲ್ಲ ತೆಗೆದುಕೊಂಡು ದೂರ ಸಾಗಿಸುವ ದೊಡ್ಡ ಚರಂಡಿ ಈ ವಸತಿಯ ಪಕ್ಕದಲ್ಲೇ ಹರಿದಿದೆ ಸಾಮೀ. ಈ ಕತ್ತಲ್ಲಿ ಕಾಣೋದಿಲ್ಲ ನಿಮಗೆ. ಹಗಲು ಹೊತ್ತು ಬಂದು ನೋಡಿದರೆ ಕಣ್ಣು ಮುಚ್ಚಿಕೊಂಡೀರಿ ನೀವು. ಅಂಥ ಹೊಲಸು ತುಂಬಿದೆ. ನಗರದ ಕೊಳೆಯೆಲ್ಲ ಹರಿದು ಬರೋದು ಬೇರೆ, ಕೂಲಿಕಾರ ವಸತಿಯ ಮಲಮೂತ್ರ ಬೇರೆ. ಇನ್ನು ವಾಸನೆ ಬಡಿಯದಿದ್ದೀತೇ?''

''ಈ ವಸತಿಗೆ ಕಕ್ಕಸುಗಳ ಏರ್ಪಾಟು ಮಾಡಿಲ್ಲವೆ ನಗರಸಭೆ?''

"ದೀಪಗಳನ್ನೇ ಕೊಟ್ಟಿಲ್ಲವಂತೆ. ಇನ್ನು ಕಕ್ಕಸು ಕಟ್ಟಿಸಿಕೊಡುತ್ತಾರೆಯೇ? ನಗರಸಭೆಯೇ ಆಗಲಿ, ಸರಕಾರವೇ ಆಗಲಿ ನಮ್ಮಂಥ ಗರೀಬರನ್ನು ಮನುಷ್ಯರಂತ ತಿಳಿದೇ ಇಲ್ಲ ಸಾಮೀ. ನಮ್ಮ ಮನೆಗಳನ್ನು ನೋಡಿದರೆ ನೀವೇನು ಹೇಳಬಹುದೋ!"

"ನಿನ್ನ ಮನೆಯೂ ಇಲ್ಲಿಯೆ ಇದೆಯೆ?"

"ಹೌದು ಸಾಮೀ, ನಮ್ಮ ಜನರೂ ಇಲ್ಲೇ ಒಂದು ಮೂಲೆಯಲ್ಲಿದ್ದೇವೆ."

"ಹಿಂದೂ ಮುಸ್ಲಿಂ ತಂಟೆ ಇಲ್ಲಿಗೆ ಕಾಲಿಟ್ಟಿಲ್ಲವಷ್ಟೆ?"

"ಬೆಳಗಿನಿಂದ ಸಂಜೆಯವರೆಗೆ ಹೊಟ್ಟೆಯ ತಂಟೆಯೇ ನಡೆದಿರುವಾಗ ಇನ್ನು ನಾನು ಹಿಂದೂ ನಾನು ಮುಸ್ಲಿಂ ಎಂಬ ತಂಟೆ ಎಲ್ಲಿಂದ ಬಂದೀತು ಸಾಮೀ! ಉಂಡುಟ್ಟು ಸುಖವಾಗಿ ತಿರುಗಾಡುತ್ತ ಮಾಡಲು ಬೇರೆ ಉದ್ಯೋಗವಿಲ್ಲದಿರುವವರ ಕೆಲಸ ಅದೆಲ್ಲಾ. ಇಲ್ಲಿರುವವರೆಲ್ಲಾ ಬಡವರು. ನಮ್ಮಲ್ಲಿ ಈ ಜಗಳವೇ ಬರುವಂತಿಲ್ಲ."

ಕುದುರೆ ಗಾಡಿ ಬಲಗಡೆಗೆ ಹೊರಳಿ ಗಾಢಾಂಧಕಾರದಲ್ಲಿ ಮುಳುಗಿದ್ದ ಸಣ್ಣ ಓಣಿಯೊಂದರಲ್ಲಿ ಪ್ರವೇಶಿಸಿತು. ಗಾಡಿಯಿಂದ ಕೆಳಕ್ಕಿಳಿದು ಸಾಬಿ ಕುದುರೆಯನ್ನು ಅತಿ ಪ್ರಯಾಸದಿಂದ ಮುನ್ನಡೆಸತೊಡಗಿದ. ಚಂದ್ರಣ್ಣನೂ ಕೆಳಕ್ಕಿಳಿದು ಅಕ್ಕಪಕ್ಕದ ಗುಡಿಸಲುಗಳನ್ನು ನಿರುಕಿಸುತ್ತ ನಡೆಯತೊಡಗಿದ. ಕೋಳಿಯ ಗೂಡುಗಳಿಗಿಂತಲೂ ವಿದ್ರೂಪವಾಗಿ ತೋರುತ್ತಿದ್ದ ಆ ಪುಟ್ಟ ಪುಟ್ಟ ಗುಡಿಸಲುಗಳು! ಇಟ್ಟಿಗೆ, ಗಾರೆ, ಸಿಮೆಂಟುಗಳ ಸ್ಪರ್ಶವೂ ಅವುಗಳಿಗಾಗಿರಲಿಲ್ಲ. ಹುಲ್ಲು ಮಣ್ಣುಗಳಿಂದ ಕಟ್ಟಲ್ಪಟ್ಟ ಆ ಗುಡಿಸಲುಗಳ ಬಾಗಿಲುಗಳು ಮೂರು ಅಡಿಗಳಿಗಿಂತ ಹೆಚ್ಚು ಎತ್ತರವಾಗಿರಲಿಲ್ಲ. ಆ ಬಾಗಿಲುಗಳೊಳಗಿನಿಂದ ಮಿಣುಕು ದೀಪದ ತುಣುಕು ಕಿರಣಗಳು ತೂರಿ ಬಂದು ಓಣಿಯಲ್ಲಿ ನೆರಳು ಬೆಳಕುಗಳ ಗೆರೆಗಳನ್ನು ಕೊರೆಯುತ್ತಿದ್ದುವು. ಎಷ್ಟೋ ಗುಡಿಸಲು ಗಳಲ್ಲಿ ಬೆಳಕಿರಲಿಲ್ಲ. ಮನೆಯ ಜನ ಹೊರಗಡೆ ಕುಳಿತು ಚಿಕ್ಕೆಗಳ ಬೆಳಕಿನಲ್ಲಿ ರೊಟ್ಟಿ ತಿನ್ನುತ್ತಿದ್ದುದು ಕಂಡುಬಂದಿತು. ಇನ್ನು ಕೆಲವರು ಎಲೆ ಅಡಿಕೆ ಜಗಿಯುತ್ತ ಅಲ್ಲಿಯೆ ಉಗುಳುತ್ತ ಅರ್ಥವಾಗದ ಸಂಭಾಷಣೆಯಲ್ಲಿ ತೊಡಗಿದ್ದುದು ಕಾಣಿಸಿತು. ಹೊಗೆಸೊಪ್ಪು ಸೇದುತ್ತ, ಭೀಕರವಾಗಿ ಕೆಮ್ಮುತ್ತ ಖೊಕ್‌ಕ್ ಎಂದು ಉಗುಳುತ್ತ ಕುಳಿತಿದ್ದವರು ಕೆಲವರು. ಅಂಗಳದಲ್ಲಿ ಕೌದಿ ಹಾಸಿಕೊಂಡು ದೇಹಗಳನ್ನೊರಗಿಸಿ ದಣಿವಾರಿಸಿಕೊಳ್ಳುತ್ತಿದ್ದವರು ಕೆಲವರು. ಒಂದು ಗುಡಿಸಲಿನ ಎದುರಿಗೆ ಕೂಲಿಕಾರ ನೊಬ್ಬ ನಿಂತುಕೊಂಡು ಮುಖ ತೊಳೆದು ಉಗುಳುತ್ತಿದ್ದ. ಆತನಿಗೆ ಹತ್ತಿರದಲ್ಲಿಯೆ ಪುಟ್ಟ ಮಗುವೊಂದು ಮಲವಿಸರ್ಜನೆ ಮಾಡುತ್ತ ಕುಳಿತಿದ್ದಿತು. ಆದಕ್ಕೆ ತೀರ

ಸನಿಯದಲ್ಲಿ ಮುದುಕಿಯೊಂದು ಕುಳಿತುಕೊಂಡು ಎಡಗೈಯಲ್ಲಿ ರೊಟ್ಟಿಯನ್ನು ಹಿಡಿದು ತಿನ್ನುತ್ತಿದ್ದಿತು. ಅಲ್ಲಿಯೆ ಮಲವಿಸರ್ಜನೆ, ಅಲ್ಲಿಯೆ ಊಟ! ಈ ದೃಶ್ಯವನ್ನು ನೋಡಲಾಗಲಿಲ್ಲ ಚಂದ್ರಣ್ಣನಿಗೆ. ಅವನ ಮೈಮೇಲೆ ಮುಳ್ಳು ಎದ್ದ ಹಾಗಾಯಿತು. ನಾಯಿಗಳ ಹಾಗೆ, ಹಂದಿಗಳ ಹಾಗೆ ಹೇಗೋ ಬದುಕು ನಡೆಸುತ್ತಿರುವ ಈ ಬಡ ಜನರನ್ನು ಕಂಡು ಅವನ ಹೃದಯ ಕಳವಳದಿಂದ ಕುದಿಯತೊಡಗಿತು.

ಗುಡಿಸಲೊಂದರಿಂದ ಹೆಣ್ಣುಮಗಳೊಬ್ಬಳು ಭೀಕರವಾಗಿ ಸ್ವರ ತೆಗೆದು ಅಳುತ್ತಿದ್ದುದು ಕೇಳಬರುತ್ತಿತ್ತು. ಅದರೊಂದಿಗೆ ಯಾರೋ ಆಕೆಯನ್ನು ಹೊಡೆಯುತ್ತಿದ್ದುದೂ ಅಶ್ಲೀಲವಾಗಿ ಬಯ್ಯುತ್ತಿದ್ದುದೂ ಕೇಳಿಸುತ್ತಿತ್ತು.

ಚಂದ್ರಣ್ಣ ಕೊಂಚ ತಡೆದು ನಿಂತ. ಆ ರೋದನಧ್ವನಿಯ ಕಡೆಗೆ ಕೊಂಚವೂ ಗಮನವೀಯದೆ ತಮ್ಮಷ್ಟಕ್ಕೆ ತಾವು ಸುಮ್ಮನೆ ಕುಳಿತು ಬೀಡಿ ಸೇದುತ್ತಿದ್ದ ಕೆಲವು ಜನರನ್ನು ಕಂಡು – "ಯಾರಪ್ಪಾ ಅದು ಹಾಗೆ ಬಡಿಯೋದು?" ಎಂದ.

ಬೀಡಿಯನ್ನೊಂದು ಸಲ ಬಲವಾಗಿ ಎಳೆದು ಉಫ್‌ಫ್‌ಫ್ ಎಂದು ಹೊಗೆ ಹಾರಿಸುತ್ತ ಒಬ್ಬ ಕೂಲಿಕಾರನೆಂದ : "ಅವನೇ! ಇದ್ದಾನಲ್ಲ ಆ ಸೂಳೀ ಮಗ ರುದ್ರ್ಯಾ."

"ಯಾಕೆ ಬಡೀತಾನೆ ಹೀಗೆ?"

"ಬ್ಯಾರೆ ಏನು ಕೆಲಸರೀ ಅವಗೆ? ಸಂಜೆಯಾಗುತ್ತಲೂ ಕಂಠಮಟ್ಟ ಕುಡಿದು ಬಂದು ಹೆಂಡತಿಯನ್ನು ಥಳಿಸೋದೇ ಒಂದು ಕೆಲಸ ಅವಗೆ!"

"ಅವನೂ ಕೂಲಿಕಾರನಲ್ಲವೆ?"

"ಹೆಸರಿಗೆ ಮಾತ್ರ ಕೂಲಿಕಾರ. ಕೆಲಸದ ಭಾರ ಮಾತ್ರ ಆತನಿಗಿಲ್ಲ, ನಮ್ಮ ವಿರುದ್ಧ ಸುದ್ದಿ ತಿಳಿಸೂದೇ ಕೆಲಸ ಆ ತಾಯಿಗ್ಗಂಡನದು!" ಎಂದು ತಿರಸ್ಕಾರದಿಂದ ನುಡಿದು ಆ ಕೂಲಿಕಾರ ಬೀಡಿಯನ್ನು ಬಲವಾಗಿ ಎಳೆಯತೊಡಗಿದ.

ಚಂದ್ರಣ್ಣ ಮುಂದಕ್ಕೆ ಹೆಜ್ಜೆ ಹಾಕುತ್ತ – "ಸಿ.ಐ.ಡಿ.ಯೋ ಏನು?" ಎಂದು ಕೇಳಿದ.

"ಹೌದು. ಸೆಟ್ಟರ ಸಿ.ಐ.ಡಿ. ಅವನ ಉಪಟಳದಿಂದಾಗಿ ನಮಗೆಲ್ಲ ಜೀವ ಹೋಗುವ ಕಾಲ ಬಂದೈತಿ. ಪಾಪ, ಅವನ ಹೆಂಡತಿಯೂ ಇಂದೋ ನಾಳೆಯೋ

ಪ್ರಾಣ ಬಿಡುವ ಹಾಂಗಾಗಿದಾಳೆ. ಅವಳ ಗೋಳು ನೋಡಿದರ ಆಕೆಯ ಪ್ರಾಣ ಎಷ್ಟು ಬೇಗ ಹೋದಷ್ಟೂ ಒಳ್ಳೇದು ಅನ್ನಿಸುತ್ತೈತಿ... ಈ ರುದ್ರ್ಯಾ ಎಂದಾದರೂ ಹಾಳಾಗಿ ಹೋಗುತ್ತಾನೋ ಭಂಡ ಸೂಳೀಮಗ..''

''ಮನೆ ಬಂತೇನಮ್ಮ?'' ಎಂದ ಸಾಬಿ.

''ಇಲ್ಲೇ ಎಡಗಡೆ ಸಂದಿಯೊಳಗ ಹೊಡಿಯಪ್ಪ''

ಮುದುಕಿಯ ಧ್ವನಿಯನ್ನು ಗುರುತಿಸಿ ಆ ಕೂಲಿಕಾರ ಮೇಲಕ್ಕೆದ್ದು ಗಾಡಿಯ ಹತ್ತಿರ ಬಂದು – ''ಯಾರು ಮಲ್ಲವ್ವಜ್ಜಿಯೋ ಏನು? ಏನವ್ವ, ಜಟ್ಕಾದಲ್ಲಿ ಬಂದೆ? ಏನಾತು?'' ಎಂದು ಕೇಳಿದ.

''ಮೋಟರಿಗೆ ಸಿಕ್ಕಿ ಬಿದ್ದಿದ್ದೆನಪ್ಪ''

ಮಲ್ಲವ್ವಜ್ಜಿ ಮೋಟರು ಗಾಡಿಯ ಕೆಳಗೆ ಸಿಕ್ಕಿಬಿದ್ದಿದ್ದಳೆಂಬ ವಾರ್ತೆ ನಿಮಿಷಾರ್ಧದಲ್ಲಿಯೆ ಓಣಿಯಲ್ಲೆಲ್ಲ ಹರಡಿತು. ಗುಡಿಸಲುಗಳಲ್ಲಿ ಅಡುಗೆ ಮಾಡುತ್ತಿದ್ದ ಹೆಂಗಸರು, ತಂಬಾಕು ಸೇದುತ್ತ ಕುಳಿತಿದ್ದ ಕೂಲಿಕಾರರು, ಹುಡುಗರು ಹುಡುಗಿಯರು ಎಲ್ಲರೂ ಗಾಡಿಯ ಸುತ್ತಲೂ ನೆರೆದರು. ಅಪಘಾತ ಎಲ್ಲಿ ಆಯಿತು? ಹೇಗೆ ಆಯಿತು? ಯಾರ ಮೋಟಾರು ಗಾಡಿ ಅದು? ಅವರನ್ನು ಪೋಲೀಸರು ಸುಮ್ಮನೆ ಬಿಟ್ಟರೇ? ಮುದುಕಿಗೆ ಭಾರಿ ಗಾಯವೇನೂ ಆಗಿಲ್ಲವಷ್ಟೆ? ಇತ್ಯಾದಿ ಪ್ರಶ್ನೆಗಳು ಕೇಳಬರತೊಡಗಿದವು.

ಮುದುಕಿಯ ಮನೆಗೆ ಗಾಡಿ ಮುಟ್ಟುವುದರೊಳಗಾಗಿ ಎರಡು ಮೂರು ಓಣಿಗಳ ಜನವೆಲ್ಲ ಅಲ್ಲಿ ಗುಂಪುಗೂಡಿದ್ದಿತು. ಯಾರೋ ಮುಂದೆ ಬಂದು ಮುದುಕಿಯನ್ನಿಳಿಸಿಕೊಂಡರು, ಯಾರೋ ಆಕೆಯನ್ನು ಹೊತ್ತುಕೊಂಡು ಮನೆಯೊಳಗಡೆ ಸಾಗಿಸಿದರು. ಗಾಡಿಯಲ್ಲಿದ್ದ ಔಷಧದ ಸೀಸೆಯನ್ನು ತೆಗೆದುಕೊಂಡು ಚಂದ್ರಣ್ಣ ಸಾಬಿಗೆ ಹಣ ಕೊಡಲು ಜೇಬಿಕೆ ಕೈ ಹಾಕಿದ.

''ಎಷ್ಟು ಕೊಡಬೇಕು ಸಾಬಿ?''

''ನಿಮಗೆ ತಿಳಿದಷ್ಟು ಕೊಡಿ ಸಾಮೀ...''

''ಛೆ! ಹಾಗಂದರೆ ಅನ್ಯಾಯವಾದೀತು. ನ್ಯಾಯವಾಗಿ ನಿನಗೆಷ್ಟು ಬರಬೇಕೋ ಹೇಳು.''

''ನಿಜ ಹೇಳಬೇಕಾದರೆ ನ್ಯಾಯವಾಗಿ ಈಗ ನನಗೇನೂ ಬರಬೇಕಾಗಿಲ್ಲ. ಅಮ್ಮ ಮೋಟರಿಗೆ ಸಿಕ್ಕಿ ಬಿದ್ದಿರುವಾಗ ನೀವು ಕರೆದುಕೊಂಡು ಬಂದಿದ್ದೀರಿ. ಅವರಿಗೂ ನಿಮಗೆ ಯಾವ ಸಂಬಂಧವಿಲ್ಲದಿದ್ದರೂ ನೀವು ಇಷ್ಟು ದೂರ ಅವರೊಡನೆ ಬಂದಿರುವಾಗ ನಾನು ನಿಮ್ಮಿಂದ ಹೇಗೆ ಹಣ ತೆಗೆದುಕೊಳ್ಳಬೇಕು?''

ಆತನಿಗೊಂದು ರೂಪಾಯಿ ಕೊಟ್ಟು ಚಂದ್ರಣ್ಣ ಗುಡಿಸಲಿನೊಳಕ್ಕೆ ಅಡಿಯಿರಿಸಿದ. ಶರೀರವನ್ನು ಅರ್ಧ ಬಾಗಿಸಿ ಬಾಗಿಲಿನಿಂದ ಒಳಸೇರಬೇಕಾಯಿತು. ಹತ್ತು ಅಡಿ ಉದ್ದ ಎಂಟು ಅಡಿ ಅಗಲವಾಗಿದ್ದ ಆ ಗುಡಿಸಲಲ್ಲಿ ಆ ಮೊದಲೇ ಎಂಟು ಹತ್ತು ಜನ ಸೇರಿಕೊಂಡಿದ್ದುದರಿಂದ ಒಂದೆರಡು ಕ್ಷಣ ಚಂದ್ರಣ್ಣನಿಗೆ ಯಾವುದೂ ಗೋಚರವಾಗಲಿಲ್ಲ. ಗೋಡೆಯೊಂದಕ್ಕೆ ನೇತಾಡುತ್ತಿದ್ದ ಚಿಮಿಣಿಯ ದೀಪದ ಮಂದ ಪ್ರಕಾಶದಲ್ಲಿ ಅಲ್ಲಿನ ದೃಶ್ಯ ನಿಧಾನವಾಗಿ ಆತನ ಕಣ್ಣುಗಳೆದುರಿಗೆ ಮೂಡಿತು.

ಉತ್ತರ ದಿಕ್ಕಿನ ಗೋಡೆಗೆ ಹೊಂದಿಕೊಂಡು ಹಾಸಲ್ಪಟ್ಟಿದ್ದ ಹಳೆಯ ಕೌದಿಯೊಂದರ ಮೇಲೆ ಅಸ್ಥಿಪಂಜರದ ಹಾಗೆ ಕಾಣುತ್ತಿದ್ದ ವ್ಯಕ್ತಿಯೊಂದು ಮಲಗಿಕೊಂಡಿದ್ದಿತು. ಚಿಮಿಣಿಯ ದೀಪದ ಈ ವಿಲಕ್ಷಣ ಪ್ರಕಾಶದಲ್ಲಿ ಹುಲುಸಾಗಿ ಬೆಳೆದ ಗಡ್ಡ ಮೀಸೆ ತಲೆಗೂದಲುಗಳಿಂದಲೂ, ಗೂಡು ಕಟ್ಟಿಕೊಂಡಿದ್ದ ಕಣ್ಣುಗಳಿಂದಲೂ, ಒಳ ಸೇರಿದ್ದ ಕೆನ್ನೆಗಳಿಂದಲೂ, ಉಸಿರಾಡಿಸುವಾಗ ಮೇಲಕ್ಕೆದ್ದು ಕೆಳಕ್ಕಿಳಿಯುತ್ತಿದ್ದ ಎದೆಯ ಮೂಳೆಗಳಿಂದಲೂ ವಿಲಕ್ಷಣ ಭೀಕರವಾಗಿ ತೋರುತ್ತಿದ್ದ ಆ ವ್ಯಕ್ತಿಯ ಹತ್ತಿರದಲ್ಲಿಯೆ ಮುದುಕಿಯನ್ನು ಮಲಗಿಸಲಾಗಿದ್ದಿತು. ಚಂದ್ರಣ್ಣ ಒಳಸೇರುತ್ತಲೂ ಜನರೆಲ್ಲ ದೂರ ಸರಿದು ಆತನಿಗೆ ಸ್ಥಳ ಮಾಡಿಕೊಟ್ಟರು.

''ಬಾರಪ್ಪಾ ತಮ್ಮ ನಮ್ಮ ಪಾಲಿಗೆ ಶಿವಶಂಕರ ಬಂದಾಂಗ ಬಂದೆ ನೀನು. ಇವನೇ ನೋಡು ಸೋಮಣ್ಣಾ ನನ್ನ ಉಳಿಸಿದ ದೇವರು!'' ಎಂದು ಮುದುಕಿ ಆತನನ್ನು ಸ್ವಾಗತಿಸಿದಳು.

ಇಂಥ ಪ್ರಶಂಸೆಯ ಮಾತುಗಳೆಂದರೆ ಚಂದ್ರಣ್ಣನಿಗಾಗದು. ಆತ ಸಂಕೋಚದಿಂದ ಮುದುಡಿಕೊಳ್ಳುತ್ತ ಕುಳಿತುಕೊಂಡು ಸೋಮಣ್ಣನ ಮುಖವನ್ನೇ ಸೂಕ್ಷ್ಮವಾಗಿ ನಿರುಕಿಸತೊಡಗಿದ. ಆತನನ್ನು ಹಿಂದೆ ಎಲ್ಲಿಯೋ ನೋಡಿರಬೇಕೆಂದು ಆತನಿಗನ್ನಿಸತೊಡಗಿತು. ಎಲ್ಲಿ, ಯಾವಾಗ ಎಂಬುದು ಮಾತ್ರ ನೆನಪಿಗೆ ಬರಲಿಲ್ಲ.

ಸೋಮಣ್ಣನಿಗೂ ಚಂದ್ರಣ್ಣನ ಗುರುತು ತಿಳಿಯಿತೇನೋ. ಆತ ತೀರ ಮೆಲ್ಲಗಿನ ಧ್ವನಿಯಲ್ಲಿ – ''ಯಾರು? ನಮ್ಮ ಚಂದ್ರಣ್ಣನವರೋ ಏನು?'' ಎಂದ.

"ನಿಮ್ಮನ್ನೆಲ್ಲೋ ನೋಡಿದ ಹಾಗೆ ನೆನಪು," ಎಂದ ಚಂದ್ರಣ್ಣ.

ಬಿದಿರಿನ ಗಳದಂತೆ ತೋರುತ್ತಿದ್ದ ತನ್ನ ಕೈಯನ್ನೂರಿ ಅತ್ಯಂತ ಕಷ್ಟದಿಂದ ಮೇಲಕ್ಕೇಳುತ್ತ ಸೋಮಣ್ಣ ಆನಂದದಿಂದ ಕಂಪಿಸುವ ಧ್ವನಿಯಲ್ಲಿ ನುಡಿದ : "ಬಹಳ ವರ್ಷವಾಯ್ತು ಚಂದ್ರಣ್ಣನವರೆ. ನಿಮಗೆ ನೆನಪಿರಲಿಕ್ಕಿಲ್ಲ. ನಾವಿಬ್ಬರೂ ಜೇಲಿನಲ್ಲಿ ಭೆಟ್ಟಿಯಾಗಿದ್ದೆವು – ನಲವತ್ತೆರಡರ ಚಳವಳಿಯ ಕಾಲಕ್ಕೆ..."

ನಲವತ್ತೆರಡರ ಚಳವಳಿ! ಆ ಶಬ್ದ ಕಿವಿಗೆ ಸೇರುತ್ತಲೂ ಚಂದ್ರಣ್ಣನ ಹೃದಯ ಪುಲಕಿತವಾಯಿತು. ಅದರೊಂದಿಗೆ, ಆ ಸೆರೆಮನೆ, ಅಲ್ಲಿನ ಬರಾಕುಗಳು, ಆಗ ತನ್ನೊಡನಿದ್ದ ಕ್ರಾಂತಿವೀರರ ಮುಖಗಳು ಆತನ ಕಣ್ಣೆದುರು ತಲೆದೋರಿದುವು. ತಮ್ಮ ಬರಾಕಿನಲ್ಲಿಯೆ ಇದ್ದ ಕಲ್ಲಾಪುರದ ಸೋಮಣ್ಣ ಹದಿನೈದು ವರ್ಷ ಶಿಕ್ಷೆಗೊಳಗಾಗಿ ಸೆರೆಮನೆಗೆ ಬಂದು ಬಿದ್ದಿದ್ದ ಸೋಮಣ್ಣ ಈತನೇ? ಒಂದು ಕ್ಷಣ ಆತನಿಗೆ ತನ್ನ ಕಣ್ಣುಗಳನ್ನೇ ನಂಬಲಾಗಲಿಲ್ಲ.

"ನೀವು ನನ್ನನ್ನು ಮರೆತಿದ್ದರೂ ನಾನು ಮಾತ್ರ ನಿಮ್ಮನ್ನು ಮರೆತಿಲ್ಲ ಚಂದ್ರಣ್ಣ ನವರೆ. ನಿಮ್ಮನ್ನು ಕಂಡೊಡನೆ ಗುರುತು ಸಿಕ್ಕಿತು.."

ಚಂದ್ರಣ್ಣ ತಬ್ಬಿಬ್ಬಾಗಿ ನುಡಿದ : "ನಾನೂ ಮರೆತಿಲ್ಲ ಸೋಮಣ್ಣ, ಹಾಗೆ ತಿಳಿದುಕೋಬೇಡಿ. ಈಗ ಇರುವ ಸ್ಥಿತಿಯಲ್ಲಿ ನಿಮ್ಮನ್ನು ಯಾರೂ ಗುರುತಿಸಲು ಸಾಧ್ಯ ವಿಲ್ಲ. ಆಗ ಹೇಗಿದ್ದೀರಿ ಪೈಲ್ವಾನರ ಹಾಗೆ! ಈಗ ಹೇಗಾಗಿ ಬಿಟ್ಟಿದ್ದೀರಿ... ಅಲ್ಲದೆ ಈ ಗಡ್ಡಮೀಸೆಗಳ ಗುಡ್ಡ ಬೇರೆ.."

"ಅಂತೂ ಆಕಸ್ಮಾತ್ತಾಗಿ ಭೆಟ್ಟಿಯಾದಿರಲ್ಲ! ಇಂಥ ಪ್ರಸಂಗದಲ್ಲಿ ನಾವು ನೀವು ಕೂಡಬಹುದೆಂದು ಯಾರಿಗೆ ತಿಳಿದಿತ್ತು!"

"ನಿಮಗೆ ಎಂದು ಬಿಡುಗಡೆಯಾಯಿತು ಸೋಮಣ್ಣ? ಊರು ಬಿಟ್ಟು ಇಲ್ಲಿಗೇಕೆ ಬಂದಿರಿ? ಯಾವಾಗ ಬಂದಿರಿ? ಒಕ್ಕಲತನವನ್ನು ಬಿಟ್ಟೇ ಬಂದಿರಾ?"

ಊರು, ಒಕ್ಕಲುತನ ಎಂದೊಡನೆ ಸೋಮಣ್ಣನ ತಲೆ ಕೆಳಕ್ಕೆ ಬಾಗಿತು. "ಅಯ್ಯೋ, ಅದೊಂದು ದೊಡ್ಡ ಕತೆ. ನಮ್ಮ ಗೋಳು ಏನು ಕೇಳುತ್ತೀರಿ ಚಂದ್ರಣ್ಣ!" ಎಂದು ನುಡಿದು ಆತ ನಿಟ್ಟುಸಿರು ಬಿಟ್ಟ.

# ೧೩

ಕಳವಳದಿಂದ ಜಡವಾದ ದೃಷ್ಟಿಯನ್ನು ಗುಡಿಸಲಿನಲ್ಲೆಲ್ಲ ಓಡಿಯಾಡಿಸಿದ ಚಂದ್ರಣ್ಣ. ಗುಡಿಸಲು ಚಿಕ್ಕದಾಗಿದ್ದರೂ ಚೊಕ್ಕಟವಾಗಿದ್ದಿತು, ಅಚ್ಚುಕಟ್ಟಾಗಿದ್ದಿತು. ಹುಲ್ಲು ಮಣ್ಣುಗಳ ಗೋಡೆಗಳಿಗೆ ಸುಣ್ಣ ಬಳಿದು ಅವುಗಳ ಮೇಲೆ ಅಲ್ಲಲ್ಲಿ ಗಾಂಧೀಜಿ, ನೆಹರೂ ಮೊದಲಾದ ರಾಷ್ಟ್ರೀಯ ಮುಖಂಡರ ಪಟಗಳನ್ನು ನೇತುಹಾಕಲಾಗಿದ್ದಿತು. ಪೂರ್ವ ದಿಕ್ಕಿನ ಗೋಡೆಯ ಮೇಲೆ ನೇತಾಜಿ ಸುಭಾಷ್‌ಚಂದ್ರಬೋಸರ ದೊಡ್ಡ ಭಾವಚಿತ್ರವೊಂದು ಠೀವಿಯಿಂದ ಕಂಗೊಳಿಸುತ್ತಿತ್ತು. ಅದರ ಕೆಳಗಡೆ ಕೆಂಪು ಬಣ್ಣದ ದೊಡ್ಡ ದೊಡ್ಡ ಅಕ್ಷರಗಳಲ್ಲಿ "ಜಯಹಿಂದ್" ಎಂದು ಬರೆಯಲಾಗಿತ್ತು. ಒಂದು ಮೂಲೆಯಲ್ಲಿದ್ದ ಬಿದಿರು ಗಳದ ಕಪಾಟಿನಲ್ಲಿ ಹಲವು ಪುಸ್ತಕಗಳಿದ್ದುವು. "ಕ್ರಾಂತಿ"ಯ ಒಂದೆರಡು ಸಂಚಿಕೆಗಳೂ ಕಾಣಿಸುತ್ತಿದ್ದುವು. ಈ ಗುಡಿಸಲಲ್ಲಿ ತನ್ನ ಪತ್ರಿಕೆಯನ್ನು ಕಂಡಾಗ ಆಶ್ಚರ್ಯವಾಗದಿರಲಿಲ್ಲ ಚಂದ್ರಣ್ಣನಿಗೆ.

"ಕ್ರಾಂತಿಯನ್ನು ತರಿಸುತ್ತಿದ್ದೀರಾ?"

"ಕ್ರಾಂತಿ ಒಂದೇ ಅಲ್ಲ – ನೀವು ಹೊರಡಿಸುವ ಪತ್ರಿಕೆಗಳನ್ನೆಲ್ಲ ತರಿಸುತ್ತಿದ್ದೇವೆ. ನಿಮ್ಮ ಪುಸ್ತಕಗಳೂ ನಮ್ಮಲ್ಲಿವೆ. ನಮ್ಮ ರತ್ನಮ್ಮನಿಗೆ ನಿಮ್ಮ ಲೇಖನಗಳೆಂದರೆ ಬಹಳ ಪ್ರೀತಿ. ಹುಚ್ಚು ಅಂದರೂ ನಡೆದೀತು..."

ರತ್ನಮ್ಮ! ಕ್ರಾಂತಿಯ ಹುಚ್ಚು! ಹಠಾತ್ತಾಗಿ ಚಂದ್ರಣ್ಣನಿಗೆ ಆ ದಿನದ ಮನಿಆರ್ಡರ್ ವಿಷಯ ಜ್ಞಾಪಕಕ್ಕೆ ಬಂದಿತು. ಅದರೊಂದಿಗೆ ಬಂದ ಆ ಕವಿತೆ, ಆ ಕಾಗದ... ಯಾರಾದರೊಬ್ಬ ಕಾಲೇಜು ವಿದ್ಯಾರ್ಥಿನಿ ಅವುಗಳನ್ನು ಕಳುಹಿಸಿರಬಹುದೆಂದು ತಮಗಾಗ ಕಲ್ಪನೆಯಾಗಿದ್ದಿತು. ಸೋಮಣ್ಣನ ತಂಗಿ ರತ್ನಮ್ಮನೇ ಆ ವಿದ್ಯಾರ್ಥಿನಿಯೊ ಏನೊ!

"ರತ್ನಮ್ಮ ಎಂದರೆ ನಿಮ್ಮ ತಂಗಿಯೋ? ಕಾಲೇಜಿನಲ್ಲಿ ಕಲಿಯುತ್ತಿರುವಳೋ ಹೇಗೆ?" ಎಂದು ಆತ ಪ್ರಶ್ನಿಸಿದ.

"ಕಾಲೇಜು?" ಸೋಮಣ್ಣ ನಕ್ಕು ನುಡಿದ : "ನಮ್ಮಂಥವರಿಗೆಲ್ಲ ಕಾಲೇಜು ಶಿಕ್ಷಣ ಹೇಗೆ ಸಾಧ್ಯ ಚಂದ್ರಣ್ಣ? ರತ್ನಮ್ಮನಿಗೆ ಮೊದಲಿನಿಂದಲೂ ಕಲಿಯಬೇಕೆಂಬ ಆಸೆಯೇನೋ ಇತ್ತು. ಆದರೆ – ಬಡತನದ ಬಾಳಿನಲ್ಲಿ ಅದು ಕೈಗೂಡಲಿಲ್ಲ. ಒಂದರ

ಹಿಂದೊಂದರಂತೆ ನಮ್ಮ ಕುಟುಂಬದ ಮೇಲೆ ಬಂದ ಸಂಕಟಗಳು ಬೇರೆ. ಈಗ ಆಕೆಯೂ ಗಿರಣಿಯಲ್ಲಿ ಕೆಲಸ ಮಾಡುತ್ತಿದ್ದಾಳೆ.''

''ಗಿರಣಿಯಲ್ಲಿ? ಏನು ಕೆಲಸ?'' ಎಂದು ವಿಸ್ಮಯದಿಂದ ಕೇಳಿದ ಚಂದ್ರಣ್ಣ.

''ಇನ್ನೇನು? ಎಲ್ಲರೂ ಮಾಡುವ ಕೆಲಸವೇ. ಕೂಲೀ ಕೆಲಸ.''

ಕೊಂಚ ಹೊತ್ತು ಮೌನವಾಗಿದ್ದು ಚಂದ್ರಣ್ಣ ಹೇಳಿದ : ''ನಿಮ್ಮ ತಂಗಿ ಸಾಲೆಯಲ್ಲಿ ಓದಿದ್ದೆಷ್ಟು?''

''ನಮ್ಮೂರಿನ ಸಾಲೆಯಲ್ಲಿ ಮುಲ್ಕೀ ಪರೀಕ್ಷೆಯವರೆಗೆ ಕಲಿತಳು. ಆಮೇಲೆ ಹೈಸ್ಕೂಲಿಗೆ ಹೋಗಿ ಮ್ಯಾಟ್ರಿಕ್ ಮಾಡಬೇಕೆಂಬ ವಿಚಾರವಿತ್ತು. ಆದರೆ ಅದಕ್ಕಾಗಿ ಪಟ್ಟಣಕ್ಕೆ ಹೋಗಬೇಕಾಗಿತ್ತು. ಅದೆಲ್ಲ ನಮ್ಮಿಂದ ಸಾಧ್ಯವಾಗುವಂತಿರಲಿಲ್ಲ. ಪಟ್ಟಣದಲ್ಲಿ ಆಕೆ ಇರೋದಿಲ್ಲಿ, ಊಟ ಮಾಡೋದೆಲ್ಲಿ? – ಫೀ ಮುಂತಾದ್ದರ ವ್ಯವಸ್ಥೆ ಹ್ಯಾಗಾಗ ಬೇಕು? ಹೈಸ್ಕೂಲು ಕಾಲೇಜು ಎಲ್ಲವನ್ನು ಮರೆತು ಆಕೆ ಸಂಸಾರದ ಸ್ಕೂಲಿಗೆ ಕಾಲಿಡಬೇಕಾಯ್ತು. ಸ್ವಲ್ಪ ದಿನಗಳಲ್ಲಿ ಅದೂ ತಪ್ಪಿಹೋಯಿತು...''

''ಅಂದರೆ?''

''ಅಂದರೆ–ಹೀಗೆ...'' ಎಂದ ಸೋಮಣ್ಣ ವಿವರಿಸುತ್ತಿರುವಾಗಲೆ ರತ್ನಮ್ಮ ಗುಡಿಸಲಲ್ಲಿ ಬಂದುದರಿಂದ ಆ ಮಾತು ಅಷ್ಟಕ್ಕೇ ನಿಂತುಹೋಯಿತು.

''ಎಲ್ಲಿಗೆ ಹೋಗಿದ್ದೆ ರತ್ನಾ?'' ಮುದುಕಿ ಕೇಳಿದಳು.

''ಜೋಳ ಬೀಸಿ ತರಲು ನೆರೆಮನೆಗೆ ಹೋಗಿದ್ದೆನವ್ವ'' ಎಂದು ಉತ್ತರವಿತ್ತು ರತ್ನಮ್ಮ ಹಿಟ್ಟು ತುಂಬಿದ ಬುಟ್ಟಿಯನ್ನು ಅಡುಗೆಯ ಮನೆಯಲ್ಲಿಟ್ಟು ತಾಯಿ ಮಲಗಿದ್ದಲ್ಲಿಗೆ ಬಂದಳು. ಅವಳ ಹಣೆಯಿಂದ ಸುರಿದ ರಕ್ತವನ್ನೂ ಕಟ್ಟಿದ್ದ ಪಟ್ಟಿಯನ್ನೂ ಕಂಡಾಗ ಆಕೆಯ ದೊಡ್ಡ ದೊಡ್ಡ ಕಣ್ಣುಗಳಲ್ಲಿ ಆಶ್ಚರ್ಯ ಕಂಡುಬರದಿರಲಿಲ್ಲ. ಚಂದ್ರಣ್ಣ ಆಕೆಯನ್ನೇ ಕುತೂಹಲದಿಂದ ನಿಟ್ಟಿಸುತ್ತಲಿದ್ದ. ಇಂಥ ಸಂದರ್ಭದಲ್ಲಿ ಸಾಮಾನ್ಯವಾಗಿ ಎಲ್ಲ ಸ್ತ್ರೀಯರೂ ದೊಡ್ಡ ದನಿ ತೆಗೆದು ಬೋರಾಡಿ ಅಳುವುದುಂಟು. ಆದರೆ ರತ್ನಮ್ಮ ಕೊಂಚವೂ ಅಳುಕಲಿಲ್ಲ, ಎದೆಗೆಡಲಿಲ್ಲ. ಆಕೆಯ ಗಂಭೀರ ಮುಖಮಂಡಲದಲ್ಲಿ ಭೀತಿಯ ಲಕ್ಷಣವೊಂದೂ ಕಂಡುಬರಲಿಲ್ಲ. ಆಸ್ಪತ್ರೆಯಲ್ಲಿ ರೋಗಿಗಳನ್ನು ಪರೀಕ್ಷಿಸುವ ದಾದಿಯ ಹಾಗೆ ಆಕೆ ತನ್ನ ತಾಯ ಬಳಿ ಕುಳಿತು, ಗಾಯವನ್ನು ಪರೀಕ್ಷಿಸಿ ನೋಡಿ – ''ಅಂಥ ಭಾರಿ ಪೆಟ್ಟೇನೂ ಬಿದ್ದಿಲ್ಲ, ಒಂದೆರಡು ವಾರಗಳಲ್ಲಿ

ಮಾಯ್ದುಹೋಗಬಹುದು,'' ಎಂದಳು. ಸದಾಶಿವಪ್ಪನ ಕಾರಿನಿಂದಾಗಿ ಈ ಅಪಘಾತ ಸಂಭವಿಸಿದುದು ತಿಳಿದಾಗ – ''ಸರಿ ಮೊದಲು ಅಣ್ಣ, ಆಮೇಲೆ ಅವ್ವ, ನಾಳೆ ನನ್ನ ಸರದಿಯೂ ಬರುತ್ತದೊ ಏನೋ!'' ಎಂದು ನುಡಿದು – ''ನಾನಿನ್ನು ರೊಟ್ಟಿ ಬಡಿಯಬೇಕು ಏಳುತ್ತೇನೆ,'' ಎನ್ನುತ್ತ ಮೇಲಕ್ಕೇಳುತ್ತಿರುವಾಗ ಅಕಸ್ಮಾತ್ತಾಗಿ ಎದುರಿಗೆ ಕುಳಿತ ಚಂದ್ರಣ್ಣನ ಕಡೆಗೆ ಆಕೆಯ ದೃಷ್ಟಿ ಹೋಯಿತು.

''ಅವರಿಗೆ ನಮಸ್ಕಾರ ಮಾಡು ರತ್ನಮ್ಮ. ಇಂದು ಅವ್ವನನ್ನು ಅಲ್ಲಿಂದ ಕರೆದು ತಂದವರಿರವರು, ಅಷ್ಟೇ ಅಲ್ಲ – ನಿನ್ನ ಮೆಚ್ಚಿಗೆಯ ಕ್ರಾಂತಿಯ ಸಂಪಾದಕರಾದ ಚಂದ್ರಣ್ಣನವರು ಇವರೇ!''ಎಂದ ಸೋಮಣ್ಣ.

ಅಡುಗೆಯ ಮನೆಯ ಕಡೆಗೆ ತಿರುಗುತ್ತಿದ್ದ ರತ್ನಮ್ಮ ತಡೆದು ನಿಂತು ತನ್ನ ವಿಶಾಲ ನೇತ್ರಗಳನ್ನು ಚಂದ್ರಣ್ಣನ ಕಡೆಗೆ ಹೊರಳಿಸಿದಳು. ಆಕೆಯ ದೃಷ್ಟಿಯೊಂದಿಗೆ ದೃಷ್ಟಿ ಸೇರಿದಾಗ ಚಂದ್ರಣ್ಣನ ಹೃದಯ ಡವಡವನೆ ಬಡಿದುಕೊಂಡಂತಾಯಿತು. ಅದೇ ಮೊದಲು ಆತನಿಗಿಂಥ ಅನುಭವವಾದುದು. ಅಂದು ಸಾಯಂಕಾಲ ಸೆಟ್ಟರ ಕುವರಿ ಶಾರದಾಮಣಿಯನ್ನು ಕಂಡಾಗ ಆತ ಬೆರಗಾಗಿದ್ದ; ಆಶ್ಚರ್ಯಪಟ್ಟುಕೊಂಡಿದ್ದ. ಅವಳ ದೃಷ್ಟಿಗೆ ದೃಷ್ಟಿಯನ್ನು ಸೇರಿಸುವ ಸಾಹಸ ಆತನಿಂದಾಗಿರಲಿಲ್ಲ. ಆದರೆ ರತ್ನಮ್ಮನನ್ನು ಕಂಡಾಗ ಆತನ ದೃಷ್ಟಿ ಕೆಳಕ್ಕೆ ಬಾಗಲಿಲ್ಲ. ತನ್ನ ಮಾದಕ ಸೌಂದರ್ಯದಿಂದ ಶಾರದಾಮಣಿ ಆತನ ಕಣ್ಣು ಕುಕ್ಕಿಸಿದ್ದುದು ನಿಜ. ಆದರೆ ಆಕೆಯನ್ನು ಕಂಡಾಗ ಆತನ ಹೃದಯವೇನೂ ಡವಡವನೆ ಬಡಿದುಕೊಂಡಿರಲಿಲ್ಲ. ಆಕೆ ಎದುರಿಗೆ ಬಂದು ನಿಂತಾಗ ಅಪೂರ್ವ ಪ್ರಕಾಶಮಾನವಾದ ಮಿಂಚೊಂದು ಆತನ ಮುಂದೆ ಸುಳಿದಂತಾಗಿದ್ದಿತು... ಆಕೆಯ ದೃಷ್ಟಿಗೆ ದೃಷ್ಟಿ ಸೇರಿಸಿ ಮಾತನಾಡುವ ಸಾಹಸ ಆತನಿಂದಾಗಿರಲಿಲ್ಲ. ಎಂಥದೋ ಸಂಕೋಚ ಅಡ್ಡವಾಗಿ ನಿಂತಿದ್ದಿತು. ಆ ಚಿನ್ನದ ಬಳೆ, ಆ ಕೈಗಡಿಯಾರ, ಆ ಒಯ್ಯಾರ, ಆ ಬಣ್ಣದ ಮಾತು! – ಹೌದು, ಬಣ್ಣದ ಮಾತು! ತನ್ನನ್ನು ಕಂಡೊಡನೆ ಆಕೆ ವ್ಯಕ್ತಗೊಳಿಸಿದ ಸಂತೋಷದಲ್ಲೂ ಕೃತ್ರಿಮತೆ ಸ್ಪಷ್ಟವಾಗಿ ಎದ್ದು ಕಾಣುತ್ತಿತ್ತು.

ಶಾರದಾಮಣಿಯ ಹಾಗೆಯೆ ರತ್ನಮ್ಮನ ಕಣ್ಣುಗಳೂ ವಿಶಾಲವಾಗಿದ್ದುವು; ಸೌಂದರ್ಯಪೂರ್ಣವಾಗಿದ್ದುವು. ಶಾರದಾಮಣಿಯ ಗೌರವರ್ಣ, ಬೆಣ್ಣೆಯಂಥ ನುಣುಪಾದ ಚರ್ಮ ರತ್ನಮ್ಮನಿಗಿರಲಿಲ್ಲವಾದರೂ ಸತತ ದುಡಿತದಿಂದ ನೈಸರ್ಗಿಕವಾಗಿ ಬರುವ ಸ್ವಭಾವಿಕವಾದ ಕಾಂತಿಯಿಂದ ಆಕೆಯ ಮುಖ ಬೆಳಗುತ್ತಿದ್ದಿತು. ರೇಶಿಮೆಯ ಸೀರೆ, ಆಧುನಿಕ ಫ್ಯಾಶನ್ನಿನ ರವಿಕೆ, ಸೊಗಸಾದ ಮುತ್ತಿನ ಹಾರ, ಕಣ್ಣು ಕೋರೈಸುವ

ನತ್ತು ಇವುಗಳಾವುವೂ ರತ್ನಮ್ಮನಿಗೆ ಲಭಿಸಿರಲಿಲ್ಲವಾದರೂ ಆಕೆ ಉಟ್ಟುಕೊಂಡಿದ್ದ ಸಾದಾ ವಾಯಿಲ್ ಸೀರೆ ರವಕೆಗಳಲ್ಲೂ ಒಂದು ಬಗೆಯ ಅದ್ವಿತೀಯ ಆಕರ್ಷಣೆ ಯಿದ್ದುದು ಸ್ಪಷ್ಟವಾಗಿದ್ದಿತು. ಶಾರದಾಮಣಿಯ ಕಣ್ಣುಗಳಲ್ಲಿ ತುಂಬಿದ್ದ ಮಿಂಚಿನ ಚಂಚಲತೆಯಾಗಲಿ, ಆಕೆಯ ನಡೆನುಡಿಗಳಲ್ಲಿ ಕಂಡುಬರುತ್ತಿದ್ದ ಕೃತ್ರಿಮತೆಯ ಹೊಳಪಾಗಲಿ ರತ್ನಮ್ಮನಲ್ಲಿ ಕೊಂಚವೂ ಕಾಣಿಸುತ್ತಿರಲಿಲ್ಲ. ಆಕಾಶದಲ್ಲಿ ಚಕಚಕನೆ ಬೀಸಿ ಕಣ್ಣು ಕುಕ್ಕಿಸಿ ಮರೆಯಾಗುವ ಮಿಂಚಿನಂಥ ದೃಷ್ಟಿ ಶಾರದಾಮಣಿಯದು, ಅದನ್ನು ದಿಟ್ಟಿಸಿ ನೋಡಲು ಸಾಧ್ಯವಾಗದು. ರತ್ನಮ್ಮನ ದೃಷ್ಟಿಯಾದರೋ ಪೂರ್ಣ ಚಂದ್ರನ ಆಹ್ಲಾದದಾಯಕ ಪ್ರಕಾಶದಂತೆ. ನೋಡಿದ ಹಾಗೆಲ್ಲ ಮತ್ತೆ ಮತ್ತೆ ನೋಡ ಬೇಕೆನ್ನಿಸುತ್ತಿತ್ತು. ನೋಡಿದಂತೆಲ್ಲ ಪ್ರಫುಲ್ಲಿತವಾಗುತ್ತಿತ್ತು. ಹೃದಯದಲ್ಲಿದ್ದ ಭಾವರಾಗ ಗಳೆಲ್ಲ ಆ ನೋಟದ ಆಲಿಂಗನಕ್ಕೊಳಗಾಗಿ ಅರಳಿದಂತಾಗುತಿತ್ತು.

ಆತನ ಮೇಲೆ ನೆಟ್ಟ ದೃಷ್ಟಿಯನ್ನು ಹಿಂದೆಗೆದುಕೊಳ್ಳದೆ ರತ್ನಮ್ಮ ತೀರ ಸಹಜ ವಾದ ಸ್ವರದಿಂದ – "ನಮಸ್ಕಾರ ಚಂದ್ರಣ್ಣನವರೆ!" ಎಂದಳು. ಅವಳ ಎದೆಯಲ್ಲಿ ತುಂಬಿ ಬಂದಿದ್ದ ಸಂತೋಷವನ್ನು ಸೂಚಿಸಲು ಆ ಒಂದು ಮಾತೇ ಸಮರ್ಥ ವಾಗಿದ್ದಿತು.

ಚಂದ್ರಣ್ಣ ತಬ್ಬಿಬ್ಬಾಗಲಿಲ್ಲ. ಶಾರದಾಮಣಿಯೆದುರಿಗೆ ಸಂಕೋಚದಿಂದ ಮೌನ ತಳೆದ ಹಾಗೆ ಆತ ಇಲ್ಲಿ ಈ ಕಾಯಕ ಜೀವಿಯ ಎದುರಿನಲ್ಲಿ ಮೌನ ತಳೆಯ ಬೇಕಾಗಿ ಬರಲಿಲ್ಲ. ರತ್ನಮ್ಮ ತನಗೆ ಅಪರಿಚಿತ ಯುವತಿಯೆಂದು ಆತನಿಗನ್ನಿಸಲೇ ಇಲ್ಲ. ಹಿಂದೆ ಎಷ್ಟೋ ಸಲ ಆಕೆಯನ್ನು ಕಂಡು ಮಾತನಾಡಿದ ಹಾಗೆ, ಆಕೆಯ ಸಹವಾಸದಲ್ಲಿ ಬಹುಕಾಲ ಕಳೆದ ಹಾಗೆ, ಆಕೆಯ ಸ್ವಭಾವದ ಎಲ್ಲ ಮೂಲೆಗಳನ್ನೂ ತಾನು ಅರಿತಿದ್ದ ಹಾಗೆ ಆತನಿಗನ್ನಿಸಿತು. ತಿಳಿಗೊಳದಂತೆ ಸ್ವಚ್ಛವಾಗಿ, ಶುದ್ಧವಾಗಿ, ಶುಭ್ರವಾಗಿ, ಹೊಳೆಯುತ್ತಿದ್ದ ಆ ಕಣ್ಣುಗಳಲ್ಲಿ ಆಕೆಯ ನಿರ್ಮಲ ಅಂತಃಕರಣವನ್ನೆಲ್ಲ ಗುರುತಿಸಿ ಕೊಳ್ಳಲು ಸಾಧ್ಯವಿದ್ದಿತು. ಕಪಟ, ಮೋಸ, ವಂಚನೆ, ಡಾಂಭಿಕತನಗಳ ಸ್ಪರ್ಶವೂ ಆ ಜೀವಕ್ಕಾಗಿರಲಿಲ್ಲವೆಂಬುದನ್ನು ಸಾರಿ ಸಾರಿ ಹೇಳುವಂತಿದ್ದ ಆ ಮುಖಭಾವವೊ!

"ನೀವು ಊರಿಗೆ ಬಂದದ್ದು ನನಗೆ ಗೊತ್ತಿತ್ತು. ಬಿಡುವು ಮಾಡಿಕೊಂಡು ನಿಮ್ಮನ್ನು ಕಂಡು ಇಲ್ಲಿಗೆ ಕರೆದು ತರಬೇಕೆಂದು ನಿಶ್ಚಯಿಸಿದ್ದೆ. ಅಷ್ಟರಲ್ಲಿ ನೀವೇ ಬಂದುಬಿಟ್ಟಿರಿ. ಕೂತುಕೊಳ್ಳಿ. ನಾನು ರೊಟ್ಟಿ ಮಾಡುತ್ತೇನೆ. ಇವೊತ್ತು ಇಲ್ಲಿಯೆ ಊಟ ಮಾಡಿಕೊಂಡು ಹೋಗಿರಿ. ಬಡವರ ಮನೆಯ ಊಟ..." ಎಂದಳಾಕೆ.

"ಓ, ಬಿಡಿ. ಬಡತನದ ಮಾತೇಕೆ ಆಡುತ್ತೀರಿ? ನಾನೇನು ಶ್ರೀಮಂತನೆಂದು ತಿಳಿದಿದ್ದೀರಾ?" ಎಂದ ಚಂದ್ರಣ್ಣ.

"ನಿಮ್ಮ ವಿಷಯ ನನಗೆ ತಿಳಿಯದಿರೋದು ಯಾವುದೂ ಇಲ್ಲ. ಸುಮ್ಮನೆ ಹೇಳಿದೆ ಅಷ್ಟೆ. ಅರ್ಧ ತಾಸು ಮಲಗಿಕೊಂಡೆ. ಆಡಿಗೆಯೂ ಆಕೆಯ ಕೊರಳಿಗೇ ಬಿತ್ತು!" ಎಂದು ನೊಂದ ದನಿಯಲ್ಲಿ ಮುದುಕಿಯೆಂದಳು.

"ನಮ್ಮ ರತ್ನಾ ಮೊದಲಿನಿಂದಲೂ ಹೀಗೇ ಚಂದ್ರಣ್ಣ. ದುಡಿತ ದುಡಿತ ಯಾವಾಗಲೂ ದುಡಿತ – ಬೆಳಗಿನಿಂದ ರಾತ್ರಿಯವರೆಗೆ ಯಾವುದಾದರೊಂದು ಕೆಲಸ ದೊಳಗೆ ತೊಡಗಿರಲೇಬೇಕು. ಕೆಲಸವಿಲ್ಲದಿದ್ದರೆ ಆಕೆಗೆ ಸೊಗಸೇ ಇರೋದಿಲ್ಲ. ಯಾವ ಕೆಲಸವೂ ಇಲ್ಲವಾದಾಗ ಪುಸ್ತಕ ಹಿಡಿದುಕೊಂಡು ಕುಳಿತುಕೊಳ್ಳುತ್ತಾಳೆ, ಇಲ್ಲವೇ ಏನನ್ನಾದರೂ ಬರೆಯುತ್ತಾಳೆ. ನನ್ನ ತಂಗಿ ಅಂತ ಆಕೆಯನ್ನ ಹೊಗಳಬೇಕಂತ ಹೇಳುತ್ತಿಲ್ಲ ನಾನು ಚಂದ್ರಣ್ಣ. ಆಕೆಯ ಗುಣಗಳನ್ನು ಕಂಡರೆ ಎಂಥವರಾದರೂ ಮೆಚ್ಚಿಕೊಳ್ಳ ಬಹುದು. ರತ್ನದಂಥ ನನ್ನ ತಂಗಿ ಇಂಥ ಸ್ಥಿತಿಯೊಳಗೆ ಕೊಳೆಯಬೇಕಾಗಿ ಬಂತಲ್ಲಾ ಅಂತ ನನಗೆ ದುಃಖ. ಆದರೇನು ಮಾಡೋದು – ಉಪಾಯವಿಲ್ಲ..." ಎಂದ ಸೋಮಣ್ಣ.

"ಇಂಥ ಪರಿಸ್ಥಿತಿ ಬರಲು ಕಾರಣವೇನಾಯ್ತು ಸೋಮಣ್ಣ? ನಿಮಗೇನು ಕಡಿಮೆಯಾಗಿತ್ತು? ಹೊಲ ಮನೆ ಎಲ್ಲಾ ಅನುಕೂಲವಾಗಿರಲಿಲ್ಲವೆ?"

"ಎಲ್ಲಿಯ ಅನುಕೂಲ ಚಂದ್ರಣ್ಣ? ನಮ್ಮ ತಂದೆ ಇದ್ದಾಗ ನಮ್ಮ ಸ್ವಂತ ಹೊಲ ವೊಂದಿತ್ತು – ಹತ್ತು ಎಕರೆ. ಎರೆ ಮಣ್ಣಿನ ಭೂಮಿ. ಚೆನ್ನಾಗಿಯೆ ಬೆಳೆ ಕೊಡುತ್ತಿತ್ತು. ನಾನು, ನನ್ನ ಹೆಂಡತಿ, ನನ್ನ ತಂದೆ, ಅವ್ವ, ತಂಗಿ ಎಲ್ಲರೂ ಮೈಮುರಿದು ದುಡಿಯುತ್ತಿದ್ದೆವು. ಆಗ ನಮಗೇನೂ ಕೊರತೆಯಿರಲಿಲ್ಲ. ಆದರೆ ನಲವತ್ತೆರಡರ ಚಳವಳಿಯೊಳಗೆ ನಾ ಬೀಳುತ್ತಲೂ ಎಲ್ಲಾ ಬದಲಾಯಿತು. ತಂದೆಗೆ ವಯಸ್ಸಾಗಿತ್ತು. ಮೊದಲಿನ ಹಾಗೆ ಅವನ ಮೈಯೊಳಗೆ ಶಕ್ತಿ ಇರಲಿಲ್ಲ. ತಾಯಿಯೂ ಮುದುಕಿಯೆ. ನನ್ನ ಹೆಂಡತಿಯೂ ತಂಗಿಯೂ ಕೂಡಿ ಹೊಲದ ಕೆಲಸ ಸಾಗಿಸಿಕೊಂಡು ಹೋಗ ಬೇಕಾಯಿತು. ಆ ವರ್ಷ ಸರಿಯಾಗಿ ಮಳೆ ಬರಲಿಲ್ಲ, ಬೆಳೆಯಾಗಲಿಲ್ಲ. ಕುಟುಂಬ ದವರೆಲ್ಲ ಗೋಳಾಡಬೇಕಾಯಿತು. ನಾನು ಚಳವಳಿಯೊಳಗ ಧುಮುಕಿ ಗುಡ್ಡ ಬೆಟ್ಟ ಅಲೀತಿದ್ದೆ. ನನ್ನನ್ನು ಹಿಡೀಬೇಕಂತ ಪೊಲೀಸರು ನಮ್ಮ ಮನೆಯವರನ್ನು ಕಾಡಿಸಿ ಪೀಡಿಸಿದರು. ನಾನಿರುವ ಸ್ಥಳ ತಿಳಿಸಲು ಒತ್ತಾಯಪಡಿಸಿದರು. ಮನೆಯವರಿಂದ

ಅದು ತಿಳಿಯದಂತೆ ಆದಾಗ ಹೊಲವನ್ನೂ ದನಕರುಗಳನ್ನೂ ಮನೆಯೊಳಗಿದ್ದ ನಾಲ್ಕಾರು ಚೀಲ ಜೋಳವನ್ನೂ ಒಕ್ಕಲುತನದ ಸಾಮಾನುಗಳನ್ನೂ ಜಪ್ತಿ ಮಾಡಿ ಕೊಂಡು ಹೋದರು. ಅಂಥ ಸ್ಥಿತಿಯೊಳಗ ಇವರೇನು ಮಾಡಬೇಕು ನೀವೇ ಹೇಳಿರಿ. ಬೇರೆ ಹೊಲ ಸಿಕ್ಕುವ ಹಾಗಿರಲಿಲ್ಲ, ಸಿಕ್ಕರೂ ಹೂಡಲು ಎತ್ತುಗಳಿರಲಿಲ್ಲ, ಬೀಜಕ್ಕೆ ಕಾಳಿರಲಿಲ್ಲ. ತುಂಬ ತೊಂದರೆಯೊಳಗೆ ದಿನ ಕಳೆಯಹತ್ತಿದರು. ಬಹಳ ದಿನ ಕೂತು ತಿನ್ನುವುದೂ ಸಾಧ್ಯವಿರಲಿಲ್ಲ. ಹೊಲದೊಳಗೆ ಕೂಲಿ ಕೆಲಸವೂ ಸಿಕ್ಕುವಂತಿರಲಿಲ್ಲ. ಕೊನೆಗೆ ಹಳ್ಳಿಯನ್ನು ಬಿಟ್ಟು ಹೊಟ್ಟೆ ತುಂಬಿಸಿಕೊಳ್ಳೋದಕ್ಕೆ ಗೋಕಾವಿ ಗಿರಣಿಗೆ ಹೋಗಿ ನಿಂತರು...''

''ಗೋಕಾವಿ?''

''ಹೌದು ಗೋಕಾವಿ. ನಮ್ಮ ಹಳ್ಳಿಗೆ ಸಮೀಪದ ಸ್ಥಳ ಅದು. ನಮ್ಮ ಹಾಗೇ ಹೊಲ ಕಳಕೊಂಡ ಗತಿಗೇಡಿ ರೈತರೆಲ್ಲ ಹೊಟ್ಟೆ ಹೊರೆಯಲು ಅಲ್ಲಿಗೆ ಹೋಗುತ್ತಾರೆ. ನಮ್ಮ ಹಳ್ಳಿ, ನಮ್ಮ ಹೊಲ, ನಮ್ಮ ಮನೆ ಬಿಟ್ಟು ಎಲ್ಲೂ ಹೊರಡದಿದ್ದ ನಮ್ಮ ಕುಟುಂಬ ಉಪಾಯವೇನೂ ಇಲ್ಲದೆ ಆ ಗಿರಣಿಯ ಕೆಲಸಕ್ಕೆ ಹೊರಡಬೇಕಾಯ್ತು. ಹೊಲದೊಳಗ ಸ್ವಚ್ಛ ಹವೆಯೊಳಗ ದುಡಿದವರಾದ ಇವರಿಗೆ ಗಿರಣಿಯೊಳಗಿನ ಹೊಲಸು ಕಮಟು ಹವೆ ಹ್ಯಾಗೆ ತಡೆಯಬೇಕು? ಗೋಕಾವಿಗೆ ಹೋದ ಆರು ತಿಂಗಳಿನೊಳಗಾಗಿ ನನ್ನ ಹೆಂಡತಿ ಹಾಸಿಗೆ ಹಿಡಿದಳು. ನಮ್ಮ ತಂದೆಯ ಶಕ್ತಿಯೆಲ್ಲ ತೀರಿಹೋಗಿತ್ತು. ಗಿರಣಿ ಯೊಳಗ ಕಾಲಿಟ್ಟ ಕೂಡಲೆ ನಡುಕ ಬರುತ್ತಿತ್ತು ಅವನಿಗೆ. ಅವ್ವನಿಗೂ ಹಾಗೇ – ಆ ಗಮ್ಮ ವಾಸನೆಯಿಂದಾಗಿ ಆಕೆಗೆ ವಾಕರಿಕೆಯಾಗುತ್ತಿತ್ತು. ಸರಿ, ಮೂರು ಮಂದಿ ಹಾಸಿಗೆ ಹಿಡಿದು ಮಲಗಿದರು. ಮೂವರ ಕೆಲಸವೂ ತಪ್ಪಿಹೋಯಿತು. ರತ್ನಮ್ಮ ಒಬ್ಬಳೇ ಕೂಲಿ ಮಾಡುತ್ತ ಇವರಿಗೆಲ್ಲ ತಂದು ಹಾಕಬೇಕಾಯಿತು. ಆಕೆ ದುಡಿದದ್ದು ಕುಟುಂಬದ ಹೊಟ್ಟೆಗೇ ಸಾಲುತ್ತಿರಲಿಲ್ಲ – ಇನ್ನು ತಂದೆ, ತಾಯಿ, ಹೆಂಡತಿ ಎಲ್ಲರಿಗೂ ಔಷಧಕ್ಕೆ ಹಣ ಎಲ್ಲಿಂದ ಬಂದೀತು?''

''ಗಿರಣಿಯವರು ಆಸ್ಪತ್ರೆಯ ವ್ಯವಸ್ಥೆ ಮಾಡಿಲ್ಲವೆ?''

''ಮಾಡಿದ್ದಾರೆ ಆದರೆ ಆ ಬಿಟ್ಟೀ ಔಷಧದಿಂದ ಗುಣವಾಗುವುದುಂಟೇ? ರೋಗ ಏನು ಅನ್ನುವುದನ್ನು ಸರಿಯಾಗಿ ತಿಳಿದುಕೊಳ್ಳುವ ಗೊಡವೆಗೂ ಹೋಗದೆ ಏನೋ ಒಂದು ಬಣ್ಣದ ನೀರು ಕೊಟ್ಟು ಕಳಿಸಿದರೆ ಗುಣವಾಗಬಹುದೇ? ನನ್ನ ಹೆಂಡತಿ ಯಂತೂ ದಿನ ದಿನಕ್ಕೆ ಕೃಶವಾಗುತ್ತ ನಡೆದಳು. ತಂದೆಯಂತೂ ಹಾಸಿಗೆ ಬಿಟ್ಟು

ಏಳುತ್ತಲೇ ಇರಲಿಲ್ಲ, ಒಂದು ದಿನ ಅಲ್ಲಿಯೆ ಆತ ಕೊನೆಯುಸಿರು ಹಾಕಿದ. ಆಗ ನಾನು ಜೈಲಿನೊಳಗಿದ್ದೆ..''

''ಹೌದು. ಆ ವಿಷಯ ನನಗೆ ನೆನಪಿದೆ. ತಂದೆ ಸತ್ತುಹೋದಾಗ ಅವರ ಅಂತ್ಯಕ್ರಿಯೆಗಳನ್ನು ನೆರವೇರಿಸಲು ಸಹ ನಿಮ್ಮನ್ನು ಪೆರೋಲ್ ಮೇಲೆ ಬಿಡಲಿಲ್ಲವಲ್ಲವೆ ಆ ಕಲ್ಲೆದೆಯ ಸರಕಾರ?''

''ಆ ಸರಕಾರವನ್ನು ಅಂದು ಉಪಯೋಗವಿಲ್ಲ, ನಾವು ಬಡವರಾದ್ದರಿಂದ ನಮಗೆ ಆ ಗತಿಯಾಯಿತು. ಅದೇ ನಾನೊಬ್ಬ ಜಮೀನುದಾರನೋ, ದೊಡ್ಡ ಸಾಹುಕಾರನೊ ಆಗಿದ್ದಲ್ಲಿ ತಕ್ಷಣ ಪೆರೋಲ್ ಸಿಕ್ಕುತ್ತಿತ್ತು. ಎ ಕ್ಲಾಸ್, ಬಿ ಕ್ಲಾಸ್‌ಗಳಲ್ಲಿ ರಾಜರಂತೆ ಸುಖವಾಗಿದ್ದ ಎಷ್ಟು ಜನ ಪುಡಾರಿಗಳು ಏನೇನೋ ನೆಪ ಹೇಳಿ ಪೆರೋಲ್ ದೊರಕಿಸಿ ಮನೆಗೆ ಹೋಗಿ ಮಜಾ ಮಾಡಿ ಬರಲಿಲ್ಲ! ನಾನೋ – ಪುಡಾರಿಯೂ ಆಗಿರಲಿಲ್ಲ, ಹಣವಂತನೂ ಆಗಿರಲಿಲ್ಲ, ಗಾಂಧೀಜಿಯವರ 'ಮಾಡು ಇಲ್ಲವೆ ಮಡಿ' ಎಂಬ ಆದೇಶವನ್ನು ಅಕ್ಷರಶಃ ಪಾಲಿಸಿ ಪ್ರಾಣದ ಪರಿವೆಯಿಲ್ಲದೆ ಸಂಸಾರದ ಕಡೆ ಲಕ್ಷ್ಯ ವಿಲ್ಲದೆ ಸರಕಾರೀ ಯಂತ್ರವನ್ನು ಮುರಿದು ನಾಶಗೊಳಿಸಲು ಹಗಲು ರಾತ್ರಿ ದುಡಿದಿದ್ದ ಸಾಮಾನ್ಯ ರೈತ ನಾನು. ಹಳ್ಳಿಯವ. ನನ್ನಂಥವನಿಗೆ ಹ್ಯಾಗೆ ದೊರಕೀತು ಪೆರೋಲ್?''

''ನಿಮ್ಮ ಪತ್ನಿಗೆ ಏನಾಗಿತ್ತು?''

''ಮೊದಲಿನಿಂದಲೂ ಆಕೆಯ ಪ್ರಕೃತಿ ನೆಟ್ಟಗಿರಲಿಲ್ಲ ಚಂದ್ರಣ್ಣ. ಹತ್ತು ವರ್ಷಗಳ ಹಿಂದೆ ಮೊದಲನೆಯ ಬಾಣಂತಿತನದ ಕಾಲಕ್ಕೆ ಅಂಟಿಕೊಂಡ ರೋಗ ಕಡೆಯವರೆಗೂ ಆಕೆಯನ್ನು ಬಿಡಲಿಲ್ಲ, ಮಕ್ಕಳು ಬೇರೆ ಉಳಿಯಲಿಲ್ಲ, ಒಂದರ ಹಿಂದೊಂದರಂತೆ ನಾಲ್ಕು ಮಕ್ಕಳಾದರೂ ಎಲ್ಲಾ ಸತ್ತುಹೋದವು, ನಾಲ್ಕಾರು ತಿಂಗಳ ವಯಸ್ಸಿನೊಳಗೇ. ಅದೊಂದು ಆಕೆಗೆ ಎದೆಕೊರಗು ಹತ್ತಿತ್ತು. ಔಷಧೋಪಚಾರ ಮಾಡಲು ಹಣವಿರಲಿಲ್ಲ, ನಾನು ಬೇರೆ ಚಳವಳಿಗೆ ಧುಮುಕಿ ಜೈಲು ಸೇರಿದ್ದೆ, ನನ್ನದೂ ಚಿಂತೆ ಹಚ್ಚಿಕೊಂಡಳು. ಗಿರಣಿಯ ಕೆಲಸಕ್ಕೆ ಬಂದ ಮೇಲಂತೂ ಆಕೆ ಪೂರಾ ನೆಲಕ್ಕೆ ಕುಸಿದುಹೋದಳು...''

ಮಗನು ಹೇಳುವುದನ್ನು ಕೇಳುತ್ತ ಹಾಯಾಗಿ ಮಲಗಿಕೊಂಡಿದ್ದ ಮುದುಕಿ ತಾನೂ ದನಿಗೂಡಿಸಿದಳು : ''ಆಗಿನ ಆಕೆಯ ಸಂಕಟಾ ಏನು ಹೇಳೂದು ತಮ್ಮ! ಕಟುಕನ ಕೈಯಾಗ ಸಿಕ್ಕ ಆಕಳಿನ ಹಾಂಗ ನರಳುತಾ ಬಿದ್ದಿದ್ದಳು ನನ್ನ ಸೊಸಿ. ಎದ್ದು ಕೂಡೂದಕ್ಕ ತ್ರಾಣ ಇರಲಿಲ್ಲ ಮೈಯೊಳಗ. ಅಂಥಾದ್ದರಾಗೂ ಎದ್ದು ಮನೀ ಕೆಲಸ

ಮಾಡುತ್ತಿದ್ದಳು. ನಾವು ಎಷ್ಟು ಬ್ಯಾಡಂದರೂ ಕೇಳುತ್ತಿರಲಿಲ್ಲ. ಅಂಥಾ ಸೊಸಿಯನ್ನ ಪಡೀಬೇಕಾದರ ಪುಣ್ಯ ಮಾಡಿ ಬರಬೇಕಪ್ಪ. ಎಲ್ಲರಿಗೂ ಸಿಗುವದಿಲ್ಲ ಅಂಥಾ ಬಂಗಾರದಂಥ ಸೊಸಿ. ನನಗಂತೂ ನನ್ನ ಮಗಳು ಬ್ಯಾರೆ, ಆಕೆ ಬ್ಯಾರೆ ಅಂತ ಒಮ್ಮೆ ಕೂಡ ಅನಿಸಲಿಲ್ಲ. ಇರುವ ತನಕ ನನ್ನ ಕೂಡ ಮಗಳ ಹಾಂಗs ನಡಕೊಂಡಳು. ಒಂದಿನವೂ ಮುಖ ಸೊಟ್ಟಗೆ ಮಾಡಿದವಳಲ್ಲ. ಅದು ಇಲ್ಲ ಇದು ಇಲ್ಲ ಅಂತ ಹಾರಾಡಿದವಳಲ್ಲ. ಒಂದು ಕೆಟ್ಟ ಮಾತು ಆಡಿದವಳಲ್ಲ. ಅವಳ ಆ ಗುಣಾ ಎಲ್ಲಾ ನೆನಸಿಕೊಂಡರ ಈಗಲೂ ಹೊಟ್ಟ್ಯಾಗ ಸಂಕಟ ಆಗುತ್ತೈತಿ ತಮ್ಮ. ಅಂಥಾ ಬಂಗಾರ ದಂಥ ಹುಡುಗಿ ಒಂದಿನ ಕೂಡಾ ಸುಖ ಕಾಣದೆ ಕಣ್ಣು ಮುಚ್ಚಿದಳಪ್ಪ. ಆ ಶಿವಗ ದಯ ಇಲ್ಲ ಅನ್ನೂದೇನೊ ಸುಳ್ಳಲ್ಲ. ನನ್ನಂಥ ಮುದುಕಿ ರಂಡೆಯನ್ನ ಒಯ್ಯುವುದನ್ನ ಬಿಟ್ಟು ರತ್ನದಂಥ ಸೊಸಿಯನ್ನೊಯ್ದನಪ್ಪ...''

''ಆಕೆ ಗೋಕಾವಿಯಲ್ಲೇ ತೀರಿಕೊಂಡರೇ?''

''ಇಲ್ಲ, ಅಲ್ಲಿ ಹೇಗೋ ಬದುಕಿ ಉಳಿದಳು. ಆದರೂ ಆಕೆಯ ಮೈಯಾಗ ಏನೂ ಉಳಿದಿರಲಿಲ್ಲ. ಈಗ ನಾನಿದ್ದೇನಲ್ಲ – ಹೀಗೇ ಎಲುಬು ಎಲುಬಾಗಿ ಉಳಿದಿದ್ದಳು ಆಕೆಯೂ. ಮೂರು ವರ್ಷ ಹೀಗೇ ಹೋಯ್ತು. ಆ ಮೂರು ವರ್ಷ ಅಂದರೆ ನಮ್ಮ ಕುಟುಂಬಕ್ಕೆ ನರಕಯಾತನೆ. ಆದರೂ ಹೇಗೋ ಎಲ್ಲವನ್ನೂ ಸಹಿಸಿ ಜೀವ ಹಿಡಿದುಕೊಂಡಿದ್ದಳು...''

''ನಿಮ್ಮ ಬಿಡುಗಡೆಯಾದದ್ದು ಯಾವಾಗ?''

''ಮುಖಂಡರೆಲ್ಲ ಬಿಡುಗಡೆ ಹೊಂದಿ ಹೊರಗೆ ಬಂದ ಮೇಲೆ, ಮತ್ತೆ ಬ್ರಿಟಿಷ್ ಸರಕಾರದೊಂದಿಗೆ ಸಂಧಾನಕ್ಕಾರಂಭವಾದ ಮೇಲೆ, ನನಗೂ ಬಿಡುಗಡೆ ಯಾಯಿತು. ಜೈಲಿನಿಂದ ಹೊರಟವನೆ ನೆಟ್ಟಗೆ ಗಿರಣಿಗೆ ಧಾವಿಸಿ ಹೋದೆ. ಅಲ್ಲಿನ ಪರಿಸ್ಥಿತಿಯನ್ನು ಕಂಡಾಗ ಕರುಳು ಕಿತ್ತು ಹೊರಗೆ ಬರುವಂತಾಯಿತು. ಎಷ್ಟು ಬೇಗ ಆ ಗಿರಣಿಯಿಂದ ಹೊರಟಷ್ಟೂ ಉತ್ತಮ ಎನ್ನಿಸಿತು. ಆದರೆ ಅಷ್ಟು ಬೇಗ ಹೊರಡುವಂತಿರಲಿಲ್ಲ. ಊರಿಗೆ ಹೋಗಿ ಏನನ್ನು ಮಾಡಬೇಕು? ಹೊಲ ಹೋಗಿತ್ತು, ದನಕರುಗಳು ಹೋಗಿದ್ದುವು, ರಂಟೆ ಕುಂಟೆಗಳೆಲ್ಲ ಹೋಗಿದ್ದವು. ನಮ್ಮದಾಗಿ ಆ ಮನೆ ಯೊಂದು ಉಳಿದಿತ್ತು ಅಷ್ಟೆ. ಮೂರು ವರ್ಷಗಳವರೆಗೆ ನೋಡಿಕೊಳ್ಳುವವರಿಲ್ಲದ್ದರಿಂದ ಮಳೆ ಗಾಳಿಗಳ ಹೊಡೆತಕ್ಕೆ ಸಿಕ್ಕಿ ಅದೂ ಅಲ್ಲಲ್ಲಿ ಬಿದ್ದುಹೋಗಿತ್ತು. ಮನೆಯೆಲ್ಲ ಸುಡುಗಾಡಿನಂತೆ ಹಾಳು ಹಾಳು ಸುರಿಯುತ್ತಿತ್ತು. ಮೂರು ಮಳೆಗಾಲಗಳಲ್ಲಿ

ಸೋರಿದ ನೀರಿನಿಂದಾಗಿ ನೆಲದಲ್ಲೆಲ್ಲ ಕೆರೆ ಬಾವಿಗಳನ್ನು ತೋಡಿದಂತಾಗಿತ್ತು. ಹೆಂಚು ಮಾಯವಾಗಿದ್ದುವು, ಗಳಗಳು ಮುರಿದುಬಿದ್ದಿದ್ದವು. ಆ ಮನೆಯನ್ನು ಸರಿಗೊಳಿಸಿ ವಾಸಕ್ಕೆ ಯೋಗ್ಯವಾಗುವ ಹಾಗೆ ಮಾಡಲಿಕ್ಕೇ ನೂರಾರು ರೂಪಾಯಿ ಖರ್ಚು ಮಾಡಬೇಕಾಗುತ್ತಿತ್ತು... ಅಷ್ಟೊಂದು ಹಣವಾದರೂ ಎಲ್ಲಿಂದ ಬರಬೇಕು? ಸರಿ, ಸದ್ಯಕ್ಕೆ ಗಿರಣಿಯಲ್ಲೇ ಇರುವುದೆಂದುಕೊಂಡು ನಾನು ಕೆಲಸಕ್ಕೆ ಸೇರಿಕೊಂಡೆ...''

ಅಡುಗೆಯ ಮನೆಯಿಂದ ರೊಟ್ಟಿ ತಟ್ಟುವ ಸದ್ದು ಕೇಳಿಬರುತ್ತಿತ್ತು. ಸುಡುತ್ತಿದ್ದ ರೊಟ್ಟಿಯ ವಿಲಕ್ಷಣ ಮಧುರ ವಾಸನೆಯೂ ಬರುತ್ತಿತ್ತು. ಚಂದ್ರಣ್ಣ ತದೇಕಚಿತ್ತದಿಂದ ಸೋಮಣ್ಣನ ಮಾತು ಕೇಳುತ್ತ ಕುಳಿತಿದ್ದ. ಹಳ್ಳಿಗಳಲ್ಲಿ ಹೊಲದಲ್ಲಿ ದುಡಿಯುತ್ತ ಅನ್ನ ಬೆಳೆದು ಲೋಕಕ್ಕೆ ನೀಡುವ ರೈತರು ಗಿರಣಿಯ ಕೂಲಿ ಕೆಲಸಕ್ಕೆ ಬಂದು ಬೀಳಲು ಕಾರಣವೇನೆಂಬುದು ಆತನಿಗೆ ಗೊತ್ತಾಗುತ್ತಲಿದ್ದಿತು. ಬೆಂಗಳೂರಿನಲ್ಲಿದ್ದಾಗ ಅಲ್ಲಿನ ಗಿರಣಿಗಳಲ್ಲಿ ಕೊಳೆಯುತ್ತಿದ್ದ ಹಳ್ಳಿಗರನ್ನು ಕಂಡಾಗಲೆಲ್ಲ ಅವರೆಲ್ಲ ಹಳ್ಳಿಗಳನ್ನು ತೊರೆದು ಪಟ್ಟಣಗಳಿಗೆ ಏತಕ್ಕಾದರೂ ಬಂದು ಬೀಳುವರೋ ಎಂದು ಹಲವು ಸಲ ಯೋಚಿಸಿದ್ದ. ಆದರೆ ಆಗ ಆ ಯೋಚನೆಗೆ ಸಮರ್ಪಕವಾದ ಉತ್ತರ ದೊರೆತಿರಲಿಲ್ಲ. ಈಗ, ಸೋಮಣ್ಣನ ಈ ಬವಣೆಯ ಕತೆ ಕೇಳಿದ ಹಾಗೆಲ್ಲ ಕೂಲಿಕಾರ ಸಮಸ್ಯೆಯ ಮೊತ್ತ ಮೊದಲನೆಯ ಅಂಶ ಆತನ ಕಣ್ಣೆದುರಿಗೆ ಕಟ್ಟಿದಂತಾಯಿತು. ಗಿರಣಿಗಳ ನರಕದಲ್ಲಿ ಬೆವರಿಳಿಸುವವರೆಲ್ಲ ಹಳ್ಳಿಗರು. ದಟ್ಟ ದರಿದ್ರರು. ತಮ್ಮ ತಮ್ಮ ಊರುಗಳಲ್ಲಿ ಹೊಟ್ಟೆ ತುಂಬಿಸಿಕೊಳ್ಳಲಾರದುದಕ್ಕೆ ಪಟ್ಟಣಗಳಿಗೆ ಬಂದವರು. ಹಳ್ಳಿಗಳಲ್ಲಿ ಅವರ ಬದುಕು ನಡೆಯುವ ಹಾಗಿದ್ದಲ್ಲಿ ಅವರು ಗುಳೇ ಕಟ್ಟಿಕೊಂಡು ಹೊರಡುತ್ತಿರಲಿಲ್ಲ. ತಮ್ಮ ಊರು, ತಮ್ಮ ಮನೆ ಮಾರು, ತಮ್ಮ ಬಂಧು ಬಳಗವನ್ನು ತೊರೆದು ಅಪರಿಚಿತ ನಗರಕ್ಕೆ ಹೊರಟುಬಿಡುವುದರಲ್ಲಿ ಯಾರಿಗೆ ತಾನೆ ಸುಖವಿದ್ದೀತು?

''ಗಿರಣಿಗಳಲ್ಲಿ ಕೂಲಿಕಾರರಾಗಿರುವವರೆಲ್ಲ ಹೀಗೇ ಒಂದಿಲ್ಲೊಂದು ತೊಂದರೆಗೊಳಗಾಗಿ ಬಂದವರಲ್ಲವೇ ಸೋಮಣ್ಣ?'' ಎಂದು ಆತ ಕೇಳಿದ.

ಆ ಪ್ರಶ್ನೆಗೆ ಸೋಮಣ್ಣ ಉತ್ತರ ಕೊಡುವಷ್ಟರಲ್ಲಿಯೆ, ಅದುವರೆಗೆ ಒಂದು ಮೂಲೆಯಲ್ಲಿ ಸುಮ್ಮನೆ ಕುಳಿತುಕೊಂಡು ನಡೆದಿದ್ದ ಮಾತುಕತೆಯೆಲ್ಲವನ್ನು ಕೇಳುತ್ತಲಿದ್ದ ನೆರೆಮನೆಯ ಕೂಲಿಕಾರನೊಬ್ಬ ಮಾತನಾಡಿದ : ''ತೊಂದರೆ ಇಲ್ಲದಿದ್ದರೆ ಇಂಥ ನರಕಕ್ಕೆ ನಾವ್ಯಾತಕ್ಕೆ ಸಾಯಾಕ ಬರ್ತಿದ್ದೆವು ಸ್ವಾಮೀ! ನಮ್ಮ ಹಳ್ಳಿ ನಮ್ಮ ಭೂಮಿ ಅಂದರೆ ಪ್ರಾಣಕ್ಕಿಂತ ಹೆಚ್ಚು ನಮಗೆ. ಇಪ್ಪತ್ತು ಮೈಲು ದೂರದಲ್ಲಿರುವ ಊರನ್ನು ಸಹ ಎಷ್ಟೋ

ಜನ ನೋಡಿರುವುದಿಲ್ಲ, ನಮ್ಮ ಊರೇ ನಮ್ಮ ಪ್ರಪಂಚ ಇದ್ದಾಂಗ ಇರುತ್ತೈತಿ. ಅಂಥಾ ಪ್ರೀತಿಯ ಸ್ಥಳ ಬಿಟ್ಟು ಬರಬೇಕಾದರ ನಮಗೆಷ್ಟು ಗೋಳಾಗಿರಬೇಕು ನೀವೇ ತಿಳಕೊಳ್ಳಿರಿ. ಸೋಮಣ್ಣನ ಕತಿ ಹೀಂಗಾದರ ನನ್ನದೂ ಸ್ವಲ್ಪ ಸ್ವಲ್ಪ ಹಾಂಗs, ನೋಡ್ರಿ, ನಮ್ಮ ಮನ್ಯಾಗ ಆರು ಮಂದಿ ಇದ್ದೆವು. ನಾನು, ನನ್ನ ಅಣ್ಣ, ಇಬ್ಬರು ತಮ್ಮಂದಿರು, ತಂದಿ ತಾಯಿ. ತಾತ ಮುತ್ತಾತರ ಕಾಲದಿಂದ ಒಬ್ಬ ಸಾವುಕಾರರ ಹೊಲಾ ಲಾವಣಿಗೆ ಹಿಡಿದು ದುಡೀತಾ ಬಂದಿದ್ದೆವು. ಅದೂ ನಾಲ್ಕು ಎಕರೆ ಭೂಮಿ. ಅಷ್ಟರಾಗs ಮೈಮುರಿ ದುಡಿದು ಹ್ಯಾಂಗೊ ಹೊಟ್ಟೆ ಹೊರೆದುಕೊಳ್ಳುತಾ ಇದ್ದೆವು. ಹೀಂಗಿರುವಾಗ ನಮ್ಮ ಅಣ್ಣನ ಮದುವಿ ಮಾಡಬೇಕಾಯಿತು. ಅದಕ್ಕ ಸಾವುಕಾರನ ಹತ್ತರ ಮುನ್ನೂರು ರೂಪಾಯಿ ಸಾಲ ಮಾಡಿದೆವು. ಆ ಸಾಲಾನೆ ನಮ್ಮೆಲ್ಲರ ಕುತ್ತಿಗೆಗೆ ಉರುಲಾತು. ವರ್ಷ ವರ್ಷ ಬಡ್ಡೀ ಕೊಡಬೇಕು. ನೂರಕ್ಕೆ ಇಪ್ಪತ್ತು ರೂಪಾಯಿ ಬಡ್ಡಿ ಮೂರು ನೂರಕ್ಕೆ ಅರುವತ್ತು ರೂಪಾಯಿ. ಈ ಬಡ್ಡೀ ಹಣ ಅಲ್ಲದೆ ಮ್ಯಾಲ ಲಾವಣೀ ಹಣ ಬ್ಯಾರೆ ಕೊಟ್ಟೇ ಕೊಡಬೇಕಲ್ಲ? ಆ ಚೋಟು ಹೊಲದ ಉತ್ಪನ್ನ ನಮ್ಮೆಲ್ಲರ ಹೊಟ್ಟೆಗೇ ಸಾಕಾಗುವಂತಿರಲಿಲ್ಲ, ಇನ್ನು ಇಷ್ಟು ರೂಪಾಯಿ ಕೊಡೋದು ಹ್ಯಾಂಗ? ಬಡ್ಡಿಯನ್ನು ಅಸಲಿಗೇ ಸೇರಿಸಿ ಒಂದಕ್ಕೆ ಹತ್ತರಂತೆ ಸಾಲ ಬೆಳೆಸುತ್ತಾ ಬಂದ ಸಾವುಕಾರ. ಮುನ್ನೂರು ರೂಪಾಯಿ ಸಾಲ ಇದ್ದದ್ದು ಮೂರು ವರ್ಷಗಳಲ್ಲಿ ಆರು ನೂರಾಯಿತು..."

ಆತನನ್ನು ನಡುವೆಯೆ ತಡೆದು ಚಂದ್ರಣ್ಣ ಕೇಳಿದ : "ಅದು ಹ್ಯಾಗಪ್ಪ ಆರು ನೂರಾಯಿತು? ಯಾವ ಸಾಹುಕಾರ ಆತ?"

"ಹಿಂಗs ಒಬ್ಬ ಸಾವುಕಾರ ಅನ್ರಿ. ಎಲ್ಲಾ ಹಳ್ಳಿಯೊಳಗೂ ಇಂಥವರು ಒಬ್ಬಿಬ್ಬರು ಇದ್ದೇ ಇರುತಾರ. ನಮ್ಮಂಥ ಬಡ ರೈತರ ರಕ್ತ ಹೀರಿ ಸೊಕ್ಕಿ ಉಬ್ಬುವ ತಗಣಿಗಳು ನೋಡ್ರಿ ಈ ಸಾವುಕಾರರು. ತಗಣಿಗಳನ್ನ ಒಂದೇ ಏಟಿಗೆ ಒರೆಸಿ ತೀರಿಸಿಬಿಡಬಹುದು. ಆದರೆ ಈ ಸಾಹುಕಾರ ತಗಣಿಗಳನ್ನ ತೀರಿಸಾಕ ಬರೂದಿಲ್ಲ, ಕಾಯಿದೆ, ಕಚೇರಿ, ಪೋಲೀಸ್ ಅಂತ ಎಷ್ಟೋ ಕೈ ಅವರನ್ನ ಕಾಯುತಿರುತವೆ. ನಮ್ಮಂಥ ಬಡವರನ್ನ ಕಾಯುವದಕ್ಕೆ ಮಾತ್ರ ಯಾವ ಕಾಯಿದೆಯೂ ಬರೋದಿಲ್ಲ, ಯಾವ ಕಚೇರಿಯೊಳಗೂ ನಮ್ಮ ದಾದು ಹತ್ತುವುದಿಲ್ಲ, ಯಾವ ಪೋಲೀಸನೂ ನಮ್ಮ ಕಡೆಗೆ ಹೊರಳಿ ನೋಡುವದಿಲ್ಲ, ನೋಡಿದರೂ ನಮ್ಮನ್ನ ಕಾಡಿಸೂದಕ್ಕಾಗೇ ಹೊರ್ತು ಕಾಯುವದಕ್ಕಾಗಿ ಅಲ್ಲ. ಏನು ಹೇಳ್ಲಿ ಸ್ವಾಮೀ ಬಡವರ ಗೋಳು. ಬಿಳೀ ಅರಿವೆ ಹಾಕ್ಕೊಂಡಿರುವ ನಿಮ್ಮಂಥ ಕಲಿತವರಿಗೆ ತಿಳೀಲಿಕ್ಕಿಲ್ಲ ನಮ್ಮ ಗೋಳು."

ಆತನ ಮಾತಿನಿಂದ ಚಂದ್ರಣ್ಣನಿಗೆ ಕೊಂಚ ನಗು ಬಂದಿತು. "ಬಿಳೀ ಅರಿವೆ ಹಾಕಿಕೊಂಡ ಮಾತ್ರಕ್ಕೆ ನಾನೇನು ದೊಡ್ಡ ಬಂಡವಾಳಗಾರ ಅಂತ ತಿಳೀಬೇಡಪ್ಪ. ಬಡತನ ಅಂದರೇನು ಅನ್ನೋದು ನನಗೂ ಗೊತ್ತಿದೆ. ನಾನೂ ಎಲ್ಲವನ್ನೂ ಅನುಭವಿಸಿದ್ದೇನೆ."

ಮೊಳಕಾಲುಗಳನ್ನು ಜೋಡಿಸಿ ಇಟ್ಟು ಎರಡು ಕೈಗಳನ್ನು ಅವುಗಳಿಗೆ ಸುತ್ತಿ ಅದರ ಮೇಲೆ ಗದ್ದವನ್ನೂರಿ ಕುಳಿತಿದ್ದ ಆ ಕೂಲಿಕಾರನ ಮುಖ ಪ್ರಸನ್ನತೆಯಿಂದ ಅರಳಿದಂತಾಯಿತು. "ಹಂಗಾದರ ಅಡ್ಡಿಯಿಲ್ಲ ಬಿಡ್ರಿ. ನೀವೂ ನಮ್ಮವರೇ ಅಂದಂಗಾಯ್ತು. ಆರು ನೂರು ರೂಪಾಯಿ ಸಾಲವಾಯ್ತು ಅಂತ ಹೇಳಿದೆನಲ್ಲ – ಅದನ್ನ ತೀರಿಸಬೇಕು ಅಂತ ಗಂಟುಬಿದ್ದ ಸಾವುಕಾರ. ಎಲ್ಲಿಂದ ತೀರಿಸುತ್ತೀರಿ, ಹ್ಯಾಂಗ ತೀರಿಸುತ್ತೀರಿ? ಹೊಟ್ಟೆ ತುಂಬೂದs ಚಿಂತಿ ಆಗಿದ್ದಾಗ ಸಾಲಾ ತೀರಿಸಾಕ ರೂಪಾಯಿ ಎಲ್ಲಿಂದ ಬಂದಾವು? ಬ್ಯಾರೆ ಏನೂ ಗತಿಯಿಲ್ಲದ್ದಕ್ಕೆ ನಾನು, ನಮ್ಮಣ್ಣ ಇಬ್ಬರೂ ಈ ಊರಿಗೆ ಬಂದು ಗಿರಣ್ಯಾಗ ಕೆಲಸ ಹಿಡಿದೆವು. ಇಲ್ಲೂ ಅದs ಗತಿ. ಬರುವ ಸಂಬಳ ಹೊಟ್ಟೆ ಬಟ್ಟೆಗೂ ಆಗ್ತಿರಲಿಲ್ಲ. ಆದರೂ ಹ್ಯಾಂಗೋ ಮಾಡಿ ತಿಂಗಳಿಗೆ ಹತ್ತು ಹತ್ತರಂತೆ ಊರಿಗೆ ಕಳಿಸುತ್ತಿದ್ದೆವು. ಅದು ಯಾತಕ್ಕಾದೀತು? ಕೊನೆಗೆ ಸಾವುಕಾರ ಖಟ್ಲೆ ಹೂಡಿದ. ಜಪ್ತಿ ತಂದ. ನಮ್ಮ ಮನೆ, ನಮ್ಮ ದನ ಕರ, ನಮ್ಮ ಕಮತದ ಸಾಮಾನು ಎಲ್ಲಾ ಅವನ ಪಾಲಿಗಾಯ್ತು. ಅಲ್ಲಿ ನಿಲ್ಲಾಕ ನೆರಳಿಲ್ಲದs ಎಲ್ಲರೂ ಇಲ್ಲಿಗೇ ಬಂದುಬಿಟ್ಟರು. ಆರು ವರ್ಷ ಆಯ್ತು ನೋಡ್ರಿ ಈ ಗಿರಣ್ಯಾಗ ನಾವು ದುಡೀಲಿಕ್ಕೆ ಹತ್ತಿದ್ದಕ್ಕ. ಇಲ್ಲಿಗೆ ಬಂದ ಮ್ಯಾಲ ನಮ್ಮಣ್ಣಗ ಏನೋ ಬ್ಯಾನಿ ಬಂದು ಸತ್ತುಹೋದ. ನಮ್ಮಪ್ಪ ನಮ್ಮವ್ವನೂ ಹೋಗಿಬಿಟ್ಟರು. ನಮ್ಮಣ್ಣನ ಹೆಂಡತಿ ಬ್ಯಾರೆ ಒಬ್ಬನ್ನ ಮಾಡಿಕೊಂಡು ಹೋಗಿಬಿಟ್ಟಳು. ಈಗ ನಾನು, ನಮ್ಮ ತಮ್ಮಂದಿರಿಬ್ಬರು ಮಾತ್ರ ಉಳಿದೀವಿ. ಅವರೂ ದುಡೀತಾರ ಗಿರಣ್ಯಾಗ."

"ಇನ್ನೂ ಸಣ್ಣವರೇನಪ್ಪಾ ಅವರು?"

"ಒಬ್ಬ ಹದಿನೈದು ವರ್ಷದವ. ಇನ್ನೊಬ್ಬ ಹದಿಮೂರು ವರ್ಷದವ."

ಚಂದ್ರಣ್ಣನಿಗೆ ತಿಳಿಯದಂತೆಯೆ ಆತನ ಮುಖದಿಂದ ನಿಟ್ಟುಸಿರೊಂದು ಹೊರಬಿದ್ದಿತು. ಹಳ್ಳಿಯ ರೈತರನ್ನು ಕೂಲಿಕಾರರನ್ನಾಗಿ ಮಾರ್ಪಡಿಸುವ ಈ ಹೀನ ದೀನಸ್ಥಿತಿ! ಹದಿನೈದು, ಹದಿಮೂರು ವರ್ಷದ ಹುಡುಗರು ಸಹ ಈ ಗಿರಣಿಯ ನರಕದಲ್ಲಿ ಬೆವರಿಳಿಸಬೇಕು. ಶಿಕ್ಷಣ ಪಡೆಯುವ ವಯಸ್ಸು ಅವರದು. ಆದರೆ ಅವರ ಪಾಲಿಗೆ

ಮಾತ್ರ ಶಿಕ್ಷಣವೆನ್ನುವುದು ಕನಸಿನ ಮಾತು. ದುಡಿಯಬೇಕು, ಹೊಟ್ಟೆ ಹೊರೆಯಬೇಕು. ಇವೆರಡನ್ನುಳಿದು ಬೇರಾವ ದಾರಿಯೂ ಅವರಿಗಿಲ್ಲ. ಪ್ರಪಂಚದ ಇನ್ನಿತರ ಎಲ್ಲ ದಾರಿಗಳು, ಶಿಕ್ಷಣ ಕಲೆ ಸಂಸ್ಕೃತಿ ಸಾಹಿತ್ಯಾದಿಗಳು ಅವರ ಮಟ್ಟಿಗೆ ಅರ್ಥವಿಲ್ಲದುವು!

ಸೋಮಣ್ಣ ಮತ್ತೆ ಹೇಳತೊಡಗಿದ್ದ: "ಇಂಥ ವಯಸ್ಸಿನ ಹುಡುಗರೆಷ್ಟೋ ಜನ ಗಿರಣಿಯಲ್ಲಿ ದುಡೀತಿದ್ದಾರೆ ಚಂದ್ರಣ್ಣ. ಅವರು ದುಡೀದಿದ್ದರೆ ನಡೆಯುವುದಿಲ್ಲ. ಕುಟುಂಬದ ಹೊಟ್ಟೆ ತುಂಬಬೇಕಲ್ಲ? ಅಂತೇ ಎಲ್ಲರೂ ದುಡೀತಾರೆ. ಆದರೂ ಸಾಲುವದಿಲ್ಲ. ಅವರ ಬವಣೆ ತಪ್ಪೋದಿಲ್ಲ. ಬರುವ ಸಂಬಳ ತೀರ ಕಡಿಮೆ. ಸಾಮಾನುಗಳ ಧಾರಣೆ ಮಾತ್ರ ವಿಪರೀತ. ಹೀಗಾಗಿ ಎಲ್ಲವೂ ಗೋಳೇ... ಈ ವಸತಿಯಲ್ಲಿ ಏನಿಲ್ಲ ಎಂದರೂ ಐದು ನೂರು ಜನ ಕೂಲಿಕಾರರಿದ್ದಾರೆ. ಒಬ್ಬರ ಮನೆಯೊಳಗೂ ಆನಂದ ಅನ್ನೋದನ್ನ ಕೇಳಬೇಡಿರಿ. ತೃಪ್ತಿ ಅನ್ನೋದನ್ನ ಕೇಳಬೇಡಿರಿ. ಹೊಟ್ಟೆ ತುಂಬಿದ್ದರಷ್ಟೇ ತೃಪ್ತಿಯಾಗುವದು? ಏಳಿ, ಚಂದ್ರಣ್ಣ ಊಟಕ್ಕೇಳಿ."

"ಇಲ್ಲಪ್ಪ ನನಗೆ ಹಸಿವೇ ಇಲ್ಲ."

ಅಷ್ಟರಲ್ಲಿ ರತ್ನಮ್ಮ ಅಡುಗೆ ಮನೆಯಿಂದ ಹೊರಗೆ ಬಂದು–"ಏಳಿರಿ ಚಂದ್ರಣ್ಣನವರೆ, ಅಡುಗೆಯಾಯಿತು," ಎಂದಳು.

"ನೀವು ಸೋಮಣ್ಣ?" ಎಂದ ಚಂದ್ರಣ್ಣ.

"ನಾನಿನ್ನೂ ರೊಟ್ಟಿ ತಿನ್ನುವಂತಿಲ್ಲ. ಸ್ವಲ್ಪ ಗಂಜಿ ಕುಡಿದರಾಯಿತು. ನೀವು ಊಟ ಮುಗಿಸಿ. ಒಬ್ಬರೇ ಆದುದಕ್ಕೆ ಸಂಕೋಚ ಮಾಡಿಕೋಬೇಡಿರಿ. ನಿಮ್ಮದೇ ಮನೆ ಅಂತ ತಿಳಿದುಕೊಳ್ಳಿರಿ."

"ನಿಮ್ಮದೇ ಮನೆ!" ಚಂದ್ರಣ್ಣನಿಗೆ ಹಠಾತ್ತಾಗಿ ಸಂಗಪ್ಪ ಶೆಟ್ಟರ ಮಾತು ನೆನಪಿಗೆ ಬಂತು. ಅವರೂ ಕೂಡ ಆ ಶಬ್ದಗಳನ್ನೆ ಉಪಯೋಗಿಸಿದ್ದರು. ತಮ್ಮ ಮನೆಗೇ ಬಂದು ಇರಬೇಕೆಂದು ಹೇಳಿದ್ದರು. ಆದರೆ ಆ ಸ್ಥಳದಲ್ಲಿ ತನಗೆ ಆತ್ಮೀಯತೆ ಕೊಂಚವೂ ಹುಟ್ಟಿರಲಿಲ್ಲ. ಬಂಡವಲಿನ ಆ ವಾತಾವರಣದಲ್ಲಿ ತನಗೆ ಸರಿಯಾಗಿ ಉಸಿರಾಡಿಸುವುದಕ್ಕೂ ಸಾಧ್ಯವಾಗಿರಲಿಲ್ಲ. ಯಾವುದೋ ಅದೃಶ್ಯ ಹಸ್ತವೊಂದು ತನ್ನ ಮೂಗಿನ ಹೊರಳೆಗಳನ್ನು ಬಲವಾಗಿ ಹಿಡಿದು ಶ್ವಾಸೋಚ್ಛ್ವಾಸಕ್ಕೆ ತಡೆಯನ್ನೊದಗಿಸಿದ ಹಾಗೆ ತೋರುತ್ತಿತ್ತು. ಅಲ್ಲಿ, ಆ ಮಿದುವಾದ ರತ್ನಗಂಬಳಿಯ ಮೇಲೆ ಅಡಿಯಿಡುವಾಗ, ಮೆತ್ತಗಿನ ಸೋಫಾಗಳ ಮೇಲೆ ಒರಗಿರುವಾಗ, ತಾನು ಹಿಂದೆ ಎಂದೂ ಕಾಣದಿದ್ದ

ಹಣ್ಣುಗಳನ್ನು, ಸೀ ತಿಂಡಿಗಳನ್ನು ತಿನ್ನಬೇಕಾಗಿ ಬಂದಾಗ, ಶಾರದಾಮಣಿಯ ವಿಭಾಗ ದಲ್ಲಿ ಆಕೆಯ ಕೊಠಡಿಗಳ ರಾಜವೈಭವವನ್ನು ನಿರುಕಿಸುತ್ತಿದ್ದಾಗ, ಮೋಟಾರು ಕಾರಿನ ನುಣುಪಾದ ಹಾಸುಗೆಯಲ್ಲಿ ಶರೀರವನ್ನು ಚೆಲ್ಲಿದಾಗ ಸಂಕೋಚದಿಂದ ಆತನ ಹೃದಯ ಒಳಗೊಳಗೇ ಮುದುಡಿಕೊಳ್ಳುತ್ತಿತ್ತು. ಆದರೆ ಇಲ್ಲಿ ಈ ಕೂಲಿಕಾರರ ವಸತಿ ಯಲ್ಲಿರುವ ಪುಟ್ಟ ಗುಡಿಸಲಲ್ಲಿ, ಹಳ್ಳಿಯ ಈ ಸರಳ ಸಾದಾ ಜೀವಿಗಳ ನಡುವೆ ಆತನಿಗೆ ಯಾವ ಸಂಕೋಚವೂ ಉಂಟಾಗುತ್ತಿರಲಿಲ್ಲ. ಈ ವಾತಾವರಣದಲ್ಲಿ ಆತನಿಗೆ ಉಸಿರು ಕಟ್ಟುವಂತಿರಲಿಲ್ಲ. ಈ ಜನಗಳಿಗೆ ತಾನು ಅಪರಿಚಿತನೆಂದು ಎನಿಸುತ್ತಿರಲೇ ಇಲ್ಲ. ತಾನೂ ಅವರಲ್ಲೊಬ್ಬ, ಅವರೆಲ್ಲ ತನಗೆ ಆತ್ಮೀಯರು ಎಂಬ ಭಾವನೆ ಬಂದಿತ್ತು. ಅಂತೆಯೆ – "ಊಟಕ್ಕೇಳಿ," ಎಂದು ರತ್ನಮ್ಮ ಕರೆದಾಗ, ಒಬ್ಬನೆ ಕುಳಿತು ಊಟ ಮಾಡುವುದಕ್ಕೂ ಆತನಿಗೆ ಸಂಕೋಚವಾಗಲಿಲ್ಲ.

* * *

ರತ್ನಮ್ಮ ಮಣೆ ಹಾಕಿ ಸಿದ್ಧಗೊಳಿಸಿದ್ದಳು. ಅದರ ಮೇಲೆ ಕುಳಿತುಕೊಂಡು ಚಂದ್ರಣ್ಣ ಅಡುಗೆಯ ಮನೆಯಲ್ಲೆಲ್ಲ ದೃಷ್ಟಿಯನ್ನೋಡಿಸಿದ ಹಾಗೆ ತಮ್ಮ ಊರಿನಲ್ಲಿನ ತಮ್ಮ ಮನೆ ಆತನ ಕಣ್ಣುಗಳೆದುರಿಗೆ ಮೂಡಿದಂತಾಯಿತು. ಆ ಮನೆಯಲ್ಲೂ ಅಂಥದೇ ಬಡತನವಿತ್ತು, ಅಂಥವೇ ಸಂಕಟ ಪರಂಪರೆಗಳಿದ್ದುವು. ಈ ಅಡುಗೆಯ ಕೊಠಡಿಯ ಹಾಗೆ ತಮ್ಮ ಮನೆಯ ಅಡುಗೆಯ ಕೊಠಡಿಯೂ ತೀರ ಚಿಕ್ಕದಾಗಿತ್ತು. ಒಂದು ಕಡೆಗೆ ಒಲೆ, ಇನ್ನೊಂದು ಕಡೆಗೆ ಬಚ್ಚಲು. ಅಲ್ಲೇ ನೀರಿನ ಕೊಡಗಳು, ಅಲ್ಲೇ ಗಡಿಗೆ ಮಡಕೆಗಳು. ಆಹಾರ ಪದಾರ್ಥಗಳು, ತರಕಾರಿ ಸಾಮಾನುಗಳೂ ಅಲ್ಲಿಯೆ. ಮೇಲ್ಛಾವಣಿಯ ಗಳಗಳಿಗೆ ನೇತಾಡುತ್ತಿದ್ದ ನೆಲುವುಗಳಲ್ಲಿ ಬಗೆಬಗೆಯ ಬುಟ್ಟಿಗಳು, ಪಾತ್ರೆಗಳು. ಹತ್ತು ವರ್ಷಗಳಿಂದ ಭೋಜನಾಲಯಗಳಲ್ಲಿ ಊಟ ಮಾಡುತ್ತಿದ್ದ ಚಂದ್ರಣ್ಣನಿಗೆ ಆ ದಿನ ಇಲ್ಲಿ ಊಟಕ್ಕೆ ಕುಳಿತಾಗ ತನ್ನ ಮನೆಯ ನೆನಪು ಉಕ್ಕೇರಿ ಬಂದು ಆತನ ಹೃದಯವನ್ನು ಪುಲಕಗೊಳಿಸಿತು. ಹಲವಾರು ವರ್ಷಗಳ ವನವಾಸದಿಂದ, ಅಲೆದಾಟದಿಂದ ಮರಳಿ ಮನೆಗೆ ಬಂದ ಪ್ರವಾಸಿಕನಂತೆ ಆತನ ಸ್ಥಿತಿಯಾಗಿತ್ತು. ಎದುರಿಗೆ, ತಟ್ಟೆಯಲ್ಲಿ ಬೀಳುತ್ತಿದ್ದ ಸಾದಾ ಜೋಳದ ರೊಟ್ಟಿ ಪಂಚಪಕ್ವಾನ್ನಕ್ಕಿಂತ ಹೆಚ್ಚು ಆಕರ್ಷಕವಾಗಿ ತೋರುತ್ತಿತ್ತು. ಅದರ ಜತೆಯಲ್ಲೇ, ಬಡಿಸುತ್ತಿದ್ದ ಬಳೆಯ ಕೈ, ಆ ಮುಗ್ಧ ಮುಖದಲ್ಲಿ ಸ್ಪಷ್ಟವಾಗಿ ಎದ್ದು ಕಾಣಿಸುತ್ತಿದ್ದ ಅಕ್ಕರತೆ ಆತನನ್ನು ಅಪೂರ್ವವಾದ

ಸ್ನೇಹಲೋಕವೊಂದಕ್ಕೆ ತಂದು ಬಿಟ್ಟ ಹಾಗಿದ್ದಿತು. ಭೋಜನಾಲಯಗಳಲ್ಲಿ ಬಡಿಸುವ ಮಾಣಿಗಳ ಮುಖಗಳ ಮೇಲೆ ಎಲ್ಲಿಂದ ಬರಬೇಕು ಆ ವಾತ್ಸಲ್ಯ? ಆ ಪ್ರೀತಿ? ಆ ಆತ್ಮೀಯ ಭಾವ?

''ಒಂದಿಲ್ಲೊಂದು ದಿನ ನನ್ನ ಕೈಯಿಂದ ನಿಮಗೆ ಊಟಕ್ಕೆ ನೀಡಲೇಬೇಕೆಂದು ನಾನು ನಿರ್ಧರಿಸಿದ್ದೆ. ಇಷ್ಟು ಬೇಗ ಅದು ಕೈಗೂಡಬಹುದೆಂದು ಮಾತ್ರ ನಾ ತಿಳಿದಿರಲಿಲ್ಲ,'' ಎಂದಳು ರತ್ನಮ್ಮ.

''ಹಾಗಾದರೆ ನಿಮ್ಮ ಆತ್ಮವಿಶ್ವಾಸ ಬಲು ದೊಡ್ಡದು.''

''ನಂಬಿ ಕರೆದರೆ ಓ ಎನ್ನನೇ ಶಿವನು – ಅಂತ ಹೇಳಿಲ್ಲವೆ ಬಸವಣ್ಣನವರು? ಈ ವಚನದಲ್ಲಿ ನನಗಂತೂ ಪೂರಾ ನಂಬಿಕೆಯಿದೆ.''

''ಇರಲೇಬೇಕು. ನಂಬಿಕೆಯಿರಲಿಲ್ಲವಾದರೆ ನೀವು ಕವಿತೆ ಬರೆಯುವಷ್ಟು ಪ್ರಗತಿ ಹೊಂದುತ್ತಿರಲಿಲ್ಲ.''

''ಕವಿತೆಯ ಮಾತೇಕೆ ಬಿಡಿರಿ. ನಾನು ಕಳಿಸಿದ ಆ ಕವಿತೆಯನ್ನು ಕಂಡು ಹೇಳುತ್ತಿದ್ದೀರಾ? ನನಗಂತೂ ಅದು ಕವಿತೆ ಅಂತ ಅನ್ನಿಸಿರಲೇ ಇಲ್ಲ, ಈಗಲೂ ಅನ್ನಿಸುವುದಿಲ್ಲ. ಪುಟ್ಟಪ್ಪನವರ, ಬೇಂದ್ರೆಯವರ ಕವಿತೆಗಳನ್ನೋದುತ್ತ ಕುಳಿತಾಗಲೆಲ್ಲ ನಾನೂ ಬರೆಯಬೇಕೆಂಬ ಹುಚ್ಚು ಬರುತ್ತೆ ತಲೆಯಲ್ಲಿ. ಅಂಥ ವೇಳೆಯಲ್ಲಿ ಗೀಚಿದ ಸಾಲುಗಳಿವೆ, ಅಷ್ಟೆ – ನಿಜ ಹೇಳಬೇಕಾದರೆ ಕವಿತೆ ಎಂದರೇನೆಂಬುದೇ ನನಗೆ ತಿಳಿಯದು.''

''ಕತೆ ಕವಿತೆಗಳ ಮಾತು ತೆಗೆದು ಅವರಿಗೆ ಊಟ ಹಾಕಲು ಮರೆಯಬೇಡ ರತ್ನಾ, ಮೊದಲು ಅವರ ಊಟವಾಗಲಿ. ಆಮೇಲೆ ಮಾತನಾಡುವಿರಂತೆ,'' ಎಂದು ಸೋಮಣ್ಣ ನಗುತ್ತ ನುಡಿದುದು ಕೇಳಬರುತ್ತಲೂ ಆಕೆ ಮಾತನ್ನು ಅಷ್ಟಕ್ಕೇ ನಿಲ್ಲಿಸಿದಳು.

''ಇರಲಿ ಬಿಡಿ ಸೋಮಣ್ಣ – ಮಾತಿಲ್ಲದ ಮೌನದ ಊಟವೂ ಒಂದು ಊಟವೆ? ಹಾಗಾದರೆ ಹೋಟಲೂಟಕ್ಕೂ ಮನೆಯ ಊಟಕ್ಕೂ ವ್ಯತ್ಯಾಸವೇನು?'' ಎಂದ ಚಂದ್ರಣ್ಣ.

ಊಟ ತೀರಿಸಿ ಕೈತೊಳೆದುಕೊಂಡು ಆತ ಮತ್ತೆ ಪಡಸಾಲೆಗೆ ಬಂದು ಕುಳಿತುಕೊಂಡ. ಒಂದು ಸಿಗರೇಟು ಹತ್ತಿಸಿ ಹೊಗೆಯನ್ನೆಳೆಯುತ್ತ ಸೋಮಣ್ಣನ ಕಡೆಗೆ ತಿರುಗಿ – ''ಈ ಹತ್ತು ವರ್ಷಗಳಲ್ಲಿ ಇದೇ ಮೊದಲ ಬಾರಿ ನಾನು ಹೊಟ್ಟೆತುಂಬಾ ಊಟ

ಮಾಡಿದ್ದು ನೋಡಿ ಸೋಮಣ್ಣ!'' ಎಂದ.

ಸೋಮಣ್ಣ ಆಶ್ಚರ್ಯಗೊಂಡು – ''ಅದೇನು ಹೀಗೆ ಹೇಳ್ತೀರಿ,'' ಎಂದ.

''ಆ ಹೋಟಲುಗಳಲ್ಲಿ ಯಾರಿಗೆ ತಾನೆ ಊಟ ರುಚಿಸುತ್ತದೆ ಸೋಮಣ್ಣ? ಹೊಲಸು ವಾಸನೆ ಬಡಿಯುವ ಎಲೆ, ಎಣ್ಣೆ ತೇಲುವ ನೀರು, ಎರಡು ದಿನಗಳ ಚಟ್ನಿ ಹಳಸಿದ ಪಲ್ಯ, ಹಸಿ ಬಿಸಿ ಬೇಯ್ದ ಅನ್ನ ಕಲ್ಲು ಮಣ್ಣು ಹುಳ ಬೆರೆತ ಹುಳಿ, ಆ ಗಬ್ಬು ವಾಸನೆ! ಸ್ವಲ್ಪ ತಿಂದೊಡನೆ ಹೊಟ್ಟೆ ತುಂಬಿದ ಹಾಗಾಗುತ್ತದೆ – ಅನ್ನದ ಮೇಲಿನ ರುಚಿಯೇ ಹೊರಟುಹೋಗುತ್ತದೆ – ನೀಡುವವರ ಮುಖಗಳಾದರೋ ಯಂತ್ರ ವತ್ತಾಗಿರುತ್ತವೆ. ಮಮತೆಯ ಒಂದು ಕಣವನ್ನೂ ಅಲ್ಲಿ ಕಾಣುವಂತಿಲ್ಲ. ಬಡಿಸುವ ಕೈ ಉದಾರವಾಗಿದ್ದರೆ ಉಣ್ಣುವವರಿಗೆ ಉತ್ಸಾಹ ಬಂದೀತು. ಆ ಹೋಟಲುಗಳು... ಹತ್ತು ವರ್ಷಗಳ ಕಾಲ ಅಲ್ಲಿ ಉಂಡು ಉಂಡು ನನಗೆ ಊಟ ಎಂದರೇನೆ ಬೇಸರ ಬರುವಂತಾಗಿದೆ.''

''ನಿಮ್ಮ ಮನೆಯವರು?''

''ಹತ್ತು ವರ್ಷಗಳ ಹಿಂದೆಯೆ ಮನೆಯೆಂಬುದು ನನಗಿಲ್ಲವಾಯಿತು. ನನ್ನ ತಾಯಿ ಆಗ ತೀರಿಕೊಂಡರು. ಅವರಿಗಿಂತ ಎಂಟು ವರ್ಷಗಳಿಗೆ ಮೊದಲೇ ತಂದೆ ಕಣ್ಣು ಮುಚ್ಚಿದ್ದರು. ಜೈಲಿನಲ್ಲಿದ್ದಾಗ ಆ ವಿಷಯಗಳನ್ನೆಲ್ಲ ನಾನು ನಿಮಗೆ ಹೇಳಲಿಲ್ಲವೆ?''

''ಇಲ್ಲ – ಆಗ ಇಂಥ ಸಂಗತಿಗಳನ್ನು ನಾವು ಚರ್ಚಿಸಿರಲಿಲ್ಲ, ಕಾಂಗ್ರೆಸ್, ಸ್ವಾತಂತ್ರ್ಯ, ರೈತರು, ಬಡತನ ಮುಂತಾದ ವಿಷಯ ಮಾತ್ರ ಮಾತನಾಡುತ್ತಿದ್ದೆವು. ನಿಮ್ಮ ಖಾಸಗೀ ವಿಷಯ ಗೊತ್ತಾಗೋದು ಇದೇ ಮೊದಲು ನನಗೆ. ಅಂತೂ ನಿಮಗೆ ಈಗ ಯಾರೂ ಸಂಬಂಧಿಕರಿಲ್ಲ ಅನ್ನಿರಿ. ಅಣ್ಣ ತಮ್ಮಂದಿರು?''

''ಒಡಹುಟ್ಟಿವದರಾರೂ ಇಲ್ಲ, ತಂದೆತಾಯಿಗಳಿಗೆ ನಾನೊಬ್ಬನೇ ಮಗ. ನಾನೊಬ್ಬನೇ ಇರುವದೂ ಒಂದು ರೀತಿಯಿಂದ ಒಳ್ಳೆಯದೇ ಆಯಿತು, ನನ್ನ ಬೆನ್ನ ಹಿಂದೆ ತಮ್ಮಂದಿರೋ ತಂಗಿಯರೋ ಇದ್ದಿದ್ದಲ್ಲಿ ಬಹಳ ತೊಂದರೆಯಾಗುತ್ತಿತ್ತು ಅವರಿಗೆ. ನನ್ನಿಂದಾಗಿ ಅವರೂ ಗೋಳಾಡಬೇಕಾಗುತ್ತಿತ್ತು...''

''ಇನ್ನೂ ಮದುವಿ ಮಾಡಿಕೋಲಿಲ್ಲವೇನಪ್ಪಾ?'' ಎಂದು ಕೇಳಿದಳು ಮುದುಕಿ.

''ಇಲ್ಲವಮ್ಮ ನನ್ನದು ವಿಚಿತ್ರ ಜೀವನ. ಇವೊತ್ತು ಈ ಊರಲ್ಲಿದ್ದರೆ ನಾಳೆ

ಇನ್ನೊಂದು ಊರಲ್ಲಿರುವ ಮನುಷ್ಯ ನಾನು. ಒಂದು ನೌಕರಿ ಒಂದು ಚಾಕರಿ ಮಾಡಿಕೊಂಡು ಒಂದು ಕಡೆಗೆ ನೆಲೆಸುವ ಸ್ವಭಾವ ನನ್ನದಲ್ಲ, ಒಬ್ಬರ ಕೈಕೆಳಗೆ ಕೆಲಸ ಮಾಡುವದು, ಒಬ್ಬರ ಹಂಗಿನಲ್ಲಿರುವದು ಅಂದರೆ ನನಗಾಗದು. ನನ್ನಂಥವ ಮದುವೆ ಯಾದರೆ ಆ ವಧುವಿಗೂ ಸಂಕಟ ಕಟ್ಟಿಟ್ಟದ್ದೇ. ಇಂಥವನನ್ನು ಕಟ್ಟಿಕೊಂಡು ಏನೆಂದು ಸುಖಪಡಬೇಕು ಆಕೆ? ನನ್ನ ಮಟ್ಟಿಗೆ ನನಗೆ ಸಂಕಟ, ತೊಂದರೆ, ತಾಪತ್ರಯಗಳೆಂದರೆ ಕೊಂಚವೂ ಲಕ್ಷ್ಯವಿಲ್ಲ, ಆದರೆ ನನ್ನ ಜೊತೆಗೆ ಇನ್ನೊಂದು ಜೀವಕ್ಕೆ ಯಾಕೆ ತೊಂದರೆ ಕೊಡಬೇಕು? ಅಲ್ಲದೆ ನನ್ನಂಥವನಿಗೆ ಹೆಣ್ಣು ಕೊಡುವವರಾದರೂ ಯಾರು? ನನ್ನ ಸಂಪಾದನೆಯಾದರೂ ಏನು?'' ಎಂದು ನಕ್ಕು ನುಡಿದ ಚಂದ್ರಣ್ಣ.

ಅಣ್ಣನಿಗೆ ಗಂಜಿ ಕುಡಿಸುತ್ತಿದ್ದ ರತ್ನಮ್ಮ ಮೆಲುನಗೆ ನಕ್ಕಳು. ''ಎಲ್ಲಾ ಚೇಷ್ಟೆಗೆ ಹೇಳುತ್ತೀರಂತ ಕಾಣುತ್ತೈತಿ. ನಿಮ್ಮಂಥವರ ಕೈ ಹಿಡೀಬೇಕಾದರೆ ಹೆಣ್ಣು ಪುಣ್ಯಾ ಮಾಡಿ ಬಂದಿರಬೇಕು,'' ಎಂದಳು ಮುದುಕಿ.

''ನನ್ನ ಮದುವೆಯ ಮಾತು ಹಾಗಿರಲಿ. ನೀವು ಇಲ್ಲಿಗೆ ಬಂದುದು ಯಾವಾಗ, ಏಕೆ ಎಂಬುದನ್ನು ಹೇಳಲೇ ಇಲ್ಲವಲ್ಲ ಸೋಮಣ್ಣ?''

ಗಂಜಿಯನ್ನು ಕುಡಿದು, ನೀರಿನಿಂದ ಬಾಯಿ ಮುಕ್ಕಳಿಸುತ್ತ ಸೋಮಣ್ಣನೆಂದ : ''ಓ! ಅದೊಂದು ದೊಡ್ಡ ಕತೆ ಚಂದ್ರಣ್ಣ. ಈಗಾಗಲೆ ರಾತ್ರಿಯಾಯಿತು. ನಿಮಗೆ ನಿದ್ರೆ ಬರುತ್ತಿದೆಯೊ ಏನೊ...''

ಆತನನ್ನು ನಡುವೆಯೆ ತಡೆದು ಚಂದ್ರಣ್ಣನೆಂದ : ''ನಿದ್ರೆ? ಇಷ್ಟು ಬೇಗ? ಇನ್ನೂ ಬರೀ ಒಂಬತ್ತು ಗಂಟೆ. ಹೇಳಿ ಕೇಳಿ ನಾವು ಪತ್ರಿಕೋದ್ಯೋಗಿಗಳು ರಾತ್ರಿ ರಾತ್ರಿಯೆಲ್ಲ ಕುಳಿತು ಕೆಲಸ ಮಾಡಿ ರೂಢಿಯಿರುತ್ತದೆ.''

ಮುದುಕಿ ಬೆರಗುಗೊಂಡ ಸ್ವರದಲ್ಲಿ ಕೇಳಿದಲು : ''ಹೀಂಗ ಹಗಲೂ ರಾತ್ರೀ ದುಡಿದರ ನಿದ್ದೆ ಯಾವಾಗ ಮಾಡೋದು?''

''ಸಮಯ ಸಿಕ್ಕಾಗ. ನಿದ್ದೆ ಇದ್ದರೂ ನಡೆಯುತ್ತೆ, ಇಲ್ಲದಿದ್ದರೂ ನಡೆಯುತ್ತೆ. ಮೊದಲೇ ಹೇಳಿದೆನಲ್ಲ – ವಿಚಿತ್ರ ಜೀವನ ನಮ್ಮದು ಅಂತ. ಒಂದೆರಡು ಕಪ್ ಕಾಫಿ, ಒಂದೆರಡು ಪ್ಯಾಕು ಸಿಗರೇಟು ಇದ್ದುಬಿಟ್ಟರಾಯಿತು. ನಿದ್ದೆ ಬೇಸರಿಕೆ, ಬಾಯಾರಿಕೆ, ಹಸಿವು, ದಣಿವು ಎಲ್ಲಾ ಎಲ್ಲೋ ಓಡಿಹೋಗುತ್ತೆ.''

''ಹೀಗೆ ದುಡಿದರೆ ಆರೋಗ್ಯದ ಗತಿಯೇನು? ಇಷ್ಟು ಕಾಫಿ, ಇಷ್ಟು ಸಿಗರೇಟು

ಒಳ್ಳೆಯದಲ್ಲವಲ್ಲವೆ?'' ಎಂದಳು ರತ್ನಮ್ಮ.

ನಗುವ ಕಣ್ಣುಗಳಿಂದ ಆಕೆಯನ್ನು ದಿಟ್ಟಿಸುತ್ತ ಚಂದ್ರಣ್ಣ ಉತ್ತರವಿತ್ತ : ''ಒಳ್ಳೆಯದಲ್ಲವೆನ್ನುವುದು ನಿಜವೆ - ಆದರೆ ಬೇರೆ ಉಪಾಯವಿರುವುದಿಲ್ಲ. ಕೆಲಸವೋ ಬೆಟ್ಟದುದ್ದ ಬಿದ್ದಿರುತ್ತೆ. ದಿನದ ಇಪ್ಪತ್ನಾಲ್ಕು ಗಂಟೆಗಳೂ ಸಾಲವು ಆ ಕೆಲಸಕ್ಕೆ. ಅಂತೆಯೆ, ಕಾಫಿ ಹಾಕಿ ಸಿಗರೇಟಿನ ಹೊಗೆ ಜಡಿದು ನಿದ್ದೆಯನ್ನೂ ತಡೆಹಿಡಿಯಲೇ ಬೇಕಾಗುತ್ತೆ. ಪರವಾಯಿಲ್ಲ ಹೇಳಿ ಸೋಮಣ್ಣ. ನೀವು ಗಿರಣಿಗೆ ಬಂದ ಮೇಲೆ ಮುಂದೇನಾಯಿತು?''

''ನಾನೂ ಕೆಲಸಕ್ಕೆ ಸೇರಿದೆನಂತ ಹೇಳಿದೆನಲ್ಲವೆ? ಒಂದು ವರ್ಷದ ತನಕ ಅಲ್ಲೇ ಕೆಲಸ ಮಾಡುತ್ತಿದ್ದೆ. ಕೂಲಿಕಾರರೆಲ್ಲ ಸೇರಿ ಒಂದು ಸಂಘ ಮಾಡಿಕೊಳ್ಳಲು ಯತ್ನಿಸುತ್ತಿದ್ದರು. ನಾನೂ ಆ ಸಂಘದ ಚಟುವಟಿಕೆಯಲ್ಲಿ ಬಿದ್ದೆ. ಅದರಿಂದಾಗಿ ಮ್ಯಾನೇಜ್‌ಮೆಂಟಿನವರಿಗೆ ನನ್ನ ಮೇಲೆ ಕಣ್ಣು ಬಿತ್ತು. ಸಂಘ ಸ್ಥಾಪಿಸಬೇಕೆಂದು ಉತ್ಸಾಹದಿಂದ ಕೆಲಸ ಮಾಡುತ್ತಿದ್ದ ನನ್ನಂಥ ನಾಲ್ವರನ್ನು ಏನೇನೊ ನೆಪದ ಮೇಲೆ ತೆಗೆದುಹಾಕಿದರು. ನಾನು ಮತ್ತೆ ನಿರುದ್ಯೋಗಿಯಾದೆ.''

''ಅಷ್ಟು ಹೊತ್ತಿಗೆ ಕಾಂಗ್ರೆಸ್ ಸರಕಾರ ಬಂದಿರಲಿಲ್ಲವೆ?''

''ಬಂದಿತ್ತು. ಆದರೆ ನಮ್ಮ ಸರಕಾರ ಬಂದ ಮೇಲೆ ಬಡವರಿಗೆಲ್ಲ ಸ್ವಲ್ಪವಾದರೂ ಸುಖ ದೊರೆತೀತು, ಸ್ವಾತಂತ್ರ್ಯ ದೊರೆತೀತು ಅಂತ ನಾವು ನಂಬಿದ್ದೆಲ್ಲಾ ಸುಳ್ಳಾಯಿತು. ಬ್ರಿಟಿಷರ ಕಾಲದೊಳಗೆ ಹ್ಯಾಗಿತ್ತೋ ಹಾಗೇ ನಡೀತಿತ್ತು ಆಡಳಿತ. ಪೊಲೀಸರು, ಸಿ.ಐ.ಡಿ.ಗಳ ದರ್ಪ ಇನ್ನೂ ಹೆಚ್ಚಾಗಿತ್ತು. ಸರಕಾರ ಸಾಹುಕಾರರ ಕಡೆಗೆ ಸೇರಿಕೊಂಡು ಬಡವರನ್ನು ತುಳಿಯುತ್ತಿದ್ದುದು ಸ್ಪಷ್ಟವಾಗಿತ್ತು.''

''ಚಳವಳಿಯ ಕಾಲಕ್ಕೆ ಜಪ್ತು ಮಾಡಲಾದ ಆಸ್ತಿಪಾಸ್ತಿಗಳನ್ನೆಲ್ಲ ಮತ್ತೆ ಹಿಂದಿರುಗಿಸಿದರಲ್ಲವೆ ಕಾಂಗ್ರೆಸ್ ಸರಕಾರದವರು? ನಿಮ್ಮ ಹೊಲ, ನಿಮ್ಮ ಸಾಮಾನು ಸಿಗಲಿಲ್ಲವೆ?''

''ಅದಕ್ಕಾಗಿ ಪ್ರಯತ್ನಪಟ್ಟದ್ದೂ ಆಯಿತು. ಆದರೆ ಆಗ ನನ್ನ ಮೇಲೆ ಕ್ರಿಮಿನಲ್ ಖಟ್ಲೆ ಆಗಿತ್ತಾದ್ದರಿಂದ ನಾನು ರಾಜಕೀಯ ಕೈದಿಯಾಗಿರಲಿಲ್ಲವೆಂದು ತೀರ್ಮಾನಿಸಿ ನನ್ನ ಬೇಡಿಕೆಯನ್ನು ತಳ್ಳಿಬಿಟ್ಟರು.''

ಚಂದ್ರಣ್ಣ ವಿಸ್ಮಯಗೊಂಡು ಪ್ರಶ್ನಿಸಿದ : ''ಕ್ರಿಮಿನಲ್ ಖಟ್ಲೆ? ಅದೇಕೆ?''

"ಅದೂ ಒಂದು ಕತೆಯೆ. ಹೋರಾಟದ ಕಾಲಕ್ಕೆ ನಮ್ಮ ಹಳ್ಳಿಯೊಳಗ ಸ್ವಲ್ಪ ಗಲಭೆಯಾಗಿತ್ತು. ನಮ್ಮ ವಿರುದ್ಧ ಪೋಲೀಸರಿಗೆ ಸುದ್ದಿ ತಿಳಿಸುತ್ತಿದ್ದ ಕುಲಕರ್ಣಿಯ ಮೂಗು ಕೊಯ್ದು ಆತನ ಹಾವಳಿಯನ್ನಡಗಿಸಿದ್ದರು ನಮ್ಮ ಗುಂಪಿನ ಹುಡುಗರು. ಅಂಥ ಕೆಲಸ ಮಾಡಬಾರದಿತ್ತು. ನನ್ನ ಮನಸ್ಸಿಗೂ ಒಪ್ಪಿಗೆಯಾಗಿರಲಿಲ್ಲ ಅದು. ಆದರೆ ಕುಲಕರ್ಣಿಯ ದ್ರೋಹವನ್ನು ನೋಡಿ ಸಿಟ್ಟಾದ ಹುಡುಗರು ವಿಕಾರವಶರಾಗಿ ಅಂಥ ಕೆಲಸ ಮಾಡಿಬಿಟ್ಟಿದ್ದರು. ಆ ಅಪರಾಧದ ಮೇಲೆ ನಮ್ಮಿಬ್ಬರ ವಿರುದ್ಧ ಕ್ರಿಮಿನಲ್ ಖಟ್ಲೆ ಹಾಕಲಾಗಿತ್ತು. ನಾನು ಸ್ವತಃ ಆ ಕೆಲಸ ಮಾಡಿರದಿದ್ದರೂ, ಅಂಥ ಕೆಲಸ ಮಾಡಲು ನನಗೆ ಮನಸ್ಸಿರದಿದ್ದರೂ ಗುಂಪಿಗೆ ಸೇರಿದವನಾದ್ದರಿಂದ ಅವರ ತಪ್ಪು ನನ್ನ ತಪ್ಪೂ ಆಗಿತ್ತು. ಆ ಹೊಣೆಯನ್ನು ತಪ್ಪಿಸಿಕೊಳ್ಳಲು ನನಗೆ ಮನಸ್ಸಿರಲಿಲ್ಲ, ಒಪ್ಪಿಕೊಳ್ಳ ಬೇಕಾಯಿತು."

"ಆಂ? ಒಪ್ಪಿಕೊಂಡಿರಾ?"

"ಒಪ್ಪಿಕೊಳ್ಳಲೇಬೇಕಾಯಿತು. ಕುಲಕರ್ಣಿಯ ದ್ರೋಹವನ್ನು ಸಹಿಸಲಾರದೆ ಸಿಟ್ಟಿನ ಭರದಲ್ಲಿ ಆತನ ಮೂಗು ಕೊಯ್ಯಲಾಯಿತೆಂದು ಹೇಳಿದೆವು. ಆ ಅಪರಾಧ ಕ್ಕಾಗಿ ಒಬ್ಬೊಬ್ಬರಿಗೆ ಐದೈದು ವರ್ಷ ಶಿಕ್ಷೆಯಾಗಿತ್ತು. ಬೇರೆ ಅಪರಾಧಗಳಿಗಾಗಿ ಆದದ್ದು ಬೇರೆ. ನಮ್ಮ ಬಿಡುಗಡೆಯೇನೋ ಆಯಿತಾದರೂ ನಾವು ಕ್ರಿಮಿನಲ್ ಆಗಿದ್ದ ವಿಷಯ ಮಾತ್ರ ಸರ್ಕಾರದ ದೃಷ್ಟಿಯಿಂದ ಮರೆಯಾಗಲಿಲ್ಲ, ಕಾಂಗ್ರೆಸ್ಸಿನವರು ಮಂತ್ರಿಗಳಾದ ಮೇಲೆಯೂ ಅಷ್ಟೆ. ಮಂತ್ರಿಗಳು ಬೇರೆಯವರಾದರೂ ಅಧಿಕಾರಿಗಳೆಲ್ಲ ಹಳಬರೇ ಆಗಿದ್ದರಷ್ಟೆ? ನಮ್ಮ ಬಗ್ಗೆ ರಿಪೋರ್ಟ್ ಕೇಳಿದಾಗ ನಾವು ಹಿಂಸಾವಾದಿಗಳು, ಕ್ರಿಮಿನಲ್ ಖಟ್ಲೆಗೆ ಸಿಕ್ಕುಬಿದ್ದವರು ಎಂದು ಬರೆದು ಹಾಕಿದರು ಈ ಜನ. ಸಾಲದ್ದಕ್ಕೆ ಕುಲಕರ್ಣಿಯ ಬಳಗದವರಾಗಿದ್ದ ಕಾಂಗ್ರೆಸ್ ಮುಖಂಡರೊಬ್ಬರು ಅಭಿಮಾನ ಕ್ಕೊಳಗಾಗಿ ನನ್ನ ವಿರುದ್ಧ ದೂರು ಕೊಟ್ಟಿದ್ದರು. ಹೀಗಾಗಿ ಎಷ್ಟೋ ಜನರಿಗೆ ಆಸ್ತಿಪಾಸ್ತಿ ಮರಳಿ ಸಿಕ್ಕರೂ ನನಗೆ ಮಾತ್ರ ಸಿಕ್ಕಲಿಲ್ಲ."

"ಮುಖ್ಯಮಂತ್ರಿಗಳಿಗೆ ಅರ್ಜಿ ಮಾಡಬೇಕಾಗಿತ್ತು?"

"ಅದೂ ಮುಗಿದುಹೋಯಿತು. ನಿಮ್ಮ ಅರ್ಜಿ ಮುಟ್ಟಿದೆ. ಈ ಬಗ್ಗೆ ವಿಚಾರಣೆ ನಡೆಸಲಾಗುತ್ತದೆ – ಎಂದು ಅವರ ಕಾರ್ಯದರ್ಶಿಯಿಂದ ಉತ್ತರ ಬಂತು. ಮುಂದೆ ಆರೇಳು ತಿಂಗಳು ಕಳೆದರೂ ಆ ಬಗ್ಗೆ ಏನೂ ತಿಳಿಯಲಿಲ್ಲ. ಮತ್ತೊಂದು ಕಾಗದ ಬರೆಸಿ ಹಾಕಿದಾಗ ಈ ಬಗ್ಗೆ ಸಂಪೂರ್ಣ ವಿಚಾರಣೆ ನಡೆಸಲಾಗಿದೆಯೆಂದೂ ಈ

ಸಂದರ್ಭದಲ್ಲಿ ಆಸ್ತಿಯನ್ನು ಮರಳಿಸುವುದು ನ್ಯಾಯವಲ್ಲವೆಂದು ಸರಕಾರಕ್ಕೆ ಮನವರಿಕೆಯಾಗಿದೆಯೆಂದೂ ಉತ್ತರ ಬಂತು.''

''ಮಂತ್ರಿಗಳನ್ನು ಮುಖತಃ ಕಂಡಿದ್ದರೆ ಏನಾದರೂ ಆಗಬಹುದಾಗಿದ್ದಿತೇನೊ!''

''ಅದು ಅಷ್ಟು ಸುಲಭದ ಕೆಲಸವಲ್ಲ ಚಂದ್ರಣ್ಣ. ನಿಮ್ಮಂಥವರೇನೋ ಯಾವಾಗ ಬೇಕಾದರೂ ಹೋಗಿ ಮಂತ್ರಿಗಳನ್ನು ಭೆಟ್ಟಿ ಮಾಡಲಾದೀತು. ಆದರೆ ನಮ್ಮಂಥ ಬಡ ರೈತರಿಗೆ ಅವರ ಭೆಟ್ಟಿ ಸಾಧ್ಯವಿಲ್ಲ. ಮುಂಬಯಿಗೆ ಹೋಗಿ ನೋಡಬೇಕೆಂದರೆ ರೈಲಿಗೆ ಹಣವಿಲ್ಲ. ಒಂದು ಸಲ ಮಂತ್ರಿಗಳೊಬ್ಬರು ಬೆಳಗಾವಿಗೆ ಬಂದಿದ್ದಾಗ ಅಲ್ಲಿಗೆ ಹೋಗಿ ಅವರನ್ನು ನೋಡಲು ಪ್ರಯತ್ನಿಸಿದೆ. ಆದರೆ ಬಂಗಲೆಯ ಎದುರಿಗೆ ಕಾದಿದ್ದ ಸಿ.ಐ.ಡಿ.ಗಳು ನನ್ನನ್ನು ಒಳಕ್ಕೆ ಸೇರಿಸಲಿಲ್ಲ. ಯಾರ ಮೂಲಕವೊ ಮಂತ್ರಿಗಳಿಗೆ ಹೇಳಿ ಕಳಿಸಿದೆ. ಈಗ ಸಮಯವಿಲ್ಲ ಅಂತ ಉತ್ತರ ಬಂತು. ಮುಖ ಒಣಗಿಸಿಕೊಂಡು ಗೋಕಾವಿಗೆ ಮರಳಿದೆ. ಆಗಿನ ನನ್ನ ಮನಸ್ಥಿತಿಯನ್ನು ನೀವೇ ತಿಳಿದುಕೊಳ್ಳಬೇಕು. ಮನುಷ್ಯನ ಒಳ್ಳೆಯತನದಲ್ಲಿ ನನಗಿದ್ದ ನಂಬಿಕೆಗೆ ಪೂರಾ ಪೆಟ್ಟು ಬಿದ್ದಿತ್ತು. ಬಡವರೆಂದರೆ ನಾಯಿಗಿಂತ ಕಡೆ, ನರಿಗಿಂತ ಕಡೆ ಈ ಜನರಿಗೆ–ಎಂಬ ಕಟು ಅನುಭವ ಬಂದಿತ್ತು. ಯಾವ ರಾಜ್ಯ ಬಂದರೇನು – ರಾಗೀ ಬೀಸುವವರಿಗೆ ಗೋಳು ತಪ್ಪಿದ್ದಲ್ಲ. ಬ್ರಿಟಿಷ್ ಸರಕಾರವೂ ಹಾಗೇ, ಕಾಂಗ್ರೆಸ್ ಸರಕಾರವೂ ಹಾಗೇ. ಬಡವರ ಹೊಟ್ಟೆಯ ಮೇಲೆ ಕಾಲು ಚೆಲ್ಲಿ ಅಧಿಕಾರ ನಡೆಸುವದು ತಪ್ಪಿದ್ದಲ್ಲ...'' ಎಂದು ಹೇಳಿ ಸೋಮಣ್ಣ ಕೊಂಚ ತಡೆದು ನಿಂತ. ಹೊದೆದುಕೊಂಡಿದ್ದ ಹರಕು ಹಚ್ಚಡದಿಂದ ಮುಖವನ್ನೊರೆಸಿಕೊಂಡು ಮತ್ತೆ ಹೇಳತೊಡಗಿದ :

''ಆಮ್ಯಾಲ ಪ್ರಾರಂಭವಾಯಿತು ನೋಡ್ರಿ ನಮ್ಮ ಚಳವಳಿ. ಗಿರಣಿಯೊಳಗ ಮೂರು ನಾಲ್ಕು ಜನ ಕಮ್ಯೂನಿಸ್ಟರಿದ್ದರು. ಸಂಘವನ್ನು ಸ್ಥಾಪಿಸುವುದಕ್ಕಾಗಿಯೆ ಅವರು ಅಲ್ಲಿಗೆ ಬಂದಿದ್ದರು. ಆ ಮೊದಲೇ ನನಗೂ ಅವರಿಗೂ ಪರಿಚಯವಾಗಿತ್ತು. ಅವರೊಂದಿಗೆ ಸ್ನೇಹವೂ ಬೆಳೆದಿತ್ತು. ಮ್ಯಾನೇಜ್‌ಮೆಂಟಿನವರು ಎಷ್ಟು ವಿರೋಧಿಸಿದರೂ ಹೆದರದೆ ಗುಪ್ತ ರೀತಿಯಲ್ಲಾದರೂ ಸಂಘವನ್ನು ಕಟ್ಟಿಯೇ ತೀರುವುದೆಂದು ನಿರ್ಧರಿಸಿ ನಾವು ಕೆಲಸ ಮಾಡತೊಡಗಿದೆವು. ರಾತ್ರಿ ಕಾಲದಲ್ಲಿ ಕೂಲಿಕಾರರ ಮನೆ ಮನೆಗೆ ಹೋಗಿ ಅವರನ್ನು ಸಂಘಕ್ಕೆ ಸೇರಿಸಲು ಒಪ್ಪಿಸತೊಡಗಿದೆವು. ಗುಟ್ಟಾಗಿ ಕೆಲವು ಸಭೆಗಳನ್ನು ಮಾಡಿದೆವು...''

ಆತನನ್ನು ನಡುವೆಯೆ ತಡೆದು ಚಂದ್ರಣ್ಣ – ''ಕಾಂಗ್ರೆಸ್ಸಿನವರಾದ ನೀವು

ಕಮ್ಯೂನಿಸ್ಟರ ಜತೆಗೆ ಕೂಡಿಕೊಂಡದ್ದು ಹೇಗೆ ಸೋಮಣ್ಣ?'' ಎಂದ.

''ಕಾಂಗ್ರೆಸ್ಸಿನವರಾದರೇನಾಯಿತು? ಯಾವ ಸಂಸ್ಥೆಯಿಂದ ಬಡಜನರಿಗೆ ಏನೂ ಉಪಯೋಗವಿಲ್ಲವೊ ಆ ಸಂಸ್ಥೆಯಲ್ಲಿದ್ದು ಉಪಯೋಗವಾದರೂ ಏನು? ಕಾಂಗ್ರೆಸ್ಸು ಮೊದಲಿನ ಕಾಂಗ್ರೆಸ್ ಆಗಿ ಉಳಿದಿರಲಿಲ್ಲ, ಬಂಡವಾಳಗಾರರು, ಕಾಳಸಂತೆಯವರು, ಜಮೀನುದಾರರು ಮೊದಲಾದವರೆಲ್ಲ ಗಾಂಧೀ ಟೊಪ್ಪಿಗೆ ಹಾಕಿಕೊಂಡು ಕಾಂಗ್ರೆಸ್ ಸೇರಿಕೊಂಡುಬಿಟ್ಟಿದ್ದರು. ಹಣದ ಬಲದಿಂದಾಗಿ ಕಾಂಗ್ರೆಸ್ ಸಂಸ್ಥೆಯೂ ಅವರ ಕೈಯಲ್ಲೇ ಸಿಲುಕಿಕೊಂಡಿತ್ತು. ಅಂತೇ ಕಾಂಗ್ರೆಸ್ ಸರಕಾರವೂ ಸಹ ಅಂಥವರ ಮಾತಿನಂತೆ ನಡೆಯಬೇಕಾಗಿತ್ತು. ಆ ಶ್ರೀಮಂತ ಸ್ವಾರ್ಥಿಗಳನ್ನು ಕಾಂಗ್ರೆಸ್ಸಿನಿಂದ ಹೊರದೂಡುವದು ನಮ್ಮಂಥವರಿಂದ ಸಾಧ್ಯವಾಗುವಂತಿರಲಿಲ್ಲ. ಅಂತೇ ಬೇರಾವ ಗತಿಯೂ ಇಲ್ಲದೆ ನಾವು ಅದನ್ನು ಬಿಟ್ಟು ಬಡಜನರ ಹಿತಕ್ಕಾಗಿ ದುಡಿಯುವ ಪಕ್ಷಗಳಿಗೆ ಸೇರಿಕೊಳ್ಳಬೇಕಾಯಿತು.''

''ಕಮ್ಯೂನಿಸ್ಟ್ ಪಾರ್ಟಿ ಬಡವರ ಹಿತಕ್ಕಾಗಿ ದುಡಿಯುತ್ತಿದೆಯೆಂಬ ಬಗ್ಗೆ ನಿಮಗೆ ನಂಬಿಕೆಯಿದೆಯೆ?''

''ಓ! ಇರದೆ ಏನು? ಆ ಪಾರ್ಟಿಯಲ್ಲಿರುವವರೆಲ್ಲಾ ನಮ್ಮಂಥ ಬಡವರೇ. ಬಡವರಿಗಾಗಿಯೆ ಇರುವ ಪಾರ್ಟಿ ಅದು.''

''ಇರಬಹುದು. ಆದರೆ ಅವರ ಮುಖಂಡರಾಗಿರುವವರು ಯಾರು ಎನ್ನುವುದನ್ನು ವಿಚಾರ ಮಾಡಿದ್ದೀರಾ? ಅವರೇನೂ ಬಡವರಲ್ಲವಲ್ಲ?''

''ಕೆಲವರು ಶ್ರೀಮಂತರು ಇದ್ದಾರೆ ನಿಜ. ಆದರೆ ಪಾರ್ಟಿಗಾಗಿ ಅವರೂ ಬಡತನವನ್ನಪ್ಪಿಕೊಂಡಿದ್ದಾರೆ. ತಮ್ಮ ಆಸ್ತಿಪಾಸ್ತಿಗಳನ್ನೆಲ್ಲ ಪಾರ್ಟಿಗೆ ಬರೆದು ಕೊಟ್ಟಿದ್ದಾರೆ.''

''ಮುಂದೆ ದೊರೆಯಲಿರುವ ಅಧಿಕಾರದ ಆಸೆಗಾಗಿ ಅವರಿಂದು ತ್ಯಾಗ ಮಾಡುತ್ತಿಲ್ಲವೆಂದು ಹೇಗೆ ಹೇಳುವಿರಿ?''

''ಅಂಥ ಅಧಿಕಾರ ಲಾಲಸೆಯವರಿಗೆ ಪಾರ್ಟಿಯಲ್ಲಿ ಉಳಿವಿಲ್ಲ ಚಂದ್ರಣ್ಣ, ಅಂಥವರನ್ನು ಕತ್ತು ಹಿಡಿದು ಆಚೆಗೆ ದೂಡುತ್ತಾರೆ...''

''ಒಬ್ಬನನ್ನು ತಳ್ಳಿ, ಇನ್ನೊಬ್ಬ ಅವನ ಸ್ಥಾನಕ್ಕೆ ಬರುತ್ತಾನೆ ಅಷ್ಟೆ''

''ಪಾರ್ಟಿಗಳಲ್ಲಿ ಹಾಗಾಗುವದು ಸ್ವಾಭಾವಿಕವಲ್ಲವೆ ಚಂದ್ರಣ್ಣ?''

''ಅದಿರಲಿ ಕಮ್ಯೂನಿಜಂ ಅಂದರೇನು ಅನ್ನೋದು ನಿಮಗೆ ಗೊತ್ತೇ?''

''ನಾನು ನಿಮ್ಮ ಹಾಗೆ ಕಲಿತವನಲ್ಲ, ಅಭ್ಯಾಸ ಮಾಡಿದವನಲ್ಲ. ಕನ್ನಡದಲ್ಲಿ ಬಂದಿರುವ ಕೆಲವು ಪುಸ್ತಕ ಓದಿಕೊಂಡಿದ್ದೇನೆ. ಕಮ್ಯೂನಿಜಂ ಅಂದರೇನು ಎನ್ನುವುದನ್ನು ನಾನು ಹೇಳಲಾರೆನಾದರೂ ಇಷ್ಟು ಮಾತ್ರ ಗೊತ್ತು. ಕಮ್ಯೂನಿಜಂ ಬಂದಾಗ ನಮ್ಮಂಥವರ ಗೋಳು ಇಲ್ಲದಾಗುತ್ತೆ. ದುಡಿದು ತಿನ್ನುವವರ ರಾಜ್ಯ ಬರುತ್ತೆ. ನಮ್ಮ ಬೆವರು, ನಮ್ಮ ದುಡಿತದಿಂದ ಲಾಭ ಮಾಡಿಕೊಂಡು ಶ್ರೀಮಂತರು ಏನೂ ಕೆಲಸ ಮಾಡದೆ ಸೋಮಾರಿಗಳಾಗಿ ಬಿದ್ದುಕೊಂಡು ನಮ್ಮ ಮೇಲೆ ದಬ್ಬಾಳಿಕೆ ನಡೆಸೋದು ನಿಂತುಹೋಗುತ್ತೆ. ನಮ್ಮ ಮೇಲಿನ ಅನ್ಯಾಯ ದೂರವಾಗುತ್ತೆ. ಇಷ್ಟಾದರೆ ಸಾಲದೇ ಚಂದ್ರಣ್ಣ?''

ಚಂದ್ರಣ್ಣ ಆತನನ್ನು ಹೆಚ್ಚು ಕೆಣಕಲಿಲ್ಲ. ಕಮ್ಯೂನಿಜಂ ನಮ್ಮ ಬಡವರನ್ನಾ ಕರ್ಷಿಸಿಕೊಳ್ಳಲು ಕಾರಣವೇನೆಂಬುದು ಅವನಿಗೆ ಚೆನ್ನಾಗಿ ತಿಳಿದಿತ್ತು. ಕಮ್ಯೂನಿಸ್ಟ್ ಸರ್ವಾಧಿಕಾರತ್ವ, ವೈಯಕ್ತಿಕ ಸ್ವಾತಂತ್ರ್ಯದ ಅಪಹರಣ, ನಿಷ್ಠುರವಾದ ಪೊಲೀಸು ಆಡಳಿತ ಗಳ ವಿಚಾರವಾವುದೂ ಅಶಿಕ್ಷಿತ ಬಡಜನರಿಗೆ ತಿಳಿಯುವುದು ಸಾಧ್ಯವಿಲ್ಲ. ತಿಳಿದರೂ ಅವುಗಳ ಅರ್ಥ ಅವರಿಗಾಗಲಾರದು. ಸದ್ಯ ಅವರಿಗೆ ಹೊಟ್ಟೆತುಂಬ ಅನ್ನ ನೀಡುವ, ಶ್ರೀಮಂತರ ದಬ್ಬಾಳಿಕೆಯಿಂದ ಅವರನ್ನು ಮುಕ್ತಗೊಳಿಸುವ ರಾಜ್ಯ ಬಂದರೆ ಸಾಕಾಗಿದೆ. ಕಮ್ಯೂನಿಸ್ಟ್ ಪಕ್ಷ ಆ ಬಗೆಗೆ ಅವರಿಗೆ ಭರವಸೆ ನೀಡುತ್ತಿದೆ. ಅಂತೆಯೆ ಈ ಬಡಜನರೆಲ್ಲ ಆ ಪಕ್ಷದ ಕಡೆಗೆ ಆಸೆಯ ಕಣ್ಣುಗಳಿಂದ ನೋಡುತ್ತ ಅದಕ್ಕೆ ಬೆಂಬಲವೀಯುತ್ತಿರುವುದು.

''ಪಕ್ಷದ ಮಾತು ಇರಲಿ ಚಂದ್ರಣ್ಣ ನಾನು ಆ ಪಕ್ಷದ ಸದಸ್ಯನಂತೂ ಆಗಿರಲಿಲ್ಲ. ಸಂಘವೊಂದನ್ನು ಕಟ್ಟಿ ಕೂಲಿಕಾರರ ಮೇಲಾಗುತ್ತಿರುವ ಅನ್ಯಾಯಗಳನ್ನು ನಿಲ್ಲಿಸಲು ಚಳವಳಿ ಹೂಡುವದೇ ನನ್ನ ಉದ್ದೇಶವಾಗಿತ್ತು. ನಾವು ಎಷ್ಟು ಗುಟ್ಟಾಗಿ ಕೆಲಸ ಮಾಡುತ್ತಿದ್ದರೂ ಸಿ.ಐ.ಡಿ.ಗಳಿಗೆ ಈ ಸುದ್ದಿ ಹ್ಯಾಗೋ ಗೊತ್ತಾಗಿಹೋಯಿತು. ಕೂಡಲೆ ನಮ್ಮಲ್ಲಿ ನಾಲ್ವರನ್ನು ಬಂಧಿಸಿ ಗಡೀಪಾರು ಮಾಡಿಬಿಟ್ಟರು..''

''ಗಡೀಪಾರು?''

''ಹೌದು. ಇಪ್ಪತ್ನಾಲ್ಕು ತಾಸುಗಳಲ್ಲಿ ಬೆಳಗಾವಿ ಜಿಲ್ಲೆಯನ್ನು ಬಿಟ್ಟು ಹೋಗ ಬೇಕೆಂದು ಆರ್ಡರ್ ಆಯಿತು. ಬೆಳಗಾವಿ ಜಿಲ್ಲೆ ಮಾತ್ರವಲ್ಲ, ಬಿಜಾಪುರ, ಧಾರವಾಡ, ಕಾರವಾರ ಜಿಲ್ಲೆಗಳಲ್ಲೂ ನಾವು ನೆಲೆಸುವ ಹಾಗಿರಲಿಲ್ಲ.''

"ಗಡೀಪಾರು ಆಜ್ಞೆಗೆ ಕಾರಣ ಏನು ಕೊಟ್ಟರು?"

"ನಮ್ಮ ಚಟುವಟಿಕೆಗಳಿಂದಾಗಿ ಗಿರಣಿಯ ಪ್ರದೇಶದಲ್ಲಿ ಶಾಂತತಾ ಭಂಗವಾಗುವುದೆಂಬ ಸಂಶಯದಿಂದ ಈ ಆಜ್ಞೆ ವಿಧಿಸಲಾಗಿದೆ - ಎಂದರು."

"ಶಾಂತತಾಭಂಗ!" ಎಂದು ಉದ್ಗಾರ ತೆಗೆದು ಚಂದ್ರಣ್ಣ ಕೊಂಚ ನಕ್ಕು ನುಡಿದ : "ಕೂಲಿಕಾರರನ್ನು ಹಗಲಿರುಳು ಶೋಷಿಸುತ್ತ ಅವರ ಹೊಟ್ಟೆಯ ಮೇಲೆ ಕಾಲು ಚೆಲ್ಲಿ ಸುಖವಾಗಿ ಮಲಗಿರುವ ಮಾಲೀಕರ ಶಾಂತತೆಯ ಭಂಗವಾಗುತ್ತಿತ್ತಲ್ಲ ನಿಮ್ಮಿಂದ! ಸರಿ, ಗಿರಣಿಯ ಪ್ರದೇಶದಿಂದ ಮಾತ್ರವಲ್ಲ - ಮುಂಬಯಿ ಪ್ರಾಂತದ ಕನ್ನಡ ಜಿಲ್ಲೆಗಳಿಂದಲೇ ಹೊರದೂಡಿಬಿಟ್ಟರೇ?"

"ನಮ್ಮ ತಾಯಿನಾಡಿನಿಂದ ಈ ರೀತಿ ಅನ್ಯಾಯವಾಗಿ ನಮ್ಮನ್ನು ಹೊರದೂಡಬೇಕಾದರೆ ಆ ಸರಕಾರ ಎಂಥದಿದ್ದೀತು ನೀವೇ ಯೋಚಿಸಿರಿ. ಇಂಥ ಸಂದರ್ಭದಲ್ಲಿ ನಮ್ಮ ಮನಸ್ಸು ಹ್ಯಾಗಾದೀತು! ಈ ಅನ್ಯಾಯದ ವಿರುದ್ಧ ಕೊನೆಯತನಕ ಹೋರಾಡಬೇಕೆಂಬ ರೊಚ್ಚು ನಮ್ಮಲ್ಲಿ ಉಕ್ಕುವದಿಲ್ಲವೆ? ಈ ದಬ್ಬಾಳಿಕೆಯ ಬಗ್ಗೆ ನಮಗೆ ಸಂತಾಪ ಬರುವುದಿಲ್ಲವೆ? ಈ ಅತ್ಯಾಚಾರಿಗಳ ಹುಟ್ಟಡಗಿಸಿ ಕಮ್ಯೂನಿಸ್ಟ್ ರಾಜ್ಯ ಕಟ್ಟಬೇಕೆಂಬ ದೃಢ ಪ್ರತಿಜ್ಞೆಯನ್ನು ನಾವು ಸ್ವೀಕರಿಸೋದು ಇಂಥ ಮನಸ್ಥಿತಿಯಲ್ಲೇ. 'ಮಾಡಿದವನಿಗೆ ಮಾಡದಿದ್ದರೆ ಕೋಡಗನಾಗಿ ಹುಟ್ಟುವರಂತೆ' - ನಮ್ಮಲ್ಲೊಂದು ಗಾದೆಯಿದೆ. ಈ ಅನ್ಯಾಯಗಳಿಗೆ ನಿಲ್ಲೋದು ಎಲ್ಲಾ ಇಂಥ ಕಾಲದಲ್ಲೇ. ನಮ್ಮನ್ನು ವಿರೋಧಿಗಳನ್ನಾಗಿ ಮಾಡಿಕೊಳ್ಳುವುದೂ ಸರಕಾರವೇ. ತನ್ನ ಕಾಲ ಮೇಲೆ ತಾನೇ ಕಲ್ಲು ಚೆಲ್ಲಿಕೊಳ್ಳುತ್ತಿದೆಯಲ್ಲ ಕಾಂಗ್ರೆಸ್!" ಎಂದು ವಿಷಾದದಿಂದ ನುಡಿದ ಸೋಮಣ್ಣ.

"ಆಮೇಲೆ ನಾನು ಇಲ್ಲಿಗೆ ಬಂದೆ. ನನ್ನ ಜತೆಗಿದ್ದ ಕಮ್ಯೂನಿಸ್ಟ್ ಕಾರ್ಯಕರ್ತರಿಗೆ ಇಲ್ಲಿಯೂ ಪರಿಚಯವಿತ್ತು. ಅವರ ಮೂಲಕ ಇಲ್ಲಿಯ ಜನರ ಗುರುತಾಯಿತು. ಗಿರಣಿಯಲ್ಲಿ ಕೆಲಸವೂ ಸಿಕ್ಕಿತು. ಮನೆಯನ್ನು ಬಾಡಿಗೆಗೆ ಹಿಡಿದು ಮನೆಯವರನ್ನು ಕರೆದುಕೊಂಡು ಬಂದೆ. ರತ್ನಮ್ಮನಿಗೂ ಇಲ್ಲಿಯೆ ಕೆಲಸ ಸಿಕ್ಕಿತು."

"ಆಕೆಯ ಮದುವೆಯಾಗಲಿಲ್ಲವೆ?"

ಆ ಪ್ರಶ್ನೆಗೆ ಸೋಮಣ್ಣನಿಂದ ತಕ್ಷಣ ಉತ್ತರ ಬರಲಿಲ್ಲ. ಕೊಂಚ ತಡೆದು ನಿಂತು ಒಂದು ಸಲ ರತ್ನಮ್ಮನನ್ನು ನಿಟ್ಟಿಸಿ ನೋಡಿದ. ಚಿತ್ರದಲ್ಲಿನ ಮೂರ್ತಿಯಂತೆ ಆಕೆ ಗೋಡೆಗೊರಗಿಕೊಂಡು ಸ್ತಬ್ಧವಾಗಿ ಕುಳಿತಿದ್ದಳು.

''ಅದೊಂದು ಬೇರೆ ಕತೆಯೆ ಇದೆ ಚಂದ್ರಣ್ಣ, ಮತ್ತೆ ಎಂದಾದರೂ ಹೇಳುವೆ ನಂತೆ. ಇಲ್ಲಿಗೆ ಬಂದ ಮೇಲೆ ನನ್ನ ಹೆಂಡತಿಯೂ ಸತ್ತುಹೋದಳು. ಆ ಮೇಲೆ ನಾನೂ ಕೈಕಳೆದುಕೊಂಡು ಹಾಸಿಗೆ ಹಿಡಿದೆ.''

''ಅವರು ಹೇಗೆ ತೀರಿಕೊಂಡರು?''

''ಅದೆಲ್ಲ ನಾನೀಗ ಹೇಳಲಾರೆ. ಆ ಸಂಗತಿ ನೆನಪಿಗೆ ಬಂದರೂ ಸಹ ರೊಚ್ಚು ಉಕ್ಕೇರಿ ಬರುತ್ತದೆ. ಇಂದು ಇಷ್ಟೆ ಸಾಕು, ಚಂದ್ರಣ್ಣ ನಿಮಗೆ ಹೊತ್ತಾಯಿತೇನೊ. ನಿದ್ದೆ ಬರುತ್ತಿಲ್ಲವೆ?''

''ನನಗೆ ಬರದಿದ್ದರೂ ನಿಮ್ಮ ಪ್ರಕೃತಿಯನ್ನು ನೋಡಿ ಮಾತು ನಿಲ್ಲಿಸಬೇಕು. ನೀವು ಜಾಗರಣೆ ಮಾಡುವುದು ಒಳ್ಳೆಯದಲ್ಲ, ಮಲಗಿಕೊಳ್ಳಿ. ನಾನು ಹೊರಡುತ್ತೇನೆ.''

''ಆಗಾಗ ಬರುತ್ತಾ ಇರಬೇಕಪ್ಪ'' ಎಂದಳು ಮುದುಕಿ.

''ಆಗಲಮ್ಮ'' ಎಂದು ನುಡಿದು ರತ್ನಮ್ಮನನ್ನು ಕಂಡು ಒಂದು ಸಲ ಮೆಲುನಗೆ ಬೀರಿ ಚಂದ್ರಣ್ಣ ಮೇಲಕ್ಕೆದ್ದ.

ಗುಡಿಸಲಿನಿಂದ ಆತ ಹೊರಗಡೆ ಬಂದಾಗ ಆಕಾಶದಲ್ಲಿ ಅರ್ಧಚಂದ್ರ ಬೆಳಗುತ್ತಿದ್ದ. ಆತನ ಮಂದ ಪ್ರಕಾಶದಲ್ಲಿ ಆ ಕೂಲಿಕಾರ ವಸತಿಯಲ್ಲಿನ ಪುಟ್ಟ ಪುಟ್ಟ ಗುಡಿಸಲುಗಳು ಸ್ಮಶಾನದಲ್ಲಿನ ಗೋರಿಗಳ ನೆನಪು ತಂದುಕೊಡುವಂತೆ ನಿಂತಿದ್ದುವು. ಯಾವ ಗುಡಿಸಲಿನಲ್ಲೂ ಬೆಳಕು ಕಾಣುತ್ತಿರಲಿಲ್ಲ, ಎಷ್ಟೋ ಜನರು, ಗಂಡಸರು, ಹೆಂಗಸರು, ಮಕ್ಕಳು ಗುಡಿಸಲುಗಳ ಹೊರಗಡೆ ಅಸ್ತವ್ಯಸ್ತವಾಗಿ ಬಿದ್ದುಕೊಂಡು ನಿದ್ರೆ ಮಾಡುತ್ತಿದ್ದರು. ಶವಗಳಂತೆ ಬಿದ್ದುಕೊಂಡಿದ್ದ ಆ ಪ್ರಾಣಿಗಳ ಸುತ್ತು ಮುತ್ತ ಸೊಳ್ಳೆಗಳ ಬಳಗ ಝೇಂಕಾರಗೈಯುತ್ತ ಹಾರುತ್ತಿತ್ತು. ಎಲ್ಲ ಕಡೆಗಳಲ್ಲೂ ಸಹಿಸಲಾಗದಂಥ ದುರ್ಗಂಧ ಹರಡಿಕೊಂಡಿತ್ತು. ಅದಾವುದನ್ನೂ ಗಣನೆಗೆ ತಂದುಕೊಳ್ಳದೆ ಹಗಲಿನ ಶ್ರಮವನ್ನೆಲ್ಲ ಇರುಳಿನ ತೋಳಸೆರೆಯಲ್ಲಿ ಕಳೆದುಕೊಳ್ಳುತ್ತಿದ್ದ ಆ ಕೂಲಿಕಾರರು! ದೇಹಗಳನ್ನೊರಗಿಸಲು ಅವರಿಗೆ ಸರಿಯಾದ ಸ್ಥಳವಿರಲಿಲ್ಲ, ಹಾಸಲು ಹೊದೆಯಲು ಸಾಕಷ್ಟು ಬಟ್ಟೆಗಳಿರಲಿಲ್ಲ, ಭೂಮಿತಾಯಿಯೆ ಅವರಿಗೆ ಆಸರೆಯಾಗಬೇಕಾಗಿತ್ತು. ಮುಗಿಲೇ ಅವರಿಗೆ ಹೊದಿಕೆಯಾಗಬೇಕಾಗಿತ್ತು. ಅಂದು ಮಧ್ಯಾಹ್ನ ತಾನು ಕಂಡ ಸೆಟ್ಟರ ಮನೆಯ ಆ ಮಹಾವೈಭವವೆಲ್ಲ ಚಂದ್ರಣ್ಣನ ನೆನಪಿಗೆ ಬಂದಿತು. ನೂರಾರು ಜನ ವಾಸಿಸಲು ಅನುಕೂಲವಾದ ಆ ಮನೆಯನ್ನು ಕೇವಲ ನಾಲ್ಕೇ ನಾಲ್ಕು ಜನರು ಉಪಯೋಗಿಸುತ್ತಿದ್ದರು. ಅವರ ದಿವಾನಖಾನೆಗಳು, ಅವರ ಕಚೇರಿಗಳು, ಅವರ

ಕೂಡ್ರುವ ಕೊಠಡಿ, ಬರೆಯುವ ಕೊಠಡಿ, ಮಲಗುವ ಕೊಠಡಿ; ಶೃಂಗಾರನಿಲಯ, ವಸ್ತ್ರಾಗಾರ, ಕಲಾಭವನ, ಪುಸ್ತಕಾಲಯ; ಅತಿಥಿಗೃಹ, ಪೂಜಾಗೃಹ, ಭೋಜನಗೃಹ, ಸ್ನಾನಗೃಹ, ಶ್ವಾನಗೃಹಗಳು! ಇಂಥ ವೈಭವವೆಲ್ಲ ಅವರಿಗೆ ಬಂದಿರುವುದು ಈ ಕೂಲಿಕಾರರ ಬೆವರಿನಿಂದ. ಇವರ ದುಡಿತಕ್ಕೆ ತಕ್ಕ ಪ್ರತಿಫಲವನ್ನು ಕೊಡದೆ, ಇವರಿಗೆ ಸರಿಯಾದ ವಸತಿ ಸ್ಥಾನಗಳನ್ನು ರಚಿಸಿ ಕೊಡದೆ ಇಂಥ ಅನಾರೋಗ್ಯಕರವಾದ ಪ್ರದೇಶದಲ್ಲಿ ಹಂದಿಗಳಂತೆ ಇವರನ್ನು ಕೊಳೆಯಹಾಕಿ ತಾವು ಮಾತ್ರ ಮೂರಂತಸ್ತುಗಳ ಮಹಾ ಮನೆಗಳಲ್ಲಿ ನೆಮ್ಮದಿಯಿಂದ ಬದುಕುತ್ತಿದ್ದಾರೆ. ಸೋಮಣ್ಣನಂಥ ಬಡವರಿಗೆ ಔಷಧಕ್ಕೆ ಹಣವಿಲ್ಲ; ಅಲ್ಲಿ ಆ ಬಂಡವಾಳಗಾರರ ಅಜೀರ್ಣ ರೋಗವನ್ನು ಹೋಗಲಾಡಿಸಲು ಔಷಧಿಗಳ ಮೇಲೆ ಔಷಧಗಳು!

ಆ ಕೂಲಿಕಾರರ ವಸತಿಯಲ್ಲಿ ಹಾಯ್ದು ಕೊಟ್ರಪ್ಪನ ಕೊಠಡಿಯ ಕಡೆಗೆ ಹೊರಟಿದ್ದ ಹಾಗೆ ಚಂದ್ರಣ್ಣನ ತಲೆಯಲ್ಲಿ ಕುವೆಂಪು ಮಹಾಕವಿಯ ಪ್ರಸಿದ್ಧ ಕವನವೊಂದರ ಚರಣಗಳು ದುಮುದುಮಿಸತೊಡಗಿದುವು :

"ಜ್ಯೋತಿಯ ಮಣಿದೀಪಗಳಲ್ಲಿ
ಕತ್ತಲು, ಕಗ್ಗತ್ತಲು ಇಲ್ಲಿ!
ಹಾಡಿನ ನುಣ್ದನಿಯತ್ತ,
ಗೋಳಿನ ನೀಳ್ದನಿಯಿತ್ತ!
ಕೂಳನು ಹೆಮ್ಮೆಗೆ ಬಿಸುಡುವರಲ್ಲಿ,
ಹೊಟ್ಟೆಗೆ ಇಲ್ಲದೆ ಕೊರಗುವರಿಲ್ಲಿ!
ಪೀತಾಂಬರಿಗಳ ಹೊದೆಯುವರಲ್ಲಿ,
ಕೌಪೀನಕೆ ಚಿಂದಿಯು ಸಿಗದಿಲ್ಲಿ!"

## ೧೪

ಕೂಲಿಕಾರ ವಸತಿಯ ಕೊನೆಯ ಓಣಿಯಲ್ಲಿ ಚಂದ್ರಣ್ಣ ಹಾಯ್ದು ಹೊರಟಿದ್ದ ಹಾಗೆ ಎಡಗಡೆಗಿದ್ದ ಗುಡಿಸಲೊಂದರಿಂದ ಆರ್ತನಾದವೊಂದು ಕೇಳಿದಂತಾಯಿತು. ಆತ ತಡೆದು ನಿಂತು ದನಿ ಬಂದ ಕಡೆಗೆ ಧಾವಿಸಿದ. ಗುಡಿಸಲಲ್ಲಿ ಭಾರಿ ಗದ್ದಲ

ನಡೆಯುತ್ತಿದ್ದ ಹಾಗಿತ್ತು. ಹೊಡೆದಾಟ, ಬಡಿದಾಟ, ಬೈಗಳು, ಚೀರಾಟಗಳಿಗೆ ಪೂರ ಬಂದ ಹಾಗೆ ತೋರುತ್ತಿತ್ತು.

ಗುಡಿಸಲಿನ ಬಾಗಿಲು ತೆರೆದುಕೊಂಡೇ ಇದ್ದಿತು. ಆದರೊಳಗಿನಿಂದ ಇಣುಕಿ ನೋಡಿದ ಚಂದ್ರಣ್ಣ. ಚಿಮಣಿಯ ದೀಪದ ಮಂದ ಬೆಳಕಿನಲ್ಲಿ ಒಳಗಡೆ ನಡೆದು ದೆಲ್ಲವೂ ಅಸ್ಪಷ್ಟವಾಗಿ ಗೋಚರವಾಯಿತು. ತೀರ ಚಿಕ್ಕದಾದ ಆ ಗುಡಿಸಲಲ್ಲಿ ಆಗ ಹತ್ತು ಹದಿನೈದು ಜನರಾದರೂ ಇದ್ದಿರಬಹುದು. ಒಬ್ಬಿಬ್ಬರು ಏಟು ತಿಂದು ನೆಲದ ಮೇಲೆ ಬಿದ್ದು ಹೊರಳಾಡುತ್ತಿದ್ದರು. ಉಳಿದವರು ಮುಷ್ಟಿಯುದ್ಧದಲ್ಲಿ ತೊಡಗಿ ಕೊಂಡಿದ್ದರು. ಅವರಲ್ಲಿ ಹೆಚ್ಚು ಜನ ಕೂಲಿಕಾರರಾಗಿದ್ದುದು ಸ್ಪಷ್ಟವಾಗಿದ್ದಿತು. ಒಬ್ಬಿಬ್ಬರು ಬಿಳಿಯಂಗಿಯ ಯುವಕರೂ ಇದ್ದರು.

ಆ ಹೊಡೆದಾಟವನ್ನು ನೋಡಿಯೂ ನೋಡದವನಂತೆ ಅಲ್ಲಿಂದ ಹೊರಡುವ ಮನಸ್ಸಾಗಲಿಲ್ಲ ಚಂದ್ರಣ್ಣನಿಗೆ. ನೆರೆದಿದ್ದವರಲ್ಲಿ ಯಾರೂ ಆತನಿಗೆ ಪರಿಚಿತರಲ್ಲ. ಆದರೂ ಆತ ಒಳಸೇರಿದ. ಹೊಡೆದಾಟದಲ್ಲಿ ಕೆಳಕ್ಕೆ ಬಿದ್ದಿದ್ದ ಕಾಗದಗಳನ್ನು ಕೈಗೆತ್ತಿಕೊಳ್ಳತೊಡಗಿದ್ದ ಯುವಕನೊಬ್ಬನ ಬಳಿ ಬಂದು ಆತನ ಭುಜದ ಮೇಲೆ ಕೈಯನ್ನಿರಿಸಿ ''ಇದೆಲ್ಲ ಏನು ನಡೆದಿದೆ? ಯಾಕೆ ಬಡಿದಾಟ?'' ಎಂದು ಕೇಳಿದ.

ಕಾಗದಗಳನ್ನು ಸುರುಳಿ ಮಾಡಿ ಕೈಯಲ್ಲಿ ಹಿಡಿದುಕೊಂಡು ಆ ಯುವಕ ಚಂದ್ರಣ್ಣನನ್ನು ಕುತೂಹಲದಿಂದ ದಿಟ್ಟಿಸಿ ನೋಡಿ – ''ನೀವ್ಯಾರು?'' ಎಂದು ಕೇಳಿದ.

''ನಾನು ಯಾರೇ ಆಗಲಿ. ನಿಮ್ಮವರಲ್ಲೊಬ್ಬ ಅಂತ ತಿಳಿದುಕೊಳ್ಳಿ.''

''ಕಮ್ಯೂನಿಸ್ಟರಲ್ಲವಷ್ಟೆ?''

''ಅಲ್ಲ.''

''ಸೋಶಲಿಸ್ಟರು?''

''ಅಲ್ಲ.''

''ಮತ್ತೆ? ಸಿ.ಐ.ಡಿ.ಯೊ ಏನು?'' ಎಂದು ದಿಗಿಲುಗೊಂಡು ಕೇಳಿದ ಆ ಯುವಕ.

ಚಂದ್ರಣ್ಣ ನಕ್ಕು ನುಡಿದ : ''ಛೆ! ಛೆ! ಅವರಿಗೂ ನನಗೂ ಸಂಬಂಧವೇ ಇಲ್ಲ. ನಾನೊಬ್ಬ ಲೇಖಕ, ಪತ್ರಿಕೋದ್ಯೋಗಿ.''

ಆ ಯುವಕ ವಿಸ್ಫುರಿತ ನೇತ್ರಗಳಿಂದ ಚಂದ್ರಣ್ಣನನ್ನು ತಲೆಯಿಂದ ಕಾಲಿನವರೆಗೆ ದಿಟ್ಟಿಸಿ ನೋಡಿ – ''ಯಾರು? ಈ ಊರಿಗೆ ಹೊಸದಾಗಿ ಬಂದಿರುವ ಚಂದ್ರಣ್ಣನವರಿರಲಿಕ್ಕಿಲ್ಲವಷ್ಟೆ ನೀವು?'' ಎಂದು ಕೇಳಿದ.

''ಹೌದು. ನಿಮಗೆ ಹೇಗೆ ಗೊತ್ತಾಯಿತು?''

''ನೀವಿಲ್ಲಿಗೆ ಬಂದದು, ಕಂಪನಿ ಸ್ಥಾಪಿಸಲು ಪ್ರಯತ್ನಪಡುತ್ತಿರುವುದು ಎಲ್ಲವೂ ಗೊತ್ತಾಗಿದೆ ನಮಗೆ. ನಿಮ್ಮನ್ನು ಭೆಟ್ಟಿಯಾಗುವ ಅಪೇಕ್ಷೆಯೂ ಇತ್ತು. ಅಕಸ್ಮಾತ್ತಾಗಿ ಸಿಕ್ಕಿದಿರಿ...''

''ಅದಿರಲಿ ಈ ಬಡಿದಾಟ ಏಕೆ ನಡೆದಿದೆ?''

''ನಾವು ಸೋಶಲಿಸ್ಟ್ ಪಾರ್ಟಿಯವರು. ನಮ್ಮ ಪಾರ್ಟಿಯ ಪರವಾಗಿ ಪ್ರಚಾರ ಮಾಡಲು ಇಲ್ಲಿ ನಾವು ಸಣ್ಣ ಸಭೆಯೊಂದನ್ನು ಸೇರಿಸಿದ್ದೆವು. ಎಂಟು ಹತ್ತು ಜನ ಕೂಲಿಕಾರರು ಬಂದಿದ್ದರು. ನಮ್ಮ ಪಾರ್ಟಿಯ ಉದ್ದೇಶ ಗೊತ್ತು ಗುರಿಗಳನ್ನು ತಿಳಿಸುತ್ತಿದ್ದೆವು. ನಾವು ಶಾಂತ ರೀತಿಯಲ್ಲಿ ಕೆಲಸ ಮಾಡುವುದು ಸಹ ಸೇರಲಿಲ್ಲ ಈ ಕಮ್ಯೂನಿಸ್ಟರಿಗೆ. ಒಳನುಗ್ಗಿ ಗದ್ದಲಕ್ಕಾರಂಭಿಸಿದ್ದಾರೆ...''

ಹೊಸ ವ್ಯಕ್ತಿಯೊಂದು ಒಳಸೇರಿ ಬಂದುದನ್ನು ಕಂಡು ಕೂಲಿಕಾರರು ಬಡಿದಾಟವನ್ನು ನಿಲ್ಲಿಸಿದ್ದರು. ಅವರಲ್ಲೊಬ್ಬ ಆ ಸೋಶಲಿಸ್ಟ್ ಯುವಕನನ್ನು ನಡುವೆಯೆ ತಡೆದು ಕೋಪದಿಂದ ಕಿರುಚಿಕೊಂಡ : ''ಕೂಲಿಕಾರ ಸಂಘದಲ್ಲಿ ಒಡಕು ಹುಟ್ಟಿಸಿ ಚಳವಳಿಯನ್ನು ಹಾಳು ಮಾಡೂದಕ್ಕ ನೀವು ಬಂದರೆ ಸುಮ್ಮನಿರಬೇಕೇನು ನಾವು?''

ಒಡಕು! ಚಂದ್ರಣ್ಣನಿಗೆ ಆ ವಿಷಯ ಒಡನೆಯೆ ಅರ್ಥವಾಗಲಿಲ್ಲ.

''ಕೊಂಚ ಸಮಾಧಾನದಿಂದ ಮಾತನಾಡಯ್ಯ. ಒಡಕು ಹುಟ್ಟಿಸಲು ಯಾರು ಪ್ರಯತ್ನಿಸಿದರು?'' ಎಂದು ಆತ ಕೇಳಿದ.

ಆ ಸೋಶಲಿಸ್ಟ್ ಯುವಕನನ್ನು ಕ್ರುದ್ಧ ದೃಷ್ಟಿಯಿಂದ ನಿಟ್ಟಿಸುತ್ತ ಆ ಕೂಲಿಕಾರನೆಂದ : ''ಇವರೇ! ಈ ದ್ರೋಹಿಗಳೇ! ಬೇರೆ ಸಂಘ ಕಟ್ಟೂದಕ್ಕ ಹೊರಟಾರ. ಆ ಸೆಟ್ಟಿ ಇವರಿಗೆ ಲಂಚ ಕೊಟ್ಟಾನ...''

ಆತ ಆ ಮಾತು ಆಡಿದೊಡನೆ ಪುನಃ ಗಲಭೆಗಾರಂಭವಾಯಿತು. ''ಏ!

ಯಾರು ಲಂಚ ತಿಂದರೋ ಕತ್ತೆಯ ಮಗನೆ! ಸೆಟ್ಟರ ರೂಪಾಯಿಗೆ ಕೈ ಒಡ್ಡಾಕ ನಮ್ಮ ಸಾಹುಕಾರರಿಗೇನು ಕಡಿಮಿ ಆಗ್ಯೆತಿ? ಇಂಥ ನೂರು ಸೆಟ್ಟರನ್ನು ಕೊಂಡು ಕೊಂಡಾರು ಅವರು. ಬಾಯಿ ಬಿಗಿ ಹಿಡಿದು ಮಾತಾಡು!'' ಎಂದು ಒಬ್ಬ ಕೂಗಿಕೊಂಡ.

''ಇವರೆಲ್ಲರನ್ನು ಮೊದಲು ಹೊರಗೆ ಹಾಕಿಬಿಡಿರಿ. ಏನಿದು ಗಲಭೆ! ಅಸಹ್ಯ!'' ಎಂದ ಚಂದ್ರಣ್ಣ.

''ಇನ್ನೊಮ್ಮೆ ಈ ಓಣ್ಯಾಗ ಕಾಲಿಟ್ಟರ ನಿಮ್ಮ ತಲಿ ಉಳ್ಯಾಕಿಲ್ಲ, ಹುಷಾರಿ!'' ಎಂದು ಯುವಕನನ್ನು ಕುರಿತು ನುಡಿದು ಏಳೆಂಟು ಜನ ಕೂಲಿಕಾರರು ಅಲ್ಲಿಂದ ಹೊರಟರು. ''ಏನು, ಇದೆಲ್ಲ ನಿಮ್ಮಪ್ಪನ ವಠಾರ ಇದ್ದಂಗ ಮಾತಾಡತೀರಲ್ಲ? ಸುಮ್ಮನೆ ಹೋಗಿರಿ,'' ಎಂದು ಒಬ್ಬ ಉತ್ತರವಿತ್ತ.

''ಹೊಸ ಸಂಘ ಕಟ್ಟಲು ಹೊರಟಿದ್ದು ನಿಜವೇನು?'' ಎಂದು ಕೇಳಿದ ಚಂದ್ರಣ್ಣ.

''ಹೌದು, ಕಮ್ಯೂನಿಸ್ಟರು ಕೂಲಿಕಾರರನ್ನು ತಪ್ಪುದಾರಿಗೆಳೆಯುತ್ತಿದ್ದಾರೆ. ಅವರಿಂದಾಗಿ ಕೂಲಿಕಾರ ಚಳವಳಿ ಹಾಳಾಗುತ್ತಿರುವದನ್ನು ನೋಡಿ ಸುಮ್ಮನಿರಲಾರದೆ ನಮ್ಮ ಹೇಮಾದ್ರಿಯವರು ಕಳಕಳಿಯಿಂದ ಮುಂದೆ ಬಂದು ಕೆಲಸ ಮಾಡುತ್ತಿದ್ದಾರೆ,'' ಎಂದ ಇನ್ನೊಬ್ಬ ಯುವಕ.

''ಹೇಮಾದ್ರಿ?''

ಚಂದ್ರಣ್ಣನೊಂದಿಗೆ ಮೊದಲು ಮಾತನಾಡಿದ ಯುವಕನನ್ನು ತೋರಿಸುತ್ತ ಎರಡನೆಯ ಯುವಕನೆಂದ ''ಹೌದು ಇವರ ಹೆಸರು ಹೇಮಾದ್ರಿ. ದೊಡ್ಡ ಸಾಹುಕಾರ ರಾದರೂ ಬಡವರ ಬಗ್ಗೆ ತುಂಬ ಪ್ರೀತಿ. ಅಂತೆಯೆ ಕಾಲೇಜು ಅಭ್ಯಾಸವನ್ನು ಮರೆತು ಕೂಲಿಕಾರ ಸಂಘಟನೆಗೆ ತೊಡಗಿದ್ದಾರೆ.''

''ನಿಮ್ಮ ಹೆಸರು?''

''ನನ್ನನ್ನು ನಾರಾಯಣಮೂರ್ತಿ ಎಂದು ಕರೆಯುತ್ತಾರೆ.''

''ಸೋಶಲಿಸ್ಟ್ ಪಾರ್ಟಿಯ ಸದಸ್ಯರೊ?''

''ಹೌದು.''

"ಇದುವರೆಗೆ ಇವರು ಕಮ್ಯೂನಿಸ್ಟ್ ಪಾರ್ಟಿಯಲ್ಲೇ ಇದ್ದರು. ಎರಡು ಮೂರಾವರ್ತಿ ಜೈಲನ್ನೂ ಕಂಡಿದ್ದಾರೆ. ಕಮ್ಯೂನಿಸ್ಟರ ಹಿಂಸಾತ್ಮಕ ಕೃತಿಗಳು ಸರಿಬರದ್ದರಿಂದ ಅವರ ಸಹವಾಸ ಬಿಟ್ಟು ನಮ್ಮೊಡನೆ ಸೇರಿಕೊಂಡಿದ್ದಾರೆ. ನಮ್ಮ ಪಾರ್ಟಿಯ ಸ್ಥಳೀಯ ಶಾಖೆಯ ಕಾರ್ಯದರ್ಶಿಗಳಿವರು," ಎಂದ ಹೇಮಾದ್ರಿ. "ಬನ್ನಿ ತುಂಬ ಹೊತ್ತಾಯಿತು. ಹೊರಡೋಣ. ನಮ್ಮ ಮನೆಗೆ ಹೋಗಿ ಸ್ವಲ್ಪ ಕಾಫಿ ತೆಗೆದುಕೊಂಡು ಹೋಗುವಿರಂತೆ."

ಕೂಲಿಕಾರ ವಸತಿಯಿಂದ ಎರಡು ಫರ್ಲಾಂಗ್ ದೂರದಲ್ಲಿ ಹೇಮಾದ್ರಿಯ ಮನೆಯಿದ್ದಿತು. ಹಳೆಯ ಕಾಲದ ದೊಡ್ಡ ಮನೆ. ಮೂರು ಅಂತಸ್ತುಗಳ ಭವ್ಯ ಕಟ್ಟಡ. ಎದುರಿಗಿದ್ದ ಹೂದೋಟಕ್ಕೆ ಹೊಂದಿಕೊಂಡು ಪ್ರತ್ಯೇಕವಾಗಿದ್ದ ದೊಡ್ಡ ಕೊಠಡಿಯೊಂದರಲ್ಲಿ ಪಾರ್ಟಿಯ ಕಚೇರಿಯನ್ನು ಹೂಡಿದ್ದ ಹೇಮಾದ್ರಿ.

ಅಲ್ಲಿಗೆ ಬಂದು ಅವರೆಲ್ಲ ಕುಳಿತುಕೊಂಡರು. ಹೇಮಾದ್ರಿ ಮಾತಿಗಾರಂಭಿಸಿದ.

"ನಮ್ಮ ಪಾರ್ಟಿ ಶಾಂತರೀತಿಯಿಂದಲೇ ಕೆಲಸ ಮಾಡಬೇಕೆಂಬ ಉದ್ದೇಶದಿಂದ ಹೊರಟಿದೆ. ಆದರೆ ಈ ಕಮ್ಯೂನಿಸ್ಟರ ಸಹವಾಸದಿಂದಾಗಿ ಆಗಾಗ ಹಿಂಸೆಗೆ ಸಿಕ್ಕಿಹಾಕಿಕೊಳ್ಳಬೇಕಾಗಿ ಬರುತ್ತದೆ. ಈ ದಿನದ ಮಾತನ್ನೆ ತೆಗೆದುಕೊಳ್ಳಿ, ನಮ್ಮಷ್ಟಕ್ಕೆ ನಾವು ಈ ಗುಡಿಸಲಲ್ಲಿ ಕೆಲಸ ಮಾಡುತ್ತಿದ್ದರೂ ಆ ಪುಂಡರು ಸಹಿಸಲಿಲ್ಲ. ಎಲ್ಲ ಕಡೆಗೂ ಯಾವಾಗಲೂ ಇದೇ ರೀತಿ ಅವರದು. ಮೊನ್ನೆ ಏನಾಯಿತು ಅಂದಿರಿ! ಮಿಲ್ ಮ್ಯಾನೇಜರರ ತಲೆಯೇ ಹೋಗುವುದರಲ್ಲಿತ್ತು."

"ಭಾರಿ ಗಲಭೆಯೊ?"

"ಕೇಳಬೇಡಿ. ಈ ಕಮ್ಯೂನಿಸ್ಟರು ಎಲ್ಲೆಲ್ಲೂ ಹೀಗೇ ಬರೀ ಪುಂಡಾಟಿಕೆ.."

"ಇಂಥವರ ಹಿಡಿತದಿಂದ ಕೂಲಿಕಾರರನ್ನು ತಪ್ಪಿಸುವುದಕ್ಕಾಗಿಯೆ ನಮ್ಮ ಹೇಮಾದ್ರಿಯವರು ಕೆಲಸ ಮಾಡುತ್ತಿರೋದು," ಎಂದ ನಾರಾಯಣ.

"ನಿಮ್ಮಂಥ ಶ್ರೀಮಂತರು ಸೋಶಲಿಸ್ಟ್ ಪಾರ್ಟಿಗೆ ಸೇರಿ ಚಳವಳಿಗೆ ತೊಡಗಿರುವುದೂ ಒಂದು ಆಶ್ಚರ್ಯದ ವಿಷಯವೆ!" ಎಂದ ಚಂದ್ರಣ್ಣ.

ಹೇಮಾದ್ರಿ ನಕ್ಕು ನುಡಿದ : "ಅಯ್ಯೋ ಈ ಶ್ರೀಮಂತಿಕೆ! ಇದೆಲ್ಲ ಎಷ್ಟು ದಿನಗಳದು ಚಂದ್ರಣ್ಣನವರೆ! ಹಿಂದೂಸ್ಥಾನದ ವಾತಾವರಣ ದಿನೇ ದಿನೇ ಬದಲಾಗುತ್ತಿದೆಯೆನ್ನುವುದು ನಮಗೆ ಗೊತ್ತಿಲ್ಲವೆ? ನಿನ್ನೆ ಇದ್ದ ಸ್ಥಿತಿ ಇಂದು ಇರುವುದಿಲ್ಲ, ಇಂದಿನದು

ನಾಳೆ ಇದ್ದೀತೆಂಬ ಭರವಸೆಯಿಲ್ಲ. ಎರಡನೆಯ ಯುದ್ಧ ಮುಗಿದ ಮೇಲೆ ಜಗತ್ತಿನಲ್ಲೆಲ್ಲ ಹೊಸ ಗಾಳಿಯೊಂದು ಬೀಸತೊಡಗಿದೆ. ಯುರೋಪಿನ ಅರ್ಧಭಾಗವೆಲ್ಲ ಈಗಾಗಲೆ ಸಮತಾವಾದವನ್ನಪ್ಪಿಕೊಂಡಿದೆ. ಏಶಿಯದ ಪರತಂತ್ರ ರಾಷ್ಟ್ರಗಳೆಲ್ಲ ಸ್ವತಂತ್ರವಾಗುತ್ತಿವೆ. ಸ್ವತಂತ್ರವಾಗುತ್ತಲೂ ಸಮತಾವಾದದತ್ತ ತಿರುಗತೊಡಗಿವೆ. ಚೀಣಾದಲ್ಲಿ ಸಮತಾವಾದಿಗಳಿಗೆ ಜಯ ದೊರೆಯುತ್ತಿದೆ. ಪ್ರತಿಗಾಮಿ ಕೋಮಿಂಟಾಂಗ್ ಜನ ಬೆಂಬಲ ಕಳೆದುಕೊಂಡಿದೆ. ಚೀಣಾ ಮತ್ತು ಭಾರತಗಳಿಗೆ ಹೆಚ್ಚಿನ ವ್ಯತ್ಯಾಸವೇನೂ ಇಲ್ಲವಷ್ಟೆ? ಕಮ್ಯೂನಿಜಂಗೆ ಅನುಕೂಲವಾದ ವಾತಾವರಣ ಇಲ್ಲೂ ಇದೆ, ಅಲ್ಲೂ ಇದೆ. ಆರ್ಥಿಕ ವೈಷಮ್ಯ, ಜನತೆಯ ಘೋರ ದಾರಿದ್ರ್ಯ, ಶೋಷಕರ ದಬ್ಬಾಳಿಕೆ, ಸರಕಾರದ ದೌರ್ಬಲ್ಯ ಎಲ್ಲವೂ ಒಂದೇ ರೀತಿಯ ಇಂದಿಲ್ಲ ನಾಳೆ ಭಾರತಕ್ಕೂ ಕಮ್ಯೂನಿಜಂ ಗಂಡಾಂತರ ಕಟ್ಟಿಟ್ಟದ್ದೇ. ಆಗ ನಮ್ಮಂಥವರ ಶ್ರೀಮಂತಿಕೆ ಹಾರಿ ಹುಡಿಗೂಡಿ ಹೋಗುವದು..."

"ರಾಜಕೀಯವನ್ನು ಚೆನ್ನಾಗಿ ತಿಳಿದುಕೊಂಡಿರುವಿರಲ್ಲ! ಕಾಲೇಜು ಏಕೆ ಬಿಟ್ಟಿರಿ? ಬಿ.ಎ.ವರೆಗೂ ಮುಂದುವರಿಸಬಹುದಾಗಿದ್ದಿತ್ತಲ್ಲ?"

"ಬಿ.ಎ. ಮುಗಿಸಿಕೊಂಡು ಎಲ್‌ಎಲ್.ಬಿ. ಮಾಡಿ ಆಮೇಲೆ ಸಾರ್ವಜನಿಕ ಕೆಲಸ ಕ್ಕಿಳಿಯಬೇಕೆಂಬ ಯೋಚನೆಯೂ ಇತ್ತು. ಆದರೆ ಆ ಯೋಚನೆಯನ್ನು ಬುಡಮೇಲು ಮಾಡುವಂಥ ಘಟನೆಗಳೊದಗಿ ಬಂದವು. ನಲವತ್ತೆರಡರ ಚಳವಳಿಯಲ್ಲಿ ಒಂದು ವರ್ಷ ಹಾಳಾಯಿತು. ಅನಂತರ ಚಲೋ ಮೈಸೂರು ಚಳವಳಿಯ ಕಾಲಕ್ಕೆ ಕಾಲೇಜು ಬಿಟ್ಟಿದ್ದಾಯಿತು. ಅಭ್ಯಾಸಕ್ಕೆ ಶರಣು ಹೊಡೆಯಬೇಕೆಂಬ ಯೋಚನೆ ನನಗಿರಲಿಲ್ಲ ವಾದರೂ ಹೋರಾಟದ ಕಹಳೆಯ ಕೂಗು ನನ್ನನ್ನು ಸುಮ್ಮನಿರಗೊಡಲಿಲ್ಲ. ಈ ಚಳವಳಿಯೂ ಮುಗಿದ ಮೇಲೆ ಮತ್ತೆ ಕಾಲೇಜಿಗೆ ಸೇರಿದೆ. ಆದರೆ ಈಗ ಈ ಚಳವಳಿಯೂ ನನ್ನನ್ನು ಬಲವಾಗಿ ಸೆಳೆಯುತ್ತಿದೆ..."

"ನಮ್ಮ ಚಳವಳಿ..." ಎಂದು ದನಿಗೂಡಿಸಿದ ನಾರಾಯಣ.

"ಛೆ! ಕೇವಲ ನಿಮ್ಮದಲ್ಲ ಅದು. ಕೆಲ ದಿನ ನನಗೂ ಹಾಗೆನ್ನಿಸಿತ್ತು – ಇದು ಕೇವಲ ಕೂಲಿಕಾರರ ಚಳವಳಿ ಅಂತ. ಬಹಳ ದಿನಗಳ ಹಿಂದಿನ ಮಾತು ಅದು. ಸೋಶಲಿಜಂ ಅಭ್ಯಾಸ ಮಾಡಿದ ಹಾಗೆ, ಚಳವಳಿಗಳಲ್ಲಿ ಅನುಭವ ದೊರೆತ ಹಾಗೆ ಇದೊಂದು ಸರ್ವವ್ಯಾಪಿ ಚಳವಳಿಯೆಂಬುದು ಗೊತ್ತಾಯಿತು. ಆರ್ಥಿಕ ವಿಷಮತೆ ನಾಶವಾಗದ ಹೊರತೂ ಜನತೆಗೆ ನಿಜವಾದ ಸ್ವಾತಂತ್ರ್ಯ ಬರಲಾರದು. ಅಂತೆಯೆ,

ಪೂರ್ಣ ಸ್ವಾತಂತ್ರ್ಯಕ್ಕಾಗಿ ನಡೆದಿರುವ ಹೋರಾಟ ಇದು. ಈ ಹೋರಾಟದಲ್ಲಿ ಭಾಗವಹಿಸುವುದು ನನ್ನ ಕರ್ತವ್ಯ ಎನ್ನಿಸಿತು ಸೇರಿಕೊಂಡೆ.''

''ಇನ್ನೊಂದು ಕೂಲಿಕಾರ ಸಂಘ ಕಟ್ಟಬೇಕೆಂದು ನಿಮ್ಮ ಉದ್ದೇಶವೊ?''

''ಇನ್ನೊಂದು ಸಂಘವೆಂದೇನೂ ಅಲ್ಲ. ಈಗ ಇರುವ ಸಂಘವನ್ನೇ ನಮ್ಮ ಕೈಗೆ ತೆಗೆದುಕೊಳ್ಳಲು ನಾವು ಪ್ರಯತ್ನಿಸುತ್ತಿದ್ದೇವೆ.''

''ಅದು ಹೇಗೆ ಸಾಧ್ಯವಾದೀತು? ಸಂಘದಲ್ಲೆಲ್ಲ ಕಮ್ಯೂನಿಸ್ಟರೇ ಇರುವರಷ್ಟೆ?''

''ಒಬ್ಬಿಬ್ಬರು ಇರಬಹುದು. ಎಲ್ಲರೂ ಅಲ್ಲ'' ಎಂದ ನಾರಾಯಣ.

''ಅದರಲ್ಲಿ ಎಲ್ಲರೂ ಕಮ್ಯೂನಿಸ್ಟರೇ ಇರುವರೆಂದು ನಿಮಗಾರು ಹೇಳಿದರು?'' ಎಂದು ಕೇಳಿದ ಹೇಮಾದ್ರಿ.

''ಒಬ್ಬರು ಕಮ್ಯೂನಿಸ್ಟರಿಂದಲೇ ನನಗೆ ತಿಳಿಯಿತು.''

''ಅವರದು ಯಾವಾಗಲೂ ಬೊಗಳೆ ಜಾಸ್ತಿ. ಒಂದು ಇದ್ದರೆ ಹತ್ತು ಮಾಡಿ ಹೇಳುತ್ತಾರೆ. ನೂರಕ್ಕೆ ತೊಂಬತ್ತು ಪಾಲು ಸುಳ್ಳು ಅವರದು.''

''ಹಾಗಾದರೆ ಸಂಘದಲ್ಲಿ ಹೆಚ್ಚು ಜನ ಕಮ್ಯೂನಿಸ್ಟರಿಲ್ಲ ಅನ್ನಿ.''

''ಅಧ್ಯಕ್ಷ, ಕಾರ್ಯದರ್ಶಿ ಇಬ್ಬರು ಪಕ್ಕಾ ಕಮ್ಯೂನಿಸ್ಟರು. ಕಾರ್ಯಕಾರೀ ಸಮಿತಿಯಲ್ಲಿ ಒಬ್ಬಿಬ್ಬರು ಇದ್ದಾರು. ಇನ್ನುಳಿದವರೆಲ್ಲ ಪಾರ್ಟಿಗೆ ಸೇರಿದವರಲ್ಲ. ಅಧ್ಯಕ್ಷ ಕಾರ್ಯದರ್ಶಿಗಳಿಗೂ ಅವರ ಜೊತೆಗಿರುವ ಹತ್ತಿಪ್ಪತ್ತು ಜನ ಪುಂಡರಿಗೂ ಹೆದರಿ ತಾವೂ ಕಮ್ಯೂನಿಸ್ಟರೆಂದು ಹೇಳಿಕೊಳ್ಳುತ್ತಿದ್ದಾರೆ ಅಷ್ಟೆ..'' ಎಂದ ನಾರಾಯಣ.

ಚಂದ್ರಣ್ಣನಿಗೆ ವಿಸ್ಮಯವಾಗದಿರಲಿಲ್ಲ. ''ಅದೇನು, ಹೀಗೆ ಹೇಳುತ್ತೀರಿ? ಒಂದು ಕರೆ ಕೊಟ್ಟರೆ ಸಾಕು, ಕೆಂಪು ಬಾವುಟಕ್ಕಾಗಿ ಪ್ರಾಣವನ್ನು ಕೊಡಲು ಕೂಲಿಕಾರರೆಲ್ಲ ಸಿದ್ಧವಾಗಿರುವರೆಂದು ನನಗೊಬ್ಬರು ಹೇಳಿದರು...''

''ಪ್ರಾಣ ಕೊಡಲು ಸಿದ್ಧವಾಗಿರುವರೊ? ತೆಗೆದುಕೊಳ್ಳಲು ಸಿದ್ಧವಾಗಿರುವರೋ?'' ಎಂದು ಹೇಳಿ ನಾರಾಯಣ ನಗತೊಡಗಿದ.

''ಪ್ರಾಣ ತೆಗೆಯಲು? ನೀವು ತಮಾಷೆ ಮಾಡುತ್ತಿಲ್ಲ ತಾನೆ?''

"ತಮಾಷೆ ಏನು ಬಂತು? ಕೂಲಿಕಾರ ಚಳವಳಿ ಅಂದರೆ ಮಹಾಭಯಂಕರ ಚಳವಳಿ. ಇಲ್ಲಿ ತಮಾಷೆ ಗಿಮಾಷೆಗಳಿಗೆ ಸ್ಥಾನವಿಲ್ಲ, ಎಲ್ಲಾ ಸೀರಿಯಸ್ಸೇ. ಒಂದು ಕಡಿತ, ಎರಡು ತುಂಡು – ಎಂಬುದು ಅದರ ರೀತಿ. ಇನ್ನು ಕೆಲದಿನಗಳಲ್ಲೇ ಧರ್ಮಪುರದ ಕಾಮ್ರೇಡುಗಳಿಗೆ ಎಂಥ ಗತಿ ಬಂದೊದಗುವದೋ ನೋಡುವಿರಂತೆ!" ಎಂದ ಹೇಮಾದ್ರಿ.

ಚಂದ್ರಣ್ಣ ದಿಗಿಲುಗೊಂಡು ಕೇಳಿದ : "ಏನು? ಹೊಡ್ಡೆದಾಟ ಬಡಿದಾಟ ಆಗುವುದೋ?"

"ಏನೇನಾಗಬೇಕೊ ಎಲ್ಲಾ ಆದೀತು. ಆಗಲೇ ಮಾಲೀಕರು ಸಿದ್ಧತೆ ಮಾಡುತ್ತಿದ್ದಾರೆ."

"ಸಿದ್ಧತೆ? ಏತಕ್ಕಾಗಿ?"

"ಕಮ್ಯೂನಿಸ್ಟರನ್ನು ಇಲ್ಲಿಂದ ಓಡಿಸಿಬಿಡೋದಕ್ಕಾಗಿ."

"ಅದು ಹೇಗೆ ಸಾಧ್ಯವಾದೀತು?"

"ದುಡ್ಡು ಒಂದು ಇದ್ದರೆ ಯಾವುದೂ ಅಸಾಧ್ಯವಲ್ಲ ಈಗಿನ ಕಾಲದಲ್ಲಿ..."

"ಪೋಲೀಸರು..."

"ನೀವೇ ನೋಡುವಿರಂತೆ. ದೊಡ್ಡದೊಂದು ನಾಟಕವೇ ನಡೆದೀತು. ಅಂತೂ ಇಂತೂ ಕೂಲಿಕಾರರ ಸಂಘ ಕಮ್ಯೂನಿಸ್ಟರ ಕೈತಪ್ಪುವುದು ಖಂಡಿತ."

"ಆಮೇಲೆ?"

"ಆಮೇಲೆ – ಸೋಶಲಿಸ್ಟ್ ಪಾರ್ಟಿಯ ಕೈಗೆ ಬರುತ್ತದೆ."

"ಈ ಸಂದರ್ಭದಲ್ಲಿ ನಿಮಗೂ ಅವರಿಗೂ ಭಾರಿ ಕಲಹವೇ ಆದೀತಲ್ಲ?"

"ಅದು ಅನಿವಾರ್ಯ. ಕೇವಲ ತಮ್ಮ ಪಾರ್ಟಿಯನ್ನು ಬಲಗೊಳಿಸುವುದಕ್ಕಾಗಿ ಕಮ್ಯೂನಿಸ್ಟರು ಕೂಲಿಕಾರರನ್ನು ದುರುಪಯೋಗಪಡಿಸಿಕೊಳ್ಳುತ್ತಿದ್ದಾರೆ. ಅದನ್ನು ತಪ್ಪಿಸಿ ನಿಜಕ್ಕೂ ಕೂಲಿಕಾರರ ಕಲ್ಯಾಣ ಮಾಡಲೆಂದೇ ನಾವು ಈ ಕ್ಷೇತ್ರಕ್ಕೆ ಕಾಲು ಹಾಕಿರುವುದು. ಹಿಂಸಾತ್ಮಕ ದಾರಿಯಿಂದ ಕೂಲಿಕಾರರನ್ನು ಶಾಂತತಾಪೂರ್ಣ ಮಾರ್ಗಕ್ಕೆಳೆಯುವುದೂ ನಮ್ಮ ಉದ್ದೇಶಗಳಲ್ಲೊಂದು..."

"ಕಮ್ಯೂನಿಸ್ಟರು ಹಿಂಸೆಯನ್ನು ಬೋಧಿಸುವರೆಂದು ಹೇಗೆ ಹೇಳುವಿರಿ? ಅದಕ್ಕೆ ಆಧಾರಗಳಿವೆಯೆ?"

"ನಾರಾಯಣನನ್ನೇ ಕೇಳಿ ನೋಡಿ. ಆತ ಅವರೊಂದಿಗೆ ಇದ್ದು ಕೆಲಸ ಮಾಡಿದವ. ಎಲ್ಲವೂ ಗೊತ್ತಿದೆ. ಹೇಳು ನಾರಾಯಣ, ಇವರಿಗೆ."

ಇಷ್ಟು ಹೊತ್ತಿಗೆ ಕಾಫಿ ಬಂದಿತು. ಎಲ್ಲರೂ ಲೋಟಗಳನ್ನು ಕೈಗೆತ್ತಿಕೊಂಡರು. ಕಾಫಿಯನ್ನು ಗುಟುಕರಿಸುತ್ತ ನಾರಾಯಣ ಹೇಳತೊಡಗಿದ :

"ಹೇಮಾದ್ರಿಯವರ ಮಾತು ನಿಜ. ನಾನು ಕಂಡ ಹಾಗೆ ಇಲ್ಲಿನ ಕಮ್ಯೂನಿಸ್ಟರು ನ್ಯಾಯವಾದ ರೀತಿಯಲ್ಲಿ ಕೆಲಸ ಮಾಡುತ್ತಿಲ್ಲ, ಸಂಘವನ್ನು ಅವರು ಕಟ್ಟಿದ ರೀತಿಯನ್ನೇ ತೆಗೆದುಕೊಳ್ಳೋಣ. ಮೊದಲು ಸಂಘದಲ್ಲಿ ಕಮ್ಯೂನಿಸ್ಟರೊಬ್ಬರೂ ಇರಲಿಲ್ಲ, ಒಂದು ದಿನ ಶಂಕರ್ ಇಲ್ಲಿಗೆ ಬಂದು ದುರುಗಪ್ಪ ಮೊದಲಾದವರ ಪರಿಚಯ ಮಾಡಿಕೊಂಡರು. ಆಗ ಗಿರಣಿಯಲ್ಲಿ ಕೂಲಿಕಾರರಿಗೆ ಬಹಳ ತೊಂದರೆ ಯಾಗುತ್ತಿತ್ತು. ಸಾಕಷ್ಟು ಸಂಬಳವಿರಲಿಲ್ಲ, ದಿನಕ್ಕೆ ಹನ್ನೆರಡು ಗಂಟೆ ದುಡಿಯ ಬೇಕಾಗುತ್ತಿತ್ತು. ಮ್ಯಾನೇಜರ್, ಸೂಪರಿಂಟೆಂಡೆಂಟ್ ಮೊದಲಾದವರೆಲ್ಲ ಮನಸ್ಸಿಗೆ ಬಂದ ಹಾಗೆ ಕೂಲಿಕಾರರನ್ನು ಪೀಡಿಸುತ್ತಿದ್ದರು. ಕೂಲಿಕಾರರೆಲ್ಲ ಅಸಂತೋಷದಿಂದ ಉರಿಯುತ್ತಿದ್ದರು. ಶಂಕರ್ ಇದನ್ನೆಲ್ಲ ತಿಳಿದುಕೊಂಡರು. ದುರುಗಪ್ಪ ಒಬ್ಬ ಮೇಸ್ತ್ರಿ ಕೊಂಚ ಓದು ಬರಹ ಬಲ್ಲವ. ಮ್ಯಾನೇಜರಿಗೂ ಅವನಿಗೂ ಒಮ್ಮೆ ಭಾರಿ ಜಗಳವಾಗಿ ಆತ ಮ್ಯಾನೇಜರನ್ನು ಹೊಡೆಯಲು ಹೋಗಿದ್ದ, ಆದಕ್ಕಾಗಿ ಕೆಲಸವನ್ನು ಕಳೆದು ಕೊಂಡಿದ್ದ, ದುರುಗಪ್ಪ ಕುನಸಿಟ್ಟುಕೊಂಡು ಮ್ಯಾನೇಜರನ ಬಗ್ಗೆ ಕುದಿಯುತ್ತಿದ್ದ..."

"ಅವರಿಬ್ಬರಿಗೆ ಜಗಳ ಬರಲು ಕಾರಣವೇನಾಯಿತು?"

"ಕಾರಣ? ಅದೊಂದು ಮೋಜಿನ ಕತೆಯೆ. ಗಿರಣಿಯೊಳಗೆ ಕೆಲಸ ಮಾಡುವ ತರುಣಿಯೊಬ್ಬಾಕೆಯ ಮೇಲೆ ದುರುಗಪ್ಪ ಕಣ್ಣಿಟ್ಟುಕೊಂಡಿದ್ದ, ಆಕೆಯೂ ಅವನನ್ನು ಕಂಡರೆ ನಗುವುದು, ಮಾತನಾಡುವುದು ಎಲ್ಲ ಮಾಡುತ್ತಿದ್ದಳು. ಮ್ಯಾನೇಜರನಿಗೆ ಹೆಣ್ಣಿನ ಖಯಾಲಿ ಬಹಳ. ದುರುಗಪ್ಪನ ಈ ಪ್ರೇಯಸಿಯ ಮೇಲೆ ಆತನೂ ಕಣ್ಣು ಹಾಕಿದ. ಅದು ದುರುಗಪ್ಪನಿಗೆ ತಿಳಿದಾಗ..."

"ದುರುಗಪ್ಪನಿಗೆ ಮದುವೆಯಾಗಿದೆಯೆ?"

"ಇಲ್ಲ, ಆತ ಬಾಲಬ್ರಹ್ಮಚಾರಿ. ಆ ಧಡಿಯನಿಗೆ ಹೆಣ್ಣು ಕೊಡುವವರಾರು?"

''ಮ್ಯಾನೇಜರಿಗೊ?''

''ಎಂಟು ಹತ್ತು ಮಕ್ಕಳಿವೆ. ಆದರೆ ಖಯಾಲಿ ಮನುಷ್ಯ ಆತ. ಗಿರಣಿಯಲ್ಲಿನ ಅಧಿಕಾರಿಗಳಲ್ಲಿ ಹೆಚ್ಚು ಜನ ಇಂಥವರೇ ಇರುತ್ತಾರೆ. ಸರಿ ದುರುಗಪ್ಪನಿಗೂ ಮ್ಯಾನೇಜರಿಗೂ ಒಂದು ದಿನ ಬಾಯಿಗೆ ಬಾಯಿ ಹತ್ತಿ ಕೈಗೆ ಕೈ ಹತ್ತುವ ಪ್ರಸಂಗ ಬಂತು. ಮ್ಯಾನೇಜರು ಆಗ ಹೇಗೋ ತಪ್ಪಿಸಿಕೊಂಡ. ಅನಂತರ ದುರುಗಪ್ಪನಿಗೆ ಕೆಲಸ ದಿಂದ ವಜಾ ಆಯಿತು. ಆತ ದ್ವೇಷದಿಂದ ಉರಿಯತೊಡಗಿದ. ಮ್ಯಾನೇಜರನ್ನು ಚಪ್ಪಲಿಯಿಂದ ಹೊಡೆಯುತ್ತೇನೆ, ಗಿರಣಿಯನ್ನು ಸುಡಿಸಿಬಿಡುತ್ತೇನೆ ಎಂದು ಹಾರಾಡತೊಡಗಿದ. ಇಲ್ಲಿ ಕಮ್ಯೂನಿಸ್ಟ್ ಪಾರ್ಟಿಯನ್ನು ಕಟ್ಟಲು ಬಂದ ಶಂಕರನಿಗೆ ಇಂಥದೊಂದು ವ್ಯಕ್ತಿಯ ಅಗತ್ಯವೂ ಇತ್ತು. ಇಬ್ಬರೂ ಸೇರಿ ಒಂದು ತಿಂಗಳ ಕಾಲ ಕೆಲಸ ಮಾಡಿ ಒಂದು ಗುಂಪು ಕಟ್ಟಿದರು. ಆ ಗುಂಪನ್ನೆಲ್ಲ ಸಂಘಕ್ಕೆ ಬಿಟ್ಟರು. ಸಂಘ ಅವರದಾಯಿತು. ಕೂಲಿಕಾರರನ್ನು ಹೆದರಿಸಿ ಬೆದರಿಸಿ ನೀವೆಲ್ಲ ಕಮ್ಯೂನಿಸ್ಟರಾಗಬೇಕು, ಇಲ್ಲವಾದರೆ ನಿಮ್ಮ ಗತಿ ನೆಟ್ಟಗಾಗಲಿಕ್ಕಿಲ್ಲ ಅಂತ ಹೇಳಿದರು. ಕಮ್ಯೂನಿಜಂ ಅಂದರೇನು ಗೊತ್ತು ಆ ಬಡಪಾಯಿಗಳಿಗೆ! ಇವರ ಹೆದರಿಕೆಗೆ ಅಂಜಿ ಇವರು ಹೇಳಿದಂತೆ ಕೇಳತೊಡಗಿದರು...''

''ಸಂಘಕ್ಕೆ ದುರುಗಪ್ಪ ಹೇಗೆ ಕಾರ್ಯದರ್ಶಿಯಾದ? ಆತನನ್ನು ಕೆಲಸದಿಂದ ತೆಗೆದುಹಾಕಲಾಗಿದ್ದಿತೆಂದು ಹೇಳಿದಿರಲ್ಲ...?''

''ದುರುಗಪ್ಪ ತನ್ನ ಹಟ ಸಾಧಿಸದೆ ಬಿಡಲಿಲ್ಲ. ಒಂದು ದಿನ ತನ್ನ ಹತ್ತಿಪ್ಪತ್ತು ಹಿಂಬಾಲಕರನ್ನು ಕೂಡಿಸಿ ಅವರಿಗೆಲ್ಲ ಚೆನ್ನಾಗಿ ಸೆರೆ ಕುಡಿಸಿ ಮ್ಯಾನೇಜರು ರಾತ್ರಿ ಕಾಲದಲ್ಲಿ ಕ್ಲಬ್ಬಿನಿಂದ ಮನೆಗೆ ಹೋಗುವಾಗ ಹಾದಿಯಲ್ಲಿ ಹಿಡಿದು ಚೆನ್ನಾಗಿ ಏಟು ಹಾಕಿಸಿದ. ದುರುಗಪ್ಪನನ್ನು ಕೂಡಲೆ ಕೆಲಸಕ್ಕೆ ಸೇರಿಸಿಕೊಳ್ಳಬೇಕೆಂದೂ ಇಲ್ಲವಾದರೆ ಪ್ರಾಣವೇ ಉಳಿಯಲಿಕ್ಕಿಲ್ಲವೆಂದೂ ಬೆದರಿಕೆ ಹಾಕಲಾಯಿತು. ಮ್ಯಾನೇಜರು ಮೈಯೆಲ್ಲ ನೋವು ಮಾಡಿಕೊಂಡು ಎಂಟು ಹತ್ತು ದಿನ ಆಸ್ಪತ್ರೆಯಲ್ಲಿ ಬಿದ್ದುಕೊಂಡಿದ್ದ. ಪೋಲೀಸ್ ಕಂಪ್ಲೇಂಟ್ ಕೊಡಲು ಸಹ ಭಯ ಅವನಿಗೆ. ಆತ ಪೂರಾ ಹೆದರಿ ಪ್ರಾಣ ಬೇಕಿದ್ದರೆ ದುರುಗಪ್ಪನನ್ನು ಕೆಲಸಕ್ಕೆ ಸೇರಿಸಿಕೊಳ್ಳದೆ ವಿಧಿಯಿಲ್ಲವೆಂದು ತಿಳಿದು ಆತನನ್ನು ಕರೆದುಕೊಂಡ ಸರಿ. ದುರುಗಪ್ಪ ಗೆದ್ದ. ಅಂದಿನಿಂದ ಗಿರಣಿಯಲ್ಲಿ ಆತನನ್ನು ಹಿಡಿಯು ವವರೇ ಇಲ್ಲ. ಬೀಜದ ಹೋರಿಯ ಹಾಗೆ ಎಲ್ಲರನ್ನೂ ಹೆದರಿಸುತ್ತ ತಿರುಗುತ್ತಿರುತ್ತಾನೆ. ಎಲ್ಲ ಕೆಲಸಗಾರರೂ ಅವನಿಗೆ ಹೆದರುತ್ತಾರೆ. ಆತನ ವಿರುದ್ಧ ದನಿ ಎತ್ತಿದವನನ್ನು ಒಮ್ಮೆ

ಹಿಡಿದು ಚೆನ್ನಾಗಿ ಥಳಿಸಿಬಿಡುತ್ತಾರೆ. ಸರಿ ಆ ಗೋಳಾಟವೇಕೆ ಅಂದುಕೊಂಡು ಕೂಲಿಕಾರರೆಲ್ಲ ಸುಮ್ಮನಿದ್ದಾರೆ. ಆದರೆ ಒಳಗೊಳಗೇ ಅವರಲ್ಲಿ ಅಸಂತೋಷ ಕುದಿಯುತ್ತಿದೆ. ಸೋಶಲಿಸ್ಟರು ಸಂಘಕ್ಕೆ ಸೇರುವುದನ್ನೇ ಅವರು ಕಾಯುತ್ತಿದ್ದಾರೆ.''

''ಈ ಸಂದರ್ಭವನ್ನುಪಯೋಗಿಸಿಕೊಂಡು ಮಾಲೀಕರು ಸಂಘದಲ್ಲ ಒಡಕು ಹುಟ್ಟಿಸಿ ಅದನ್ನು ತಮ್ಮ ಕೈಗೆ ತಂದುಕೊಳ್ಳಲು ಪ್ರಯತ್ನಿಸುತ್ತಿರಬಹುದಲ್ಲ?''

''ಹೌದು. ಆದರೂ ನಡೆದಿದೆ. ಕಮ್ಯೂನಿಸ್ಟರೆಂದು ಹೇಳಿಕೊಳ್ಳುವ ಕೆಲವರಿಗೆ ಲಂಚ ಕೊಟ್ಟು ಸೆರೆ ಕುಡಿಸಿ ಅವರನ್ನು ತಮ್ಮ ಕಡೆಗೆ ತಿರುಗಿಸಿಕೊಳ್ಳಲು ಮಾಲೀಕರು ಪ್ರಯತ್ನಿಸುತ್ತಿದ್ದಾರೆ. ಈಗಾಗಲೇ ಕೆಲವರು ಅವರ ಕಡೆಗೆ ಹೋದದ್ದೂ ಆಗಿದೆ. ಮಾಲೀಕರ ಸಿ.ಐ.ಡಿ.ಗಳಾಗಿ ಅವರು ಸಂಘದಲ್ಲಿದ್ದಾರೆ. ಇಲ್ಲಿ ನಡೆಯುವುದನ್ನೆಲ್ಲ ಅವರು ಮಾಲೀಕರಿಗೆ ತಿಳಿಸುತ್ತಾರೆ.''

''ಈ ವಿಷಯ ದುರುಗಪ್ಪನಿಗೆ ತಿಳಿಯದೇ?''

''ಸಿ.ಐ.ಡಿ.ಗಳಿರಬೇಕೆಂಬ ಸಂದೇಹ ಆತನಿಗಿದೆಯಾದರೂ ಅವರು ಇಂಥವರೇ ಎನ್ನುವುದು ತಿಳಿದಿಲ್ಲ. ಅಂಥ ಸೂಕ್ಷ್ಮ ತಿಳಿದುಕೊಳ್ಳುವಷ್ಟು ಬುದ್ಧಿವಂತನೂ ಆತನಲ್ಲ. ಹೊಡೆಯುವುದು, ಬಡಿಯುವುದು, ಹೆದರಿಸುವುದು, ಬೆದರಿಸುವುದು ಇಂಥದರಲ್ಲಿ ಮಾತ್ರ ಆತ ಪೂರಾ ಬುದ್ಧಿವಂತ. ಹೆಣ್ಣುಗಳನ್ನು ಒಲಿಸಿಕೊಳ್ಳುವುದರಲ್ಲೂ ಬುದ್ಧಿವಂತನೆಂದೇ ಹೇಳಬಹುದು,'' ಎಂದು ನಕ್ಕು ನುಡಿದ ನಾರಾಯಣ.

''ಈ ವಿಷಯವೆಲ್ಲ ಶಂಕರನಿಗೆ ತಿಳಿಯದೇ?''

''ತಿಳಿದಿರಲೇಬೇಕು. ಆದರೆ ಅವರು ಇಂಥದಕ್ಕೆಲ್ಲ ಲಕ್ಷ್ಯ ಕೊಡುವುದಿಲ್ಲ. ಸುಮ್ಮನಿದ್ದುಬಿಡುತ್ತಾರೆ. ಪಾರ್ಟಿ ಹೇಗೆ ಬಲಗೊಂಡೀತು ಎಂಬುದರ ಕಡೆಗೇ ಅವರ ಲಕ್ಷ್ಯ. ನಾಗಮ್ಮ ದುರುಗಪ್ಪನ ಸರಸದಿಂದಾಗಿ ಇಂಥ ಗಲಭೆಯಾದರೂ ಶಂಕರ್ ಕಣ್ಣು ಮುಚ್ಚಿಕೊಂಡಿರಲು ಇದೇ ಕಾರಣ.''

''ಆ ನಾಗಮ್ಮ ಅಂದರೆ ಯಾರು?''

''ಆಕೆಯೇ ದುರುಗಪ್ಪನ ಮುಖ್ಯ ಪ್ರೇಯಸಿ. ಆಕೆಗಾಗಿಯೆ ಮ್ಯಾನೇಜರಿಗೂ ದುರುಗಪ್ಪನಿಗೂ ಜಗಳ ಬಂದದ್ದು.''

''ಆಕೆಗೆ ಗಂಡನಿಲ್ಲವೊ!''

"ಅಂಥ ಹೆಂಗಸರಿಗೆ ಎಲ್ಲರೂ ಗಂಡಂದಿರೇ."

"ಅಂದರೆ?"

"ಆಕೆ ಹರಿಜನರಾಕೆ. ಹೆಸರಿಗೆ ಮಾತ್ರ ಒಬ್ಬ ಗಂಡನಿದ್ದಾನೆ. ಈಗ ಅವನನ್ನು ಬಿಟ್ಟು ಸ್ವಚ್ಛಂದವಾಗಿದ್ದಾಳೆ."

"ಏನಾದರೂ ಓದಿಕೊಂಡವಳೊ?"

ಹೇಮಾದ್ರಿ ಗಟ್ಟಿಯಾಗಿ ನಗುತ್ತ–"ಅವಳೇನು ಓದಿಯಾಳು ಪಾಪ! ಹುಟ್ಟಿದ್ದು ಹರಿಜನರಲ್ಲಿ, ಮದುವೆಯಾದದ್ದು ಹರಿಜನರಲ್ಲಿ, ಗಂಡಸರಿಗೇ ಓದು ಬರುವದಿಲ್ಲ ಅವರಲ್ಲಿ, ಇನ್ನು ಹೆಂಗಸರಿಗೆಲ್ಲಿಂದ ಬಂದೀತು?" ಎಂದ.

"ಹೀಗಿದ್ದರೂ ಆಕೆಯೂ ಸಂಘದ ಕಾರ್ಯಕಾರಿ ಸಮಿತಿಯ ಸದಸ್ಯೆಯಾಗಿದ್ದಾಳೆ," ಎಂದ ನಾರಾಯಣ.

"ಓ! ಹೇಗೋ?"

"ದುರುಗಪ್ಪ ಮನಸ್ಸು ಮಾಡಿದರೆ ಯಾವುದು ಆಗಲಿಕ್ಕಿಲ್ಲ? ಆಕೆ ತನಗೆ ಪ್ರಿಯಳಾದವಳು, ಕೊನೆಯವರೆಗೂ ತನ್ನವಳಾಗಿಯೆ ಉಳಿಯಲಿ ಅಂತ ಸದಸ್ಯೆಯನ್ನಾಗಿ ಮಾಡಿಕೊಂಡು ಮೂಗಿಗೆ ತುಪ್ಪ ಹಚ್ಚಿ ಕೂಡಿಸಿದ..."

ಕೂಲಿಕಾರ ಚಳವಳಿಯ ಈ ದುರ್ದೆಸೆಯನ್ನು ಕಂಡು ಚಂದ್ರಣ್ಣ ಮರುಗಿದ. ಅಯೋಗ್ಯರ ಮುಖಂಡತ್ವದಿಂದ ಕೂಲಿಕಾರ ಚಳವಳಿಗೆ ಹಾನಿಯೆ ಆದೀತಲ್ಲದೆ ಲಾಭವೇನೂ ಆಗಲಾರದು. ಈ ಹಾನಿಯನ್ನು ತಡೆಗಟ್ಟಿ ಈ ಚಳವಳಿಯನ್ನು ಸರಿಯಾದ ದಾರಿಗೆ ತಿರುಗಿಸುವವರಾರು?

"ಕಾಂಗ್ರೆಸ್ಸಿನವರು ಈ ಚಳವಳಿಗೆ ಕೈ ಹಾಕಿಲ್ಲವೆ?" ಎಂದು ಕೇಳಿದನಾತ.

"ಸದ್ಯಕ್ಕಂತೂ ಇಲ್ಲ, ಆದರೂ ಅವರಿಗೆ ಆ ಮಹತ್ವಾಕಾಂಕ್ಷೆಯಿದ್ದೇ ಇದೆ. ಆದರೆ ಕೂಲಿಕಾರ ಚಳವಳಿ ಅಂದರೆ ಸಾಮಾನ್ಯ ಚಳವಳಿಯಲ್ಲ, ಗಾಂಧೀ ಕೀ ಜೈ ಅಂದುಬಿಟ್ಟು ಝುಂಡಾ ಹಿಡಿದು ಜೇಲಿಗೆ ಹೋಗುವುದೇ ಚಳವಳಿ ಅಂತ ನಂಬಿದ ಆ ಜನ ಹಗಲೂ ರಾತ್ರಿ ಊಟ ನಿದ್ದೆ ಬಿಟ್ಟು ಈ ಚಳವಳಿಯಲ್ಲಿ ದುಡಿಯುವುದು ಹೇಗೆ ಸಾಧ್ಯವಾದೀತು?"

"ಹಗಲೂ ರಾತ್ರಿ?"

"ಹೌದು. ನಮಗೆ ಹಗಲೂ ಒಂದೇ. ಇರುಳೂ ಒಂದೇ. ಹಗಲೆಲ್ಲ ಆಫೀಸಿನಲ್ಲಿ ಕೆಲಸ. ರಾತ್ರಿ ಕೂಲಿಕಾರರ ಓಣಿಗಳಿಗೆ ಹೋಗಿ ಅವರಲ್ಲಿ ಪ್ರಚಾರಕಾರ್ಯ ನಡೆಸಬೇಕು. ವಾರದಲ್ಲಿ ಐದಾರು ರಾತ್ರಿ ನಿದ್ರೆಯೇ ಸಿಕ್ಕುವಂತಿಲ್ಲ. ಹೀಗೆ ದುಡಿಯೋದು ಕಾಂಗ್ರೆಸ್ಸಿಗರಿಂದಾದೀತೇ? ಅವರಿಗೆ ಮುಖಂಡತ್ವ ಮಾತ್ರ ಬೇಕು, ದುಡಿತ ಬೇಡ."

"ಅಂತೂ ಅವರಿನ್ನೂ ಇದಕ್ಕೆ ತಲೆ ಹಾಕಿಲ್ಲ ಅನ್ನಿ."

"ಇಲ್ಲ, ಹಾಕಬೇಕೆಂದಿದ್ದಾರೆ. ಕೂಲಿಕಾರ ಮುಖಂಡರಾಗಿ ಮೆರೆಯುವ ಆಸೆ ತಮ್ಮಣ್ಣನವರಿಗೆ ತುಂಬಾ ಇದೆ. ಅದು ಕಮ್ಯೂನಿಸ್ಟರಿಗೂ ತಿಳಿದಿದೆ. ಕಾಂಗ್ರೆಸ್ಸಿನವರನ್ನು ಅವರೇ ಮಟ್ಟ ಹಾಕುತ್ತಾರೆ. ನಾವು ಏನನ್ನೂ ಮಾಡಬೇಕಾಗಿಲ್ಲ."

"ಅದು ಹೇಗೆ?"

"ಕೆಲ ದಿನ ತಡೆಯಿರಿ. ನಿಮಗೇ ಗೊತ್ತಾಗುತ್ತದೆ. ಈಗಾಗಲೇ ಗಲಾಟೆ ಯೇಳುವ ಲಕ್ಷಣ ಕಾಣಿಸುತ್ತಿವೆ."

"ಗಲಾಟೆ?"

"ಗಲಾಟೆ ಅಂದರೆ ಅಂಥಿಂಥ ಗಲಾಟೆಯಲ್ಲ, ಭಾರೀ ಗಲಾಟೆ. ಅದಕ್ಕಾಗಿ ಎರಡು ಕಡೆಗಳಲ್ಲೂ ಸಿದ್ಧತೆ ನಡೆದಿದೆ."

"ಅಂದರೆ?"

"ಮಾಲೀಕರೂ ತಯಾರಿಯಲ್ಲಿದ್ದಾರೆ. ಕಮ್ಯೂನಿಸ್ಟರೂ ಇದ್ದಾರೆ. ಒಂದು ಸಲ ಕೈ ನೋಡಿಬಿಡೋಣ ಅಂತ."

"ಶಂಕರರಿಗೆ ತಿಳಿದಿದೆಯೆ ಇದೆಲ್ಲಾ?"

"ತಿಳಿದಿರಲೇಬೇಕು. ಆದರೆ ಅವರಾದರೂ ಏನು ಮಾಡಿಯಾರು? ದುರುಗಪ್ಪನಿಗೆ ಬಹಳ ಸಲ ಬುದ್ಧಿ ಹೇಳಿ ನೋಡಿದರು. ಪುಂಡುತನ, ಹಿಂಸಾಚಾರ ಯಾವುದೂ ಬೇಡ – ಶಾಂತವಾಗಿ ಕೆಲಸ ಮಾಡಬೇಕು ಎಂದು. ಆದರೆ ಅಂಥ ಬುದ್ಧಿ ವಾದವನ್ನು ಕೇಳಲು ಹುಟ್ಟಿ ಬಂದವನಲ್ಲ ದುರುಗಪ್ಪ. ಆತ ತನ್ನ ಅವಿವೇಕದ ದಾರಿ ಬಿಡುತ್ತಿಲ್ಲ."

''ಇಂಥವರಿಂದಾಗಿ ಕಮ್ಯೂನಿಸ್ಟ್ ಪಾರ್ಟಿಯ ಹೆಸರೇ ಕೆಟ್ಟುಹೋಗ ಬಹುದಲ್ಲ?''

''ಹೆಸರು ಉಳಿದಿದ್ದರೆ ತಾನೆ ಕೆಡೋದು? ಶಂಕರರ ಮಟ್ಟಿಗೆ ಹೇಳಬೇಕಾದರೆ ಅವರು ಒಳ್ಳೆಯವರು. ಹೊಡೆದಾಟ ಬಡಿದಾಟ ಯಾವುದಕ್ಕೂ ಮುಂದಾಗುವ ವರಲ್ಲ. ಆದರೆ ಇಂಥ ಆದರ್ಶ ವ್ಯಕ್ತಿಗಳು ಬಹಳ ಜನರಿಲ್ಲ ಕಮ್ಯೂನಿಸ್ಟರಲ್ಲಿ. ಇರುವವರೆಲ್ಲ ಹೆಚ್ಚಾಗಿ ದುರುಗಪ್ಪನಂಥ ಅಶಿಕ್ಷಿತರು, ಅವಿವೇಕಿಗಳು. ಇಂಥವರ ಕೈಗೆ ಸಿಕ್ಕಿ ಪಾರ್ಟಿ ಹಾಳಾಗುತ್ತಿದೆ.''

''ಶಂಕರನಂಥವರು ಮನಸ್ಸು ಮಾಡಿ ಪಾರ್ಟಿಯ ಕೀರ್ತಿಯನ್ನು ಕಾಯ್ದುಕೊಳ್ಳಬೇಕು. ಇಂಥವರನ್ನೆಲ್ಲ ಪಾರ್ಟಿಯಿಂದ ತೆಗೆದುಹಾಕಬೇಕು.''

''ತೆಗೆಯಲು ಶಕ್ತಿ ಬೇಕಲ್ಲವೆ? ಇಂಥ ಪುಂಡರೇ ಹೆಚ್ಚಾಗಿ ಪಾರ್ಟಿಯಲ್ಲಿ ಸೇರಿ ತಮ್ಮ ಬಲ ಬೆಳೆಸಿಕೊಂಡಿದ್ದಾರೆ. ಶಂಕರನಂಥವರ ಆಟ ಅಲ್ಲಿ ನಡೆಯಲಾರದು. ಈ ಪುಂಡರ ವಿರುದ್ಧ ದನಿ ಎತ್ತಿದರೆ ಶಂಕರನಂಥವರನ್ನೇ ಪಾರ್ಟಿಯಿಂದ ಓಡಿಸಿಬಿಡಬಲ್ಲರಿವರು!'' ಎಂದ ಹೇಮಾದ್ರಿ.

''ಅಂತೂ ಈ ಪಾರ್ಟಿಯ ಭವಿತವ್ಯ ಸರಿಯಾಗಿರುವಂತೆ ಕಾಣುವುದಿಲ್ಲ'' ಎಂದು ನೊಂದ ದನಿಯಲ್ಲಿ ನುಡಿದ ಚಂದ್ರಣ್ಣ.

''ಪಾರ್ಟಿಗಳೆಂದರೆ ಇಂಥದೆಲ್ಲ ಅನಿವಾರ್ಯ ಚಂದ್ರಣ್ಣನವರೆ. ರಾಜಕೀಯ ಎಂದರೆ ಹೀಗೆಯೆ.''

''ಸೋಶಲಿಸ್ಟ್ ಪಾರ್ಟಿಯಾದರೂ ಸರಿಯಾಗಿ ಕೆಲಸ ಮಾಡಲಿ,'' ಎಂದು ನುಡಿದು ಚಂದ್ರಣ್ಣ ಮೇಲಕ್ಕೆದ್ದ.

## ೧೫

ಅದೇ ಸಮಯದಲ್ಲಿ–

ತಮ್ಮಣ್ಣನವರ ಮನೆಯ ಅಟ್ಟದ ಮೇಲೆ ಅವರ ಗುಂಪಿನ ಜನರೆಲ್ಲ ಕೂಡಿ

ಚಂದ್ರಣ್ಣನ ವಿಷಯವನ್ನೇ ಚರ್ಚಿಸುತ್ತಿದ್ದರು.

ಕಂಪನಿಯನ್ನು ಸ್ಥಾಪಿಸುವ ಬಗೆಗೆ ಕೂಡಲೆ ಒಂದು ನಿರ್ಧಾರಕ್ಕೆ ಬರಬೇಕೆಂದು ಸಂಗಪ್ಪ ಸೆಟ್ಟರು ಸೂಚಿಸಿದುದರಿಂದ ತಮ್ಮಣ್ಣನವರು ಅವಸರದಿಂದ ಕೆಲಸಕ್ಕೆ ತೊಡಗಿದ್ದರು. ಅಂದು ರಾತ್ರಿಯ ಊಟ ಮುಗಿಸಿಕೊಂಡು ಗುಂಪಿನವರೆಲ್ಲ ತಮ್ಮ ಮನೆಯಲ್ಲಿ ಸೇರಬೇಕೆಂದು ತಿಳಿಸಲಾಗಿದ್ದಿತು. ಅದರಂತೆ ಎಲ್ಲರೂ ಅಲ್ಲಿ ಒಟ್ಟುಗೂಡಿ ದ್ದರು. ಬೀಡಿ, ಸಿಗರೇಟುಗಳ ಕಮಟು ವಾಸನೆ ಕೊಠಡಿಯಲ್ಲೆಲ್ಲ ಇಡುಗಿತ್ತು. ನಡುವೆ ಇದ್ದ ಪುಟ್ಟ ಮೇಜಿನ ಮೇಲೆ ಇಸ್ಪೀಟು ಎಲೆಗಳೊಂದು ಕಟ್ಟೂ ಇತ್ತು. ಮಾರ್ತಾಂಡಪ್ಪ ಅದನ್ನು ಕೈಗೆತ್ತಿಕೊಂಡು ಹಾಗೆ ಹೀಗೆ ತಿರುಗಿಸುತ್ತಲಿದ್ದ.

''ಅಂತೂ ಚಂದ್ರಣ್ಣನವರಿಂದ ನಮಗೆ ತುಂಬಾ ಉಪಯೋಗವುಂಟು. ನಾವೆಲ್ಲ ಡೈರೆಕ್ಟರಾಗುವುದು ಒಳ್ಳೆಯದು,'' ಎಂದರು ತಮ್ಮಣ್ಣನವರು.

''ಅದಂತೂ ನಿರ್ಧಾರವಾದ ಹಾಗೇ ಸರಿ. ಇನ್ನು ಕೆಲಸಕ್ಕಾರಂಭವಾಗಬೇಕು'' ಎಂದು ನುಡಿದು ಮಾರ್ತಾಂಡಪ್ಪ, ಗುರುಶಾಂತಪ್ಪನವರ ಕಡೆಗೆ ತಿರುಗಿ, ''ಒಂದು ಬೀಡಿ ಕೊಡಬಾರದೇ ಗುರಣ್ಣ?'' ಎಂದ. ಅವರು ನಗುತ್ತಾ ತಮ್ಮ ಬೀಡಿಯ ಕಟ್ಟನ್ನು ಹೊರದೆಗೆದು ಆತನಿಗೊಂದನ್ನು ಕೊಟ್ಟು ತಾವೂ ಒಂದನ್ನು ಹತ್ತಿಸಿದರು.

ಬೀಡಿಯ ಹೊಗೆ ಎಳೆಯುತ್ತ ಮಾರ್ತಾಂಡಪ್ಪ ಹುಬ್ಬು ಹಾರಿಸುತ್ತ – ''ನಮ್ಮ ಗುರಣ್ಣನವರ ಬೀಡಿ ಅಂದರೆ ಬೀಡಿ ನೋಡಿ! ಇಂಥಾ ರುಚಿ ಬೇರಿನ್ನಾವ ಬೀಡಿಗೂ ಬರಲಿಕ್ಕಿಲ್ಲ'' ಎಂದ.

''ಮಾರಾಯ! ನನ್ನನ್ನೇತಕ್ಕೆ ಹೊಗಳುತ್ತೀಯ? ನಾನೇನೂ ಆ ಬೀಡಿ ತಯಾರು ಮಾಡಿಲ್ಲವಲ್ಲ!''

''ತಯಾರು ಮಾಡದಿದ್ದರೇನಾಯಿತು? ಕೊಳ್ಳುವಾಗ ಬುದ್ಧಿಯನ್ನುಪಯೋಗಿಸಿ ಶ್ರೇಷ್ಠ ಬೀಡಿಯನ್ನೇ ಕೊಳ್ಳುತ್ತೀರಲ್ಲ? ನೂರಾರು ಬೀಡಿಗಳಲ್ಲಿ ಒಳ್ಳೆಯದನ್ನೇ ಆರಿಸಿಕೊಳ್ಳುವುದಕ್ಕೂ ಒಂದು ಯೋಗ್ಯತೆ ಬೇಕು, ಯೋಗ್ಯತೆ!'' ಎಂದ ಮಾರ್ತಾಂಡಪ್ಪ

''ಬಿಟ್ಟಿ ಬೀಡಿ ಬಲು ರುಚಿ!'' ಎಂದು ಹಾಸ್ಯ ಮಾಡಿ ನಕ್ಕ ಬೀರಣ್ಣ. ಆತ ತಮ್ಮಣ್ಣನವರ ಆಪ್ತ ಕಾರ್ಯದರ್ಶಿಯಿದ್ದ ಹಾಗೆ; ಅಂಗರಕ್ಷಕನಿದ್ದ ಹಾಗೆ. ಹಿಂದೆ ಕುಸ್ತಿ ಹಿಡಿದು ಪ್ರಸಿದ್ಧ ಜಟ್ಟಿಯೆಂದು ಹೆಸರು ಪಡೆದಿದ್ದ ಆತ ತಮ್ಮಣ್ಣನವರ ಸ್ನೇಹ ಬೆಳೆಸಿ

ಅವರ ಅಂತರಂಗದ ಸ್ನೇಹಿತನೂ, ಸಹಾಯಕನೂ ಆಗಿದ್ದುಕೊಂಡು ಅವರ ಹಲವಾರು ಕೆಲಸಗಳನ್ನು ಸಾಧಿಸಿಕೊಡುತ್ತಿದ್ದ. ಮೊದಲಿನಿಂದಲೂ ಮಾರ್ತಾಂಡಪ್ಪನನ್ನು ಕಂಡರೆ ಆತನಿಗಾಗದು. ಗುರುಶಾಂತಪ್ಪನವರಿಂದ ಮತ್ತೆ ಮತ್ತೆ ಬೀಡಿಗಳನ್ನು ಕೇಳಿ ತೆಗೆದುಕೊಂಡು ಸೇದುವ ಮಾರ್ತಾಂಡಪ್ಪನ ರೀತಿ ಬೀರಣ್ಣನಲ್ಲಿ ಜಿಗುಪ್ಸೆ ಹುಟ್ಟಿಸಿದ್ದಿತು. ಅಂತೆಯೆ, ಸಮಯ ಸಿಕ್ಕಿದಾಗಲೆಲ್ಲ ಆತ ಒಂದು ಕಿಡಿ ಹಾರಿಸದಿರುತ್ತಿರಲಿಲ್ಲ, ಮಾರ್ತಾಂಡಪ್ಪನೂ ಆತನನ್ನು ಸುಮ್ಮನೆ ಬಿಡುತ್ತಿರಲಿಲ್ಲ.

"ನಿನಗೇಕೆ ಹೊಟ್ಟೆಯುರಿ ಬೀರಣ್ಣ! ನೀನಂತೂ ಬೀಡಿ ಸೇದುವುದಿಲ್ಲವಲ್ಲ? ಬಿಟ್ಟಿ ಬೀಡಿಯ ರುಚಿಯಾದರೂ ನಿನಗೇನು ತಿಳಿದೀತು?"

ಈ ವಾದ ವಿವಾದವನ್ನು ಕೇಳಿ ತಮ್ಮಣ್ಣನವರು ಹುಬ್ಬುಗಂಟಿಕ್ಕಿ ಅವರಿಬ್ಬರನ್ನು ಒಂದು ಸಲ ತೀಕ್ಷ್ಣವಾಗಿ ನಿಟ್ಟಿಸಿ ನೋಡಿದರು. ಶಿಕ್ಷಕರ ಉರಿಮುಖ ಕಂಡ ವಿದ್ಯಾರ್ಥಿಗಳ ಹಾಗೆ ಅವರಿಬ್ಬರೂ ಸುಮ್ಮನಾದರು.

"ಯಾವುದೋ ಗಂಭೀರ ವಿಷಯ ಚರ್ಚಿಸಲು ಕರೆದರೆ ಇವರಿಗೆ ಬೀಡಿಯ ವಿಷಯವೇ ದೊಡ್ಡದಾಯಿತು. ಕಂಪನಿಗೆ ಯಾರು ಯಾರು ಡೈರೆಕ್ಟರಾಗಬೇಕು ಎನ್ನುವುದನ್ನು ತೀರ್ಮಾನಿಸಬೇಕಲ್ಲ?" ಎಂದರು ತಮ್ಮಣ್ಣನವರು.

"ಸಂಗಪ್ಪ ಸೆಟ್ಟರಂತೂ ಆಗಿಯೆ ಆಗುವರಷ್ಟೆ?" ಎಂದು ಕೇಳಿದರು ಶಿವರುದ್ರಪ್ಪ.

"ಇಲ್ಲ, ಅವರು ಡೈರೆಕ್ಟರಾಗುವುದಿಲ್ಲ. ಹಾಗೇ ಷೇರ್‌ಹೋಲ್ಡರಾಗಿರುತ್ತಾರೆ."

"ಅದೇಕೆ?"

"ಸದ್ಯಕ್ಕೆ ಡೈರೆಕ್ಟರಾಗುವುದು ಬೇಡವೆಂದೇ ಅವರ ಅಭಿಪ್ರಾಯ. ಈಗ ನಾವು ಪ್ರಾರಂಭಿಸುವುದು ಸಣ್ಣ ಕಂಪನಿ. ಸದ್ಯ ಹೊರಡಿಸುವುದೂ ವಾರಪತ್ರಿಕೆ. ಆದ್ದರಿಂದ ಇಂಥ ಸಣ್ಣ ಕಂಪನಿಗೆ ತಮ್ಮಂಥವರು ಡೈರೆಕ್ಟರಾಗುವುದು ಉಚಿತವಲ್ಲ ಎಂದು ಅವರ ಅಭಿಪ್ರಾಯ. ಕಂಪನಿಯನ್ನು ದೊಡ್ಡದನ್ನಾಗಿ ಮಾಡಿ ದಿನಪತ್ರಿಕೆ ಹೊರಡಿಸುವಾಗ ಸೆಟ್ಟರು ಡೈರೆಕ್ಟರಾಗುವರಂತೆ. ಈಗ ಅವರ ಪ್ರತಿನಿಧಿಯಾಗಿ ನಾನೇ ಇರಬೇಕಂತೆ."

"ಚೇರ್ಮನ್ ಯಾರು?" ಎಂದು ಕೇಳಿದರು ಗುರುಶಾಂತಪ್ಪ.

"ನಮ್ಮಲ್ಲಿ ತಮ್ಮಣ್ಣನವರನ್ನು ಬಿಟ್ಟರೆ ಇನ್ನಾರಿದ್ದಾರೆ ಚೇರ್ಮನ್ ಆಗುವಂಥ

ವರು?'' ಎಂದ ಮಾರ್ತಾಂಡಪ್ಪ.

''ಇದೊಂದು ಬಂಗಾರದಂಥ ಸಂದರ್ಭ. ನಮ್ಮ ಗುಂಪಿಗೆ ಕೈಯಲ್ಲೊಂದು ಪತ್ರಿಕೆಯಿದ್ದರೆ ಸಾವಿರ ಸೈನಿಕರ ಬಲವಿದ್ದ ಹಾಗೆ. ಒಂದು ಪತ್ರಿಕೆಯ ಮೂಲಕ ಎಂಥ ಕೆಲಸವನ್ನಾದರೂ ನಾವು ಸಾಧಿಸಬಹುದು. ಚಂದ್ರಣ್ಣನವರ ಲೇಖನಿ ಕತ್ತಿಗಿಂತ ತೀಕ್ಷ್ಣವಾದದ್ದು. ಸರಕಾರವೂ ಸಹ ಅವರಿಗೆ ಹೆದರುವುದಂತೆ. ಇಂಥವರು ನಮ್ಮೊಡನೆ ಸೇರುವುದು ನಮ್ಮ ಭಾಗ್ಯವೆ ಸರಿ. ನಾಳೆ ಬೆಳಗಾದರೆ ನಗರಸಭೆಯ ಚುನಾವಣೆ ಬರುತ್ತೆ. ನಮ್ಮ ವಿರೋಧಿ ಪಕ್ಷವನ್ನು ಬಗ್ಗು ಬಡಿಯಲು ಬಹಳ ಸಹಾಯವಾದೀತು,'' ಎಂದರು ತಮ್ಮಣ್ಣ.

ಆರಿಹೋಗಿದ್ದ ಬೀಡಿಗೆ ಮತ್ತೆ ಉರಿ ಹೊತ್ತಿಸುತ್ತ ಮಾರ್ತಾಂಡಪ್ಪ ನುಡಿದ : ''ತಮ್ಮಣ್ಣನವರು ಮುತ್ತಿನಂಥ ಮಾತು ಆಡಿದರು. ನಮ್ಮ ಗುಂಪಿಗೊಂದು ಪತ್ರಿಕೆ ಆಗತ್ಯವಾಗಿ ಬೇಕೆಂದು ನಾನು ಎಂದಿನಿಂದಲೂ ಹೇಳುತ್ತ ಬಂದಿದ್ದೇನೆ. ಒಂದು ಪತ್ರಿಕೆಯಲ್ಲಿರುವ ಶಕ್ತಿಯ ಮುಂದೆ ತಿಂದು ಕೊಬ್ಬಿದ ಸಾವಿರ ಜಟ್ಟಿಗಳ ಶಕ್ತಿಯೂ ತುಚ್ಛ!''

ಮಾರ್ತಾಂಡಪ್ಪ ಈ ಮಾತನ್ನು ಸಹಜವಾಗಿ ಆಡಿದನೊ, ಬೀರಣ್ಣನನ್ನು ಕೆಣಕಲೆಂದು ಆಡಿದನೋ ತಿಳಿಯದು. ಬೀರಣ್ಣನಿಗಂತೂ ಅದು ತನ್ನನ್ನು ಹೀಯಾಳಿಸಲೆಂದೇ ಆಡಿದ ಮಾತೆಂದು ಭಾಸವಾಗಿ ಕೋಪ ಬಂದಿತು. ಆತ ಸಿಟ್ಟಿನಿಂದ ಉರಿಯುತ್ತ ಅಲ್ಲಿಂದೆದ್ದು ಉಗುಳುವ ನೆಪ ಮಾಡಿಕೊಂಡು ಹೊರಕ್ಕೆ ನಡೆದ.

''ಡೈರೆಕ್ಟರಾಗಬೇಕಾದರೆ ಎಷ್ಟು ಹಣ ಹಾಕಬೇಕು?'' ಕೇಳಿದವರು ಶಿವರುದ್ರಪ್ಪ.

''ಒಂದು ಸಾವಿರವಾದರೆ ಆಯಿತು.''

''ಬಹಳ ಕಡಿಮೆಯಾಗಲಿಲ್ಲವೆ?''

''ಕಂಪನಿಯ ಬಂಡವಾಳ ಹೆಚ್ಚಿಗಿರಬೇಕಾದ ಅಗತ್ಯವಿಲ್ಲ. ಸದ್ಯ ಹಂಚಿಕೆಗಿಡುವ ಬಂಡವಾಳ ಕೇವಲ ಐವತ್ತು ಸಾವಿರ.''

''ಐವತ್ತು ಸಾವಿರ ಸುಲಭವಾಗಿ ಕೂಡಬಹುದಲ್ಲವೆ?''

''ಅದೇನು ಹೀಗೆ ಕೇಳುತ್ತೀರಿ, ಇಷ್ಟು ಹಣವನ್ನೆಲ್ಲ'' ಎಂದ ಮಾರ್ತಾಂಡಪ್ಪ.

"ಷೇರ್‌ಬ್ರೋಕರ್ ಕೆಲಸವನ್ನು ಮಾರ್ತಾಂಡಪ್ಪನವರಿಗೇ ಒಪ್ಪಿಸಿದ ರಾಯಿತು," ಎಂದರು ಗುರುಶಾಂತಪ್ಪ.

"ನನಗೊಪ್ಪಿಸಿದರೆ ಮೂರು ತಿಂಗಳಲ್ಲಿಯೆ ಐವತ್ತು ಸಾವಿರ ಕೂಡಿಸಿಕೊಡು ತ್ತೇನೆ."

"ಕಂಪನಿಯನ್ನು ಅವರು ಸರಿಯಾಗಿ ನಡೆಸಬಹುದೇ?" ಎಂದು ಶಿವರುದ್ರಪ್ಪ ನವರು ಪ್ರಶ್ನಿಸಿದರು.

"ನಡೆಸಬಹುದು. ಅವರೊಂದಿಗೆ ಆ ಶಿವಯೋಗೀಶ್ವರರು ಬೇರೆ ಇರುವರಲ್ಲ, ಅಲ್ಲದೆ ನಾನೂ ಇರುತ್ತೇನೆ ಮೇಲ್ವಿಚಾರಣೆ ಮಾಡಲು," ಎಂದು ತಮ್ಮಣ್ಣನವರು ಭರವಸೆ ಕೊಟ್ಟರು.

ಅದೇ ಸಮಯದಲ್ಲಿ -

ಕೊಟ್ರಪ್ಪನ ಕೊಠಡಿಯಲ್ಲಿ ಶಿವಯೋಗಿಯೂ ಅಂಥ ಸಂದೇಹದ ಮಾತನ್ನೆ ಆಡುತ್ತಿದ್ದ. ರಾತ್ರಿ ಬಹಳ ಹೊತ್ತಾದ ಮೇಲೆ ಕೊಠಡಿಗೆ ಬಂದ ಚಂದ್ರಣ್ಣನನ್ನು ಆತ ಸಂಶಯದಿಂದಲೇ ಸ್ವಾಗತಿಸಿದ್ದ. "ಸವಾರಿ ಇಷ್ಟು ಹೊತ್ತು ಎಲ್ಲಿತ್ತು? ಆ ಮುದುಕಿ ಯನ್ನು ಆಸ್ಪತ್ರೆಗೆ ಕಳಿಸಿ ಬಂದಿರಾ?"

"ಇಲ್ಲ, ಅಂಥ ಭಾರಿ ಗಾಯವೇನೂ ಆಗಿರಲಿಲ್ಲ. ಅವರ ಮನೆಗೆ ಬಿಟ್ಟುಬಂದೆ," ಎಂದು ನುಡಿದು ಚಂದ್ರಣ್ಣ ತನ್ನ ಹಾಸುಗೆಯನ್ನುರುಳಿಸಿ ದೇಹವನ್ನು ಒರಗಿಸಿದ್ದ.

"ಅಂತೂ ನಿಮ್ಮದು ಬಹಳ ಕೋಮಲ ಹೃದಯ ಚಂದ್ರಣ್ಣ. ವ್ಯವಹಾರದಲ್ಲಿ ಇಂಥ ಕೋಮಲತೆಯಿಂದ ಏನೂ ಉಪಯೋಗವಿಲ್ಲ."

ಚಂದ್ರಣ್ಣ ಆ ಮಾತಿಗೆ ಉತ್ತರವೀಯಲಿಲ್ಲ. ಸುಮ್ಮನೆ ಜಂತೆಯನ್ನು ದಿಟ್ಟಿಸುತ್ತಲಿದ್ದ. ಹತ್ತಿರದ ಹಾಸಿಗೆಯ ಮೇಲೊರಗಿದ್ದ ಕೊಟ್ರಪ್ಪ ನೀಳವಾಗಿ ಗೊರಕೆ ಹೊಡೆಯುವುದು ಕೇಳಿಬರುತ್ತಿತ್ತು. ಶಿವಯೋಗಿ ಮುಂದುವರಿಸಿದ :

"ಬೇಡ ಬೇಡವೆಂದರೂ ನೀವು ಕಾರಿನಿಂದಿಳಿದು ಆ ಮುದುಕಿಯ ಆರೈಕೆಗೆ ನಿಂತದ್ದನ್ನು ಕಂಡು ಸದಾಶಿವಪ್ಪನವರು ಏನು ತಿಳಿದುಕೊಂಡರೊ!"

"ಏನು ತಿಳಿದುಕೊಂಡರು?"

''ಏನೊ ಯಾರಿಗೆ ಗೊತ್ತು. ಆಮೇಲೆ ಅವರು ಮಾತನಾಡಲೇ ಇಲ್ಲ. ನನ್ನನ್ನು ಪೇಟೆಯಲ್ಲಿ ಬಿಟ್ಟು ಹೊರಟುಹೋದರು. ನೀವು ಆ ರೀತಿ ಮಾಡಬಾರದಾಗಿತ್ತು.''

''ಸದಾಶಿವಪ್ಪ ಆ ರೀತಿಯಾಗಿ ನಿರ್ಲಕ್ಷ್ಯದಿಂದ ಕಾರು ಓಡಿಸಿದ್ದು ಸರಿಯೆಂದು ನೀವು ಹೇಳುವಿರಾ?''

''ಸರಿಯೆಂದು ಹೇಳುವುದಿಲ್ಲ – ಆದರೇನು ಮಾಡುವುದು. ಶ್ರೀಮಂತರ ಸ್ವಭಾವವೇ ಹಾಗೆ. ಆವರನ್ನೆದುರಿಸಿ ನಿಂತರೆ ನಮ್ಮ ಕೆಲಸ ಸಾಗುವಂತಿಲ್ಲವಲ್ಲ?''

''ನಾನೇನೂ ಅವರನ್ನೆದುರಿಸಿ ನಿಲ್ಲಲಿಲ್ಲವಲ್ಲ! ತಮ್ಮ ಕಾರಿಗೆ ಸಿಕ್ಕುಬಿದ್ದು ಮೂರ್ಛೆ ಹೋದ ಮುದುಕಿಯನ್ನು ಕಾರಿನಲ್ಲೇ ಹಾಕಿಕೊಂಡು ಆಸ್ಪತ್ರೆಗೊಯ್ದು ಉಪಚಾರಕ್ಕೆ ವ್ಯವಸ್ಥೆ ಮಾಡಿ ಹೋಗುವುದು ಅವರ ಕರ್ತವ್ಯವಾಗಿತ್ತು. ಅದು ಮನುಷ್ಯತ್ವಕ್ಕೊಪ್ಪುವ ಮಾತು. ಅದನ್ನು ಮರೆತು, ಜನರ ಪ್ರತಿಭಟನೆಯನ್ನು ಕಡೆಗಣಿಸಿ ಪೋಲೀಸ್ ಅಧಿಕಾರಿಗೆ ಲಂಚ ಕೊಟ್ಟು ಬಿರಬಿರನೆ ಹೊರಟುಹೋದರಲ್ಲ! ಆ ಅಧಿಕಾರಿಗೆ ಲಂಚ ಕೊಡುವುದನ್ನು ಬಿಟ್ಟು ಆ ಮುದುಕಿಯ ಆರೈಕೆಗೆ ಆ ಹಣವನ್ನು ಖರ್ಚು ಮಾಡಿದ್ದರೇನಾಗುತ್ತಿತ್ತು?''

''ನೀವು ಹೇಳುವುದೂ ಸರಿಯೆ. ಆದರೆ ಶ್ರೀಮಂತರ ಮನೋವೃತ್ತಿ ಒಂದು ರೀತಿಯದು. ಅವರನ್ನು ಅನುಸರಿಸಿಕೊಂಡು ಹೋಗುವುದರಲ್ಲೇ ಜಾಣತನವಿದೆ. ಕಂಪನಿಗೆ ಅವರಿಂದ ತುಂಬಾ ಸಹಾಯವಾಗಬೇಕಾದಾಗ ನಾವು ಅವರನ್ನು ಅಸಂತೋಷಗೊಳಿಸುವುದು ಸರಿಯಲ್ಲ.''

''ಮನುಷ್ಯತ್ವ, ದಯೆ, ಕಾರುಣ್ಯಗಳನ್ನೆಲ್ಲ ಕಾಲ ಕೆಳಗೆ ತುಳಿದುಹಾಕಿ ಈ ಶ್ರೀಮಂತರ ಬಾಲ ಹಿಡಿದುಕೊಂಡಿರಲು ನನಗೆ ಮನಸ್ಸಿಲ್ಲ'' ಎಂದು ನಿಷ್ಠುರವಾಗಿ ನುಡಿದ ಚಂದ್ರಣ್ಣ.

ಶಿವಯೋಗಿ ಕೊಂಚ ಹೊತ್ತು ಸುಮ್ಮನಿದ್ದು ಅನಂತರ ನುಡಿದ : ''ನಿಮ್ಮ ಸ್ವಭಾವ ಹೀಗಿರಬಹುದೆಂದು ನಾ ತಿಳಿದಿರಲಿಲ್ಲ ಚಂದ್ರಣ್ಣ. ಮೊದಲೇ ನನಗೆ ಗೊತ್ತಿದ್ದರೆ ನಿಮ್ಮೊಡನೆ ಕಂಪನಿ ಮಾಡುವ ಗೊಡವೆಗೇ ಬರುತ್ತಿರಲಿಲ್ಲ ನಾನು!''

''ನಿಮ್ಮ ಸ್ವಭಾವವನ್ನು ನಾನಾಗ ತಿಳಿದಿದ್ದರೆ ನಾನೂ ಈ ಕಂಪನಿಯ ಹವ್ಯಾಸಕ್ಕೆ ಬೀಳುತ್ತಿರಲಿಲ್ಲ'' ಎಂದು ಚಂದ್ರಣ್ಣ ತಲೆಯವರೆಗೂ ಕಂಬಳಿಯನ್ನು ಹೊದ್ದುಕೊಂಡು ಮಲಗಿಬಿಟ್ಟ.

ಆ ರಾತ್ರಿ ಆತನಿಗೆ ನಿದ್ರೆ ಬರಲಿಲ್ಲ.

ಕಣ್ಣು ಮುಚ್ಚಿದರೂ ಕಣ್ಣ ಬೊಂಬೆಗಳೆದುರಿಗೆ ಆ ದಿನ ಕಂಡ ದೃಶ್ಯಗಳೆಲ್ಲವೂ ಮತ್ತೆ ಮತ್ತೆ ಸುಳಿದುಹೋಗುತ್ತಿದ್ದವು. ಸಂಗಪ್ಪ ಸೆಟ್ಟರು, ಅವರ ಕನ್ಯೆ ಶಾರದಾಮಣಿ, ಆಕೆಯ ಕೊಠಡಿಗಳ ರಾಜವೈಭವ, ಮೋಟಾರು ಅಪಘಾತ, ಸೋಮಣ್ಣನ ಮನೆ, ರತ್ನಮ್ಮ, ಕಮ್ಯೂನಿಸ್ಟರು, ಸೋಶಲಿಸ್ಟರು, ಬಡಿದಾಟ, ಹೊಡೆದಾಟ... ಧರ್ಮಪುರದ ಆ ಮಹಾವಿಲಕ್ಷಣ ಪ್ರಪಂಚವೆಲ್ಲ ಆತನನ್ನು ಬೆರಗುಗೊಳಿಸಿದ್ದಿತು. ಆ ಪ್ರಪಂಚದಲ್ಲಿ ತಾನೂ ಸೇರಿಕೊಳ್ಳಬೇಕಾಗಿದ್ದಿತು. ಪರಸ್ಪರ ವಿರೋಧಿ ಗುಂಪುಗಳ ಆ ತಾಕಲಾಟದಲ್ಲಿ ಒಂದು ದಾರಿ ತೆಗೆದು ಮುಂದುವರಿಯಬೇಕಾಗಿದ್ದಿತು. ಎತ್ತ ಹೊರಳಿದರೂ ಕಷ್ಟವೆ. ಒಂದು ಗುಂಪಿನೊಂದಿಗೆ ಸೇರಿದರೆ ಇನ್ನೊಂದು ಗುಂಪಿಗೆ ಕೋಪ ಬರಬಹುದು. ಒಬ್ಬರೊಂದಿಗೆ ಕಲೆತರೆ ಇನ್ನೊಬ್ಬರ ರೋಷಕ್ಕೆ ಪಾತ್ರನಾಗಬೇಕಾಗಬಹುದು. ಬಡವರ ಬಗೆಗೆ ಕನಿಕರ ವ್ಯಕ್ತಗೊಳಿಸಿದರೂ ಸಹ ಸಿಟ್ಟು ಬರುವುದು ಈ ಶ್ರೀಮಂತರಿಗೆ. ಇಂಥವರೊಂದಿಗೆ ಕೂಡಿ ಕಂಪನಿ ಮಾಡುವುದು ಹೇಗೆ ಸಾಧ್ಯವಾದೀತು? ಆದರೇನು ಮಾಡುವುದು, ಬೇರೆ ಉಪಾಯವಿಲ್ಲ. ಈಗ ಹಿಂಜರಿದು ಕೂಡುವುದರಲ್ಲಿ ಅರ್ಥ ವಿಲ್ಲ. ಕಂಪನಿಯನ್ನು ಮಾಡಲೆಂದೇ ಬೆಂಗಳೂರನ್ನು ತ್ಯಜಿಸಿ ಗಂಟುಮೂಟೆ ಕಟ್ಟಿಕೊಂಡು ಬಂದುದಾಗಿದೆ. ಅಂತೂ ಮಾಡಿಬಿಡುವುದು. ಮುಂದಿನ ಮಾತು ಮುಂದೆ!

ಬೆಳಗಿನ ಹಾಸುಗೆ ಬಿಟ್ಟು ಎದ್ದಾಗ ಆತನ ತಲೆ ಸಿಡಿಯುತ್ತಿತ್ತು. ಕಣ್ಣುಗಳೆರಡು ಉರಿಯುತ್ತಿದ್ದುವು. ಎದ್ದು ಮುಖ ತೊಳೆದುಕೊಂಡು ಕಾಫಿ ಕುಡಿದಾಗ ಏನೋ ಕೊಂಚ ಸಮಾಧಾನವಾದಂತಾಯಿತು.

ಆತ ಕಾಫಿ ಕುಡಿದು ಸಿಗರೇಟು ಹೊತ್ತಿಸಿ ಕೂತಿರುವ ಹೊತ್ತಿಗೆ ಹೊರಗಡೆ ಹೋಗಿದ್ದ ಕೊಟ್ರಪ್ಪ ದಿನಪತ್ರಿಕೆಯ ಕಟ್ಟುಗಳೊಡನೆ ಕೊಠಡಿಯಲ್ಲಿ ನುಗ್ಗಿ ಬಂದ.

''ಎದ್ದಿರಾ? ನಿದ್ದೆ ಚೆನ್ನಾಗಿ ಆಯಿತೇ?''

''ಏಕೋ ಏನೊ ನಿದ್ದೆಯೆ ಬರಲಿಲ್ಲ, ಎಲ್ಲಿಗೆ ಹೋಗಿದ್ದೆ ಕೊಟ್ರಣ್ಣ?''

ದಿನಪತ್ರಿಕೆಯ ಕಟ್ಟುಗಳನ್ನು ಬೆಂಚಿನ ಮೇಲಿಟ್ಟು ಕೊಟ್ರಣ್ಣ ಕುಳಿತುಕೊಂಡ. ಬೇಸರದ ಧ್ವನಿಯಲ್ಲಿ - ''ಇನ್ನೆಲ್ಲಿಗೆ ಹೋಗಲಿ. ಬೆಳಗಾಗುತ್ತಲೇ ಎದ್ದು ಓಡಿಹೋಗ ಬೇಕಲ್ಲವೆ ಸ್ಟೇಶನ್ನಿಗೆ?'' ಎಂದ.

''ಓಹೋ! ಮೇಲ್ ಬರುವ ಹೊತ್ತಿಗೆ ಅಲ್ಲಿರಬೇಕಾಗುತ್ತದಲ್ಲವೆ?''

''ದಿನವೂ ಆರೂವರೆ ಗಂಟೆಗೆ ಹಾಸಿಗೆ ಬಿಟ್ಟೇಳಲೇಬೇಕು ನೋಡಿರಿ. ನನಗೆ ಬೆಳಗಿನ ನಿದ್ದೆ ಅಂದರೆ ಬಲು ಪ್ರೀತಿ. ಆದರೇನು ಮಾಡೋದು. ಏಳಲೇಬೇಕು. ಮಳೆಯಿದ್ದರೂ ಸರಿ, ಚಳಿಯಿದ್ದರೂ ಸರಿ, ಮೈಯಲ್ಲಿ ನೆಟ್ಟಗಿದ್ದರೂ ಸರಿ, ಇಲ್ಲದಿದ್ದರೂ ಸರಿ, ಎದ್ದು ಓಡಲೇಬೇಕು. ಒಂದು ದಿನ ತಪ್ಪಿದರೆ ಆಯಿತು. ಆ ದಿನದ ಪತ್ರಿಕೆಗಳಲ್ಲಿ ಹೆಚ್ಚು ಹಾಗೇ ಉಳಿಯುತ್ತವೆ. ಈಚೆಗೆ ಕಾಂಪಿಟೀಷನ್ ಬೇರೆ ವಿಪರೀತವಾಗಿದೆ.''

''ಹೌದು ದಿನಪತ್ರಿಕೆಗಳು ದಿನಕ್ಕೊಂದು ಹುಟ್ಟುತ್ತಿವೆ.''

''ಯುದ್ಧಕಾಲದಲ್ಲಿ ಕಾಳಸಂತೆಯಲ್ಲಿ ಲಾಭ ಹೊಡೆದ ವ್ಯಾಪಾರಿಗಳೆಲ್ಲ ಆ ಹಣವನ್ನು ಹೇಗೆ ಖರ್ಚು ಮಾಡಬೇಕೆಂಬುದು ತಿಳಿಯದೆ ಈ ಉದ್ಯೋಗಕ್ಕಿಳಿಯುತ್ತಿದ್ದಾರೆ. ಇದುವರೆಗೆ ಹಣ ಮಾಡಿಕೊಂಡದ್ದಾಯಿತು. ಇನ್ನಿವರು ದೊಡ್ಡ ಮನುಷ್ಯರಾಗಬೇಕಲ್ಲ! ಅದಕ್ಕೇ ಪತ್ರಿಕೆಗಳನ್ನು ಹೊರಡಿಸುತ್ತಿದ್ದಾರೆ. ತುಂಬ ಕಷ್ಟದಿಂದ ಜೀವಿಸಿರುವ ಬಡ ಪತ್ರಿಕೆಗಳೆಲ್ಲ ಜೀವ ಬಿಡುವಂತಾಗಿದೆ ಈ ಕಾಳಸಂತೆಯವರ ಪತ್ರಿಕೆಗಳಿಂದ...''

''ದಿನವೂ ಸುಮಾರು ಎಷ್ಟು ಸಂಪಾದನೆಯಾಗುತ್ತೆ ಕೊಟ್ರಣ್ಣ?''

''ಅಯ್ಯೋ ನನ್ನ ಸಂಪಾದನೆಯೇ! ನ್ಯೂಸ್‌ಪೇಪರ್ ಏಜಂಟರ ಉದ್ಯೋಗವೂ ಒಂದು ಉದ್ಯೋಗವೇ ಚಂದ್ರಣ್ಣ? ಜನರು ಪತ್ರಿಕೆಗಳನ್ನೇನೋ ತೆಗೆದುಕೊಳ್ಳುತ್ತಾರೆ. ಕಾಲಕಾಲಕ್ಕೆ ಹಣ ಮಾತ್ರ ಕೊಡುವುದಿಲ್ಲ. ಒಂದು ರೂಪಾಯಿ ವಸೂಲು ಮಾಡಬೇಕಾದರೆ ಹತ್ತು ಸಲ ಎಡತಾಕಬೇಕು ಇವರ ಹತ್ತಿರ. ಇಪ್ಪತ್ತು ಸಲ ಸಲಾಂ ಹಾಕಬೇಕು. ಆಗ ಬಾ, ಈಗ ಬಾ, ನಾಳೆ ಬಾ, ನಾಡಿದ್ದು ಬಾ ಎಂದು ಕಾಡಿಸಿ ಕೊನೆಗೆ ಗಂಟುಮೋರೆ ಹಾಕಿಕೊಂಡು ರೂಪಾಯಿ ಕೊಡುತ್ತಾರೆ.''

''ಅದೇನು ಭಿಕ್ಷೆ ಕೊಟ್ಟ ಹಾಗೆ ಮಾಡುವರೇ?''

''ಹಾಗೆಯೇ ಅನ್ನಿ, ಈ ಜನಕ್ಕೊಂದು ರೀತಿಯಿಲ್ಲ, ನೀತಿಯಿಲ್ಲ, ಎಂಥೆಂಥ ಲಕ್ಷಾಧೀಶರೂ ಹೀಗೇ. ಒಂದು ರೂಪಾಯಿ ಕೊಡಬೇಕಾದರೆ ಕಣ್ಣೀರು ಕೆನ್ನೆಗೆ ಬರಿಸುತ್ತಾರೆ. ಅದೇ ಪರದೇಶಗಳಲ್ಲಿ ನೋಡಿ. ವೃತ್ತಪತ್ರಿಕೆ ಮಾರುವುದೊಂದು ಸುಖವಾದ ಕೆಲಸವಂತೆ. ಬೀದಿಯಲ್ಲಿ ಒಂದು ಕಡೆ ನೂರಾರು ಪ್ರತಿಗಳನ್ನಿಟ್ಟು ಅದರ ಪಕ್ಕದಲ್ಲೊಂದು ಡಬ್ಬಿಯನ್ನಿಟ್ಟು ಹೋಗುವರಂತೆ. ಪತ್ರಿಕೆ ಬೇಕಾದವರೆಲ್ಲ ಅದರ ಬೆಲೆ

ಯನ್ನು ಆ ಡಬ್ಬಿಗೆ ಹಾಕಿ ಪ್ರತಿಯನ್ನು ತೆಗೆದುಕೊಂಡು ಹೋಗುವರಂತೆ. ಪತ್ರಿಕೆಯ ಹುಡುಗ ಬೇರೆ ಕೆಲಸ ಮಾಡಿಕೊಂಡು ಆ ಸ್ಥಳಕ್ಕೆ ಬಂದು ಹಣ ತೆಗೆದುಕೊಂಡು ಹೋಗುವನಂತೆ."

"ಈ ಸಂಗತಿ ನಿಮಗೆ ಹೇಗೆ ತಿಳಿಯಿತು ಕೊಟ್ರಣ್ಣ?"

"ಇಲ್ಲಿನ ವಕೀಲರೊಬ್ಬರು ಮೊನ್ನೆ ಮೊನ್ನೆ ಸ್ವಿಜರ್ಲೆಂಡಿನಿಂದ ಬಂದರು. ಅವರು ಹೇಳುತ್ತಿದ್ದರು."

"ಅಂಥ ಪರಿಸ್ಥಿತಿ ನಮ್ಮ ದೇಶದಲ್ಲಿ ಎಂದು ಬರುವುದೊ!" ಎಂದು ನುಡಿದು ಚಂದ್ರಣ್ಣ ಕೆಲಕಾಲ ಸುಮ್ಮನಿದ್ದ.

"ಯೋಗೀಶರು ಎಲ್ಲಿಗೆ ಹೋದರು ಕೊಟ್ರಣ್ಣ?"

"ಅವರು ಬೆಳಗಿನ ಐದು ಗಂಟೆಗೇ ಎದ್ದು ವಾಕಿಂಗ್ ಹೋದರು. ಹಾಗೆ ಸೆಟ್ಟರನ್ನು ಕಂಡು ಬರುವುದಾಗಿಯೂ ಹೇಳಿದರು."

"ಈ ಸೆಟ್ಟರು ಸಾಹುಕಾರರು ಅಂದರೆ ನನಗೇಕೊ ಬೇಸರ ನೋಡು ಕೊಟ್ರಣ್ಣ. ಅವರೊಂದಿಗೆ ಕಂಪನಿ ಹೇಗೆ ನಡೆಯುವುದೋ!"

"ಕೊಂಚ ಕಷ್ಟವೇ ಆದೀತು. ಆ ಜನ ನಿಮ್ಮಂಥವರಲ್ಲ. ಮಹಾ ಸ್ವಾರ್ಥಿಗಳು. ತಮ್ಮ ಸ್ವಾರ್ಥಕ್ಕಾಗಿ ನಿಮ್ಮನ್ನು ಉಪಯೋಗ ಮಾಡಿಕೊಳ್ಳಬೇಕೆಂದು ಅವರು ಯೋಚಿಸಿರಬೇಕು. ತಮ್ಮಣ್ಣನವರೂ ಅಷ್ಟೆ ಮಹಾ ಮುತ್ಸದ್ದಿ ಆತ."

"ಅವರಿಗೂ ಸೆಟ್ಟರಿಗೂ ಏನು ಸಂಬಂಧ ಕೊಟ್ರಣ್ಣ?"

"ಓ! ಅದೊಂದು ಕತೆಯೇ ಇದೆ. ಎರಡು ವರ್ಷಗಳ ಕೆಳಗೆ ಇಬ್ಬರೂ ಪ್ರಬಲ ವಿರೋಧಿಗಳಾಗಿದ್ದರು. ಒಬ್ಬರ ಹೆಸರು ಕೇಳಿದರೆ ಇನ್ನೊಬ್ಬರು ಉರಿದು ಬೀಳುತ್ತಿದ್ದರು. ತಮ್ಮಣ್ಣನವರು ಕಾಂಗ್ರೆಸ್ಸಿನವರು. ಸೆಟ್ಟರು ಸರಕಾರದ ಕಡೆಯವರು. ಒಂದು ಸಲ ಗಾಂಧೀ ಜಯಂತಿಯ ವರ್ಗಣಿಗೆ ಹಣ ಕೇಳಲು ಸ್ವಯಂಸೇವಕನೊಬ್ಬ ಸೆಟ್ಟರ ಹತ್ತಿರ ಹೋದಾಗ ಆತನನ್ನು ಹಿಡಿದು ಚೆನ್ನಾಗಿ ಬಡಿದು ಕಳಿಸಿದ್ದರು. ಅಂದಿನಿಂದ ತಮ್ಮಣ್ಣ ನವರು ಸೆಟ್ಟರನ್ನು ಕಂಡರೆ ಹಲ್ಲು ಮಸೆಯುತ್ತಿದ್ದರು. ಆದರೆ ಅವರ ವಿರುದ್ಧವಾಗಿ ಏನನ್ನೂ ಮಾಡಲೂ ಸಾಧ್ಯವಿರಲಿಲ್ಲ. ಸ್ವಾತಂತ್ರ್ಯ ಬಂದ ಮೇಲೆ ಇವರಿಗೆ ಫಜೀತಿ ಮಾಡೋಣ ಎಂದು ಕಾದಿದ್ದರು. ತಮಗೆ ಫಜೀತಿಯಾಗುವುದೆಂಬುದು ಸೆಟ್ಟರಿಗೂ

ತಿಳಿದೇ ಇತ್ತು. ಅಂತೆಯೇ ಅವರು ಉಪಾಯ ಮಾಡಿ ಒಮ್ಮೆಲೆ ಕಾಂಗ್ರೆಸ್ ಸದಸ್ಯರಾಗಿ ಬಿಟ್ಟರು. ಗಾಂಧೀಟೋಪಿ ತಲೆಗಿಟ್ಟುಕೊಂಡರು. ಕಾಂಗ್ರೆಸ್ ಫಂಡಿಗೆ ಹಣ ಕೊಟ್ಟರು. ಕಾಂಗ್ರೆಸ್ ಮಂತ್ರಿಗಳನ್ನು ಮುಖಂಡರನ್ನು ಮನೆಗೆ ಕರೆತಂದು ರಾಜಮರ್ಯಾದೆ ಯಿಂದ ಸತ್ಕರಿಸಿದರು. ಇಂಥ ಶ್ರೀಮಂತರ ಸ್ನೇಹವನ್ನು ತಿರಸ್ಕರಿಸುವುದಕ್ಕೂ ಬಹಳ ಯೋಗ್ಯತೆ ಬೇಕು. ಮಂತ್ರಿಗಳೇ ಸೆಟ್ಟರೊಂದಿಗೆ ಕೂಡಿಕೊಂಡ ಬಳಿಕ ಇನ್ನು ತಮ್ಮಣ್ಣನವರ ಸಿಟ್ಟು ಎಲ್ಲಿ ಉಳಿಯಬೇಕು? ಅವರೂ ಸೆಟ್ಟರ ಮನೆಗೆ ಹೋಗಿ ಬರತೊಡಗಿದರು. ಈಗ ಅವರೇ ಸೆಟ್ಟರಿಗೆ ಬಲಗೈ ಇದ್ದ ಹಾಗಿದಾರೆ...''

''ಯೋಗೀಶರಿಗೂ ಸೆಟ್ಟರಿಗೂ ಬಹಳ ದಿನಗಳಿಂದ ಪರಿಚಯವೇನು?''

''ಯೋಗೀಶರಿಗೆ ಯಾರ ಪರಿಚಯವಿಲ್ಲ? ಹೇಳಿ ಕೇಳಿ ಸ್ವಾಮಿಗಳು. ಎಲ್ಲರ ಮನೆಗಳನ್ನೂ ಸುತ್ತುತ್ತಿರುತ್ತಾರೆ. ಎಲ್ಲರಲ್ಲೂ ಊಟ ಮಾಡುತ್ತಾರೆ. ಸೆಟ್ಟರ ಪತ್ನಿಯವರು ಹಳೆಯ ಕಾಲದವರು. ಸ್ವಾಮಿಗಳು ಜಗದ್ಗುರುಗಳು ಜಂಗಮರು ಅಂದರೆ ಅವರಿಗೆ ಬಹಳ ಭಕ್ತಿ. ಅಂತೆಯೇ ಶಿವಯೋಗಿಗಳಿಗೂ ಅಲ್ಲಿ ಸ್ವಾತಂತ್ರ್ಯ ಬಹಳ.''

''ಈ ಶಿವಯೋಗಿ ಇದೇ ಊರವರೇನು ಕೊಟ್ರಣ್ಣ?''

ಕೊಟ್ರಪ್ಪ ಆಶ್ಚರ್ಯದಿಂದ ಕಣ್ಣುಗಳನ್ನು ಅಗಲಗೊಳಿಸಿ ಕೇಳಿದ : ''ನಿಮಗಿನ್ನೂ ಈ ವಿಷಯ ಗೊತ್ತಿಲ್ಲವೆ?''

''ಇಲ್ಲ, ಅದನ್ನು ತೆಗೆದುಕೊಂಡೇನು ಮಾಡುವುದು ಅಂತ ಸುಮ್ಮನಿದ್ದೆ.''

''ಮತ್ತೆ! ಈಗಲಾದರೂ ಅದರ ಅಗತ್ಯ?''

''ಈಚೆಗೆ ಒಂದೆರಡು ಘಟನೆ ನಡೆದ ಮೇಲೆ ಅವರ ವಿಷಯ ವಿವರವಾಗಿ ತಿಳಿದುಕೊಳ್ಳಬೇಕಾಗಿದೆ.''

''ಶಿವಯೋಗಿಗಳು ಧರ್ಮಪುರದವರಲ್ಲ, ಇಲ್ಲಿಗೆ ಹತ್ತು ಮೈಲು ದೂರ ದಲ್ಲಿರುವ ಒಂದು ಹಳ್ಳಿಯವರು. ಅವರ ತಂದೆ ತಾಯಿ ಎಲ್ಲರೂ ಇದ್ದಾರೆ. ಕೊಂಚ ಅನುಕೂಲಸ್ಥರೂ ಹೌದು. ಚಿಕ್ಕ ವಯಸ್ಸಿನಲ್ಲಿಯೆ ಇವರನ್ನು ಸ್ವಾಮಿಗಳನ್ನಾಗಿ ಮಾಡಬೇಕೆಂಬ ವಿಚಾರ ಹೊರಟಿತು. ಇಲ್ಲಿನ ಮಠಕ್ಕೆ ಮರಿಗಳನ್ನಾಗಿ ಬಿಟ್ಟರು. ಇಲ್ಲಿ ಅಲ್ಪಸ್ವಲ್ಪ ಅಭ್ಯಾಸವಾದ ಮೇಲೆ ಕಾಶಿಗೆ ಕಳಿಸಲಾಯಿತು. ಆದರೆ ಅಷ್ಟು ಹೊತ್ತಿಗೆ ಇವರಿಗೆ ಸ್ವಾಮಿಗಳಾಗುವ ಬಯಕೆಯೇ ಮಾಯವಾಗಿತ್ತು. ಸಂಸ್ಕೃತವನ್ನೂ ಓದಲಾಗಲಿಲ್ಲ, ಸರಿ. ಕಾಶಿಯನ್ನು ಬಿಟ್ಟುಬಂದರು.''

''ಯಾವುದೊ ಒಂದು ಮಠಕ್ಕೆ ದೀಕ್ಷೆಯಾಗಿದೆಯಂತಲ್ಲ ಇವರಿಗೆ?''

''ಆಗಿತ್ತು. ಆದರೆ ಅಲ್ಲಿಗೆ ಒಮ್ಮೆಯೂ ಹೋಗಲಿಲ್ಲ ಇವರು.''

''ಇವರು ಕಾಶಿಯನ್ನು ಬಿಟ್ಟು ಎಷ್ಟು ವರ್ಷವಾಯಿತು?''

''ಎರಡು ವರ್ಷವಾಗಿದ್ದೀತು.''

''ಇಷ್ಟು ಕಾಲ ಏನು ಮಾಡುತ್ತಿದ್ದರು?''

''ಸ್ವಾಮಿಗಳು ಇನ್ನೇನು ಮಾಡುತ್ತಾರೆ? ಆ ಊರು, ಈ ಊರು ಸುತ್ತುವುದು, ಅಲ್ಲಿ ಇಲ್ಲಿ ಊಟ ಮಾಡುತ್ತ ಕಾಲ ಕಳೆಯುವುದು...''

''ಅಂತೂ ಮೊದಲಿನಿಂದ ಹೀಗೇ ಬೆಳೆದವರು ಅನ್ನು''

''ಹೌದು. ಯಾವ ಕೆಲಸವನ್ನೂ ಮಾಡದೆ ಸುಖವಾಗಿ ಊಟ ಗಿಟ್ಟಿಸಿ ಅಲೆಯುವುದು ಅಭ್ಯಾಸವಾಗಿದೆ ಅವರಿಗೆ. ಅವರಂಥವರಿಗೆಲ್ಲ ಅದು ಸ್ವಾಭಾವಿಕ.''

''ಇನ್ನು ಮೇಲಾದರೂ ಕೆಲಸ ಮಾಡಬೇಕೆಂಬ ಮನಸ್ಸು ಬಂದರೆ ಸರಿ. ಇಲ್ಲವಾದರೆ ಕಂಪನಿಯ ಗತಿ...''

''ದುರ್ಗತಿ...'' ಎಂದು ನುಡಿದು ಕೊಟ್ರಪ್ಪ ಮೇಲಕ್ಕೆದ್ದ. ಪತ್ರಿಕೆಯ ಕಟ್ಟನ್ನು ಕಂಕುಳಲ್ಲಿರಿಸಿಕೊಂಡು – ''ನಾನು ಈ ಪ್ರತಿಗಳನ್ನು ಹಂಚಿ ಬರುತ್ತೇನೆ. ಅಷ್ಟರಲ್ಲಿ ನೀವು ಸ್ನಾನ ತೀರಿಸಿಕೊಂಡುಬಿಡಿ,'' ಎಂದು ಹೇಳಿ ಹೊರ ನಡೆದ.

ಆತ ಹೋದುದಕ್ಕೆ ಹದಿನೈದು ನಿಮಿಷ ಕಳೆದಿರಲಿಲ್ಲ, ಚಂದ್ರಣ್ಣ ಸ್ನಾನಕ್ಕೆ ಹೊರಡಲು ಸಿದ್ಧನಾಗುತ್ತಿದ್ದ ಹಾಗೆ ಹೊರಗಡೆ ಮೋಟಾರಿನ ಸದ್ದಾಯಿತು. ಅದರೊಂದಿಗೆ ಶಾರದಾಮಣಿ ಕೈಯಲ್ಲಿ ಪುಸ್ತಕವೊಂದನ್ನು ಹಿಡಿದುಕೊಂಡು ಸರಸರನೆ ಹೆಜ್ಜೆ ಹಾಕುತ್ತ ಕೊಠಡಿಗೆ ಬಂದಳು.

ಅಂಗವಸ್ತ್ರವನ್ನು ಭುಜದ ಮೇಲಿರಿಸಿಕೊಂಡು ಹೊರಕ್ಕೆ ಹೊರಡಲು ಸಿದ್ಧನಾಗಿ ನಿಂತಿದ್ದ ಚಂದ್ರಣ್ಣ ಒಂದು ಕ್ಷಣ ಹಾಗೇ ದಿಙ್ಮೂಢನಂತೆ ನಿಂತುಕೊಂಡಿದ್ದ. ತಿಳಿನೀಲಿಯ ಜಾರ್ಜೆಟ್ ಸೀರೆಯಲ್ಲಿ ಸಿನಿಮಾ ನಟಿಯರನ್ನು ಮೀರಿಸುವ ಹಾಗೆ ಅಲಂಕೃತಳಾಗಿ ಬಂದಿದ್ದಳಾಕೆ. ಆಕೆ ಹತ್ತಿರ ಬರುತ್ತಲೂ ಮಲ್ಲಿಗೆ ಹೂವಿನ ಪರಿಮಳ ಕೊಠಡಿಯಲ್ಲೆಲ್ಲ ಘಮಘಮಿಸತೊಡಗಿತು.

ಇನ್ನು ಆಕೆಯನ್ನು ಕರೆದು ಕೂಡ್ರಿಸದೆ ಬೇರೆ ಉಪಾಯವಿರಲಿಲ್ಲ. ಕೊಠಡಿಯಲ್ಲಿ ಕುರ್ಚಿ ಇದ್ದುದು ಒಂದೇ ಒಂದು. ಅದನ್ನೇ ತೋರಿಸುತ್ತ ಚಂದ್ರಣ್ಣ ತಬ್ಬಿಬ್ಬಾಗಿ ನುಡಿದ : "ಬನ್ನಿ, ಕೂತುಕೊಳ್ಳಿ."

ಆಕೆ ಮಂದಹಾಸ ಬೀರುತ್ತ ಕುಳಿತುಕೊಂಡಳು. ಬೆನ್ನ ಹಿಂದೆ ನೇತಾಡುತ್ತಿದ್ದ ಉದ್ದವಾದ ಜಡೆಯನ್ನು ಬಲಗೈಯಲ್ಲಿ ಹಿಡಿದುಕೊಂಡು ಕುಣಿಸುತ್ತ ಆಕೆ ಚಂದ್ರಣ್ಣನ ಕಡೆಗೆ ದೃಷ್ಟಿ ತೂರಿದಳು. ಆತ ಗೊಂದಲದಲ್ಲಿ ಬಿದ್ದು ಮೂಕನಂತೆ ನಿಂತಿದ್ದ.

"ಕೂತುಕೊಳ್ಳಿರಲ್ಲ!"

ಆತ ಕೆಳಗಡೆ ಹಾಸಿದ್ದ ಚಾಪೆಯ ಮೇಲೆ ಕುಳಿತುಕೊಳ್ಳತೊಡಗಿದ. ಆಕೆ ನಗು ನಗುತ್ತ ಮೇಲಕ್ಕೆದ್ದು ಆತನ ಕೈ ಹಿಡಿದು ತನ್ನ ಕುರ್ಚಿಯ ಹತ್ತಿರವಿದ್ದ ಮೇಜಿನ ಮೇಲೆ ಆತನನ್ನು ಕೂಡ್ರಿಸಿದಳು. ಸಂಕೋಚದಿಂದ ಚಂದ್ರಣ್ಣ ಮುದುಡಿಕೊಳ್ಳುತ್ತಿದ್ದ. ಆಕೆಗೆ ಮಾತ್ರ ಯಾವ ಸಂಕೋಚವೂ ಇದ್ದಂತಿರಲಿಲ್ಲ. ತಮ್ಮ ಮನೆಯಲ್ಲಿ ತನ್ನ ಕೊಠಡಿಯಲ್ಲಿ ವರ್ತಿಸುವ ರೀತಿಯಲ್ಲಿಯೆ ಆಕೆ ಇಲ್ಲಿಯೂ ವರ್ತಿಸುತ್ತಿದ್ದಳು.

"ಎಲ್ಲಿಯೊ ಹೊರಟಂತಿದ್ದಿತಲ್ಲ? ತಾನು ಬಂದುದರಿಂದ ತೊಂದರೆಯೇನೂ ಆಗಲಿಲ್ಲವಷ್ಟೆ?"

"ಸ್ನಾನಕ್ಕೆ ಹೊರಟಿದ್ದೆನಷ್ಟೆ ತೊಂದರೆಯೇನು ಬಂತು?"

ತನ್ನ ವಿಶಾಲ ನೇತ್ರಗಳ ಮೋಹಕ ಸೌಂದರ್ಯವನ್ನೆಲ್ಲ ಚಂದ್ರಣ್ಣನ ಮೇಲೆ ತೂರುತ್ತ ಆಕೆ ಕೇಳಿದಳು : "ನೋಡಿದಿರಾ ನನ್ನ ಕತೆಗಳನ್ನು?"

"ಇಲ್ಲ, ಇನ್ನೂ ಓದಲಿಕ್ಕಾಗಲಿಲ್ಲ. ಇಂದು ಮಧ್ಯಾಹ್ನ ಓದುತ್ತೇನೆ."

"ಆಗಲಿ, ನಿಧಾನವಾಗಿ ಓದಿನೋಡಿ. ಆದರೆ ಒಂದೆರಡು ಸಾಲುಗಳನ್ನಾದರೂ ಓದಿರಬೇಕಲ್ಲವೆ?"

"ಓದಿದೆ..."

"ಆಗಳಿನ ಮೇಲಿಂದ ಅನ್ನದ ಪರೀಕ್ಷೆ ಮಾಡಬಹುದಲ್ಲ? ಹೇಗನ್ನಿಸುತ್ತೆ ನಿಮಗೆ? ನಾನು ಬರೆಯಬಲ್ಲೆನೇ?"

ಆ ಪ್ರಶ್ನೆಗೆ ಏನು ಉತ್ತರವೀಯಬೇಕೆಂದು ಚಂದ್ರಣ್ಣನಿಗೆ ಹೊಳೆಯಲಿಲ್ಲ. ಆತ ಒಂದು ಕ್ಷಣ ಸುಮ್ಮನಿದ್ದು–"ನಿಮಗೆ ಕಾಲೇಜಿಗೆ ಹೊತ್ತಾಗಿರಬಹುದೊ ಏನೋ!" ಎಂದು

"ಇಲ್ಲ, ಇಂದು ನಮಗೆ ಕೊನೆಯ ಪೀರಿಯಡ್ ಮಾತ್ರ. ನಿಧಾನವಾಗಿ ಹೋಗಬಹುದು. ಈ ಕಾಲೇಜು ಅಭ್ಯಾಸವೂ ಅಷ್ಟಕಷ್ಟೆ ನಿಮಗೆ ಗೊತ್ತಿಲ್ಲದ ವಿಷಯವೇನೂ ಅಲ್ಲವಲ್ಲ? ಮೂರು ನಾಲ್ಕು ವರ್ಷ ಕಾಲೇಜಿನಲ್ಲಿ ಇದ್ದವರು..."

"ಇಲ್ಲ, ಮೂರು ನಾಲ್ಕು ವರ್ಷವೇನೂ ಇರಲಿಲ್ಲ. ಇಂಟರಿನಲ್ಲಿದ್ದಾಗಲೇ ಬಿಟ್ಟು ಬಿಟ್ಟಾಯಿತು."

"ಅದೇಕೆ ಬಿಟ್ಟಿರಿ? ಎಂ.ಎ.ವರೆಗಾದರೂ ಓದಬಹುದಾಗಿದ್ದಿತಲ್ಲ?"

"ಓದಬಹುದಾಗಿತ್ತು. ಆದರೆ ಆಗಸ್ಟ್ ಚಳವಳಿಯಲ್ಲಿ ಒಮ್ಮೆ ಕಾಲೇಜಿಗೆ ಶರಣು ಹೊಡೆದ ಮೇಲೆ ಮತ್ತೆ ಸೇರಿಕೊಳ್ಳಲು ಮನಸ್ಸು ಬರಲಿಲ್ಲ ನನಗೆ."

"ಅಂತೂ ಚಳವಳಿಯಿಂದಾಗಿಯೆ ನಿಮ್ಮ ಕಾಲೇಜು ವ್ಯಾಸಂಗ ನಿಂತು ಹೋಯಿತು ಅನ್ನಿ."

"ಹಾಗೇನೂ ಅಲ್ಲ. ಚಳವಳಿ ಏನು ಮಾಡೀತು? ಜೈಲಿನಿಂದ ಬಿಡುಗಡೆ ಹೊಂದಿ ಬಂದ ಬಳಿಕ ಎಲ್ಲರಂತೆ ನಾನೂ ಸೇರಬಹುದಾಗಿತ್ತು. ಆದರೆ ಅದು ನನ್ನ ಸ್ವಭಾವಕ್ಕೇ ವಿರುದ್ಧವಾಗುತ್ತಿತ್ತು. ಒಮ್ಮೆ ಬಿಟ್ಟದ್ದು ಬಿಟ್ಟಂತೆಯೆ. ಮತ್ತೆ ಅದಕ್ಕೆ ಸೇರುವದೆಂದರೆ ಅರ್ಥವಿಲ್ಲದ್ದು, ತತ್ವವಿಲ್ಲದ್ದು."

"ಬಿಟ್ಟವರೇ ನೆಟ್ಟಗೆ ಪತ್ರಿಕೆಗಳಿಗೆ ಬಂದಿರಾ?"

"ಹೌದು. ಮೊದಲಿನಿಂದಲೂ ಈ ವಿಷಯದಲ್ಲಿ ಆಸಕ್ತಿಯಿತ್ತು ನನಗೆ. ಬರವಣಿಗೆಯನ್ನೂ ಅಭ್ಯಾಸ ಮಾಡಿದ್ದೆ. ಹೊರಕ್ಕೆ ಬಂದ ಮೇಲೆ ಈ ಕ್ಷೇತ್ರಕ್ಕೇ ಧುಮುಕಿದ್ದಾಯಿತು."

"ನಿಮ್ಮ ಹಾಗೆ ನನಗೂ ಈ ಕ್ಷೇತ್ರಕ್ಕೆ ಧುಮುಕಬೇಕೆಂಬ ಆಸೆ ಪೂರಾ ಇದೆ. ನಿಮ್ಮ ನೆರವು ಸಿಕ್ಕಿದರೆ ಅದು ಸಾಧ್ಯವಾಗಬಹುದು. ನಮ್ಮ ಪತ್ರಿಕೆ ಹೊರಟ ಮೇಲೆ ನನಗೆ ಅದರಲ್ಲಿ ಅನುವು ದೊರೆಯುವುದಲ್ಲವೆ?"

"ಮೊದಲು ಪತ್ರಿಕೆಯಾದರೂ ಹೊರಡಲಿ."

"ಅದೇನು ಮಹಾ? ನಾಳೆಯೇ ಹೊರಡಬಹುದು. ನಮ್ಮ ತಂದೆಯವರಿಗೂ ಬಹಳ ಉತ್ಸಾಹವಿದೆ. ನಿಮ್ಮ ಬಗ್ಗೆ ಅವರಿಗೆ ಬಹಳ ಪ್ರೀತಿ" ಎಂದು ಆಕೆ ಹೇಳುತ್ತಿರು ವಷ್ಟರಲ್ಲಿಯೇ ಬಾಗಿಲನ್ನು ತಳ್ಳಿ ಕೊಟ್ರಪ್ಪ ಒಳನುಗ್ಗಿದ. ಶಾರದಾಮಣಿಯನ್ನು ಅಲ್ಲಿ

ಕಂಡೊಡನೆ ಆತನ ತುಟಿಗಳ ಮೇಲೆ ತುಂಟನಗೆಯ ಸುಳಿಯೊಂದು ಮೂಡಿ ಮಾಯವಾಯಿತು. ಅದನ್ನು ಗುರುತಿಸುತ್ತಲೂ ಚಂದ್ರಣ್ಣನಿಗೆ ಮತ್ತೆ ಸಂಕೋಚವೆನ್ನಿಸದಿರಲಿಲ್ಲ. ಶಾರದಾಮಣಿ ಮಾತ್ರ ಮುಖದ ಮೇಲೆ ಯಾವ ಭಾವವನ್ನೂ ವ್ಯಕ್ತಗೊಳಿಸದೆ ಕುಳಿತಿದ್ದಳು.

"ಬಾ ಕೊಟ್ರಣ್ಣ, ಕೆಲಸ ಮುಗಿಯಿತೇ?"

"ಇಲ್ಲ, ರಸೀತಿ ಪುಸ್ತಕ ಬೇಕಾಗಿತ್ತು. ತೆಗೆದುಕೊಂಡು ಹೋಗಲು ಬಂದೆ."

"ಇವರ ಪರಿಚಯವಿದೆಯಷ್ಟೆ?"

ಆತ ಉತ್ತರವೀಯುವುದಕ್ಕೆ ಮೊದಲೇ ಶಾರದಾಮಣಿ ಮಾತನಾಡಿದಳು. "ಹೊ! ಈ ಸುದ್ದೀ ಸೂರಪ್ಪನ ಪರಿಚಯ ಯಾರಿಗಿಲ್ಲ ಈ ನಗರದಲ್ಲಿ? ಮುನಿಸಿಪಾಲ್ಟಿ ಅಧ್ಯಕ್ಷರಿಂದ ಮೊದಲು ಮಾಡಿಕೊಂಡು ಕಸ ಗುಡಿಸುವ ಜಾಡಮಾಲಿಗಳವರೆಗೆ ಎಲ್ಲರದೂ ಪರಿಚಯ ಈತನಿಗೆ. ನನಗೆ ಕ್ರಾಂತಿಯನ್ನು ತಂದುಕೊಡುತ್ತಿದ್ದವನೂ ಈತನೇ!"

ಆಕೆ ಮೇಲಕ್ಕೆದ್ದಳು. ಕೈ ಗಡಿಯಾರ ನೋಡಿಕೊಳ್ಳುತ್ತ – "ಸಮಯವಾಗುತ್ತಾ ಬಂತು. ನಾನು ಕಾಲೇಜಿಗೆ ಹೋಗುತ್ತೇನೆ. ಮತ್ತೆ ಬರುತ್ತೇನೆ ಯಾವಾಗಲಾದರೂ!" ಎಂದು ನುಡಿದು ಹೊರಟುಬಿಟ್ಟಳು.

ಆಕೆಯ ಮೋಟಾರಿನ ಸದ್ದು ಗಾಳಿಯಲ್ಲಿ ಕರಗಿ ಹೋದ ತರುವಾಯ ಕೊಟ್ರಪ್ಪ ಮೆಲುನಗೆ ಬೀರುತ್ತ ಕೇಳಿದ :"ಯಾವಾಗ ಬಂದಿದ್ದರು ಇವರು ಚಂದ್ರಣ್ಣನವರೇ?"

"ನೀನು ಹೋದ ಹತ್ತು ಹದಿನೈದು ನಿಮಿಷಗಳಲ್ಲಿ."

"ಒಬ್ಬರೇ?"

"ನೀನೇ ಕಂಡೆಯಲ್ಲ!"

ಸ್ವಲ್ಪ ಹೊತ್ತು ಸುಮ್ಮನಿದ್ದು ಕೊಟ್ರಪ್ಪನೆಂದ : "ಈಕೆಯ ಬಗ್ಗೆ ಸ್ವಲ್ಪ ಹುಷಾರಾಗೇ ಇರಬೇಕು ನೀವು ಚಂದ್ರಣ್ಣ. ಇದು ಸಾಮಾನ್ಯ ಹುಡುಗಿಯಲ್ಲ."

ಚಂದ್ರಣ್ಣ ಬೆಚ್ಚಿಬಿದ್ದು ಕೇಳಿದ : "ಯಾಕಯ್ಯ, ಹೀಗೆ ಹೇಳುತ್ತೀಯಾ?"

"ಕಾಲೇಜಿನಲ್ಲಿ ಈಕೆಯ ಬಗ್ಗೆ ಯಾರಿಗೂ ಒಳ್ಳೆಯ ಅಭಿಪ್ರಾಯವಿಲ್ಲ.

ವಿದ್ಯಾರ್ಥಿಗಳಂತೂ ಈಕೆಯನ್ನ ತಗಡಿನ ಡಬ್ಬಿ ಎಂದು ಕರೆಯುತ್ತಾರೆ.''

''ತಗಡಿನ ಡಬ್ಬಿ? ಎಂದರೆ?''

''ಅದರ ಸರಿಯಾದ ಅರ್ಥ ನನಗೂ ತಿಳಿಯದು.''

''ಹಾಗೆ ಒಮ್ಮೆಲೆ ಒಬ್ಬರ ಬಗ್ಗೆ ಆರೋಪ ಮಾಡಬಾರದು. ಹುಡುಗಿಯರನ್ನು ಲೇವಡಿ ಮಾಡುವುದು ಕಾಲೇಜು ಹುಡುಗರ ಸ್ವಭಾವ. ಕೊಂಚ ಧೈರ್ಯದಿಂದ ತಲೆಯೆತ್ತಿ ತಿರುಗುವ ಹುಡುಗಿಯನ್ನು ಕಂಡರೆ ಸ್ವೈರಾಚಾರಿಣಿಯರೇ ಆಗಿರಬೇಕೆಂದು ಕಲ್ಪಿಸಿಕೊಳ್ಳುತ್ತಾರೆ. ಸ್ತ್ರೀ ಪುರುಷರ ಸಮಾನತೆಯ ಈ ಕಾಲದಲ್ಲಿ ಇಂಥ ಸಂಕುಚಿತ ವಿಚಾರಗಳಿಗೆ ಎಡೆಯಿರಬಾರದು.''

''ನೀವು ಹೇಳುವುದೇನೊ ಸರಿಯೆ. ಆದರೂ ನನಗೆ ತಿಳಿದಿರುವುದನ್ನು ನಾ ಹೇಳಿದೆ. ಈ ಊರವನೇ ಆದ ನನಗೆ ಈಕೆಯ ವಿಷಯ ತಿಳಿಯದೇ? ಕಾಲೇಜಿನ ಕನ್ನಡ ಮೇಷ್ಟ್ರಿಗೂ ಈಕೆಗೂ ಸಂಬಂಧವಿದೆಯೆಂದು ಜನ ಆಡಿಕೊಳ್ಳುತ್ತಾರೆ. ಇಬ್ಬರಿಗೂ ಸಲಿಗೆ ಬಹಳ ಎನ್ನುವುದು ನಿಜ.''

''ಸಲಿಗೆ ಇದ್ದ ಮಾತ್ರಕ್ಕೆ ಸಂಬಂಧವೂ ಇರುತ್ತದೆನ್ನುವುದು ತಪ್ಪು. ನಮ್ಮ ಸಮಾಜ ದೃಷ್ಟಿದೋಷ ಅದು.''

''ಇರಬಹುದು. ಆದರೂ ನೀವು ಹುಷಾರಾಗಿ ಇರುವುದೊಳ್ಳೆಯದು. ಆಕೆ ಹೀಗೆಲ್ಲ ಕೋಣೆಗೆ ಒಬ್ಬಳೇ ಬರುವುದು ಹೋಗುವುದಕ್ಕಾರಂಭಿಸಿದರೆ ಜನ ನಿಮ್ಮ ಬಗೆಗೂ ಮಾತನಾಡಿಕೊಳ್ಳುವದು ಖಂಡಿತ!''

ಚಂದ್ರಣ್ಣ ಉತ್ತರವೀಯದೆ ಮೌನವಾಗಿದ್ದುಬಿಟ್ಟ. ಶಾರದಾಮಣಿಯ ವರ್ತನೆಯಲ್ಲಿ ಸ್ವಚ್ಛಂದತೆ, ದಿಟ್ಟತನ ಬೆರೆತುಕೊಂಡಿದ್ದಿತಾದರೂ ಆಕೆ ಸ್ವಭಾವತಃ ಸ್ವೈರಾಚಾರಿಣಿಯಾಗಿರಬಹುದೆಂದು ಆತನಿಗನ್ನಿಸಲಿಲ್ಲ. ಕಾಲೇಜಿನಲ್ಲಿ ಕಲಿಯುವಾಕೆ, ಕತೆ, ಕಾದಂಬರಿ ಓದುವಾಕೆ ಸ್ವಾತಂತ್ರ್ಯ ಪ್ರೇಮಿಯೂ ಮಹತ್ವಾಕಾಂಕ್ಷಿಯೂ ಆದ ಆ ಯುವತಿ ದಿಟ್ಟತನದಿಂದ ವರ್ತಿಸುವುದು ಅಸಹಜವೇನೂ ಆಗಿರಲಿಲ್ಲ. ಆಕೆಯ ಉಡುಗೆ, ತೊಡಿಗೆ, ನಡೆ ನುಡಿಗಳಲ್ಲಿ ವಿಶೇಷ ಆಡಂಬರವಿದ್ದುದು ನಿಜವಿದ್ದರೂ ಕೆಲವು ಸ್ತ್ರೀಯರಿಗೆ ಅದೂ ಸ್ವಾಭಾವಿಕವಾದುದೇ! ಬಿಂಕ, ಬಿನ್ನಾಣ, ಒಯ್ಯಾರ, ನಟನೆ ಎಲ್ಲವೂ ಅವರಿಗೆ ಸಹಜವಾಗಿಯೇ ಅಂಟಿಕೊಂಡಿರುವುದುಂಟು. ಅಂಥ ಯುವತಿಯರಲ್ಲಿ ಶಾರದಾಮಣಿಯೂ ಒಬ್ಬಳು – ಎಂದುಕೊಂಡ ಚಂದ್ರಣ್ಣ, ಕೊಟ್ರಪ್ಪನ

ಮಾತುಗಳಿಂದಾಗಿ ಆತನಲ್ಲಿ ಶಾರದಾಮಣಿಯ ಬಗೆಗೆ ಯಾವ ವಿಕಲ್ಪವೂ ಹುಟ್ಟಿಕೊಳ್ಳಲಿಲ್ಲ. ಕೊಟ್ರಪ್ಪ ಇನ್ನೂ ಹುಡುಗ, ಅನನುಭವಿಕ. ಅವರಿವರ ಮಾತುಗಳನ್ನು ಒರೆಗೆ ಹಚ್ಚಿ ಪರೀಕ್ಷಿಸಿ ನೋಡುವ ಬುದ್ಧಿ ಆತನಿಗಿನ್ನೂ ಬಂದಿಲ್ಲ - ಎಂದುಕೊಂಡು ಮೌನ ತಳೆದ.

## ೧೬

ಕಂಪನಿ ಸ್ಥಾಪಿಸಲ್ಪಟ್ಟು ಎರಡು ತಿಂಗಳು ಕಳೆದುಹೋಗಿದ್ದವು. ಗಿರಣಿಯ ಬೀದಿಯಲ್ಲಿ ಒಂದು ದೊಡ್ಡ ಮನೆಯನ್ನು ಬಾಡಿಗೆಗೆ ತೆಗೆದುಕೊಂಡು ಅಲ್ಲಿ ಕಚೇರಿಯನ್ನು ಹೂಡಲಾಗಿದ್ದಿತು. ಕೆಳಗಡೆ ಮುದ್ರಣಾಲಯಕ್ಕೆ ವಿಶಾಲವಾದ ಸ್ಥಳವಿತ್ತು. ಮಹಡಿಯ ಮೇಲೆ ಕಂಪನಿಯ ಕಚೇರಿ, ಪತ್ರಿಕೆಯ ಕಚೇರಿಗಳಿಗೆ ಅನುಕೂಲವಿಲ್ಲ. ಕೊಟ್ರಪ್ಪನ ಕೊಟಡಿಯನ್ನು ಬಿಟ್ಟು ಚಂದ್ರಣ್ಣ ಶಿವಯೋಗಿ ಇಬ್ಬರೂ ಅಲ್ಲಿಯೇ ಬಿಡಾರ ಹೂಡಿದ್ದರು.

ಕಂಪನಿಗಾಗಿ ಹಣ ಕೂಡಿಸುವ ಕೆಲಸ ಎಂದೋ ಆರಂಭವಾಗಿದ್ದರೂ ಡೈರೆಕ್ಟರುಗಳಿಗೆ ಮೊದಲು ಇದ್ದ ಉತ್ಸಾಹವುಳಿದಿರಲಿಲ್ಲ. ಧರ್ಮಪುರದಲ್ಲಿ ಹೆಚ್ಚು ಹಣ ಕೂಡಿಸಲು ಸಾಧ್ಯವಾಗಲಿಲ್ಲ. ತಮ್ಮಣ್ಣನವರಿಗೆ ನಗರಸಭೆಯ ಚುನಾವಣೆಯ ಗದ್ದಲ ಬೇರೆ. ಅವರೂ ಅವರ ಗುಂಪಿನವರೂ ಅದರಲ್ಲಿಯೆ ತೊಡಗಿಕೊಂಡಿದ್ದರಾದುದರಿಂದ ಕಂಪನಿಗೆ ಹಣ ಕೂಡಿಸುವ ಕೆಲಸ ಹಿಂದೆ ಬಿತ್ತು. ಆ ನಗರವನ್ನೇ ನೆಚ್ಚಿಕೊಂಡು ಕೂತಿರಬಾರದೆಂದು ಚಂದ್ರಣ್ಣ ಆಗಾಗ ಬೇರೆ ಬೇರೆ ಊರುಗಳಿಗೆ ಹೋಗಿ ಕೂಡಿಸತೊಡಗಿದ್ದ.

ಪ್ರಾರಂಭದ ಖರ್ಚುಗಳಿಗಾಗಿ ಅವರಿಗೆ ಹಣದ ಕೊರತೆಯೇನೂ ಇರಲಿಲ್ಲ. ಮೂರು ನಾಲ್ಕು ಜನ ಸ್ವಾಮಿಗಳಿಂದ ಆಗಲೆ ಹಣ ವಸೂಲು ಮಾಡಿದ್ದ ಶಿವಯೋಗಿ. ಒಟ್ಟು ಎಂಟು ಸಾವಿರ ರೂಪಾಯಿಗಳನ್ನಾತ ಕೂಡಿಸಿದ್ದ. ಅದನ್ನು ಬ್ಯಾಂಕಿನಲ್ಲಿಟ್ಟು ತುಂಬಾ ಜಾಗರೂಕತೆಯಿಂದ ಉಪಯೋಗಿಸಬೇಕೆಂದು ಚಂದ್ರಣ್ಣ ಸೂಚಿಸಿದ್ದರೂ ಆತ ಲಕ್ಷ್ಯ ಕೊಟ್ಟಿರಲಿಲ್ಲ. ಸಾವಿರಾರು ರೂಪಾಯಿಗಳ ನೋಟುಗಳನ್ನು ತನ್ನ ಪೆಟ್ಟಿಗೆಯಲ್ಲಿಟ್ಟುಕೊಂಡು, ಅದನ್ನು ಮೂಲೆಯಲ್ಲಿ ಇಟ್ಟುಬಿಟ್ಟಿದ್ದ.

"ಅದು ಒಳ್ಳೆಯದಲ್ಲ ಯೋಗಿ. ಅಕಸ್ಮಾತ್ ಕಳೆದುಹೋದರೆ ಹೊಣೆಗಾರ ರಾರು?" ಎಂದು ಚಂದ್ರಣ್ಣ ಕೇಳಿದರೆ ಆತ ಭುಜಗಳನ್ನು ಕುಣಿಸಿ – "ಹೋದರೆ ಹೋಯ್ತು. ಹೋದಾಗ ನೋಡಿಕೊಳ್ಳೋಣ," ಎಂದು ಮಾತು ಹಾರಿಸಿದ್ದ.

ಶಿವಯೋಗಿಯ ಈ ನಡತೆಯಿಂದಾಗಿ ಚಂದ್ರಣ್ಣನಿಗೆ ದಿಗಿಲಾಗದಿರುತ್ತಿರಲಿಲ್ಲ. ಹಣವನ್ನು ಬಳಸುವುದರಲ್ಲೂ ಆತ ನಿರ್ಲಕ್ಷ್ಯದಿಂದಲೇ ವರ್ತಿಸುತ್ತಿದ್ದ. ಕಂಪನಿಯ ಕಚೇರಿಯನ್ನು ಸಜ್ಜುಗೊಳಿಸಲು ನಾಲ್ಕೈದು ರೂಪಾಯಿಗಳ ಸಾಮಗ್ರಿಗಳಾದರೆ ಸಾಕಾಗುವಂತಿದ್ದಿತು. ಆದರೆ ಶಿವಯೋಗಿ ಒಂದು ದಿನ ಪೇಟೆಗೆ ಹೋದವನು ನೂರಾರು ರೂಪಾಯಿಗಳ ಸಾಮಾನು ಕೊಂಡು ತಂದು ಹಾಕಿದ. ಹನ್ನೆರಡು ಕುರ್ಚಿ, ಮೂರು ಮೇಜು, ಮೇಜುಗಳಿಗೆ ಹೊದಿಕೆ, ಮೇಜುಗಳ ಮೇಲಿಡುವ ನಾನಾ ವಿಧದ ಸಾಮಗ್ರಿಗಳು, ಹನ್ನೆರಡು ಲೇಖನಗಳು, ಪೆನ್ಸಿಲುಗಳು, ಒಂದು ರೀಮು ಕಾಗದ, ಅರ್ಧ ರೀಮು ಒತ್ತುಕರಡು, ಪಿನ್ನುಗಳು, ಗುಂಡುಸೂಜಿಗಳು, 'ಟ್ರೇ'ಗಳು, ಮನಸಿಗೆ ಬಂದ ಸಾಮಾನುಗಳೆಲ್ಲವನ್ನೂ ಕೊಂಡು ತಂದಿದ್ದನಾತ. ಒಂದು ಸ್ಟೇಷನರಿ ಅಂಗಡಿಗೆ ಸಾಲುವಷ್ಟು ಸಾಮಾನೇ ತಂದನಲ್ಲ, ಎಂದುಕೊಂಡಿದ್ದ ಚಂದ್ರಣ್ಣ.

"ಇದೆಲ್ಲ ಏತಕ್ಕಾಗಿ ಯೋಗಿ? ಯಾರು ಉಪಯೋಗಿಸಬೇಕು ಇವುಗಳ ನ್ನೆಲ್ಲ?" ಎಂದು ವಿಸ್ಮಯದಿಂದ ಕೇಳಿದ್ದನಾತ.

ಶಿವಯೋಗಿ ತನಗೆಂದು ಇರಿಸಿಕೊಂಡಿದ್ದ ಮೇಜಿನ ಬಳಿ ಕುಳಿತುಕೊಂಡು ಸಾಮಾನುಗಳನ್ನೆಲ್ಲ ಅದರ ಮೇಲಿರಿಸಿ ನುಡಿದಿದ್ದ: "ಲಿಮಿಟೆಡ್ ಕಂಪನಿಯ ಕೆಲಸ ಅಂದರೆ ಸಾಮಾನ್ಯ ಕೆಲಸವಲ್ಲ ಚಂದ್ರಣ್ಣ. ಮಾಸಪತ್ರಿಕೆಯೊಂದರ ಆಫೀಸಿಗೂ ಲಿಮಿಟೆಡ್ ಕಂಪನಿಯ ಆಫೀಸಿಗೂ ಬಹಳ ವ್ಯತ್ಯಾಸವುಂಟು. ಇದರ ವ್ಯವಹಾರ ಪ್ರಚಂಡವಾದದ್ದು. ಈಗ ತಂದಿರುವ ಸಾಮಾನುಗಳೂ ಸಾಲವು ಅನ್ನಿಸುತ್ತೆ ನನಗೆ!"

ಈ ಮಾತು ಕೇಳಿ ಚಂದ್ರಣ್ಣ ಬೆರಗಾಗದಿರಲಿಲ್ಲ. "ಇರಬಹುದು ಯೋಗಿ. ನಾವೆಲ್ಲ ಸಣ್ಣ ಮಾಸಪತ್ರಿಕೆಗಳ ಜನ. ನಮಗೆ ಕಂಪನಿ ಮಾಡಿ ಅನುಭವವಿಲ್ಲ. ಆದರೆ ಕಂಪನಿಗಾಗಿ ನಾವು ಖರ್ಚು ಮಾಡುವ ಹಣ ಷೇರ್ ಹೋಲ್ಡರುಗಳ ಹಣ ಎಂಬುದನ್ನು ಮರೆಯಬಾರದು. ನಮ್ಮ ಮೇಲೆ ನಂಬಿಕೆ ಇಟ್ಟು ಹಣ ಕೊಟ್ಟಿರುತ್ತಾರೆ. ಅವರು ಅದನ್ನು ಅಗತ್ಯದ ವಸ್ತುಗಳಿಗೆ ಮಾತ್ರ ಉಪಯೋಗಿಸಬೇಕೇ ಹೊರತು ಹೀಗೆ ದುಂದುವೆಚ್ಚ ಮಾಡಬಾರದು."

ಈ ಮಾತಿನಿಂದಾಗಿ ಶಿವಯೋಗಿಗೆ ಕೋಪ ಬಂದುಬಿಟ್ಟಿದ್ದಿತು. ಆತ ಕೆನ್ನೆ

ಉಬ್ಬಿಸಿಕೊಂಡು ಸುಮ್ಮನೆ ಕುಳಿತುಕೊಂಡುಬಿಟ್ಟಿದ್ದ. ಮಾತನಾಡಿರಲಿಲ್ಲ.

ಇನ್ನೊಂದು ದಿನ, ಚಂದ್ರಣ್ಣ ಹೊರಗಡೆ ಹೋಗಿದ್ದವನು ಕಚೇರಿಗೆ ಬಂದಾಗ ಶಿವಯೋಗಿ ನಾಲ್ಕಾರು ಆಳುಗಳ ಮೇಲೆ ಯಾವುದೋ ಒಂದು ವಸ್ತುವನ್ನು ಹೊರಿಸಿ ಮೆಟ್ಟಲುಗಳ ಮೇಲಿನಿಂದ ಅಟ್ಟಕ್ಕೆ ಸಾಗಿಸುತ್ತಿದ್ದುದನ್ನು ಕಂಡ. ಹತ್ತಿರ ಬಂದಾಗ ಅದೊಂದು ದೊಡ್ಡದಾದ ಮರದ ಪರದೆಯೆಂಬುದು ತಿಳಿದುಬಂದಿತು. ಹಳೆಯ ವಸ್ತುಗಳ ಅಂಗಡಿಯೊಂದರಲ್ಲಿ ಅದನ್ನು ಕಂಡು ಶಿವಯೋಗಿ ಕೊಂಡು ತಂದ ಹಾಗಿದ್ದಿತು.

ಮಾತನಾಡದೆ ಚಂದ್ರಣ್ಣ ಮೆಟ್ಟಲುಗಳನ್ನೇರಿ ಮೇಲೆ ಬಂದು ಕುರ್ಚಿಯ ಮೇಲೆ ಕುಳಿತುಕೊಂಡು ಬೆಳಗಿನ ಅಂಚೆಯಲ್ಲಿ ಬಂದಿದ್ದ ಕಾಗದಗಳಿಗೆ ಉತ್ತರ ಬರೆಯುವುದರಲ್ಲಿ ತೊಡಗಿದ.

ಶಿವಯೋಗಿ ಬಲು ಶ್ರಮದಿಂದ ಆ ಪರದೆಯನ್ನು ಅಟ್ಟದ ಮೇಲೆ ಸಾಗಿಸಿ ತಂದು ಚಂದ್ರಣ್ಣನ ಮೇಜಿಗೂ ತನ್ನ ಮೇಜಿಗೂ ನಡುವೆ ಅದನ್ನು ನಿಲ್ಲಿಸಿದ. ನಾಲ್ಕಾರು ಸಲ ಅಲ್ಲಿ ಇಲ್ಲಿ ನಿಂತು ಅದರ ಅಂದ ಚಂದಗಳನ್ನು ನಿರುಕಿಸಿ ನೋಡಿದ – ಅನಂತರ ಚಂದ್ರಣ್ಣನ ಬಳಿ ಬಂದು ನಗುನಗುತ್ತಾ ಕೇಳಿದ : ''ಏನ್ರೀ! ಏನೆನ್ನುತ್ತೀರಿ? ಚೆನ್ನಾಗಿದೆ ಯಲ್ಲವೆ ಸ್ಕ್ರೀನು?''

ಕಾಗದ ಬರೆಯುವುದರಲ್ಲಿ ತಲ್ಲೀನನಾಗಿದ್ದ ಚಂದ್ರಣ್ಣ ತಲೆಯನ್ನು ಮೇಲಕ್ಕೆತ್ತದೆ ಶಾಂತಸ್ವರದಲ್ಲಿ ನುಡಿದ :

''ಚೆನ್ನಾಗಿದೆ.''

''ಮಹಡಿಗೆಲ್ಲ ಇದೊಂದೇ ಒಂದು ಹಾಲ್. ನೋಡಲು ಚೆನ್ನಾಗಿರುವುದಿಲ್ಲ. ಅಂತೇ ಇಲ್ಲೊಂದು ಸ್ಕ್ರೀನ್ ಹಾಕಿದರೆ ಒಳ್ಳೆಯದಾದೀತೆಂದು ಬಹಳ ದಿನಗಳಿಂದ ಯೋಚಿಸುತ್ತಿದ್ದೆ. ಇಂದು ಅಂಗಡಿಯಲ್ಲಿ ಇದನ್ನು ಕಂಡೊಡನೆ ಬಿಟ್ಟು ಬರುವ ಹಾಗೆ ಆಗಲೇ ಇಲ್ಲ. ತೆಗೆದುಕೊಂಡು ಬಂದೆ. ಬೆಲೆಯೂ ತೀರ ಕಡಿಮೆ.''

''ಎಷ್ಟು?''

''ಬರೀ ಎಪ್ಪತ್ತೈದು ರೂಪಾಯಿ.''

ಲೇಖನಿಯನ್ನು ಕಿವಿಯ ಹತ್ತಿರ ಹಿಡಿದುಕೊಂಡು ಶಿವಯೋಗಿಯನ್ನು

ನಿಟ್ಟುಸುತ್ತ ಚಂದ್ರಣ್ಣನೆಂದ : ''ಎಪ್ಪತ್ತೈದು ಅಂದರೆ ಬಹಳ ಕಡಿಮೆಯಾಯಿತು ಯೋಗಿ! ಇನ್ನೂ ನೂರು ರೂಪಾಯಿ ಕೊಡಬಹುದಾಗಿತ್ತು!''

ಚಂದ್ರಣ್ಣನ ಮಾತಿನಲ್ಲಿದ್ದ ವ್ಯಂಗ್ಯವನ್ನು ಗುರುತಿಸಿಕೊಂಡನೇನೊ, ಶಿವಯೋಗಿ ಇಳಿದ ಮುಖದಿಂದ ಅಲ್ಲಿಂದ ಹೊರಟುಹೋದ.

ಚಂದ್ರಣ್ಣ ಅಷ್ಟು ಕಟುವಾಗಿ ಮಾತನಾಡಿದರೂ ಶಿವಯೋಗಿಗೆ ತಿಳುವಳಿಕೆ ಬಂದ ಹಾಗೆ ಕಾಣಿಸಲಿಲ್ಲ. ಪರದೆಯನ್ನು ಕೊಂಡು ತಂದ ಒಂದು ವಾರದೊಳಗಾಗಿಯೇ ಆತ ಒಂದು ಸಾಯಂಕಾಲ ಇನ್ನೊಂದು ವಸ್ತುವನ್ನು ಕೈಯಲ್ಲಿ ಹಿಡಿದುಕೊಂಡು ಬಂದ. ಷೇರು ಫಾರ್ಮುಗಳನ್ನು ಫೈಲಿಗೆ ಅಂಟಿಸುತ್ತ ಕುಳಿತಿದ್ದ ಚಂದ್ರಣ್ಣ ತಲೆಯೆತ್ತಿ ನೋಡಿದಾಗ ಶಿವಯೋಗಿ ಹಳೆಯ ಗಡಿಯಾರವೊಂದನ್ನು ತೆಗೆದುಕೊಂಡು ಬರುವುದು ಕಾಣಿಸಿತು.

ಅದನ್ನು ತನ್ನ ಮೇಜಿನ ಮೇಲಿರಿಸಿ, 'ಅಲಾರ್ಮು' ಕೊಟ್ಟು ಅದು ಮೆಲ್ಲಮೆಲ್ಲನೆ ಗಂಟೆ ಹೊಡೆಯುವುದನ್ನು ಕೌತುಕದಿಂದ ಆಲಿಸುತ್ತಿದ್ದ ಶಿವಯೋಗಿ, ಸದ್ದಾಗುವುದು ನಿಂತ ಬಳಿಕ ಚಂದ್ರಣ್ಣನ ಹತ್ತಿರ ಬಂದು ನಗುನಗುತ್ತಾ ನುಡಿದ : ''ಕಂಪನಿ ಆಫೀಸು ಅಂದರೆ ಒಂದು ಗಡಿಯಾರ ಬೇಕೇ ಬೇಕಲ್ಲವೆ? ಟೈಂ ತಿಳಿಯದೆ ಕೆಲಸ ಮಾಡುವುದೆಂದರೇನು? ಸರಿ. ತಂದುಬಿಟ್ಟೆ.''

''ಎಲ್ಲಿಂದ ತಂದಿರಿ?''

''ಮೋಡಕಾ ಬಜಾರಿನಲ್ಲಿ. ಹೊಸದು ಕೊಳ್ಳಹೋಗಿದ್ದರೆ ಇನ್ನೂರು ರೂಪಾಯಿಗಳಿಗೆ ಕಡಿಮೆಯಾಗುವಂತಿರಲಿಲ್ಲ. ಈಗಿನ ಕಾಲದಲ್ಲೇನ್ರಿ, ಗಡಿಯಾರಗಳಿಗೆ ಬಂಗಾರದ ಬೆಲೆ.''

''ಎಷ್ಟು ಕೊಟ್ಟಿರಿ?''

''ಎಂಭತ್ತು ರೂಪಾಯಿ ಮಾತ್ರ,'' ಎಂದು ಗಂಭೀರವಾಗಿ ನುಡಿದ ಶಿವಯೋಗಿ.

ಚಂದ್ರಣ್ಣ ಎದ್ದು ಆ ಗಡಿಯಾರದ ಹತ್ತಿರ ಬಂದು ಅದನ್ನು ಪರೀಕ್ಷಿಸಿ ನೋಡಿದ. ಮಾಸಿಹೋಗಿದ್ದ ಬಣ್ಣ ಅಳಿಸಿಹೋಗಿದ್ದ ಅಕ್ಷರಗಳು, ಸಡಿಲು ಸಡಿಲಾಗಿದ್ದ ಭಾಗಗಳು, ಆ ಗಡಿಯಾರಕ್ಕೆ ಏನಿಲ್ಲ ಎಂದರೂ ನೂರು ವರ್ಷ ಆಯುಷ್ಯವಾದರೂ

ಆಗಿದ್ದೀತು ಎಂದುಕೊಂಡ ಚಂದ್ರಣ್ಣ. ಬೇರೆ ಯಾರಾದರೂ ಆಗಿದ್ದಲ್ಲಿ ಅದಕ್ಕೆ ಹತ್ತು ರೂಪಾಯಿಗಳನ್ನು ಸಹ ಕೊಡುವ ಹಾಗಿರಲಿಲ್ಲ.

ಶಿವಯೋಗಿ ಉತ್ಸಾಹದಿಂದ ಹೇಳುತ್ತಿದ್ದ : ''ಸೆಕೆಂಡ್ ಹ್ಯಾಂಡ್ ಆದರೇನಂತೆ! ಒಳ್ಳೆಯ ಕಂಪನಿಯ ತಯಾರಿಕೆ. ಸ್ವಲ್ಪ ರಿಪೇರಿ ಮಾಡಿಸಿಬಿಟ್ಟರಾಯಿತು. ಇನ್ನೂ ನೂರು ವರ್ಷ ಕೆಲಸ ಕೊಟ್ಟೀತು!''

''ರಿಪೇರಿ ಬೇರೆ ಆಗಬೇಕೇನು ಇದಕ್ಕೆ?''

''ಬಹಳ ತೊಂದರೆಯೇನೂ ಇಲ್ಲ. ಒಂದೆರಡು ಸ್ಕ್ರೂ ಹೋಗಿವೆ. ಅವನ್ನು ಹಾಕಿಸಿಬಿಟ್ಟರಾಯಿತು. ಕೊಂಡ ಮೇಲೆ ಹಾಗೇ ರಂಗನಾಥನ್ ವಾಚ್ ವರ್ಕ್ಸ್ ಮೇಲೆ ಹಾದು ಬಂದೆ. ಓವರಾಯಿಲ್ ಮಾಡಿ ಒಂದೆರಡು ಮೊಳೆ ಹಾಕಿದರಾದೀತು ಅಂದರೆ. ಖರ್ಚು ಬಹಳ ಬರುವುದಿಲ್ಲ – ಬರೇ ನಲವತ್ತು ರೂಪಾಯಿ!''

''ಗಡಿಯಾರಕ್ಕೆ ಎಂಭತ್ತು. ಅದರ ರಿಪೇರಿಗೆ ನಲವತ್ತು. ಅರ್ಧಕ್ಕರ್ಧ ಎಂದರೆ ನ್ಯಾಯವೇ. ಪರವಾಯಿಲ್ಲ'' ಎಂದ ಚಂದ್ರಣ್ಣ. ಆತನ ಮಾತಿನಲ್ಲಿನ ಉಪಹಾಸವನ್ನು ಶಿವಯೋಗಿ ಅರಿತುಕೊಳ್ಳಲಿಲ್ಲ.

ಕಂಪನಿಯ ಹಣವನ್ನು ಅಪವ್ಯಯ ಮಾಡುವ ಈ ಕೆಟ್ಟ ಚಟವನ್ನು ತ್ಯಜಿಸಬೇಕೆಂದು ಚಂದ್ರಣ್ಣ ಎಷ್ಟು ಹೇಳಿದರೂ ಶಿವಯೋಗಿಗೆ ಅರಿವು ಬರಲಿಲ್ಲ. ಗಡಿಯಾರವನ್ನು ಕೊಂಡು ತಂದ ಕೆಲದಿನಗಳಲ್ಲಿಯೇ ಆತ ಭಾರಿ ಟೈಪ್‌ರೈಟರ್ ಯಂತ್ರವೊಂದನ್ನು ಕೊಂಡುತಂದ. ಅದೂ ಸಹ ನೂರು ವರ್ಷಗಳ ವಯಸ್ಸಿನದೇ ಆಗಿದ್ದಿತು. ನೂರಾರು ಜನಗಳ ಕೈಯಲ್ಲಿ ದುಡಿದು ದುಡಿದು ಶಕ್ತಿಯನ್ನೆಲ್ಲ ಕಳೆದುಕೊಂಡಿದ್ದಿತು. ಅದರದೊಂದು ಅಕ್ಷರವೂ ಸರಿಯಾದ ಸ್ಥಿತಿಯಲ್ಲಿರಲಿಲ್ಲ.

''ಇದೆಲ್ಲಿ ಗಂಟುಬಿತ್ತು ಯೋಗಿ?''

''ನಮ್ಮ ಸ್ನೇಹಿತರು ತುಂಗಭದ್ರಯ್ಯನವರು ಕೊಡಿಸಿದರು. ಅವರ ಗೆಳೆಯರೊಬ್ಬರ ಹತ್ತಿರ ಇತ್ತು. ಆಲಿವರ್ ಮಶೀನು. ಬಹಳ ಗಟ್ಟಿಮುಟ್ಟಾದದ್ದು. ಇಂಥ ಯಂತ್ರ ಈ ಊರಲ್ಲಿಯೆ ಇನ್ನೊಂದು ಸಿಕ್ಕಲಾರದು. ಕಂಪನಿ ಆಫೀಸು ಅಂದ ಮೇಲೆ ಟೈಪ್‌ರೈಟರ್ ಇಲ್ಲದಿದ್ದರಾಗುತ್ತದೆಯೆ? ಕಂಪನಿಯ ಕಾಗದ ಪತ್ರಗಳನ್ನೆಲ್ಲ ಟೈಪ್ ಮಾಡಿದರೇನೇ ಚಂದ. 'ಡಿಗ್ನಿಟಿ' ಕಾದುಕೊಂಡಂತಾಗುತ್ತೆ. ತಂದುಬಿಟ್ಟೆ ಆಯಿತು.''

"ಸರಿ! ಏನು ಕೊಟ್ಟಿರಿ ಇದಕ್ಕೆ?"

ಶಿವಯೋಗಿ ಕೊಂಚ ತಡವರಿಸುತ್ತ ಉತ್ತರವಿತ್ತ :

"ಬರೀ ಐದುನೂರು ರೂಪಾಯಿ."

ಚಂದ್ರಣ್ಣ ಕುರ್ಚಿಯಲ್ಲಿ ಕುಸಿದು ಕುಳಿತ. ಆತನ ಮುಖದಿಂದ ಮಾತೇ ಹೊರಡಲಿಲ್ಲ, ಕೆಲಸಕ್ಕೆ ಬಾರದ ಹಳೆಯ ಯಂತ್ರಕ್ಕೆ ಐದುನೂರು ರೂಪಾಯಿ! ಶಿವಯೋಗಿಯ ಬುದ್ಧಿ ಆತನ ಸ್ವಾಧೀನದಲ್ಲಿದೆಯೋ ಇಲ್ಲವೊ ಎಂದೂ ಎನ್ನಿಸದಿರಲಿಲ್ಲ ಚಂದ್ರಣ್ಣನಿಗೆ. ಕಂಪನಿಯ ಪತ್ರವ್ಯವಹಾರವೂ ವಿಶೇಷವಾಗಿರಲಿಲ್ಲ, ವಾರದಲ್ಲಿ ಒಂದೆರಡು ಇಂಗ್ಲೀಷ್ ಪತ್ರ ಹಾಕಬೇಕಾಗಿ ಬರುತ್ತಿದ್ದುದೆಷ್ಟೋ ಅಷ್ಟೆ ಕಂಪನಿ ಕೆಲಸಕ್ಕಾರಂಭಿಸಿ ವ್ಯವಹಾರ ಹೆಚ್ಚಿದಾಗ, ಅಗತ್ಯವೆನ್ನಿಸಿದಾಗ ಹೊಸದೊಂದು ಟೈಪ್‌ರೈಟರ್ ಕೊಂಡಿದ್ದರೂ ಆಗುತ್ತಿತ್ತು. ಕೆಲಸವೇ ಇಲ್ಲದಿರುವ ಈ ಸಮಯದಲ್ಲಿ ಇಂಥ ವಸ್ತುವಿಗಾಗಿ ಐದುನೂರು ರೂಪಾಯಿಗಳನ್ನು ಖರ್ಚು ಮಾಡುವುದೆಂದರೇನು? ಶಿವಯೋಗಿ ನಿಜಕ್ಕೂ ಇದಕ್ಕೆ ಐದುನೂರು ರೂಪಾಯಿಗಳನ್ನು ಕೊಟ್ಟಿರಬಹುದೇ ಎಂಬ ಸಂದೇಹವೂ ಬರದಿರಲಿಲ್ಲ ಚಂದ್ರಣ್ಣನಿಗೆ. ಅದಕ್ಕೆ ಬೆಲೆಯೆಷ್ಟು ಎಂದು ತಾನು ಕೇಳಿದಾಗ ಒಮ್ಮೆಲೆ ಉತ್ತರ ಕೊಡದೆ ಶಿವಯೋಗಿ ತಡವರಿಸಿದ್ದುದು ಆತನಿಗೆ ನೆನಪಾಯಿತು; ಸಂದೇಹ ಬಲಗೊಂಡಿತು.

"ಇಂಥ ಹಳೆಯ ಯಂತ್ರಕ್ಕೆ ಐದುನೂರು ಕೊಟ್ಟಿರಾ ಯೋಗಿ?"

ಚಂದ್ರಣ್ಣನ ಧ್ವನಿಯಲ್ಲಿ ವ್ಯಕ್ತವಾಗುತ್ತಿದ್ದ ಸಂದೇಹವನ್ನು ಗುರುತಿಸಿದಾಗ ಶಿವಯೋಗಿಗೆ ಅವಮಾನವಾದಂತೆ ತೋರಿತು. ಆತ ಒರಟು ಸ್ವರದಲ್ಲಿ ಉತ್ತರವಿತ್ತ : "ನಾನು ಸುಳ್ಳು ಹೇಳುತ್ತೇನೆಂದು ತಿಳಿದಿರಾ? ಬೇಕಾದರೆ ನಮ್ಮ ತುಂಗಭದ್ರಯ್ಯನವರನ್ನು ವಿಚಾರಿಸಿ ನೋಡಿ."

"ನೀವು ಸುಳ್ಳಾಡುವಿರೆಂದು ನನ್ನ ಅಭಿಪ್ರಾಯವಲ್ಲ, ಮೊದಲನೆಯದಾಗಿ ಸದ್ಯ ಕಂಪನಿಗೆ ಟೈಪ್‌ರೈಟರಿನ ಅಗತ್ಯವೇ ಇಲ್ಲ, ಎರಡನೆಯದಾಗಿ ಇಂಥ ಹಳೆಯ ಟೈಪ್‌ರೈಟರ್ ಯಾವ ಕೆಲಸಕ್ಕೂ ಉಪಯೋಗವಾಗುವಂತಿಲ್ಲ, ಮೂರನೆಯದಾಗಿ ಇಂಥ ಯಂತ್ರಕ್ಕೆ ಬುದ್ಧಿಯಿದ್ದವರಾರೂ ಐವತ್ತು ರೂಪಾಯಿಗಿಂತ ಹೆಚ್ಚಿಗೆ ಕೊಡಲಿಕ್ಕಿಲ್ಲ, ಡೈರೆಕ್ಟರರು ಇದನ್ನು ಕಂಡು ಏನೆನ್ನಬಹುದು?" ಎಂದು ನುಡಿದು ಚಂದ್ರಣ್ಣ ಶತಪಥ ಹಾಕತೊಡಗಿದ.

ಕೊಂಚ ಹೊತ್ತು ಕಳೆದ ತರುವಾಯ ಆತ – ''ಇದನ್ನು ಯಾರಿಂದ ಕೊಂಡು ತಂದಿರಿ?'' ಎಂದು ಕೇಳಿದ.

ಶಿವಯೋಗಿ ಒಮ್ಮೆಲೆ ಉತ್ತರವೀಯಲಿಲ್ಲ. ಒಂದೆರಡು ನಿಮಿಷ ಸುಮ್ಮನಿದ್ದು ನುಡಿದ : ''ಆಗಲೆ ಹೇಳಿದೆನಲ್ಲ – ತುಂಗಭದ್ರಯ್ಯನವರ ಸ್ನೇಹಿತರೊಬ್ಬರಿಂದ ತಂದೆ ಅಂತ. ಅವರ ಹೆಸರೇನೆಂಬುದು ನನಗೂ ತಿಳಿಯದು.''

''ರಸೀತಿ ತೆಗೆದುಕೊಂಡಿರಾ?''

''ಹೆಸರೇ ತಿಳಿಯದು ಅನ್ನುತ್ತೇನಲ್ಲ? ರಸೀತಿ ತಂದಿದ್ದರೆ ಹೆಸರು ತಿಳಿಯುತ್ತಿರಲಿಲ್ಲವೇ?'' ಎಂದು ಗಟ್ಟಿಯಾಗಿ ನುಡಿದ ಶಿವಯೋಗಿ.

ಜೇಬಿನಿಂದ ಸಿಗರೇಟು ಪೊಟ್ಟಣವನ್ನು ತೆಗೆದು ಒಂದು ಸಿಗರೇಟನ್ನು ಹೊತ್ತಿಸುತ್ತ ಚಂದ್ರಣ್ಣ ಶಿವಯೋಗಿಯ ಬಳಿ ಬಂದು ಆತನ ಭುಜದ ಮೇಲೆ ಕೈಯಿಟ್ಟು ಹೇಳಿದ : ''ಸಿಟ್ಟಾಗಬೇಡಿ ಯೋಗಿ. ನಿಮ್ಮ ಸ್ವಂತ ಹಣದಿಂದ ನಿಮ್ಮ ಸ್ವಂತ ಉಪಯೋಗಕ್ಕಾಗಿ ನೀವಿದನ್ನು ತಂದಿದ್ದರೆ ಆಕ್ಷೇಪಿಸಲು ನನಗೇನೂ ಅಧಿಕಾರವಿರುತ್ತಿರಲಿಲ್ಲ. ಆದರೆ ಅದು ಕಂಪನಿ. ಲಿಮಿಟೆಡ್ ಕಂಪನಿ. ಇದರ ಹಣವೆಲ್ಲ ಷೇರ್ ಹೋಲ್ಡರುಗಳದು. ಸದ್ಯ ನಿಮ್ಮ ಹತ್ತಿರ ಆ ಹಣವಿದೆಯೆಂದ ಮಾತ್ರಕ್ಕೆ ಯದ್ವಾತದ್ವಾ ಖರ್ಚು ಮಾಡಿಬಿಡಬಾರದು. ನಾಳೆ ಅದಕ್ಕೆಲ್ಲ ಕಾಸಿಗೆ ಕಾಸು ಲೆಕ್ಕ ಕೊಡಬೇಕಾಗುವುದು. ಡೈರೆಕ್ಟರ್ ಬೋರ್ಡ್ ಸಭೆ ಸೇರಿದಾಗ ಈ ಪರದೆ ಏತಕ್ಕೆ ಬೇಕಿತ್ತು, ಈ ಹಳೆಯ ಗಡಿಯಾರ ಏಕೆ ತಂದಿರಿ, ಈ ನಿರುಪಯೋಗಿ ಟೈಪ್‌ರೈಟರ್ ತರಲು ಬುದ್ಧಿಯಿರಲಿಲ್ಲವೆ; ನಿಜಕ್ಕೂ ಇದಕ್ಕೆ ಎಷ್ಟು ಕೊಟ್ಟಿದ್ದೀರಿ ಎಂದು ಡೈರೆಕ್ಟರುಗಳು ಕೇಳಿದರೆ ಏನು ಉತ್ತರ ಕೊಡುತ್ತೀರಿ? ನೀವು ಮಾಡಿದ ತಪ್ಪಿಗಾಗಿ ನಾನೂ ಸಹ ಅವರೆದುರಿಗೆ ತಲೆ ಬಾಗಿಸಬೇಕಾದೀತು, ಅಲ್ಲದೆ ಕಂಪನಿಗಾಗಿ ನಾವು ಖರ್ಚು ಮಾಡುವ ಪ್ರತಿಯೊಂದು ಕಾಸಿಗೂ ರಸೀತಿ ಆಗತ್ಯವಾಗಿ ಬೇಕಾಗುತ್ತದೆ. ಈ ವಿಷಯ ನಿಮಗೆ ತಿಳಿಯದೆ?''

''ತಿಳಿಯದೆ ಏನು?'' ಎಂದ ಶಿವಯೋಗಿ.

''ತಿಳಿದೂ ತಿಳಿದೂ ಹೀಗೇಕೆ ಮಾಡುತ್ತಿದ್ದೀರಿ? ರಸೀತಿಯೆಲ್ಲಿದೆ?''

''ತರುತ್ತೇನೆ,'' ಎಂದು ನುಡಿದು ಶಿವಯೋಗಿ ಬಿರುಬಿರನೆ ಹೊರಟುಹೋದ.

ಅವನು ಹೋಗಿ ಐದಾರು ನಿಮಿಷ ಕಳೆದಿರಲಿಲ್ಲ, ಅಷ್ಟರಲ್ಲಿ ಕೊಟ್ರಪ್ಪನ ಸವಾರಿ

ಆಗಮಿಸಿತು. ಆತನೂ ಟೈಪ್‌ರೈಟರನ್ನು ಕಂಡು ಅದಕ್ಕೆ ಕೊಟ್ಟ ಬೆಲೆಯನ್ನು ತಿಳಿದು ಆಶ್ಚರ್ಯಚಕಿತನಾದ.

"ಎಲ್ಲಿ ಕೊಂಡರಂತೆ ಇದನ್ನು?"

"ತುಂಗಭದ್ರಯ್ಯನವರ ಸ್ನೇಹಿತರೊಬ್ಬರ ಹತ್ತಿರವಂತೆ."

"ಮೋಡಕಾ ಬಜಾರಿನ ಅಬ್ದುಲ್‌ಖಾದರ್‌ಗೂ ತುಂಗಭದ್ರಯ್ಯನವರಿಗೂ ಎಂದಿನಿಂದ ಸ್ನೇಹವೊ!" ಎಂದು ನುಡಿದು ಕೊಟ್ರಪ್ಪ ನಗತೊಡಗಿದ.

"ಅಂದರೆ?" ಎಂದು ವಿಸ್ಮಯದಿಂದ ಕೇಳಿದ ಚಂದ್ರಣ್ಣ.

"ಈ ಯಂತ್ರ ಒಂದು ವರ್ಷದಿಂದ ಸಾಬಿಯ ಅಂಗಡಿಯಲ್ಲೇ ಬಿದ್ದಿತ್ತು ಜಂಗು ತಿನ್ನುತ್ತ – ಆತ ನನ್ನ ಹತ್ತಿರ ದಿನ ಪತ್ರಿಕೆ ಕೊಳ್ಳುತ್ತಾನೆ – ದಿನವೂ ನಾನಿದನ್ನು ಅಲ್ಲಿ ಕಂಡಿದ್ದೇನೆ. ಏನಯ್ಯ ಸಾಹೇಬು, ಇದಕ್ಕೊಂದು ಗಿರಾಕಿ ಸಿಕ್ಕಲಿಲ್ಲವೇ ಇನ್ನೂ ಎಂದು ನಾನು ಎಷ್ಟೋ ಸಲ ಹಾಸ್ಯ ಮಾಡಿದ್ದೂ ಉಂಟು. ಈ ಮುದುಕಮ್ಮನನ್ನು ಮದುವೆಯಾಗಲು ಯಾರು ಬಂದಾರಪ್ಪ–ಎಂದು ಆತನೂ ನಕ್ಕುಬಿಟ್ಟುದುಂಟು."

ಯೋಚನೆಗಳಲ್ಲಿ ಮಗ್ನನಾಗಿ ಚಂದ್ರಣ್ಣ ಕೊಂಚ ಹೊತ್ತು ಮೌನವಾಗಿ ಕುಳಿತುಕೊಂಡಿದ್ದ. ಶಿವಯೋಗಿಯ ಸ್ವಭಾವದ ಇನ್ನೊಂದು ವೈಪರೀತ್ಯ ಹಠಾತ್ತಾಗಿ ಕಾಣಿಸಿಕೊಂಡಿದ್ದಿತು. ಇಂಥದನ್ನು ಕೊಂಡು ತಂದದ್ದೂ ಅಲ್ಲದೆ ಸುಳ್ಳು ಬೇರೆ ಹೇಳಿದನಲ್ಲ–ಇಂಥ ವ್ಯಕ್ತಿಯೊಂದಿಗೆ ಪಾಲುಗಾರನಾಗಿ ಕಂಪನಿ ನಡೆಸುವುದು ಹೇಗೊ!

"ಆ ಸಾಬಿಯ ಹತ್ತಿರ ಇದು ಬಿದ್ದುಕೊಂಡ ವಿಷಯ ನಿಜವೇ ಕೊಟ್ರಣ್ಣ? ಬೇರಾವುದಾದರೂ ಆಗಿರಲಿಕ್ಕಿಲ್ಲವಷ್ಟೆ?"

"ನನ್ನ ಕಣ್ಣು ಇನ್ನೂ ನೆಟ್ಟಗಿವೆ ಚಂದ್ರಣ್ಣನವರೆ. ಇದೇ ಆಲಿವರ್ ಯಂತ್ರ. ಇದೇ ಬಣ್ಣ. ಇವೇ ಮೊಳೆ. ಎಲ್ಲಾ ಇದೇ. ನಿಮಗಿನ್ನೂ ನಂಬಿಕೆಯಾಗದಿದ್ದರೆ ಬನ್ನಿ – ಅಲ್ಲಿಗೇ ಹೋಗುವ. ಸಾಬಿಯನ್ನೇ ಕೇಳಿ ನಿಮಗೆ ಮನವರಿಕೆ ಮಾಡಿಕೊಡುತ್ತೇನೆ."

ಈ ಸಂದೇಹವನ್ನು ನಿವಾರಿಸಿಕೊಳ್ಳುವುದೇ ಉಚಿತವೆಂದು ಬಗೆದು ಚಂದ್ರಣ್ಣ ಆತನೊಂದಿಗೆ ಪೇಟೆಗೆ ಹೊರಟ. ಅಲ್ಲಿ ಹಳೆಯ ಸಾಮಾಗ್ರಿಗಳನ್ನು ಮಾರುವ ಅಂಗಡಿಗಳ ಸಾಲಿನಲ್ಲಿ ಒಂದು ಕಡೆ ಅಬ್ದುಲ್ಲಾನ ಅಂಗಡಿಯಿದ್ದಿತು. ಕೊಟ್ರಪ್ಪ ದೃಷ್ಟಿಗೆ ಬೀಳುತ್ತಲೂ ಆತ – "ಆವ್ ದೋಸ್ತ್," ಎಂದು ಸ್ವಾಗತಿಸಿದ.

ಇಬ್ಬರೂ ಆ ಅಂಗಡಿಯೆದುರಿಗೆ ನಿಂತುಕೊಂಡು ಅಲ್ಲಿದ್ದ ವಿಧ ವಿಧದ ಸಾಮಾನುಗಳನ್ನು ನಿರೀಕ್ಷಿಸುತ್ತಿದ್ದರು.

''ನಿಮ್ಮ ಮುದುಕಮ್ಮ ಎಲ್ಲಿ ಅಬ್ದುಲ್‌ಸಾಹೇಬ್? ಕಾಣಿಸೋದಿಲ್ಲವಲ್ಲಾ?'' ಎಂದು ನಗುತ್ತಾ ಪ್ರಶ್ನಿಸಿದ ಕೊಟ್ರಪ್ಪ.

ಅಬ್ದುಲ್ಲನೂ ಗಟ್ಟಿಯಾಗಿ ನಗುತ್ತ ಉತ್ತರವಿತ್ತ : ''ನನ್ನ ಬಿಟ್ಟರೆ ಅದಕ್ಕೆ ಬೇರಾರೂ ಗತಿಯಿಲ್ಲವೆಂದುಕೊಂಡಿದ್ದೆ ನಾನು ತಪ್ಪಾಯಿತು. ಇವೊತ್ತೇ ಅದು ನನ್ನ ಕೈಬಿಟ್ಟಿತು.''

''ವಾಹವ್ವ! ಅಂತೂ ಅದೃಷ್ಟವಪ್ಪ ಮುದುಕಿಯದು!''

''ಅದೃಷ್ಟ ಅಂದರೆ ರಾಣೀ ಅದೃಷ್ಟ''

''ಯಾರಪ್ಪ ಆ ನಿರ್ಭಾಗ್ಯರು ಆ ಮುದುಕಿಯನ್ನು ಗಂಟು ಹಾಕಿಕೊಂಡು ಹೋದವರು?''

''ಇಬ್ಬರು ಬಂದಿದ್ದರು ಒಬ್ಬರು ಖಾದಿ ಹಾಕಿದ್ದರು. ಇನ್ನೊಬ್ಬರು ಸೂಟ್‌ವಾಲಾ.''

''ಎಷ್ಟಕ್ಕೆ ಕೊಟ್ಟಿರಿ?''

''ಎಪ್ಪತ್ತೈದು ರೂಪಾಯಿಗೆ ಅಷ್ಟು ಬಂದದ್ದೇ ದೊಡ್ಡದು ಸಾಮಿ. ಈ ಹಳೆಯ ಮಶೀನುಗಳನ್ನೆಲ್ಲ ಯಾರು ಕೇಳ್ತಾರೆ ಈಗಿನ ಕಾಲದಲ್ಲಿ?''

''ಸರಿ ರಸೀತಿ ಕೊಟ್ಟಿರಾ?''

''ರಸೀತಿ? ಇಂಥ ಹಳೆಯ ಮಾಲಿಗೆಲ್ಲ ರಸೀತಿ ಯಾರು ತಾನೆ ಕೊಡ್ತಾರೆ ಸ್ವಾಮಿ?''

''ಅವರಿಗೆ ಬೇಕಾದರೆ?''

''ಅಗತ್ಯವಿದ್ದರೆ ಕೊಟ್ಟರಾಯಿತು. ಹಣವನ್ನಂತೂ ತೆಗೆದುಕೊಂಡಿದ್ದೇನಲ್ಲ?'' ಎಂದ ಅಬ್ದುಲ್.

ಅನಂತರ ನಾಲ್ಕು ದಿನಗಳ ಬಳಿಕ ಕೊಟ್ರಪ್ಪ ಭೆಟ್ಟಿಯಾದಾಗ ಇನ್ನೊಂದು ವಿಲಕ್ಷಣವಾರ್ತೆ ತಿಳಿದು ಬಂದಿತು. ಕೊಟ್ರಪ್ಪ ಹೇಳುತ್ತಿದ್ದ :

"ಇವೊತ್ತು ಪೇಪರ್ ಕೊಡಲು ಮೋಡಕಾ ಬಜಾರಿಗೆ ಹೋದಾಗ ಅಬ್ದುಲ್ಲಾ ಒಂದು ಸುದ್ದಿ ತಿಳಿಸಿದ. ಪತ್ರಿಕೆಗೆ ಕಳಿಸುವ ಹಾಗಿದೆ ನೋಡಿರಿ ಈ ಸುದ್ದಿ. ಮೊನ್ನೆ ಸಂಜೆ ಶಿವಯೋಗಿ ತುಂಗಭದ್ರಯ್ಯ ಇಬ್ಬರೂ ಸೇರಿ ಆತನ ಅಂಗಡಿಗೆ ಹೋಗಿ ಟೈಪ್‌ರೈಟರಿಗೆ ರಸೀತಿ ಕೊಡಲು ಕೇಳಿದರಂತೆ. ಆತ ಎಪ್ಪತ್ತೈದು ರೂಪಾಯಿ ಕೊಡುವುದಾಗಿ ಆಸೆ ತೋರಿಸಿದರಂತೆ. ಅಬ್ದುಲ್ ಸಾಚಾ ಮನುಷ್ಯ. ಅಂಥ ದುರಾಸೆಗೆ ಬಲಿ ಬೀಳುವಾತನಲ್ಲ. ಸುಳ್ಳು ರಸೀತಿಯನ್ನು ತಾನೆಂದಿಗೂ ಕೊಡುವುದಿಲ್ಲವಾಗಿ ಹೇಳಿದನಂತೆ. ಅದಕ್ಕೆ ತುಂಗಭದ್ರಯ್ಯ ರೇಗಿ ಬಿದ್ದು ಅವನಿಗೆ ಬಾಯಿಗೆ ಬಂದ ಹಾಗೆ ಅಂದು – ಈ ಊರಲ್ಲಿ ಬಾಳ್ವೆ ಮಾಡಬೇಕೆಂಬ ಮನಸ್ಸಿದ್ದರೆ ನಾವು ಹೇಳಿದ ಹಾಗೆ ಬರೆದುಕೊಡು, ಈಗ ಕಾಲ ಬದಲಾಯಿಸಿದೆ, ನಿಮ್ಮ ಜಾತಿಯವರಿಗೆ ಇಲ್ಲಿ ಉಳಿಗಾಲ ವಿಲ್ಲ, ಹುಷಾರಿ – ಎಂದು ಬೆದರಿಸಿದರಂತೆ. ಆತ ಕೊಂಚವೂ ಹೆದರದೆ ನಾನು ಗುಳೇ ಹೋಗಬೇಕಾಗಿ ಬಂದರೂ ಚಿಂತೆಯಿಲ್ಲ, ಇಂಥ ಹರಾಮ್ ಕೆಲಸ ಮಾಡಲಾರೆ – ಎಂದು ಸ್ಪಷ್ಟವಾಗಿ ಹೇಳಿದನಂತೆ. ಈಗ ತುಂಗಭದ್ರಯ್ಯನವರು ತಮ್ಮ ಗೆಳೆಯರಾದ ನಗರಸಭಾಧ್ಯಕ್ಷರಿಗೆ ತಿಳಿಸಿ ಆತನ ಲೈಸನ್ಸ್ ರದ್ದು ಮಾಡಿ ಮಾರ್ಕೆಟ್ಟಿನಿಂದ ಆತನನ್ನು ಓಡಿಸಲು ಯತ್ನಿಸುತ್ತಿರುವರಂತೆ..."

ಈ ವಾರ್ತೆಯನ್ನು ಕೇಳಿ ಚಂದ್ರಣ್ಣನ ಎದೆಗೆ ಬಲವಾದ ಆಘಾತ ವಾದಂತಾಯಿತು. ಟೈಪ್‌ರೈಟರಿನ ರಸೀತಿಯ ವಿಷಯ ಇಷ್ಟು ಮುಂದುವರಿದು ಇಂಥ ಗೊಂದಲಕ್ಕೆ ಕಾರಣವಾದೀತೆಂದು ಆತ ತಿಳಿದಿರಲಿಲ್ಲ. ಹೇಗಾದರೂ ಮಾಡಿ ರಸೀತಿಯನ್ನು ತಂದೇ ತರಬೇಕೆಂದು ಶಿವಯೋಗಿ ನಿರ್ಧರಿಸಿದಂತಿದ್ದಿತು. ರಸೀತಿಯನ್ನು ತರದಿದ್ದರೆ ಚಂದ್ರಣ್ಣನೆದುರಿಗೆ ತಲೆಯೆತ್ತಿ ತಿರುಗುವುದು ಸಾಧ್ಯವಾಗುತ್ತಿರಲಿಲ್ಲ. ಕಾನೂನಿನ ಮೇರೆಗೆ ಲೆಕ್ಕಪತ್ರಗಳಿಗಾಗಿ ಸಹ ರಸೀತಿ ಅತ್ಯಗತ್ಯವಾಗಿದ್ದಿತು. ಅದನ್ನು ದೊರಕಿಸಲು ಶಿವಯೋಗಿ ಎಂಥ ಹೇಯ ಕೃತ್ಯಕ್ಕೂ ತೊಡಗುವುದು ಸಾಹಜಿಕ ವಾದುದಾಗಿದ್ದಿತು.

"ನಾನು ನಗರಸಭಾಧ್ಯಕ್ಷರನ್ನು ಕಂಡು ಅಬ್ದುಲ್ಲಾಗೆ ತೊಂದರೆ ಕೊಡಬಾರ ದೆಂದು ಉಪಾಯವಾಗಿ ತಿಳಿಸುತ್ತೇನೆ. ಚಿಂತೆ ಮಾಡಬೇಡವೆಂದು ಆತನಿಗೆ ಹೇಳು ಕೊಟ್ರಣ್ಣ, ಇನ್ನೊಂದು ವಿಷಯ ಈ ಸಂಗತಿಯನ್ನು ಬೇರೆ ಯಾರ ಹತ್ತಿರವೂ ಬಾಯಿ ಬಿಡಬೇಡ. ನಮ್ಮ ನಮ್ಮ ದೋಷಗಳನ್ನು ನಾವು ನಾವೆ ತಿದ್ದಿಕೊಳ್ಳುವುದು ಒಳ್ಳೆಯದು. ತಪ್ಪುಗಳು ಎಲ್ಲರಿಂದಲೂ ಆಗುತ್ತವೆ. ಯೋಗಿಯಿಂದಲೂ ಆಗುತ್ತಿವೆ. ಇಂದಿಲ್ಲ ನಾಳೆ

ಅವರ ತಪ್ಪು ಅವರಿಗೆ ತಿಳಿದಾವು. ಆಮೇಲೆ ತಾವಾಗಿಯೇ ಸುಧಾರಿಸಿಕೊಂಡಾರು,'' ಎಂದ ಚಂದ್ರಣ್ಣ.

''ಎಲ್ಲಾ ಹಾಳಾದ ಮೇಲೆ ಸುಧಾರಿಸಿಕೊಳ್ಳಲು ಹೋದರೇನು ಉಪಯೋಗ? ನೀವು ಸ್ವಲ್ಪ ಹುಷಾರಾಗೇ ಇರಬೇಕು. ನೀವು ಕಂಪನಿಯಲ್ಲಿರುವಿರೆಂದು ಈ ಊರಿನ ಜನ ಷೇರ್‌ಹೋಲ್ಡರಾಗಿದಾರೆ. ನೀವು ಇರುವಿರೆಂದೇ ತಮ್ಮಣ್ಣನವರೂ ಅವರ ಗುಂಪಿನವರೂ ಕಂಪನಿಗೆ ಸೇರಿದ್ದು. ಸೆಟ್ಟರೂ ಅಷ್ಟೆ. ಈ ಶಿವಯೋಗಿಗಳ ಯೋಗ್ಯತೆಯೇನೆನ್ನುವುದು ಎಲ್ಲರಿಗೂ ಗೊತ್ತಿದೆ. ಅವರನ್ನು ನೆಚ್ಚಿಕೊಂಡು ಯಾರೂ ಕಂಪನಿಗೆ ಸೇರಲಿಲ್ಲ. ಮುಖ್ಯವಾಗಿ ಎಲ್ಲ ಜವಾಬ್ದಾರಿಯೂ ನಿಮ್ಮದು. ಈ ಶಿವಯೋಗಿ ಇಂಥ ಮನುಷ್ಯನೆಂಬುದು ಮೊದಲೇ ಗೊತ್ತಿರಲಿಲ್ಲವೇ ನಿಮಗೆ?''

''ಹೇಗೆ ಗೊತ್ತಾಗಬೇಕು? ಅವರಿಗೂ ನನಗೂ ಹೆಚ್ಚು ಬಳಕೆ ಬಂದಿರಲಿಲ್ಲ. ಏನೋ ಸ್ವಲ್ಪ ಪರಿಚಯವಿತ್ತು. ಅಷ್ಟೇ. ಈಚೆಗೆ ಎಲ್ಲಾ ಗೊತ್ತಾದದ್ದು.''

''ಆತ ಜವಾಬ್ದಾರಿ ಮನುಷ್ಯನಲ್ಲ ಎನ್ನುವುದು ಸ್ಪಷ್ಟವಾಗಿ ಗೊತ್ತಾಯಿತು. ಇಬ್ಬರೂ ಮ್ಯಾನೇಜಿಂಗ್ ಡೈರೆಕ್ಟರರು. ಒಬ್ಬರ ತಪ್ಪಿಗೆ ಇನ್ನೊಬ್ಬರೂ ಹೊಣೆಗಾರರಾಗ ಬೇಕಾಗುವುದು. ಮುಂದೆ ಹೇಗೆ ಚಂದ್ರಣ್ಣ?''

''ನನಗೂ ಬಹಳ ಯೋಚನೆಗಿಟ್ಟುಕೊಂಡಿದೆ. ಶಿವಯೋಗಿಯನ್ನು ಹೇಗೆ ಸುಧಾರಿಸಬೇಕೋ ತಿಳಿಯದಾಗಿದೆ.''

''ಈಗ ಕೂಡಿರುವ ಹಣವೆಷ್ಟು?''

''ಎಂಟು ಸಾವಿರ''

''ಎಲ್ಲವೂ ನಗದು ಹಣವೊ? ಚೆಕ್ಕುಗಳೊ?''

''ಚೆಕ್ಕುಗಳ ರೂಪದಲ್ಲಿದ್ದರೇ ಚೆನ್ನಾಗುತ್ತಿತ್ತು. ಆದರೆ ಸ್ವಾಮಿಗಳೆಲ್ಲ ನಗದು ಹಣವನ್ನೇ ಕೊಟ್ಟರಂತೆ.''

''ಆ ಹಣವೆಲ್ಲ ಎಲ್ಲಿದೆ?'' ಎಂದು ದಿಗಿಲುಗೊಂಡು ಕೇಳಿದ ಕೊಟ್ರಪ್ಪ

''ಯೋಗಿಯ ಹತ್ತಿರ...''

ಕೊಟ್ರಪ್ಪ ಆಶ್ಚರ್ಯದಿಂದ ಕಣ್ಣುಗಳನ್ನರಳಿಸುತ್ತ - ''ಎಂಟುಸಾವಿರ ರೂಪಾಯಿ? ಅವರ ಹತ್ತಿರ? ಬ್ಯಾಂಕಿಗೆ ಸೇರಿಸಿ ಕಂಪನಿಯ ಲೆಕ್ಕ ಪ್ರಾರಂಭಿಸಲು ಬರುತ್ತಿರಲಿಲ್ಲವೇ?'' ಎಂದು ಕೇಳಿದ.

''ಆ ಹಣವನ್ನವರು ವಸೂಲು ಮಾಡಿಕೊಂಡು ಬರುತ್ತಲೂ ನಾನೇ ಇದೇ ಮಾತು ಹೇಳಿದೆ. ಇಷ್ಟೊಂದು ಹಣ ಕೈಯಲ್ಲಿರುವುದು ಒಳ್ಳೆಯದಲ್ಲವೆನ್ನುವುದು ನನಗೆ ಗೊತ್ತು. ಆದರೆ ಯೋಗಿ ನನ್ನ ಮಾತನ್ನು ಕಿವಿಗೆ ಹಾಕಿಕೊಳ್ಳಲೇ ಇಲ್ಲ. ಈಗಲೇ ಏನವಸರ - ನಿಧಾನವಾಗಿ ಅಕೌಂಟ್ ಪ್ರಾರಂಭಿಸೋಣ, ಹತ್ತು ಸಾವಿರವಾದರೂ ಕೂಡಲಿ ಮೊದಲು - ಎಂದುಬಿಟ್ಟರು. ಕಂಪನಿ ಪ್ರಾರಂಭವಾದ ದಿನಗಳಲ್ಲೇ ಅವರ ಮನಸ್ಸೇಕೆ ನೋಯಿಸಬೇಕೆಂದು ನಾನೂ ಸುಮ್ಮನಾದೆ. ಅಲ್ಲದೆ, ಇವರು ಇಂಥ ದುಂದುಗಾರರೆಂಬುದು ನನಗಾಗ ತಿಳಿದಿರಲಿಲ್ಲ. ಹಣ ಬ್ಯಾಂಕಿನಲ್ಲಿದ್ದರೇನು, ಅವರ ಹತ್ತಿರ ಇದ್ದರೇನು. ಎಲ್ಲವೂ ಒಂದೇ ಅಲ್ಲವೇ ಎಂದು ಸುಮ್ಮನಾಗಿಬಿಟ್ಟೆ''

''ಛೆ! ಹಣದ ವಿಷಯದಲ್ಲಿ ಹೀಗೆ ಮಾಡಬಾರದು. ಅದೂ ಅಲ್ಲದೆ ಇವೆಲ್ಲವೂ ಕಂಪನಿಯ ಹಣ. ಜವಾಬ್ದಾರಿ ಮನುಷ್ಯರೆಂದರೆ ನೀವು. ಆದಷ್ಟು ಬೇಗ ಉಳಿದ ಹಣವನ್ನೆಲ್ಲ ಬ್ಯಾಂಕಿಗೆ ಸೇರಿಸಿಬಿಡುವುದು ಕ್ಷೇಮ.''

''ಹೌದು. ಹಾಗೇ ಮಾಡುವ,'' ಎಂದ ಚಂದ್ರಣ್ಣ.

ಒಂದೆರಡು ದಿನ ಬಿಟ್ಟು ಆತ ಹಣದ ವಿಷಯವನ್ನೆತ್ತಿದಾಗ ಶಿವಯೋಗಿ ಮುಖ ಗಂಟು ಹಾಕಿಕೊಂಡು - ''ಹಣವನ್ನು ಎಂದೂ ಕಂಡೇ ಇರದವರ ಹಾಗೆ ಮಾತನಾಡುತ್ತೀರಲ್ಲ? ಎಲ್ಲಿ ಹೋಗುತ್ತೆ ಹಣ? ಬಿದ್ದಿರುತ್ತೆ'' ಎಂದ.

''ಬಿದ್ದಿರಲು ಇದು ನಮ್ಮ ಸ್ವಂತ ಹಣವಲ್ಲ ಯೋಗಿ, ಕಾನೂನಿನ ಪ್ರಕಾರ ನಾವು ಬ್ಯಾಂಕಿನಲ್ಲಿ ಅಕೌಂಟ್ ಪ್ರಾರಂಭಿಸಬೇಕು,'' ಎಂದು ನಿಷ್ಠುರವಾಗಿ ನುಡಿದ ಚಂದ್ರಣ್ಣ.

''ಗೊತ್ತು ಗೊತ್ತು, ಈ ಕಾನೂನುಗಳೆಲ್ಲ ನನಗೂ ಗೊತ್ತು. ಒಂದೆರಡು ತಿಂಗಳು ತಡವಾದರೆ ಏನಾಗುತ್ತದೆ? ಹಣ ಎಲ್ಲಿ ಓಡಿಹೋಗುತ್ತದೆ?''

''ಎಲ್ಲಿಯೂ ಓಡುವುದಿಲ್ಲ ನಿಜ. ಆದರೆ ಹೀಗೆ ಸಾವಿರಾರು ರೂಪಾಯಿಗಳನ್ನು ಹತ್ತಿರ ಇಟ್ಟುಕೊಂಡಿರುವುದು ಉಚಿತವಲ್ಲ. ಹತ್ತಿರ ನಗದು ಹಣ ಇದ್ದರೆ ಖರ್ಚಾಗುವುದು ಸ್ವಾಭಾವಿಕ. ಬ್ಯಾಂಕಿನಲ್ಲಿಟ್ಟರೆ ಭದ್ರವಾಗಿರುತ್ತದೆ. ಕೆಲಸ

ಕ್ಕಾರಂಭಿಸುವ ಸರ್ಟಿಫಿಕೇಟ್ ಸಿಕ್ಕುವವರೆಗೂ ಬ್ಯಾಂಕಿನಿಂದ ಹಣ ತೆಗೆಯಿಸಲು ಬರುವುದಿಲ್ಲ. ಇಂದೇ ಇಟ್ಟುಬಿಡೋಣ ಬ್ಯಾಂಕಿನಲ್ಲಿ.''

''ಬ್ಯಾಂಕಿನಲ್ಲಿಡಲು ಹಣವಾದರೂ ಎಷ್ಟಿದೆ?'' ಎಂದ ಶಿವಯೋಗಿ.

ಚಂದ್ರಣ್ಣ ದಿಗಿಲುಗೊಂಡು ಕೇಳಿದ : ''ಯಾಕೆ? ಏನಾಯಿತು? ಎಷ್ಟು ರೂಪಾಯಿ ಉಳಿದಿವೆ ಈಗ?''

''..........................''

''ಇನ್ನುಳಿದುದೆಲ್ಲ ಏನಾಯಿತು?'' ಎಂದು ಬೆರಗುಗೊಂಡು ಕೇಳಿದ ಚಂದ್ರಣ್ಣ.

''ಈ ಸಾಮಾನುಗಳನ್ನೆಲ್ಲ ಕೊಳ್ಳಲಿಲ್ಲವೆ? ನಾವಿಬ್ಬರೂ ಆ ಊರು ಈ ಊರು ಪ್ರವಾಸ ಮಾಡಲಿಲ್ಲವೆ? ಅದಕ್ಕೆಲ್ಲ ಎರಡು ಸಾವಿರ ಹೋಗಿರಬೇಕು. ಮಿಕ್ಕದ್ದರಲ್ಲಿ ಒಂದು ಸಾವಿರ ರೂಪಾಯಿಗಳನ್ನು ನನ್ನ ಬಾಲ್ಯ ಸ್ನೇಹಿತ ಶಂಕರಮೂರ್ತಿಗೆ ಕೊಟ್ಟಿದ್ದೇನೆ.''

ಚಂದ್ರಣ್ಣ ಕುರ್ಚಿಯ ಮೇಲೆ ಕುಳಿತು ಎರಡೂ ಕೈಗಳನ್ನು ಹಣೆಗಿಟ್ಟುಕೊಂಡು – ''ಯಾರು ಆ ಶಂಕರಮೂರ್ತಿ? ಅವರಿಗೇಕೆ ಕೊಟ್ಟಿರಿ?'' ಎಂದ.

''ಹೇಳಲಿಲ್ಲವೆ ಆಗಲೆ, ಆತ ನನ್ನ ಬಾಲ್ಯಸ್ನೇಹಿತ ಅಂತ? ಇಬ್ಬರೂ ಒಂದೇ ಕಡೆ ಕೂಡಿ ಆಡಿದವರು. ಕೂಡಿ ಕಲಿತವರು ಆತ ಬಡವ. ಮೊನ್ನೆ ತಾನೆ ಮದುವೆಯಾಗಿದೆ. ಕೈಲಿ ಕಾಸಿಲ್ಲ, ಏನಾದರೂ ವ್ಯಾಪಾರ ಮಾಡಬೇಕೆಂದು ಯೋಚಿಸುತ್ತಿದ್ದ ಹಣವಿರಲಿಲ್ಲ, ನನ್ನನ್ನು ಅಂಗಲಾಚಿ ಕೇಳಿದ. ಒಂದು ಸಾವಿರ ಕೊಟ್ಟರೆ ನಾಲ್ಕು ಎಮ್ಮೆಗಳನ್ನು ತೆಗೆದುಕೊಂಡು ಆರೇಳು ತಿಂಗಳಲ್ಲಿ ವಾಪಾಸು ಕೊಡುವುದಾಗಿ ಹೇಳಿದ. ಆತನ ಗೋಳು ನೋಡಲಾರದೆ ಕೊಟ್ಟುಬಿಟ್ಟೆ.''

''ಇದು ಕಂಪನಿಯ ಹಣ ಎನ್ನುವುದನ್ನು ಮರೆತೇಬಿಟ್ಟಿರಾ?''

''ಕಂಪನಿಯ ಹಣವಾದರೇನು? ಅದೆಲ್ಲಿ ಹೋಗುತ್ತದೆ? ನಾವು ಐವತ್ತು ಸಾವಿರ ರೂಪಾಯಿ ಕೂಡಿಸುವ ಹೊತ್ತಿಗೆ ಈ ಹಣ ಬಂದುಬಿಟ್ಟರಾಯಿತಲ್ಲ? ಅಲ್ಲದೆ ಶಂಕರಮೂರ್ತಿ ಬಲು ಒಳ್ಳೆಯವ. ಕೇಳಿದಾಗ ಕೊಟ್ಟುಬಿಡುವ ಮನುಷ್ಯ...''

''ಕಾಗದ ಬರೆಸಿಕೊಂಡು ಕೊಟ್ಟಿದ್ದೀರಾ?''

''ಇಂಥ ಆಪ್ತಸ್ನೇಹಿತನಿಂದ ಕಾಗದ ಬರೆಸಿಕೊಳ್ಳುವುದುಂಟೇ? ನಮ್ಮ ಗೆಳೆತನಕ್ಕೇ ಅವಮಾನ ಅದು.''

ನಾಲ್ಕೈದು ನಿಮಿಷ ಮೂಕನಂತೆ ಕುಳಿತಿದ್ದು ಚಂದ್ರಣ್ಣ – ''ಸರಿ ಇನ್ನುಳಿದುದು ಏನಾಯಿತು?'' ಎಂದ.

''ಮೂರು ಸಾವಿರ ರೂಪಾಯಿ ತುಂಗಭದ್ರಯ್ಯನವರ ಹತ್ತಿರ ಇದೆ.''

''ಅವರಿಗೇಕೆ ಕೊಟ್ಟಿರಿ?''

''ಅವರೂ ನಾನೂ ಜೀವದ ಗೆಳೆಯರು. ನಾವು ಲಿಮಿಟೆಡ್ ಕಂಪನಿ ಮಾಡಬೇಕೆಂಬ ವಿಚಾರ ಹೇಳಿಕೊಟ್ಟವರೂ ಅವರೇ. ಒಂದು ದೃಷ್ಟಿಯಿಂದ ಕಂಪನಿಯ ಸ್ಥಾಪನೆಗೆ ಅವರೇ ಕಾರಣರೆಂದು ಹೇಳಬಹುದು.''

''ಇರಬಹುದು. ಆದರೆ ನಮ್ಮ ಕಂಪನಿಯ ಹಣವನ್ನು ಅವರಿಗೇಕೆ ಕೊಟ್ಟಿರಿ?''

''ಅವರ ಕಂಪನಿ ಸದ್ಯ ಆರ್ಥಿಕ ತೊಂದರೆಯಲ್ಲಿದೆ. ಲಕ್ಷಾಂತರ ರೂಪಾಯಿ ಇನ್‌ವೆಸ್ಟ್ ಮಾಡಿದ್ದಾರೆ. ಈಗ ದೊಡ್ಡದೊಂದು ಕಟ್ಟಡ ಕಟ್ಟಿಸುತ್ತಿದ್ದಾರೆ. ಐವತ್ತು ಸಾವಿರ ರೂಪಾಯಿನ ಕಾಂಟ್ರ್ಯಾಕ್ಟ್ ಅದು. ಇನ್ನು ಆರೇಳು ತಿಂಗಳಿಗೆ ಆ ಹಣ ಬರುತ್ತದೆ. ಅದುವರೆಗೂ ಅವರಿಗೆ ತೊಂದರೆ. ಕಟ್ಟಡದ ಕೆಲಸ ಮಾಡುವ ಕೂಲಿಗಳಿಗೆ ವಾರ ವಾರವೂ ಸಂಬಳ ಕೊಡಬೇಕಾಗುತ್ತೆ. ಅದಕ್ಕೆ ಹಣವಿರಲಿಲ್ಲ, ನನ್ನ ಹತ್ತಿರ ರೂಪಾಯಿ ಇದ್ದುದು ಅವರಿಗೆ ಗೊತ್ತಿತ್ತು. ನಮ್ಮ ವಿಷಯವೆಲ್ಲ ಅವರಿಗೆ ಗೊತ್ತಿದೆ ಅನ್ನಿ ಸುಮ್ಮನೆ ಆ ಹಣವನ್ನು ಟ್ರಂಕಿನಲ್ಲಿಟ್ಟು ಏನು ಮಾಡುತ್ತೀರಿ, ನಮಗಾದರೂ ಉಪಯೋಗವಾಗಲಿ, ನೀವು ಕಮೆನ್ಸ್‌ಮೆಂಟ್ ಸರ್ಟಿಫಿಕೇಟ್ ತೆಗೆದುಕೊಳ್ಳುವ ಕಾಲಕ್ಕೆ ವಾಪಾಸು ಕೊಡುತ್ತೇನೆ–ಎಂದರು. ಇಲ್ಲ ಎಂದು ಹೇಗೆ ಹೇಳುವುದು? ಕೊಟ್ಟುಬಿಟ್ಟೆ''

''ಅದು ಒಂದು ಸಾವಿರ. ಇದು ಮೂರು ಸಾವಿರ. ಯಾರಿಂದಲೂ ಕಾಗದವಿಲ್ಲ, ಪತ್ರವಿಲ್ಲ...''

''ನನಗೆ ಪ್ರಪಂಚದಲ್ಲೆಲ್ಲ ನಿಜವಾದ ಸ್ನೇಹಿತರೆಂದರೆ ಇವರಿಬ್ಬರೇ. ಇಂಥವರಿಂದ ಕಾಗದ ಬರೆಸಿಕೊಳ್ಳುವಷ್ಟು ನೀಚನೇ ನಾನು?''

ಚಂದ್ರಣ್ಣ ಮರುಮಾತನಾಡಲಿಲ್ಲ, ಶಿವಯೋಗಿಯ ಟ್ರಂಕಿನಲ್ಲಿ ಕಾಗದಗಳ ಜೊತೆಗೆ ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದ ನೋಟುಗಳನ್ನು ತೆಗೆದು ಎಣಿಸಿ ನೋಡಿದ್ದು

ಎರಡು ಸಾವಿರದ ಮೇಲೆ ಕೊಂಚ ಚಿಲ್ಲರೆ ರೂಪಾಯಿಗಳಿದ್ದುವು. ಅಂದೇ ಬ್ಯಾಂಕಿಗೆ ಹೋಗಿ ಅವುಗಳನ್ನು ಕಂಪನಿಯ ಲೆಕ್ಕಕ್ಕೆ ಸೇರಿಸಿ ಬಂದ. ತನ್ನ ಎದೆಯ ಮೇಲೆ ಬಿದ್ದಂತಿದ್ದ ಭಾರ ಕೊಂಚ ಹಗುರವಾದ ಹಾಗಾಯಿತು ಚಂದ್ರಣ್ಣನಿಗೆ.

ಆತ ಬ್ಯಾಂಕಿನಿಂದ ಬರುವುದರೊಳಗಾಗಿ ಶಿವಯೋಗಿ ಸ್ನಾನ ತೀರಿಸಿಕೊಂಡು ಮಡಿ ಮಾಡಿದ ಬಟ್ಟೆ ಧರಿಸಿ ಹೊರಕ್ಕೆ ಹೊರಡಲು ಸಿದ್ಧನಾಗಿ ನಿಂತಿದ್ದ.

''ಎಲ್ಲಿಗೆ ಹೊರಟಿರಿ? ಊಟವಾಯಿತೇ?'' ಎಂದ ಚಂದ್ರಣ್ಣ.

''ಅದಕ್ಕೇ ಹೊರಟಿದ್ದೇನೆ. ಇವೊತ್ತು ತುಂಗಭದ್ರಯ್ಯನವರ ಮನೆಯಲ್ಲಿ ಫೀಸ್ಟ್ ನೀವೂ ಬರುತ್ತೀರಾ?'' ಎಂದ ಚಂದ್ರಣ್ಣ.

ಆತನ ಸ್ವಭಾವದ ವೈಚಿತ್ರ್ಯವನ್ನು ಕಂಡಾಗ ಚಂದ್ರಣ್ಣನಿಗೂ ನಗೆ ಬರದಿರಲಿಲ್ಲ. ಆತನೆಂದ : ''ಏನು ವಿಶೇಷ?''

''ಏನೂ ಇಲ್ಲ ಸುಮ್ಮನೆ. ಸೊಗಸಾದ ಸೀಕರಣೆ, ಜೊತೆಗೆ ಹೋಳಿಗೆ - ಬರ್ತಿರಾ?''

''ನನಗೆ ಸಿಹಿ ಅಂದರಾಗದು. ಹೋಗಿಬನ್ನಿ, ಚೆನ್ನಾಗಿ ಹೊಡೆದು ಬನ್ನಿ, ರಾತ್ರಿ ಊಟದ ಅಗತ್ಯವಿರಬಾರದು,'' ಎಂದು ನುಡಿದು ಚಂದ್ರಣ್ಣ ಗಟ್ಟಿಯಾಗಿ ನಗತೊಡಗಿದ. ಶಿವಯೋಗಿಗೆ ಸೊಗಸಾದ ಊಟ ಹಾಕಿಸುತ್ತ ಆತನಿಂದ ಹಣ ಬಿಚ್ಚಿಸಿದ ತುಂಗಭದ್ರಯ್ಯನವರ ಕೌಶಲ್ಯ ಮೆಚ್ಚುವಂಥದಾಗಿತ್ತು!

ಶಿವಯೋಗಿ ನಗುನಗುತ್ತಾ ಹೊರಟುಹೋದ.

## ೧೭

ಗಿರಣಿಯ ರಸ್ತೆಯಲ್ಲಿ ಕಂಪನಿಯ ಕಚೇರಿಯನ್ನು ಹೂಡಿ ಅಲ್ಲಿ ನೆಲಸಿದಂದಿನಿಂದ ಕೊಂಚ ದೂರದಲ್ಲಿಯೆ ಇದ್ದ ಬಾವಿಯೊಂದಕ್ಕೆ ಪ್ರತಿದಿನ ಬೆಳಗಿನ ಜಾವದಲ್ಲಿ ಹೋಗಿ ಸ್ನಾನ ಮಾಡಿ ಬರುವುದು ಚಂದ್ರಣ್ಣನಿಗೆ ಅಭ್ಯಾಸವಾಗಿದ್ದಿತು. ಸ್ನಾನ ಮುಗಿಸಿಕೊಂಡು ಆತ ಮರಳುವಾಗ ಬೆಳಕಾಗುತ್ತಿತ್ತು. ಧರ್ಮಪುರದ ಹವೆ

ವಿಚಿತ್ರ ಹವೆ. ನಡುಹಗಲು ಅಲ್ಲಿ ತುಂಬ ಸೆಕೆಯಾಗುವುದಾದರೂ ಬೆಳಗಿನಲ್ಲಿ ಕಟುವಾದ ಚಳಿ ಬಿದ್ದಿರುವುದುಂಟು. ತಣ್ಣೀರಿನಲ್ಲಿ ಮಿಂದು ಮರಳುವ ಚಂದ್ರಣ್ಣನಿಗೆ ನಡುಕ ಹುಟ್ಟಿಕೊಳ್ಳದಿರುತ್ತಿರಲಿಲ್ಲ. ಆತನ ಕೈಗಳೆರಡೂ ಮಂಜಿನಗಡ್ಡೆಗಳಂತೆ ತಣ್ಣಗಾಗುತ್ತಿದ್ದುವು.

ಅಂಥ ಕಟು ಚಳಿಯಲ್ಲಿ, ಹರಕಲು ಬಟ್ಟೆ ಹಾಕಿಕೊಂಡು ಕೂಲಿಕಾರ ಗಂಡು ಹೆಣ್ಣು ಗಿರಣಿಯ ಕಡೆ ಧಾವಿಸುವ ದೃಶ್ಯವನ್ನಾತ ದಿನವೂ ಕಾಣುತ್ತಿದ್ದ. ಸ್ನಾನದಿಂದ ಮರಳುವಾಗಲೆಲ್ಲ ಆತನಿಗೆ ಈ ಕೂಲಿಕಾರರ ಹಿಂಡು ಎದುರಾಗುತ್ತಿತ್ತು. ಮೊದಲನೆಯ "ಬೋಂಗಾ" ಧ್ವನಿ ತೆಗೆದ ಕೊಂಚ ಹೊತ್ತಿನೊಳಗಾಗಿಯೆ ಆ ರಸ್ತೆಯ ತುಂಬ ಇರುವೆಗಳ ಹಾಗೆ ಸಾಲುಗಟ್ಟಿಕೊಂಡು ಹೊರಡುತ್ತಿತ್ತು ಆ ಜನ. ಬೆಳಗಿನ ಸಕ್ಕರೆನಿದ್ದೆಯನ್ನು ಅರ್ಧಕ್ಕೆ ನಿಲ್ಲಿಸಿ, ಅವಸರದಿಂದೆದ್ದು, ಮುಖ ತೊಳೆದುಕೊಂಡ ಶಾಸ್ತ್ರಮಾಡಿ, ರಾತ್ರಿ ಉಳಿದಿದ್ದ ತಂಗಳನ್ನವನ್ನೊ ಒಣರೊಟ್ಟಿಯನ್ನೊ ಗಬಗಬನೆ ತಿಂದು, ಕೆಂಪಡರಿದ ಕಣ್ಣುಗಳೊಂದಿಗೆ ಗಿರಣಿಯ ಕಡೆಗೆ ಧಾವಿಸುವ ಗಂಡಸರು; ಐದು ಗಂಟೆಗೆ ಹಾಸುಗೆ ಬಿಟ್ಟೆದ್ದು ರೊಟ್ಟಿ ಬೇಯಿಸಿ ಅವುಗಳನ್ನು ಅಂಗೈಯಲ್ಲಿಟ್ಟುಕೊಂಡು ಒಣಖಾರದೊಂದಿಗೆ ತಿನ್ನುತ್ತ ಓಡುತ್ತ ಓಡುತ್ತ ಹೊರಟ ಹೆಂಗಸರು, ಕೊರೆ ಬೀಡಿಗಳನ್ನು ಸೇದುತ್ತ, ಆಗಾಗ ಭೀಕರವಾಗಿ ಕೆಮ್ಮುತ್ತ, ದಾರಿಗುಂಟ ಅಲ್ಲಲ್ಲಿ ಉಗುಳುತ್ತ ಕಾಲುಗಳನ್ನು ಒತ್ತಾಯದಿಂದ ಎತ್ತಿ ಎತ್ತಿ ಇಡುತ್ತ ಬರುವ ಮುದುಕರು, ಬೆಳಗಿನ ಆ ಚಳಿಯಲ್ಲಿ ಶರೀರವೆಲ್ಲ ಥರಥರನೆ ಕಂಪಿಸುತ್ತಿರಲು ಹಲ್ಲುಗಳನ್ನು ಗಟ್ಟಿಯಾಗಿ ಬಿಗಿ ಹಿಡಿದು ಕುಂಟುತ್ತ ನೆಗೆಯುತ್ತ ಸಾಗುವ ಹುಡುಗರು – ಹೊಟ್ಟೆಗಾಗಿ ನಡೆದ ಘೋರ ಸಂಗ್ರಾಮವೊಂದರಲ್ಲಿ ಭಾಗವಹಿಸಲು ಹೊರಟ ದರಿದ್ರ ಕಾಲಾಳುಗಳ ಪಡೆಯಂತೆ ತೋರುತ್ತಿತ್ತು ಆ ಜನ! ಧರ್ಮಪುರಕ್ಕೆ ಬಂದ ಹೊಸದರಲ್ಲಿ ಆ ಜನದ ಭೀಕರ ಗೋಳನ್ನು ಕಂಡು ಅತೀವ ಸಂಕಟವಾಗುತ್ತಿತ್ತು ಚಂದ್ರಣ್ಣನಿಗೆ. ಆತ ಕಾಫಿ ಕುಡಿಯಲು ಕುಳಿತಾಗ, ಊಟ ಮಾಡುತ್ತಿದ್ದಾಗ, ಒಣಖಾರವನ್ನೂ ರೊಟ್ಟಿಯನ್ನೂ ಮುಕ್ಕುತ್ತ ಕೆಲಸಕ್ಕೆ ಧಾವಿಸುವ ಆ ಕೂಲೀ ಮಹಿಳೆಯರ ಕರುಣಾಜನಕ ಮುಖಗಳು ಆತನ ಕಣ್ಣೆದುರು ಬಂದು ನಿಂತಂತಾಗುತ್ತಿತ್ತು. ಕೊಳೆಯಾಗಿದ್ದ ಬಟ್ಟೆಗಳನ್ನು ತೆಗೆದಿಟ್ಟು ಅಗಸನಿಂದ ಬಂದ ಮಡಿಬಟ್ಟೆಗಳನ್ನಾತ ತೊಟ್ಟುಕೊಳ್ಳುವಾಗ, ಸಾಕಷ್ಟು ಬಟ್ಟೆಗಳಿಲ್ಲದೆ ಚಳಿಯಲ್ಲಿ ಗಡಗಡನೆ ನಡುಗುತ್ತ ಹೋಗುವ ಆ ಕೂಲೀ ಹುಡುಗರ ಕಳಾಹೀನ ಮುಖಗಳು ಆತನ ಕಣ್ಣಬೊಂಬೆಗಳೆದುರಿಗೆ ಕಟ್ಟಿದಂತಾಗುತ್ತಿತ್ತು. ಅದರೊಂದಿಗೆ ಹಿಂದೂಸ್ಥಾನದ ಕೋಟ್ಯಾವಧಿ ದಲಿತ ಜನವೆಲ್ಲ ಆತನ ಬಗೆಗಣ್ಣೆದುರಿಗೆ ಬಂದು ನಿಂತು ಮೂಕವಾಗಿ

ರೋದಿಸಿದಂತಾಗುತ್ತಿತ್ತು. ಹೊಟ್ಟೆಗಿಲ್ಲದೆ ಬಟ್ಟೆಗಿಲ್ಲದೆ ಈ ಜನವೆಲ್ಲ ಇಷ್ಟು ಸಂಕಟ ಪಡುತ್ತಿರುವಾಗ ತನ್ನಂಥವರು ಮೂರು ಹೊತ್ತು ಕಾಫಿ ಕುಡಿಯುವುದು, ಎರಡು ಹೊತ್ತು ಹೊಟ್ಟೆ ತುಂಬ ಊಟ ಮಾಡುವುದು, ಎರಡು ಮೂರು ದಿನಗಳಿಗೊಮ್ಮೆ ಮಡಿಬಟ್ಟೆ ಹಾಕಿಕೊಳ್ಳುವುದು ನಾಚಿಕೆಗೇಡಿನ ಕೆಲಸವೆಂದು ಆತನಿಗನ್ನಿಸುತ್ತಿತ್ತು.

ಹಾಗೆ ಆತನಿಗನ್ನಿಸಿದ್ದುದು ಮಾತ್ರ ಅದೇ ಮೊದಲ ಸಲವೇನೂ ಅಲ್ಲ - ಮೊದಲಿನಿಂದಲೂ ಆತ ಭಾವನಾವಶ ಜೀವಿ. ಪರರ ತೊಂದರೆಗಳನ್ನು ಮರುಗುವ ಸ್ವಭಾವ ಆತನದು. ಅದರಲ್ಲೂ ಬಡಜೀವಿಗಳ ಕಷ್ಟಕಾರ್ಪಣ್ಯಗಳನ್ನು ದುಗುಡ ದುಮ್ಮಾನಗಳನ್ನು ಕಂಡಾಗ ಆತನ ಕರುಳು ಕುದಿಯುವುದು. ಬಡತನದ ಸಂಕಟಗಳ ಅನುಭವ ಆತನಿಗೆ ಸಾಕಷ್ಟು ಇದ್ದದ್ದೂ ಅದಕ್ಕೊಂದು ಕಾರಣವಾಗಿದ್ದೀತು. ಚಿಕ್ಕ ವಯಸ್ಸಿನಲ್ಲಿಯೆ ತಂದೆತಾಯಿಗಳನ್ನು ಕಳೆದುಕೊಂಡು ಆತ ಅನಾಥನಾಗಿದ್ದುದೂ ಇನ್ನೊಂದು ಕಾರಣವಾಗಿದ್ದೀತು. ಅಂತೂ ಮೊದಲಿನಿಂದಲೇ ಆತನಿಗೆ ಬಡವರೆಂದರೆ, ಅನಾಥರೆಂದರೆ ಬಹಳ ಕನಿಕರ, ಆತ್ಮೀಯತೆ. ದೇಶದ ಬಹುಸಂಖ್ಯಾತ ಜನತೆಯ ಈ ದೈನ್ಯವನ್ನು, ದಾರಿದ್ರ್ಯವನ್ನು ದೂರಗೊಳಿಸಲು ತಾನು ಏನನ್ನಾದರೂ ಮಾಡಲೇ ಬೇಕೆಂದು ಆತ ಎಂದೋ ನಿರ್ಧರಿಸಿದ್ದ. ಬರವಣಿಗೆ ಆತನನ್ನು ಒಲಿದಾಗ ಇದೇ ಕೆಲಸಕ್ಕಾಗಿ ಅದನ್ನು ಉಪಯೋಗಿಸುತ್ತ ಬಂದಿದ್ದ. ಆದರೂ ಆತನಿಗೆ ಒಳಗೊಳಗೆ ಅಸಮಾಧಾನ. ತನ್ನಿಂದ ಹೆಚ್ಚಿನ ಕೆಲಸವೇನೂ ಆಗದಂತಿದೆಯಲ್ಲಾ ಎಂಬ ಅತೃಪ್ತಿ.

ಆ ಕೂಲಿಕಾರರ ಕಾರವಾನ್ ಕಂಡಾಗಲೆಲ್ಲ ಆ ಅತೃಪ್ತಿ ಮತ್ತೆ ಮತ್ತೆ ಆತನ ಎದೆಯಲ್ಲಿ ತಲೆಯೆತ್ತುವುದು, ಆತನನ್ನು ವಿಚಾರಗಳಿಗೆ ತೊಡಗಿಸುವುದು. ಇಷ್ಟೊಂದು ಮಾನವಪ್ರಾಣಿಗಳು ಮನುಷ್ಯತ್ವವನ್ನು ಕಳೆದುಕೊಂಡು ಕೇವಲ ಹೊಟ್ಟೆಗಾಗಿ ಬೆಳಗಿನಿಂದ ರಾತ್ರಿಯವರೆಗೆ ದುಡಿಯುತ್ತಿವೆ.. ಈ ದುಡಿತದ ಫಲವಾಗಿ ಅವರಿಗೆ ದೊರೆಯುವುದೇನು? ಹೊಟ್ಟೆ ತುಂಬ ಅನ್ನವೂ ಇಲ್ಲ, ಮೈತುಂಬ ಬಟ್ಟೆಯೂ ಇಲ್ಲ. ಅರೆ ಹೊಟ್ಟೆಯಿಂದ ಬರಿ ಮೈಯಿಂದ ದುಡಿದು ಗಿರಣಿಯ ಲಾಭ ಮಾಡಿ ಕೊಡುವವರು ಇವರು; ರೇಷ್ಮೆಯ ಬಟ್ಟೆಗಳಲ್ಲಿ ಹೊರಳಾಡುತ್ತ, ಒಂದು ಕಡ್ಡಿಯನ್ನೂ ಅಲುಗಾಡಿಸುವ ಗೋಜಿಗೆ ಬೀಳದೆ ಇವರ ದುಡಿತದ ಫಲದಲ್ಲಿ ಮುಕ್ಕಾಲು ಪಾಲನ್ನು ಅನುಭೋಗಿಸುವಾತ ಆ ಸೆಟ್ಟಿ ಇಂಥ ಘೋರ ಅನ್ಯಾಯವಿನ್ನೊಂದಿರಬಹುದೇ? ಈ ಅನ್ಯಾಯವನ್ನು ಕಂಡೂ ಕಂಡೂ ತನ್ನಂಥವರು ಸುಮ್ಮನೆ ಕೈಕಟ್ಟಿಕೊಂಡು ಕುಳಿತಿರುವುದುಚಿತವೆ? ಈ ಶ್ರಮಜೀವಿಗಳ ಶೋಷಣೆ ನಡೆಸಿರುವ ಸ್ವಾರ್ಥಿ

ಬಂಡವಾಳಗಾರರ ವಿರುದ್ಧ ದನಿ ಎತ್ತುವುದು ತನ್ನ ಕರ್ತವ್ಯವಲ್ಲವೆ...?

–ಹೌದು; ಅದು ತನ್ನ ಕರ್ತವ್ಯವೆನ್ನುವುದರಲ್ಲಿ ತನಗಾವ ಸಂದೇಹವೂ ಇರಲಿಲ್ಲ. ಅದೇ ದಾರಿಯಲ್ಲಿ ತಾನು ಹೊರಟಿದ್ದೆ. ಆದರೆ... ತೃಪ್ತಿಯಿರಲಿಲ್ಲ ಆತನಿಗೆ; ಕೊಂಚವೂ ತೃಪ್ತಿಯಿರಲಿಲ್ಲ.

ಕಂಪನಿಯ ಕೆಲಸಕ್ಕಾಗಿ ಪ್ರವಾಸ ಮಾಡುವಾಗ, ರಾತ್ರಿ ಕಾಲದಲ್ಲಿ ರೈಲಿನಲ್ಲಿ ಕುಳಿತು ಒಬ್ಬನೇ ಹೊರಟಿದ್ದಾಗ ಈ ಅತೃಪ್ತಿಯೇ ಮತ್ತೆ ಆತನ ಹೃದಯವನ್ನು ಕೆರಳಿಸುವುದು. ತಾನು ಈ ಲಿಮಿಟೆಡ್ ಕಂಪನಿಗೆ ಸೇರಿಕೊಂಡುದು, ಈ ವ್ಯಾಪಾರಸ್ಥರ ಜೊತೆಗೆ, ಈ ಬಂಡವಾಳಗಾರರ ಜೊತೆಗೆ ವ್ಯವಹಾರಕ್ಕೆ ನಿಂತುದು ಉಚಿತವಾದುದೇ? ಈ ದಾರಿಯಲ್ಲಿ ಹೊರಟರೆ ತನ್ನ ಕರ್ತವ್ಯ ನೆರವೇರಲು ಸಾಧ್ಯವೆ? ಎಂಬ ಪ್ರಶ್ನೆಗಳು ಎದ್ದು ನಿಲ್ಲುವವು. ಅಂಥ ಸಂದರ್ಭಗಳೆಲ್ಲ ಆತನ ಚಿತ್ತ ಅಶಾಂತತೆಯ ಬಿರುಗಾಳಿಗೆ ಸಿಲುಕಿ ಹೊಯ್ದಾಡುವುದು.

ಹೀಗೆಯೆ ಕಳವಳದಲ್ಲಿ ಸಿಲುಕಿ ಆತ ಒಂದು ರಾತ್ರಿ ಎಂಟು ಗಂಟೆಯಲ್ಲಿ ಹೊರಟಿದ್ದಾಗ ಆಕಸ್ಮಾತ್ತಾಗಿ ಶಂಕರ ಆತನಿಗೆದುರಾದ.

''ಹಲೋ! ನೀವು!'' ಎಂದ ಶಂಕರ.

''ಹಲೋ!'' ಎಂದು ಚಂದ್ರಣ್ಣ ತಡೆದು ನಿಂತು ಶಂಕರನನ್ನು ದಿಟ್ಟಿಸಿ ನೋಡಿದ.. ಗಿರಣಿಯ ಕೆಲಸಗಾರರು ತೊಡುವ ಕಪ್ಪು ಬಟ್ಟೆಯ ಅಂಗಿ ಚಲ್ಲಣಗಳಲ್ಲಿ ಶಂಕರನ ಮೂರ್ತಿ ಕೊಂಚ ವಿಚಿತ್ರವಾಗಿಯೆ ತೋರುತ್ತಿತ್ತು. ತಲೆಗೂದಲು ಕೆದರಿ ಚಲ್ಲಾಪಿಲ್ಲಿಯಾಗಿತ್ತು.

''ಕೆಲಸ ಮುಗಿಯಿತೇ?''

''ಹೌದು, ಗಿರಣಿಯಿಂದಲೇ ಬರುತ್ತಿದ್ದೇನೆ. ಇಷ್ಟು ದಿನಗಳ ತನಕ ಕಾಣಲೇ ಇಲ್ಲವಲ್ಲ?''

''ದಿನವೂ ಬೆಳಗ್ಗೆ ನಾನು ಗಿರಣಿಯ ರಸ್ತೆಯಲ್ಲೆ ಹಾದು ಬರುತ್ತಿರುತ್ತೇನೆ. ನೀವು ಒಂದು ಸಲವೂ ಕಾಣಿಸಲಿಲ್ಲವಲ್ಲ?''

''ನಾನು ಬೇರೆ ದಾರಿಯಿಂದ ಬರುತ್ತಿರುತ್ತೇನೆ. ಆದರಿಂದಾಗಿ ಭೆಟ್ಟಿಯಾಗಿರಲಿಕ್ಕಿಲ್ಲ. ಏನು ವಿಶೇಷ? ಎಲ್ಲಿಗೆ ಬಂತು ಕಂಪನಿ? ಪತ್ರಿಕೆ ಎಂದು ಹೊರಡುತ್ತೆ?''

''ಇಷ್ಟರಲ್ಲೇ ಹೊರಡಬೇಕು. ಎಲ್ಲಿಗೆ, ಮನೆಗೆ ಹೊರಟಿರಾ?''

''ಈಗಲೇ ಮನೆಗೆ ಹೋಗಿ ಏನು ಮಾಡುವುದು? ಸಂಘದ ಕಚೇರಿಯ ಕಡೆ ಹೊರಟಿದ್ದೆ. ಆಕಸ್ಮಾತ್ತಾಗಿ ಭೆಟ್ಟಿಯಾದಿರಿ. ಬನ್ನಿ, ಕೊಂಚ ದೂರ ಬಯಲಿನ ಕಡೆ ಹೋಗಿ ಬರೋಣವೇನು?''

''ನಾನೂ ತಿರುಗಾಡಲೆಂದೇ ಹೊರಟಿದ್ದೆ. ಬನ್ನಿ ಹೋಗೋಣ.''

ಕಾಲೇಜು ಕಟ್ಟಡವನ್ನು ಹಿಂದೆ ಹಾಕಿ ಅವರಿಬ್ಬರೂ ಊರ ಹೊರಗಿನ ಹೊಲಗಳ ಬಳಿ ಬಂದು ಕುಳಿತುಕೊಂಡರು.

''ಎರಡು ತಿಂಗಳಲ್ಲಿ ಬದಲಾಯಿಸಿಬಿಟ್ಟಿದ್ದೀರಲ್ಲ ಶಂಕರ್?''

ಶಂಕರ ಮೆಲ್ಲಗೆ ನಗುತ್ತಾ –''ಆಃ? ಬದಲಾಯಿಸಿದ್ದೇನೆಯೆ? ಹೇಗೆ?'' ಎಂದು ಕೇಳಿದ.

''ಅಂದು ರಾತ್ರಿ ರೈಲಿನಲ್ಲಿ ಕಂಡಾಗ ತೆಳ್ಳಗಿದ್ದ ಹಾಗಿತ್ತು. ಈಗ ಕೊಂಚ ಮೈತುಂಬಿಕೊಂಡಿರುವಂತಿದೆ. ಈ ಗಿರಣಿಯ ಕೆಲಸದ ಪರಿಣಾಮವೋ ಏನು ಇದು?'' ಎಂದು ನುಡಿದು ನಕ್ಕ ಚಂದ್ರಣ್ಣ.

''ಗಿರಣಿಯ ಕೆಲಸ ಅಂದರೆ ಮದುವೆ ಮನೆಯ ಕೆಲಸವಲ್ಲ ಚಂದ್ರಣ್ಣ. ಅರಳೆಯ ಕಣ, ಧೂಳು, ಎಣ್ಣೆಯ ಕಮಟು ವಾಸನೆ ಬೆರೆತ ಅತ್ಯುಷ್ಣವಾದ ಹವೆಯಲ್ಲಿ, ಕಿವಿಗಳನ್ನು ಕೊರೆಯುವ ಹಾಗೆ ಕಠೋರ ಸದ್ದು ಮಾಡುತ್ತ ತಿರುಗುವ ಯಂತ್ರಗಳ ಬಳಿ ನಿಂತು ಹತ್ತು ಗಂಟೆಯ ಕಾಲ ಕೆಲಸ ಮಾಡುವ ಮನುಷ್ಯನ ಮೈ ತುಂಬಿಕೊಳ್ಳುವ ಮಾತು ಹಾಗಿರಲಿ, ತುಂಬಿರುವ ಮೈಯೂ ತೆರವಾಗುತ್ತದೆ. ನಾನಿನ್ನೂ ಯುವಕನಾದುದರಿಂದ ಗಟ್ಟಿಯಾಗಿರಬಹುದೇನೊ. ಇನ್ನು ಒಂದೆರಡು ವರ್ಷ ಹೀಗೇ ದುಡಿದರೆ ತಿಳಿಯುತ್ತೆ ಈ ಗಟ್ಟಿತನ!''

''ಹಾಗಾದರೆ ಇಷ್ಟು ದಪ್ಪ ಹೇಗಾದಿರಿ? ವ್ಯಾಯಾಮ ಶಾಲೆಗೆ ಸೇರಿಕೊಂಡಿಲ್ಲವಷ್ಟೆ?''

''ದಿನದ ಇಪ್ಪತ್ನಾಲ್ಕು ತಾಸುಗಳೇ ಸಾಲುವುದಿಲ್ಲ ನಮ್ಮ ಕೆಲಸಕ್ಕೆ. ಇನ್ನು ವ್ಯಾಯಾಮಕ್ಕೆ ಎಲ್ಲಿಯ ಸಮಯ ಮಹಾರಾಯ! ಅಂಥದೇನೂ ಇಲ್ಲ. ಇಲ್ಲಿಯ ಹವೆ ನನಗೆ ಚೆನ್ನಾಗಿ ಒಗ್ಗುತ್ತದೆ. ಕೇರಳದ ಹವೆ ಇಲ್ಲಿಯ ಹವೆ ಎಲ್ಲಾ ಒಂದೆ...''

''ಕೇರಳದಲ್ಲೂ ಇದ್ದಿರಾ ನೀವು?''

''ನಾಲ್ಕೈದು ತಿಂಗಳುಗಳ ಕಾಲ ಅಲ್ಲಿ ಕೆಲಸ ಮಾಡಬೇಕಾಗಿತ್ತು.''

''ಅಲ್ಲಿನ ಜನರೆಲ್ಲ ನಿಮ್ಮ ಹಾಗೆ ಆರೋಗ್ಯವಾಗಿ ಮೈತುಂಬಿಕೊಂಡಿರುವರೇ?'' ಎಂದು ಕುತೂಹಲದಿಂದ ಕೇಳಿದ ಚಂದ್ರಣ್ಣ.

''ಎಲ್ಲಿಯ ಆರೋಗ್ಯ ಚಂದ್ರಣ್ಣ? ಸರಿಯಾಗಿ ಎರಡು ಹೊತ್ತು ಹೊಟ್ಟೆಗೆ ಸಿಕ್ಕಿದರೆ ತಾನೆ ಆರೋಗ್ಯದ ಮಾತು? ಕೇರಳದ ಜನತೆಗಿರುವಂಥ ಘೋರ ದಾರಿದ್ರ್ಯ ಹಿಂದೂಸ್ಥಾನದ ಬೇರಾವ ಪ್ರಾಂತದ ಜನಕ್ಕೂ ಇರಲಾರದು.''

''ಅವರ ಮುಖ್ಯ ಉದ್ಯೋಗ ಬೇಸಾಯವಷ್ಟೆ?''

''ಹೌದು. ಅದೂ ಹರಕುಮುರುಕು. ಸಾವಿರದಲ್ಲಿ ಒಬ್ಬ ರೈತನಿಗೂ ಸ್ವಂತದ ತುಂಡು ಹೊಲವಿಲ್ಲ. ಎಲ್ಲವೂ ಜಮೀನುದಾರರ ಕೈಯಲ್ಲಿ. ಅವರು ಕೇಳಿದಷ್ಟು ಗೇಣಿಗೆ ಜಮೀನು ತೆಗೆದುಕೊಂಡು ಈ ಜನ ಹಗಲಿರುಳೂ ದುಡಿಯುತ್ತಾರೆ. ಆದರೂ ಸಾಕಷ್ಟು ಗಂಜಿ ಸಿಕ್ಕುವುದಿಲ್ಲ...''

''ಕೇರಳದಲ್ಲಿ ಇಂಥ ದಾರಿದ್ರ್ಯವಿದೆಯೆಂತಲೇ ಅಲ್ಲಿ ನಿಮ್ಮ ಪಾರ್ಟಿ ಬಲವಾಗಿರಬೇಕು!''

''ಹೌದು. ಆ ವಿಷಯವೂ ನಿಜವೆ. ಎಲ್ಲಿ ಭೀಕರ ದಾರಿದ್ರ್ಯ ಇದೆಯೊ, ಎಲ್ಲಿ ಜನ ಹೊಟ್ಟೆಗಿಲ್ಲದೆ ಸಾಯುತ್ತಿದೆಯೊ, ಎಲ್ಲಿ ಶೋಷಕರ ತಾಂಡವನೃತ್ಯ ನಡೆದಿದೆಯೊ ಅಲ್ಲಿ ನಮ್ಮ ಪಾರ್ಟಿ ಬಲವಾಗಿಯೇ ಇರುತ್ತೆ. ಇರಲೇಬೇಕು. ನಾವು ಸಹ ಅವರಿಂದ ದೂರವಿದ್ದುಬಿಟ್ಟರೆ ಆ ಜನಕ್ಕೆ ಆಸೆ ಭರವಸೆಗಳನ್ನು ನೀಡುವವರಾದರೂ ಯಾರು? ಶೋಷಕರ ವಿರುದ್ಧವಾಗಿ ದೇಶದಲ್ಲೆಲ್ಲ ನಡೆದಿರುವ ಈ ಮಹಾ ಹೋರಾಟದಲ್ಲಿ ಅವರನ್ನು ಸೈನಿಕರನ್ನಾಗಿ ಸೇರಿಸುವವರಾರು? ಕಾಂಗ್ರೆಸ್ಸಿನವರಿಗೆ ಅದು ಇಷ್ಟವಿಲ್ಲ. ಸ್ವಾತಂತ್ರ್ಯ ಬಂತು, ಅದರೊಂದಿಗೆ ಅವರ ಕೆಲಸ ಮುಗಿಯಿತು. ಈಗ ಸರಕಾರವೂ ಅವರ ಕೈಯಲ್ಲೇ ಇದೆ. ಜಮೀನುದಾರರ ವಿರುದ್ಧ ಬಂಡವಾಳಗಾರರ ವಿರುದ್ಧ ದನಿ ಎತ್ತುವ ಧೈರ್ಯ ಅವರಿಗಿಲ್ಲ. ಏಕೆಂದರೆ ಸಂಸ್ಥೆಯ ಸೂತ್ರಗಳಿರುವುದೂ ಈ ಶೋಷಕರ ಕೈಯಲ್ಲೇ. ಇನ್ನು ಈ ಬಡಜನರ ಪರವಾಗಿ ಯಾರು ಎದ್ದು ನಿಲ್ಲಬೇಕು? ನಮ್ಮ ಪಾರ್ಟಿಯೆ ಅಲ್ಲವೆ?''

''ಸರಿಯಪ್ಪ. ಆದರೆ ನಿಮ್ಮದೊಂದೇ ಒಂದು ಅಂತ ಹೇಳುವುದು ಅನುಚಿತವಾದೀತು. ಸೋಶಲಿಸ್ಟ್ ಪಾರ್ಟಿಯೂ ಇಲ್ಲವೆ?''

ಶಂಕರನ ಧ್ವನಿ ಬಿರುಸಾಯಿತು. ಆತನೆಂದ : "ಸೋಶಲಿಸ್ಟ್ ಪಾರ್ಟಿ! ಸೋಶಲಿಸಂನ ಮರ್ಯಾದೆ ತೆಗೆಯುವ ಬೃಹನ್ನಳೆಗಳ ಪಾರ್ಟಿ ಅದು. ಮಾರ್ಕ್ಸ್ ಸಿದ್ಧಾಂತಗಳನ್ನೆಲ್ಲ ಗಾಳಿಗೆ ತೂರಿ ಬಂಡವಾಳಶಾಹಿಯೊಂದಿಗೆ ಒಪ್ಪಂದ ಮಾಡಿಕೊಂಡು ಸ್ವಾರ್ಥ ಸಾಧಿಸಿಕೊಳ್ಳುವ ಸಂಧಿ ಸಾಧಕರ ಪಾರ್ಟಿ ಅದು. ಎಲ್ಲ ದೇಶಗಳಲ್ಲೂ ಹೀಗೇ ಈ ಜನ. ಪ್ರಜಾಸತ್ತಾತ್ಮಕ ಸಮಾಜವಾದ ಎಂಬ ದೊಡ್ಡ ಹೆಸರು ಹೇಳುತ್ತ, ಕಮ್ಯೂನಿಸ್ಟ್ ಪಾರ್ಟಿ ಮಾಡುವ ಕ್ರಾಂತಿ ಕಾರ್ಯಕ್ಕೆಲ್ಲ ಹಿಂದೆ ನಿಂತು ಕೊಡಲಿಪೆಟ್ಟು ಹಾಕುತ್ತಿರುತ್ತಾರೆ. ಸೋಶಲಿಸ್ಟರಂತೆ, ಸೋಶಲಿಸ್ಟರು! ದ್ರೋಹಿಗಳು!"

ಶಂಕರ ಇಷ್ಟೇಕೆ ಉದ್ವೇಗಗೊಂಡನೆಂಬುದು ಚಂದ್ರಣ್ಣನಿಗೆ ಅರ್ಥವಾಗಲಿಲ್ಲ. ಕಮ್ಯೂನಿಸ್ಟರಿಗೆ ಸೋಶಲಿಸ್ಟರು ಎದುರಾಳಿಗಳಾಗಿರಬಹುದು, ರಾಜಕೀಯ ರಂಗದಲ್ಲಿ ಪರಸ್ಪರರು ಸ್ಪರ್ಧೆಯಿಂದ ಕೆಲಸ ಮಾಡಬೇಕಾಗಿ ಬಂದಿರಬಹುದು; ಸ್ಪರ್ಧೆ ಅನಿವಾರ್ಯವಾದುದು ರಾಜಕೀಯದಲ್ಲಿ, ಪಕ್ಷಗಳಿರಬೇಕಾದುದೂ ಅಗತ್ಯವೇ. ದೇಶಕ್ಕೆಲ್ಲ ಒಂದೇ ಒಂದು ಸಂಸ್ಥೆಯಿರಬೇಕೆಂದರೆ ಅದು ಸಲ್ಲದ ಮಾತು. ಸರ್ವಾಧಿ ಕಾರತ್ವದ ಮಾತು. ಕಾಂಗ್ರೆಸ್ಸು ಮಾಡುತ್ತಿರುವ ತಪ್ಪು ಇದೇ. ದೇಶವೆಂದರೆ ಕಾಂಗ್ರೆಸ್, ಕಾಂಗ್ರೆಸ್ ಎಂದರೆ ದೇಶ ಎಂದು ಸಾರುತ್ತಾ, ಕಾಂಗ್ರೆಸ್ಸೊಂದೆ ಅಧಿಕಾರದಲ್ಲಿರಲು ಅರ್ಹವಾದುದು, ಮಿಕ್ಕ ಪಕ್ಷಗಳೆಲ್ಲ ದೇಶದ್ರೋಹಿಗಳು, ಜನತಾ ದ್ರೋಹಿಗಳು - ಎಂದು ಘೋಷಿಸುತ್ತಿದೆ. ಕೈಗೆ ಬಂದಿರುವ ಅಧಿಕಾರವನ್ನು ಕೊನೆಯವರೆಗೂ ಉಳಿಸಿ ಕೊಳ್ಳಬೇಕೆಂಬ ದುರಾಸೆಯಿಂದ ಕಾಂಗ್ರೆಸ್ಸಿನವರು ಮಾಡುತ್ತಿರುವಂಥ ತಪ್ಪನ್ನೇ ಕಮ್ಯೂನಿಸ್ಟರೂ ಮಾಡಿದರೆ ಹೇಗೆ? - ಎಂದುಕೊಂಡ ಚಂದ್ರಣ್ಣ.

"ಸೋಶಲಿಸ್ಟರ ಬಗ್ಗೆ ನೀವು ಹೇಳುವುದನ್ನು ನಾ ಒಪ್ಪಲಾರೆ ಶಂಕರ್. ಅವರಲ್ಲೂ ನಿಷ್ಠಾವಂತ ಕಾರ್ಯಕರ್ತರಿದ್ದಾರೆ. ಬಡವರ ರಾಜ್ಯ ಕಟ್ಟಲೆಂದು ನಿಸ್ವಾರ್ಥ ದಿಂದ ದುಡಿಯುವವರಿದ್ದಾರೆ..."

"ಇರಬಹುದು!" ಎಂದು ಉಪಾಹಾರದ ದನಿಯಲ್ಲಿ ನುಡಿದು ಶಂಕರನೆಂದ : "ಹಾಳಾಗಿ ಹೋಗಲೇಳಿ. ಅದರ ವಿಷಯ ಚರ್ಚಿಸಲು ನನಗೆ ಕೊಂಚವೂ ಇಷ್ಟವಿಲ್ಲ. ಅಂಥವರ ಮಾತು ಬಂದರೆ ನನಗೆ ತಾಳ್ಮೆಯಿರುವುದಿಲ್ಲ."

ಕೆಲಹೊತ್ತು ಇಬ್ಬರೂ ಮೌನವಾಗಿ ಕುಳಿತುಕೊಂಡಿದ್ದರು. ಅವರು ಕುಳಿತಿದ್ದ ಸ್ಥಳದ ಹಿಂದೆ ಇದ್ದ ಮರಡಿಯ ಮೇಲಿನಿಂದ ತಣ್ಣನೆಯ ಗಾಳಿ ಬೀಸುತ್ತಿತ್ತು. ಕೃಷ್ಣಪಕ್ಷದ ರಾತ್ರಿಯಾದುದರಿಂದ ಆಕಾಶದಲ್ಲಿ ಚಂದ್ರನಿರಲಿಲ್ಲ. ತಾರೆಗಳು ಪ್ರಖರವಾಗಿ

ಹೊಳೆಯುತ್ತಿದ್ದುವು. ಎದುರಿಗೆ ಪಸರಿಸಿದ್ದ ಧರ್ಮಪುರದ ವಿದ್ಯುದ್ದೀಪಗಳ ಹೊಳಪು ಕಣ್ಣು ಕೋರೈಸುತ್ತಿತ್ತು.

ಕೊಂಚಕಾಲ ಮೌನವಾಗಿ ಕುಳಿತಿದ್ದು ಚಂದ್ರಣ್ಣನೆಂದ :

''ನಿಮ್ಮಂಥ ಬುದ್ಧಿಜೀವಿಗಳು ಗಿರಣಿಯಲ್ಲಿ ಕೂಲಿಕಾರರಾಗಿ ದುಡಿಯುವುದೆಂದರೆ ಆಶ್ಚರ್ಯದ ವಿಷಯವಲ್ಲವೆ ಶಂಕರ್?''

''ಕೆಲವರಿಗೆ ಅದು ಆಶ್ಚರ್ಯವೇ. ಆದರೆ ನನಗಂತೂ ಇದರಲ್ಲಿ ಯಾವ ಆಶ್ಚರ್ಯವೂ ತೋರುವುದಿಲ್ಲ. ಕೂಲಿಕಾರರಿಗಾಗಿ ಕೆಲಸ ಮಾಡುವ ನಾವು ಅವರು ಗಿರಣಿಯಲ್ಲಿ ಅನುಭವಿಸುವ ನರಕಯಾತನೆಯೇನೆಂಬುದನ್ನು ಸ್ವಾನುಭವದಿಂದ ತಿಳಿದಿರಬೇಕು. ಅಂತೆಯೆ ನಾನೀ ಕೆಲಸಕ್ಕೆ ನಿಂತದ್ದು. ಈ ಕೂಲಿಕಾರರೆಂದರೆ ಯಾರಿಗೂ ಬೇಡವಾದ ಜೀವಿಗಳಂತಿದಾರೆ ಚಂದ್ರಣ್ಣ. ಇವರ ದುಡಿತ, ಇವರ ಬೆವರು, ಇವರ ರಕ್ತ ಮಾತ್ರ ಬೇಕು ಆ ಬಂಡವಾಳಗಾರರಿಗೆ. ಇವರು ಬದುಕಿರುವರೇ, ಸತ್ತಿರುವರೇ, ಇವರಿಗೆ ವಾಸಿಸಲು ಸರಿಯಾದ ಮನೆಗಳಿವೆಯೆ ಇಲ್ಲವೆ, ಇರುವ ಮನೆಗಳು ಎಂಥವಿವೆ, ಅವುಗಳ ಪರಿಸ್ಥಿತಿ ಹೇಗಿದೆ, ಅಲ್ಲಿ ಗಾಳಿ ಆಡುವುದೇ, ಬೆಳಕು ಬರುವುದೇ ಅವರ ಓಣಿಯಲ್ಲಿ ನಲ್ಲಿಯ ನೀರಿನ ಸೌಕರ್ಯವುಂಟೇ, ದೀಪದ ಅನುಕೂಲತೆಯುಂಟೇ ಎಂಬ ಯೋಚನೆಗಳು ಆ ಬಂಡವಾಳಗಾರರಿಗಿರುವುದಿಲ್ಲ. ದಿನವಿಡೀ ಆ ಗಿರಣಿಯ ಕುಲುಮೆಯಲ್ಲಿ ದೇಹ ಕರಗಿಸಿ ಬಂದ ಈ ಬಡಜೀವಿಗಳು ಮನೆಗೆ ಬರುತ್ತಲೂ ಇದ್ದುಬಿದ್ದುದನ್ನು ತಿಂದು ನಿದ್ದೆ ಹೋಗುತ್ತವೆ. ತಮಗೆ ಬೆಳಕು ಬೇಕು, ಗಾಳಿ ಬೇಕು ಎಂಬ ಕಲ್ಪನೆಯೂ ಇವರಿಗಿದ್ದಂತಿಲ್ಲ. ತಾವೂ ಮನುಷ್ಯರು, ಇನ್ನಿತರರ ಹಾಗೆ ಸುಖದಿಂದ ವಾಸಿಸುವ ಅಧಿಕಾರ ತಮಗೂ ಇದೆಯೆಂಬುದನ್ನೇ ಇವರು ಮರೆತುಬಿಟ್ಟಹಾಗಿದೆ – ದಿನವಿಡೀ ಅಗಸನ ಬಟ್ಟೆಗಳ ಮೂಟೆ ಹೊತ್ತು ರಾತ್ರಿಯಾಗುತ್ತಲೂ ಹಾಳು ಗೋಡೆಯ ಬಳಿ ಬಿದ್ದುಕೊಳ್ಳುವ ಕತ್ತೆಗಳ ಹಾಗೆ ಇವರ ಬಾಳು ಹೀನವಾಗಿದೆ. ಇವರ ಮನುಷ್ಯತ್ವವನ್ನೇ ಮರೆಯಿಸಿಬಿಟ್ಟಿದ್ದಾರೆ ಆ ಶೋಷಕರು. ಇವರನ್ನು ಪಶುಗಳ ಸ್ಥಿತಿಗೆ ತಂದಿದಾರೆ. ಇದಕ್ಕಿಂತ ಹೆಚ್ಚಿನ ಕ್ರೂರಕೃತ್ಯವಿನ್ನೇನಿದ್ದೀತು? ಮನುಷ್ಯನೇ ಮನುಷ್ಯನನ್ನು ಈ ಗತಿಗೀಡುಮಾಡುವುದೆಂದರೆ...''

ಕೊಂಚ ಹೊತ್ತು ತಡೆದುನಿಂತು ಆಕಾಶದಲ್ಲಿ ಮಿನುಗುತ್ತಿದ್ದ ತಾರೆಗಳನ್ನು ಶೂನ್ಯವಾಗಿ ದಿಟ್ಟಿಸುತ್ತ ಶಂಕರನೆಂದ :

''ಮನುಷ್ಯ ಮನುಷ್ಯನ ಮೇಲೆ ನಡೆಸಿರುವ ಈ ಅನ್ಯಾಯವನ್ನು ಕಂಡಾಗಲೆಲ್ಲ

ವರ್ಡ್ಸ್‌ವರ್ತ್ ಕವಿಯ ಕವಿತೆಯೊಂದು ನನ್ನ ನೆನಪಿಗೆ ಬರುತ್ತೆ. ಇಂಥ ವಿಚಾರ ಕವಿಯ ಹೃದಯದಲ್ಲಿ ತುಂಬಿ ಬಂದಾಗಲೇ ಆತ ಅದನ್ನು ಬರೆದಿರಬೇಕೆಂದು ಅನ್ನಿಸುತ್ತೆ. ವರ್ಡ್ಸ್‌ವರ್ತ್ ನೀವು ಓದಿರಬೇಕಲ್ಲ?''

''ಓದಿದ್ದೇನೆ ಅಲ್ಪಸ್ವಲ್ಪ''

''ಆತನ ಬೇರೆ ಕವಿತೆಗಳು ಅಷ್ಟು ಹಿಡಿಸಲಿಲ್ಲ ನನಗೆ. ಆದರೆ ಆ ಒಂದು ಕವಿತೆ ಮಾತ್ರ ನನ್ನ ಹೃದಯದಲ್ಲಿ ಕೆತ್ತಿದ ಹಾಗೆ ಸ್ಪಷ್ಟವಾಗಿದೆ. What man has made of man! ಎಂದು ಆ ಕವಿತೆಯ ಸೊಲ್ಲು. ಜೀವಿಗಳೆಲ್ಲ ಸ್ವತಂತ್ರವಾಗಿ ಸ್ವಚ್ಛಂದವಾಗಿ ಸುಖವಾಗಿ ಬದುಕಬೇಕೆಂದು ನಿಸರ್ಗದ ಯೋಜನೆ. ಅದನ್ನು ಹುಡಿಗೂಡಿಸಿ ಮಾನವ ತನ್ನ ಸ್ವಾರ್ಥಕ್ಕಾಗಿ ಸೋದರಮಾವನನ್ನೇ ಬಲಿ ತೆಗೆದುಕೊಳ್ಳುತ್ತಾನೆ. ಅದನ್ನು ಕಂಡು ಕವಿಯ ಹೃದಯ ತಳಮಳಗೊಂಡಿದೆ. ಆ ಕಳವಳದ ಉದ್ವೇಗದಲ್ಲಿ ಆತ ಈ ಕವಿತೆಯನ್ನು ರಚಿಸಿದ್ದಾನೆ. ಆದರೆ ಕೇವಲ ಕಳವಳಗೊಳ್ಳುವುದರಿಂದ ಕೆಲಸವೇನೂ ಆಗಲಾರದು. ಹೃದಯದಲ್ಲಿ ತುಂಬಿ ಬಂದ ಕಳವಳ ನಮ್ಮನ್ನು ಕಾರ್ಯೋನ್ಮುಖರನ್ನಾಗಿ ಮಾಡಬೇಕು. ನಿಸರ್ಗದ ಯೋಜನೆಗೆ ವಿರುದ್ಧವಾಗಿ ಆಚರಿಸುತ್ತ ಮಾನವ ಜೀವಿಗಳನ್ನು ಪಶುಗಳನ್ನಾಗಿ ಪರಿವರ್ತಿಸುತ್ತಿರುವ ಈ ಶೋಷಕರ ವಿರುದ್ಧ ನಾವು ದನಿ ಎತ್ತಬೇಕು. ತಮ್ಮತನವನ್ನು ಮರೆತು ಪಶುಗಳಂತೆ ಬಿದ್ದಿರುವ ಶ್ರಮಜೀವಿಗಳನ್ನು ಎಚ್ಚರಿಸಬೇಕು. ಶೋಷಕವರ್ಗ ಅವರ ಮೇಲೆ ನಡೆಸಿರುವ ಅನ್ಯಾಯಗಳನ್ನೆಲ್ಲ ಅವರಿಗೆ ತಿಳಿಸಿ ಹೇಳಿ ತಮ್ಮ ಮನುಷ್ಯತ್ವವನ್ನು ಮರಳಿ ಪಡೆಯಲು ಅವರಲ್ಲಿ ಬಯಕೆಯನ್ನು ಚಿಗುರಿಸಬೇಕು. ಬಹಳ ಶ್ರಮದ ಕೆಲಸವಿದು ಚಂದ್ರಣ್ಣ. ಕೇವಲ ಕವಿತೆ ಬರೆದರೆ, ಕತೆ ಕಟ್ಟಿದರೆ, ಕಾದಂಬರಿ ಹೊಸೆದರೆ ಆಗಲಾರದು ಈ ಕೆಲಸ. ಪ್ರತ್ಯಕ್ಷ ಹೋರಾಟದ ರಂಗಕ್ಕಿಳಿದಾಗಲೇ ಏನನ್ನಾದರೂ ಮಾಡಲು ಸಾಧ್ಯವಾದೀತು. ಯುದ್ಧರಂಗದಿಂದ ದೂರವಿದ್ದವರು ಯುದ್ಧವನ್ನೇನು ಮಾಡಿಯಾರು? ಇದು ಒಂದು ದೊಡ್ಡ ಯುದ್ಧ ಚಂದ್ರಣ್ಣ, ಅನ್ಯಾಯದ ವಿರುದ್ಧ ನ್ಯಾಯದ ಯುದ್ಧ, ಅಸತ್ಯದ ವಿರುದ್ಧ ಸತ್ಯದ ಯುದ್ಧ, ದಾನವರ ವಿರುದ್ಧ ಮಾನವರ ಯುದ್ಧ. ಕೇವಲ ಕೂಲಿಕಾರರಿಗೆ ಮಾತ್ರವಲ್ಲ, ಎಲ್ಲ ಬಗೆಯ ಶೋಷಿತ ಜನಕ್ಕೂ ಸಂಬಂಧಪಟ್ಟ ಯುದ್ಧ ಇದು. ದೇಶ, ಜನಾಂಗ, ಜಾತಿ, ಮತ, ಧರ್ಮಗಳ ಪರಿಮಿತಿಯಿಲ್ಲ ಈ ಯುದ್ಧಕ್ಕೆ. ಜಗತ್ತಿನ ಎಲ್ಲ ದೇಶಗಳ ಎಲ್ಲ ಧರ್ಮಗಳ ಮತ ಜನಾಂಗಗಳ ಶ್ರಮಜೀವಿಗಳು ಹೂಡಿರುವ ಯುದ್ಧ ಇದು...''

''ಹಿಂದೂಸ್ಥಾನದಲ್ಲಿ ಮಾತ್ರ ಈ ಯುದ್ಧ ಸರಿಯಾದ ರೀತಿಯಲ್ಲಿ ನಡೆದಂತೆ

ತೋರುವುದಿಲ್ಲ" ಎಂದ ಚಂದ್ರಣ್ಣ.

"ಅಂದರೆ?"

"ಯುದ್ಧ ಅಂದ ಮೇಲೆ ಒಂದು ಶಿಸ್ತು, ಒಂದು ಕ್ರಮ ಬೇಡವೇ? ಸೇನಾನಾಯಕನೊಬ್ಬನಿರಬೇಕು, ಆತನ ಅಧೀನದಲ್ಲಿ ಸೇನಾಧಿಕಾರಿಗಳಿರಬೇಕು, ಮೇಲಿನ ನಾಯಕನ ಅಪ್ಪಣೆಯಂತೆ ಎಲ್ಲರೂ ಯುದ್ಧ ಮಾಡಬೇಕು. ಒಬ್ಬ ಸೇನಾನಾಯಕನ ಬದಲು ನಾಲ್ಕು ಜನರು ನಾಯಕರಾದರೆ, ಒಬ್ಬೊಬ್ಬರು ಒಂದೊಂದು ರೀತಿ ಅಪ್ಪಣೆ ಕೊಡತೊಡಗಿದರೆ ಸೈನಿಕರು ಯಾರ ಅಪ್ಪಣೆಯನ್ನು ಪಾಲಿಸಬೇಕು? ಯಾವ ರೀತಿಯಲ್ಲಿ ಯುದ್ಧ ಮಾಡಬೇಕು? ಒಬ್ಬ ಸೇನಾನಾಯಕ ತನ್ನ ಮಾತೇ ಯೋಗ್ಯ, ಅದರಂತೆಯೆ ಸೇನೆ ಮುಂದುವರಿಯಬೇಕು ಎನ್ನುತ್ತಾನೆ. ಇನ್ನೊಬ್ಬ ಅವನನ್ನು ಅಲ್ಲಗಳೆದು – ನಿನಗೇನು ತಿಳಿಯುತ್ತೆ ಯುದ್ಧದ ವಿಚಾರ? ನಾ ಬಲ್ಲೆ ಅದನ್ನೆಲ್ಲ, ನಾನು ನಡೆಸಿದರೇನೇ ಸೈನ್ಯ ಜಯ ದೊರಕಿಸಬಲ್ಲುದೆಂದು ವಾದಿಸುತ್ತಾನೆ. ಇನ್ನೊಬ್ಬ ಇವರಿಬ್ಬರನ್ನೂ ಹೀಯಾಳಿಸಿ ಇವರಿಬ್ಬರಿಂದಲೂ ಏನೂ ಸಾಧಿಸಲಾರರೆಂದು ಹೇಳಿ ತನ್ನ ಅಪ್ಪಣೆಗಳನ್ನು ಕೂಗಿ ಹೇಳುತ್ತಾನೆ. ಅಂಥ ಸಮಯದಲ್ಲಿ ಸೈನ್ಯದ ಗತಿಯೇನಾಗ ಬೇಕು? ಎಲ್ಲರೂ ಸೇನಾನಾಯಕರೆ. ಎಲ್ಲರಿಗೂ ವಿಜಯದ ಅಪೇಕ್ಷೆಯೆ. ಆದರೆ ಅವರಲ್ಲಿ ಒಮ್ಮತವಿಲ್ಲ, ಎಲ್ಲರೂ ಒಂದುಗೂಡಿ ಒಂದೇ ರೀತಿಯಲ್ಲಿ ಸೈನ್ಯ ನಡೆಸಿ ಕೊಂಡು ಹೋಗುವಂತಿಲ್ಲ, ಅವರೇ ತಮ್ಮ ತಮ್ಮಲ್ಲಿ ಬಡಿದಾಡುತ್ತ ನಿಂತರೆ ಸೈನ್ಯವೇನು ಮಾಡಬೇಕು? ಹೇಗೆ ಮುನ್ನಡೆಯಬೇಕು?"

"ನೀವು ಹೇಳುತ್ತಿರುವುದೇನು ಎನ್ನುವುದರ ಅರ್ಥವಾಗಲಿಲ್ಲ."

"ಇಂದು ಭಾರತದ ಶ್ರಮಜೀವಿಗಳ ಹೋರಾಟದ ಗತಿಯೂ ಇದೇ ಆಗಿದೆ. ಸೌಮ್ಯವಾದೀ ರಾಜ್ಯಸ್ಥಾಪನೆಯನ್ನೆ ಧ್ಯೇಯವಾಗಿಟ್ಟುಕೊಂಡ ಎರಡು ಮೂರು ಪಾರ್ಟಿಗಳು. ಒಂದನ್ನು ಕಂಡರೆ ಇನ್ನೊಂದಕ್ಕೆ ಆಗದು, ಕಮ್ಯೂನಿಸ್ಟರು ಕೆಲಸ ಮಾಡುವ ಕಡೆ ಸೋಶಲಿಸ್ಟರು ನುಗ್ಗುತ್ತಾರೆ, ಕಮ್ಯೂನಿಸ್ಟರನ್ನೋಡಿಸಿ ಶ್ರಮಜೀವಿಗಳ ಮೇಲೆ ತಮ್ಮ ಪ್ರಭಾವ ಬೀರಲು ಪ್ರಯತ್ನಿಸುತ್ತಾರೆ. ಈ ಗದ್ದಲದಲ್ಲಿ ಕೆಲಸಗಾರರು ದಿಙ್ಮೂಢರಾಗುತ್ತಾರೆ. ಗಂಡ ಹೆಂಡಿರ ಜಗಳದಲ್ಲಿ ಕೂಸು ನುಗ್ಗಾದ ಹಾಗೆ. ಕೂಲಿಕಾರರಿಗೆ ಕಮ್ಯೂನಿಸ್ಟರೂ ಅಷ್ಟೆ ಸೋಶಲಿಸ್ಟರೂ ಅಷ್ಟೆ ತಮ್ಮ ಘೋರ ದಾರಿದ್ರ್ಯ ವನ್ನು ದೂರಗೊಳಿಸಿ ತಮಗೆ ಸ್ವಲ್ಪವಾದರೂ ಸುಖ ಸಿಕ್ಕುವಂತೆ ಮಾಡಲು ಪ್ರಯತ್ನಿಸು ವವರೆಲ್ಲ ಅವರಿಗೆ ಒಂದೇ. ಕಮ್ಯೂನಿಜಂ ಸೋಶಲಿಜಂಗಳಲ್ಲಿ ವ್ಯತ್ಯಾಸವಾಗಲಿ,

ಇವುಗಳ ಅರ್ಥವಾಗಲಿ ಅವರಿಗೆ ತಿಳಿಯದು. ಈ ಕಮ್ಯೂನಿಸ್ಟ್ ಸೋಶಲಿಸ್ಟರ ಬಡಿದಾಟವನ್ನು ಕಂಡು ಕೂಲಿಕಾರರಿಗೆ ಬೇಸರ ಬರದಿರುತ್ತದೆಯೆ? ಇವೊತ್ತು ಕಮ್ಯೂನಿಸ್ಟರ ಪ್ರಭಾವ; ಸರಿ. ಕೂಲಿಕಾರರು ತಾವೂ ಕಮ್ಯೂನಿಸ್ಟರೆಂದು ಹೇಳಿಕೊಂಡು ಕೊಡತಿ ಕುಡುಗೋಲುಗಳ ಕೆಂಪು ಬಾವುಟಕ್ಕೆ ಸಲಾಮು ಹಾಕಬೇಕು. ನಾಳೆ ಸೋಶಲಿಸ್ಟರು ಬಂದರು; ಸರಿ. ಕೂಡಲೇ ಎಲ್ಲರೂ ಸೋಶಲಿಸ್ಟರಾಗಿ ಚಕ್ರ ನೇಗಿಲುಗಳ ಕೆಂಪುಬಾವುಟಕ್ಕೆ ವಂದಿಸಬೇಕು. ಕೆಂಪು ಬಾವುಟ ಕ್ರಾಂತಿಯ ಬಾವುಟ. ಎರಡು ಪಾರ್ಟಿಯ ಧ್ಯೇಯಗಳಲ್ಲಿ ಹೆಚ್ಚಿನ ವ್ಯತ್ಯಾಸವಿಲ್ಲ. ಆದರೂ ಈ ಜಗಳ, ಈ ಬಡಿದಾಟ, ಈ ವೈಮನಸ್ಯ ಇದೆಲ್ಲಾ ಯಾಕೆ? ಬಂಡವಾಳಗಾರರು ಇದನ್ನು ಕಂಡು ನಗದಿರರೇ? ಕೂಲಿಕಾರ ಚಳವಳಿಯ ಮುಖಂಡತ್ವದಲ್ಲಿನ ಈ ಒಡಕಿನಿಂದ ಬಂಡವಾಳಗಾರರಿಗೇ ಲಾಭವಲ್ಲವೆ?''

ಶಂಕರ ಉತ್ತರವೀಯಲಿಲ್ಲ. ಧ್ಯಾನಸ್ಥನಂತೆ ಮೌನಮುದ್ರೆಯಿಂದ ಕುಳಿತಿದ್ದ. ಚಂದ್ರಣ್ಣನಾಡುತ್ತಿದ್ದ ಮಾತುಗಳಲ್ಲಿ ಸತ್ಯಾಂಶವಿರದಿರಲಿಲ್ಲ. ಅಸತ್ಯದ ಒಂದು ಕಣವಾದರೂ ಅವರಲ್ಲಿದ್ದಿದ್ದರೆ ಶಂಕರ ಸುಮ್ಮನಿರುತ್ತಿರಲಿಲ್ಲ. ಒಡನೆಯೆ ಆತನನ್ನು ತಡೆದು ಉಗ್ರವಾಗಿ ಪ್ರತಿಭಟಿಸುತ್ತಿದ್ದ. ಅಸತ್ಯ, ಅನ್ಯಾಯ, ಅಪಪ್ರಚಾರಗಳನ್ನು ಕಂಡು ಕೇಳಿ ಸಹಿಸಿಕೊಳ್ಳುವುದು ಕಮ್ಯೂನಿಸ್ಟನ ಸ್ವಭಾವವಲ್ಲ. ಬಾಲವನ್ನು ತುಳಿಸಿಕೊಂಡ ನಾಗರಹಾವಿನಂತೆ ಕೆರಳಿ ಫೂತ್ಕರಿಸುವುದು ಆತನ ಪದ್ಧತಿ. ಎಲ್ಲ ಕಮ್ಯೂನಿಸ್ಟರೂ ಹಾಗೆಯೆ; ಅವರು ರಷಿಯದವರಾದರೂ ಸರಿಯೆ, ಭಾರತದವರಾದರೂ ಸರಿಯೆ.

''ನೀವು ಹೇಳುವುದು ಸರಿ. ಈ ರೀತಿಯ ಒಡಕಿನಿಂದಾಗಿ ಸಾಮ್ಯವಾದೀ ಚಳವಳಿಗೆ ಹಾನಿಯಾಗುವುದೆಂಬುದನ್ನು ನಾ ಬಲ್ಲೆ. ಆದರೆ ಅದು ಅನಿವಾರ್ಯ. ಎಲ್ಲ ದೇಶಗಳಲ್ಲೂ ಇಲ್ಲಿಯ ಸೋಶಲಿಸ್ಟರಂಥ ಪ್ರತಿಗಾಮಿಗಳು ಇದ್ದೇ ಇರುತ್ತಾರೆ. ರಷ್ಯದಲ್ಲೂ ಇದ್ದರು. ಅಂಥವರನ್ನು ನಿರ್ದಯೆಯಿಂದ ಮಟ್ಟ ಹಾಕಿದಾಗ ಸಾಮ್ಯವಾದ ಭದ್ರವಾಯಿತು,'' ಎಂದ ಶಂಕರ.

''ಇರಬಹುದು ಆದರೆ ಅದಕ್ಕಾಗಿ ಸ್ಟಾಲಿನ್ ಉಪಯೋಗಿಸಿದ ಹಿಂಸೆಯನ್ನು ಯಾರಾದರೂ ಒಪ್ಪಬಹುದೆ? ಸ್ಟಾಲಿನ್ ಮಾತೇಕೆ, ಇಲ್ಲಿ ಇದೇ ಊರಿನಲ್ಲಿ ನಿಮ್ಮ ಕಮ್ಯೂನಿಸ್ಟರು ಕೂಲಿಕಾರ ಸಂಘವನ್ನ ತಮ್ಮ ಕೈಯಲ್ಲಿ ಹಿಡಿದುಕೊಳ್ಳುವುದಕ್ಕಾಗಿ ಮಾಡಬಾರದ ಕೆಲಸಗಳನ್ನೆಲ್ಲ ಮಾಡುತ್ತಿರುವರಂತೆ. ಹೊಡೆಯುವುದು ಬಡಿಯುವುದು ಬೆದರಿಸುವುದು ಗದ್ದಲ ಮಾಡುವುದು ಇವೆಲ್ಲ ಸರಿಯೆ? ಶಾಂತ

ರೀತಿಯಿಂದ ಕೆಲಸ ಮಾಡಲಾಗುವುದಿಲ್ಲವೆ?''

''ಶಾಂತಿ ಎನ್ನುವುದು ಬಲು ವಿಲಕ್ಷಣವಾದ ಪರಿಸ್ಥಿತಿ ಚಂದ್ರಣ್ಣ, ಶಾಂತಿಯಿಂದಲೇ ಕೆಲಸ ಮಾಡಬೇಕೆಂದು ನಾವು ಎಷ್ಟು ಪ್ರಯತ್ನಿಸಿದರೂ ನಮ್ಮ ವಿರೋಧಿಗಳ ಕೈವಾಡದಿಂದಾಗಿ ಅದು ಅಸಾಧ್ಯವಾಗುತ್ತದೆ. ಅಶಾಂತ ವಾತಾವರಣದಲ್ಲಿಯೇ ಅವರು ತಮ್ಮ ಬೇಳೆ ಬೇಯಿಸಿಕೊಳ್ಳುತ್ತಾರೆ. ಅಂತೆಯೆ, ಯಾವಾಗಲೂ ನಮ್ಮನ್ನು ಹೊಡೆದಾಟ ಬಡಿದಾಟಗಳಲ್ಲಿ ತೊಡಗಿಸಲು ಪ್ರಯತ್ನಿಸುತ್ತಾರೆ. ಕಾಲು ಕೆದರಿ ಜಗಳ ತೆಗೆಯುತ್ತಾರೆ. ನಮ್ಮ ಕೆಲಸಗಾರರನ್ನು ಅವಮಾನಗೊಳಿಸುತ್ತಾರೆ. ಅವರ ಹೆಣ್ಣುಮಕ್ಕಳ ಮಾನಭಂಗ ಮಾಡುವ ಪ್ರಯತ್ನಗಳೂ ನಡೆಯುತ್ತವೆ. ಅಂಥ ಸಂದರ್ಭಗಳಲ್ಲಿ ಎಂಥವರಾದರೂ ಸರಿಯೆ, ಶಾಂತಿಯನ್ನು ಕಾಯ್ದುಕೊಳ್ಳುವುದು ಅಸಾಧ್ಯವಾಗುತ್ತೆ. ಉದಾಹರಣೆಗಾಗಿ ಒಂದು ವಿಷಯ ಹೇಳುತ್ತೇನೆ, ಕೇಳಿ. ನಮ್ಮ ಸಂಘದ ಕಾರ್ಯಕಾರಿ ಸಮಿತಿಗೆ ನಾಗಮ್ಮ ಎಂಬ ಹೆಣ್ಣುಮಗಳು ಸದಸ್ಯೆಯಾಗಿದ್ದಾಳೆ. ಆಕೆ ಹರಿಜನರವಳು. ಮದುವೆಯೂ ಆಗಿತ್ತು. ಗಂಡ ಕುಡುಕ. ದಿನವೂ ಈಕೆಯನ್ನು ಹೊಡೆದು ಬಡಿದು ಪೀಡಿಸುತ್ತಿದ್ದ. ಎಂಟು ಹತ್ತು ವರ್ಷಗಳವರೆಗೆ ಆತನ ಕೈಯಲ್ಲಿ ಯಮಯಾತನೆಯನ್ನನುಭವಿಸಿ ಒಂದು ದಿನ ವಿರೋಧದ ದನಿಯೆತ್ತಿದಳು. ಆತ ಆಕೆಯನ್ನು ಮನಸ್ವಿಯಾಗಿ ಬಡಿದು ಮನೆಯಿಂದ ಹೊರದೂಡಿದ. ನಾಗಮ್ಮ ಹೆದರಲಿಲ್ಲ, ತನ್ನ ಕಾಲ ಮೇಲೆ ತಾನು ನಿಂತುಕೊಂಡು ದುಡಿದು ಹೊಟ್ಟೆ ಹೊರೆಯುವುದಾಗಿ ನಿರ್ಧರಿಸಿ ಗಿರಣಿಯ ಕೆಲಸಕ್ಕೆ ಸೇರಿದಳು. ಹರಿಜನರಾಕೆಯಾದರೂ ಆಕೆ ಮರ್ಯಾದಸ್ಥೆ. ತಾನಾಯಿತು, ತನ್ನ ಕೆಲಸವಾಯಿತು. ಯಾರನ್ನೂ ಕಣ್ಣೆತ್ತಿ ನೋಡುತ್ತಿರಲಿಲ್ಲ. ಗಿರಣಿಯ ಮ್ಯಾನೇಜರು ಮಹಾಕಾಮುಕ. ಹೊಟ್ಟೆ ಹೊರೆಯಲೆಂದು ಗಿರಣಿಗೆ ಬರುವ ಹೆಣ್ಣುಮಕ್ಕಳ ಮೇಲೆಲ್ಲ ಕೆಟ್ಟ ದೃಷ್ಟಿ ಇಡುತ್ತಿದ್ದ. ಚೆಲುವೆಯಾದ ನಾಗಮ್ಮ ಈತನ ಕಣ್ಣು ಸೆಳೆಯದಿರುವಳೇ? ಸರಿ. ಆಕೆಯನ್ನು ಬಲೆಗೆ ಬೀಳಿಸಲು ಬಗೆಬಗೆಯ ಪ್ರಯತ್ನ ನಡೆಸತೊಡಗಿದ. ಯಾವುದಕ್ಕೂ ಆಕೆ ಬಾಗಲಿಲ್ಲ. ಕೊನೆಗೆ ಬಲಾತ್ಕಾರದಿಂದಲಾದರೂ ಆಕೆಯನ್ನು ಅನುಭೋಗಿಸಬೇಕೆಂದು ನಿರ್ಧರಿಸಿ ಒಂದು ದಿನ ಸಾಯಂಕಲೇ ಬೇಕೆಂತಲೇ ಆಕೆಗೆ ಹೆಚ್ಚು ಕೆಲಸ ಕೊಟ್ಟು ರಾತ್ರಿ ಹತ್ತು ಗಂಟೆಗೆ ಗಿರಣಿಯಿಂದ ಬಿಡುಗಡೆ ಮಾಡಿದ. ಹಸಿವೆಯಿಂದ ನರಳುತ್ತಿದ್ದ ಆ ಬಡ ಹೆಣ್ಣುಮಗಳು ಅವಸರವಸರವಾಗಿ ಮನೆಗೆ ಹಿಂದಿರುಗುತ್ತಿದ್ದಾಗ ದಾರಿಯಲ್ಲಿ ಇವನ ಮೂವರು ಹಸ್ತಕರು ಅವಳನ್ನು ಹಿಡಿದು ಹೊತ್ತುಕೊಂಡು ಹೋಗುತ್ತಿದ್ದರು. ಆಕೆ ಅತ್ತು ಕರೆದು ಕೂಗಿಕೊಂಡಳು. ಆದರೆ ಊರಿನಿಂದ ದೂರದಲ್ಲಿರುವ ಗಿರಣಿ ರಸ್ತೆಯಲ್ಲಿ

ಅಂಥ ರಾತ್ರಿಯಲ್ಲಿ ಯಾರಿರಬೇಕು? ನಮ್ಮ ದುರುಗಪ್ಪ ಆಕಸ್ಮತ್ತಾಗಿ ಅದೇ ದಾರಿಯಿಂದ ಬರುತ್ತಿದ್ದವನು ಆ ಮೂವರು ಪುಂಡರೊಂದಿಗೆ ಹೊಡೆದಾಡಿ ಈಕೆಯನ್ನು ಬಿಡಿಸಿಕೊಂಡ.''

''ದುರುಗಪ್ಪನಿಗೂ ಆಕೆಗೂ ಪ್ರಣಯಸಂಬಂಧವಿದೆಯೆಂದು ಹೇಳುತ್ತಾರಲ್ಲ, ನಿಜವೆ?''

''ನಿಜ. ಏಕಿರಬಾರದು? ಅಂದು ಆ ಪುಂಡರ ಕೈಯಿಂದ ಆತ ಆಕೆಯನ್ನು ಬಿಡಿಸಿಕೊಂಡಾಗ ಮೂವರು ಧಡಿಯರೊಂದಿಗೆ ಹೋರಾಡಿದ ಆತನ ಶೌರ್ಯವನ್ನು ಕಂಡು ಆಕೆ ಮಾರುಹೋಗಿರಬಹುದು. ಅದು ಸ್ವಾಭಾವಿಕವಾಗಿ ಅವರವರ ಮನಸ್ಸು ಕೂಡಿರಬಹುದು. ಹೇಗೂ ಆಕೆಗೆ ಗಂಡನಿಂದ ತೊಂದರೆಯಾಗಿತ್ತು. ಅವಳ ತಪ್ಪೇನೂ ಇರಲಿಲ್ಲವಾದರೂ ಆತನು, ಅವಳನ್ನು ಕ್ರೂರವಾಗಿ ನಡೆಸಿಕೊಂಡು ಮನೆಯಿಂದ ಓಡಿಸಿಬಿಟ್ಟಿದ್ದ. ಆಕೆಗೆ ಇನ್ನೂ ತರುಣ ವಯಸ್ಸು. ಆಕೆಯೂ ಮನುಷ್ಯಳಲ್ಲವೆ? ಆಕೆಗೂ ಹೃದಯವಿಲ್ಲವೆ? ಭಾವನೆಗಳಿಲ್ಲವೆ? ದುರುಗಪ್ಪನಂಥ ವೀರನ ಸಹಾನುಭೂತಿ, ಸಹಾಯ ದೊರೆತಾಗ ಆಕೆ ಸಹಜವಾಗಿಯೇ ಆತನನ್ನೊಲಿದಳು. ಅದರಲ್ಲಿ ತಪ್ಪೇನಿದೆ?''

''ತಪ್ಪೇನೂ ಇಲ್ಲ, ನಿಜ. ಸಮಾಜದ ದೃಷ್ಟಿಗೆ ಅದು ವ್ಯಭಿಚಾರವೆಂದು ತೋರಬಹುದು. ಆದರೆ ಕೊಂಚ ವಿಚಾರ ಮಾಡಿದರೆ ಅದರಲ್ಲಿ ದೋಷವೇನೂ ಕಂಡುಬರಲಾರದು. ಆದರೆ ಆ ದುರುಗಪ್ಪ ಅವಳೊಬ್ಬಳನ್ನೇ ಅಲ್ಲದೆ ಇನ್ನೂ ಎಷ್ಟೋ ಜನ ಕೂಲಿ ಹೆಂಗಸರೊಂದಿಗೆ ಸಂಬಂಧವಿಟ್ಟುಕೊಂಡಿರುವಂತಲ್ಲ?''

''ಸುಳ್ಳು. ನಾಗಮ್ಮನಿಗೂ ಆತನಿಗೂ ಇರುವ ಸಂಬಂಧವನ್ನು ಕಂಡು ಸಹಿಸಲಾರದೆ ಜನರು ಈ ರೀತಿ ಅಪಪ್ರಚಾರ ಮಾಡುತ್ತಿರಬಹುದು. ಕಮ್ಯೂನಿಸ್ಟರು ಹಿಂಸಾವಾದಿಗಳು, ಹೊಡೆದಾಟ ಬಡಿದಾಟ ಮಾಡುವವರು ಎಂದು ಯಾವಾಗಲೂ ಬೊಬ್ಬೆಯಾಡುವುದಿಲ್ಲವೇ ಕಾಂಗ್ರೆಸ್ಸಿನವರು? ಅದು ಸಾಲದ್ದಕ್ಕೆ ಕಮ್ಯೂನಿಸ್ಟರು ವ್ಯಭಿಚಾರಿಗಳು, ವ್ಯಭಿಚಾರವನ್ನು ಸಮರ್ಥಿಸುವವರು, ಸ್ವಚ್ಛಂದ ಪ್ರಣಯದ ಉಪಾಸಕರು ಎಂದೂ ಅಪಪ್ರಚಾರ ನಡೆಸುತ್ತಾರೆ. ಆದರೆ ಈ ರೀತಿ ಅಪಪ್ರಚಾರ ನಡೆಸುವವರೇ ಸ್ವತಃ ಹಿಂಸಾವಾದಿಗಳೂ ಮಹಾ ವ್ಯಭಿಚಾರಿಗಳೂ ಆಗಿರುತ್ತಾರೆ. ಇಂಥವರೆಷ್ಟು ಜನರನ್ನು ತೋರಿಸಿಕೊಡಲಿ ನಾನು ನಿಮಗೆ. ನಿಮ್ಮ ಸೆಟ್ಟರು, ಅವರ ಮಗ...''

ಚಂದ್ರಣ್ಣನ ಕುತೂಹಲ ಕೆರಳಿ ನಿಂತಿತು. ಆತ ಕೇಳಿದ : ''ಅವರೂ ಇಂಥವರೆ?''

''ಅವರೆಂಥವರು ಎನ್ನುವುದು ಊರಿಗೆಲ್ಲ ಗೊತ್ತಿದೆ. ನೀವು ಈ ಊರಿಗೆ ಹೊಸಬರು. ಇನ್ನೂ ಗೊತ್ತಾಗಿರಲಿಕ್ಕಿಲ್ಲ ನಿಧಾನವಾಗಿ ಎಲ್ಲವೂ ಗೊತ್ತಾದೀತು. ತಮ್ಮ ಎಲೆಯಲ್ಲಿ ಕತ್ತೆ ಸತ್ತುಬಿದ್ದಾಗ ಬೇರೆಯವರ ಎಲೆಯಲ್ಲಿನ ನೊಣ ಜಾಡಿಸಲು ಹೋಗುವ ಜನ ಇದು. ಅಲ್ಲ! ಹೆಣ್ಣುಮಗಳೊಬ್ಬಳನ್ನು ಪುಂಡರು ಪೀಡಿಸುತ್ತಿದ್ದಾಗ ಆಕೆಯನ್ನು ಬಿಡಿಸಿಕೊಳ್ಳಹೋಗುವುದು, ಆಕೆಯನ್ನು ಬಲಾತ್ಕಾರದಿಂದ ಹೊತ್ತು ಕೊಂಡೊಯ್ಯುವ ಪುಂಡರನ್ನೆದುರಿಸುವುದು ಹಿಂಸೆಯೊ? ಅದು ಬಡಿದಾಟವೊ? ಗದ್ದಲವೊ? ಇಂಥ ಸಂದರ್ಭ ಕಾಂಗ್ರೆಸ್ಸಿನವರಿಗೆ ಬಂದರೆ ಅವರೇನು ಮಾಡುತ್ತಾರೆ? ಆ ಪುಂಡರನ್ನೆದುರಿಸಿ ನಿಂತು ಆ ಹೆಣ್ಣುಮಗಳನ್ನು ಬಿಡಿಸಿಕೊಳ್ಳುವರೋ, ಅಥವಾ ಅದು ಹಿಂಸೆಯಾಗುವುದೆಂದು ಬಗೆದು ಆಕೆಯನ್ನು ಅವರ ಕೈಗೊಪ್ಪಿಸಿ ಹಾಗೇ ಹೊರಟುಹೋಗುವರೋ?''

''ಅಂಥ ಸಂದರ್ಭದಲ್ಲಿ ಸತ್ಯಾಗ್ರಹ ಮಾಡಿ ಪ್ರಾಣವನ್ನಾದರೂ ಕೊಟ್ಟು ಆ ಹೆಣ್ಣುಮಗಳ ಮಾನಸಂರಕ್ಷಣೆ ಮಾಡಬೇಕೆಂದು ಗಾಂಧೀಜಿ ಹೇಳಿದ್ದಾರೆ.''

''ಸರಿಯೆ, ಆದರೆ ಆ ರೀತಿ ಪ್ರಾಣಾರ್ಪಣೆ ಮಾಡುವವರು ಎಷ್ಟು ಜನರಿರ ಬಹುದು ಹಿಂದೂಸ್ಥಾನದಲ್ಲಿ? ವ್ಯವಹಾರದಲ್ಲಿ ಅಂಥದ್ದೆಲ್ಲ ನಡೆಯುವುದಿಲ್ಲ. ಗಾಂಧೀಜಿಯವರ ಶಿಷ್ಯರೆಂದು ಹೇಳಿಕೊಳ್ಳುವ ಕಾಂಗ್ರೆಸ್ಸಿಗರೇ ಇಂದು ಎಂಥೆಂಥ ಹಿಂಸಾಕೃತ್ಯಗಳನ್ನು ನಡೆಸುತ್ತಿಲ್ಲ?''

''ನೀವು ಹೇಳುವುದು ನಿಜ. ಈ ಹಿಂಸೆ ಅಹಿಂಸೆಗಳ ವಿಷಯ ಬಹಳ ಸೂಕ್ಷ್ಮವಾದದ್ದು. ಗಾಂಧೀಜಿಯವರಂಥ ಅಹಿಂಸಾಮೂರ್ತಿಗಳೂ ಎಷ್ಟೋ ಸಲ ಈ ವಿಷಯದಲ್ಲಿ ಸಂದೇಹಗೊಂಡದ್ದುಂಟು.''

''ಏನಾದರೂ ಮಾಡಿ ಕಮ್ಯೂನಿಸ್ಟರನ್ನು ಮಟ್ಟ ಹಾಕುವುದು ಬೇಕಾಗಿದೆ ಈ ಜನರಿಗೆ. ಇವರ ಸುಖಲೋಲುಪತೆಗೆ ಕೊಡಲಿಯೇಟು ಹಾಕಲು ಚಳವಳಿ ಮಾಡುವ ನಮ್ಮನ್ನು ಕಂಡು ಸುಮ್ಮನಿದ್ದಾರೇ ಇವರು! ನ್ಯಾಯ ಅನ್ಯಾಯ, ಸತ್ಯ ಅಸತ್ಯಗಳ ವಿಚಾರ ಮಾಡುವ ಗೊಡವೆಗೆ ಹೋಗದೆ ನಮ್ಮನ್ನು ತುಳಿದು ನಮ್ಮ ಸದ್ದಡಗಿಸಲು ವಿಶ್ವಪ್ರಯತ್ನ ಮಾಡುತ್ತಿದ್ದಾರೆ. ಆದರೆ – ಎಲ್ಲಾ ವ್ಯರ್ಥ ಅವರ ಪ್ರಯತ್ನ ಅವರು ತುಳಿದಷ್ಟೂ ನಾವು ಶಕ್ತಿಯುತರಾಗುತ್ತೇವೆ. ಹೆಬ್ಬಾವನ್ನು ಹೊಡೆದ ಹಾಗೆಲ್ಲಾ ಅದು ತನ್ನ ದೇಹವನ್ನು

ಉಬ್ಬಿಸುತ್ತದಂದೆ. ಹಾಗೇ ನಮ್ಮ ಚಳವಳಿಯ ವಿಚಾರ. ವಿರೋಧ ಹೆಚ್ಚಿದಷ್ಟೂ ನಮ್ಮ ಬಳಕೆ ಹೆಚ್ಚುವುದು. ಇಂದು ನಮ್ಮನ್ನು ತುಳಿಯಲೆತ್ನಿಸುತ್ತಿರುವ ಜನ ಈ ವಿಚಾರ ವನ್ನರಿಯರು. ಎಂಥ ಅಜ್ಞಾನಿಗಳಿವರು ಎಂದು ಕನಿಕರ ನನಗೆ. ಅವರ ಆ ಅತಿಶಯ ವಾದ ದುರಾಸೆ ಅವರನ್ನು ಅವಿವೇಕಿಗಳನ್ನಾಗಿ ಮಾಡಿಬಿಟ್ಟಿದೆ. ಆ ಲೋಭವೇ ಅವರ ವಿಚಾರ ಶಕ್ತಿಯನ್ನು ಕಳೆದುಬಿಟ್ಟಿದೆ. ತಾವು ತುಳಿಯುತ್ತಿರುವುದು ಬಡಜನರ ಚಳವಳಿ ಯನ್ನಲ್ಲ - ಉಗ್ರವಾದ ಕಾಳೋರಗವನ್ನು ಎಂಬುದನ್ನವರು ತಿಳಿದಿಲ್ಲ. ದಲಿತರ ಹೊಟ್ಟೆಯ ಮೇಲೆ ಕಾಲು ಹಾಕಿ ನಿಂತು ಇಂದೇನೊ ಇವರು ತಮ್ಮ ತಾಂಡವನೃತ್ಯ ಸಾಗಿಸಿದ್ದಾರೆ. ಆದರೆ ಆ ಹೊಟ್ಟೆಯಲ್ಲಿ ಕುದಿಯುತ್ತಿರುವ ಜ್ವಾಲೆಯ ವಿಷಯವನ್ನವರು ಅರಿಯರು. ಅದು ಒಳಗೊಳಗೆ ಕುದಿದು ಕುದಿದು ತಪ್ತವಾಗಿ ಹೊರಚಿಮ್ಮಲು ಸಮಯ ಕಾಯುತ್ತಿದೆ ಎಂಬುದನ್ನಿವರು ಅರಿಯರು. ದೊಡ್ಡದೊಂದು ಜ್ವಾಲಾಮುಖಿಯ ಮೇಲೆ ತಮ್ಮ ಸೌಧಗಳನ್ನು ಕಟ್ಟಿಕೊಂಡು ಪ್ರಪಂಚವನ್ನೆಲ್ಲ ಮರೆತು ಜೀವಿಸುತ್ತಿದ್ದಾರೆ ಈ ಜನ. ತಮ್ಮ ಸುಖ, ತಮ್ಮ ವಿಲಾಸ, ತಮ್ಮ ಸಂಪತ್ತು, ತಮ್ಮ ಆಸ್ತಿಪಾಸ್ತಿ ಎಲ್ಲವೂ ಶಾಶ್ವತವೆಂದು ಭ್ರಮಿಸಿದ್ದಾರೆ. ತಮ್ಮ ಸೌಧಗಳ ಕೆಳಗಿರುವ ಭೀಕರ ಜ್ವಾಲಾಮುಖಿ ಕೆಲದಿನಗಳಲ್ಲಿಯೆ ಸ್ಫೋಟವಾದೀತು, ಆದರ ತಪ್ತ ಲಾವಾರಸದಲ್ಲಿ ತಾವು, ತಮ್ಮ ಬಂಧು ಬಳಗ, ತಮ್ಮ ವಿಲಾಸಿನಿಯರು, ವಿಲಾಸದ ಸಾಮಗ್ರಿಗಳು, ಆಸ್ತಿಪಾಸ್ತಿ, ಹಣಕಾಸು ಎಲ್ಲವೂ ಸುಟ್ಟು ಸೂರೆಯಾಗಿ ಹುಡಿಹುಡಿಯಾಗಿ ಅಣು ಅಣುವಾಗಿ ಹೋಗಬಹುದೆಂಬುದನ್ನು ಇವರು ಅರಿಯರು. ನನಗೆ ಕನಿಕರ ಬರುತ್ತಿದೆ ಚಂದ್ರಣ್ಣ, ನಿಜಕ್ಕೂ ಇವರ ಬಗ್ಗೆ ಕನಿಕರ ಬರುತ್ತಿದೆ..."

ಶಂಕರನಾಡುತ್ತಿದ್ದ ಮಾತುಗಳೆಲ್ಲ ಆತನ ಹೃದಯದಿಂದ ನೇರವಾಗಿ ಹೊರ ಹೊಮ್ಮುತ್ತಿದ್ದುದರಲ್ಲಿ ಸಂದೇಹವಿರಲಿಲ್ಲ. ಬೇರೆ ಸಂದರ್ಭಗಳಲ್ಲಾದರೆ ಕಮ್ಯೂನಿಸ್ಟರ ಮುಖದಿಂದ ಇಂಥ ಮಾತು ಬರುವುದುಂಟೇ - ಎಂದು ಚಂದ್ರಣ್ಣ ಅಚ್ಚರಿಗೊಳ್ಳದಿರುತ್ತಿರಲಿಲ್ಲ. 'ಕನಿಕರ' ಎಂಬ ಶಬ್ದವಾದರೂ ಕಮ್ಯೂನಿಸ್ಟರ ಕೋಶದಲ್ಲಿರ ಬಹುದೇ ಎಂದುಕೊಳ್ಳದಿರುತ್ತಿರಲಿಲ್ಲ. ಆದರೆ ಆ ಕತ್ತಲೆಯ ರಾತ್ರಿಯಲ್ಲಿ, ತನ್ನನ್ನು ತಾನು ಮರೆತುಬಿಟ್ಟು ಕೇವಲ ತನ್ನ ಧ್ಯೇಯವೊಂದರಲ್ಲಿ ತನ್ಮಯನಾಗಿ ಮಾತನಾಡುತ್ತಿದ್ದ ಆ ಯುವಕನ ಪ್ರಾಮಾಣಿಕತನವನ್ನು ಕುರಿತು ಚಂದ್ರಣ್ಣ ಸಂದೇಹಗೊಳ್ಳುವಂತಿರಲಿಲ್ಲ.

"ನಮಗೆ ಶಾಂತಿ ಬೇಕು ಚಂದ್ರಣ್ಣ, ಅಗತ್ಯವಾಗಿಯೂ ಶಾಂತಿ ಬೇಕು. ಆದರೆ ನಾವು ಅಪೇಕ್ಷಿಸುವುದು ಸ್ಮಶಾನಶಾಂತಿಯನ್ನಲ್ಲ - ಬಡಜನರ ಹೊಟ್ಟೆಗೆ ಕಲ್ಲು ಹಾಕಿ ಅವರ ಪಾಲಿನ ಅನ್ನವನ್ನು ತಾವೆ ತಿಂದು ನಲಿಯುವ ಸ್ವಾರ್ಥಿಗಳ ಶಾಂತಿಯೂ

ಒಂದು ಶಾಂತಿಯೆ? ಎಲ್ಲ ಅಶಾಂತಿಗೂ ಮೂಲಕಾರಣವಿದೆ. ಈ ಸುಲಿಗೆ, ಈ ಶೋಷಣೆ, ಹಿಂಸೆ, ಬಡಿದಾಟ, ಹೊಡೆದಾಟ ಯಾರಿಗೆ ಬೇಕಾಗಿದೆ ಚಂದ್ರಣ್ಣ? ಜಗತ್ತಿನಲ್ಲಿ ಈಗಾಗಲೇ ಆಗಿರುವ ಹಿಂಸೆ ಸಾಲದೇ? ಈಗಾಗಲೇ ಆಗಿರುವ ರಕ್ತಪಾತ ಸಾಲದೇ? ಮಾನವನು ಮಾನವನ ಮೇಲೆ ನಡೆಸುತ್ತಿರುವ ದಬ್ಬಾಳಿಕೆಯನ್ನು ನಿಲ್ಲಿಸಿ ಎಲ್ಲರೂ ಶಾಂತಿಯಿಂದ ಸಮಾಧಾನದಿಂದ ಸುಖದಿಂದ ಬದುಕು ನಡೆಸುವಂತೆ ಮಾಡುವುದೇ ನಮ್ಮ ಗುರಿ. ಶಾಂತತೆಯಿಂದ ನಮ್ಮ ಗುರಿಯನ್ನು ಸಾಧಿಸಲು ನಮಗೆ ಸಂತೋಷವೆ ಅಲ್ಲವೆ? ಆದರೆ – ಈ ಶೋಷಕ ವರ್ಗಕ್ಕೆ ಅದು ಇಷ್ಟವಿಲ್ಲ. ಅಂತೆಯೆ ಅಶಾಂತತೆಯ ಬಿರುಗಾಳಿಯನ್ನೆಬ್ಬಿಸಿ ಅದರಲ್ಲಿ ನಮ್ಮ ದನಿಯನ್ನಡಗಿಸಲು ಅವರು ಪ್ರಯತ್ನಿಸುತ್ತಿದ್ದಾರೆ. ನಿಮ್ಮಂಥ ತಿಳಿದವರಾದರೂ ಅದರಿಂದ ಮೋಸ ಹೋಗಬಾರದು. ನಮ್ಮ ಬಗ್ಗೆ ತಪ್ಪು ಕಲ್ಪನೆ ಮಾಡಿಕೊಳ್ಳಬಾರದು. ಅಲ್ಲವೆ?''

ಚಂದ್ರಣ್ಣ ಮಾರುತ್ತರವೀಯಲಿಲ್ಲ. ''ಏಳಿ ಶಂಕರ್, ತುಂಬ ಹೊತ್ತಾಯಿತು. ನೀವು ಹಸಿದು ಬಂದವರು. ಊಟವಾಗಬೇಕು ಇನ್ನೂ. ಹೋ! ಕೇಳಲು ಮರೆತೇಬಿಟ್ಟೆ ಇಲ್ಲಿ ಮನೆ ಮಾಡಿದ್ದೀರಾ – ಇಲ್ಲವೆ – ಹೋಟಲಲ್ಲಿ ಊಟ ಮಾಡುತ್ತಿದ್ದೀರಾ?'' ಎಂದು ಕೇಳಿದ.

ಶಂಕರ ಮೇಲಕ್ಕೆದ್ದ. ''ಆಗಲೇ ಮನೆ ಮಾಡಿಯಾಗಿದೆ ಚಂದ್ರಣ್ಣ. ನನಗಿರುವ ನಂಟು ಎಂದರೆ ನನ್ನ ತಾಯಿಯೊಬ್ಬಾಕೆ. ಆಕೆಯನ್ನು ಎಲ್ಲಿ ಬಿಡುವುದಕ್ಕಾಗುತ್ತೆ? ನಾನು ಎಲ್ಲಿ ಹೋದರೂ ಮುದುಕಿ ನನ್ನ ಜೊತೆಗೇ ಇರುತ್ತಾಳೆ.''

''ಪಾಪ, ಇಷ್ಟು ಹೊತ್ತು ನಿಮ್ಮ ದಾರಿ ಕಾಯುತ್ತಾ ಕುಳಿತಿರುವರೊ ಏನೋ.''

''ಅಂಥದೇನೂ ಇಲ್ಲ. ನನಗಾಗಿ ಎಂದೂ ಕಾಯುತ್ತ ಕುಳಿತಿರುವುದಿಲ್ಲ ಆಕೆ. ಇದೆಲ್ಲ ಅಭ್ಯಾಸವಾಗಿದೆ. ನೀವೊಂದು ಸಲ ನಮ್ಮ ಮನೆಯ ಕಡೆ ಬನ್ನಿ ಚಂದ್ರಣ್ಣ. ಕೂಲಿಕಾರರ ಸ್ಥಿತಿಗತಿಗಳನ್ನು ಕಣ್ಣಾರೆ ಕಾಣಬೇಕು ನೀವು. ಹೀಗೆ ದೂರದಲ್ಲಿದ್ದು ಉಪಯೋಗವಿಲ್ಲ.''

''ದೂರ ಇರುವೆನೆಂದು ಹೇಗೆ ಹೇಳುತ್ತೀರಿ? ಈ ಊರಿಗೆ ಬಂದಂದಿನಿಂದ ಕೂಲಿಕಾರ ಪ್ರಪಂಚವನ್ನೆಲ್ಲ ಒಳಹೊಕ್ಕು ನೋಡುತ್ತಿದ್ದೇನೆ. ಒಂದೆರಡು ಸಲ ಕೂಲಿಕಾರ ವಸತಿಗೂ ಬಂದಿದ್ದೆ.''

''ಓಹೊ ಯಾವಾಗ?''

"ಒಂದೆರಡು ತಿಂಗಳ ಹಿಂದೆ. ಸೋಮಣ್ಣ ಎಂಬವರೊಬ್ಬರಿದ್ದಾರಲ್ಲ – ಕೈ ಕಳೆದುಕೊಂಡು ಬಿದ್ದಿದ್ದಾರೆ – ಅವರ ಮನೆಗೆ."

"ಹೀಗೊ? ಸರಿ. ಅವರಿಗೂ ನಿಮಗೂ ಹಳೆಯ ಪರಿಚಯವೇನು?"

"ಹೌದು. ಆಗಸ್ಟ್ ಚಳವಳಿಯ ಕಾಲಕ್ಕೆ ಇಬ್ಬರೂ ಒಂದೇ ಜೈಲಿನಲ್ಲಿದ್ದೆವು."

"ಆತ ಬಲು ಒಳ್ಳೆಯವ. ಪ್ರಾಮಾಣಿಕ ಕೆಲಸಗಾರ. ಸಂಘಕ್ಕಾಗಿ ತುಂಬ ದುಡಿದಿದ್ದಾನೆ. ಈಚೆಗೆ ಅವರು ಬಲು ತೊಂದರೆಯಾಗಿದೆ. ಆತನಿಗೆ ಪೂರಾ ಕಾಯಿಲೆ. ಅವರ ತಾಯಿಗೂ ಅಷ್ಟೆ.."

"ಅವರು ಪಾರ್ಟಿಯ ಸದಸ್ಯರಲ್ಲವೆ?"

"ಸದಸ್ಯರಲ್ಲ. ಆದರೂ ಪಾರ್ಟಿಯ ಬಗ್ಗೆ ಪೂರಾ ಅಭಿಮಾನ."

"ಪಾರ್ಟಿಯ ವತಿಯಿಂದ ಅವರಿಗೆ ಏನಾದರೂ ಸಹಾಯ ಮಾಡಲು ಸಾಧ್ಯವಾಗದೇ?"

ಶಂಕರ ವಿಲಕ್ಷಣವಾಗಿ ನಕ್ಕು ನುಡಿದ : "ಪಾರ್ಟಿಯ ವತಿಯಿಂದ ಸಹಾಯ? ಎಲ್ಲಿದ್ದೀರಿ ಚಂದ್ರಣ್ಣ? ಎಂಥ ಮಾತು ಹೇಳುತ್ತೀರಿ? ಸಹಾಯ ಮಾಡಲು ನಮ್ಮದೇನು ಶ್ರೀಮಂತರ ಪಾರ್ಟಿಯೆ? ಸಂಘದ ಕೆಲಸಗಳಿಗಾಗಿ ಪಾರ್ಟಿಯ ಕೆಲಸಗಳಿಗಾಗಿ ಪ್ರವಾಸ ಮಾಡಲು ಸಹ ಹಣವಿರುವುದಿಲ್ಲ ನಮ್ಮ ಹತ್ತಿರ. ಸದಸ್ಯರೆಲ್ಲ ದಟ್ಟ ದರಿದ್ರರು. ಅಂದ ಮೇಲೆ..."

"ಸರಿ, ಸರಿ," ಎಂದು ನುಡಿದು ಚಂದ್ರಣ್ಣ ಮಾತು ಮುಗಿಸಿದ. ಸೋಮಣ್ಣನ ಆ ಗುಡಿಸಲು, ಅದರಲ್ಲಿ ಅಸ್ಥಿಪಂಜರದಂತೆ ಬಿದ್ದುಕೊಂಡ ಸೋಮಣ್ಣ, ಅಸಹಾಯಕಳಾಗಿ ಮಲಗಿದ ಆ ಮುದುಕಿ, ಗಿರಣಿಯ ಕೆಲಸ ಮನೆ ಕೆಲಸಗಳೆಲ್ಲವನ್ನೂ ತೂಗಿಸಿಕೊಂಡು ಹೋಗುವ ರತ್ನಮ್ಮ ಆತನ ಬರಿಗಣ್ಣಿನೆದುರಿಗೆ ಬಂದು ನಿಂತಂತಾಯಿತು.

ಕತ್ತಲೆಯಲ್ಲಿ ದಾರಿ ತೆಗೆಯುತ್ತ ಇಬ್ಬರೂ ಊರಿನ ಕಡೆ ಸಾಗಿದರು.

# ೧೮

ಧರ್ಮಪುರದ ನಗರಸಭೆಯ ಆಯ್ಕೆಯ ದಿನ ಹತ್ತಿರ ಬರುತ್ತಿತ್ತು. ತಮ್ಮಣ್ಣನವರೂ ಅವರ ಗುಂಪಿನವರೂ ಹಗಲಿರುಳೂ ಪ್ರಚಾರ ಕಾರ್ಯದಲ್ಲಿ ತೊಡಗಿದ್ದರು. ಕಂಪನಿಯ ಕಚೇರಿಗೆ ಬಂದು ಹೋಗಲು ಸಹ ಬಿಡುವಿರಲಿಲ್ಲ ಅವರಿಗೆ. ಅದರಿಂದಾಗಿ ಕಂಪನಿಯ ಕೆಲಸದ ಭಾರವೆಲ್ಲವೂ ಚಂದ್ರಣ್ಣನ ಮೇಲೆಯೇ ಬಿದ್ದಿತ್ತು. ಆ ನಗರದ ಜನರೂ ಸಹ ಆಯ್ಕೆಯ ಗದ್ದಲದಲ್ಲಿ ಸಿಲುಕಿಕೊಂಡಿದ್ದುದರಿಂದ ಅಲ್ಲಿ ಷೇರ್ ಕೊಡಿಸುವುದೂ ಸಾಧ್ಯವಿರಲಿಲ್ಲ. ಅದರಿಂದಾಗಿ ಚಂದ್ರಣ್ಣ 'ಕ್ರಾಂತಿ'ಯ ಚಂದಾದಾರರು, ಏಜಂಟರು, ತನ್ನ ಪರಿಚಯದ ಮಿತ್ರರು ಮೊದಲಾದವರಿಗೆಲ್ಲ ಕಾಗದ ಬರೆದು ಅವರನ್ನು ಕಂಪನಿಯ ಪಾಲುಗಾರರನ್ನಾಗಿ ಮಾಡುವುದರಲ್ಲಿ ಮಗ್ನನಾಗಿದ್ದ.

ಶಿವಯೋಗಿ ಆತನಿಗೆ ನೆರವಾಗಬಹುದಾಗಿದ್ದಿತಾದರೂ ಆತ ಅತ್ತ ಮನಸ್ಸು ಹಾಕುತ್ತಿರಲೇ ಇಲ್ಲ. ಊಟ ಮಾಡಿಕೊಂಡು ಬಂದು ಹಾಸುಗೆಯ ಮೇಲೆ ಅಡ್ಡಾಗುವುದೇ ಆತನ ನಿತ್ಯಕ್ರಮವಾಗಿದ್ದಿತು. ಬೆಳಗಿನಿಂಗ ಸಾಯಂಕಾಲದವರೆಗೆ ಚಂದ್ರಣ್ಣನೊಬ್ಬನೇ ಕೆಲಸ ಮಾಡುವುದನ್ನು ಕಂಡರೂ ಕಾಣದವನಂತೆ ಆತ ಸುಖವಾಗಿ ಕಾಲ ಕಳೆಯುತ್ತಿದ್ದ. ಚಂದ್ರಣ್ಣನ ಕೆಲಸದಲ್ಲಿ ನೆರವಾಗುವುದು ತನ್ನ ಕರ್ತವ್ಯ ಎಂಬ ಅರಿವೂ ಆತನಿಗಿದ್ದಂತಿರಲಿಲ್ಲ.

ಆ ದಿನ ಮಧ್ಯಾಹ್ನ ಶಿವಯೋಗಿ ಊಟ ಮುಗಿಸಿಕೊಂಡು ಬಂದ ಬಳಿಕ ತನ್ನ ಪೆಟ್ಟಿಗೆಯಿಂದ ಇಸ್ಪೀಟು ಎಲೆಗಳ ಕಟ್ಟನ್ನು ಹೊರದೆಗೆದು ಎಲೆಗಳನ್ನು ಸಜ್ಜುಗೊಳಿಸುತ್ತ – "ಬಹಳ ಬೇಸರ ಬಂದಿದೆ ಚಂದ್ರಣ್ಣ ಕೊಂಚ ಆಡೋಣ ಬರ್‍ತೀರಾ?" ಎಂದ.

ಕವರುಗಳ ಮೇಲೆ ವಿಳಾಸಗಳನ್ನು ಬರೆಯುತ್ತಿದ್ದ ಚಂದ್ರಣ್ಣ ತನ್ನ ಕೆಲಸ ನಿಲ್ಲಿಸದೆ – "ನನಗೆ ಆ ಆಟದಲ್ಲಿ ಏನೂ ತಿಳಿಯದು," ಎಂದು ನುಡಿದ.

ಎಲೆಗಳನ್ನು ಹಾಸುಗೆಯ ಮೇಲೆ ತೂರಿ ಶಿವಯೋಗಿ ಗಟ್ಟಿಯಾಗಿ ನಗುತ್ತಾ – "ಆಶ್ಚರ್ಯ! ಇಷ್ಟು ವಯಸ್ಸಾದರೂ ಇಸ್ಪೀಟು ತಿಳಿಯುವುದಿಲ್ಲವೆಂದರೇನು!" ಎಂದ.

"ಹೊತ್ತು ಕಳೆಯುವುದಕ್ಕಾಗಿ ಸೋಮಾರಿಗಳು ಆಡುವ ಆ ಆಟ ಅಂದರೆ ನನಗಾಗದು ಯೋಗಿ!"

ಶಿವಯೋಗಿಯ ಮರ್ಮಸ್ಥಾನಕ್ಕೆ ಏಟು ಬಿದ್ದಂತಾಯಿತು. ಆತನೆಂದ –

''ಸೋಮಾರಿಗಳ ಆಟ ಅಂತ ಹೇಗೆ ಹೇಳ್ತೀರಿ? ಇದರಿಂದ ಬುದ್ಧಿ ಹರಿತವಾಗುತ್ತೆ. ಒಂದೆರಡು ದಿನ ಆಡಿನೋಡಿರಿ ಬೇಕಾದರೆ!''

''ಆಗಲೆ ಹೇಳಿದೆನಲ್ಲ – ನನಗಾಗುವುದಿಲ್ಲ ಎಂದು. ಕಂಪನಿಗೆ ಬೇಗನೆ ಹಣ ಕೂಡಿಸಬೇಕು. ಹೀಗೆ ಕಾಲಹರಣ ಮಾಡಿದರೆ ಹೇಗೆ? ಪ್ರಾರಂಭದ ಸರ್ಟಿಫಿಕೇಟ್ ತೆಗೆದುಕೊಳ್ಳುವುದೆಂದು? ಪ್ರೆಸ್ಸು ಬರುವುದೆಂದು? ಪತ್ರಿಕೆ ಹೊರಡುವುದೆಂದು? ಹನ್ನೆರಡು ಸಾವಿರ ರೂಪಾಯಿ ಬ್ಯಾಂಕಿನಲ್ಲಿಟ್ಟ ಹೊರತು ಸರ್ಟಿಫಿಕೇಟು ಸಿಕ್ಕುವಂತಿಲ್ಲ. ಆಗಲೆ ಬಂದ ಎಂಟು ಸಾವಿರದಲ್ಲಿ ಐದು ಸಾವಿರದ ಗತಿ ಹಾಗಾಯಿತು. ಈಗ ನಮ್ಮ ಚಂದಾದಾರರಿಂದಲೂ ಹಣ ಕೂಡಿಸೋಣ. ಅವರಿಗೆಲ್ಲ ಪತ್ರ ಬರೆಯಬೇಕು. ನಿಮ್ಮಿಂದ ಕೆಲಸವಾಗದಂತಿದ್ದರೂ ಚಿಂತೆಯಿಲ್ಲ, ಕೆಲಸದಲ್ಲಿ ತೊಂದರೆಯಾಗದಿದ್ದರೆ ದೊಡ್ಡ ಉಪಕಾರವಾದಂತೆ!''

''ನಾಲ್ಕು ಪತ್ರ ಬರೆಯೋದೆಂದರೆ ಏನು ಮಹಾ!'' ಎಂದು ಅಣಕವಾಡಿದ ಶಿವಯೋಗಿ.

''ನಾಲ್ಕು ಪತ್ರ? ಒಟ್ಟು ಆರುನೂರು ಜನರಿಗೆ ಬರೆಯಬೇಕಾಗಿದೆ. ಮೂರು ದಿನಗಳಿಂದ ಬರೆಯುತ್ತಿದ್ದೇನೆ. ಬೆಳಗಿನಿಂದ ಸಾಯಂಕಾಲದವರೆಗೆ ಪೆನ್ನು ಹಿಡಿದು ಬರೆಯುತ್ತ ಕುಳಿತವರಿಗೆ ಗೊತ್ತು ಅದರ ಸುಖ!''

''ಇಷ್ಟು ಕಷ್ಟಪಟ್ಟು ಕಣ್ಣೀರು ಕರೆಯಬೇಕಾದ ಅಗತ್ಯವಾದರೂ ಏನು? ಬರವಣಿಗೆಯ ಕೆಲಸಕ್ಕಾಗಿ ಒಬ್ಬ ಕಾರಕೂನನನ್ನು ನಿಯಮಿಸಿಕೊಳ್ಳೋಣ.''

ಚಂದ್ರಣ್ಣ ವಿಸ್ಮಿತನಾಗಿ ಶಿವಯೋಗಿಯ ಕಡೆಗೆ ತಿರುಗಿ – ''ಹೂಂ! ಇನ್ನು ಅದೊಂದು ಉಳಿದಿದೆ! ಮೂರು ನಾಲ್ಕು ದಿನವಷ್ಟೆ ಈ ಪತ್ರಗಳ ಕೆಲಸ. ಮುಂದೆ ಏನಿರುತ್ತೆ? ಯಾವ ಕೆಲಸ ಒಪ್ಪಿಸುತ್ತೀರಿ ಅವರಿಗೆ? ಇವರು ಕೆಲಸವನ್ನೆಲ್ಲ ನಾವಿಬ್ಬರೇ ನೋಡಿಕೊಳ್ಳಲಾರವೇ? ನಮಗೆ ಬರೆಯಲು ಬರುವುದಿಲ್ಲವೆ?'' ಎಂದು ಕೇಳಿದ.

''ಕಾರಕೂನೀ ಕೆಲಸ ಮಾಡಲು ನಾನೇನು ಕ್ಲಾರ್ಕ್ ಅಲ್ಲ'' ಎಂದು ಬಿಗುವಿನಿಂದ ನುಡಿದ ಶಿವಯೋಗಿ.

''ಮತ್ತೆ?'' ಎಂದು ಬೆರಗುಗೊಂಡು ಕೇಳಿದ ಚಂದ್ರಣ್ಣ.

''ಲಿಮಿಟೆಡ್ ಕಂಪನಿಯ ಮ್ಯಾನೇಜಿಂಗ್ ಡೈರೆಕ್ಟರ್ ಎಂದರೆ ಸಾಮಾನ್ಯವೆ? ನಾನು ಕಾರಕೂನನ ಕೆಲಸ ಮಾಡಬೇಕೇ?''

"ಛೆ! ಪಾಪ! ನಿಮ್ಮ ಘನತೆಗೆ ಕಡಿಮೆ ಅದು. ನೀವು ಹೀಗೇ ಇಸ್ಪೀಟು ಆಡುತ್ತ ಹಾಸುಗೆಯ ಮೇಲೆ ಲೋಲಾಡುತ್ತಿರಬೇಕು!" ಎಂದು ಕಟುವಾಗಿ ನುಡಿದ ಚಂದ್ರಣ್ಣ.

ಇಸ್ಪೀಟು ಎಲೆಗಳನ್ನು ದೂರ ಬಿಸುಟು ಶಿವಯೋಗಿ ಸಿಟ್ಟಿನಿಂದ ಮೇಲಕ್ಕೆದ್ದ. ಗೋಡೆಗೆ ನೇತಾಡುತ್ತಿದ್ದ ಅಂಗಿಯನ್ನು ತೆಗೆದು ಧರಿಸಿ ಕೈಯಲ್ಲಿ ಟೊಪ್ಪಿಗೆ ಹಿಡಿದು ಕೊಂಡು ಸರಸರನೆ ಹೊರಟುಹೋದ. ಆತನ ರೂಪಾವೇಶವನ್ನು ಕಂಡು ಚಂದ್ರಣ್ಣನಿಗೆ ಕೊಂಚ ನಗು ಬರದಿರಲಿಲ್ಲ. ಆತನನ್ನು ಸುಧಾರಿಸುವುದು ಹೇಗೆ ಎಂಬುದೇ ಆತನಿಗೊಂದು ಸಮಸ್ಯೆಯಾಯಿತು.

ಕೊಂಚ ಹೊತ್ತು ಕಳೆದಿರಬಹುದು. ಅಕಸ್ಮಾತ್ತಾಗಿ ಕೊಟ್ರಪ್ಪನ ಸವಾರಿ ಅಲ್ಲಿಗೆ ಆಗಮಿಸಿತು. ಚಂದ್ರಣ್ಣನೊಬ್ಬನೇ ಬರೆಯುವ ಕೆಲಸದಲ್ಲಿ ತೊಡಗಿದ್ದುದನ್ನು ಕಂಡು ಆತ – "ನಾನೂ ಬರೆಯುತ್ತೇನೆ ಚಂದ್ರಣ್ಣ, ನೀವು ಸ್ವಲ್ಪ ಸುಧಾರಿಸಿಕೊಳ್ಳಿ. ಬರೆದು ಬರೆದು ಕೈ ನೋಯುತ್ತಿರಬಹುದಲ್ಲ ನಿಮಗೆ?" ಎಂದು ಹೇಳಿ ಲೇಖನಿ ಕೈಗೆತ್ತಿಕೊಂಡ. ಚಂದ್ರಣ್ಣ ವಿಳಾಸಗಳನ್ನು ಓದಿ ಹೇಳತೊಡಗಿದ, ಕೊಟ್ರಪ್ಪ ಬರೆಯತೊಡಗಿದ.

ಬರೆಯುತ್ತಲಿದ್ದ ಹಾಗೆ ಆತ ಹಾಸುಗೆಯ ಕಡೆಗೆ ದೃಷ್ಟಿ ತೂರಿ ಅಲ್ಲಿ ಚೆಲ್ಲಾಪಿಲ್ಲಿ ಯಾಗಿ ಬಿದ್ದಿದ್ದ ಇಸ್ಪೀಟು ಎಲೆಗಳನ್ನು ಕಂಡು – "ಇದೇನು ಸಾರ್, ನೀವು ಆಡುತ್ತೀರಾ?" ಎಂದು ಕೇಳಿದ.

ಚಂದ್ರಣ್ಣ ನಗುತ್ತಾ – "ಇಲ್ಲವಪ್ಪ, ನನಗೆ ರಾಜಾ ಗುಲ್ಲಾ್ಯ ಎರಡು ಶಬ್ದ ಬಿಟ್ಟರೆ ಆ ಆಟದಲ್ಲಿ ಇನ್ನೇನು ತಿಳಿಯದು. ಅವು ನಮ್ಮ ಯೋಗೀಶ ಸ್ವಾಮಿಗಳವು," ಎಂದ.

"ಅದೇನು, ಹೀಗೆ ಬಿಸುಟಿ ಹೋಗಿದ್ದಾರೆ?"

"ಅವರ ಸ್ವಭಾವ ಗೊತ್ತಿಲ್ಲವೆ ನಿನಗೆ? ಚಿಕ್ಕಮಕ್ಕಳ ಹಾಗೆ ಒಮ್ಮೆಲೆ ಗುರ್ ಎಂದು ಸಿಟ್ಟು ಮಾಡಿಕೊಳ್ಳುತ್ತಾರೆ. ನಾನು ಬರೆಯುತ್ತ ಕುಳಿತಾಗ ಆಡಲು ಕರೆದರು, ನಾನು ಏನೋ ಅಂದೆ – ಅಷ್ಟಕ್ಕೇ ಸಿಡಿಮಿಡಿಗೊಂಡು ಹೊರಟುಹೋದರು. ಕಾಗದ ಗಳನ್ನು ಬರೆಯಲು ನಾನೇನು ಕ್ಲಾರ್ಕೇ? ಬೇಕಾದರೆ ಒಬ್ಬ ಕಾರಕೂನನ್ನು ನಿಯಮಿಸಿ ಕೊಳ್ಳೋಣ – ಅಂದರು."

"ಹೀಗಂದರೇನು? ಹಾಗಾದರೆ ಖಂಡಿತ ಒಬ್ಬರನ್ನು ಕರೆದುಕೊಂಡೇ ಬರುತ್ತಾರೆ ಅವರು. ಮನಸ್ಸಿಗೆ ಬಂದುದನ್ನು ಹಿಂದೆ ಮುಂದೆ ನೋಡದೆ ತಕ್ಷಣ ಮಾಡಿ

ಬಿಡುವುದು ಅವರ ಪದ್ಧತಿಯೆಂದು ತೋರುತ್ತೆ. ಕಂಪನಿಗೆ ಈಗಾಗಲೇ ಆಗಿರುವ ಖರ್ಚು ಸಾಲದೇ? ಇನ್ನು ಈ ಕ್ಲಾರ್ಕ್‌ನಿಗೆ ಏತಕ್ಕೆ ಒಣ ಖರ್ಚು? ಅಂಥ ಭಾರೀ ಕೆಲಸವಾದರೂ ಏನಿರುತ್ತೆ? ದಿವಸಕ್ಕೆ ಒಂದೆರಡು ಪತ್ರಗಳಾದರೆ ಬಹಳವಾಯಿತು, ಅಲ್ಲವೆ? ಬೇಕಾದರೆ ನಾನೇ ಒಂದು ಮಾಡಿಕೊಟ್ಟು ಹೋಗಬಹುದು ಆ ಕೆಲಸವನ್ನು''

''ಪಾಪ ನಿನಗೇಕಪ್ಪ ತೊಂದರೆ? ನಾವಿಲ್ಲವೆ? ನಾವೇನು ಓದಲರಿಯದವರೇ? ಬರೆಯಲರಿಯದವರೇ? ನಾವಿರುವುದು ಏತಕ್ಕಾಗಿ? ಮ್ಯಾನೇಜಿಂಗ್ ಡೈರೆಕ್ಟರರೆಂದು ಕರೆಯಿಸಿಕೊಂಡು ಸುಮ್ಮನೆ ಕುರ್ಚಿಯ ಮೇಲೆ ಕುಳಿತುಕೊಳ್ಳುವುದಕ್ಕೇ? ಅಂಥ ಕೆಲಸವಿಲ್ಲದ ಕೆಲಸವನ್ನು ನಾನಂತೂ ಒಲ್ಲೆ. ಏನಾದರೊಂದು ಕೆಲಸವಿಲ್ಲದಿದ್ದರೆ ನನಗೆ ಸಮಾಧಾನವೇ ಇರುವುದಿಲ್ಲವಲ್ಲ.''

''ನನಗೂ ಹಾಗೆಯೆ. ಯಾವಾಗಲೂ ದುಡಿತ ಬೇಕು.''

''ಯೋಗೀಶರಿಗೆ ಇಷ್ಟು ಸಹ ಹೇಗೆ ತಿಳಿಯುವುದಿಲ್ಲವೊ ಎಂದು ಆಶ್ಚರ್ಯ ನನಗೆ. ಇಂಥ ಆಲಸ್ಯ ಅವರಿಗೆ ಹೇಗೆ ಅಂಟಿಕೊಂಡಿರಬಹುದು?''

''ನಾ ಹೇಳಲೇ?''

''ಹೂಂ. ಬಿಡು ಗಾಡಿ!''

''ಯೋಗೀಶರು ಜನ್ಮತಃ ಆಲಸಿಯಾಗಿರಲಿಕ್ಕಿಲ್ಲ, ಅವರು ಬೆಳೆದ ವಾತಾವರಣ ಅವರನ್ನು ಹೀಗೆ ಮಾಡಿರಬೇಕು. ಇವರು ಬೆಳೆದುದು ಇಲ್ಲಿನ ಮಠದಲ್ಲಿ, ಮಠದ ಸ್ವಾಮಿಗಳಿಗೆ ಇವರ ಮೇಲೆ ಬಹಳ ಪ್ರೀತಿ. ಇವರು ಬಯಸಿದ ತಿನಿಸು, ಕೇಳಿದ ವಸ್ತುಗಳೆಲ್ಲ ದೊರೆಯುತ್ತಿದ್ದುವು. ಬೆಳಗಿನಿಂದ ಸಂಜೆಯವರೆಗೂ ತಿನ್ನುತ್ತ ಅಲ್ಲಿ ಇಲ್ಲಿ ಆಟವಾಡಿಕೊಂಡಿರುವದೇ ಇವರ ನಿತ್ಯ ಕ್ರಮವಾಗಿತ್ತು. ದೊಡ್ಡವರಾದ ಮೇಲೆ ಸ್ಕೂಲಿಗೆ ಹೋಗತೊಡಗಿದರಾದರೂ ಓದಿನಲ್ಲಿ ಕೊಂಚವೂ ಆಸಕ್ತಿಯಿರಲಿಲ್ಲ, ಸ್ವಾಮಿಗಳು ಕೊಟ್ಟ ಲಾಡುಗಳನ್ನು ತಿನ್ನುವುದರಲ್ಲೇ ಕಾಲ ಕಳೆಯುತ್ತಿತ್ತು. ಪ್ರಾಥಮಿಕ ಶಿಕ್ಷಣವನ್ನು ಹೇಗೋ ಮುಗಿಸಿ ಹೈಸ್ಕೂಲಿಗೆ ಅಡಿಯಿರಿಸಿದರು. ಅಲ್ಲಿ ಷೋಕಿ ಹುಡುಗರ ಸಹವಾಸವಾಯಿತು. ಇಸ್ಪೀಟು, ಕಾಫಿ ತಿಂಡಿ, ಸಿನಿಮಾ ಚಟವೂ ಅಂಟಿಕೊಂಡಿತು. ಸ್ವಾಮಿಗಳಿಗೆ ಮಾತ್ರ ಇದಾವುದರ ಗಂಧವೂ ಇರಲಿಲ್ಲ, ಇವರು ಕೇಳಿದಷ್ಟು ಹಣ ಕೊಡುತ್ತಿದ್ದರವರು. ಮುಂದೆ ಕಾಶಿಗೆ ಹೋದರು. ಅಲ್ಲೂ ಅಷ್ಟೆ ಮಠದಿಂದ ಸಾಕಷ್ಟು ಹಣ ಬರುತ್ತಿತ್ತು. ಸುಖವಾಗಿ ಜೀವನ ಸಾಗುತ್ತಿತ್ತು. ಒಂದು ಪರೀಕ್ಷೆಯನ್ನೂ ಪಾಸು

ಮಾಡಲಾಗಲಿಲ್ಲ. ಡಿಗ್ರಿಗಳಿಂದ ಏನೂ ಉಪಯೋಗವಿಲ್ಲವೆಂದು ನಿರ್ಧರಿಸಿ ಊರಿಗೆ ಬಂದುಬಿಟ್ಟರು. ತರುಣ ವಯಸ್ಸು, ಷೋಕಿ ಜೀವನದಲ್ಲಿ ಆಸಕ್ತಿ. ಕಾವಿಬಟ್ಟೆ ವೈರಾಗ್ಯ ಜೀವನ ರುಚಿಸೀತೇ? ಅವುಗಳ ತಂಟೆಯೇ ಬೇಡ ಅಂತ ನಿರ್ಧರಿಸಿದರು. ಏನಾದರೂ ವ್ಯವಹಾರ ಮಾಡೋಣವೆಂದರೆ ಕೈಯಲ್ಲಿ ಕಾಸಿರಲಿಲ್ಲ. ಇಷ್ಟು ದಿನಗಳವರೆಗೆ ಬೇರೆಯವರ ಹಣದ ಮೇಲೆ ಜೀವನ ಸಾಗಿಸಿ ಅದೇ ಅಭ್ಯಾಸವಾಗಿತ್ತು. ದುಡಿದು ಬೆವರಿಳಿಸಿ ಸಂಪಾದಿಸುವುದರ ಕಡೆಗೆ ಒಲವಿರಲಿಲ್ಲ. ಸರಿ. ಇನ್ನೇನು ಮಾಡಬೇಕು! ಇನ್ನು ಮುಂದೆಯೂ ಅದೇ ಕ್ರಮವನ್ನು ಮುಂದುವರಿಸುವುದೆಂದು ಬಗೆದು ತಮ್ಮ ಸ್ನೇಹಿತರಾದ ತುಂಗಭದ್ರಯ್ಯನವರ ಸಲಹೆ ಕೇಳಿದರು.''

''ಈ ತುಂಗಭದ್ರಯ್ಯನವರಿಗೂ ಇವರಿಗೂ ಭಾರಿ ಸ್ನೇಹವೇನು?''

''ಹೌದು. ಇಬ್ಬರೂ ಹೈಸ್ಕೂಲಿನಲ್ಲಿ ಕೂಡಿ ಕಲಿತವರು. ತುಂಗಭದ್ರಯ್ಯ ಆಗಲೆ ಬಿಲ್ಡಿಂಗ್ ಕಂಪನಿಯೊಂದನ್ನು ಸ್ಥಾಪಿಸಿದ್ದರು. ಕಂಪನಿಗಳನ್ನು ಹೇಗೆ ನಡೆಸಬೇಕು, ಹೇಗೆ ಹಣ ಮಾಡಿಕೊಳ್ಳಬೇಕು ಎಂಬ ವಿದ್ಯೆಯಲ್ಲಿ ನಿಷ್ಣಾತರಾಗಿದ್ದರು.''

''ಈ ತುಂಗಭದ್ರಯ್ಯನವರು ಮೊದಲಿನಿಂದಲೂ ಹಣವುಳ್ಳವರೇ ಹೇಗೆ?''

''ಎಲ್ಲಿನ ಹಣ ಚಂದ್ರಣ್ಣ? ಅವರು ತೀರ ಬಡವರು. ವಿದ್ಯಾಭ್ಯಾಸ ಮಾಡಲು ಕಾಸಿರಲಿಲ್ಲ. ಬಹಳ ಕಷ್ಟಪಟ್ಟು ಓದಿದವರು. ಪದವಿ ದೊರಕಿಸಿದ ಬಳಿಕ ನೌಕರಿ ಮಾಡಬಹುದಾಗಿತ್ತು. ಆದರೆ ಅದರಲ್ಲಿ ಸುಖವಿಲ್ಲ ಅಂದುಕೊಂಡು ಒಬ್ಬಿಬ್ಬರು ಶ್ರೀಮಂತರನ್ನು ಹಿಡಿದು ಅವರ ತಲೆ ಬೋಳಿಸಿ ಈ ಕಂಪನಿ ಸ್ಥಾಪಿಸಿದರು. ಇಂದು ಏನಿಲ್ಲ ಅಂದರೂ ಐವತ್ತು ಸಾವಿರ ರೂಪಾಯಿಗಳನ್ನಾದರೂ ಗಳಿಸಿರಬೇಕು ಅವರು.''

''ಇಷ್ಟು ಗಳಿಸಿದ್ದರೆ ಯೋಗೀಶರ ಹತ್ತಿರ ಮೂರು ಸಾವಿರ ಏಕೆ ತೆಗೆದುಕೊಳ್ಳುತ್ತಿದ್ದರು?''

''ಅವರು ಗಳಿಸಿದ್ದೇ ಹೀಗೆ ಅಲ್ಲವೆ? ಹತ್ತಿರ ಹಣ ಇದ್ದರೂ ಏನೂ ಇಲ್ಲವೆಂಬ ನಾಟಕ ಮಾಡಿ ಅವರಿವರಿಂದ ತೆಗೆದುಕೊಂಡು ವಾಪಾಸು ಕೊಡದೆ ಮುಳುಗಿಸಿ ಬಿಟ್ಟರಾಯಿತು. ಇಲ್ಲಿನ ಹೆಚ್ಚು ಜನ ಶ್ರೀಮಂತರು ಹಣ ಮಾಡಿಕೊಂಡಿದ್ದು ಹೀಗೆಯೆ. ಇದೆಲ್ಲ ಅನ್ಯಾಯದ ಹಣವೆ.''

''ಈ ತುಂಗಭದ್ರಯ್ಯನವರ ಸಲಹೆಯಿಂದ ತಾನೆ ಯೋಗೀಶರು ಈ ಕಂಪನಿಯ ಸ್ಥಾಪನೆಗೆ ಹೊರಟದ್ದು?''

"ಮೊದಲಿನಿಂದಲೂ ಯೋಗೀಶರಿಗೆ ಸಲಹೆಗಾರರು ತುಂಗಭದ್ರಯ್ಯ. ಅವರ ಸಲಹೆಯಿಲ್ಲದೆ ಇವರು ಒಂದು ಹೆಜ್ಜೆಯನ್ನೂ ಎತ್ತಿಡುವುದಿಲ್ಲ."

"ಸರಿ. ಅಂತೆಯೇ ಮೂರು ಸಾವಿರ ತೆಗೆದುಕೊಂಡಿರಬೇಕು."

"ಮುಂದೆ ಹೇಗೆ ಮಾಡುತ್ತೀರಿ ಚಂದ್ರಣ್ಣ?"

"ಇನ್ನು ಆ ಹಣವೆಲ್ಲ ತಿರುಗಿ ಬರುವುದೋ ಇಲ್ಲವೊ. ಕಂಪನಿಯಂತೂ ಬೇಗ ಕೆಲಸಕ್ಕಾರಂಭಿಸಬೇಕು."

"ಹಾಗಾದರೆ ಇದೊಂದು ಪಂಚಾಯಿತಿಯೆ ಆಯಿತಲ್ಲ?"

"ಏನು ಮಾಡಬೇಕೆಂಬುದು ತಿಳಿಯದಾಗಿದೆ. ಇತ್ತ ಜನರಲ್ಲಿ ಹಣ ಕಡಿಮೆಯಾಗುತ್ತಾ ಇದೆ. ಷೇರ್ ಮಾರಾಟ ಬಿದ್ದುಹೋಗಿದೆ. ಹಣ ಇದ್ದವರು ಕೆಲವರು ಅರಳೆಯ ಗಿರಣಿಗಳಂಥ ಲಾಭದಾಯಕ ಉದ್ಯಮಗಳಲ್ಲಿ ತೊಡಗಿಸುತ್ತಿದ್ದಾರೆ. ಪತ್ರಿಕೆಗಳ ವ್ಯವಹಾರ ಅಂದರೆ ಅವರಿಗೂ ಗೊತ್ತಲ್ಲವೆ? ಇದರಲ್ಲಿ ಲಾಭ ಬರುವುದು ಯಾವಾಗಲೊ! ಅದೂ ಬಂದರೆ ಬಂತು, ಇಲ್ಲವಾದರೆ ಇಲ್ಲ, ನಷ್ಟವಾದರೂ ಆಶ್ಚರ್ಯವಿಲ್ಲ. ಇದರಲ್ಲಿ ಜನ ಪ್ರಿಂಟಿಂಗ್ ಕಂಪನಿಗೆ ಹಣ ಹಾಕುವುದು ಸಾಹಸದ ಮಾತೇ ಅಲ್ಲವೇ?"

"ಹೌದು ಮತ್ತೆ! ಇನ್ನೂ ಒಂದು ಕಾರಣವುಂಟು. ಈಗಾಗಲೇ ಬೆಂಗಳೂರಿನಲ್ಲಿ ಮೂರು ನಾಲ್ಕು ಪ್ರಿಂಟಿಂಗ್ ಕಂಪನಿಗಳು ಹೊರಟು ದಿನಪತ್ರಿಕೆ ಹೊರಡಿಸುವುದಾಗಿ ಹೇಳಿ ಲಕ್ಷಾಂತರ ರೂಪಾಯಿ ಕೂಡಿಸಿದ್ದುವು. ಯುದ್ಧಕಾಲದಲ್ಲಿ ಹೇರಳವಾಗಿ ಲಾಭ ಪಡೆದ ಜನರು ಹಿಂದೆ ಮುಂದೆ ನೋಡದೆ ಈ ಕಂಪನಿಗಳ ಷೇರ್ ಕೊಂಡುಕೊಂಡರು. ಲಾಭ ಬಂದೀತೆಂದು ಅವರ ಆಸೆಯಿತ್ತು. ಆದರೆ ಕಂಪನಿ ಕಟ್ಟಿದ ಆ ಜನರು ಪತ್ರಿಕೆಗಳನ್ನು ಸರಿಯಾಗಿ ನಡೆಸುವುದನ್ನು ಬಿಟ್ಟು ಸುಳ್ಳು ಲೆಕ್ಕ ಬರೆದು ಹಣವನ್ನು ತಿಂದು ಮನೆಗಳನ್ನು ಕಟ್ಟಿಸಿಕೊಂಡರು, ಕಾರು ಕೊಂಡುಕೊಂಡರು. ಅರ್ಥಾತ್ ಒಂದೆರಡು ವರ್ಷಗಳಲ್ಲೇ ಆ ಕಂಪನಿಗಳು ಲಾಟರಿ ಹೊಡೆದುವು. ಅಂದಿನಿಂದ ಪ್ರಿಂಟಿಂಗ್ ಕಂಪನಿಗಳೆಂದರೆ ಜನರಿಗೆ ನಂಬಿಕೆಯೇ ಇಲ್ಲ, ಅವರೆಲ್ಲ ಮೋಸಗಾರರೆಂದು ಜನರ ಭಾವನೆಯಾಗಿದೆ."

"ಇಂಥ ಪರಿಸ್ಥಿತಿಯಿರುವಾಗ ಹೊಸದಾಗಿ ಹೊರಟ ನಮ್ಮ ಕಂಪನಿಯ ಬಗೆಗೂ ಈ ಜನರಿಗೆ ಸಂದೇಹ ಬರುವುದು ಸ್ವಾಭಾವಿಕ. ಏನೋ – ಕೇವಲ

ಡೈರೆಕ್ಟರುಗಳ ಅಭಿಮಾನಕ್ಕೆ ಕಟ್ಟುಬಿದ್ದು ಷೇರ್ ಕೊಳ್ಳಬೇಕು ಜನ. ಈಗ ನಡೆದಿರುವುದೂ ಹಾಗೇ. ನಮ್ಮ ಬಗೆಗಿರುವ ವಿಶ್ವಾಸಕ್ಕಾಗಿ, ಅಭಿಮಾನಕ್ಕಾಗಿ ಜನ ಷೇರ್ ಕೊಳ್ಳುತ್ತಿದ್ದಾರೆ. ಅವರ ವಿಶ್ವಾಸಕ್ಕೆ ತಕ್ಕ ಹಾಗೆ ನಾವು ಕಂಪನಿಯನ್ನು ಸರಿಯಾಗಿ ನಡಸಿಕೊಂಡು ಹೋಗಬೇಡವೆ? ಜನರ ನಿರೀಕ್ಷೆ ಎಲ್ಲ ವ್ಯರ್ಥವಾಗುವುದೋ ಎಂದು ದಿಗಿಲಾಗುತ್ತಿದೆ ನನಗೆ. ಯೋಗಿ ಈ ರೀತಿ ಹಣ ಹಾಳು ಮಾಡಿದರೆ ಅದನ್ನು ಮತ್ತೆ ತುಂಬಿಕೊಳ್ಳುವುದು ಹೇಗೆ?''

''ಈ ವಿಷಯವೆಲ್ಲ ತಮ್ಮಣ್ಣನವರಿಗೆ ತಿಳಿಯದೇ?''

''ಇಲ್ಲ ಇನ್ನೂ ಯಾರಿಗೂ ಗೊತ್ತಾಗಲಿಲ್ಲ. ಗೊತ್ತಾಗುವುದಾದರೂ ಹೇಗೆ? ನಾನು ಹೇಳಿದರೆ ತಾನೆ? ಇಂಥಿಂಥವರಿಗೆ ಹಣ ಕೊಟ್ಟಿದ್ದೇನೆ ಎಂದು ಯೋಗೀಶ ರಂತೂ ಡೈರೆಕ್ಟರುಗಳ ಹತ್ತಿರ ಹೇಳುವಂತಿಲ್ಲವಲ್ಲ?''

''ಈ ವಿಷಯವನ್ನು ಬಚ್ಚಿಡದೆ ಈಗಲೇ ಎಲ್ಲ ಡೈರೆಕ್ಟರರಿಗೂ ತಿಳಿಸಿ ಬಿಡುವುದೊಳ್ಳೆಯದೆಂದು ನನ್ನ ಅಭಿಪ್ರಾಯ. ನಾಳೆ ಪ್ರಸಂಗ ಮೈಮೇಲೆ ಬಂದರೆ ಏನು ಮಾಡುತ್ತೀರಿ ನೀವು?''

''ಬರದ ಹಾಗೆ ನೋಡಿಕೊಳ್ಳಬೇಕು. ಯೋಗೀಶ ತಪ್ಪು ಮಾಡಿದಾರೆ ತಿಳಿಯದೆ ಮಾಡುವ ತಪ್ಪೇ ಅನ್ನುವ. ನಾವಿಬ್ಬರೂ ಪಾಲುಗಾರರಾಗಿರುವಾಗ ಈ ತಪ್ಪನ್ನು ನಾವಿಬ್ಬರೇ ಸರಿಪಡಿಸಿಕೊಳ್ಳುವುದು ಉತ್ತಮ. ಈಗ ಈ ವಿಷಯವನ್ನು ನಾನು ಡೈರೆಕ್ಟರರಿಗೆ ತಿಳಿಸಿಬಿಟ್ಟರೆ ಕಂಪನಿಯ ಕೆಲಸಕ್ಕೆಲ್ಲ ಕಲ್ಲು ಬೀಳುವುದು ಖಂಡಿತ. ಅವರಿಂದ ಅಲ್ಪ ಸ್ವಲ್ಪ ಕೆಲಸವಾಗುವುದೂ ನಿಂತು ಹೋಗುವುದು.''

''ಹೌದು, ಹಾಗಾಗುವುದು ಸ್ವಾಭಾವಿಕ. ಡೈರೆಕ್ಟರುಗಳಿಗೆ ಒಮ್ಮೆ ಸಂಶಯ ಬಂದಿತೆಂದರೆ ಆಯಿತು. ಕೆಲಸವೆಲ್ಲ ಕೆಡುತ್ತದೆ.''

''ಅದಕ್ಕಾಗಿಯೇ ನಾನು ಸುಮ್ಮನಿದ್ದೇನೆ. ಬೇರೆ ಕಡೆಯಿಂದ ಹಣ ಕೂಡಿಸಲು ಪ್ರಯತ್ನಿಸುತ್ತಿದ್ದೇನೆ. ನಮ್ಮ ಸ್ನೇಹಿತರೂ ಅಭಿಮಾನಿಗಳೂ ಚಂದಾದಾರರೂ ಷೇರ್ ಕೊಳ್ಳಬಹುದು. ಈ ದಿಸೆಯಿಂದ ನಾಲ್ಕೈದು ಸಾವಿರ ರೂಪಾಯಿಗಳಾದರೂ ಕೂಡಬಹುದೆಂಬ ಆಸೆಯಿದೆ ನನಗೆ.''

''ಬಂದಾವು. ಆದರೆ ನೀವು ಕಂಪನಿಯ ವ್ಯವಸ್ಥಾಪಕರೆಂದು ತಿಳಿದು ಇವರೆಲ್ಲ ಹಣ ಹಾಕುವರು. ಮುಂದೆ ಏನಾದರೂ ಆಗಿ ನೀವು ಕಂಪನಿ ಬಿಡುವ ಪ್ರಸಂಗ

ಬಂದರೇನು ಮಾಡುತ್ತೀರಿ? ನಿಮ್ಮನ್ನು ನಂಬಿ ಹಣ ಹಾಕಿದ ಈ ಜನರಿಗೆ ಹೇಗೆ ಮುಖ ತೋರಿಸುತ್ತೀರಿ?''

''ಅಂಥ ಸಂದರ್ಭ ಬರದಂತೆ ನೋಡಿಕೊಳ್ಳಬೇಕು. ಯಾವಾಗಲೂ ಒಳ್ಳೆಯದಾಗುವುದೆಂಬ ಆಸೆಯಿರಬೇಕು. ಕೆಟ್ಟೀತು, ಹಾಳಾದೀತು ಎಂಬ ಅಂಜಿಕೆ ಇರಬಾರದು.''

ಅದೇ ದಿನ ಸಾಯಂಕಾಲ ಶಿವಯೋಗಿ ಒಬ್ಬ ಸೂಟುಧಾರಿ ಯುವಕನನ್ನು ಜೊತೆಗೆ ಕರೆದುಕೊಂಡು ಕಚೇರಿಗೆ ಬಂದ. ತಾನು ಕೂಡ್ರುತ್ತಿದ್ದ ಕುರ್ಚಿಯನ್ನು ಆತನಿಗೆ ಕೊಟ್ಟು ಅದರೆದುರಿನ ಮೇಜನ್ನು ತೋರಿಸಿ – ''ಇನ್ನು ಮುಂದೆ ಇದು ನಿಮ್ಮ ಕುರ್ಚಿ. ಇದು ನಿಮ್ಮ ಮೇಜು. ನಿಮಗೆ ಅಗತ್ಯವಾದ ಸಾಮಾನುಗಳೆಲ್ಲಾ ಇಲ್ಲಿವೆ,'' ಎಂದು ಹೇಳಿದ.

ಚಂದ್ರಣ್ಣ ಕೌತುಕದಿಂದ ಆ ಸೂಟುಧಾರಿಯನ್ನು ನಿಟ್ಟಿಸಿ ನೋಡಿದ. ಆತ ಸುಮಾರು ಇಪ್ಪತ್ತೈದು ವರ್ಷಗಳ ತರುಣ. ಸಾದಾ ಬಟ್ಟೆಯ ಸೂಟು ಹಾಕಿ ತಲೆಗೂದಲನ್ನು ಸೊಗಸಾಗಿ ಬಾಚಿಕೊಂಡಿದ್ದ. ಕೈಯಲ್ಲಿ ಸಿಗರೇಟು ಹೊಗೆಯಾಡುತ್ತಿತ್ತು.

''ಇವರು ನಮ್ಮ ಕಂಪನಿಯ ಹೆಡ್‌ಕ್ಲಾರ್ಕ್ ಸುಬ್ಬರಾಯರು,'' ಎಂದು ಶಿವಯೋಗಿ ಪರಿಚಯಕ್ಕಾರಂಭಿಸಿದ : ''ಇಂಟರ್‌ವರೆಗೆ ಓದಿದ್ದಾರೆ. ಟೈಪಿಂಗ್ ಶಾರ್ಟ್‌ಹ್ಯಾಂಡ್ ಎಲ್ಲವೂ ಬರುತ್ತೆ. ಒಂದು ನಿಮಿಷಕ್ಕೆ ನೂರು ಶಬ್ದಗಳ ಸ್ಪೀಡ್ ಇದೆ ಟೈಪಿಂಗ್‌ನಲ್ಲಿ. ಎರಡು ವರ್ಷಗಳವರೆಗೆ ಶಿವಮೊಗ್ಗೆಯ ಕಂಪನಿಯೊಂದರಲ್ಲಿ ಕೆಲಸಕ್ಕಿದ್ದರು. ಅಲ್ಲಿ ಸಂಬಳ ಸಾಲಲಿಲ್ಲವಾದ್ದರಿಂದ ಬಿಟ್ಟುಬಂದಿದ್ದಾರೆ.''

''ಸರಿ!'' ಎಂದು ಮಾತ್ರ ನುಡಿದು ಚಂದ್ರಣ್ಣ ತನ್ನ ಕೆಲಸದಲ್ಲಿ ತೊಡಗಿದ.

ಕಂಪನಿಯ ಫೈಲುಗಳನ್ನೆಲ್ಲ ಒಂದೊಂದಾಗಿ ತೆಗೆದು ಶಿವಯೋಗಿ ಅವುಗಳನ್ನು ಸುಬ್ಬರಾಯನಿಗೆ ತೋರಿಸಿ – ''ಇವುಗಳನ್ನೆಲ್ಲ ನೋಡಿಕೊಳ್ಳೋದು ನಿಮ್ಮ ಕೆಲಸ. ಅಲ್ಲಿ ಟೈಪ್‌ರೈಟರ್ ಇದೆ. ಅದನ್ನು ಉಪಯೋಗಿಸಿಕೊಳ್ಳಬಹುದು'' ಎಂದ.

ಸುಬ್ಬರಾಯ ಟೈಪರೈಟರಿನ ಮುಚ್ಚಳವನ್ನು ತೆಗೆದು, ಯಂತ್ರದ ಅಕ್ಷರಗಳ ಮೇಲೆ ಬೆರಳುಗಳನ್ನಾಡಿಸಿ ನೋಡಿದ. ಆತನ ತುಟಿಗಳ ಮೇಲೆ ಸೂಕ್ಷ್ಮ ನಗೆ ಮೂಡಿದುದನ್ನು ಚಂದ್ರಣ್ಣ ಗಮನಿಸದಿರಲಿಲ್ಲ.

ಗೋಡೆಗೆ ನೇತಾಡುತ್ತಿದ್ದ ಆ ಮುದಿ ಗಡಿಯಾರದಲ್ಲಿ ಆರು ಗಂಟೆಯಾಗುತ್ತಿದ್ದ

ಹಾಗೆ ಸುಬ್ಬರಾಯ ಎದ್ದು ಕಚೇರಿಯಿಂದ ಹೊರಟುನಡೆದ.

ನಾಲ್ಕೈದು ನಿಮಿಷ ಕಳೆದ ತರುವಾಯ ಚಂದ್ರಣ್ಣ – ''ಇದೇನು ಕೆಲಸ ಮಾಡಿಕೊಂಡು ಬಂದಿರಿ ಯೋಗಿ? ಈಗ ಈ ಕ್ಲಾರ್ಕ್ ಅಗತ್ಯವೇನಿತ್ತು?'' ಎಂದು ಕೇಳಿದ.

''ಬರೆದು ಬರೆದು ನಿಮ್ಮ ಆ ಕೈಗೇಕೆ ವೃಥಾ ಶ್ರಮವಾಗಬೇಕು? ಹೇಗೂ ಕಂಪನಿಗೆ ಒಬ್ಬ ಕ್ಲರ್ಕ್ ಬೇಕೇ ಬೇಕಲ್ಲವೆ? ಕಂಪನಿಯ ಕೆಲಸದಲ್ಲಿ ಅನುಭವಿಕರಾದ ಕಾರಕೂನರೂ ಸಿಕ್ಕುವುದು ವಿರಳ. ಮುಂದೆ ತೊಂದರೆಯಾಗಬಾರದೆಂದು ನಿಯಮಿಸಿಕೊಂಡೆ.''

''ಕಂಪನಿಗೆ ಪ್ರೆಸ್ ಆದರೂ ಬರಬೇಕೋ ಬೇಡವೋ? ಪ್ರೆಸ್ ಬಂದ ಬಳಿಕ ಆ ವಿಷಯದಲ್ಲಿ ಚೆನ್ನಾಗಿ ಅನುಭವವಿರುವ ಮ್ಯಾನೇಜರೊಬ್ಬರನ್ನು ನಿಯಮಿಸಿಕೊಳ್ಳಬಹುದು. ಈ ಶಾರ್ಟ್‌ಹ್ಯಾಂಡ್ ಟೈಪಿಂಗ್ ಈಗ ಏನು ಅಗತ್ಯ?''

''ಟೈಪ್‌ರೈಟರ್ ತಂದ ಮೇಲೆ ಟೈಪಿಸ್ಟ್ ಇಲ್ಲದಿದ್ದರಾಗುವುದೇ? ನೋಡಿದವರು ಏನೆಂದಾರು!'' ಎಂದ ಶಿವಯೋಗಿ.

''ಸರಿ! ಅವರಿಗೆ ಸಂಬಳ ಏನು ಗೊತ್ತು ಮಾಡಿದಿರಿ?''

''ತಿಂಗಳಿಗೆ ನೂರು ರೂಪಾಯಿ!?''

''ಎಲ್ಲಿಂದ ಕೊಡುತ್ತೀರಿ ಅದನ್ನು?''

''ಆಗಲೇ ಎರಡು ತಿಂಗಳ ಸಂಬಳ ಕೊಟ್ಟಾಯಿತು. ಸದ್ಯ ಕೊಡಬೇಕಾದ ತೊಂದರೆಯೇನೂ ಇಲ್ಲ.''

''ಕೊಟ್ಟುಬಿಟ್ಟಿರಾ? ಎಲ್ಲಿಂದ ಕೊಟ್ಟಿರಿ?'' ಎಂದು ಚಕಿತನಾಗಿ ಕೇಳಿದ ಚಂದ್ರಣ್ಣ.

''ಆ ಗೌಡರ ಶಿವರುದ್ರಪ್ಪನವರು ಷೇರ್ ಕೊಂಡಿದ್ದರಲ್ಲ, ಅದರ ಬಗ್ಗೆ ಎರಡು ನೂರು ರೂಪಾಯಿ ಬಂದಿತ್ತು, ನಿನ್ನೆ.''

''ನಿನ್ನೆ ಬಂದಿತ್ತೇ? ನನಗೆ ಹೇಳಲೇ ಇಲ್ಲವಲ್ಲ?''

''ನಿಧಾನವಾಗಿ ಹೇಳಿದರಾಯಿತೆಂದು ಸುಮ್ಮನಿದ್ದೆ.''

ಚಂದ್ರಣ್ಣ ದಿಗಿಲುಗೊಂಡು–''ಹೀಗೆ ಎಷ್ಟು ಹಣ ವಸೂಲು ಮಾಡಿಕೊಂಡಿದ್ದೀರಿ

ನನಗೆ ತಿಳಿಯದಂತೆ?'' ಎಂದು ಕೇಳಿದ.

''ನಾನೇನು ಲೆಕ್ಕ ಇಟ್ಟಿಲ್ಲ'' ಎಂದು ಒರಟು ದನಿಯಲ್ಲಿ ನುಡಿದ ಶಿವಯೋಗಿ.

ಚಂದ್ರಣ್ಣ ಹತಬುದ್ಧನಾಗಿ ಕೊಂಚ ಹೊತ್ತು ಸುಮ್ಮನೆ ಕುಳಿತಿದ್ದ. ಅನಂತರ ತಲೆಯೆತ್ತಿ ಶಿವಯೋಗಿಯನ್ನು ತೀಕ್ಷ್ಣವಾಗಿ ದಿಟ್ಟಿಸಿ ನೋಡುತ್ತ – ''ಲೆಕ್ಕ ಇಟ್ಟಿಲ್ಲ ಅಂದರೇನು ಯೋಗಿ? ಇದೇನು ಹುಡುಗಾಟವಾಯಿತಲ್ಲ! ಇದು ಲಿಮಿಟೆಡ್ ಕಂಪನಿಯೋ, ನಿಮ್ಮ ಖಾಸಗಿ ಅಂಗಡಿಯೊ?'' ಎಂದ.

''ಖಾಸಗಿ ಅಂಗಡಿಯೆ ಅಂತ ಇಟ್ಟುಕೊಳ್ಳಿ. ನಾನು ಮಾಡದಿದ್ದರೆ ಕಂಪನಿ ಆಗುತ್ತಿತ್ತೇ? ಸ್ವಾಮಿಗಳೆಲ್ಲ ಷೇರ್ ಕೊಳ್ಳುತ್ತಿದ್ದರೇ?''

ಚಂದ್ರಣ್ಣ ನಿರುತ್ತರನಾದ. ಶಿವಯೋಗಿ ಇಂಥ ಮಾತಿಗಿಳಿಯಬಹುದೆಂಬ ಕಲ್ಪನೆಯೂ ಆತನಿಗಿರಲಿಲ್ಲ. ಅಂಥವನೊಂದಿಗೆ ಮುಂದೆ ಮಾತನಾಡುವುದೂ ಕಷ್ಟವೇ ಆಗಿತ್ತು. ಆದರೂ ತನ್ನ ಕರ್ತವ್ಯವನ್ನು ಕಡೆಗಣಿಸುವಂತಿರಲಿಲ್ಲ. ಈಗ ಸುಮ್ಮನಿದ್ದುಬಿಟ್ಟರೆ ಶಿವಯೋಗಿ ಎಲ್ಲವನ್ನೂ ಹಾಳು ಮಾಡುವನೆಂಬುದು ಸ್ಪಷ್ಟವಾಗಿದ್ದಿತು. ಅಂತೆಯೆ, ನಿಷ್ಠುರವಾದ ದನಿಯಲ್ಲಿ ನುಡಿದ ಚಂದ್ರಣ್ಣ :

''ಸ್ವಾಮಿಗಳು ಷೇರ್ ಕೊಂಡರು, ನಿಮ್ಮ ಪ್ರಭಾವದಿಂದಾಗಿ ಕೊಂಡರು ಅಂದ ಮಾತ್ರಕ್ಕೆ ಆ ಹಣವನ್ನೆಲ್ಲ ಯದ್ವಾತದ್ವಾ ಹಾಳುಮಾಡುವ ಅಧಿಕಾರ ಬರುತ್ತದೆಯೇ ನಿಮಗೆ? ಈ ಹಣಕ್ಕೆ ನಾನೂ ಹೊಣೆಗಾರನೆಂಬುದನ್ನು ಮರೆಯುತ್ತೀರಲ್ಲ? ಇದುವರೆಗೆ ನೀವು ಕಂಪನಿಯ ಪರವಾಗಿ ವಸೂಲು ಮಾಡಿದ ಹಣ, ಖರ್ಚು ಮಾಡಿದ ಹಣ – ಈ ಎಲ್ಲ ವಿವರಗಳನ್ನೂ ತಿಳಿಸುವ ಲೆಕ್ಕವೊಂದನ್ನು ಕೂಡಲೆ ಸಿದ್ಧಗೊಳಿಸಿ ಕೊಡಿ. ನಿಮಗೆ, ನನಗೆ ಕಂಪನಿಗೆ ಎಲ್ಲರಿಗೂ ಕ್ಷೇಮವಾಗಲೆಂದೇ ನಾನಿಷ್ಟು ನಿಷ್ಠುರವಾಗಿ ಆಡಬೇಕಾಗಿದೆ. ದಯೆಯಿಟ್ಟು ಕೋಪ ಮಾಡಿಕೊಳ್ಳಬೇಡಿ. ಇನ್ನೊಂದು ಮಾತು : ನನಗೆ ತಿಳಿಸದೆ ಇನ್ನು ಮೇಲೆ ಯಾವ ಹಣವನ್ನೂ ನೀವು ಸ್ವೀಕರಿಸಬೇಡಿ. ಖರ್ಚು ಮಾಡಬೇಡಿ. ನನ್ನನ್ನು ಒಂದು ಮಾತೂ ಕೇಳದೆ ಈ ಕಾರಕೂನನ್ನು ನಿಯಮಿಸಿಕೊಂಡಿದೀರಿ. ನಾನೀಗ ಬೇಡ ಅಂದರೆ ಅವರು ಹೊರಟು ಹೋಗವರು. ಆದರೆ ನಾನು ಹಾಗೆ ಮಾಡುವುದಿಲ್ಲ. ನಿಮ್ಮ ಮರ್ಯಾದೆ ಅಂದರೆ ನನ್ನ ಮರ್ಯಾದೆ. ಅಂತೆಯೇ ಸುಮ್ಮನಿದ್ದೇನೆ. ಇನ್ನು ಮೇಲೆ ಮಾತ್ರ ಇಂಥ ಕೆಲಸ ಮಾಡಬೇಡಿ, ದಯೆಯಿಟ್ಟು?''

ಚಂದ್ರಣ್ಣನ ಮಾತಿನಲ್ಲಿ ತುಂಬಿಬಂದಿದ್ದ ಕಳಕಳಿ ಶಿವಯೋಗಿಗೆ ಅರ್ಥವಾಗಲಿಲ್ಲ. ಆತ ಕೋಪದಿಂದ ಉರಿಯುತ್ತ-''ಯಾರಿಂದಲೂ ಉಪದೇಶ ಹೊಂದಲು ಹುಟ್ಟಿ ಬಂದವನಲ್ಲ ನಾನು! ಅಂಥ ಸ್ವಾಮಿಗಳು ಜಗದ್ಗುರುಗಳ ಮಾತೇ ನಡೆಯುವುದಿಲ್ಲ ನನ್ನ ಹತ್ತಿರ. ಇನ್ನು ನಿಮ್ಮ ಮಾತೇ!'' ಎಂದು ನುಡಿದು ಧಡಧಡನೆ ಹೆಜ್ಜೆ ಹಾಕುತ್ತ ಅಲ್ಲಿಂದ ಹೊರಟು ನಡೆದ.

ಅಂದಿನಿಂದ ಆತ ಚಂದ್ರಣ್ಣನೊಂದಿಗೆ ಮಾತನಾಡುವುದನ್ನೂ ನಿಲ್ಲಿಸಿಬಿಟ್ಟ. ಕಚೇರಿಗೆ ಬರುವುದನ್ನೂ ಕಡಿಮೆ ಮಾಡಿದ. ಕಂಪನಿಯ ಕೆಲಸದ ಕಡೆಗಂತೂ ಎಂದೂ ಹೊರಳಿ ನೋಡಿದವನಲ್ಲ ಆತ. ಈಚೆಗೆ ಅದನ್ನು ಪೂರ್ಣವಾಗಿ ಕಡೆಗಣಿಸಿಬಿಟ್ಟ. ಕಚೇರಿಯಲ್ಲಿದ್ದ ತನ್ನ ಸಾಮಾನುಗಳನ್ನೂ ಬಟ್ಟೆಬರೆಗಳನ್ನೂ ತುಂಗಭದ್ರಯ್ಯನ ಮನೆಗೆ ಸಾಗಿಸಿಬಿಟ್ಟು ಅಲ್ಲಿಯೆ ಇರತೊಡಗಿದ. ತಮ್ಮ ಮನೆಯ ಹೊರಗಣ ಕೊಠಡಿಯಲ್ಲಿ ಆತನಿಗಾಗಿ ಅನುಕೂಲ ಮಾಡಿಕೊಟ್ಟಿದ್ದ ತುಂಗಭದ್ರಯ್ಯ. ಊಟ ತಿಂಡಿಗಳಿಗೂ ಅಲ್ಲಿಯೇ ಏರ್ಪಾಡಾಗಿದ್ದಿತು.

ಕಂಪನಿಗೂ ಮ್ಯಾನೇಜಿಂಗ್ ಏಜಂಟರಿಗೂ ಆಗಬೇಕಾದ ಕರಾರುಪತ್ರವಿನ್ನೂ ಆಗಿರಲಿಲ್ಲ. ಪಾಲುಗಾರರ ಮತ್ತು ಡೈರೆಕ್ಟರುಗಳ ಸಭೆಯಲ್ಲಿ ಅದು ಸ್ವೀಕರಿಸಲ್ಪಟ್ಟು ಅದಕ್ಕೆ ಡೈರೆಕ್ಟರುಗಳ ಸಹಿಯಾದಾಗ ಮಾತ್ರವೆ ಅವರು ಮ್ಯಾನೇಜಿಂಗ್ ಏಜೆಂಟರೆಂದು ಸ್ಥಿರವಾಗುವುದು. ಕರಾರುಪತ್ರದ ಕರಡನ್ನು ಮೊದಲೇ ಸಿದ್ಧಗೊಳಿಸಲಾಗಿದ್ದಿತು. ಚಂದ್ರಣ್ಣನ 'ಕ್ರಾಂತಿ'ಯನ್ನು ಕಂಪನಿಗೆ ತೆಗೆದುಕೊಂಡು ಅದಕ್ಕಾಗಿ ಒಂದೂವರೆ ಸಾವಿರ ರೂಪಾಯಿ 'ಗುಡ್‌ವಿಲ್' ಕೊಡಬೇಕೆಂದು ಅದರಲ್ಲಿ ಉಲ್ಲೇಖಿಸಲಾಗಿದ್ದಿತು. ಮ್ಯಾನೇಜಿಂಗ್ ಏಜಂಟರ ಸೇವೆಗೆ ಪ್ರತಿಫಲವೆಂದು ತಿಂಗಳಿಗೆ ಮುನ್ನೂರು ರೂಪಾಯಿ ಕೊಡುವ ಷರತ್ತೂ ಇತ್ತು.

ಚಂದ್ರಣ್ಣ ಶಿವಯೋಗಿ, ಕಂಪನಿಯ ಕಾನೂನು ಸಲಹೆಗಾರರಾದ ಕರಿಬಸಯ್ಯ ವಕೀಲರು - ಮೂವರೂ ಸಿದ್ಧಗೊಳಿಸಿದ ಕರಾರುಪತ್ರ ಅದು. ಇಷ್ಟ ದಿನಗಳವರೆಗೆ ಅದರ ಬಗ್ಗೆ ಅವರಲ್ಲಿ ಯಾವ ಭಿನ್ನಾಭಿಪ್ರಾಯವೂ ಇರಲಿಲ್ಲ. ತನ್ನ ಪುಸ್ತಕಗಳ ಸರ್ವಾಧಿಕಾರಗಳನ್ನು ಬರೆದುಕೊಟ್ಟು ಚಂದ್ರಣ್ಣ 'ಕ್ರಾಂತಿ'ಯನ್ನು ವಹಿಸಿಕೊಂಡಿದ್ದನಾದುದರಿಂದ ಕಂಪನಿಯಿಂದ ಆತನಿಗೆ ಅಷ್ಟು ಹಣ ಸಲ್ಲಬೇಕಾದುದು ನ್ಯಾಯವೆಂದೇ ಶಿವಯೋಗಿ ತಿಳಿದಿದ್ದ.

ಆದರೆ ಈಚೆಗೆ ಚಂದ್ರಣ್ಣನ ಬಗೆಗೆ ಆತನಿಗೆ ಮನಸ್ಸು ಕೆಟ್ಟುಹೋದಂದಿನಿಂದ

ಆ ಒಂದೂವರೆ ಸಾವಿರದ ವಿಚಾರವಾಗಿ ಆತ ಹೊಯ್ದಾಡತೊಡಗಿದ್ದ. ಕಂಪನಿಯಲ್ಲಿ ತನ್ನ ಅಧಿಕಾರ ನಡೆಯದಂತಾಗಿತ್ತು. ಚಂದ್ರಣ್ಣನು ಕೇಳದೆ ಒಂದು ಕಾಸನ್ನೂ ಖರ್ಚು ಮಾಡುವಂತಿರಲಿಲ್ಲ ತಾನು. ಈಗಲೇ ಹೀಗಾದರೆ ಮುಂದೆ ಹೇಗೊ? ಚಂದ್ರಣ್ಣ ಸರ್ವಾಧಿಕಾರಿಯಂತೆ ವರ್ತಿಸುತ್ತಿರುವನೆಂದು ಆತನಿಗನ್ನಿಸುತ್ತಿತ್ತು. ತನ್ನನ್ನು ಕಂಪನಿಯಿಂದ ಓಡಿಸಿಬಿಟ್ಟು ಸೂತ್ರಗಳನ್ನೆಲ್ಲಾ ತಾನೊಬ್ಬನೇ ಹಿಡಿದುಕೊಳ್ಳುವ ಅಪೇಕ್ಷೆಯಿದ್ದರೂ ಇದ್ದೀತು ಅವನಿಗೆ – ಎನಿಸುತ್ತಿತ್ತು ಶಿವಯೋಗಿಗೆ. ಅಂತೆಯೆ ಆತ ಕರಾರು ಪತ್ರದಲ್ಲಿ ಚಂದ್ರಣ್ಣನಿಗೆ ಅನುಕೂಲವಾಗುವಂಥ ಭಾಗಕ್ಕೆಲ್ಲ ಕಲ್ಲು ಹಾಕಲು ಪ್ರಯತ್ನಿಸತೊಡಗಿದ. ಅದಕ್ಕೆ ಗೆಳೆಯ ತುಂಗಭದ್ರಯ್ಯನ ಪ್ರೋತ್ಸಾಹವೂ ದೊರೆತಿದ್ದಿತು. ಶಿವಯೋಗಿ ತನಗೆ ಹಣ ಕೊಟ್ಟ ವಿಚಾರ ತಿಳಿದಾಗ ಚಂದ್ರಣ್ಣ ಆ ಬಗೆಗೆ ಅಸಹನೆ ತೋರಿಸಿದನೆಂಬುದು ಗೊತ್ತಾದಂದಿನಿಂದ ಆತ ಚಂದ್ರಣ್ಣನ ಹೆಸರು ಕೇಳಿದರೆ ಹಲ್ಲು ಕಡಿಯುತ್ತಿದ್ದ.

"ಆ ಒಂದು ಪತ್ರಿಕೆಗಾಗಿ ಒಂದೂವರೆಸಾವಿರ ರೂಪಾಯಿ ಏತಕ್ಕಾಗಿ ಹಾಳು ಮಾಡಬೇಕು ಯೋಗೀಶ್? ಅದಕ್ಕೆ ಬದಲು ಕಂಪನಿಯ ಪರವಾಗಿ ಹೊಸ ಪತ್ರಿಕೆಯನ್ನೇ ಹೊರಡಿಸಿದರಾಗದೇ?" ಎನ್ನುತ್ತಿದ್ದನಾತ.

"ಆದೀತು. ಆದರೆ ಚಂದ್ರಣ್ಣ ತಮ್ಮ ಪುಸ್ತಕಗಳನ್ನು ಮಾರಿ ಪತ್ರಿಕೆಯನ್ನು ಕೊಂಡಿದ್ದಾರೆ."

"ಇರಬಹುದು. ಅದು ಅವರ ಜವಾಬ್ದಾರಿ. ಪುಸ್ತಕ ಮಾರಬೇಕೆಂದು ಕಂಪನಿ ಅವರಿಗೆ ಕೇಳಿಕೊಂಡಿದ್ದಿತೇ?"

"ಆಗ ಕಂಪನಿ ಇರಲೇ ಇಲ್ಲ. 'ಕ್ರಾಂತಿ'ಯನ್ನು ನಿಲ್ಲಿಸಬಾರದೆಂಬ ಉದ್ದೇಶದಿಂದಲೇ ಕಂಪನಿ ಕಟ್ಟಲು ಹೊರಟದ್ದು ಚಂದ್ರಣ್ಣ – ಅದಕ್ಕಾಗಿಯೇ ಅದನ್ನು ಕೊಂಡರು."

"ಅದು ಅವರ ಸ್ವಾರ್ಥ. ಆದರೆ ನಿಮ್ಮ ಡೈರೆಕ್ಟರ್ ಬೋರ್ಡ್ ಇದಕ್ಕೆಲ್ಲ ಒಪ್ಪಬೇಕಲ್ಲ? ಒಂದೂವರೆ ಸಾವಿರ ಅಂದರೇನು ಸಾಮಾನ್ಯವೇ? ಮೊದಲೇ ಇದು ಧರ್ಮಪುರದ ಜನ. ವ್ಯಾಪಾರೀ ಮನೋವೃತ್ತಿಯದು. ದುಡ್ಡೇ ದೊಡ್ಡದು ಇದಕ್ಕೆ. ಕರಾರುಪತ್ರದಲ್ಲಿ ಈ ವಿಷಯದ ಉಲ್ಲೇಖವಿದೆಯೆನ್ನುವುದು ತಮ್ಮಣ್ಣನವರಿಗೆ ಗೊತ್ತಿದೆಯೆ?"

''ಇಲ್ಲ ಗೊತ್ತಾಗುವ ಸಂದರ್ಭವಿನ್ನೂ ಬಂದಿಲ್ಲ. ಸಭೆಯ ಸಂದರ್ಭದಲ್ಲಿ ಗೊತ್ತಾಗುವುದು.''

''ಅವರಿಗೆ ಗೊತ್ತಾದಾಗ ಏನು ಹೇಳುವರೋ ನೋಡಿ. ಹಾಗೆಲ್ಲ ವ್ಯರ್ಥವಾಗಿ ಒಂದೂವರೆ ಸಾವಿರ ರೂಪಾಯಿ ಸುರಿಯುವ ಜನವಲ್ಲ ಇದು.''

ತುಂಗಭದ್ರಯ್ಯ ಹೇಳಿದ ಹಾಗೆಯೆ ಆಯಿತು. ಡೈರೆಕ್ಟರ್ ಬೋರ್ಡ್ ಸಭೆ ಸೇರಿದಾಗ ಕರಾರು ಪತ್ರವನ್ನು ಮೊದಲನೆಯ ಸಲ ಓದಿ ಅವರೆಲ್ಲರೂ ಆಶ್ಚರ್ಯ ಗೊಂಡಂತೆ ತೋರಿತು.

''ಈ ಗುಡ್‌ವಿಲ್ ಹಣದ ಅರ್ಥ ನನಗಾಗಲಿಲ್ಲ'' ಎಂದರು ತಮ್ಮಣ್ಣನವರು.

ಚಂದ್ರಣ್ಣ ಅದರ ಬಗೆಗೆ ವಿವರವಾಗಿ ತಿಳಿಯಹೇಳಿದ. ಆದರೂ ಅವರಲ್ಲೊಬ್ಬರಿಗೂ ಈ ವಿಷಯ ಅರ್ಥವಾದಂತೆ ತೋರಲಿಲ್ಲ. ಇದೇನೋ ಒಂದು ಮೋಸ, ಒಂದೂವರೆ ಸಾವಿರ ರೂಪಾಯಿಗಳನ್ನು ನುಂಗಿಬಿಡಲು ಹೂಡಿದ ತಂತ್ರ – ಎಂದೇ ಅವರೆಲ್ಲ ಯೋಚಿಸುತ್ತಿದ್ದಂತಿದ್ದಿತು.

''ಹಳೆಯ ಪತ್ರಿಕೆಗಾಗಿ ಇಷ್ಟು ಹಣ ಏತಕ್ಕಾಗಿ ಸುರಿಯಬೇಕು? ಹೊಸ ಪತ್ರಿಕೆ ಹೊರಡಿಸಿದರಾಗದೇ?'' ಎಂದು ಕೇಳಿದರು ತಮ್ಮಣ್ಣ.

''ಆಗುತ್ತೆ. ಆದರೆ ಹೊಸಪತ್ರಿಕೆ ಹೊರಡಿಸಿ ಅದನ್ನು ಲೋಕಪ್ರಿಯವಾಗಿ ಮಾಡಬೇಕಾದರೆ ಒಂದು ವರ್ಷವಾದರೂ ಬೇಕಾಗುತ್ತೆ. ಆ ಅವಧಿಯಲ್ಲಿ ಪತ್ರಿಕೆಗೆ ಸಾವಿರಾರು ರೂಪಾಯಿ ನಷ್ಟವಾಗುತ್ತದೆ. 'ಕ್ರಾಂತಿ'ಗೂ ಎರಡು ಸಾವಿರದ ತನಕ ನಷ್ಟ ವಾಗಿತ್ತು. ಅದನ್ನು ಹಾಗೇ ಕೈಬಿಡುವಂತಿರಲಿಲ್ಲ. ಅಂತೆಯೇ, ಕಂಪನಿ ಮಾಡಲು ಹೊರಟದ್ದು ನಾವು. ಹೊಸ ಪತ್ರಿಕೆ ಹೊರಡಿಸಿದರೂ ಒಂದು ವರ್ಷ ನಷ್ಟದಲ್ಲೇ ನಡೆಸಬೇಕಾಗುತ್ತೆ. ಆ ನಷ್ಟದ ಹಣವನ್ನೇ 'ಗುಡ್‌ವಿಲ್' ಅಂತ 'ಕ್ರಾಂತಿ'ಗೆ ಕೊಡುವುದು ನ್ಯಾಯವಲ್ಲವೆ? ಎಲ್ಲ ಕಡೆಗಳಲ್ಲೂ ಇದೊಂದು ಸಂಪ್ರದಾಯ. 'ಕ್ರಾಂತಿ' ಈಗಾಗಲೇ ಲೋಕಪ್ರಿಯವಾಗಿದೆ. ಒಂದೆರಡು ತಿಂಗಳಲ್ಲೇ ಅದನ್ನು ಯಶಸ್ವಿಯಾಗಿ ನಡಸಬಹುದು ನಾವು.''

''ಅಂತೂ ಪತ್ರಿಕೆ ಅಂದರೆ ನಷ್ಟದ ವ್ಯವಹಾರವೇ ಅನ್ನಿ..'' ಮಾತನಾಡಿದವರು ಶಿವರುದ್ರಪ್ಪ

''ಮೊದಲು ಒಂದು ವರ್ಷ.''

ಡೈರೆಕ್ಟರುಗಳು ಪರಸ್ಪರ ಮುಖ ನೋಡಿಕೊಂಡರು. ಅವರವರಲ್ಲಿ ಪಿಸುಮಾತುಗಳೂ ನಡೆದವು.

''ಕಂಪನಿ ಲಾಭ ದೊರಕಿಸುವವರೆಗೆ ಮ್ಯಾನೇಜಿಂಗ್ ಏಜಂಟರಿಗೆ ತಿಂಗಳಿಗೆ ಮುನ್ನೂರು ರೂಪಾಯಿ ಕೊಡುವುದೆಂದರೆ ಹೆಚ್ಚಾಯಿತಲ್ಲ?'' ಎಂದರು ಗುರು ಶಾಂತಪ್ಪ

ಚಂದ್ರಣ್ಣ ಉತ್ತರವೀಯಲಿಲ್ಲ, ಶಿವಯೋಗಿಯೂ ಮೌನವಾಗಿದ್ದ.

''ಸಭೆಯನ್ನು ಮುಂದುವರಿಸೋಣ. ನಾವು ಆಲೋಚನೆ ಮಾಡಿ ಒಂದು ನಿರ್ಧಾರಕ್ಕೆ ಬರುತ್ತೇವೆ,'' ಎಂದು ನುಡಿದು ತಮ್ಮಣ್ಣನವರು ಮೇಲಕ್ಕೆದ್ದರು.

ಅಂದು ನಡೆದ ಚರ್ಚೆಯಿಂದ ಶಿವಯೋಗಿಗೆ ಸಮಾಧಾನವೆ ಆಯಿತು. ಚಂದ್ರಣ್ಣನಿಗೆ ಮಾತ್ರ ಕಳವಳವಾಗದಿರಲಿಲ್ಲ. ಮಾತುಕತೆಗಳ ಧಾಟಿಯನ್ನು ನಿರೀಕ್ಷಿಸಿದಾಗ 'ಕ್ರಾಂತಿ'ಯನ್ನು ಕಂಪನಿಗೆ ತೆಗೆದುಕೊಂಡು ಅದಕ್ಕೆ 'ಗುಡ್‌ವಿಲ್' ಹಣ ಕೊಡುವ ವಿಚಾರ ಡೈರೆಕ್ಟರುಗಳಲ್ಲಿ ಯಾರಿಗೂ ಇಷ್ಟವಿಲ್ಲವೆಂಬುದು ಸ್ಪಷ್ಟವಾಗಿತ್ತು. ಸದ್ಯಕ್ಕೇನೊ ಸಭೆ ಮುಂದುವರಿಸಲ್ಪಟ್ಟಿದೆಯಾದರೂ ಈ ಬಗೆಗೆ ಅಂಥ ಆಸೆಯೇನೂ ಕಂಡುಬರುತ್ತಿಲ್ಲ. ಒಂದು ವೇಳೆ 'ಗುಡ್‌ವಿಲ್' ಹಣದ ಷರತ್ತಿಗೆ ಅವರಾರೂ ಒಪ್ಪದೆ ಹೋದರೆ? ತನ್ನ ಪುಸ್ತಕಗಳು ವ್ಯರ್ಥವಾಗಿ ಕಳೆದುಕೊಂಡಂತಾಗುವುದು.

ಅಂದಿನಿಂದ ಚಂದ್ರಣ್ಣನಿಗೆ ಅದೊಂದು ಹೊಸ ಯೋಚನೆ ಅಂಟಿಕೊಂಡಿತ್ತು. ಆದರೂ ಆತ ಕಂಪನಿಯ ಕೆಲಸದಲ್ಲಿ ನಿರುತ್ಸಾಹ ತೋರಿಸದೆ ಎಂದಿನಂತೆಯೆ ಆಸಕ್ತಿಯಿಂದ ದುಡಿಯುತ್ತಿದ್ದ. 'ಕ್ರಾಂತಿ' ವಾರಪತ್ರಿಕೆಯಾಗುವುದೆಂದು ತಿಳಿದು ಅದರ ಚಂದಾದಾರರೂ, ಚಂದ್ರಣ್ಣನ ಅಭಿಮಾನಿಗಳೂ, ಮಿತ್ರರೂ ಷೇರ್ ಕೊಳ್ಳತೊಡಗಿದ್ದರು. ಬ್ಯಾಂಕಿನಲ್ಲಿ ಹಣ ಕೂಡತೊಡಗಿದ್ದಿತು. ಒಂದೆರಡು ತಿಂಗಳಲ್ಲಿಯೇ ಪ್ರಾರಂಭದ ಸರ್ಟಿಫಿಕೇಟ್ ತಂದು ಕೆಲಸಕ್ಕಾರಂಭಿಸಬಹುದಾಗಿದ್ದಿತು.

# ೧೯

ಅಂದು ಸಂಗಪ್ಪ ಸೆಟ್ಟರ ಮನೆಯಲ್ಲಿ ಸಡಗರವೋ ಸಡಗರ. ಮನೆಯ ತಲೆ ಬಾಗಿಲಿಗೆ ತಳಿರು ತೋರಣಗಳಿಂದ ಅಲಂಕಾರವಾಗಿದ್ದಿತು. ಅಂಗಳದಲ್ಲೆಲ್ಲ ನೀರು ಚಿಮುಕಿಸಿ ತಂಪು ಮಾಡಲಾಗಿದ್ದಿತು. ಮನೆಯನ್ನು ವಿಶೇಷವಾಗಿ ಶೃಂಗರಿಸಲಾಗಿದ್ದಿತು. ಅಡುಗೆಯ ಮನೆಯಲ್ಲಿ ಬಗೆ ಬಗೆಯ ತಿಂಡಿ ತಿನಿಸುಗಳು ಸಿದ್ಧವಾಗುತ್ತಿದ್ದುವು. ಸೆಟ್ಟರೂ ಅವರ ಪತ್ನಿ ಶಿವನಾಗಮ್ಮನವರೂ ಅವಸರವಸರವಾಗಿ ಅಲ್ಲಿಂದ ಇಲ್ಲಿಗೆ ಇಲ್ಲಿಂದ ಅಲ್ಲಿಗೆ ಓಡಿಯಾಡುತ್ತಿದ್ದರು. ಸ್ನಾನ ಮಾಡಿ ಮುಡಿಯುಟ್ಟುಕೊಂಡು, ಹಣೆಗೆ ಧಾರಾಳವಾಗಿ ವಿಭೂತಿ ತೊಡೆದುಕೊಂಡ ಮೂರು ನಾಲ್ಕು ಜನ ಜಂಗಮರು ಅವರ ಹಿಂದೆ ಹಿಂದೆ ಧಾವಿಸುತ್ತಿದ್ದರು.

''ಇನ್ನೇನು ಜಗದ್ಗುರುಗಳು ದಯಮಾಡಿಸುವ ಸಮಯವಾಯಿತು. ಎಲ್ಲ ಸಿದ್ಧತೆಯಾಯಿತಷ್ಟೆ?'' ಎಂದು ಕೇಳುತ್ತ ಸದಾಶಿವಪ್ಪ ಮನೆಯೊಳಗಡೆ ಬಂದ.

''ಆದರಂತೆಯೇ ಸರಿ. ಚಂದ್ರಣ್ಣನವರಿಗೆ ಊಟಕ್ಕೆ ಹೇಳಿಕಳಿಸಿದೆಯಾ?'' ಎಂದರು ಸೆಟ್ಟರು.

''ಶಾರದಾಮಣಿ ಕಾರು ತೆಗೆದುಕೊಂಡು ಹೋಗಿದ್ದಾಳೆ ಅವರನ್ನು ಕರೆ ತರಲು.''

''ಒಳ್ಳೆಯದೇ ಆಯಿತು. ಹಾಗೇ ಹೇಳಿ ಕಳಿಸಿದರೆ ಅವರು ಬರುತ್ತಿದ್ದರೊ ಇಲ್ಲವೊ, ವಿಲಕ್ಷಣ ಮನುಷ್ಯ ಆತ, ಸನ್ಯಾಸಿ ಇದ್ದ ಹಾಗೆ ಇದಾನೆ.''

''ಸನ್ಯಾಸಿ ಅನ್ನುವುದಕ್ಕಿಂತ ಸೋಶಲಿಸ್ಟ್ ಅನ್ನುವುದು ಸರಿಯಾದೀತು. ನಮ್ಮಂಥವರ ಸಹವಾಸ ಅಂದರೆ ಆಗದು ಅವರಿಗೆ. ಅವರ ಒಲವೆಲ್ಲ ಆ ಕೂಲಿಕಾರರ ಕಡೆಗೇ.''

''ಇರಲಿ, ಇರಲಿ. ಇನ್ನೂ ಎಳೆವಯಸ್ಸು, ಪ್ರಪಂಚದ ಅನುಭವ ಸಾಲದು. ಒಂದೆರಡು ಸಲ ಕಟು ಅನುಭವ ಬಂತು ಅಂದರೆ ಈ ಸೋಶಲಿಜಂ ಕಮ್ಯೂನಿಜಂ ಹುಚ್ಚೆಲ್ಲವೂ ತಾನಾಗಿಯೇ ಬಿಟ್ಟುಹೋದೀತು!''

''ನನಗೇನೂ ಹಾಗನ್ನಿಸುವುದಿಲ್ಲಪ್ಪ. ಅಂದು ನಾನು ಕಾರಿನಲ್ಲಿ ಅವರನ್ನು

ಕರೆದೊಯ್ಯುತ್ತಿದ್ದಾಗ ಒಂದು ಮುದುಕಿ ಅಡ್ಡಬಂದು ಕೆಳಗೆ ಬಿತ್ತು. ಆಗ ಈ ಅಸಾಮಿ ಕಾರಿನಿಂದಿಳಿದು ಆ ಭಿಕಾರಿಯನ್ನುಪಚರಿಸಲು ಹೋಯಿತು. ಅಷ್ಟು ಮಾತ್ರವಲ್ಲ - ಆ ಮುದುಕಿಯನ್ನು ಅವರ ಮನೆಯವರೆಗೂ ಒಯ್ದು ಬಿಟ್ಟು ಬಂದರಂತೆ. ಈಗಲೂ ಆಗಾಗ ಅವರ ಹತ್ತಿರ ಹೋಗುತ್ತಿರುವರೆಂದು ಕೇಳಿದ್ದೇನೆ.''

''ಇರಲಿ, ಇರಲಿ. ಅದೆಲ್ಲ ತಾನಾಗಿಯೇ ಸರಿಹೋದೀತು. ನಾನೂ ಉಪಾಯ ವಾಗಿ ಒಂದೆರಡು ಮಾತು ಹೇಳುತ್ತೇನೆ. ಜಗದ್ಗುರುಗಳಿಂದಲೂ ಹೇಳಿಸೋಣ. ಅವರು ಮೂರು ಸಾವಿರ ರೂಪಾಯಿನ ಷೇರ್ ಕೊಂಡಿದ್ದಾರೆ.''

''ಯಾರ ಮಾತನ್ನೂ ಕೇಳುವಂತೆ ತೋರುವುದಿಲ್ಲ ಈ ಮನುಷ್ಯ. ಮಹಾ ಹಟಮಾರಿ ಇದ್ದಂತಿದೆ. ಆ ಶಿವಯೋಗಿಯೇ ವಾಸಿ. ನಮ್ಮ ಮನಸ್ಸಿನ ವಿರುದ್ಧ ಹೋಗುವುದಿಲ್ಲ. ನಾನು ಹಾಕಿಕೊಟ್ಟ ಗೆರೆ ದಾಟುವುದಿಲ್ಲ'' ಎಂದು ಸದಾಶಿವಪ್ಪ ಹೇಳುತ್ತಿದ್ದ ಹಾಗೆ ಆಕಸ್ಮಾತ್ತಾಗಿ ಶಿವಯೋಗಿಯೇ ಅಲ್ಲಿಗೆ ಬಂದುಬಿಟ್ಟ.

''ಓ! ನಿಮಗೆ ನೂರು ವರ್ಷ ಆಯುಷ್ಯ ಶಿವಯೋಗಿಗಳೆ. ಇದೇ ಈಗ ನಿಮ್ಮ ನೆನಪು ತೆಗೆದಿದ್ದೆವು. ಬನ್ನಿ ಬನ್ನಿ'' ಎಂದು ಸೆಟ್ಟರು ನಗುನಗುತ್ತ ಆತನನ್ನು ಸ್ವಾಗತಿಸಿದರು.

''ಸ್ವಾಮಿಗಳು ಬಂದರೇ?''

''ಇಲ್ಲ, ಇನ್ನೇನು ಬರುವ ಹೊತ್ತಾಯಿತು. ನಿಮಗೂ ಅವರಿಗೂ ತುಂಬಾ ಪರಿಚಯವಲ್ಲವೆ?''

''ಅದೇನು ಹೀಗೆ ಕೇಳುತ್ತೀರಿ? ಅವರೂ ನಾವೂ ಕಾಶಿಯಲ್ಲಿ ಕೂಡಿ ಓದಿದವರು. ಒಡಹುಟ್ಟಿದ ಸೋದರರ ಹಾಗೆ ಇದ್ದವರು. ನನ್ನ ಮಾತಿಗೊಳಗಾಗಿಯೆ ಅವರು ನಮ್ಮ ಕಂಪನಿಯಲ್ಲಿ ಮೂರು ಸಾವಿರ ರೂಪಾಯಿ ತೊಡಗಿಸಿದ್ದು.''

''ಚಂದ್ರಣ್ಣನವರಿಗೂ ಅವರಿಗೂ ಪರಿಚಯವಿರಲಿಲ್ಲ ಅನ್ನಿ.''

''ಎಲ್ಲಿನ ಪರಿಚಯ ಸೆಟ್ಟರೆ? ಏನೋ ಒಂದೆರಡು ಲೇಖನ ಬರೆದ ಮಾತ್ರಕ್ಕೆ ಪ್ರಸಿದ್ಧ ಪುರುಷರಾಗಲು ಸಾಧ್ಯವೇ? ನಾನೇ ಒತ್ತಾಯ ಮಾಡಿ ಗುರುಗಳನ್ನು ಈ ಕಂಪನಿಗೆ ಎಳೆದದ್ದು.''

''ನಿಮ್ಮ ಚಂದ್ರಣ್ಣ ನಮಗೆ ಉಪಯೋಗವಾದಾರು ಅಂತ ನನಗೇನೂ

ಆಸೆಯಿಲ್ಲ ಯೋಗಿಗಳೆ!'' ಎಂದ ಸದಾಶಿವಪ್ಪ.

ಕೊಂಚ ಹೊತ್ತು ಸುಮ್ಮನಿದ್ದು ಶಿವಯೋಗಿ – ''ನನಗೂ ಹಾಗೇ ಅನ್ನಿಸ ತೊಡಗಿದೆ. ಈಗಲೇ ನಿಮ್ಮೆದುರಿಗೆ ಹೇಳಬಾರದೆಂದು ಮೌನವಾಗಿದ್ದೆ. ಈಗ ನೀವೇ ತಿಳಿದುಕೊಂಡುಬಿಟ್ಟಿದ್ದೀರಲ್ಲ!'' ಎಂದ.

''ಅಂದು ಅವರು ಆ ಮುದುಕಿಯನ್ನು ಉಪಚರಿಸಲು ಹೋದಾಗಲೇ ಅವರ ಸ್ವಭಾವವನ್ನು ನಾನು ಗುರುತಿಸಿಕೊಂಡೆ.''

''ಹೌದು. ನನಗೂ ಆಗಲೇ ಗೊತ್ತಾದದ್ದು. ಶ್ರೀಮಂತರೆಂದರೆ ಪೂರಾ ತಿರಸ್ಕಾರ ಅವರಿಗೆ. ಅವರ ಸ್ನೇಹಿತರೆಂದರೆ ಹೆಚ್ಚಾಗಿ ಕಮ್ಯೂನಿಸ್ಟರು, ಸೋಶಲಿಸ್ಟರು!''

''ಅಂ! ಕಮ್ಯೂನಿಸ್ಟರ ದೋಸ್ತಿಯಿದೆಯೇ?'' ಎಂದು ದಿಗಿಲುಗೊಂಡು ಕೇಳಿದ ಸದಾಶಿವಪ್ಪ.

''ಆ ಶಂಕರ್ ಇದಾರಲ್ಲ, ಇವರಿಗೂ ಇವರಿಗೂ ಜೀವಶ್ಚ ಕಂಠಶ್ಚ ಸ್ನೇಹ ಇದೆ, ಬೆಂಗಳೂರಿನಲ್ಲಿದ್ದಾಗಿನಿಂದ.''

''ಆ ಪುಂಡನೊಂದಿಗೆ ಸ್ನೇಹವೆ! ಹಾಗಾದರೆ ಚಂದ್ರಣ್ಣನವರ ಬಗ್ಗೆ ನಾವು ಆಸೆ ಬಿಟ್ಟಂತೆಯೇ ಸರಿ!'' ಎಂದ ಸದಾಶಿವಪ್ಪ.

''ಸ್ನೇಹವೆಂದರೆ ಅಷ್ಟಿಷ್ಟಲ್ಲ. ಏನೋ ಪರಿಚಯದ ಮಟ್ಟಿಗೆ, ನಮಸ್ಕಾರ ಚಮತ್ಕಾರಗಳ ಮಟ್ಟಿಗೆ ಇದ್ದರೆ ಯಾರೂ ಬೇಡ ಅನ್ನಲಿಕ್ಕಿಲ್ಲ. ಆದರೆ ಯಾವಾಗಲೂ ಅವರೊಂದಿಗೆ ತಿರುಗಾಡುವುದು, ರಾತ್ರಿಯೆಲ್ಲ ಅವರ ಮನೆಯಲ್ಲಿರುವುದು ಅಂದರೇನು!''

''ಮನೆಗಳಿಗೂ ಹೋಗುವರೇ?''

''ಎರಡು ಮೂರಾವರ್ತಿ ಹೋಗಿದ್ದು ನನಗೆ ಗೊತ್ತಿದೆ. ಅದು ಒಳ್ಳೆಯದಲ್ಲ, ಹೀಗೆಲ್ಲ ಹೋಗಬಾರದು ಎಂದು ನಾನೆಷ್ಟೋ ಹೇಳಿದೆ. ಅವರು ಕಿವಿಗೊಡಲಿಲ್ಲ.''

''ಇವರು ಇಂಥವರಿರಬಹುದೆಂಬುದು ನಿಮಗೆ ಮೊದಲೇ ಗೊತ್ತಿರಲಿಲ್ಲವೆ?''

''ಹೇಗೆ ಗೊತ್ತಾಗುತ್ತದೆ? ಅನುಭವ ಬಂದಾಗ ತಾನೆ ಗೊತ್ತಾಗಬೇಕು?''

''ಇನ್ನು ಇವರು ಮಾಡುವ ಪತ್ರಿಕೆಯಿಂದ ನಮಗೆ ಹೇಗೆ ಉಪಯೋಗ

ವಾಗುವುದೋ – ಆ ಕಮ್ಯೂನಿಸ್ಟ್ ಸೋಶಲಿಸ್ಟರಿಗಾಗುವುದೊ ನೋಡಬೇಕು.''

''ಇರಲಿ ಬಿಡಿ. ಮೊದಲು ಬಂದರೆ ನೀವೇ ಸಂಪಾದಕರಾಗುವಿರಂತೆ. ಪತ್ರಿಕೆ ನಡೆಸಲು ಬರುತ್ತೆ ತಾನೆ ನಿಮಗೆ?'' ಎಂದರು ಸೆಟ್ಟರು.

''ಅದೇನು ಮಹಾ ವಿಷಯ ಸೆಟ್ಟರೆ!'' ಎಂದ ಶಿವಯೋಗಿ.

''ಏನದು ಮಹಾ ವಿಷಯ?'' ಎನ್ನುತ್ತ ತಮ್ಮಣ್ಣನವರು ಕೊಠಡಿಯೊಳಕ್ಕೆ ಅಡಿಯಿರಿಸಿದರು. ಅವರ ಹಿಂದೆ ಹಿಂದೆ ಅವರ ಗುಂಪಿನ ಜನರೂ ಆಗಮಿಸಿದರು.

''ಪತ್ರಿಕೆಯ ವಿಷಯ ಮಾತನಾಡುತ್ತಿದ್ದೆವು. ಚಂದ್ರಣ್ಣನವರಿಗೆ ಕಮ್ಯೂನಿಸ್ಟ್ ಸೋಶಲಿಸ್ಟರ ದೋಸ್ತಿಯಂತೆ. ಪತ್ರಿಕೆ ಹೇಗಾಗುವುದೊ ಎಂದು ಯೋಚಿಸುತ್ತಿದ್ದೆವು,'' ಎಂದರು ಸೆಟ್ಟರು.

ತಮ್ಮಣ್ಣನವರು ಉತ್ತರವೀಯಲಿಲ್ಲ. ಅವರೂ ಅವರ ಗುಂಪಿನವರೂ ಸೋಫಾಗಳ ಮೇಲೆ ಕುಳಿತುಕೊಂಡರು. ಮಾರ್ತಾಂಡಪ್ಪ ಮಾತನಾಡಿದ :

''ನಮ್ಮ ತಮ್ಮಣ್ಣನವರು ಕಂಪನಿಯ ಚೇರ್ಮನ್ ಆಗಿರುವಾಗ ಈ ವಿಷಯ ನೀವೇಕೆ ಚಿಂತೆ ಮಾಡುತ್ತೀರಿ ಸೆಟ್ಟರೆ? ಚಂದ್ರಣ್ಣನವರಿಂದ ಸರಿಯಾಗಿ ಕೆಲಸ ತೆಗೆದುಕೊಳ್ಳಬಲ್ಲ ಯೋಗ್ಯತೆಯಿಲ್ಲವೆ ನಮ್ಮ ತಮ್ಮಣ್ಣನವರಿಗೆ!''

ಆಗಲೂ ತಮ್ಮಣ್ಣನವರು ಮೌನವಾಗಿದ್ದರು. ಮಾರ್ತಾಂಡಪ್ಪ ಮುಂದುವರಿಸಿದ : ''ಯಾರನ್ನು ಹೇಗೆ ಮಣಿಸಬೇಕೆಂಬ ವಿದ್ಯೆಯನ್ನು ನಮ್ಮ ತಮ್ಮಣ್ಣನವರಿಗೆ ಯಾರೂ ಹೇಳಿಕೊಡಬೇಕಾಗಿಲ್ಲವಷ್ಟೆ ಪತ್ರಿಕೆಯ ಬಗ್ಗೆ ನೀವೇನೂ ಯೋಚನೆ ಮಾಡಬೇಡಿ. ಎಲ್ಲವೂ ಸರಿಹೋಗುತ್ತೆ!''

''ಅವರು ಸದಾಕಾಲವೂ ಆ ಪುಂಡ ಕಮ್ಯೂನಿಸ್ಟರ ಜೊತೆಗೆ ಸೇರಿಕೊಂಡಿರುವರಂತಲ್ಲ?'' ಎಂದ ಸದಾಶಿವಪ್ಪ.

ಮಾರ್ತಾಂಡಪ್ಪ ನಗುತ್ತ ನುಡಿದ : ''ಎಷ್ಟು ದಿನ ನಡೆಯುತ್ತೆ ಅದೆಲ್ಲ? ಆ ಕಮ್ಯೂನಿಸ್ಟರನ್ನೆ ಇಲ್ಲಿಂದ ಓಡಿಸಿಬಿಟ್ಟರೆ ಅವರ ಸಹವಾಸವೂ ತಾನಾಗಿಯೆ ತಪ್ಪಿಹೋಗುತ್ತೆ. ಸೆಟ್ಟರು ಇದಕ್ಕೇನಾದರೂ ಉಪಾಯ ಮಾಡಬಾರದೇ?''

''ನಾನೇನು ಮಾಡಲಿ? ಎಲ್ಲಾ ತಮ್ಮಣ್ಣನವರಿಗೆ ಸೇರಿದ್ದು'' ಎಂದರು ಸೆಟ್ಟರು.

ಆಗಲೂ ತಮ್ಮಣ್ಣನವರು ಮಾತನಾಡಲಿಲ್ಲ. ನಸ್ಯವನ್ನು ಮೂಗಿನ ಹೊರಳೆಗಳಿಗೇರಿಸುತ್ತ ಕಣ್ಣುಗಳನ್ನು ಅರ್ಧ ಮುಚ್ಚಿಕೊಂಡು ಸುಮ್ಮನೆ ಕುಳಿತಿದ್ದರು.

''ಚಂದ್ರಣ್ಣನವರೂ ಬರುವರಷ್ಟೆ ಊಟಕ್ಕೆ?'' ಕೇಳಿದವರು ಗುರುಶಾಂತಪ್ಪ

''ಕರೆಯಲು ಕಳಿಸಿದ್ದೇವೆ. ಶಾರದಾಮಣಿ ಹೋಗಿದ್ದಾಳೆ.''

''ಬರುವರೊ ಇಲ್ಲವೊ ನೋಡಬೇಕು. ಬಂಡವಾಳಗಾರರ ಮನೆಯಲ್ಲಿ ಕಾಲಿಡುವುದೆಂದರೆ ಅವರಿಗಾಗದು. ಕೂಲಿಕಾರರ ಗುಡಿಸಲು ಅಂದರೆ ಬಹಳ ಪ್ರೀತಿ ಅವರಿಗೆ!'' ಎಂದ ಶಿವಯೋಗಿ.

ಆತನ ಮಾತಿನಲ್ಲಿ ವ್ಯಂಗ್ಯವಿದ್ದಿತಾದರೂ ಅಸತ್ಯವೇನೂ ಇರಲಿಲ್ಲ. ಶಾರದಾ ಮಣಿ ಕಾರು ತೆಗೆದುಕೊಂಡು ತನ್ನನ್ನು ಕರೆಯಲು ಬಂದ ಚಂದ್ರಣ್ಣ ಹೋಗಲು ಒಪ್ಪಲಿಲ್ಲ. ''ನನಗೆ ಈ ಉತ್ಸವ, ಭೋಜನ ಸಮಾರಂಭಗಳೆಂದರೆ ಆಗದು. ಅಂಥ ಕಡೆ ನನ್ನ ಮನಸ್ಸು ಅಸ್ವಸ್ಥವಾಗಿರುತ್ತದೆ. ಕ್ಷಮಿಸಿ, ನಾನು ಬರಲಾರೆ,'' ಎಂದು ಸ್ಪಷ್ಟವಾಗಿ ನುಡಿದ.

''ಛೆ! ಹಾಗಂದರೇನು ಚಂದ್ರಣ್ಣ! ನೀವು ಬರಲೇಬೇಕು. ಜಗದ್ಗುರುಗಳ ಸವಾರಿ ಬರುತ್ತದೆ. ಊರಿನ ಪ್ರತಿಷ್ಠಿತರೆಲ್ಲ ಬರುತ್ತಾರೆ. ನೀವು ಬರದಿದ್ದರೆ ಹೇಗೆ?''

''ನಾನೇನೂ ಪ್ರತಿಷ್ಠಿತನಲ್ಲವಲ್ಲ! ಒಬ್ಬ ಸಾಮಾನ್ಯ ಮನುಷ್ಯ ನಾನು!''

ಶಾರದಾಮಣಿ ಮೋಹಕವಾಗಿ ನಗುತ್ತಾ – ''ಅಂಥ ಮಾತೆಲ್ಲ ಏಕೆ ಚಂದ್ರಣ್ಣ ನವರೇ? ಅಪ್ಪ ಬಹಳ ಪ್ರೀತಿಯಿಂದ ಕರೆದಿದ್ದಾರೆ. ನೀವು ಬರದಿದ್ದರೆ ಅವರಿಗೆ ಬಹಳ ವ್ಯಸನವಾಗುತ್ತದೆ. ಅಲ್ಲದೆ ಜಗದ್ಗುರುಗಳೂ ನಿಮ್ಮೊಡನೆ ಮಾತನಾಡಬೇಕೆಂದಿದ್ದಾರೆ,'' ಎಂದಳು.

''ಮಾತಿಗೇನಂತೆ! ಆಮೇಲೆ ನಿಧಾನವಾಗಿ ಮಾತನಾಡಿದರಾಗದೇ? ಇನ್ನೂ ಒಂದು ವಾರ ಇಲ್ಲೇ ಇರುವವರಲ್ಲ?''

''ಇರುತ್ತಾರೆ. ಆದರೆ ಈ ದಿನದ ಸಮಾರಂಭ...''

''ಈ ಸಮಾರಂಭಗಳೆಂದರೇನೇ ನನಗಾಗುವುದಿಲ್ಲ. ದೇಶದಲ್ಲಿ ಲಕ್ಷಾವಧಿ ಜನ ಅನ್ನವಿಲ್ಲದೆ ನರಳುತ್ತಿರುವ ಈ ಕಾಲದಲ್ಲಿ...''

ಆತನ ಮಾತನ್ನು ನಡುವೆಯೆ ತಡೆದು ಶಾರದಾ – "ನಿಮ್ಮ ಮನಸ್ಸು ನನಗರ್ಥವಾಗುತ್ತೆ ಚಂದ್ರಣ್ಣ. ಆದರೆ – ಪದ್ಧತಿಯ ಪ್ರಕಾರ ಇದೆಲ್ಲ ನಡೆಯಬೇಕಾದ್ದು ಅನಿವಾರ್ಯವಲ್ಲವೆ? ನಮ್ಮ ತಾಯಿಗೆ ಸ್ವಾಮಿಗಳು ಜಗದ್ಗುರುಗಳು ಅಂದರೆ ದೇವರ ಸಮಾನ. ಈ ಜಗದ್ಗುರುಗಳ ಬಗೆಗಂತೂ ಆಕೆಗೆ ವಿಪರೀತ ಭಕ್ತಿ. ಸರಿ, ತಾಯಿಯ ಮನಸ್ಸನ್ನು ಸಂತೋಷಗೊಳಿಸಲು ಇದೆಲ್ಲ ನಡೆಯಲೇಬೇಕಾಗುವುದು," ಎಂದಳು.

"ಅವರಿಗೆ ಅಷ್ಟು ಭಕ್ತಿಯಿದ್ದರೆ ಜಗದ್ಗುರುಗಳನ್ನು ಪೂಜೆ ಮಾಡಿ ತೃಪ್ತರಾಗಲಿ. ಊರನ್ನೆಲ್ಲ ಊಟಕ್ಕೆ ಕರೆಯುವ ಅಗತ್ಯವೇನು?"

ಒಂದು ಕ್ಷಣ ಸುಮ್ಮನಿದ್ದು ಶಾರದಾ ಹೇಳಿದಳು : "ನೀನು ಹೇಳುವುದೂ ಸರಿಯೆ. ಆದರೆ ನಮ್ಮ ಅಂತಸ್ತು, ನಮ್ಮ ಮರ್ಯಾದೆಗೆ ತಕ್ಕ ಹಾಗೆ ನಾವು ಆಚರಿಸಬೇಕಾಗುವುದೆಂಬುದನ್ನು ನೀವು ಮರೆಯಬಾರದು. ಸ್ವಾಮಿಗಳು ಅಂದರೆ ಕೇವಲ ವ್ಯಕ್ತಿಗಳಲ್ಲ, ಸಮಾಜಕ್ಕೆ ಗುರುಸ್ಥಾನದಲ್ಲಿರುವವರು ಅವರು. ಅಂಥವರನ್ನು ಕರೆದು ತಂದಾಗ ಸಮಾಜವನ್ನೆಲ್ಲ ಕರೆಯಬೇಕಾಗುತ್ತದೆ. ಎಲ್ಲ ಕಡೆಗೂ ಇದೇ ಪದ್ಧತಿಯುಂಟು. ಆ ಪದ್ಧತಿಯ ಪ್ರಕಾರ... "

"ಈ ಪದ್ಧತಿಯ ಸೆರೆಯಲ್ಲಿ ಸಿಕ್ಕಿ ಎಂಥೆಂಥ ಅನ್ಯಾಯ ಮಾಡಬೇಕಾಗುತ್ತಿದೆ ಯಲ್ಲ!"

"ಅನ್ಯಾಯ?"

"ಹೌದು ಅನ್ಯಾಯ. ಅನ್ಯಾಯವಲ್ಲದಿನ್ನೇನು ಇದು ಶಾರದಾ? ಒಂದು ಕಡೆ ಅನ್ನಾಭಾವ, ಇನ್ನೊಂದು ಕಡೆ ಮೃಷ್ಟಾನ್ನ ಕೂಟ. ಬಡವರಿಗೆ ತಂಗಳು ರೊಟ್ಟಿ ಕೂಡಾ ಸಿಗುವಂತಿಲ್ಲ – ಇಲ್ಲಿ ಜಗದ್ಗುರುಗಳ ಕೃಪೆಯಿಂದ ಊರಿನ ಪ್ರತಿಷ್ಠಿತರಿಗೆಲ್ಲ ಹೋಳಿಗೆ ಹುಗ್ಗಿಯ ಪ್ರಸಾದ! ಇದಕ್ಕಿಂತ ಹೆಚ್ಚಿನ ಅನ್ಯಾಯವಿನ್ನೇನಿದೆ?"

ಕೆಲಹೊತ್ತು ಮೌನವಾಗಿ ಕುಳಿತಿದ್ದಳು ಶಾರದಾ. ಚಂದ್ರಣ್ಣನ ಮಾತುಗಳಲ್ಲಿ ಅಡಗಿದ್ದ ಸತ್ಯವನ್ನಾಕೆ ಅಲ್ಲಗಳೆಯುವಂತಿರಲಿಲ್ಲವಾದರೂ ಬಾಯಿಬಿಟ್ಟು ಒಪ್ಪಿಕೊಳ್ಳು ವಂತೆಯೂ ಇರಲಿಲ್ಲ. ಶ್ರೀಮಂತರ ಮನೆಯಲ್ಲಿ ಹುಟ್ಟಿ ಸಿರಿಯ ಮಡಿಲಲ್ಲಿ ಬೆಳೆದು ಸಿರಿಯ ವಾತಾವರಣದಲ್ಲಿ ಲೋಲಾಡುತ್ತಿದ್ದ ಆಕೆಗೆ ಚಂದ್ರಣ್ಣನ ಈ ಮಾತುಗಳು ಪ್ರಿಯವಾಗುವುದೂ ಅಸಾಧ್ಯವಾಗಿದ್ದಿತು.

"ಕಮ್ಯೂನಿಸ್ಟರ ಹಾಗೆ ಮಾತನಾಡುತ್ತೀರಲ್ಲ ನೀವು ಚಂದ್ರಣ್ಣ. ಊಟ ಸಹ

ಬೇಡವೆಂದರೆ ಹೇಗೆ?''

''ಕಮ್ಯೂನಿಸ್ಟ್!'' ಎಂದು ನಕ್ಕು ನುಡಿದ ಚಂದ್ರಣ್ಣ. ''ಮುದ್ರೆಯನ್ನೆ ಜಡಿದು ಬಿಟ್ಟಿರಲ್ಲ ಶಾರದಾ! ನಾನು ಕಮ್ಯೂನಿಸ್ಟ್ ಎಂದು ನನಗೇ ಹೊಳೆದಿರಲಿಲ್ಲ. ಎಲ್ಲಕ್ಕೂ ಮೊದಲು ನಿಮಗೆ ಹೊಳೆದುದು ಆಶ್ಚರ್ಯವೆ!''

''ನಿಜ ಹೇಳಬೇಕಾದರೆ ನನಗೂ ಮೊದಲು ಅನ್ನಿಸಿರಲಿಲ್ಲ. ಯೋಗೀಶರು ಹೇಳಿದ ಮೇಲೆ ನನಗೆ ಈ ವಿಚಾರ ಬಂತು.''

''ಓಹ್ಹೊ! ಯೋಗೀಶರು ಹೇಳಿದರೇ? ಏನೆಂದು?''

''ನೀವು ಕಮ್ಯೂನಿಸ್ಟ್ ಎಂದು! ಆ ಕೂಲಿಕಾರರಿಗೂ ನಿಮಗೂ ಬಹಳ ಸ್ನೇಹವಿದೆಯಂತಲ್ಲ?''

''ಹೀಗೆ ಹೇಳಿದರೇ ಯೋಗೀಶ್?'' ಎಂದು ನುಡಿದು ಕೊಂಚ ಹೊತ್ತು ಸುಮ್ಮನಿದ್ದು ಚಂದ್ರಣ್ಣನೆಂದ : ''ಆ ಮಾತು ನಿಜ. ಕೂಲಿಕಾರರೂ ನಾನೂ ಒಂದೇ ವರ್ಗದವರು. ನಾವೆಲ್ಲ ಅಣ್ಣ ತಮ್ಮಂದಿರಿದ್ದ ಹಾಗಿದೇವೆ.''

ಶಾರದಾ ಬೆಚ್ಚಿಬಿದ್ದು ಉದ್ಗಾರ ತೆಗೆದಳು : ''ಅಣ್ಣ ತಮ್ಮಂದಿರು!''

ಚಂದ್ರಣ್ಣ ಶಾಂತ ಸ್ವರದಲ್ಲಿ ಹೇಳತೊಡಗಿದ : ''ಹೌದು, ಶಾರದಾ! ಅಣ್ಣ ತಮ್ಮಂದಿರು! ನನ್ನ ಮಾತು ನಿಮ್ಮನ್ನು ಬೆರಗುಗೊಳಿಸಬಹುದು. ಆದರೆ ಬೆರಗುಗೊಳ್ಳಲು ಯಾವ ಕಾರಣವೂ ಇಲ್ಲ. ಕೂಲಿಕಾರರು ನಾನೂ ಒಂದೇ ವರ್ಗಕ್ಕೆ ಸೇರಿದವರು. ಅಂತೆಯೇ ನಾವೆಲ್ಲ ಒಂದೇ ಬಳಗದವರು. ಸೋದರರು.''

''ವರ್ಗ?''

''ಹೌದು. ನಮ್ಮದು ಒಂದೇ ವರ್ಗ. ದುಡಿಯುವವರ ವರ್ಗ. ಬೇರೆಯವರ ದುಡಿತದ ಮೇಲೆ ಜೀವಿಸುವ ಶೋಷಕರ ವರ್ಗಕ್ಕೆ ಸೇರಿದವರಲ್ಲ ನಾವು.''

ಶಾರದಾ ಅಸ್ವಸ್ಥಳಾಗಿ ಕುರ್ಚಿಯಲ್ಲಿ ಹೊರಳಾಡುತ್ತ – ''ಈಗ ಮಾತ್ರ ನಿಜಕ್ಕೂ ನೀವು ಕಮ್ಯೂನಿಸ್ಟರ ಹಾಗೇ ಮಾತನಾಡುತ್ತೀರಿ ಚಂದ್ರಣ್ಣ!'' ಎಂದಳು.

ಚಂದ್ರಣ್ಣ ತನ್ನ ಕುರ್ಚಿಯನ್ನು ಬಿಟ್ಟು ಮೇಲಕ್ಕೆದ್ದು ಕೊಠಡಿಯಲ್ಲಿ ಶತಪಥ ಹಾಕುತ್ತ ಹೇಳತೊಡಗಿದ, ''ಕಮ್ಯೂನಿಸ್ಟೊ ಸೋಶಲಿಸ್ಟೊ ಗೊತ್ತಿಲ್ಲ ನನಗೆ. ಯಾವ ಇಸ್ಟ್ ಆಗಲೂ ನನಗೆ ಮನಸ್ಸಿಲ್ಲ. ಆದರೆ ನಿಷ್ಠುರ ಸತ್ಯವನ್ನು ನಿಷ್ಠುರವಾಗಿ ನುಡಿಯುವವ,

ಅನ್ಯಾಯಗಳನ್ನೆದುರಿಸುವವ. ಕಮ್ಯೂನಿಸ್ಟ್ ಎಂದಾದರೆ ನೀವೂ ನನ್ನನ್ನು ಕಮ್ಯೂನಿಸ್ಟ್ ಎನ್ನಬಹುದು. ಈ ಹೆಸರುಗಳ ಬಗ್ಗೆ ನನ್ನ ತಂಟೆಯೇನೂ ಇಲ್ಲ!''

''ನಿಮ್ಮ ಮಾತಿನಿಂದ ನನಗೆ ಬಹಳ ವಿಷಾದವಾಯಿತು ಚಂದ್ರಣ್ಣ, ನೀವು ಈ ದಾರಿ ಹಿಡಿಯಬಹುದೆಂದು ನಾ ತಿಳಿದಿರಲಿಲ್ಲ.''

''ಈ ದಾರಿಯನ್ನು ನಾನು ಹಿಡಿದದ್ದು ಈಚೆಗೆ ಅಂತ ತಿಳಿದಿರುವಿರೇನೋ ನೀವು!''

''ಮತ್ತೆ?''

''ನನಗೆ ಬುದ್ಧಿ ಬಂದಾಗಿನಿಂದಲೂ, ತಿಳುವಳಿಕೆ ಬಂದಾಗಿನಿಂದಲೂ ಇದೇ ದಾರಿಯಲ್ಲಿ ಹೊರಟಿದ್ದೇನೆ. ''

''ಅಹಂ! ಅರ್!'' ಎಂದು ನುಡಿದು ಶಾರದಾ ಮೇಲಕ್ಕೆದ್ದಳು. ''ನಿಮ್ಮ ವಿಚಾರ ಹೇಗಾದರೂ ಇರಲಿ. ಪ್ರತಿಯೊಬ್ಬರಿಗೂ ಅಭಿಪ್ರಾಯ ಸ್ವಾತಂತ್ರ್ಯವಿದ್ದೇ ಇದೆ. ಇರಲೇ ಬೇಕು ಎನ್ನುವವರಲ್ಲಿ ನಾನೂ ಒಬ್ಬಳು. ನಮ್ಮ ನಿಮ್ಮ ಅಭಿಪ್ರಾಯ ಬೇರೆಯಾಗಿದ್ದ ಮಾತ್ರಕ್ಕೆ ಸ್ನೇಹಸಂಬಂಧವೂ ಇರಬಾರದೆಂದೇನೂ ಇಲ್ಲವಲ್ಲ! ಊಟಕ್ಕೆ ಬರುವುದಕ್ಕೂ ಈ ಅಭಿಪ್ರಾಯ ಅಡ್ಡಿಯಾಗುವುದೊ ಏನು!'' ಎಂದಳು.

''ಅಭಿಪ್ರಾಯ ಅಂದರೆ ವ್ಯಕ್ತಿಯ ಜೀವಾಳ ಶಾರದಾ. ಅದು ಆತನ ವ್ಯಕ್ತಿತ್ವ. ತನ್ನ ತತ್ವಗಳಿಗೆ ವಿರುದ್ಧವಾಗಿ ಆತ ಹೇಗೆ ತಾನೆ ವರ್ತಿಸಿಯಾನು?''

''ಊಟಕ್ಕೆ ಬಂದರೂ ಸಹ ತತ್ವಗಳನ್ನು ಬಿಟ್ಟಂತಾಗುವುದೇ?'' ಎಂದು ಹತಾಶಳಾಗಿ ಕೇಳಿದಳು ಶಾರದಾ.

''ತತ್ವ ಅಂದರೆ ತತ್ವ ಶಾರದಾ. ಸಣ್ಣ ವಿಷಯವಿರಲಿ, ದೊಡ್ಡ ವಿಷಯವಿರಲಿ. ತತ್ವಕ್ಕೆ ವಿರುದ್ಧವಾಗಿ ಯಾವುದನ್ನೂ ಮಾಡುವಂತಿಲ್ಲ, ನೀವು ನೊಂದುಕೊಳ್ಳಬಹುದು. ನಿಮ್ಮನ್ನು ನೋಯಿಸುವ ಇಷ್ಟವೂ ನನಗಿಲ್ಲ, ಆದರೇನು ಮಾಡುವುದು? ಇಂದು ನಿಮ್ಮಲ್ಲಿ ನಡೆಯುವ ಈ ಸಮಾರಂಭ ಅನವಶ್ಯಕ. ಅದಕ್ಕಾಗಿ ಆಗುವ ಖರ್ಚು ಅಪವ್ಯಯ ಎಂದೇ ನನ್ನ ನಂಬಿಕೆ. ಇಂಥ ಸಮಾರಂಭದಲ್ಲಿ ಭಾಗಿಯಾಗುವ ಮನಸ್ಸು ನನಗಿಲ್ಲ, ದಯವಿಟ್ಟು ಕ್ಷಮಿಸಿ.''

ಇನ್ನು ಆತನನ್ನು ಕರೆದುಕೊಂಡು ಹೋಗುವುದು ಸಾಧ್ಯವಿಲ್ಲವೆಂಬುದು

ಶಾರದಾಗೆ ಮನವರಿಕೆಯಾಗಿರಬೇಕು. ಹೊರಡುತ್ತ ಹೊರಡುತ್ತ ಆಕೆಯೆಂದಳು : ''ನೀವು ಹೀಗಿರಬಹುದೆಂದು ನಾ ತಿಳಿದಿರಲಿಲ್ಲ ಚಂದ್ರಣ್ಣ. ನಿಮ್ಮ ಬಗ್ಗೆ ನಾನು ಏನೇನೋ ಯೋಚಿಸಿಕೊಂಡಿದ್ದೆ. ಎಲ್ಲವೂ ಅಶಕ್ಯಕೋಟಿಯವು ಎಂಬುದು ಈಗ ಗೊತ್ತಾದ ಹಾಗಾಯಿತು.''

ಆಕೆಯ ಮಾತಿನಿಂದ ಚಂದ್ರಣ್ಣನಿಗೆ ಕೊಂಚ ನಗೆ ಬಂದಿತು. ''ಏನು ಯೋಚಿಸಿಕೊಂಡಿದ್ದೀರಿ?'' ಎಂದು ಕೇಳಿದ.

''ಏನೊ! ಅದನ್ನೆಲ್ಲ ಈಗ ಹೇಳಿ ಪ್ರಯೋಜನವೇನು ಬಿಡಿ. ಅಂತೂ ನಿಮ್ಮ ಬಗ್ಗೆ ನನಗೆ ನಿರಾಶೆಯಾಯಿತು!''

''ನಿರಾಶೆ? ಅದೇಕೆ?''

''ನೀವು ನಮ್ಮೊಂದಿಗೆ ಕೂಡಿ ಇರಬಹುದು, ನಾನು ನೀವು ಕೂಡಿ ದೊಡ್ಡ ಪತ್ರಿಕೆಯೊಂದನ್ನು ಹೊರಡಿಸಬಹುದು, ನಾನೂ ನಿಮ್ಮ ಹತ್ತಿರ ಪತ್ರಿಕಾವೃತ್ತಿಯನ್ನು ಕಲಿಯಬಹುದು ಎಂದೇನೇನೋ ಲೆಕ್ಕ ಹಾಕಿದ್ದೆ. ಆದರೆ...''

''ಈಗಲಾದರೂ ಏನಾಯಿತು? ಪತ್ರಿಕೆ ಹೊರಡಲಿ. ನೀವು ಬಂದು ಕಲಿಯಬಹುದಲ್ಲ?''

''ಏನು ಕಲಿಯುವುದೊ! ನಮ್ಮ ನಿಮ್ಮ ದಾರಿಗಳೇ ಬೇರೆಯಾದರೆ ನಾನು ನೀವು ಕೂಡುವುದಾದರೂ ಹೇಗೆ ಸಾಧ್ಯ?''

''ಮನಸ್ಸು ಮಾಡಿದರೆ ಎಲ್ಲವೂ ಸಾಧ್ಯ.''

''ಹೇಗೆ?''

''ನನ್ನೊಡನೆ ಕೆಲಸ ಮಾಡುವ ಅಪೇಕ್ಷೆ ನಿಜಕ್ಕೂ ನಿಮಗಿದ್ದರೆ ನನ್ನ ದಾರಿಯಲ್ಲಿ ನೀವೂ ಬರಬೇಕಾಗುವುದು ಅಲ್ಲವೆ?''

''ಅದು ಸಾಧ್ಯವೆ?'' ಎಂದುಕೊಳ್ಳುತ್ತ ಶಾರದಾ ಹೊರಟುನಡೆದಳು. ಚಂದ್ರಣ್ಣ ವಿಚಾರಮಗ್ನನಾಗಿ ಶತಪಥ ಹಾಕತೊಡಗಿದ.

ಶಾರದಾ ಮನೆಗೆ ಹಿಂದಿರುಗುವುದರೊಳಗಾಗಿ ಜಗದ್ಗುರುಗಳ ಸವಾರಿ ಆಗಮಿಸಿದ್ದಿತು. ತಮಗಾಗಿ ಏರ್ಪಡಿಸಿದ್ದ ಉಚ್ಚ ಆಸನದ ಮೇಲೆ ಕುಳಿತು ಸುತ್ತಲೂ

ನೆರೆದಿದ್ದವರನ್ನೆಲ್ಲ ಮುಗುಳು ನಗೆಯಿಂದ ನಿರುಕಿಸುತ್ತಲಿದ್ದರು ಸ್ವಾಮೀಜಿ. ಅವರಿಗಿನ್ನೂ ಹೆಚ್ಚು ವಯಸ್ಸಾಗಿರಲಿಲ್ಲ, ಮೂವತ್ತೈದು ವರ್ಷವಾಗಿರಬಹುದೇನೊ. ಕಾವಿ ಬಣ್ಣದ ರೇಷ್ಮೆಯ ಕಪಣಿಯನ್ನುಟ್ಟು ತಲೆಗೆ ಅದೇ ಬಣ್ಣದ ರೇಷ್ಮೆಯ ರುಮಾಲನ್ನು ಸುತ್ತಿ ಕೊಂಡಿದ್ದರು. ಕೊರಳಿನಲ್ಲಿ ದಪ್ಪನೆಯ ರುದ್ರಾಕ್ಷಿಗಳ ಮಾಲೆಯೊಂದು ನೇತಾಡುತ್ತಿತ್ತು. ಹಣೆಯ ಮೇಲೆ ವಿಭೂತಿಯ ಪಟ್ಟೆ ಢಾಳವಾಗಿ ಎದ್ದು ಕಾಣುತ್ತಿತ್ತು.

ಶಾರದಾ ಅಲ್ಲಿಗೆ ಬಂದು ಸ್ವಾಮಿಗಳಿಗೆ ನಮಸ್ಕರಿಸಿ ತನ್ನ ಕೊಠಡಿಗೆ ಹೊರಡುತ್ತಿದ್ದ ಹಾಗೆ ಸೆಟ್ಟರು – ''ಬಂದರೇನಮ್ಮ?'' ಎಂದು ಕೇಳಿದರು.

''ಇಲ್ಲ'' ಎಂದು ಆಕೆ ಹೊರಡುತ್ತಿರುವಷ್ಟರಲ್ಲಿ ಸ್ವಾಮೀಜಿ – ''ಯಾರು?'' ಎಂದು ಕೇಳಿದರು.

''ಚಂದ್ರಣ್ಣನವರನ್ನು ಕರೆದುತರಲು ಹೋಗಿದ್ದಳು ಅಮ್ಮಯ್ಯ,'' ಎಂದರು ಸೆಟ್ಟರು.

''ಅವರು ಆಫೀಸಿನಲ್ಲಿರಲಿಲ್ಲ, ಹತ್ತು ಹದಿನೈದು ನಿಮಿಷ ಕಾಯ್ದೆ. ಬರಲಿಲ್ಲ, ಸರಿ. ಬಂದುಬಿಟ್ಟೆ'' ಎಂದು ಹೇಳಿ ಆಕೆ ಅಲ್ಲಿಂದ ಹೊರಟು ನಡೆದಳು.

''ನಾವು ದಯಮಾಡಿಸುವ ವಿಷಯ ಚಂದ್ರಣ್ಣನಿಗೆ ಮೊದಲೇ ತಿಳಿದಿದ್ದಿತೇ?'' ಎಂದು ಸ್ವಾಮೀಜಿ ಕೇಳಿದರು.

ಸೆಟ್ಟರು ಉತ್ತರವೀಯುವುದಕ್ಕೆ ಮೊದಲೇ ಶಿವಯೋಗಿ – ''ತಿಳಿಯದೇನು ಬುದ್ಧೀ! ನಿನ್ನೆ ನಾನೇ ಹೇಳಿದ್ದೆ'' ಎಂದ.

''ಹೇಳಿದ್ದೀರಾ!'' ಎಂದು ನುಡಿದು ಸ್ವಾಮೀಜಿ ಮುಂದಿನ ಮಾತು ನುಂಗಿ ಕೊಂಡು ಸುಮ್ಮನಾದರು. ''ಗೊತ್ತಿದ್ದರೂ ಆತ ಬರಲಿಲ್ಲವಷ್ಟೆ ಎಂಥ ಸೊಕ್ಕು!'' ಎಂಬ ಮಾತುಗಳು ಅವರ ನಾಲಿಗೆಯ ತುದಿಯವರೆಗೂ ಬಂದಿದ್ದವು. ಆದರೆ ಅವುಗಳನ್ನು ಆಡಿಬಿಟ್ಟು ಈ ಜನದ ಎದುರಿಗೆ ತಮ್ಮ ಮರ್ಯಾದೆಯನ್ನು ತಾವೇ ಕಳೆದುಕೊಳ್ಳು ವುದು ಉಚಿತವಲ್ಲವೆಂದು ಬಗೆದು ಅವರು ಸುಮ್ಮನಾದರು.

ಅವರು ಸುಮ್ಮನಾದರೂ ಶಿವಯೋಗಿ ಸುಮ್ಮನಾಗಲಿಲ್ಲ. ''ಅವರ ಸ್ವಭಾವವೇ ಹಾಗೆ ಸ್ವಾಮೀಜಿ. ಗುರುಗಳು ಸ್ವಾಮಿಗಳು ಶ್ರೀಮಂತರು ಸಾಹುಕಾರರು ಅಂದರೆ ತಾತ್ಸಾರ ಅವರಿಗೆ. ಪಕ್ಕಾ ನಾಸ್ತಿಕ ಮನುಷ್ಯ.''

"ಲಿಂಗವನ್ನಾದರೂ ಕಟ್ಟುವರೊ ಇಲ್ಲವೊ?" ಎಂದ ಮಾರ್ತಾಂಡಪ್ಪ.

ಯೋಗೀಶ ಮೆಲ್ಲಗೆ ನಗುತ್ತ – "ನಾಸ್ತಿಕ ಎಂದರೆ ತಿಳಿಯುವುದಿಲ್ಲವೆ? ದೇವರ ಅಸ್ತಿತ್ವವನ್ನೆ ಒಪ್ಪದಾತ ಲಿಂಗವನ್ನು ಕಟ್ಟುವುದುಂಟೇ?" ಎಂದ.

ಸ್ವಾಮಿಗಳಿಗೆ ಇದು ಹೊಸ ಸುದ್ದಿಯಾಗಿತ್ತು. "ಹೌದೇ ಯೋಗಿ? ಅವರು ಲಿಂಗ ಬಿಟ್ಟುಬಿಟ್ಟಿರುವರೇ?"

"ನಾನೂ ಅವರೂ ಕೂಡಿ ಇದ್ದ ಈ ನಾಲ್ಕಾರು ತಿಂಗಳಲ್ಲಿ ಒಂದು ಸಲವೂ ಅವರ ಮೈಮೇಲೆ ಕರಡಿಗೆಯನ್ನು ಕಾಣಲಿಲ್ಲ ನಾನು. ಒಮ್ಮೆ ಆ ಬಗ್ಗೆ ಸಹಜವಾಗಿ ಕೇಳಿದಾಗ ಏನೆಂದರು ಗೊತ್ತೇ? ಹೋಟಲಿಗೆ ತೆರಲು ಹಣ ಸಂಪಾದಿಸುವುದೇ ಕಷ್ಟವಾಗುತ್ತೆ, ಇನ್ನು ಕರಡಿಗೆಯನ್ನು ಕೊಳ್ಳಲು ಹಣ ಎಲ್ಲಿಂದ ತರಲಿ – ಎಂದರು!"

"ಈಗಿನ ತರುಣರೆಲ್ಲ ಹಾಗೇ. ಹೋಗಲಿ ಬಿಡಿ. ಲಿಂಗ ಕಟ್ಟದಿದ್ದರೂ ಲಿಂಗವಂತ ಧರ್ಮದ ಬಗ್ಗೆ ಸಮಾಜದ ಬಗ್ಗೆ ಅಭಿಮಾನವಿದ್ದರೂ ಸಾಕು. ಅದಾದರೂ ಇದೆಯೊ ಇಲ್ಲವೊ?" ಎಂದರು ಸೆಟ್ಟರು.

"ಅಭಿಮಾನ!" ಎಂದು ನಗುತ್ತ ನುಡಿದ ಶಿವಯೋಗಿ : "ಎಲ್ಲಿನ ಅಭಿಮಾನ ಸೆಟ್ಟರ! ವೀರಶೈವ ಸಮಾಜದಂಥ ಮೂರ್ಖ ಸಮಾಜ ಬೇರೊಂದಿಲ್ಲ ಅಂತ ಅವರ ಅಭಿಪ್ರಾಯ. ಹಿಂದೊಮ್ಮೆ ಅವರು 'ಉದಯ'ದ ಸಂಪಾದಕರಾಗಿದ್ದಾಗ ವೀರಶೈವ ಮಹಾಸಭೆಯನ್ನು ದೇಶದ್ರೋಹಿಗಳ ಸಂಸ್ಥೆ ಎಂದು ಬಲವಾಗಿ ಖಂಡಿಸಿ ಬರೆದಿದ್ದರು!"

"ಹೌದು. ನಮಗೂ ನೆನಪಿದೆ ಆ ವಿಷಯ. ಚಂದ್ರಣ್ಣನ ಅಭಿಪ್ರಾಯ ಅತ್ಯಂತ ಉಗ್ರ ಅಭಿಪ್ರಾಯ. ಆತ ಒಳ್ಳೆಯ ಲೇಖಕ, ಬುದ್ಧಿವಂತ. ಆದರೆ ಸ್ವಜನಾಭಿಮಾನ ವಿಲ್ಲದಿದ್ದರೆ ಎಂಥ ಬುದ್ಧಿಯಿದ್ದರೂ ಏನು ಪ್ರಯೋಜನ? ಉದಯದಲ್ಲಿ ಆತ ಆ ರೀತಿ ಖಂಡಿಸಿ ಬರೆದಾಗ ನಾವು ಆ ಪತ್ರಿಕೆಯ ಸಂಚಾಲಕರಿಗೆ ಕಾಗದ ಬರೆದು ಅಂಥ ಅಭಿಪ್ರಾಯ ಪತ್ರಿಕೆಯಲ್ಲಿ ಬರದಂತೆ ನೋಡಿಕೊಳ್ಳಲು ಸೂಚಿಸಿದ್ದೆವು."

"ಆ ಪತ್ರಿಕೆಯ ಮಾಲೀಕರು ಬೇರೆಯವರಿದ್ದರೇನು ಬುದ್ಧಿ?" ಎಂದು ಕೇಳಿದರು ತಮ್ಮಣ್ಣನವರು.

"ಹೌದು. ಚಂದ್ರಣ್ಣ ಕೇವಲ ಸಂಬಳದ ಮೇಲೆ ಸಂಪಾದಕನಾಗಿ ಕೆಲಸ ಮಾಡುತ್ತಿದ್ದ. ಪತ್ರಿಕೆಯ ಮಾಲೀಕರೂ ವೀರಶೈವರೆ. ಧರ್ಮದ ಬಗ್ಗೆ ಅತ್ಯಂತ

ಅಭಿಮಾನ ಅವರಿಗೆ. ಚಂದ್ರಣ್ಣ ಆ ರೀತಿ ಬರೆದದ್ದು ಅವರಿಗೆ ರುಚಿಸಿರಲಿಲ್ಲ. ಆದರೆ ಆ ಬಗ್ಗೆ ಆತನಿಗೆ ಹೇಗೆ ಹೇಳುವುದು, ಹೇಳಿದರೆ ಆತ ಪ್ರತಿಭಟಿಸಬಹುದು, ಪತ್ರಿಕೆಯನ್ನು ಬಿಟ್ಟು ಹೋಗಬಹುದು – ಎಂಬ ಆಶಂಕೆಯಿಂದಾಗಿ ಸುಮ್ಮನಿದ್ದರು. ನಾವು ಕಾಗದ ಬರೆಯುತ್ತಲೂ ಅವರಿಗೆ ಆ ಕೆಲಸ ಸುಲಭದ ಹಾಗಾಯಿತು. ಕಾಗದವನ್ನೆ ಅವನ ಮುಂದಿರಿಸಿದರು. ತಾವು ಸ್ವತಃ ಏನನ್ನೂ ಆಡಲಿಲ್ಲ. ಆಡುವ ಅಗತ್ಯವೂ ಇರಲಿಲ್ಲ. 'ಪತ್ರಿಕೆಯ ಸಂಚಾಲಕರು ನೀವು, ಬೇರೆ ಜಾತಿಯವರಾಗಿದ್ದಲ್ಲಿ ನಾವು ನಿಮಗೆ ಈ ರೀತಿ ಬರೆಯುವ ಪ್ರಸಂಗ ಬರುತ್ತಿರಲಿಲ್ಲ. ಆದರೆ ನೀವು ನಮ್ಮವರು, ಸಮಾಜದ ಉಜ್ವಲಾಭಿಮಾನಿಗಳು, ಸಮಾಜದ ಅಭಿವೃದ್ಧಿಗಾಗಿ ಕಳಕಳಿಯಿಂದ ಕೆಲಸ ಮಾಡತಕ್ಕವರು. ಅಂತೆಯೆ ನಾವು ಈ ಬಗ್ಗೆ ನಿಮ್ಮನ್ನು ಎಚ್ಚರಿಸಬೇಕಾಗಿದೆ. ವೀರಶೈವ ಸಂಸ್ಥೆಗಳ ಬಗ್ಗೆ ಚಂದ್ರಣ್ಣ ಈ ರೀತಿ ಬರೆಯದಂತೆ ನೋಡಿಕೊಳ್ಳುವ ಹೊಣೆಗಾರಿಕೆ ನಿಮ್ಮದು. ಆತ ಬರೆದುದನ್ನು ನೀವು ನೋಡದ ವಿನಾ ಪ್ರಕಟನೆಗೆ ಕೊಡಕೂಡದು,' ಎಂದು ನಾವು ಅಪ್ಪಣೆ ಕೊಡಿಸಿದ್ದೆವು. ಆ ಕಾಗದದ ಧಾಟಿಯನ್ನು ಗುರುತಿಸಿಕೊಂಡು ಚಂದ್ರಣ್ಣ ತೆಪ್ಪಗಾಗಿರಬೇಕು. ಕೆಲದಿನಗಳಲ್ಲಿ ಆತ 'ಉದಯ'ದಿಂದ ಹೊರಡುವ ಪ್ರಸಂಗವೂ ಬಂದಿತು.''

''ತಮ್ಮ ಕಾಗದವೆ ಅದಕ್ಕೆ ಕಾರಣವಾಯಿತೊ ಏನೊ!'' ಎಂದ ಮಾರ್ತಾಂಡಪ್ಪ

''ಇರಬಹುದು. ಮೊದಲಿನ ಹಾಗೆ ಯದ್ವಾತದ್ವಾ ಬರೆಯುವ ಸ್ವಾತಂತ್ರ್ಯ ಉಳಿಯಲಿಲ್ಲವಲ್ಲ. ಆತ ಕೋಪಿಸಿಕೊಂಡು ಪತ್ರಿಕೆ ಬಿಟ್ಟುಬಿಟ್ಟಿರಬೇಕು!'' ಎಂದರು ಸ್ವಾಮೀಜಿ.

''ಅಂತೂ ಇವರ ಕೈಯಲ್ಲಿ ಪತ್ರಿಕೆ ಕೊಟ್ಟರೆ ಒಂದು ಕತ್ತಿಯನ್ನೇ ಕೊಟ್ಟಂತೆ ಅನ್ನಿ!'' ಎಂದರು ಸೆಟ್ಟರು.

''ಹೌದು. ಕತ್ತಿಯೇ ಸರಿ. ಚಂದ್ರಣ್ಣನ ಲೇಖನಿ ಕತ್ತಿಗಿಂತ ಬಲಶಾಲಿ. ವ್ಯಕ್ತಿಗಳು, ಸಂಸ್ಥೆಗಳು, ಸಂಪ್ರದಾಯಗಳು ಯಾವುವನ್ನೂ ಲೆಕ್ಕಿಸದೆ ಆತ ಉಗ್ರವಾಗಿ ಟೀಕಿಸುತ್ತಾನೆ. ಆ ಧೈರ್ಯ, ಆ ಕೆಚ್ಚು ಅಂದರೆ ನಮಗೂ ಮೆಚ್ಚುಗೆಯುಂಟು. ಈತನ ಹಾಗೆ ಬರೆಯಬಲ್ಲವರು ವೀರಶೈವ ಸಮಾಜದಲ್ಲೇ ಇಂದು ಇನ್ನೊಬ್ಬರಿಲ್ಲ. ಆದರೆ – ಸಮಾಜಕ್ಕೆ ಎದುರಾಗಿ ನಿಂತು ಈತ ನಮ್ಮನ್ನೇ ಟೀಕಿಸತೊಡಗಿದಾಗ ಮಾತ್ರ ನಮಗೆ ದಿಗಿಲಾಗುತ್ತೆ. ಕೊಡಲಿಯ ಕಾವು ಕುಲಕ್ಕೆ ಮೂಲ – ಎನ್ನುವರಲ್ಲ... ಹಾಗೆ...'' ಎಂದು

ನುಡಿದು ಸ್ವಾಮೀಜಿ ನಕ್ಕರು.

''ಇಂಥವರನ್ನು ನೆಚ್ಚಿಕೊಂಡು ತಾವು ಪತ್ರಿಕೆ ಹೊರಡಿಸಲು ಹೊರಟಿರುವೆವಲ್ಲ ಬುದ್ಧೀ! ಮುಂದೆ ಗತಿಯೇನು?'' ಎಂದರು ತಮ್ಮಣ್ಣನವರು.

''ಭಯಪಡಬೇಕಾದ ಅಗತ್ಯವೇನೂ ಇಲ್ಲ, ಕೊಂಚ ಉಪಾಯವಾಗಿ ಚಾಕಚಕ್ಯತೆಯಿಂದ ಅವನೊಂದಿಗೆ ವರ್ತಿಸುತ್ತಿದ್ದರೆ, ಆತ ಹದ್ದು ಮೀರಿ ಹೋಗದ ಹಾಗೆ ನಾಲ್ಕು ದಿಕ್ಕುಗಳಿಂದಲೂ ಆತನಿಗೆ ಹಗ್ಗ ಬಿಗಿದು ಇಟ್ಟಿದ್ದರೆ ಚಿಂತೆಯೇನೂ ಇಲ್ಲ. ಮೂಗುದಾಣ ಹಾಕಿ ಹೋರಿಯಿಂದ ಕೆಲಸ ಮಾಡಿಸಿಕೊಳ್ಳುವ ಹಾಗೆ ಈತನಿಂದ ಕೆಲಸ ಮಾಡಿಸಿಕೊಂಡರೆ ಸರಿ!''

''ಮೂಗುದಾಣ ಹಾಕುವವರೊಬ್ಬರು ಬೇಕಲ್ಲ! ಅವರು ಹಾಕಿಸಿಕೊಂಡಾರೇ ಎಂದು ಸಂದೇಹ ನನಗೆ!''

''ಆ ವಿಚಾರ ನಮಗಿರಲಿ. ನಾವು ಆತನನ್ನು ಉಪಾಯವಾಗಿ ಮಣಿಸುತ್ತೇವೆ,'' ಎಂದು ಸ್ವಾಮೀಜಿ ಭರವಸೆ ಕೊಟ್ಟರು. ಆದರೂ ಅಂತರಂಗದಲ್ಲಿ ಅವರಿಗೇ ಭರವಸೆಯಿರಲಿಲ್ಲ. ಚಂದ್ರಣ್ಣ ಯಾರನ್ನೂ ಲೆಕ್ಕಿಸದೆ ನಿಷ್ಠುರವಾದಿಯೆಂಬುದನ್ನು ಅವರು ಚೆನ್ನಾಗಿ ಅರಿತವರಾಗಿದ್ದರು. ಆದರೂ ಆ ಬಗೆಗೆ ಅವರಿಗೆ ಸಂಪೂರ್ಣ ನಿರಾಸೆಯಾಗಿರಲಿಲ್ಲ. ಆತನನ್ನು ಉಪಾಯವಾಗಿ ಸುಧಾರಿಸಬಹುದೆಂದೇ ಅವರು ನಂಬಿದ್ದರು.

ಅವರಂತೆಯೇ ಶಾರದಾ ಸಹ ಚಂದ್ರಣ್ಣನನ್ನು ಸುಧಾರಿಸಬಹುದೆಂದು ಯೋಚಿಸುತ್ತಿದ್ದಳು. ಅಂದು ತಾನೆಷ್ಟು ಪರಿಯಾಗಿ ಹೇಳಿದರೂ ಕೇಳದೆ ಆತ ಊಟಕ್ಕೆ ಬರಲಿಲ್ಲವಾದ್ದರಿಂದ ಆಕೆಗೆ ವ್ಯಸನವಾಗಿದ್ದಿತು, ಆಕೆಯ ಸ್ವಾಭಿಮಾನಕ್ಕೆ ಆಘಾತವಾದಂತಾಗಿದ್ದಿತು. ಆದರೂ ಆತನ ಬಗೆಗೆ ಆಕೆಗೆ ಜುಗುಪ್ಸೆಯೇನೂ ಉಂಟಾಗಿರಲಿಲ್ಲ. ತತ್ವಗಳ ಬಗೆಗೆ ಆತನಿಗಿದ್ದ ನಿಷ್ಠುರ ಶ್ರದ್ಧೆಯನ್ನು ಕಂಡುಕೊಂಡಾಗ ಆಕೆಗೆ ಕೊಂಚ ಮೆಚ್ಚುಗೆಯೂ ಉಂಟಾಗಿದ್ದಿತು. ಆದರ್ಶದ ದಾರಿಯಲ್ಲಿ ನಿರ್ಭಯವಾಗಿ ಮುಂದುವರಿಯುತ್ತಿದ್ದ ಆ ಧ್ಯೇಯವಾದಿ ಯುವಕನ ಬಗೆಗೆ ಆದರವೂ ಹುಟ್ಟಿದ್ದಿತು. ತನ್ನ ಪ್ರೀತಿಪೂರ್ಣ ಒತ್ತಾಯವೂ ಆತನನ್ನು ಕದಲಿಸಲು ಸಮರ್ಥವಾಗಿರಲಿಲ್ಲ!

ತನ್ನ ಚೆಲುವಿಕೆ, ತನ್ನ ಆಕರ್ಷಣ ಶಕ್ತಿಗಳಲ್ಲಿ ಶಾರದಾಗೆ ತುಂಬು ನಂಬುಗೆ ಇತ್ತು. ನಗುನಗುತ್ತ ತಾನೊಂದು ಮಾತನಾಡಿದರೂ ಸಹ ಧನ್ಯರಾದೆವೆಂದು ಭಾವಿಸುವ

ಯುವಕರೂ ಇದ್ದರು. ಕಾಲೇಜಿನ ಎಷ್ಟು ಹುಡುಗರು ತನಗಾಗಿ ಬಾಯಿ ಬಾಯಿ ಬಿಡುತ್ತಿಲ್ಲ! ತನ್ನೊಂದಿಗೆ ಮಾತನಾಡಲು, ತನ್ನೊಂದಿಗೆ ಸ್ನೇಹ ಬೆಳೆಸಲು ಹಾತೊರೆಯುತ್ತಿಲ್ಲ! ಯುವಕರ ಸ್ವಭಾವವೇ ಹಾಗೆ. ತಾರುಣ್ಯದಲ್ಲಿ ಈ ಆಕರ್ಷಣೆ ಸಹಜವೇ. ಆದರೆ ಚಂದ್ರಣ್ಣ! ಆತನೂ ಇನ್ನೂ ಯುವಕ. ಇಪ್ಪತ್ತೈದಕ್ಕಿಂತ ಹೆಚ್ಚು ವಯಸ್ಸಿರಲಿಕ್ಕಿಲ್ಲ. ಚೆಲುವಿಕೆ, ಒನಪು ಒಯ್ಯಾರಗಳಿಗೆ ಒಡನೆಯೆ ಬಲಿಬೀಳುವ ವಯಸ್ಸಿದು. ಆದರೆ ಆತ ಮಾತ್ರ ತನ್ನ ಸೌಂದರ್ಯದಿಂದಾಗಲಿ ಥಳಿಕಿನಿಂದಾಗಲಿ ಮರುಳಾಗಲಿಲ್ಲ. ತಾನೇ ಸ್ವತಃ ಕಾರು ತೆಗೆದುಕೊಂಡು ಆತನ ಹತ್ತಿರ ಹೋಗಿ ಪ್ರೀತಿಯಿಂದ ಕರೆದರೂ ಆತ ಬರಲಿಲ್ಲ. ಆತನ ಬದಲು ಬೇರೆ ಯುವಕರಾರಾದರೂ ಆಗಿದ್ದಲ್ಲಿ ತಾನು ಹೇಳಿ ಕಳಿಸಿದ್ದರೆ ಸಾಕಾಗುತ್ತಿತ್ತು. ಧಾವಿಸುತ್ತ ಬರುತ್ತಿದ್ದರು. ಬೇರೆ ಯುವಕರೇಂದರೇನು! ಆ ಶಿವಯೋಗಿಯೇ ಇರುವನಲ್ಲ, ತನಗಾಗಿ ಹೇಗೆ ಹುಚ್ಚನಾಗಿ ಹೋಗಿದ್ದಾನೆ! ನೂರು ನೆಪಗಳನ್ನು ಕಲ್ಪಿಸಿಕೊಂಡು ತನ್ನನ್ನು ದಿನಕ್ಕೊಂದು ಸಲವಾದರೂ ಕಂಡು ಮಾತನಾಡಲು ಹೇಗೆ ಪ್ರಯತ್ನಿಸುತ್ತಾನೆ!

ಚಂದ್ರಣ್ಣನ ಬಗೆಗೆ ತನ್ನ ಮನಸ್ಸು ಕೆಡಿಸಲು ಶಿವಯೋಗಿ ಪ್ರಯತ್ನಿಸುತ್ತಿರಬಹುದೆಂಬ ಮಾತು ಬಂದಾಗ ಯೋಗೀಶ ಆತನನ್ನು ಮನಸ್ವಿಯಾಗಿ ಹೀಯಾಳಿಸಿದ್ದ "ಆತ ಅಸಂಸ್ಕೃತ. ನಿಮ್ಮಂಥ ಲಕ್ಷಾಧೀಶರ ಯೋಗ್ಯತೆ ಆತನಿಗೆ ಹೇಗೆ ಗೊತ್ತಾಗಬೇಕು? ಮೊದಲಿನಿಂದಲೂ ತೀರ ದಾರಿದ್ರ್ಯದಲ್ಲಿ ಬೆಳೆದವನಾದ್ದರಿಂದ ದರಿದ್ರರ ಸ್ವಭಾವವೇ ಆತನಿಗಂಟಿಕೊಂಡಿದೆ. ಈಗ ಏನು ಮಾಡಿದರೂ ಆ ಸ್ವಭಾವ ಹೋಗುವಂತಿಲ್ಲ" ಎಂದು ಹೇಳಿದ್ದ. ಆತ ಈ ರೀತಿ ಮಾತನಾಡಲು ಕಾರಣವೇನಿರಬಹುದೆಂಬುದೂ ತನಗೆ ಹೊಳೆದಿರಲಿಲ್ಲ. ಅವರವರಲ್ಲಿ ಮೊದಲಿನಂತೆ ಸ್ನೇಹವುಳಿದಿರಲಾರದೆಂಬುದೇನೋ ಸ್ಪಷ್ಟವಾಗಿದ್ದಿತು. ಆದರೆ ಶಿವಯೋಗಿ ಮತ್ತೆ ಮತ್ತೆ ತನ್ನೆದುರಿಗೆ ಚಂದ್ರಣ್ಣನನ್ನು ಹೀಯಾಳಿಸುವುದೇಕೆಂಬುದು ಮಾತ್ರ ಅರ್ಥವಾಗಿರಲಿಲ್ಲ.

ಚಂದ್ರಣ್ಣನ ಬಗೆಗೆ ತನ್ನಲ್ಲಿ ಮೆಚ್ಚುಗೆ ಆದರಗಳಿರುವ ವಿಷಯ ಶಿವಯೋಗಿಗೆ ಅಪರಿಚಿತವಾದುದೇನೂ ಆಗಿರಲಾರದು. ತಾನು ಸಾಹಿತ್ಯಪ್ರೇಮಿ. ವಿಪರೀತ ವಾಚನಾಭಿರುಚಿಯನ್ನುಳ್ಳವಳು. ಕತೆ ಕವಿತೆ ಬರೆಯುವ ಹವ್ಯಾಸವೂ ಉಂಟು. ಸಾಹಿತ್ಯಪ್ರೇಮಿಯಾದ ತನಗೆ ಸಹಜವಾಗಿಯೇ ಸಾಹಿತಿ ಚಂದ್ರಣ್ಣನ ಬಗೆಗೆ ಮೆಚ್ಚುಗೆಯುಂಟು. ಒಂದು ಬಗೆಯ ಆತ್ಮೀಯತೆಯೂ ಇದೆಯೆನ್ನಬಹುದು. ಆತನ ನೆರವಿನಿಂದ ತಾನು ಈ ಕ್ಷೇತ್ರದಲ್ಲಿ ಹೆಸರು ಗಳಿಸುವುದೂ ಸಾಧ್ಯವಾದೀತು. ಶಿವಯೋಗಿಗೆ ಇದೆಲ್ಲವೂ ಗೊತ್ತು. ಚಂದ್ರಣ್ಣನ ವಿಷಯವಾಗಿ ತಾನು ತೋರಿಸುತ್ತಿದ್ದ ಅಭಿಮಾನ

ಶಿವಯೋಗಿಯಲ್ಲಿ ಅಸೂಯೆ ಹುಟ್ಟಿಸಿರಬಹುದೇ? ಚಂದ್ರಣ್ಣನನ್ನು ದೂರ ಸರಿಸಿ ಶಿವಯೋಗಿಯೊಬ್ಬನೇ ತನ್ನ ಪ್ರೀತಿ ಅಭಿಮಾನಗಳನ್ನು ಗಳಿಸಿಕೊಳ್ಳಲು ಹಾತೊರೆಯುತ್ತಿರಬಹುದೇ? ಆತ ತನ್ನೆದುರಿಗೆ ಚಂದ್ರಣ್ಣನನ್ನು ಹೀಯಾಳಿಸಲು ಇದೇ ಕಾರಣವಾಗಿರಬಹುದೇ?

ತನ್ನ ಲಕ್ಷ್ಯವನ್ನೆಳೆದುಕೊಳ್ಳಲು ಶಿವಯೋಗಿ ಹೂಡಿದ ಹಲವು ಉಪಾಯಗಳು ನೆನಪಾಗಿ ಶಾರದಾಗೆ ನಗು ಬಂದಿತು. ಚಂದ್ರಣ್ಣ ಮೊದಲ ಬಾರಿ ತಮ್ಮ ಮನೆಗೆ ಬಂದಾಗ ತನ್ನ ಕತೆಗಳನ್ನು ತಾನು ಆತನ ಕೈಗೆ ಕೊಟ್ಟು ಓದಿ ನೋಡಿ ಅಭಿಪ್ರಾಯ ತಿಳಿಸಲು ಕೇಳಿಕೊಂಡಿದ್ದಳು. ಯಾವ ಕಾರಣದಿಂದಲೋ ಏನೋ – ಚಂದ್ರಣ್ಣ ಅವುಗಳನ್ನು ಬೇಗ ಓದಿ ನೋಡಿರಲಿಲ್ಲ. ಆತ ಸಾಧ್ಯವಾದಷ್ಟು ಬೇಗ ಅವುಗಳನ್ನೋದಿ ನೋಡಿ ಅಭಿಪ್ರಾಯ ತಿಳಿಸಬೇಕೆಂದು ತಾನು ಆಶಿಸುತ್ತಿದ್ದಳು. ಚಂದ್ರಣ್ಣ ಉದಾಸೀನವಾಗಿದ್ದುದಕ್ಕೆ ತನಗೆ ಬೇಸರವೂ ಬಂದಿತ್ತು. ನಾಲ್ಕೈದು ಸಲ ಆತನ ಕೊಠಡಿಗೆ ಹೋಗಿ ಕತೆಗಳ ಬಗೆಗೆ ವಿಚಾರಿಸಿದ್ದಾಗಿತ್ತು. ಯಾವಾಗಲೂ ಒಂದೇ ಉತ್ತರ ಆತನದು : ''ಇನ್ನೂ ಪೂರ್ತಿಯಾಗಿ ಓದಿ ನೋಡಿಲ್ಲ, ಓದಿದುದಾದ ಮೇಲೆ ತಿಳಿಸುತ್ತೇನೆ.'' ಕೊಂಚವೂ ಸಂಕೋಚವಿಲ್ಲದೆ ದಾಕ್ಷಿಣ್ಯವಿಲ್ಲದೆ ಆತ ಈ ರೀತಿ ಸ್ಪಷ್ಟವಾಗಿ ಹೇಳಿಬಿಡುತ್ತಿದ್ದ. ಆ ನಿಷ್ಠುರ ಮಾತಿನಿಂದ ತನಗೆಂಥ ನೋವಾಗಬಹುದೆಂಬುದರ ಅರಿವೂ ಆತನಿಗಿದ್ದಂತೆ ತೋರುತ್ತಿರಲಿಲ್ಲ. ಸ್ತ್ರೀಯರ ಮನಸ್ಸು ಅತಿ ಕೋಮಲ, ಅವರೆದುರಿಗೆ ಇಂಥ ಮಾತನಾಡಬಾರದು, ಎಂಬ ವಿಚಾರವೂ ಆತನಿಗೆ ಹೊಳೆದಂತಿರಲಿಲ್ಲ. ಆತ ತನ್ನ ಕತೆಗಳನ್ನೋದಬೇಕು, ನಾಲ್ಕು ಒಳ್ಳೆಯ ಮಾತುಗಳನ್ನಾಡಬೇಕು, ಎಂದರೆ ಮತ್ತೆ ಬರೆಯಲು ತನಗೆ ಉತ್ಸಾಹ ಬರುತ್ತಿತ್ತು. ಆದರೆ – ಚಂದ್ರಣ್ಣ ಆ ರೀತಿ ತಾತ್ಸಾರ ಮಾಡಿದುದರಿಂದಾಗಿ ಬರವಣಿಗೆಯ ಬಗೆಗೇ ತನಗೆ ಬೇಸರ ಬಂದಿತ್ತು. ಬರವಣಿಗೆಯಿಂದ ತನಗಾಗಬೇಕಾದುದೇನು! ಪ್ರಪಂಚದ ಸುಖ ಸೌಕರ್ಯಗಳೆಲ್ಲ ತಾವಾಗಿಯೆ ತನ್ನೆದುರು ಸಿದ್ಧವಾಗಿರುವಾಗ ಅವುಗಳನ್ನನುಭವಿಸುವುದನ್ನು ಬಿಟ್ಟು ಈ ಸಾಹಿತ್ಯದ ಹುಚ್ಚಿಗೆ ಬೀಳುವುದರಿಂದ ಪ್ರಯೋಜನವೇನು ಎಂದೂ ಅನ್ನಿಸದಿರಲಿಲ್ಲ. ಅಂಥ ಸಂದರ್ಭಗಳಲ್ಲೆಲ್ಲ ತಾನು ಶಿವಯೋಗಿಯೊಂದಿಗೆ ಮನಸ್ವಿಯಾಗಿ ಹರಟುತ್ತಿದ್ದಳು. ತನ್ನ ರೂಪ ಲಾವಣ್ಯಗಳಿಗೆ ಮರುಳಾಗಿ ತನ್ನನ್ನು ಆರಾಧಿಸುತ್ತಿದ್ದ ಆತನನ್ನು ಕಂಡು ಹೆಮ್ಮೆಯಿಂದ ಹಿಗ್ಗುತ್ತಿದ್ದಳು.

ಹಿಗ್ಗುತ್ತಿದ್ದುದೆಷ್ಟೊ ಅಷ್ಟೆ. ಆತನ ಬಗೆಗೆ ತನ್ನಲ್ಲಿ ಆದರದ ಭಾವನೆ ಇದ್ದಿತೇ? ಮೆಚ್ಚುಗೆಯಿದ್ದಿತೇ? ಈ ಪ್ರಶ್ನೆಗಳಿಗೆ ಆಕೆ ಸಮಾಧಾನಕರವಾದ ಉತ್ತರಗಳನ್ನು

ಕೊಡುವಂತಿರಲಿಲ್ಲ. ಚಂದ್ರಣ್ಣನ ಬಗೆಗೆ ಕೊಂಚ ಬೇಸರ ಉಂಟಾಗಿದ್ದುದೇನೊ ನಿಜವಾದರೂ ಆತನ ವಿಷಯವಾಗಿ ಆಕೆಯಲ್ಲಿದ್ದ ಮೆಚ್ಚುಗೆ, ಆದರ, ಅಭಿಮಾನಗಳಿಗೆ ಯಾವ ಆತಂಕವೂ ಉಂಟಾಗಿರಲಿಲ್ಲವೆಂಬುದೂ ಅಷ್ಟೇ ನಿಜ. ಇಂದಿಲ್ಲ ನಾಳೆ ಆತ ಸುಧಾರಿಸಬಹುದು, ತನ್ನ ಕಡೆಗೆ ಲಕ್ಷ್ಯ ಹೊರಳಿಸಬಹುದು ಎಂದು ಆಕೆ ನಂಬಿ ಕೊಂಡಿದ್ದಳು.

ಸ್ವತಃ ಚಂದ್ರಣ್ಣನಿಗೆ ಆಕೆಯ ಬಗೆಗೆ ಎಂಥ ಭಾವನೆಗಳಿದ್ದುವು? ಅವುಗಳನ್ನು ಊಹಿಸಿ ಹೇಳುವುದು ಕಷ್ಟದ ವಿಷಯವಾದರೂ ಶಾರದೆಯ ಬಗೆಗೆ ಆತನಲ್ಲಿ ಅಂಥ ಆಕರ್ಷಣೆಯೂ ಇರಲಿಲ್ಲ, ಅಂಥ ಆಸಕ್ತಿಯೂ ಇರಲಿಲ್ಲವೆಂಬುದು ಮಾತ್ರ ಸ್ಪಷ್ಟ ವಾಗಿದ್ದಿತು. ರೂಪಲಾವಣ್ಯ ಒನಪು ಒಯ್ಯಾರಗಳಿಗಾಗಲಿ ಐಶ್ವರ್ಯಕ್ಕಾಗಲಿ ಬೆರಗಾಗುವ ಸ್ವಭಾವ ಆತನದಾಗಿರಲಿಲ್ಲ. ಶಾರದೆಯ ರೇಷ್ಮೆ ಜರತಾರಿ, ಜಾರ್ಜೆಟ್ ಸೀರೆಗಳ ಬೆಡಗೂ ಆತನ ಕಣ್ಣು ಕುಕ್ಕಿಸುವಂತಿರಲಿಲ್ಲ. ನುಣುಪಾದ ಚರ್ಮಕ್ಕೆ, ಕೃತಿಮ ಹಾಸಕ್ಕೆ ಮರುಳಾಗುವ ಯುವಕನೂ ಆತನಲ್ಲ. ಸರಳತೆ ಸಾದಾತನಗಳನ್ನು ಮೆಚ್ಚುವ ಆತನನ್ನೊಲಿಸಲು ಆ ಗುಣಗಳೇ ಸಮರ್ಥವಾಗಿದ್ದುವು. ಶಾರದೆಯಲ್ಲಿ ಅವೆರಡೂ ಗುಣಗಳ ಅಭಾವವಿದ್ದುದೇ ಆತ ಆಕೆಯ ಕಡೆಗೆ ಒಲಿಯದಿರಲು ಕಾರಣವಾಗಿದ್ದಿತು. ಅಂದು ಆಕೆಯ ಪುಸ್ತಕಾಲಯದಲ್ಲಿನ ಸರ್ವಶ್ರೇಷ್ಠ ಗ್ರಂಥಗಳನ್ನು ಕಂಡು ಆತ ಬೆರಗಾಗಿದ್ದುದು ನಿಜ. ಆದರೆ ತಾನು ಬರೆದ ಕತೆಗಳೆಂದು ಹೇಳಿ ಆಕೆ ಕೊಟ್ಟಿದ್ದ ಬರೆಹ ಗಳನ್ನೋದಿದಾಗ, ಅವುಗಳ ಅಪಕ್ವತನವನ್ನು ಗುರುತಿಸಿದಾಗ ಆ ಗ್ರಂಥ ಭಂಡಾರ ದಲ್ಲಿದ್ದ ಪುಸ್ತಕಗಳಲ್ಲಿ ನಿಜಕ್ಕೂ ಆಕೆ ಎಷ್ಟು ಪುಸ್ತಕ ಓದಿರಬಹುದೊ ಎಂದು ಆತನಿಗನ್ನಿಸ ದಿರಲಿಲ್ಲ. ಲಕ್ಷ್ಮಿಯನ್ನು ಸೆರೆ ಹಾಕಿದ್ದ ಸಿರಿವಂತರು ಸರಸ್ವತಿಯನ್ನೂ ಸೆರೆ ಹಾಕಲೆಳೆಸು ವುದು ಸ್ವಾಭಾವಿಕವಾಗಿದ್ದಿತು. ಅಂತೆಯೆ, ಆ ಗ್ರಂಥಭಂಡಾರದಿಂದ ಆತನ ಮೇಲೆ ಪ್ರಭಾವ ಮೂಡಿರಲಿಲ್ಲ.

ಆದರೂ ಶಾರದೆಯಲ್ಲಿ ವಾಚನಾಭಿರುಚಿ, ಸಾಹಿತ್ಯಾಭಿರುಚಿಗಳನ್ನು ಆತ ಅಲ್ಲಗಳೆಯುವಂತಿರಲಿಲ್ಲ. ಕಷ್ಟಪಟ್ಟು ವ್ಯಾಸಂಗ ಮಾಡಿ ಲೇಖನ ಕಾರ್ಯದಲ್ಲಿ ಕೈ ಪಳಗಿಸಿಕೊಂಡಲ್ಲಿ ಆಕೆ ಬರೆಹಗಾರ್ತಿಯಾಗಬಹುದೆಂದೂ ಆತನಿಗನ್ನಿಸದಿರಲಿಲ್ಲ. ಅಂತೆಯೆ, ಆ ಬಗೆಗೆ ಚಂದ್ರಣ್ಣನಿಗೆ ಅಷ್ಟೊಂದು ನಂಬುಗೆಯಿರಲಿಲ್ಲ. ಆಕೆ ತನ್ನ ಹತ್ತಿರ ಕೊಟ್ಟಿದ್ದ ಕತೆಗಳಲ್ಲಿ ಎಲ್ಲವೂ ಪ್ರಣಯ ಕತೆಗಳು. ಅವಾಸ್ತವ ಪ್ರಣಯ. ಕೃತಿಮ ಪ್ರೇಮ. ಅದನ್ನು ನಿರೂಪಿಸಿದ ರೀತಿಯೂ ಅಪಕ್ವವಾದುದು. ಅಂಥ ಕತೆಗಳನ್ನು ಅವರ ಮೇಷ್ಟರು ಮೆಚ್ಚಿದ್ದುದಾದರೂ ಹೇಗೊ! ಅವುಗಳಲ್ಲೊಂದಕ್ಕೆ ಬಹುಮಾನ ಬಂದುದು

ಹೇಗೊ! ಶಾರದೆಯ ಒಲವಿಗಾಗಿ ಹಾತೊರೆಯುವ ಕೆಲವರ ಕೈವಾಡವೇ ಅದಕ್ಕೆ ಕಾರಣವಾಗಿರಬೇಕೆಂದು ಆತನಿಗನ್ನಿಸಿದ್ದಿತು. ಆಕೆಯ ಬಗೆಗೆ ಹೆಚ್ಚು ವಿಚಾರ ಮಾಡುವ ಮನಸ್ಸೂ ಆತನಿಗಿರಲಿಲ್ಲ.

ಒಂದೆರಡು ಸಲ ಆತ ಬಯಲಿನ ಕಡೆಗೆ ತಿರುಗಾಡಲು ಹೊರಟಾಗ ತಾನೇ ಕಾರನ್ನು ನಡೆಸುತ್ತ ಬರುತ್ತಿದ್ದ ಶಾರದಾ ಆತನನ್ನು ಕಂಡು ಗಾಡಿಯನ್ನು ನಿಲ್ಲಿಸಿ ಕಾರು ಹತ್ತಿ ವಾಯು ಸಂಚಾರಕ್ಕೆ ಬರಲು ಕರೆದಿದ್ದಳು. ದಾಕ್ಷಿಣ್ಯಕ್ಕೊಳಗಾಗಿ ಆತ 'ಇಲ್ಲ'ವೆನ್ನ ಲಾರದೆ ಅವಳೊಡನೆ ಕಾರಿನಲ್ಲಿ ಹೋಗಬೇಕಾಗುತ್ತಿತ್ತು. ಅಂಥ ಸಂದರ್ಭಗಳಲ್ಲೆಲ್ಲ ಐದಾರು ಮೈಲು ದೂರ ಕಾರು ಒಯ್ದು ಆಕೆ ಆತನನ್ನು ಹೊಲಗಳಲ್ಲಿ ಅಲೆಯಲು ಕರೆದೊಯ್ಯುತ್ತಿದ್ದಳು. ಆತನೊಂದಿಗೆ ಹೆಚ್ಚಾಗಿ ಸಲುಗೆ ಬೆಳೆಸುವುದೇ ಆಕೆಯ ಉದ್ದೇಶ ವೆಂಬುದು ಸ್ಪಷ್ಟವಾಗಿದ್ದಿತು. ಆದರೆ ಚಂದ್ರಣ್ಣನಿಗೆ ಮಾತ್ರ ಆ ಅಲೆದಾಟದಲ್ಲಿ ಕೊಂಚವೂ ಸೊಗಸೆನ್ನಿಸುತ್ತಿರಲಿಲ್ಲ. ಮೊದಲನೆಯದಾಗಿ ಆತನಿಗೆ ಕಾರಿನಲ್ಲಿ ಹೋಗುವು ದೆಂದರೆ ಆಗದು. ಸಾವಿರಾರು ಶ್ರಮಜೀವಿಗಳ ಹಕ್ಕಿನ ತುತ್ತನ್ನು ಕಸಿದುಕೊಂಡುದರ ಫಲವಾಗಿ ಬಂದ ಆ ಕಾರನ್ನೇರುವುದೆಂದರೆ ಆ ಬಡಪಾಯಿಗಳ ಬರಿಹೊಟ್ಟೆಯ ಮೇಲೆ ಅಡಿಯಿಟ್ಟ ಹಾಗೆಯೆ ಸರಿ–ಎಂದು ಆತನ ಭಾವನೆ. ಕಾರಿನ ಮೆತ್ತಗಿನ ಸುಪ್ಪತ್ತಿಗೆ ಯಲ್ಲಿ ಒರಗಿರುವಾಗ ಸಾವಿರಾರು ಬಡಜೀವಿಗಳ ಶವಗಳ ಮೇಲೊರಗಿದಂತೆ ಆತನಿಗೆ ಭಾಸವಾಗಿ ಮೈ ನಡುಗುವುದು. ತಾನು ಯಾವುದೋ ಮಹಾ ಪಾಪಕಾರ್ಯ ಮಾಡಿದಂತೆ ತೋರುವುದು. ಪಕ್ಕದಲ್ಲಿ ಶಾರದಾ ಚಲನಚಕ್ರದ ಮೇಲೆ ಠೀವಿಯಿಂದ ಕೈ ಆಡಿಸುತ್ತ ಆಗಾಗ ಆತನ ಕಡೆ ಕತ್ತು ಹೊರಳಿಸಿ ನಗೆಮುಖದಿಂದ ಆ ಮಾತು ಈ ಮಾತು ಆಡುವಳು. ಚಂದ್ರಣ್ಣನಿಗೆ ಪ್ರತಿಯಾಗಿ ಅಂಥ ಸಂದರ್ಭಗಳಲ್ಲಿ ಇನ್ನಾವ ಯುವಕರಾದರೂ ಇದ್ದಿದ್ದರೆ ಅದೊಂದು ಸ್ವರ್ಗೀಯ ಸನ್ನಿವೇಶವೆಂದು ಭಾವಿಸದಿರು ತ್ತಿರಲಿಲ್ಲ. ಆಕೆಯೊಂದಿಗೆ ಸುಖವಾಗಿ ಲಲ್ಲೆ ಹೊಡೆಯುತ್ತ ಪ್ರಣಯಜಾಲದಲ್ಲಿ ಆಕೆಯನ್ನು ಸಿಲುಕಿಸಲು ಪ್ರಯತ್ನಿಸದಿರುತ್ತಿರಲಿಲ್ಲ. ಆದರೆ ಚಂದ್ರಣ್ಣನಿಗೆ ಆಕೆಯ ಮಾತುಗಳ ಕಡೆಗೆ ಗಮನವಿರುತ್ತಿರಲೇ ಇಲ್ಲ. ಆತ ಬೇರೊಂದು ಲೋಕದಲ್ಲಿ ಸಂಚರಿಸುವವನಂತೆ ನಿರಾಸಕ್ತನಾಗಿರುತ್ತಿದ್ದ. ಇನ್ನು ಪ್ರಣಯದ ವಿಚಾರ ದೂರವೆ ಉಳಿಯಿತು!

ಆತನನ್ನು ಆಕರ್ಷಿಸುವುದು ಅಸಾಧ್ಯವೆಂದು ಮನವರಿಕೆಯಾಗಿದ್ದರೂ ಶಾರದಾಗೆ ಇನ್ನೂ ನಿರಾಸೆಯಾಗಿರಲಿಲ್ಲ. ಇಂದಿಲ್ಲ ನಾಳೆಯಾದರೂ ಆತ ಸುಧಾರಿಸ ಬಹುದು, ತನ್ನನ್ನು ಆದರದಿಂದಲೂ ಅಭಿಮಾನದಿಂದಲೂ ಕಾಣಬಹುದು ಎಂದು ಆಶಿಸಿದ್ದಳು.

# ೨೦

ತೀರ ಕಷ್ಟದಿಂದ ಉಸಿರಾಡಿಸುತ್ತ ಸೋಮಣ್ಣ ಹಾಸಿಗೆಯಲ್ಲಿ ಬಿದ್ದುಕೊಂಡಿದ್ದ. ಆತನ ಸುತ್ತುಮುತ್ತಲು ನೊಣಗಳ ಹಿಂಡು ಝೇಂಕಾರಗೈಯುತ್ತ ಹಾರಾಡುತ್ತಿತ್ತು. ಆತ ಹೊದೆದುಕೊಂಡಿದ್ದ ಬಟ್ಟೆ ಶುಚಿಯಾಗಿದ್ದಿತಾದರೂ ಆತನ ಕೈ ಗಾಯದ ವಾಸನೆ ಯಿಂದಾಗಿ ನೊಣಗಳು ಅದರ ಮೇಲೆಲ್ಲ ದಾಳಿ ನಡೆಸಿದ್ದುವು. ಆ ವಾಸನೆಯೋ ಅತ್ಯುಗ್ರವಾದುದು; ಕೊಠಡಿಯಲ್ಲಿ ತಾನೆ ತಾನಾಗಿ ಹರಡಿದ್ದಿತು.

ಮೂಲೆಯಲ್ಲಿ ಆತನ ಮುದುಕಿ ತಾಯಿ ರಾಟೆಯಿಂದ ನೂಲು ತೆಗೆಯುತ್ತ ಕುಳಿತಿದ್ದಳು. ಹಸುವಿನ ಕೆಚ್ಚಲಿನಿಂದ ಹೊರಡುವ ಹಾಲಿನ ಧಾರೆಯಂತೆ ಆಕೆಯ ಬೆರಳುಗಳಿಂದ ನೂಲಿನ ಎಳೆ ಹೊರಡುತ್ತಿತ್ತು. ಎಳೆಗಳನ್ನು ಗಟ್ಟಿ ಮಾಡಲು ರಾಟೆ ಯನ್ನು ತಿರುಗಿಸುತ್ತಿದ್ದ ಹಾಗೆ ಮುದುಕಿ ಮಗನ ಕಡೆಗೆ ಕರುಣಾಪೂರ್ಣ ದೃಷ್ಟಿಯಿಂದ ನಿಟ್ಟಿಸುವಳು. ಆಗಾಗ ಒಂದೊಂದು ನಿಟ್ಟುಸಿರು ಆಕೆಯ ಮುಖದಿಂದ ಹೊರ ಬೀಳುವುದು. ಮತ್ತೆ ತಲೆ ತಗ್ಗಿಸಿಕೊಂಡು ಮುದುಕಿ ತನ್ನ ಕಾರ್ಯವನ್ನು ಮುಂದುವರಿಸುವಳು.

ನಡುಹಗಲು. ಹನ್ನೆರಡು ಗಂಟೆಯಾಗಿರಬಹುದು. ಅಡುಗೆಯ ಮನೆಯಲ್ಲಿ ಕುಳಿತುಕೊಂಡು ರತ್ನ ಅಣ್ಣನಿಗಾಗಿ ಗಂಜಿ ಬೇಯಿಸುತ್ತಿದ್ದಳು. ಅಣ್ಣನಿಗೆ ಕಾಹಿಲೆ ಹೆಚ್ಚಾಗಿದ್ದುದರಿಂದ ಆಕೆ ಎರಡು ದಿನದಿಂದ ಕೆಲಸಕ್ಕೆ ಹೋಗಿರಲಿಲ್ಲ. ಗಿರಣಿಯಲ್ಲಿ ರಜ ಸಿಕ್ಕುವಂತಿರಲಿಲ್ಲ. ರಜ ಪಡೆಯದೆ ಕೆಲಸ ತಪ್ಪಿಸುವುದೂ ಗಂಡಾಂತರವಾಗಿದ್ದಿತು. ಅದರಿಂದಾಗಿ ಕೆಲಸ ಕೈತಪ್ಪಿ ಹೋಗುವ ಸಂಭವವೂ ಇದ್ದಿತು. ಆದರೂ – ಅಣ್ಣನನ್ನು ಅಂಥ ಸ್ಥಿತಿಯಲ್ಲಿ ಬಿಟ್ಟು ಗಿರಣಿಗೆ ಹೋಗಲು ಆಕೆಯ ಮನಸ್ಸು ಒಪ್ಪುತ್ತಿರಲಿಲ್ಲ. ಅಂತೆಯೆ, ಆದುದಾಗಲೆಂದುಕೊಂಡು ಮನೆಯಲ್ಲಿಯೇ ಉಳಿದುಬಿಟ್ಟಿದ್ದಳು.

ಅಂದು ಸೆಟ್ಟರ ಮನೆಯಲ್ಲಿ ಜಗದ್ಗುರುಗಳು ಬರುವರೆಂಬ ವಿಷಯ ಆಕೆಗೂ ತಿಳಿದಿದ್ದಿತು. ನೆರೆಮನೆಯ ಕೂಲಿಕಾರ ನಾಗಪ್ಪನನ್ನು ಸಂಗಡ ಕರೆದುಕೊಂಡು ಸೆಟ್ಟರ ಮನೆಗೆ ಹೋಗಿ ಅಣ್ಣನ ವಿಷಯವನ್ನು ಗುರುಗಳ ಕಿವಿಗೆ ಹಾಕಿದರೆ ಕೈ ಕಳೆದು ಕೊಂಡದ್ದರ ಬಗ್ಗೆ ಸೆಟ್ಟರಿಂದ ಬರಬೇಕಾದ ಹಣ ಬಂದಿತೇನೋ ಎಂದಾಕೆ ಆಶಿಸಿದ್ದಳು. ಆಕೆಯ ಬಿನ್ನಹಕ್ಕೆ ಮನ್ನಣೆಯಿತ್ತು ನಾಗಪ್ಪನೂ ಅಂದು ಕೆಲಸ ತಪ್ಪಿಸಿ ಮನೆಯಲ್ಲಿಯೆ ಉಳಿದಿದ್ದ. ಊಟ ತೀರಿಸಿಕೊಂಡು ಅವರಿಬ್ಬರೂ ಹೊರಡುವವರಿದ್ದರು.

ಆ ಹಣದ ವಿಷಯವಾಗಿ ಸೋಮಣ್ಣನಿಗೆ ಮಾತ್ರ ಯಾವ ಆಸಕ್ತಿಯೂ ಉಳಿದಿರಲಿಲ್ಲ. ಒಂದೆರಡು ಸಲ ಹೇಳಿ ಕಳಿಸಿದಾಗ ಸೆಟ್ಟರಾಡಿದ ಮಾತುಗಳಿಂದ ಅವನ ಮನೋಗತವೇನೆಂಬುದು ಆತನಿಗೆ ಸ್ಪಷ್ಟವಾಗಿದ್ದಿತು. ''ಮಹಾಪುಂಡ ಆಸಾಮಿ ಅದು. ಆತನ ಕೈ ಹೋದದ್ದೂ ಒಂದು ರೀತಿಯಿಂದ ಒಳ್ಳೆಯದೇ ಆಯಿತು. ದೇವರು ಆತನ ಸೊಕ್ಕು ಇಳಿಸಿದ. ಪರಿಹಾರಧನ ಬೇಕಂತೇನು? ಇಷ್ಟವಿದ್ದರೆ ಕೋರ್ಟಿಗೆ ಬಂದು ತೆಗೆದುಕೊಂಡು ಹೋಗಲಿ. ಯಾರು ಬೇಡವೆನ್ನುತ್ತಾರೆ?'' ಎಂದೊಮ್ಮೆ ಉತ್ತರ ಕೊಟ್ಟಿದ್ದರು. ಇನ್ನೊಂದು ಸಲ ಆ ರುದ್ರಪ್ಪನ ಮೂಲಕ ಹೇಳಿದ ಆ ಮಾತು! ''ಆ ಕಮ್ಯೂನಿಸ್ಟರ ಸಹವಾಸವನ್ನು ತ್ಯಜಿಸಿ, ಕೂಲಿಕಾರ ಸಂಘದ ಹುಚ್ಚು ಬಿಟ್ಟು ನಾವು ಹೇಳಿದ ಹಾಗೆ ಕೇಳಿಕೊಂಡಿರಲು ಆತ ಸಿದ್ಧನಿದ್ದರೆ ಹಣ ಕೊಡುತ್ತೇವೆ. ಆಸ್ಪತ್ರೆಗೆ ಸೇರಿಸಿ ಕೈ ಮೈ ಎಲ್ಲವನ್ನೂ ಗುಣಪಡಿಸುತ್ತೇವೆ. ಮುಂದೆ ಆತ ಜೀವದಿಂದಿರುವವರೆಗೂ ಗಿರಣಿಯಲ್ಲಿ ಆತನಿಂದಾಗುವ ಕೆಲಸ ಕೊಡುತ್ತೇವೆ! ಕೇಳು ಆತನಿಗೆ!'' ಎಂಬ ಆ ಮಾತು! ಸೆಟ್ಟರ ಹಸ್ತಕನಾದ ಆ ರುದ್ರಪ್ಪ ಹೆದರುತ್ತ ಹೆದರುತ್ತಲೇ ತನ್ನ ಹತ್ತಿರ ಬಂದು ಹೇಗೋ ಆ ಮಾತು ಹೇಳುವ ಸಾಹಸ ಮಾಡಿದ್ದ. ನಿಶ್ಶಕ್ತನಾಗಿ ಹಾಸಿಗೆ ಹಿಡಿದು ಬಿದ್ದಿದ್ದರೂ ಆಗ ತನ್ನ ಶರೀರದಲ್ಲಿ ಎಂಥ ಆವೇಶ ಬಂದುಬಿಟ್ಟಿತ್ತು! ''ಸೋಮಣ್ಣ ಅಂದರೆ ಏನೆಂದು ತಿಳಿದಿದಾರೆ ನಿನ್ನ ಸೆಟ್ಟರು! ಔಷಧ ಸಿಗದೆ ಕೊಳೆತು ಕೊಳೆತು ಸಾಯುವ ಪ್ರಸಂಗ ಬಂದರೂ, ಆತ ಹೆದರುವುದಿಲ್ಲ, ಸಂಘವನ್ನು ಬಿಡುವುದಿಲ್ಲ, ತನ್ನ ಜೀವದ ಗೆಳೆಯರನ್ನು ದೂರಗೊಳಿಸುವುದಿಲ್ಲ ಎಂದು ಹೇಳು ಅವರಿಗೆ!'' ಎಂಬುದಾಗಿ ಗದರಿಸಿದ್ದ. ಪಾಪ, ಆ ರುದ್ರಪ್ಪ ತಬ್ಬಿಬ್ಬಾಗಿ ಹೊರಟುಹೋಗಿದ್ದ. ಅಂದಿನಿಂದ ಆತ ತನ್ನ ಗುಡಿಸಲಲ್ಲಿ ಪ್ರವೇಶಿಸಿರಲಿಲ್ಲ. ಸೆಟ್ಟರೂ ಮೌನ ತಳೆದಿದ್ದರು. ತಾನು ಸಂಘವನ್ನು ತ್ಯಜಿಸಿದರೆ ಮಾತ್ರ ಅವರು ಹಣ ಕೊಡಬಹುದು. ಇಲ್ಲವಾದರೆ – ಯಾರು ಏನು ಹೇಳಿದರೂ ಅವರು ಕೊಡುವುದು ಸಾಧ್ಯವಿಲ್ಲವೆನ್ನುವುದು ಸೋಮಣ್ಣನಿಗೆ ಮನವರಿಕೆಯಾಗಿದ್ದಿತು.

''ಸುಮ್ಮನೆ ಅವರ ಮನೆ ಬಾಗಿಲಿಗೆ ಏತಕ್ಕಾಗಿ ಹೋಗುವೆ ರತ್ನಾ? ಅವರ ಕರಾರಿಗೆ ನಾನೊಪ್ಪುವಂತಿಲ್ಲ, ಅವರು ಕೊಡುವಂತಿಲ್ಲ, ನನಗೂ ನಾಗಪ್ಪನಿಗೂ ಒಣ ತೊಂದರೆ ಅಷ್ಟೆ'' ಎಂದಿದ್ದ ಸೋಮಣ್ಣ.

''ಇದೇ ಕೊನೆಯ ಸಲ ಅಣ್ಣ, ಇದೊಂದು ಬಾರಿ ಪ್ರಯತ್ನ ಮಾಡಿ ನೋಡುತ್ತೇನೆ. ಸ್ವಾಮಿಗಳು ಒಳ್ಳೆಯವರು, ದಯಾಳುಗಳು ಎಂದು ಕೀರ್ತಿಯಿದೆ, ನಮ್ಮ ಗೋಳನ್ನೆಲ್ಲ ಕೇಳಿದರೆ ಅವರಿಗೆ ಕನಿಕರ ಬಂದರೂ ಬರಬಹುದು. ಅವರು ಸೆಟ್ಟರಿಗೊಂದು ಮಾತು ಹೇಳಿದರೆ ಸಾಕು. ಹಣ ಸಿಕ್ಕಬಹುದು.''

ಸೋಮಣ್ಣ ಕಟುವಾಗಿ ನಗುತ್ತ ನುಡಿದ : ''ಅಯ್ಯೋ ನನ್ನ ತಂಗೀ! ನಿನಗಿನ್ನೂ ಪ್ರಪಂಚದ ಅನುಭವ ಸಾಲದು. ಸೆಟ್ಟರ ಗುರುಗಳೆಂದರೆ ಸೆಟ್ಟರ ಹಾಗೇ ಇರುವವರು. ಶ್ರೀಮಂತರ ಮರ್ಜಿ ಹಿಡಿದು ಅವರು ಹೇಳಿದ್ದಕ್ಕೆಲ್ಲ ಹೂಂಗುಟ್ಟುತ್ತ ಅವರಿಂದ ತಮಗೆ ದೊರೆಯುವ ಕಾಣಿಕೆಯ ಹಣದ ಕಡೆಗೆ ಮಾತ್ರ ಕಣ್ಣಿಟ್ಟಿರುವ ಜನ ಇದು. ಬಸವಣ್ಣ ಅಲ್ಲಮಪ್ರಭು, ಚೆನ್ನಬಸವಣ್ಣರ ಕಾಲ ಹೋಯಿತು. ಇಂದಿನ ಸ್ವಾಮಿಗಳೆಂದರೆ ಕೇವಲ ದುಡ್ಡಿನ ಸ್ವಾಮಿಗಳು. ಬೇರೆಯವರ ದುಡ್ಡಿನಲ್ಲಿ ಸುಖವಾಗಿ ಕಾಲ ಕಳೆಯುವ ಸೋಮಾರಿಗಳು. ಇಂಥವರಿಗೆ ಕರುಣೆ, ದಯೆ, ಸಹಾನುಭೂತಿ ಎಲ್ಲಿಂದ ಬಂದೀತು! ನಿನ್ನನ್ನು ಅವರು ಮಾತನಾಡಿಸಲೂ ಒಪ್ಪಲಿಕ್ಕಿಲ್ಲ!''

''ಒಮ್ಮೆ ಪ್ರಯತ್ನವನ್ನಾದರೂ ಮಾಡುತ್ತೇನೆ. ನೋಡೋಣ. ನಾಗಪ್ಪನನ್ನು ಬೇರೆ ಸಂಗಡ ಕರೆದೊಯ್ದಿರುವೆನಲ್ಲ!''

''ನಿಮ್ಮನ್ನು ಮನೆಯೊಳಗಾದರೂ ಬಿಡುವರೋ ಇಲ್ಲವೋ. ಹೊರಗೆ ಯಾವಾಗಲೂ ಇರುವರಲ್ಲ ಆ ಗೂರ್ಖಾ ಶಿಪಾಯಿಗಳು!''

''ಹೇಗಾದರೂ ಮಾಡಿ ಒಳಸೇರಿ ವಿಶ್ವಪ್ರಯತ್ನ ಮಾಡಿ ಸ್ವಾಮಿಗಳನ್ನು ಕಾಣುತ್ತೇವೆ. ನೀನು ಚಿಂತೆ ಮಾಡಬೇಡ. ಸುಮ್ಮನೆ ಮಲಗಿಕೊಳ್ಳಪ್ಪ'' ಎಂದಿದ್ದಳು ರತ್ನಾ. ಇನ್ನು ಆಕೆಯನ್ನು ತಡೆಯುವುದು ಸಾಧ್ಯವಿಲ್ಲವೆಂದು ಬಗೆದು ಸೋಮಣ್ಣ ಸುಮ್ಮನಾಗಿದ್ದ.

ಅಣ್ಣನಿಗೆ ಗಂಜಿ ಕುಡಿಸಿ, ಬಿಸಿನೀರಿನಿಂದ ಆತನ ಬಾಯಿ ತೊಳೆದು ತಾನೊಂದು ರೊಟ್ಟಿ ತಿಂದ ಶಾಸ್ತ್ರ ಮಾಡಿ ರತ್ನಾ ಹೊರಡಲು ಸಿದ್ಧಳಾದಳು. ಅಷ್ಟು ಹೊತ್ತಿಗೆ ನಾಗಪ್ಪನೂ ಊಟ ತೀರಿಸಿ ಸಿದ್ಧವಾಗಿ ಬಂದಿದ್ದ. ಆತ ಮಧ್ಯಮ ವಯಸ್ಸಿನ ಕೂಲಿಕಾರ. ಕಡುಬಡವರು ತೊಡುವ ಮಣ್ಣಿನ ಬಣ್ಣದ ಹರಕು ಅಂಗಿಯೊಂದನ್ನು ತೊಟ್ಟು ಹರೆದ ಧೋತರ ಉಟ್ಟುಕೊಂಡಿದ್ದ. ತಲೆಗೊಂದು ಚಿಂದಿ ಬಟ್ಟೆಯನ್ನು ಹೇಗೋ ಸುತ್ತಿಕೊಂಡಿದ್ದ.

''ಹುಷಾರಾಗಿರು ರತ್ನಾ, ಗದ್ದಲವಾಗದಂತೆ ಕೆಲಸ ಮುಗಿಸಿಕೊಂಡು ಬಾ. ಗೂರ್ಖಾಗಳು ಒಳಕ್ಕೆ ಬಿಡದಿದ್ದರೆ ಸುಮ್ಮನೆ ಹೊರಳಿ ಬಾ,'' ಎಂದಳು ತಾಯಿ.

''ಸುಮ್ಮನೆ ಬರುವುದಾದರೆ ಅಲ್ಲಿಗೆ ಹೋಗಬೇಕಾದರೂ ಯಾಕೆ?'' ಎನ್ನುತ್ತ ರತ್ನಾ ಗುಡಿಸಲಿನಿಂದ ಹೊರಬಿದ್ದಳು. ನಾಗಪ್ಪನೂ ಆಕೆಯೊಂದಿಗೆ ನಡೆದ.

ಅವರು ಸೆಟ್ಟರ ಮನೆಗೆ ಬರುವ ಹೊತ್ತಿಗೆ ಒಂದು ಗಂಟೆಯಾಗುತ್ತ ಬಂದಿದ್ದಿತು. ಒಳಗಡೆ ಊಟದ ಗದ್ದಲವಿನ್ನೂ ಕೊನೆಗೊಂಡಿರಲಿಲ್ಲ. ಸ್ವಾಮಿಗಳೇನೊ ಊಟ ಮುಗಿಸಿ ತಮಗಾಗಿ ಇರಿಸಲಾಗಿದ್ದ ಮಂಚದ ಮೇಲೆ ಪವಡಿಸಿದ್ದರು. ಕೆಳಗಡೆ ಭಕ್ತನೊಬ್ಬ ಕುಳಿತುಕೊಂಡು ಅವರ ಕಾಲುಗಳನ್ನು ಹಿಸುಕುತ್ತಿದ್ದ. ಮೃಷ್ಟಾನ್ನ ಭೋಜನ ದಿಂದ ತೃಪ್ತರಾದ ಸ್ವಾಮಿಗಳು ತಾಂಬೂಲದ ಸವಿಯನ್ನು ಹೀರುತ್ತ ಮೆತ್ತನೆಯ ದಿಂಬುಗಳಿಗೊರಗಿ ಕಣ್ಣು ಮುಚ್ಚಿಕೊಂಡಿದ್ದರು.

ರತ್ನಮ್ಮ ನಾಗಪ್ಪ ಆ ಮನೆಯ ಹೆಬ್ಬಾಗಿಲ ಬಳಿ ಬರುತ್ತಲೂ ಪದ್ಧತಿಯಂತೆ ಕಾವಲುಗಾರರು ಅವರನ್ನು ತಡೆದು ನಿಲ್ಲಿಸಿದರು.

''ನಾವು ಸ್ವಾಮಿಗಳನ್ನು ನೋಡಲು ಬಂದಿದ್ದೇವೆ ಕಣಪ್ಪ'' ಎಂದಳು ರತ್ನಾ.

''ಏತಕ್ಕಾಗಿ?'' ಎಂದು ಒಬ್ಬ ದ್ವಾರರಕ್ಷಕ ಕೇಳಿದ.

''ಅವರ ಹತ್ತಿರ ಮಾತನಾಡುವುದಿದೆಯಪ್ಪ''

''ಏನು ಮಾತು?''

''ಅದೆಲ್ಲ ನಿಮ್ಮ ಹತ್ತಿರ ಹೇಳುವುದಕ್ಕಾಗುವುದಿಲ್ಲ.''

''ಓಹ್ಹೋ! ಅಂಥ ರಹಸ್ಯವೊ!'' ಎಂದು ಆತ ಕಣ್ಣು ಮಿಟುಕಿಸಿ ಆಕೆಯನ್ನು ಕಂಡು ನಗತೊಡಗಿದ.

ರತ್ನಮ್ಮನಿಗೆ ಸಿಟ್ಟು ಬರಲಿಲ್ಲ. ಇಂಥ ಮಾತುಗಳನ್ನು ಕೇಳಿ ಕೇಳಿ ಅಭ್ಯಾಸ ವಾಗಿತ್ತು ಆಕೆಗೆ. ಗಿರಣಿಯಲ್ಲಂತೂ ಎಲ್ಲರೂ ಸಾಮಾನ್ಯವಾಗಿ ಆಡುವ ಮಾತು ಇಂತಹವುಗಳೆ! ಮೇಸ್ತ್ರಿಗಳು, ಕರಣಿಕರು, ಮ್ಯಾನೇಜರು, ಸೂಪರಿಂಟೆಂಡರು ಎಲ್ಲರೂ ಇಂಥ ಮಾತುಗಳ ಮಲ್ಲರೆ, ಇದೇ ಬಗೆಯಾಗಿ ಕಣ್ಣು ಮಿಟುಕಿಸುವುದು, ಇದೇ ಬಗೆ ಯಾಗಿ ನಗುವುದು, ಇದೇ ಬಗೆಯಾಗಿ ಹೆಂಗಸರನ್ನು ನೋಡುವುದು, ಬೆಳಗಿನಿಂದ ಸಾಯಂಕಾಲದ ತನಕ ಅಂತಹ ವಾತಾವರಣದಲ್ಲಿ ಕೆಲಸ ಮಾಡಿ ಮಾಡಿ ಅದೆಲ್ಲವೂ ರೂಢಿಯಾಗಿತ್ತು ರತ್ನಾಗೆ. ಗಿರಣಿಗೆ ಕೆಲಸಕ್ಕೆ ಸೇರಿದ ಹೊಸದರದಲ್ಲಿ ಅಂಥ ವರ್ತನೆ ಯನ್ನು ಕಂಡಾಗ ಆಕೆಗೆ ಕೋಪ ಬರುತ್ತಿದ್ದಿತಾದರೂ ದಿನಗಳೆದ ಹಾಗೆ ತಾಳ್ಮೆ ಬಂದಿತ್ತು. ಅಂತೆಯೆ, ದ್ವಾರರಕ್ಷಕರ ಆ ಅಶ್ಲೀಲ ಶಬ್ದಗಳನ್ನು ಕೇಳಿ ಆಕೆಗೆ ಆಗ ಸಿಟ್ಟು ಬರಲಿಲ್ಲ.

''ಸ್ವಾಮಿಗಳು ಈಗ ಯಾರನ್ನೂ ಕಾಣುವುದಿಲ್ಲ. ನಾಲ್ಕೈದು ಗಂಟೆಗೆ ಬರ್ರಿ,

ನೋಡೋಣ,'' ಎಂದು ಒಬ್ಬ ಶಿಪಾಯಿ.

ಇನ್ನು ಅಲ್ಲಿಂದ ಹೊರಡದೆ ಬೇರೆ ವಿಧಿಯಿರಲಿಲ್ಲವಾದುದರಿಂದ ಅವರಿಬ್ಬರೂ ಹೆಬ್ಬಾಗಿಲನ್ನು ಬಿಟ್ಟು ಕೊಂಚ ದೂರದಲ್ಲಿದ್ದ ಬೇವಿನಮರದ ನೆರಳಿನಲ್ಲಿ ಕುಳಿತುಕೊಂಡರು. ಸೆಟ್ಟರ ಮನೆಯಲ್ಲಿ ನಡೆಯುತ್ತಿದ್ದ ಗದ್ದಲವೆಲ್ಲವೂ ಅಲ್ಲಿಂದ ಕಾಣಿಸುವಂತಿದ್ದಿತು.

''ಸ್ವಾಮಿಗಳು ಏಳುವ ತನಕ ಕಾಯಬೇಕಾಗಿತಲ್ಲ ನಾಗಣ್ಣ?''

''ಇನ್ನೇನು ಮಾಡೋದು! ಬೇರೆ ಉಪಾಯವಿಲ್ಲ.''

''ಏನಾದರೂ ಯುಕ್ತಿ ಹೂಡಿ ಒಳಗೆ ಹೋಗಲು ಸಾಧ್ಯವಿದೆಯೊ ಏನೊ ನೋಡಪ್ಪ.''

''ಈಗ ಯಾವ ಯುಕ್ತಿ ಹೂಡಿದರೂ ನಡೆಯುವಂತಿಲ್ಲ. ಗೂರ್ಖಾಗಳು ನಮ್ಮನ್ನಾಗಲೇ ನೋಡಿಕೊಂಡು ಬಿಟ್ಟಿದ್ದಾರೆ.''

ಉಂಡು ಕೈ ತೊಳೆದುಕೊಂಡು ತಾಂಬೂಲವನ್ನು ಮೆಲ್ಲುತ್ತ ಒಂದು ಸಿಗರೇಟು ಸೇದಲೆಂದು ಹಲವರು ಗೃಹಸ್ಥರು ಮನೆಯ ಹೊರಗಿನ ಅಂಗಳಕ್ಕೆ ಬಂದುದು ಕಾಣಿಸುತ್ತಿತ್ತು. ಮೂರನೆಯ ಮಹಡಿಯ ಮೇಲೆ ಸದಾಶಿವಪ್ಪ ನಿಂತುಕೊಂಡು ಸಿಗರೇಟು ಸೇದುತ್ತಿದ್ದ. ಹಠಾತ್ತಾಗಿ ಆತನ ದೃಷ್ಟಿ ಗಿಡದಡಿಯಲ್ಲಿ ಕುಳಿತಿದ್ದ ರತ್ನಮ್ಮನ ಮೇಲೆ ಬಿತ್ತು. ಆತನ ಮುಖದಲ್ಲಿ ಮಂದಹಾಸದ ಲಹರಿಯೊಂದು ಮೂಡಿ ಮಾಯ ವಾಯಿತು. ಮೇಲೆ ನಿಂತಿದ್ದ ಹಾಗೆಯೆ ಆತ ಕೈತಟ್ಟಿ ದ್ವಾರರಕ್ಷಕನನ್ನು ಕೂಗಿ ಗಿಡದ ಕಡೆಗೆ ಸನ್ನೆ ಮಾಡಿ ಆಕೆಯನ್ನು ಕರೆದುತರಲು ಸೂಚಿಸಿದ. ಆತ ಕೈ ತಟ್ಟಿದ ಸದ್ದು ಕೇಳಿದೊಡನೆ ರತ್ನಾ ಬೆಚ್ಚಿಬಿದ್ದು ಅತ್ತ ನೋಡಿದಳು. ಸದಾಶಿವಪ್ಪನನ್ನು ಕಂಡೊಡನೆ ದಿಗಿಲುಗೊಂಡು ಅಲ್ಲಿಂದೆದ್ದು – ''ನಡೆ ನಾಗಣ್ಣ, ಇಲ್ಲಿ ಕೂತಿರೋದು ಬೇಡ. ಆ ಹದ್ದಿನ ದೃಷ್ಟಿ ಬೇರೆ ಬಿತ್ತು,'' ಎನ್ನುತ್ತಾ ಅವಸರವಸರವಾಗಿ ನಡೆಯತೊಡಗಿದಳು. ಅವಳು ಹೋಗುವುದನ್ನೆ ನಿಟ್ಟಿಸುತ್ತ ಸದಾಶಿವಪ್ಪ ತುಟಿಗಳಲ್ಲಿಯೆ ನಗುತ್ತಿದ್ದ.

ಕೊಂಚ ದೂರ ಹೋಗಿ ಆ ಮನೆ ಮರೆಯಾದ ಬಳಿಕ ರತ್ನಾ ಗಿಡವೊಂದರ ಬುಡದಲ್ಲಿ ಕುಳಿತುಕೊಂಡಳು. ಆಕೆ ಅಷ್ಟೊಂದು ಅವಸರದಿಂದ ಎದ್ದು ಬರಲು ಕಾರಣವೇನೆಂಬುದು ನಾಗಪ್ಪನಿಗೆ ತಿಳಿದಿರಲಿಲ್ಲ. ಆತ ಆಕೆಯ ಬಳಿ ಕುಳಿತುಕೊಳ್ಳುತ್ತ – ''ಯಾಕೆ ರತ್ನಮ್ಮ, ಹಾಗೆ ಹೊರಟುಬಿಟ್ಟೆ?'' ಎಂದು ಕೇಳಿದ.

ಹಣೆಯ ಮೇಲೆ ಮೂಡಿದ್ದ ಬೆವರಹನಿಗಳನ್ನೊರೆಸಿಕೊಳ್ಳುತ್ತ ಆಕೆಯೆಂದಳು :
''ಸೆಟ್ಟರ ಮಗ ಮಹಡಿಯ ಮೇಲೆ ನಿಂತು ಕೈ ತಟ್ಟಿದ್ದನ್ನು ನೋಡಲಿಲ್ಲವೇ ನೀನು?''

''ಇಲ್ಲ ನಾನು ಬೇರೆ ಏನೋ ವಿಚಾರದಲ್ಲಿದ್ದೆ. ಆತ ನಿನ್ನನ್ನು ನೋಡಿ ಕೈ ತಟ್ಟಿದನೇ! ಎಲಾ ಲಫಂಗ!''

''ಆತ ಲಫಂಗ ಅನ್ನೋದು ಇವೊತ್ತು ಗೊತ್ತಾಯಿತೇನೊ ನಿನಗೆ?''

''ಅವ ಎಂಥವ ಅನ್ನೋದನ್ನು ತೆಗೆದುಕೊಂಡು ನಾನೇನು ಮಾಡುವ ಹಾಗಿದೆ ರತ್ನಮ್ಮ? ನಾನಾಯಿತು, ನನ್ನ ಕೆಲಸವಾಯಿತು. ಬೇರಾವುದರ ಗೊಡವೆಗೂ ನಾನು ಹೋಗುವುದಿಲ್ಲ. ಬೆಳಗಿನಿಂದ ಸಾಯಂಕಾಲದ ತನಕ ದುಡಿದು ದುಡಿದು ಸಾಕಾಗಿರತ್ತೈತಿ. ಇನ್ನು ಇವರ ಕಥೆ ಎಲ್ಲಾ ಕಟ್ಟಿಕೊಂಡು ಏನು ಮಾಡುವುದು? ಹೌದೇ ರತ್ನಮ್ಮ, ಸದಾಶಿವಪ್ಪನೇ ಅಂಥವನೇ?''

''ಅಪ್ಪನ ಹಾಗೆ ಮಗ. ಸೆಟ್ಟಿಯೂ ಅಂಥವನೇ. ಇನ್ನು ಮಗ ಹ್ಯಾಗೆ ಸಂಭಾವಿತನಾಗಿದ್ದಾನು?''

''ಈ ಶ್ರೀಮಂತರಿಗೆ ಬೇರೆ ಏನು ಕೆಲಸ? ರಟ್ಟೆ ಮುರಿದು ದುಡಿಯುವುದಂತೂ ಇಲ್ಲವೇ ಇಲ್ಲ. ಇನ್ನು ಸೊಕ್ಕು ಕೇಳಬೇಕಲ್ಲ?''

''ನನ್ನ ಸುತ್ತೂ ಗಂಟುಬಿದ್ದಿತ್ತು ಈ ಪೀಡೆ. ಏನೇನೋ ಆಸೆ ತೋರಿಸಿದರು. ಅಣ್ಣನಿಗೆ ರೂಪಾಯಿ ಕೊಡುವುದಲ್ಲದೆ ಕೆಲಸವನ್ನೂ ಕಾಯಂ ಮಾಡುವುದಾಗಿಯೂ ಹೇಳಿದರು.''

''ಯಾರು? ಸದಾಶಿವಪ್ಪನೇ ಹೇಳಿದನೇ?''

''ಇದಾನಲ್ಲ – ಆ ತಲೆಹಿಡುಕ ಮ್ಯಾನೇಜರ್. ಇವರೆಲ್ಲರಿಗೂ ಆತ ಕುಂಟಲಿಂಗ.''

''ಅವನೂ ವ್ಯಭಿಚಾರಿಯೆ ಇವರೂ ವ್ಯಭಿಚಾರಿಗಳೇ, ಸರಿಹೋಗಿದೆ. ಇಂಥ ಮಾಲೀಕರಿಗೆ ಇಂಥ ಮ್ಯಾನೇಜರು...''

''ಈಗ ನನ್ನನ್ನು ನೋಡಿದವನೆ ಕೈತಟ್ಟಿ ಗೂರ್ಖಾಗೆ ಸನ್ನೆ ಮಾಡುತ್ತಿದ್ದ. ನನ್ನನ್ನು ಕರೆದುತರಲು ಹೇಳುತ್ತಿದ್ದಿರಬೇಕು. ಅವನ ದೃಷ್ಟಿಯಿಂದ ಪಾರಾಗಿ ಬಂದದ್ದು ನೆಟ್ಟಗಾಯ್ತು. ಸ್ವಾಮಿಗಳನ್ನು ಭೆಟ್ಟಿಯಾಗುವಾಗಲೂ ಆತನ ಕಣ್ಣಿಗೆ ಕಾಣದಂತೆ

ಹುಷಾರಾಗಿರಬೇಕು."

ಆದರೆ ಅವರೆಷ್ಟು ಎಚ್ಚರದಿಂದ ವರ್ತಿಸಿದರೂ ಸದಾಶಿವಪ್ಪ ಅವರನ್ನು ನೋಡದಿರಲಿಲ್ಲ. ಸಾಯಂಕಾಲ ಐದುಗಂಟೆಯ ಸಮಯ. ಒಳಗಡೆ ಸ್ವಾಮಿಗಳ ಸನ್ನಿಧಿಯಲ್ಲಿ ವಚನ ಪ್ರವಚನಕ್ಕಾರಂಭವಾಗಿದ್ದಿತು. ಬೆಂಗಳೂರಿನಿಂದ ಆಗಮಿಸಿದ್ದ ಆಸ್ಥಾನವಿದ್ವಾಂಸರೊಬ್ಬರು ಬಸವಣ್ಣನವರ ವಚನಗಳನ್ನು ಕುರಿತು ನೆರೆದಿದ್ದ ಜನರೆದುರಿಗೆ ವ್ಯಾಖ್ಯಾನ ಮಾಡುತ್ತಿದ್ದರು.

ಉಚ್ಚಕಂಠದಲ್ಲಿ ಅವರು ಹೇಳುತ್ತಿದ್ದರು :

"ದಯೆಯೆ ಧರ್ಮದ ಮೂಲವಯ್ಯಾ
ದಯೆಯೇ ಬೇಕು ಸಕಲ ಪ್ರಾಣಿಗಳಲ್ಲಿ..."

ಹೊರಗಿನ ಕಟ್ಟೆಯ ಮೇಲೆ ಸಿಗರೇಟು ಎಳೆಯುತ್ತ ನಿಂತಿದ್ದ ಸದಾಶಿವಪ್ಪ ಹೆಬ್ಬಾಗಿಲಿನಿಂದ ಒಳಸೇರುತ್ತಿದ್ದ ರತ್ನಮ್ಮನನ್ನು ಕಂಡೊಡನೆ ತುಟಿಗಳ ಮೇಲೆ ನಗೆ ಕುಣಿಸುತ್ತ ಕಟ್ಟೆಯನ್ನಿಳಿದು ಅಂಗಳಕ್ಕೆ ಬಂದು – "ಏನು ಬಂದೆ ರತ್ನಾ? ಯಾರನ್ನು ನೋಡಬೇಕಾಗಿತ್ತು?" ಎಂದ.

ಈಕೆಯ ಹೆಸರನ್ನು ಸಹ ತಿಳಿದುಕೊಂಡಿರುವವನಲ್ಲ ಕಳ್ಳ! ಎಂದುಕೊಂಡು ನಾಗಪ್ಪ – "ಸ್ವಾಮಿಗಳನ್ನು ಕಂಡು ನಮಸ್ಕಾರ ಹಾಕಬೇಕೆಂದು ಬಂದೆವು," ಎಂದ.

"ಓಹೋ! ಯಾಕಾಗಲೊಲ್ಲದು! ಬರ್ರಿ. ಊಟವಾಗಿದೆಯೋ ಇಲ್ಲವೋ? ಆಗದಿದ್ದರೆ ಒಳಗೆ ಹೋಗಿ ನಾಲ್ಕೈದು ಹೋಳಿಗೆ ತಿಂದು ಬರ್ರಿ. ಆಗಲೆ ನಾನು ನಿಮ್ಮನ್ನು ಕಂಡಂತಾಯ್ತು. ಊಟಕ್ಕೆ ಕರೆಯಬೇಕು ಎನ್ನುವುದರಲ್ಲಿಯೆ ಮಾಯವಾದಿರಿ. ಅದೇನು ಹಾಗೆ ಹೊರಟುಹೋದದ್ದು?"

"ಊಟ ಮಾಡಿಕೊಂಡು ಬಂದರಾಯಿತು ಅಂತ ಹೋದೆವು."

"ಅಯ್ಯೋ ಹುಚ್ಚ! ಇಲ್ಲಿ ನೂರಾರು ಜನ ಊಟ ಮಾಡುತ್ತಾರೆ. ನೀವಿಬ್ಬರು ಉಂಡಿದ್ದರೆ ಏನು ಕೊಳ್ಳೆ ಹೋಗುತ್ತಿತ್ತು? ಹೋಗಿರಿ, ಊಟಮಾಡಿ ಬರ್ರಿ," ಎಂದು ಆತ ಹೇಳುತ್ತಿದ್ದಹಾಗೆ ನಾಗಪ್ಪ ಆತನನ್ನು ತಡೆದು – "ಬೇಡ ಸಟ್ಟರೆ, ನಮಗೆ ಹಸಿವಿಲ್ಲ, ಇದೇ ಈಗ ಉಂಡು ಬಂದಿದ್ದೇವೆ," ಎಂದ.

ಸದಾಶಿವಪ್ಪ ಗಹಗಹಿಸಿ ನಗುತ್ತ ನುಡಿದ : "ಹಸಿವಿದ್ದರೇನೇ ಊಟ

ಮಾಡುವುದೇ! ಎಲಾ ಹುಚ್ಚ! ಹೋಳಿಗೆ ತಿನ್ನುವುದಕ್ಕೆ ಹಸಿವು ಯಾತಕ್ಕೆ ಬೇಕು!"

"ಏನೂ ಬೇಡ ಸೆಟ್ಟರೆ. ಸ್ವಾಮಿಗಳನ್ನು ನೋಡಿದರಾಯಿತು," ಎಂದು ನುಡಿದ ನಾಗಪ್ಪ ರತ್ನಮ್ಮನನ್ನು ಕರೆದುಕೊಂಡು ಒಳನುಗ್ಗಿದ.

ಒಳಗಿನ ಕೈಸಾಲೆಯಲ್ಲಿ ಐವತ್ತು ಅರವತ್ತು ಜನ ಗೋಡೆಗಳಿಗಿರಿಸಿದ್ದ ದಿಂಬುಗಳಿಗೊರಗೆ ಕುಳಿತುಕೊಂಡಿದ್ದರು. ಒಂದು ಕಡೆ ಏರ್ಪಡಿಸಿದ್ದ ಎತ್ತರವಾದ ಪೀಠದ ಮೇಲೆ ಸ್ವಾಮೀಜಿ ಮಂಡಿಸಿದ್ದರು. ಅವರ ಹತ್ತಿರ ಆಸ್ಥಾನ ವಿದ್ವಾಂಸರು ನಿಂತುಕೊಂಡು ವ್ಯಾಖ್ಯಾನ ಮಾಡುತ್ತಿದ್ದರು. ಊದಿನ ಕಡ್ಡಿಯ ಸುಗಂಧ ಕೈಸಾಲೆಯಲ್ಲೆಲ್ಲ ತಂಪುಬೀರುತ್ತಿತ್ತು.

ರತ್ನಮ್ಮ – ನಾಗಪ್ಪ ಬಂದವರೆ ಅಡ್ಡಬಿದ್ದು ಸ್ವಾಮಿಗಳಿಗೆ ವಂದಿಸಿದರು. ಕುಳಿತವರೆಲ್ಲ ಈ ಹೊಸಬರನ್ನು ಕುತೂಹಲದಿಂದ ನಿಟ್ಟಿಸುತ್ತಿದ್ದರು. ಸ್ವಾಮಿಗಳ ದೃಷ್ಟಿಯೂ ಇವರತ್ತ ಹೊರಳಿದ್ದಿತು. ಅವರ ಹತ್ತಿರವೆ ಕುಳಿತುಕೊಂಡಿದ್ದ ಸಂಗಪ್ಪಸೆಟ್ಟರೂ ಕೊಂಚ ಕುತೂಹಲದಿಂದಲೇ ಇವರನ್ನು ನಿರುಕಿಸುತ್ತಿದ್ದರು. ಇವರು ಇಲ್ಲಿಗೆ ಹೇಗೆ ಬಂದರೆಂಬುದೇ ಅವರಿಗೊಂದು ಸಮಸ್ಯೆಯಾಗಿದ್ದಿತು.

"ದಯೆಯೇ ಧರ್ಮದ ಮೂಲ! ಬಸವಣ್ಣನವರ ಈ ವಚನ ಎಂದರೆ ವೀರಶೈವ ಧರ್ಮದ ಸಾರಸರ್ವಸ್ವ ಎಂದು ಹೇಳಬಹುದು. ಎಲ್ಲ ಧರ್ಮಗಳ ಮೂಲ ತತ್ವಗಳೂ ಇದೇ ಆಗಿದೆ. ದಯೆಯಿಲ್ಲದ ಧರ್ಮವೇ ಇಲ್ಲ ಪ್ರಪಂಚದಲ್ಲಿ, ನಮ್ಮ ಧರ್ಮಕ್ಕಂತೂ ಅದೇ ಪ್ರಾಣಸ್ವರೂಪಿ..." ಆಸ್ಥಾನವಿದ್ವಾಂಸರ ವಾಣಿ ಗಂಭೀರವಾಗಿ ಮೊಳಗುತ್ತಿದ್ದಿತು.

ಅವರನ್ನು ತಡೆದು ಮಾತನಾಡುವುದೇ ಬೇಡವೆ ಎಂದು ಒಂದೆರಡುಕ್ಷಣ ಯೋಚನೆಗೊಳಗಾಗಿದ್ದ ನಾಗಪ್ಪ, ಅನಂತರ ಧೈರ್ಯ ತಂದುಕೊಂಡು – "ನಮ್ಮದೊಂದು ಬಿನ್ನಹವಿದೆ ಮಹಾಸ್ವಾಮೀ..." ಎಂದು ದನಿಯೆತ್ತಿದ.

ಒಡನೆಯೆ ಆಸ್ಥಾನ ವಿದ್ವಾಂಸರು ತಮ್ಮ ವ್ಯಾಖ್ಯಾನ ನಿಲ್ಲಿಸಿ ನಡುವೆ ಅಡ್ಡಬಂದ ಈತನನ್ನು ಕ್ರುದ್ಧರಾಗಿ ನಿಟ್ಟಿಸತೊಡಗಿದರು.

ಸೆಟ್ಟರು ಮೇಲಕ್ಕೆದ್ದು – "ಏನದು ನಡುವೆ ಗಲಾಟೆ? ಯಾರು ನೀವು? ಏನು ಬೇಕು? ಆಮೇಲೆ ಬನ್ನಿ – ವ್ಯಾಖ್ಯಾನ ಮುಗಿದ ಮೇಲೆ..." ಎಂದು ಗದರಿಸಿದರು.

ಅವರ ದನಿ ಕಿವಿಗೆ ಬೀಳುತ್ತಲೂ ಹೊರಗಡೆ ನಿಂತಿದ್ದ ಸೇವಕನೊಬ್ಬ ಒಳನುಗ್ಗಿ

ನಾಗಪ್ಪನನ್ನು ಹಿಡಿದು ಬಾಗಿಲಿನಾಚೆ ತಳ್ಳತೊಡಗಿದ. ಇನ್ನು ಸುಮ್ಮನಿದ್ದರೆ ತಮ್ಮ ಮಾತು ಸ್ವಾಮಿಗಳ ಕಿವಿಗೆ ಬೀಳುವುದಸಾಧ್ಯವೆಂದು ಮನವರಿಕೆಯಾಗುತ್ತಲೂ ರತ್ನಮ್ಮ ತಾನೇ ದನಿಯೆತ್ತಿದಳು : "ನಾವು ಹೇಳಬೇಕಾದ್ದು ಹೆಚ್ಚೇನೂ ಇಲ್ಲ ಬುದ್ಧೀ! ದಯಮಾಡಿ ಕೇಳಿಕೊಳ್ಳಬೇಕು."

ಬೇಸರ, ತಿರಸ್ಕಾರಗಳಿಂದ ವಕ್ರವಾದ ದೃಷ್ಟಿಯನ್ನು ಆಕೆ ಕಡೆ ಹೊರಳಿಸಿದರು ಸ್ವಾಮಿಗಳು. ಆಕೆ ತೀರ ಬಡವಿಯೆಂಬುದನ್ನು ಸಾರುವಂತಿದ್ದ ಅಗ್ಗದ ಸೀರೆ ಕುಪ್ಪಸಗಳನ್ನು ಕಂಡೊಡನೆ ಅವರು ಮುಖ ಕಿವುಚಿ – "ಏನು ಹೇಳುವುದು? ಆಮೇಲೆ ಬಾ. ಈಗ ವಚನಗಳ ವ್ಯಾಖ್ಯಾನ ನಡೆದಿದೆ. ಗೊತ್ತಾಗುವುದಿಲ್ಲವೆ?" ಎಂದರು.

"ದಯಮಾಡಿ ನಮ್ಮ ಕಷ್ಟ.. ಬುದ್ಧೀ... ನನ್ನ ಅಣ್ಣ... ಸೆಟ್ಟರ ಗಿರಣಿಯೊಳಗ ಕೆಲಸಕ್ಕಿದ್ದವ... ಕೆಲಸ ಮಾಡುವಾಗ ಯಂತ್ರದಾಗ ಕೈ ಸಿಕ್ಕು ಬಲಗೈ ಕಳೆದುಕೊಂಡು ಬಿದ್ದಿದಾನೆ... ನಾಲ್ಕು... ತಿಂಗಳಾಯಿತು ಬುದ್ಧೀ... ಔಷಧ ಉಪಚಾರಕ್ಕೆ ಹಣವಿಲ್ಲ... ಸಾಯುತ್ತ ಬಿದ್ದಿದಾನೆ. ಕಾಯಿದೆಯ ಪ್ರಕಾರ ಸೆಟ್ಟರು ಅವನಿಗೆ ಸಾವಿರ ರೂಪಾಯಿ ಕೊಡಬೇಕಾಗುತ್ತದೆ. ಕೊಡಲೊಲ್ಲರು... ಕೊಡಿಸಬೇಕು ಬುದ್ಧೀ... ದಯೆ... ನಿಮ್ಮ. ದಯೆ..."

ಸ್ವಾಮಿಗಳು ಹುಬ್ಬು ಗಂಟು ಹಾಕಿಕೊಂಡು – "ಎಲ್ಲಿ ಹೋದರೂ ಈ ದರಿದ್ರರ ಕಾಟ ಇದ್ದದ್ದೇ, ಏನಿದು ಸೆಟ್ಟರೆ, ಇವರ ತಕರಾರು ಏನಿದೆಯೋ ಕೇಳಿಕೊಂಡು ಕಳಿಸಿಬಿಡಿ..." ಎಂದರು.

ಸೆಟ್ಟರು ಮುಂದುವರಿಯುತ್ತಿದ್ದ ಹಾಗೆಯೆ ರತ್ನಮ್ಮ ಕೊನೆಯ ಸಲ ಪ್ರಯತ್ನ ಮಾಡಿದರಾಯಿತೆಂದು – "ಕೇಳಿ ಬುದ್ಧೀ, ಸೆಟ್ಟರು ಹಣ ಕೊಡುವುದಿಲ್ಲವೆಂದು ಹೇಳಿದ ಮೇಲೆ ತಮ್ಮ ಹತ್ತಿರ ಬಂದಿದ್ದೇವೆ. ತಾವೇ ದಯಮಾಡಿ ಕೊಡಿಸಬೇಕು..." ಎಂದಳು. ಬಲಗೈಯನ್ನು ಮುಂದೆ ಮಾಡಿ ಸ್ವಾಮಿಗಳು ಶಾಪ ಕೊಡುವವರ ಹಾಗೆ ಅರ್ಭಟಿಸಿದರು : "ನಡಿಯಾಚೆ! ತೊಲಗು!"

ಇನ್ನು ಇಲ್ಲಿ ನಿಲ್ಲುವಂತಿರಲಿಲ್ಲ, ರತ್ನಮ್ಮ ತಲೆ ತಗ್ಗಿಸಿಕೊಂಡು ಹೊರಟುಬಿಟ್ಟಳು. ಸೆಟ್ಟರೂ ಆಕೆಯ ಹಿಂದೆ ಹಿಂದೆ ಬಂದರು. ಅಂಗಳದಲ್ಲಿ ನಾಗಪ್ಪನನ್ನು ಸೆಟ್ಟರು ರತ್ನಮ್ಮನನ್ನು ಕುರಿತು – "ಏನಮ್ಮಾ! ಹಣ ಕೊಡೋದಿಲ್ಲ ಅಂತ ನಾನು ಎಂದು ಹೇಳಿದೆ? ಕೊಡುತ್ತೇನೆ. ಈಗಲೂ ಕೊಡಲು ಸಿದ್ಧನಿದ್ದೇನೆ. ಆದರೆ ನಿಮ್ಮಣ್ಣ ಆ ಕಮ್ಯೂನಿಸ್ಟರ ಸಹವಾಸ ಬಿಡಬೇಕು. ಸಂಘಕ್ಕೆ ರಾಜೀನಾಮೆ ಕೊಡಬೇಕು. ಅವನಿಗೆ ಹಿತವಾಗಲೆಂದೇ

ನಾನು ಹೀಗೆ ಹೇಳುತ್ತಿರೋದು. ನಮ್ಮ ಕೆಲಸಗಾರರೆಂದರೆ ನನಗೆ ಮಕ್ಕಳಿದ್ದ ಹಾಗೆ. ಅವರೆಲ್ಲ ಸುಖವಾಗಿರಬೇಕೆಂದು ಹಗಲಿರಳೂ ಶ್ರಮಿಸುತ್ತಿರುತ್ತೇನೆ ನಾನು. ನನ್ನ ಮಾತು ಕೇಳಿಕೊಂಡು, ಪುಂಡರ ಗಿಂಡರ ಸಹವಾಸ ಮಾಡದೆ ಕೆಲಸ ಮಾಡಿಕೊಂಡು ಸಂಭಾವಿತರ ಹಾಗಿದ್ದರೆ ನೆಮ್ಮದಿಯಿಂದ ಇರಬಹುದು. ಈಗಲೂ ನಿಮ್ಮಣ್ಣ ನಾ ಹೇಳಿದ ಹಾಗೆ ಕೇಳಿದರೆ ಇಂದೇ ಹಣ ಕೊಡುತ್ತೇನೆ," ಎಂದರು.

"ಸಂಘ ಅಂದರೆ ಆತನ ಪ್ರಾಣವಿದ್ದ ಹಾಗೆ ಸಾಹುಕಾರರೆ. ಅದನ್ನು ಬಿಡು ಅಂದರೆ ಹೇಗೆ?" ಎಂದಳು ರತ್ನಮ್ಮ.

"ಪ್ರಾಣವಲ್ಲ-ಪ್ರಾಣ ತಿನ್ನುವ ಯಮದೂತ! ಆ ಕಮ್ಯೂನಿಸ್ಟರೆಂಥವರು ಅನ್ನೋದು ನಿಮಗೇನು ತಿಳಿಯುತ್ತೆ ಹಳ್ಳೀ ಮುಕ್ಕರಿಗೆ! ಈಗ ನೀವೇ ನೋಡುತ್ತಿರುವಿರಲ್ಲ, ನಿಮ್ಮಣ್ಣ ಔಷಧ ಇಲ್ಲದೆ ಸಾಯುತ್ತ ಬಿದ್ದಿದ್ದರೂ ಆತನನ್ನುಳಿಸಿಕೊಳ್ಳಲು ಒಬ್ಬರಾದರೂ ಬಂದರೇ? ಎಲ್ಲಿದ್ದಾರೆ ಆ ಬಡವರ ಬಂಧುಗಳೆಲ್ಲ?"

"ಅವರಾದರೂ ಏನು ಮಾಡಿಯಾರು ಸಾಹುಕಾರರೇ! ಅವರೂ ನಮ್ಮಂತೆ ಬಡವರೇ!"

"ಬಡವರೆಂದ ಮೇಲೆ ಬಡವರ ಹಾಗಿರಬೇಕೋ ಬೇಡವೋ? ನಾನು ಹಾಕುವ ಅನ್ನ ತಿಂದು ನನ್ನ ವಿರುದ್ಧ ಚಳವಳಿ ಮಾಡುವದೆಂದರೇನು! ನಿಮಗೆಲ್ಲ ಬುದ್ಧಿ ಬರಲೇ ಬೇಕು. ಹೋಗು, ನಿಮ್ಮಣ್ಣನಿಗೆ ಹೇಳು. ಆತ ಸಂಘವನ್ನೂ ಕಮ್ಯೂನಿಸ್ಟರ ಸಹವಾಸವನ್ನೂ ಬಿಡಲು ಸಿದ್ಧನಿದ್ದರೆ ಮಾತ್ರ ಹಣ ಸಿಕ್ಕುವುದು. ಇಲ್ಲವಾದರೆ ಇಲ್ಲ..." ಎಂದು ನುಡಿದು ಸೆಟ್ಟರು ಹಿಂದಿರುಗಿದರು.

"ದಯೆಮಾಡಿ ಸೆಟ್ಟರೆ... ಬಡವರ ಮೇಲೆ..."

"ನಿಮ್ಮಂಥವರಿಗೆ ದಯ ತೋರಿಸೋದು ಅಂದರೆ ಮುಟ್ಠಾಳತನದ ಕೆಲಸ," ಎಂದು ಗೊಣಗಿಕೊಳ್ಳುತ್ತ ಸೆಟ್ಟರು ಒಳಸೇರಿದರು.

ರತ್ನಮ್ಮ ನಿರಾಶಳಾಗಿ ಹೊರಡತೊಡಗಿದಳು. ಹೆಬ್ಬಾಗಿಲಲ್ಲಿ ನಿಂತಿದ್ದ ಗುರ್ಖಾ ಶಿಪಾಯಿಗಳು ಮತ್ತೆ ಆಕೆಯನ್ನು ಕಂಡು ಕಣ್ಣು ಮಿಟುಕಿಸಿ ತುಟಿ ಕುಣಿಸಿ ನಕ್ಕರು. ಆಕೆಗೆ ಅತ್ತಕಡೆ ಗಮನವಿರಲಿಲ್ಲ, ತಮ್ಮ ಸಂಕಟದ ಕತೆಯನ್ನು ಕೇಳುವಷ್ಟು ಸೈರಣೆಯೂ ಇರಲಿಲ್ಲ ಸ್ವಾಮಿಗಳಲ್ಲಿ. ಅವರ ದೃಷ್ಟಿಯಲ್ಲಿ ತಾವು ತೀರ ಕ್ಷುಲ್ಲಕ ಪ್ರಾಣಿಗಳಾಗಿ ಕಂಡಿರಬೇಕು. ತಮ್ಮ ಗೋಳು ಯಾರಲ್ಲಿಯೂ ದಯೆ ಹುಟ್ಟಿಸಲಿಲ್ಲ.. ಮುಂದೆ...?

"ದಯೆಯಿಲ್ಲದ ಧರ್ಮವಾವುದಯ್ಯ! ಬಸವಣ್ಣನವರ ಈ ಒಂದು ವಚನದಂತೆ ನಾವು ಆಚರಿಸಿದರೆ ಸಾಕು. ವೀರಶೈವ ಧರ್ಮದಲ್ಲಿ ಹುಟ್ಟಿಬಂದದ್ದು ಸಾರ್ಥಕವಾದೀತು!" ಆಸ್ಥಾನ ವಿದ್ವಾಂಸರ ಉಚ್ಚಸ್ವರ ಅಲ್ಲಿಗೂ ಕೇಳಬರುತ್ತಿತ್ತು.

## ೨೧

ಅಂದು ಸಾಯಂಕಾಲ ಏಳುಗಂಟೆಗೆ ಚಂದ್ರಣ್ಣ ಕಚೇರಿಯಿಂದ ಹೊರಕ್ಕೆ ಹೊರಡುವಷ್ಟರಲ್ಲಿ ಗಿರಣಿಯ ಕಡೆಯಿಂದ ಕೂಲಿಕಾರರು ಅವಸರವಸರವಾಗಿ ಓಡಿಬರುವುದನ್ನು ಕಂಡು ವಿಷಯವೇನೆಂದು ವಿಚಾರಿಸಿದಾಗ ಅಂದು ಗಿರಣಿಯಲ್ಲಿ ಗಲಭೆಯಾಯಿತೆಂದೂ ಪೋಲೀಸರು ಬಂದು ಲಾಠೀಪ್ರಹಾರ ಮಾಡಿ ಕೂಲಿಕಾರರನ್ನು ಚೆದುರಿಸಿದರೆಂದೂ ತಿಳಿದುಬಂದಿತು. ಹತ್ತಿಪ್ಪತ್ತು ಜನರನ್ನು ಬಂಧಿಸಿ ಪೊಲೀಸು ಕಚೇರಿಗೆ ಸಾಗಿಸಿಕೊಂಡು ಹೋದರೆಂದೂ ಗೊತ್ತಾಯಿತು.

ಮೊಳಕಾಲಿಗೆ ಪಟ್ಟಿಯೊಂದನ್ನು ಕಟ್ಟಿಕೊಂಡು ಉದ್ವಿಗ್ನ ಮನಸ್ಕನಾಗಿ ಮೆಲ್ಲನೆ ಹೆಜ್ಜೆ ಹಾಕುತ್ತ ಮನೆಯ ಕಡೆಗೆ ಹೊರಟಿದ್ದ ಕೂಲೀ ಹುಡುಗನೊಬ್ಬನನ್ನು ತಡೆದು ಚಂದ್ರಣ್ಣ – "ಏನಯ್ಯಾ, ಆದುದಾದರೂ ಏನು?" ಎಂದು ಕೇಳಿದ.

ಆ ಹುಡುಗ ಹೇಳತೊಡಗಿದ : "ಇಂದು ಮುಂಜಾನೆ ಸಂಘದ ಸಭೆಯೊಂದು ಸೇರಿತ್ತು. ಕಾಯಿದೆಯ ಪ್ರಕಾರ ನಾವೆಲ್ಲರೂ ಎಂಟು ತಾಸು ಮಾತ್ರ ಕೆಲಸ ಮಾಡಬೇಕೆಂದಿದ್ದರೂ ಮಾಲೀಕರು ಅನ್ಯಾಯವಾಗಿ ಹನ್ನೊಂದು ತಾಸು ಕೆಲಸ ಮಾಡಿಸುತ್ತಿದ್ದಾರೆ. ಇದುವರೆಗೆ ಹೇಗೋ ಸಹಿಸಿಕೊಂಡಿದ್ದೆವು. ಇನ್ನು ಅದರ ವಿರುದ್ಧ ದನಿ ಎತ್ತಲೇಬೇಕೆಂದು ಮುಂಜಾನೆ ನಿರ್ಧರಿಸಿ ಸಾಯಂಕಾಲ ಆರುಗಂಟೆಗೆ ಎಲ್ಲರೂ ಕೆಲಸ ಬಿಟ್ಟು ಗಿರಣಿಯಿಂದ ಹೊರಟುಬಿಡಲು ತಿಳಿಸಲಾಯಿತು. ಆ ಪ್ರಕಾರ ಎಲ್ಲರೂ ಹೊರಟಾಗ ಗಿರಣಿಯ ಅಧಿಕಾರಿಗಳು ಅಡ್ಡಗಟ್ಟಿ ಎಂದಿನಂತೆ ಎಂಟುಗಂಟೆಯವರೆಗೆ ಕೆಲಸ ಮಾಡಿ ಹೋಗಬೇಕೆಂದು ಹೇಳಿದರು. ಕೂಲಿಕಾರರು ಒಪ್ಪಲಿಲ್ಲ, ಅಧಿಕಾರಿಗಳು ಅವರನ್ನು ಹೊರಗೆ ಬಿಡಲಿಲ್ಲ, ನಾವೆಲ್ಲ ಶಾಂತವಾಗಿ ಅಲ್ಲಿಯೆ ಕುಳಿತುಕೊಂಡು ಬಿಟ್ಟಿದ್ದೆವು. ನಮ್ಮ ಒಗ್ಗಟ್ಟನ್ನು ಕಂಡು ಹೆದರಿದ ಅಧಿಕಾರಿಗಳು ಕೆಲವರು ಪುಂಡರನ್ನು

ಬಿಟ್ಟು ಬೇಕಂತಲೆ ಗದ್ದಲ ಎಬ್ಬಿಸಿದರು."

"ಆ ಪುಂಡರೆಂದರೆ ಯಾರು? ಅವರೂ ಕೂಲಿಕಾರರೇ?"

"ಹೆಸರಿಗೆ ಮಾತ್ರ ಕೂಲಿಕಾರರು. ಅವರ ಕೆಲಸವೆಂದರೆ ಇದೇ. ಮಾಲೀಕರು ಸಾಕಿದ ಬೇಟೆಯ ನಾಯಿಗಳಂತೆ ಅವರು ಕೂಲಿಕಾರರ ಮೇಲೆ ಬಿದ್ದರು. ನಮ್ಮ ಹೆಣ್ಣುಮಕ್ಕಳ ಮಾನಭಂಗ ಮಾಡುವ ಪ್ರಯತ್ನಗಳೂ ನಡೆದವು. ಇನ್ನು ಸುಮ್ಮನಿರ ಲಾಗುವುದೇ? ಸ್ವಲ್ಪ ಗದ್ದಲವಾಯಿತು. ಅದಕ್ಕಾಗಿಯೇ ಕಾಯುತ್ತಿದ್ದ ಮ್ಯಾನೇಜರು ಪೊಲೀಸರನ್ನು ಕರೆಯಿಸಿ ನಮ್ಮನ್ನೆಲ್ಲಾ ಮನಬಂದಂತೆ ಹೊಡೆಯಿಸಿದರು."

"ಆಮೇಲೆ ಬಾಗಿಲು ತೆರೆದರೇ?"

"ಪೂರಾ ಹೊಡೆಸಿದ ಮೇಲೆ."

"ಶಂಕರರಿಗೂ ಪೆಟ್ಟಾಗಿದೆಯೆ?" ಎಂದು ಕಳವಳದಿಂದ ಕೇಳಿದ ಚಂದ್ರಣ್ಣ.

"ಅವರ ಹಣೆಗೆ ಬಲವಾದ ಗಾಯವಾಗಿದೆ. ಕೈ ಕಾಲುಗಳಿಗೂ ಪೆಟ್ಟು ಬಿದ್ದಿದೆ."

"ಈಗ ಎಲ್ಲಿದ್ದಾರೆ ಅವರು?"

"ಪೊಲೀಸರು ಅವರನ್ನು ಹಿಡಿದುಕೊಂಡು ಹೋದರು."

ಚಂದ್ರಣ್ಣ ಚಕಿತನಾಗಿ ಕೇಳಿದ : "ಹಿಡಿದುಕೊಂಡು ಹೋದರೇ? ಯಾವ ಅಪರಾಧಕ್ಕಾಗಿ?"

ಆ ಹುಡುಗ ಕಟುನಗೆಯೊಂದಿಗೆ ನುಡಿದ : "ಅಪರಾಧ? ಕೂಲಿಕಾರರಿಗೆ ದುರ್ಬೋಧನೆ ಮಾಡಿ ಗದ್ದಲ ಮಾಡಿಸಿದ ಅಪರಾಧ!"

"ದುರುಗುಪ್ಪ? ಇಬ್ರಾಹೀಮ್?"

"ಅವರಿಗೂ ಹೊಡೆತ ಬಿದ್ದಿದೆ, ಆದರೆ ಪೊಲೀಸರ ಕೈಗೆ ಸಿಗದೆ ಅವರಿಬ್ಬರೂ ತಪ್ಪಿಸಿಕೊಂಡಿದ್ದಾರೆ."

ಇಷ್ಟು ಹೇಳಿ ಆ ಹುಡುಗ ತಲೆಯೆತ್ತಿ ಚಂದ್ರಣ್ಣನನ್ನು ನಿಟ್ಟಿಸಿ ನೋಡಿದ, ಆತನ ನೆಹರೂ ಬನೀನು, ಖಾದಿಯ ಪಾಯಿಜಾಮಗಳನ್ನು ಕಂಡು ಏನೆನ್ನಿಸಿತೊ – "ನೀವು ಯಾರು ಸ್ವಾಮೀ? ಕಾಂಗ್ರೆಸ್ಸಿನವರಲ್ಲವಷ್ಟೆ?" ಎಂದು ಕೇಳಿದ.

ಚಂದ್ರಣ್ಣ ನಕ್ಕು ನುಡಿದ :"ಅಲ್ಲ, ಮಾರಾಯ! ಯಾವ ಪಕ್ಷಕ್ಕೂ ಸೇರಿದವನಲ್ಲ ನಾನು."

ಆ ಹುಡುಗನ ಸಂದೇಹ ಪೂರ್ಣವಾಗಿ ತೊಲಗಲಿಲ್ಲ.

"ಶಂಕರ್, ದುರುಗಪ್ಪ ಎಲ್ಲರ ಹೆಸರೂ ಗೊತ್ತಿದೆಯಲ್ಲ ನಿಮಗೆ! ಹ್ಯಾಗೆ ಗೊತ್ತಾಯಿತು?"

"ಶಂಕರ್ ನಾನೂ ಸ್ನೇಹಿತರು. ಸಂಶಯವೇನು ನಿನಗೆ? ನಾನು ಸಿ.ಐ.ಡಿ. ಆಗಿರಬಹುದೆಂಬ ಯೋಚನೆಯೂ ಏನು?" ಎಂದು ನುಡಿದು ಚಂದ್ರಣ್ಣ ನಗತೊಡಗಿದ. ಗುರುತಿಸಿದನೇನೊ, ಆತನಿಗೆ ಸಮಾಧಾನವಾದಂತಾಯಿತು.

"ನಿನ್ನ ಮನೆಯೆಲ್ಲಿದೆ ತಮ್ಮ?"

"ಕರಿಯನ ವಸ್ತಿಯಲ್ಲಿ."

"ಶಂಕರರ ಮನೆಯೂ ಅಲ್ಲೇ ಇದೆಯಲ್ಲವೆ?"

"ಹೌದು. ನೀವು ನೋಡಿಲ್ಲವೇ?"

"ಇಲ್ಲ, ನಾನು ಈ ಊರಿಗೆ ಬಂದು ಬಹಳ ದಿನವಾಗಿಲ್ಲ ಇನ್ನೂ. ಅವರ ಮನೆ ಯಲ್ಲಿ ಯಾರು ಯಾರಿದ್ದಾರೆ? ಮುದುಕಿ ತಾಯಿಯೊಬ್ಬರು ತಾನೆ?"

"ಇನ್ನೊಬ್ಬರು ಅಮ್ಮಯ್ಯ ಇದ್ದಾರೆ. ಅವರೂ ಮೊನ್ನೆ ಇಲ್ಲಿಗೆ ಬಂದರು. ಒಂದು ವಾರವಾಗಿರಬಹುದು ಅಷ್ಟೆ."

"ಯಾರಪ್ಪಾ ಅವರು?"

"ಅವರು ಶಂಕರರ ಊರಿನವರಂತೆ. ಸರೋಜಮ್ಮ ಅಂತ."

ಸರೋಜಮ್ಮ!

ಆ ಹೆಸರು ಕಿವಿಗೆ ಬಿದ್ದೊಡನೆಯೆ ಚಂದ್ರಣ್ಣ ಆಕೆಯ ವಿಷಯವಾಗಿ ಶಂಕರ್ ತನ್ನೆದುರಿಗೆ ಹಲವು ಬಾರಿ ಹೇಳಿದುದೆಲ್ಲವೂ ನೆನಪಿಗೆ ಬಂದಿತು. ಮಂಗಳೂರಿನಲ್ಲಿ ದ್ದಾಗ ಶಂಕರನಿಗೂ ಕಾಲೇಜು ವಿದ್ಯಾರ್ಥಿನಿಯಾದ ಸರೋಜಮ್ಮನಿಗೂ ಪರಿಚಯ ವುಂಟಾದುದು, ಶಂಕರನ ಧ್ಯೇಯವಾದಿ ಜೀವನವನ್ನು ಕಂಡು ಸರೋಜಾ ಆತನಿಗೆ ಮಾರುಹೋದುದು, ಅವರೀರ್ವರ ನಿಕಟ ಸಹವಾಸ, ಶಂಕರನ ಧ್ಯೇಯದ ದಾರಿ

ಯಲ್ಲಿ ತಾನೂ ಜೊತೆಗಾತಿಯಾಗಿ ಬರಲು ಸರೋಜಾ ಸಿದ್ಧಳಾದುದು, ಅವಳ ಮನೆಯವರು ಅದಕ್ಕೊಪ್ಪದಿದ್ದುದು, ಕೊನೆಗೆ ಶಂಕರನೊಬ್ಬನೇ ಹೊರಟು ಬಂದುದು – ಎಲ್ಲವೂ ಜ್ಞಾಪಕವಾಯಿತು.

"ಇದೋ ಬಂತು ನೋಡಿರಿ ಶಂಕರರ ಮನೆ!"

ಎಲ್ಲ ಗುಡಿಸಲುಗಳ ಹಾಗೆಯೆ ಅದೂ ಒಂದು ಗುಡಿಸಲು. ಹುಡುಗ ಹೊರಗಡೆ ನಿಂತುಕೊಂಡು – "ಅಜ್ಜೀ," ಎಂದು ಕೂಗಿದೊಡನೆಯೆ ಸೀಮೆಎಣ್ಣೆಯ ಲಾಂದ್ರವನ್ನು ಕೈಯಲ್ಲಿ ಹಿಡಿದುಕೊಂಡು ಯುವತಿಯೊಬ್ಬಳು ಬಾಗಿಲು ತೆರೆದಳು.

"ಯಾರಪ್ಪ ಅದು?"

"ನಾನು ಮಲ್ಲೇಶಿ. ಇವರು ರಾಯರ ಗೆಳೆಯರು ಅಜ್ಜಿಯನ್ನು ನೋಡಲು ಬಂದಿದಾರೆ."

"ಬನ್ನಿ."

ಹೊಸತಿಲಿನಲ್ಲಿ ಅಡಿಯಿರಿಸುತ್ತ ಚಂದ್ರಣ್ಣ ಆ ಯುವತಿಯ ಕಡೆಗೆ ಸಹಜವಾಗಿ ದೃಷ್ಟಿ ಬೀರಿದ. ಆಕೆಗೆ ಇಪ್ಪತ್ತು ಇಪ್ಪತ್ತೊಂದು ವರ್ಷ ವಯಸ್ಸಾಗಿರಬಹುದು. ಸಾಕಷ್ಟು ಎತ್ತರವಾಗಿ ತುಂಬಿಕೊಂಡು ಬೆಳೆದ ದೇಹ. ಕೂಲಿಕಾರ ಹೆಣ್ಣುಮಕ್ಕಳು ಉಡುವಂಥ ಸೀರೆಯನ್ನುಟ್ಟು ಒರಟು ಬಟ್ಟೆಯ ರವಕೆಯೊಂದನ್ನು ತೊಟ್ಟಿದ್ದಳಾದರೂ ಆಕೆ ಸುಶಿಕ್ಷಿತ ಳೆಂಬುದನ್ನು ಆ ಮುಖ ಸ್ಪಷ್ಟವಾಗಿ ಸೂಚಿಸುವಂತಿದ್ದಿತು. ಆಕೆಯ ವಿಶಾಲವಾದ ಹಣೆಯೂ ತೇಜಃಪೂರ್ಣವಾದ ಕಣ್ಣುಗಳೂ ಆಕೆಯ ವಿಷಯವಾಗಿ ಯಾರಿಗಾದರೂ ಆದರದ ಭಾವನೆಯನ್ನು ಹುಟ್ಟಿಸುವಂತಿದ್ದುವು.

ಆಕೆ ತೋರಿಸಿದ ಕುರ್ಚಿಯಲ್ಲಿ ಕುಳಿತುಕೊಂಡು ಚಂದ್ರಣ್ಣ ಸ್ವಲ್ಪದರಲ್ಲಿಯೆ ತನ್ನ ಪರಿಚಯ ಮಾಡಿಕೊಟ್ಟಾಗ ಆಕೆಯ ಮುಖ ಸಂತೋಷದಿಂದ ಅರಳಿದಂತಾಯಿತು. "ಶಂಕರ್ ನಿಮ್ಮ ವಿಚಾರವಾಗಿ ನನ್ನೆದುರು ಎಷ್ಟೋ ಸಲ ಹೇಳಿದ್ದಾರೆ. ನಿಮ್ಮ ಬರಹ ಗಳನ್ನೂ ನಾನು ಓದಿದ್ದೇನೆ," ಎಂದಳಾಕೆ.

"ಅವರ ತಾಯಿ ಎಲ್ಲಿದ್ದಾರೆ? ಕಾಣುವುದಿಲ್ಲವಲ್ಲ?"

"ಮಗನನ್ನು ನೋಡಿಬರಲು ಪೊಲೀಸು ಸ್ಟೇಷನ್ನಿಗೆ ಹೋಗಿದ್ದಾರೆ. ಬಹಳ ಪೆಟ್ಟು ಬಿದ್ದಿದೆಯಂತೆ. ನೀವು ನೋಡಿದಿರಾ?" ಎಂದು ಕೇಳುವಾಗ ಆಕೆಯ ಮುಖ

ದಲ್ಲಾಗಲಿ ಧ್ವನಿಯಲ್ಲಾಗಲಿ ಭಯದ ಲಕ್ಷಣವೊಂದೂ ಕಂಡು ಬರುತ್ತಿರಲಿಲ್ಲ. ತೀರ ಸಹಜವೂ ಶಾಂತವೂ ಆದ ಸ್ವರದಲ್ಲಿ ಮಾತನಾಡುತ್ತಿದ್ದಳಾಕೆ.

"ಇಲ್ಲ, ನಾನು ನೋಡಲಿಲ್ಲ. ಗಲಭೆ, ಲಾಠೀಚಾರ್ಜುಗಳ ಸುದ್ದಿ ಈಗ ತಾನೆ ತಿಳಿಯಿತು ನನಗೆ. ಅಂತೆಯೆ ಅವರ ತಾಯಿಯನ್ನು ನೋಡೋಣವೆಂದು ಬಂದೆ."

"ಕೊಂಚ ಕೂತುಕೊಳ್ಳಿ. ಇಷ್ಟರಲ್ಲೆ ಬಂದುಬಿಡಬಹುದು."

ಚಂದ್ರಣ್ಣ ಗುಡಿಸಲಿನಲ್ಲೆಲ್ಲ ದೃಷ್ಟಿಯನ್ನು ಓಡಿಯಾಡಿಸಿದ. ಎಲ್ಲ ಕೂಲಿಕಾರರ ಗುಡಿಸಲುಗಳಂತೆಯೆ ಅದೂ ಇದ್ದಿತಾದರೂ ಅಲ್ಲಿ ನೆಲಸುವವರ ವ್ಯಕ್ತಿತ್ವ ವೈಶಿಷ್ಟ್ಯಗಳು ಅದರ ಮೇಲೂ ಪ್ರಭಾವ ಬೀರದೆ ಹೋಗಿರಲಿಲ್ಲ. ಗೋಡೆಗಳಿಗೆಲ್ಲ ಸುಣ್ಣ ಬಳಿದು ಅಲ್ಲಲ್ಲಿ ಮೂರು ನಾಲ್ಕು ಪಟಗಳನ್ನು ತೂಗುಹಾಕಲಾಗಿದ್ದಿತು. ಲಾಂದ್ರದ ಮಂದ ಬೆಳಕಿನಲ್ಲಿ ಅಸ್ಫುಟವಾಗಿ ಕಾಣಿಸುತ್ತಿದ್ದ ಆ ಚಿತ್ರಗಳು; ಮಾರ್ಕ್ಸ್, ಎಂಗೆಲ್ಸ್ ಲೆನಿನ್ ಮತ್ತು ಸ್ಟಾಲಿನ್! ಪೂರ್ವ ದಿಕ್ಕಿನ ಗೋಡೆಗೆ ಹೊಂದಿಕೊಂಡು ಇರಿಸಲಾಗಿದ್ದ ಬಿದಿರಿನ ಶೆಲ್ಫಿನಲ್ಲಿ ನೂರಾರು ಗ್ರಂಥಗಳು ಓರಣವಾಗಿ ಕುಳಿತಿದ್ದುವು.

"ಶಂಕರರಿಗೆ ತುಂಬ ಪೆಟ್ಟಾಗಿದೆಯೆಂದು ಕೇಳಿದೆ. ನೀವು ನೋಡಲು ಹೋಗಲಿಲ್ಲವೆ?" ಎಂದ ಚಂದ್ರಣ್ಣ.

"ಇಲ್ಲ, ನಾ ಹೋಗುವಂತಿಲ್ಲ."

"ಅದೇಕೆ?"

"ಅವರ ಜೊತೆಗೆ ನಾನೂ ಪೊಲೀಸರ ಕೈಗೆ ಸಿಕ್ಕಿಬೀಳಬೇಕೆಂದಿದ್ದರೆ ಹೋಗಬಹುದು."

"ನಿಮ್ಮನ್ನೇಕೆ ಹಿಡಿಯುತ್ತಾರೆ?"

"ನಾನು ಮಂಗಳೂರಿನಲ್ಲಿದ್ದಾಗಲೆ ನನ್ನ ಮೇಲೆ ಪೊಲೀಸಿನವರು ಕಣ್ಣಿಟ್ಟಿದ್ದರು. ಶಂಕರ್ ನಾನು ತುಂಬ ಸ್ನೇಹಿತರು ಎನ್ನುವುದು ಗೊತ್ತು ಆ ಪೊಲೀಸರಿಗೆ. ನಾನು ಮಂಗಳೂರನ್ನು ಬಿಟ್ಟಮೇಲೂ ನನ್ನ ಮೇಲೆ ಒಂದು ಕಣ್ಣು ಇಟ್ಟ ಹಾಗೇ ಇದೆ ಅವರು. ನನ್ನ ವಿಷಯವನ್ನೆಲ್ಲ ಅವರು ಇಲ್ಲಿನ ಪೊಲೀಸರಿಗೆ ವರದಿ ಮಾಡಿರಲು ಸಾಕು."

"ಸ್ನೇಹಿತರಾದ ಮಾತ್ರಕ್ಕೆ ನಿಮ್ಮನ್ನೇಕೆ ಹಿಡಿಯಬೇಕು? ನೀವೂ ಇದ್ದೀರಾ ಈ ಚಳವಳಿಯಲ್ಲಿ?"

"ಮತ್ತೆ? ಚಳವಳಿಯಲ್ಲಿಲ್ಲವಾದರೆ ಇಲ್ಲಿಗೇತಕ್ಕೆ ಬರುತ್ತಿದ್ದೆ ನಾನು? ನಮ್ಮ ಊರನ್ನು ಬಿಟ್ಟು? ನಮ್ಮ ಮನೆಯನ್ನು ಬಿಟ್ಟು? ನಮ್ಮೂರಾವುದು ಗೊತ್ತೇ ನಿಮಗೆ?"

"ಮಂಗಳೂರು?"

"ಹೌದು. ಅಲ್ಲಿ ಶಂಕರ್ ಕಾಲೇಜಿನಲ್ಲಿದ್ದಾಗ ಅವರೊಂದಿಗೆ ಪರಿಚಯ ವಾಯಿತು. ಕಾಲೇಜಿನಲ್ಲಿದ್ದಾಗಲೂ ಇದೇ ಕೆಲಸ ಅವರದು. ಹೆಂಚಿನ ಕಾರಖಾನೆಯ ಕೆಲಸಗಾರರ ಸಂಘ ಸ್ಥಾಪಿಸಿ ಅವರ ಹಕ್ಕುಬಾಧ್ಯತೆಗಳಿಗಾಗಿ ಹೋರಾಟ ಹೂಡಿದ್ದರು. ವಿದ್ಯಾರ್ಥಿಗಳಲ್ಲಿ ರಾಜಕೀಯ ಜಾಗ್ರತಿಯನ್ನುಂಟುಮಾಡುತ್ತಿದ್ದರು. ಅವರ ಸಹವಾಸದಿಂದಾಗಿ ನನಗೂ ಚಳವಳಿಯ ಬಗೆಗೆ ಆಸಕ್ತಿ ಹುಟ್ಟಿತು. ಅವರು ಮಂಗಳೂರಿನಲ್ಲಿದ್ದಾಗಲೆ ನಾನು ಅರ್ಧಮರ್ಧ ಈ ಚಳವಳಿಗೆ ಧುಮುಕಿಬಿಟ್ಟಿದ್ದೆ ಅಂತ ಹೇಳಬಹುದು. ಅವರು ಇಲ್ಲಿಗೆ ಬಂದ ಬಳಿಕ ಇಲ್ಲಿ ನನ್ನ ಸಹಾಯದ ಅಗತ್ಯ ವುಂಟೆಂದು ತಿಳಿಸಿದಾಗ ಇಲ್ಲಿಗೆ ಬಂದುಬಿಟ್ಟೆ"

ಚಂದ್ರಣ್ಣ ವಿಸ್ಮಿತನಾಗಿ ಆಕೆಯ ಮಾತು ಕೇಳುತ್ತಿದ್ದ. ಪ್ರೇಮ, ಪ್ರಣಯ, ಒಲವು ಇತ್ಯಾದಿ ಶಬ್ದಗಳೊಂದೂ ಬರುತ್ತಿರಲಿಲ್ಲ ಆಕೆಯ ಮುಖದಿಂದ. ಹೋರಾಟ, ಚಳವಳಿ, ತನ್ನ ಸಹಾಯದ ಅವಶ್ಯಕತೆಗಳನ್ನು ಕುರಿತೇ ಆಕೆ ಹೇಳುತ್ತಿದ್ದಳು. ಶಂಕರನ ಬಗೆಗೆ ಆಕೆಯಲ್ಲಿದ್ದ ಪ್ರೀತಿಗಿಂತ ಹೆಚ್ಚಾಗಿ ಶಂಕರನ ಧ್ಯೇಯದ ಬಗೆಗೇ ಆತ್ಮೀಯತೆ ಯಿದ್ದುದು ಸ್ಪಷ್ಟವಾಗುತ್ತಿತ್ತು. ತಮ್ಮೀರ್ವರ ವೈಯಕ್ತಿಕ ಸಂಬಂಧವನ್ನೇ ಮರೆತು ಅವರು ಆ ಮಹಾಧ್ಯೇಯದೊಂದಿಗೆ ಸಮರಸವಾಗಿದ್ದರು. ಗಂಡು ಹೆಣ್ಣು ಎಂಬ ಸಂಕುಚಿತ ಭೇದಭಾವನೆಗೆ ಅಲ್ಲಿ ಅವಕಾಶವಿರಲಿಲ್ಲ. ಅವರಿಬ್ಬರೂ 'ಸ್ನೇಹಿತರು'. ಆ ಧ್ಯೇಯ ವನ್ನಿಟ್ಟುಕೊಂಡು ದುಡಿಯುವವರೆಲ್ಲ ಬಾಂಧವರು!

"ಊರು ಮನೆ ಎಲ್ಲವನ್ನೂ ತೊರೆದು ನೀವು ಹೀಗೆ ಬಂದುಬಿಟ್ಟುದನ್ನು ಕಂಡು ನಿಜಕ್ಕೂ ನನಗೆ ಆಶ್ಚರ್ಯವಾಗುತ್ತದೆ. ಬಲವಾದ ವಿರೋಧವಾಯಿತು. ನನ್ನನ್ನು ಕಾಲೇಜು ಬಿಡಿಸಿ ಯಾರಿಗಾದರೂ ಕೊಟ್ಟು ಮದುವೆ ಮಾಡುವ ಸಿದ್ಧತೆಗೂ ಆರಂಭ ವಾಗಿತ್ತು. ಆ ಸಂಚು ತಿಳಿಯುತ್ತಲೂ ನಾನಿತ್ತ ಬಂದುಬಿಟ್ಟೆ"

"ಮನೆಯವರನ್ನೆಲ್ಲ ಬಿಟ್ಟು ಬರಲು ವ್ಯಸನವಾಗಿರಬೇಕಲ್ಲ!"

"ಆಗದಿರುತ್ತೆಯೆ? ನನ್ನ ತಾಯಿ ಎಂದರೆ ತುಂಬ ಪ್ರೀತಿ ನನಗೆ. ಆಕೆಗೂ ಅಷ್ಟೆ ನಾನೆಂದರೆ ಪ್ರಾಣ. ಅಂಥ ತಾಯಿಯನ್ನು ಬಿಟ್ಟು ಬರಬೇಕಾದರೆ ದುಃಖವಾಗ

ದಿರುತ್ತದೆಯೆ? ಆದರೆ ಕರ್ತವ್ಯದ ಕರೆಯೆದುರಿಗೆ ವೈಯಕ್ತಿಕ ದುಃಖ ತೃಣ ಸಮಾನ. ನನ್ನ ಜೀವನದ ದಾರಿ ಇದು, ಅದರಲ್ಲೇ ನಾನು ಮುನ್ನಡೆಯಬೇಕು ಎಂದು ನಿರ್ಧರಿಸಿದ ಮೇಲೆ ಹೊಯ್ದಾಡುವಂತಿಲ್ಲ."

ಸರೋಜ ಮಾತು ಮುಗಿಸುವಷ್ಟರಲ್ಲಿಯೆ ಬಾಗಿಲನ್ನು ನೂಕಿ ಯಾರೋ ಒಳಗೆ ಬಂದುದರಿಂದ ಚಂದ್ರಣ್ಣ ಅತ್ತ ಹೊರಳಿದ. ಬಂದವರಾರೆಂಬುದು ಕಂಡು ಬಂದಾಗ ಆತನಿಗೆ ಆಶ್ಚರ್ಯವಾಗದಿರಲಿಲ್ಲ. ರತ್ನಮ್ಮ! ಆತ ಆಕೆಯನ್ನು ಕಂಡುದಕ್ಕೆ ಬಹಳ ದಿನ ಕಳೆದುಹೋಗಿದ್ದುವು. ರತ್ನಮ್ಮ ಕೊಂಚ ಕೃಶಳಾದ ಹಾಗೆ ಕಾಣುತ್ತಿತ್ತು.

ಆಕೆಯನ್ನು ಕಂಡು ಚಂದ್ರಣ್ಣನಿಗೆ ಆಶ್ಚರ್ಯವಾದಂತೆಯೇ ಅಲ್ಲಿ ಆತನನ್ನು ಕಂಡು ರತ್ನಮ್ಮನಿಗೂ ಆಶ್ಚರ್ಯವಾದಂತೆ ತೋರಿತು. ಒಂದು ಕ್ಷಣ ಆತನನ್ನೇ ದಿಟ್ಟಿಸುತ್ತ ಆಕೆ ಹಾಗೆಯೆ ನಿಂತುಕೊಂಡಿದ್ದಳು.

"ಏನು ರತ್ನಮ್ಮ? ಹೇಗಿದೆ ಅಣ್ಣನಿಗೆ?"

"ಏನು ಹೇಳುವುದು ಚಂದ್ರಮ್ಮನವರೆ. ಇದ್ದದ್ದೂ ವಿಷಮಿಸಿದೆ."

"ಹೌದೇ? ಜ್ವರ ಬಿಟ್ಟಿದೆಯೊ ಇಲ್ಲವೊ?" ಎಂದಳು ಸರೋಜಾ.

"ಇಲ್ಲ. ಇವೊತ್ತು ವಿಪರೀತ ಜ್ವರವೇರಿದೆ."

"ಬೆಳಗ್ಗೆ ಕೊಟ್ಟ ಔಷಧಿ ತೆಗೆದುಕೊಂಡರೇ?"

"ತೆಗೆದುಕೊಂಡಿದ್ದಾನೆ. ಆದರೆ ಗುಣವೇನೂ ಇಲ್ಲ."

"ಇವೊತ್ತು ಹೋದ ಕೆಲಸವೇನಾಯಿತು?"

"ನಾವು ಲೆಕ್ಕ ಹಾಕಿದಂತೆಯೇ ಆಯಿತು," ಎಂದು ನುಡಿದು ರತ್ನಾ ಅಂದು ಸೆಟ್ಟರ ಮನೆಯಲ್ಲಿ ನಡೆದುದೆಲ್ಲವನ್ನೂ ಸ್ವಲ್ಪದರಲ್ಲಿ ವಿವರಿಸಿದಳು.

ಅದನ್ನು ಕೇಳಿದಾಗ ಸರೋಜಳಿಗೆ ಆಶ್ಚರ್ಯವೇನೂ ಆಗಲಿಲ್ಲ. "ನಿಮಗೆ ಗೊತ್ತೇ ಇದ್ದಿತಲ್ಲವೆ! ಸೆಟ್ಟರ ಗುರುಗಳೆಂದರೆ ಸೆಟ್ಟರ ಹಾಗೇ ಇರುವುದು ಸ್ವಾಭಾವಿಕ. ಅವರಿಂದ ಸಿಕ್ಕುವ ಮೃಷ್ಟಾನ್ನ ದೊರೆಯುವ ಕಾಣಿಕೆಗಳ ಕಡೆಗೇ ಅವರ ಕಣ್ಣು. ನಾವು ಬಡವರು. ನಮ್ಮಿಂದ ಹೋಳಿಗೆ ಖೀರುಗಳೂ ಅವರಿಗೆ ದೊರೆಯುವಂತಿಲ್ಲ. ಸಾವಿರಾರು ರೂಪಾಯಿಗಳ ಕಾಣಿಕೆಯೂ ಸಿಕ್ಕುವಂತಿಲ್ಲ. ಇನ್ನು ನಾವು ಅವರ ಕಣ್ಣಿಗೆ ಕಾಣಿಸುವುದಾದರೂ ಹೇಗೆ? ನಮ್ಮ ಬಗ್ಗೆ ಅವರ ಸಹಾನುಭೂತಿ ಹುಟ್ಟುವುದಾದರೂ

ಹೇಗೆ?" ಎಂದು ನುಡಿದು ಆಕೆ ಮೇಲಕ್ಕೆದ್ದು – "ಅಜ್ಜಿ ಬರುವುದಕ್ಕೆ ತಡವಾಗುವುದೊ ಏನೊ. ನೀವು ಅದುವರೆಗೆ ಇಲ್ಲಿಯೇ ಇರುತ್ತೀರಾ? ನಾವಿಬ್ಬರೂ ಸಿಟಿಗೆ ಹೋಗಬೇಕಾಗಿದೆ," ಎಂದಳು.

"ನಾಳೆ ಬೆಳಗ್ಗೆ ಬಂದು ನೋಡಿದರಾಯಿತು. ನಾನೊಬ್ಬನೇ ಇಲ್ಲಿದ್ದು ಏನು ಮಾಡಲಿ? ನಾನೂ ಬರುತ್ತೇನೆ ಬನ್ನಿ" ಎಂದು ಚಂದ್ರಣ್ಣನೂ ಮೇಲಕ್ಕೆದ್ದ.

ಬಾಗಿಲನ್ನು ಮುಂದೆ ಮಾಡಿಕೊಂಡು ಮೂವರೂ ಹೊರಗೆ ಹೊರಟರು. "ನೀವೂ ಬರುತ್ತೀರಾ ರತ್ನಮ್ಮ?" ಎಂದ ಚಂದ್ರಣ್ಣ.

"ಹೌದು. ನಾನೂ ಬರುತ್ತೇನೆ."

"ಸೋಮಣ್ಣನನ್ನು ನೋಡಬೇಕೆಂದಿದ್ದೆ."

"ಮನೆಯಲ್ಲಿ ಅವ್ವ ಇದ್ದಾಳೆ. ಹೋಗಿ ಬನ್ನಿ."

"ಆಕೆಗೆ ಹೇಗಿದೆ?"

"ನೆಟ್ಟಗಾಗಿದೆ. ಮತ್ತೆ ತನ್ನ ಕೆಲಸಕ್ಕಾರಂಭಿಸಿದ್ದಾರೆ."

"ಕೆಲಸ."

"ನಿಮಗೆ ಗೊತ್ತಿರಬೇಕಲ್ಲ. ರಾಟೆಯಿಂದ ನೂಲುವುದು."

"ಓ! ಸರಿ. ಸೋಮಣ್ಣ ಈಗ ಮಲಗಿರಬಹುದೊ ಏನೊ. ಊಟ ಮಾಡಿಸಿ ಬಂದಿರಾ?"

"ಎಂಥ ಊಟ ಚಂದ್ರಣ್ಣನವರೆ! ಸ್ವಲ್ಪ ಗಂಜಿ, ಸ್ವಲ್ಪ ಹಾಲು ಕುಡಿದು ಮಲಗಿದ್ದಾನೆ. ಆತನಿಗೆ ನಿದ್ದೆ ಹತ್ತಿದೊಡನೆ ನಾನಿತ್ತ ಬಂದೆ."

"ಹಾಗಾದರೆ ನಾನೀಗ ಹೋಗಿ ಆತನನ್ನೆಬ್ಬಿಸುವುದೊಳ್ಳೆಯದಲ್ಲ. ಬೆಳಗ್ಗೆ ಶಂಕರ ತಾಯಿಯನ್ನು ಕಾಣಲು ಬಂದಾಗ ಹಾಗೇ ಸೋಮಣ್ಣನನ್ನು ನೋಡುತ್ತೇನೆ," ಎಂದು ಹೇಳಿ ಚಂದ್ರಣ್ಣ ಅವರೊಂದಿಗೆ ಹೆಜ್ಜೆ ಹಾಕತೊಡಗಿದ.

ಕೂಲೀ ವಸ್ತಿಯನ್ನು ಹಿಂದೆ ಹಾಕಿ ಅವರು ದೊಡ್ಡ ಚರಂಡಿಯ ಪಕ್ಕದಲ್ಲಿ ನಡೆದು ಬರುತ್ತಿದ್ದ ಹಾಗೆ ಚಂದ್ರಣ್ಣನೆಂದ : "ಇಷ್ಟು ರಾತ್ರಿಯಲ್ಲಿ ಸಿಟಿಗೇತಕ್ಕೆ ರತ್ನಮ್ಮ? ಔಷಧ ತರುವುದಕ್ಕೋ?"

ರತ್ನಮ್ಮ ಆ ಪ್ರಶ್ನೆಗೆ ಉತ್ತರವೀಯುವುದಕ್ಕೆ ಮೊದಲೇ ಸರೋಜಾ ನಗುತ್ತ ಹೇಳಿದಳು : "ಔಷಧ ತರೋದಕ್ಕಲ್ಲ, ಕೊಡೋದಕ್ಕೆ!"

"ಯಾರಿಗೆ?"

"ಜನಗಳಿಗೆ."

ಆ ಮಾತು ಚಂದ್ರಣ್ಣನಿಗೆ ಅರ್ಥವಾಗಲಿಲ್ಲ. "ಏನು ಸರೋಜಮ್ಮ, ಒಗಟದ ಹಾಗೆ ಮಾತನಾಡುತ್ತೀರಲ್ಲಾ?"

"ಎಲ್ಲವನ್ನೂ ಬಿಚ್ಚಿ ಮಾತನಾಡಿದರೆ ಕೆಲಸ ಕೆಟ್ಟುಹೋಗುವ ಭೀತಿಯಿರುತ್ತದೆ. ಅಂತೆಯೆ ಇಂಥ ಮಾತು..." ಎಂದು ನುಡಿದು ಒಂದೆರಡು ಕ್ಷಣ ಮೌನವಾಗಿ ದಾರಿ ತುಳಿಯುತ್ತಿದ್ದ ಸರೋಜಾ ಹೇಳಿದಳು : "ನಮ್ಮ ಮೇಲಂತೂ ಸಿ.ಐ.ಡಿ.ಗಳು ಕಣ್ಣಿಟ್ಟು ಕೊಂಡೇ ಇರಬಹುದು. ನಮ್ಮ ಜತೆ ತಿರುಗಿದರು ನಿಮಗೂ ಆ ಕಾಟ ಬಂದೀತು."

"ಓ! ಬಂದರೆ ಬರಲಿ ಬಿಡಿ. ಅಂಥದಕ್ಕೆಲ್ಲ ಸೊಪ್ಪು ಹಾಕುವಾತ ನಾನಲ್ಲ."

"ಅದೇನ್ರೀ, ದೈವವಾದಿಗಳ ಹಾಗೆ ಮಾತನಾಡುವಿರಲ್ಲ?"

"ದೈವ ಗಿಯ್ವದಲ್ಲಿ ನನಗೆ ವಿಶ್ವಾಸವಿಲ್ಲ. ಆದರೆ ಮನುಷ್ಯನ ಜೀವನದಲ್ಲಿ ಹಲವು ಅಂತಸ್ತುಗಳಿವೆ. ಒಂದೊಂದನ್ನೇ ಕ್ರಮಿಸುತ್ತ ಆತ ಮುನ್ನಡೆಯುತ್ತಾನೆ. ಅದು ನಿಸರ್ಗದ ನಿಯಮ. ಆಗ ನಿಮ್ಮ ದೃಷ್ಟಾಂತವನ್ನೇ ತೆಗೆದುಕೊಳ್ಳೋಣ. ನಿಮ್ಮ ವಿಚಾರ ಗಳ ಪ್ರವಾಹದಲ್ಲಿ ಸಿಲುಕಿ ನೀವು ಈ ಧರ್ಮಪುರಕ್ಕೆ ಬಂದಿರಲ್ಲವೆ?"

"ಅದು ಪ್ರವಾಹ ಎನ್ನುವುದು ಸರಿಯಲ್ಲ. ಪ್ರವಾಹದಗುಂಟ ತೇಲಿ ಹೋಗು ವವರು ಪತಿತರು. ಸ್ವಯಂ ವ್ಯಕ್ತಿತ್ವವಾಗಲಿ ಶಕ್ತಿಯಾಗಲಿ ಅವರಿಗಿರುವುದಿಲ್ಲ. ಅಂತೆಯೆ ಬಲವಾದ ಶಕ್ತಿಯೊಂದು ಆಕರ್ಷಿಸುತ್ತ ತೇಲಿ ಹೋಗುತ್ತಾರೆ. ನನ್ನ ವಿಚಾರ ಹಾಗಲ್ಲ. ಈ ದಾರಿಯಲ್ಲಿ ಹೋದರೆ ಮಾತ್ರವೆ ನನ್ನ ಗುರಿಯನ್ನು ಮುಟ್ಟಲು ಸಾಧ್ಯ ಎಂಬ ಖಚಿತವಾದ ನಿರ್ಧಾರಕ್ಕೆ ಬಂದಾಗಲೇ ನಾನಿತ್ತ ಹೊರಳಿದ್ದು."

"ಗುರಿ?"

"ವೈಯಕ್ತಿಕವಾಗಿ ನನಗೆ ಯಾವ ಆಸೆ ಆಕಾಂಕ್ಷೆಗಳೂ ಇಲ್ಲ. ನಮ್ಮ ಪಕ್ಷದ ಉದ್ದೇಶ ಸಾಧನೆಗಾಗಿ ಶಕ್ತಿ ಮೀರಿ ದುಡಿಯುವುದು, ಅದಕ್ಕಾಗಿ ಜೀವವನ್ನು ಮೀಸಲಾಗಿಡುವುದು–ಇಷ್ಟು ಮಾತ್ರ ನನ್ನ ದೃಢ ನಿರ್ಧಾರ."

"ನೀವೂ ಪಕ್ಷದ ಸದಸ್ಯರಾಗಿದ್ದೀರಾ?"

"ಆಗುವುದೇ ಬೇಡವೇ ಎಂದು ಎಷ್ಟೋ ದಿನ ಹೊಯ್ದಾಡಿದ್ದು ಉಂಟು. ಶಂಕರ್ ಮಂಗಳೂರು ತ್ಯಜಿಸಿದ ಮೇಲೆ ವರ್ಷವೊಂದು ಈ ಹೊಯ್ದಾಟದಲ್ಲೇ ಕಳೆಯಿತು. ಬೆಂಗಳೂರಿನಿಂದ ಅವರ ಕಾಗದಗಳು ಬರುತ್ತಿದ್ದವು. ವಾರದಲ್ಲಿ ಮೂರು ನಾಲ್ಕು ಕಾಗದ. ಆ ಕಾಗದಗಳಲ್ಲೆಲ್ಲ ಪ್ರಣಯದ ಮಾತು ತುಂಬಿರುತ್ತಿದ್ದುವೆಂದು ತಿಳಿಯಬೇಡಿ ಮತ್ತೆ. ಶಂಕರರ ಮಾನವ ಪ್ರೇಮವನ್ನು ಚಿತ್ರಿಸುವ ಮಾತು ಅವು. ಆ ಮಾನವ ಪ್ರೇಮದ ಬಾಂಧವ್ಯಕ್ಕೆ ನನ್ನನ್ನು ಶಾಶ್ವತವಾಗಿ ಕಟ್ಟಿಹಾಕುವ ಮಾತು. ಶಂಕರ್ ತಮ್ಮನ್ನು ತಾವು ಪೂರ್ಣರಾಗಿ ಮರೆತುಬಿಟ್ಟು ತಮ್ಮ ಗುರಿಯಲ್ಲಿ ತಲ್ಲೀನರಾಗಿದ್ದರು. ಆ ವಿಷಯ ಬರೆಯತೊಡಗಿದರೆಂದರೆ ಮಿಕ್ಕುದೆಲ್ಲವನ್ನೂ ಮರೆತುಬಿಡುತ್ತಿದ್ದರು. ಅವರ ಆ ತನ್ಮಯತೆ, ಆ ನಿಷ್ಠೆ ಆ ಧ್ಯೇಯವಾದಿತ್ವ ನನ್ನನ್ನು ಗೆದ್ದುಕೊಂಡಿತು. ನನ್ನ ಮನಸ್ಸಿನ ಹೊಯ್ದಾಟವೆಲ್ಲವೂ ನಿಂತುಹೋಗಿ ಅವರ ಗುರಿ ನನ್ನ ಗುರಿಯೂ ಹೌದು, ಅದಕ್ಕಾಗಿ ನಾನು ನನ್ನ ಜೀವನವನ್ನು ಮೀಸಲಾಗಿಡಬೇಕು ಎಂಬ ನಿರ್ಧಾರಕ್ಕೆ ಬಂದೆ ನಾನು."

ಕೆಲಹೊತ್ತು ಮೂವರೂ ಮೌನವಾಗಿ ದಾರಿ ತುಳಿಯುತ್ತಿದ್ದರು. ಆ ಕಮ್ಯೂನಿಸ್ಟ್ ಯುವತಿಯ ದೃಢತಚಾರಿತ್ರ್ಯವನ್ನು, ಸಮತಾವಾದದ ಧ್ಯೇಯ ಸಾಧನೆಗಾಗಿ ತನ್ನ ಕರುಳ ಬಳಗವನ್ನೆಲ್ಲ ತೊರೆದು ಬಂದ ಆಕೆಯ ಧೀರತನವನ್ನು ಕಂಡು ಚಂದ್ರಣ್ಣ ಬೆರಗಾಗಿದ್ದ. ಆಕೆಯ ಬಗೆಗೆ ಆತನಲ್ಲಿ ಅಪಾರವಾದ ಆದರ ತುಂಬಿದ್ದಿತು. ಶಂಕರ ಆಕೆಯನ್ನು ಗಾಢವಾಗಿ ಪ್ರೀತಿಸುವ ವಿಚಾರ ಚಂದ್ರಣ್ಣನಿಗೆ ಗೊತ್ತಿದ್ದಿತು. ತಾವಿಬ್ಬರೂ ಬೆಂಗಳೂರಿನಲ್ಲಿದ್ದಾಗ ಒಂದು ಸಲ ಲಾಲ್‌ಬಾಗಿನ ಕಡೆ ತಿರುಗಾಡಲು ಹೋಗಿದ್ದ ಸಂದರ್ಭದಲ್ಲಿ ತಮ್ಮಿಬ್ಬರಲ್ಲಿ ನಡೆದಿದ್ದ ಮಾತುಗಳು ಆತನ ನೆನಪಿಗೆ ಬಂದವು.

"ಸರೋಜಮ್ಮನವರಿಗೂ ನಿಮ್ಮಲ್ಲಿ ಪ್ರೀತಿಯಿದೆಯೆ?" ಎಂದು ತಾನು ಕೇಳಿದ್ದ.

ಅದಕ್ಕೆ ಶಂಕರ – "ಇದೆಯೆನ್ನುವಲ್ಲಿ ಯಾವ ಸಂದೇಹವೂ ಇಲ್ಲ. ಆಕೆಯ ಹೃದಯ ನನಗೆಂದೋ ಗೊತ್ತಾಗಿದೆ," ಎಂದು ನುಡಿದಿದ್ದ.

"ಇಬ್ಬರಿಗೂ ಪರಸ್ಪರ ಪ್ರೀತಿಯಿರುವಾಗ ಮದುವೆಯಾಗಲು ಆತಂಕವೇನಿದೆ?"

"ಆತಂಕವೇ? ಬೇಕಾದಷ್ಟು ಇದೆ. ಸರೋಜಳ ಮನೆತನ ತುಂಬ ಶ್ರೀಮಂತರದು. ತಂದೆತಾಯಿಗಳಿಗೆ ಆಕೆಯೊಬ್ಬಳೇ ಮಗಳು. ಬೇರೆ ಯಾರೂ ಇಲ್ಲ ಅವರಿಗೆ."

"ಆದರೇನಾಯಿತು? ಮದುವೆಗೆ ಅಡ್ಡಿಯೇತರದು?"

"ಅವರ ಜಾತಿ ಬೇರೆ. ನಾ ಹುಟ್ಟಿದ ಜಾತಿ ಬೇರೆ. ಕಮ್ಯೂನಿಸ್ಟರಾದ ನಮಗೆ ಜಾತಿಗೀತಿ ಯಾವುದೂ ಲಕ್ಷ್ಯವಿಲ್ಲವಾದರೂ ಸಾಂಪ್ರದಾಯವಾದಿಗಳಾದ ಆ ಜನಕ್ಕೆ ಜಾತಿಯೇ ಮುಖ್ಯವಲ್ಲವೇ? ಜಾತಿಯ ಮಾತು ಬಿಟ್ಟರೂ – ನಾನು ಅವರ ಜಾತಿ ಯವನೇ ಆಗಿದ್ದರೂ ನಮ್ಮ ಮದುವೆಗೆ ಅವರ ಒಪ್ಪಿಗೆ ದೊರೆಯುವಂತಿಲ್ಲ. ನಾನೋ ನಿರ್ಗತಿಕ. ಭೂಮಿಯಿಲ್ಲ, ಆಸ್ತಿಯಿಲ್ಲ, ಮನೆಯಿಲ್ಲ, ಮಾರಿಲ್ಲ. ಅಥವಾ ಸಂಸಾರ ವೊಂದನ್ನು ಸುಗಮವಾಗಿ ನಡಸಿಕೊಂಡು ಹೋಗುವಂಥ ನೌಕರಿಯೂ ಇಲ್ಲ. ಅಂಥ ಶ್ರೀಮಂತರು ತಮ್ಮ ಏಕಮಾತ್ರ ಕನ್ಯೆಯನ್ನು ನನ್ನಂಥವನಿಗೆ ಕೊಡಲು ಸಿದ್ಧರಾದರೇ?"

"ಹಾಗಾದರೆ ಆಕೆಯ ಆಸೆಯನ್ನು ಬಿಟ್ಟಂತೆಯೇ ಅನ್ನಿ."

"ಏಕೆ ಬಿಡಬೇಕು? ಆಕೆಯ ಬಗ್ಗೆ ನನಗೆ ಪೂರಾ ಭರವಸೆಯಿದೆ. ಎಲ್ಲ ಹುಡುಗಿಯರಂತಲ್ಲ ಸರೋಜಾ. ಸ್ವತಂತ್ರವಾಗಿ ವಿಚಾರಮಾಡಬಲ್ಲ ಶಕ್ತಿ ಆಕೆಗಿದೆ. ಮಾರ್ಕ್ಸ್ ವಾದವನ್ನು ಅಭ್ಯಸಿಸಿದಂದಿನಿಂದ ತನ್ನ ಗೊತ್ತುಗುರಿಯೇನು ಎಂಬುದರ ನಿರ್ದಿಷ್ಟ ಕಲ್ಪನೆಯೂ ಆಕೆಗೆ ಬಂದಿದೆ. ಇಂದಿಲ್ಲ ನಾಳೆ ಆಕೆ ನನ್ನ ಭುಜಕ್ಕೆ ಭುಜ ಹಚ್ಚಿ ನಿಂತು ಕೆಲಸಕ್ಕಿಳಿಯುವಳೆಂಬ ನಂಬಿಕೆ ನನಗಿದೆ."

ಮದುವೆಯ ಮಾತನ್ನೇ ಎತ್ತಿರಲಿಲ್ಲ ಶಂಕರ. ಆ ಯೋಚನೆಯೇ ಆತನಿಗಿದ್ದಂತೆ ತೋರಿರಲಿಲ್ಲ. ತನ್ನೊಲವಿನ ಹೆಣ್ಣನ್ನು ಕುರಿತು ಮಾತನಾಡುವಾಗಲೂ ತನ್ನ ಧ್ಯೇಯದ ವಿಚಾರವೇ ಆತನಿಗೆ. ಎಂಥ ಹೃದಯ ಈ ಕಮ್ಯೂನಿಸ್ಟರದು! ಎಂದು ಚಂದ್ರಣ್ಣ ಬೆರಗಾಗಿದ್ದ. ಇಂದು ಸರೋಜಳನ್ನು ಕಂಡಾಗ, ಆಕೆಯ ಮಾತುಗಳನ್ನಾಲಿಸಿದಾಗ ಅಂದಿನಂತೆಯೇ ಆತನಿಗೆ ವಿಸ್ಮಯವಾಗದಿರಲಿಲ್ಲ. ಆಕೆಯೂ ಮದುವೆಯ ಮಾತನ್ನೆತ್ತಿರಲಿಲ್ಲ. ಕೇವಲ ತಮ್ಮ ಧ್ಯೇಯದ ವಿಚಾರವಾಗಿಯೆ ಹೇಳುತ್ತಿದ್ದಳು!

ಗಾಂಧೀಚೌಕದ ಬಳಿ ಬಂದೊಡನೆ ಸರೋಜ ತಡೆದು ನಿಂತು – "ನಿಮ್ಮ ಆಫೀಸು ಬಲಗಡೆಗಿದೆಯಲ್ಲವೆ ಇತ್ತ ಹೋಗುತ್ತೀರಾ?" ಎಂದಳು.

"ನೀವು?"

"ನಾವು ಊರಲ್ಲಿ ಹೋಗಬೇಕು. ಕೊಂಚ ಕೆಲಸವಿದೆ."

"ನೀವು ರತ್ನಮ್ಮ?"

"ನಾವಿಬ್ಬರೂ ಕೂಡಿಯೇ ಹೋಗುತ್ತೇವೆ."

"ನಾನೂ ಜೊತೆಗೆ ಬಂದರೆ ನಿಮಗೇನು ತೊಂದರೆಯಿಲ್ಲವಷ್ಟೆ?" ಎಂದು ಆತ ಸಂಕೋಚದಿಂದಲೇ ಕೇಳಿದ.

ಸರೋಜ ಒಂದು ಕ್ಷಣ ಯೋಚಿಸುತ್ತಿದ್ದ ಅನಂತರ - "ಬನ್ನಿ. ನಿಮಗೆ ಬೇರೇನೂ ಕೆಲಸವಿಲ್ಲವಾದರೆ ಬರಬಹುದು. ನೀವೂ ನಮ್ಮವರೇ ಎನ್ನುವಲ್ಲಿ ನನಗೇನೂ ಸಂದೇಹವಿಲ್ಲ. ನಮಗೂ ಜನ ಬೇಕು. ನಿಮ್ಮಂಥವರು ತಾವಾಗಿಯೆ ಬರಲೊಪ್ಪಿದರೆ ಬೇಡ ಎನ್ನುತ್ತೇವೆಯೆ?" ಎಂದು ನುಡಿದು ಮತ್ತೆ ನಡೆಯತೊಡಗಿದಳು.

ಮುಖ್ಯ ಬೀದಿಯನ್ನು ಬಿಟ್ಟು ಅವರು ಸಂದಿಯೊಂದರಲ್ಲಿ ಪ್ರವೇಶಿಸಿದರು. ಆ ಸಂದಿಯಿಂದ ಇನ್ನೊಂದು ಸಂದಿಗೆ ತಿರುಗಿ ಕತ್ತಲೆಯಲ್ಲಿ ಅಡಗಿದ್ದ ಕೊಳಕು ಸಂದಿಯೊಂದರಲ್ಲಿ ನುಗ್ಗಿದರು. ಕೂಲಿಕಾರ ವಸತಿಯ ಹಾಗೆ ಅಲ್ಲಿಯೂ ವಿದ್ಯುದ್ದೀಪ ಗಳ ವ್ಯವಸ್ಥೆಯಿರಲಿಲ್ಲ. ಎಡಕ್ಕೆ ಬಲಕ್ಕೆ ಸಾಲು ಸಾಲಾಗಿ ನಿಂತ ಪುಟ್ಟ ಮನೆಯೊಳಗಿ ನಿಂದ ತೂರಿ ಬರುತ್ತಿದ್ದ ಬೆಳಕು ದಾರಿಯನ್ನು ಬೆಳಗಿಸುತ್ತಿದ್ದುದೆಷ್ಟೋ ಅಷ್ಟೆ. ಪ್ರತಿಯೊಂದು ಮನೆಯ ಬಾಗಿಲಿನಲ್ಲೂ ಒಬ್ಬ ಹೆಂಗಸು ಎಲೆ ಅಡಿಕೆ ಮೆಲ್ಲುತ್ತ ಬೀದಿಗೆ ಉಗುಳುತ್ತ ಕುಳಿತಿದ್ದುದು ಕಾಣಿಸಿತು. ಮಲಮೂತ್ರ ಉಗುಳುಗಳ ವಾಸನೆಯ ಜತೆಯಲ್ಲೇ ಆ ಸ್ತ್ರೀಯರು ಮುಡಿದ ಹೂವುಗಳ ಸುಗಂಧವೂ ಗಾಳಿಯಲ್ಲಿ ತೇಲಿ ಬರುತ್ತಿತ್ತು. ಧರ್ಮಪುರಕ್ಕೆ ಬಂದು ಬಹುದಿನಗಳಾಗಿದ್ದರೂ ಚಂದ್ರಣ್ಣ ಈ ಬೀದಿಯನ್ನು ಕಂಡಿರಲಿಲ್ಲ.

"ಇದಾವ ಬೀದಿ ರತ್ನಮ್ಮ?" ಎಂದು ಆತ ಪಿಸುದನಿಯಲ್ಲಿ ಕೇಳಿದಾಗ ಹತ್ತಿರದ ಮನೆಯೆದುರಿಗೆ ಕುಳಿತಿದ್ದ ಸ್ತ್ರೀಯೊಬ್ಬಳು ಮೆಲ್ಲಗೆ ನಕ್ಕಂತಾಯಿತು. "ಇವ ಯಾರೋ ಹೊಸಾ ಮಾವ ಬಂದಾಂಗ ಕಾಣುತದೆ ನೋಡೋ ಹುಸೇನ್‌ಬಿ!" ಎಂದು ಆಕೆ ನುಡಿದುದೂ ಕೇಳಬಂದಿತು.

ಬೀದಿಯ ನಟ್ಟನಡುವೆ ಇದ್ದ ಮನೆಯೊಂದರ ಬಾಗಿಲು ಮಾತ್ರ ಮುಚ್ಚಿದ್ದಿತು. ಸರೋಜ ಆ ಬಾಗಿಲಿನೆದುರಿಗೆ ನಿಂತು ಬೀದಿಯಲ್ಲಿ ಬೇರೆ ಯಾರಾದರೂ ಇರುವರೇನೋ ಎಂದು ಎರಡು ಮೂರು ಬಾರಿ ಅತ್ತ ಇತ್ತ ದೃಷ್ಟಿಸಿ ನೋಡಿ ಯಾರೂ ಇಲ್ಲವೆಂದು ಮನವರಿಕೆಯಾದೊಡನೆ ಬಾಗಿಲ ಮೇಲೆ ಮೆಲ್ಲನೆ ತಟ್ಟಿದಳು. ಒಳಗಿನಿಂದ - "ಯಾರು?" ಎಂಬ ಧ್ವನಿ ಕೇಳಬಂದಿತು. "ನಾವು" ಎಂದು ಆಕೆ ಉತ್ತರೀಯು ವಷ್ಟರಲ್ಲಿಯೆ ನಿಧಾನವಾಗಿ ಬಾಗಿಲು ತೆರೆಯಿತು. ಅದರೊಂದಿಗೆ ಕೆದರಿದ ಕೂದಲಿನ, ವಿದ್ರೂಪವಾದ ಮುಖವೊಂದು ಹೊರಕ್ಕೆ ಇಣುಕಿನೋಡಿ - "ಯಾರು? ಸರೋಜಮ್ಮ

ನವರೋ? ರತ್ನಮ್ಮನವರೂ? ಜೊತೆಗಿರುವವರಾರು?" ಎಂದು ಕೇಳಿತು.

"ಕಾಮ್ರೇಡ್. ಬನ್ನಿ ಚಂದ್ರಣ್ಣ" ಎಂದು ಸರೋಜಾ ಮನೆಯೊಳಗಡೆ ಅಡಿಯಿರಿಸಿದಳು.

ಬಾಗಿಲು ದಾಟಿ ಒಳಸೇರಿದೊಡನೆ ದುರ್ಗಂಧದಿಂದೊಡಗೂಡಿದ ಗಾಳಿ ಮೂಗಿಗೆ ಬಡಿಯತೊಡಗಿತು. ಗೋಡೆಯ ಮಾಡದಲ್ಲಿದ್ದ ಹಣತೆಯ ಅತಿ ಮಂದ ವಾದ ಬೆಳಕಿನಲ್ಲಿ ಒಂದೆರಡು ನಿಮಿಷ ಯಾವುದೂ ಗೋಚರವಾಗಲಿಲ್ಲ ಚಂದ್ರಣ್ಣನಿಗೆ.

"ಕಾಣಿಸುವುದಿಲ್ಲವೆ? ಹೀಗೆ ಬನ್ನಿ" ಎಂದು ಸರೋಜಾ ಆತನ ಕೈಹಿಡಿದು ಸರಸರನೆ ನಡೆಯುತ್ತ ಒಳಗಡೆಗಿದ್ದ ಇನ್ನೊಂದು ಬಾಗಿಲನ್ನು ನೂಕಿ ಅದರೊಳಗಿನ ಕೊಠಡಿಗೆ ಕರೆದುತಂದಳು. ಸೀಮೆಯೆಣ್ಣೆಯ ದೊಡ್ಡ ಲಾಂದ್ರವೊಂದು ಅಲ್ಲಿ ಉರಿಯುತ್ತಿತ್ತು. ಅದರ ಸುತ್ತುಮುತ್ತು ನಾಲ್ಕು ಜನರು ಬಾಗಿ ಕುಳಿತುಕೊಂಡು ಯಾವುದೋ ಕೆಲಸದಲ್ಲಿ ತೊಡಗಿದ್ದವರು ಬಂದವರನ್ನು ನೋಡಲು ಸಹಜವಾಗಿಯೇ ಇತ್ತ ದೃಷ್ಟಿ ಹೊರಳಿಸಿದರು. ಅಂದು ನಿಲ್ದಾಣದಲ್ಲಿ ತಾನು ಕಂಡಿದ್ದ ಕೂಲಿಕಾರ ಸಂಘದ ಕಾರ್ಯಕರ್ತರಲ್ಲಿ ಮುಖ್ಯರಾದವರೆಲ್ಲ ಅಲ್ಲಿದ್ದುದು ಚಂದ್ರಣ್ಣನಿಗೆ ಕಂಡುಬಂದಿತು. ಅವರೊಂದಿಗೆ ಕೂಲಿಕಾರ ಸ್ತ್ರೀಯಂತೆ ತೋರುತ್ತಿದ್ದ ಚೆಲುವೆಯಾದ ತರುಣಿಯೊಬ್ಬಳೂ ಇದ್ದಳು.

"ಈತ ನಾಗೋಜಿ, ಈತ ಯಲ್ಲಪ್ಪ ಈತ ಇಬ್ರಾಹೀಮ್, ಈಕೆ ನಾಗಮ್ಮ. ಕೂಲಿಕಾರ ಸಂಘದ ಕಾರ್ಯಕಾರಿ ಸಮಿತಿಯ ಸದಸ್ಯರು. ಇವರು ಕ್ರಾಂತಿಯ ಸಂಪಾದಕ ಚಂದ್ರಣ್ಣನವರು. ನಮ್ಮ ಬಗ್ಗೆ ಸಹಾನುಭೂತಿಯುಳ್ಳವರು," ಎಂದು ಪರಿಚಯ ಮಾಡಿಕೊಟ್ಟಳು ಸರೋಜಾ.

"ದುರುಗಪ್ಪನವರು ಕಾಣುವುದಿಲ್ಲವಲ್ಲ?" ಎನ್ನುತ್ತ ಚಂದ್ರಣ್ಣ ಕುಳಿತುಕೊಂಡ.

"ಅವರು ಬೇರೊಂದು ಕೆಲಸಕ್ಕೆ ಹೋಗಿದ್ದಾರೆ. ನೀವು ಇಲ್ಲಿಗೆ ಬಂದದ್ದು ನಮಗೆಲ್ಲ ಆನಂದದ ಸಂಗತಿ," ಎಂದಳು ನಾಗಮ್ಮ.

"ಪ್ರಾರಂಭಿಸೋಣವೆ ನಾಗೋಜಿ?" ಎಂದಲು ಸರೋಜಾ.

ನಾಗೋಜಿ ಕಾಗದದ ಹಾಳೆಗಳನ್ನೂ ಕಾರ್ಬನ್ನಿನ ತುಂಡುಗಳನ್ನೂ ಒಟ್ಟು

ಗೂಡಿಸುತ್ತ – "ಈಗಾಗಲೆ ತುಂಬ ಹೊತ್ತಾಯಿತು ಸರೋಜಮ್ಮ. ಸರಿ ರಾತ್ರಿಯಾಗುವು ದರೊಳಗಾಗಿ ಎಲ್ಲವನ್ನೂ ಬರೆದಾಗಬೇಕು. ಬೆಳಗಿನ ಜಾವದೊಳಗೆ ಊರಲ್ಲಿ ಎಲ್ಲಾ ಕಡೆಗೂ ಅಂಟಿಸಬೇಕು. ಬರೆದು ತಂದಿದ್ದೀರಾ?" ಎಂದು ಕೇಳಿದ.

"ಇಲ್ಲ, ಈಗ ಬರೆಯುತ್ತೇನೆ," ಎಂದು ಆಕೆ ಸೀಸಕಡ್ಡಿಯನ್ನೂ ಕಾಗದವನ್ನೂ ಹಿಡಿದುಕೊಂಡು ಚಂದ್ರಣ್ಣನ ಕಡೆಗೆ ತಿರುಗಿ – "ಇಂದು ಸಾಯಂಕಾಲ ಗಿರಣಿಯಲ್ಲಿ ಮ್ಯಾನೇಜ್‌ಮೆಂಟಿನವರೂ ಪೊಲೀಸರೂ ಕೂಲಿಕಾರರ ಮೇಲೆ ನಡೆಸಿದ ದಬ್ಬಾಳಿಕೆಯ ವಿವರಗಳನ್ನೆಲ್ಲ ಕೊಟ್ಟು ಅತ್ಯಾಚಾರವನ್ನು ಖಂಡಿಸಿ ಯಾವುದಕ್ಕೂ ಹೆದರದೆ ಕೂಲಿಕಾರ ರೆಲ್ಲ ಒಗ್ಗಟ್ಟಾಗಿರಬೇಕೆಂದೂ ಕರೆಕೊಡಬೇಕಾಗಿದೆ ಚಂದ್ರಣ್ಣನವರೆ. ಅದಕ್ಕಾಗಿ ಈ ಕರಪತ್ರಗಳು," ಎಂದು ನುಡಿದು ಬರೆಯಲು ಮೊದಲುಮಾಡಿದಳು.

ಮೊದಲನೆಯ ಪ್ರತಿಯನ್ನಾಕೆ ಸಿದ್ಧಗೊಳಿಸುವವರೆಗೆ ಗಂಡುಸರೆಲ್ಲ ಬೀಡಿ ಸೇದುತ್ತ ಕುಳಿತಿದ್ದರು. ಚಂದ್ರಣ್ಣನೂ ಒಂದು ಸಿಗರೇಟು ಹೊತ್ತಿಸಿ ಹೊಗೆಯನ್ನೆಳೆಯುತ್ತ ಕುಳಿತಿದ್ದ. ನಾಗಮ್ಮನೂ ರತ್ನಮ್ಮನೂ ಕಾಗದಗಳನ್ನು ಅಳತೆಗೆ ಸರಿಯಾಗಿ ಕತ್ತರಿಸುವುದ ರಲ್ಲಿ ತೊಡಗಿದ್ದರು. ತಮ್ಮ ಸಂಸಾರದ ಸಂಕಟ, ಅಣ್ಣನ ಕಾಹಿಲೆ, ಆರ್ಥಿಕ ತೊಂದರೆ ಗಳೆಲ್ಲವನ್ನೂ ಮರೆತು ಶಾಂತವಾಗಿ ಕೆಲಸ ಮಾಡುತ್ತಿದ್ದ ರತ್ನಮ್ಮನನ್ನು ನಿರುಕಿಸಿದ ಹಾಗೆಲ್ಲ ಚಂದ್ರಣ್ಣನಿಗೆ ಎದೆ ತುಂಬಿ ಬರುತ್ತಿತ್ತು. ತಮ್ಮ ಮನೆಯಲ್ಲಿ ರೊಟ್ಟಿ ಬಡಿಯುವ ಗಾಂಭೀರ್ಯದಿಂದಲೇ ಆಕೆ ಇಲ್ಲಿ ಕಾಗದಗಳನ್ನೂ ಕತ್ತರಿಸುತ್ತಿದ್ದಳು.

"ಎಷ್ಟು ದಿನವಾಯಿತು ರತ್ನಾ ನೀವು ಈ ಕೆಲಸಕ್ಕೆ ತೊಡಗಿ?" ಎಂದಾತ ಪ್ರಶ್ನಿಸಿದ.

ಕಾಗದ ಕತ್ತರಿಸುವ ಕಾಯಕವನ್ನು ನಿಲ್ಲಿಸದೆ ರತ್ನಾ ಉತ್ತರವಿತ್ತಳು : "ಮೊದಲಿ ನಿಂದಲೂ ಈ ಕೆಲಸಕ್ಕೆ ನಿಲ್ಲಬೇಕೆಂದು ಹಾತೊರೆಯುತ್ತಿದ್ದೆ, ಇಷ್ಟು ದಿನ ಸಾಧ್ಯವಾಗಿ ರಲಿಲ್ಲ. ಸರೋಜಮ್ಮ ಈ ಊರಿಗೆ ಬರುತ್ತಲೂ ನಮ್ಮ ಮನೆಗೆ ಬಂದು ನನ್ನ ಪರಿಚಯ ಮಾಡಿಕೊಂಡರು. ಅವರೇ ನನ್ನನ್ನು ಈ ಕೆಲಸಕ್ಕೆಳೆದು ತಂದದ್ದು."

"ಅಣ್ಣನಿಗೆ ಕಾಯಿಲೆ ಬಲವಾಗಿರುವಾಗ ನೀವು ಇಲ್ಲಿ ಬಂದರೆ ಆತನನ್ನು ಅಲ್ಲಿ ನೋಡಿಕೊಳ್ಳುವವರಾರು?"

"ಅಮ್ಮ ಇರುವಳಲ್ಲ, ಅಲ್ಲದೆ ಅಣ್ಣನೇ ನಾನು ಈ ಕೆಲಸಕ್ಕೆ ನಿಲ್ಲಬೇಕೆಂದು ಒತ್ತಾಯಪಡಿಸಿದ – ಕೈ ಕಳೆದುಕೊಂಡು ನಾನೇನೊ ಬಿದ್ದುಬಿಟ್ಟೆ, ನನ್ನಿಂದ ಏನೂ

ಆಗುವಂತಿಲ್ಲ, ನನ್ನ ಬದಲು ನೀನಾದರೂ ಕೊಂಚ ಮಾಡುತ್ತಿದ್ದರೆ ಸಮಾಧಾನ ವಾದೀತು - ಅಂತ ಹೇಳಿದ. ನನಗೂ ಮಾಡಬೇಕಂತ ವಿಚಾರವಿತ್ತು."

"ಈಗಲೇ ಬರೋದು ಬೇಕಿಲ್ಲ. ಮೊದಲು ನಿಮ್ಮಣ್ಣನಿಗೆ ನೆಟ್ಟಗಾಗಲಿ ಆಮೇಲೆ ಬರುವಿಯಂತೆ ಎಂದು ನಾನೂ ಎಷ್ಟೋ ಹೇಳಿದೆ. ಆದರೆ ಇಬ್ಬರೂ ನನ್ನ ಮಾತನ್ನು ಲೆಕ್ಕಿಸಲಿಲ್ಲ" ಎಂದು ಸರೋಜಾ ಹೇಳಿದಳು. ಅಷ್ಟು ಹೊತ್ತಿಗೆ ಮೊದಲನೆಯ ಪ್ರತಿ ಸಿದ್ಧವಾಗಿತ್ತು.

ಒಡನೆಯೆ ಅಲ್ಲಿ ಕುಳಿತಿದ್ದವರೆಲ್ಲ ಕಾಗದದ ಹಾಳೆಗಳನ್ನೂ ಕಾರ್ಬನ್ ತುಂಡು ಗಳನ್ನೂ ಜೋಡಿಸಿಕೊಂಡು ಪ್ರತಿಗಳನ್ನು ತೆಗೆಯತೊಡಗಿದರು. ರತ್ನಮ್ಮನೂ ಅತ್ಯುತ್ಸಾಹ ದಿಂದ ಆ ಕೆಲಸದಲ್ಲಿ ತೊಡಗಿದಳು.

ಕೊಠಡಿಯ ಮೂಲೆಯಲ್ಲೊಂದು 'ಸ್ಟೋ' ಇತ್ತು. ಅದಕ್ಕೆ ಉರಿಹೊತ್ತಿಸಿ ನಾಗಮ್ಮ ಅವರಿಗೆ ಚಹ ಮಾಡಲು ಕುಳಿತುಕೊಂಡಳು.

ಕೆಲಸ ಮಾಡುತ್ತಿದ್ದವರ ಏಕಾಗ್ರತೆಗೆ ಭಂಗವುಂಟಾಗಬಾರದೆಂದು ಚಂದ್ರಣ್ಣ ಅಲ್ಲಿಂದೆದ್ದು ನಾಗಮ್ಮನ ಹತ್ತಿರ ಬಂದು ಕುಳಿತುಕೊಂಡ. ಸುಮ್ಮನೆ ಕುಳಿತುಕೊಳ್ಳಲು ಸಾಧ್ಯವೆ? ಮಾತಿಗಾರಂಭವಾಯಿತು.

"ಇದು ನಿಮ್ಮ ಮನೆಯೇ ನಾಗಮ್ಮ?"

ಚಹದ ಪಾತ್ರೆಯನ್ನು 'ಸ್ಟೋ'ವಿನ ಮೇಲಿಡುತ್ತ ನಾಗಮ್ಮ ನಕ್ಕು ನುಡಿದಳು : "ನಮ್ಮ ಮನೆ! ಹಾಗೂ ಅನ್ನಬಹುದು. ನಮಗೇನು, ಎಲ್ಲಾ ನಮ್ಮ ಮನೆಗಳೇ!"

ಚಂದ್ರಣ್ಣನಿಗೂ ನಗೆ ಬರದಿರಲಿಲ್ಲ. ಕಮ್ಯೂನಿಸ್ಟರ ಸತತ ಸಹವಾಸದಿಂದಾಗಿ ಆ ಅಶಿಕ್ಷಿತ ಯುವತಿಯೂ ಅವರ ವಚನ ಸರಣಿಯನ್ನು ಮೈಗೂಡಿಸಿಕೊಂಡಂತಿದ್ದಿತು.

"ಅದು ಸರಿಯಮ್ಮ. ಆದರೆ ನೀವು ಯಾವಾಗಲೂ ಇಲ್ಲಿಯೇ ಇರುವುದಿಲ್ಲ, ಅಲ್ಲವೆ?"

"ಇಲ್ಲ, ಈ ವೇಳೆಯಲ್ಲಿ ಮಾತ್ರ ಇಲ್ಲಿ ಸೇರುತ್ತೇವೆ. ನಮ್ಮ ಮನೆ ದೂರ ಇದೆ-ಹರಿಜನಕೇರಿಯಲ್ಲಿ. ಇದು ಸಾವಿತ್ರಿಬಾಯಿಯ ಮನೆ."

"ಆಕೆಯೂ ಪಾರ್ಟಿ ಸದಸ್ಯೆಯೊ?"

"ಅಲ್ಲ, ಆದರೂ ನಮ್ಮವಳೇ. ನಮ್ಮೆಲ್ಲ ಕೆಲಸಗಳಿಗೂ ಸಹಾಯ ಮಾಡುತ್ತಾಳೆ.

ಹೂಂ! ಸಾವಿತ್ರಿ ಯಾರು ಅನ್ನೋದು ಮೊದಲು ಗೊತ್ತಾಗಬೇಕಲ್ಲವೆ ನಿಮಗೆ!"

"ಇಲ್ಲೇ ಪಕ್ಕದ ಮನೆಯಲ್ಲೇ ಇದ್ದಾಳೆ. ಈ ಓಣಿಯಲ್ಲಿ ಹಾಯ್ದು ಬರುವಾಗ ನೀವು ತಿಳಿದುಕೊಳ್ಳಲಿಲ್ಲವೇ, ಇದಾವ ಓಣಿ ಅನ್ನೋದನ್ನ?"

"ಇಲ್ಲ, ನಾನೆಂದೂ ಇತ್ತ ಬಂದಿಲ್ಲ. ಯಾವ ಓಣಿ ಇದು?"

"ಸೂಳೆಯರ ಓಣಿ! ಇಷ್ಟೂ ತಿಳಿಯದೇ ನಿಮಗೆ! ಬಾಗಿಲಲ್ಲಿ ಕುಳಿತ ಹೆಂಗಸರನ್ನು ನೋಡಿದರೆ ಗೊತ್ತಾಗುವುದಿಲ್ಲವೆ?" ಎಂದು ಹೇಳಿ ಆಕೆ ನಕ್ಕಳು. 'ಸ್ಟೋ' ವಿನ ಕೆಂಪು ಬೆಳಕಿನಲ್ಲಿ ಆಕೆಯ ಚೆಲುವಾದ ಮುಖ ಇನ್ನೂ ಚೆಲುವಾಗಿ ಕಾಣಿಸುತ್ತಿತ್ತು. ಆಕೆಯ ಕೊರಳಿನಲ್ಲಿದ್ದ ಚಿನ್ನದ ಸರವೊಂದು ಥಳಥಳನೆ ಮಿನುಗುತ್ತಿತ್ತು.

"ಸೂಳೆಯರ ಓಣಿ!" ಎಂದು ಆಶ್ಚರ್ಯದಿಂದ ಉದ್ಗಾರ ತೆಗೆದ ಚಂದ್ರಣ್ಣ.

"ಹೌದು. ಸೂಳೆಯರ ಓಣಿ. ನೀವಿತ್ತ ಬರುವಾಗ ಸರೋಜಮ್ಮ ನಿಮಗೆ ಹೇಳಲಿಲ್ಲವೆ?"

"ಇಲ್ಲ, ಬಹುಶಃ ಅವರಿಗೂ ಗೊತ್ತಿಲ್ಲವೊ ಏನೋ."

"ಗೊತ್ತಿರದೆ ಏನು? ಚೆನ್ನಾಗಿ ಗೊತ್ತಿದೆ. ನಮ್ಮ ಸಾವಿತ್ರಿಯೂ ಸೂಳೆಯೆ. ಎಲ್ಲ ಸೂಳೆಯರಂತೆ ಆಕೆಯೂ ವ್ಯವಸಾಯ ಮಾಡುತ್ತಾಳೆ. ಆದರೆ ಅವಳ ಮನಸ್ಸು ಮಾತ್ರ ಬಂಗಾರದಂಥದು. ನಮಗಾಗಿ ಈ ಮನೆಯನ್ನೇ ಬಿಟ್ಟುಕೊಟ್ಟಿದ್ದಾಳೆ. ಸಾಕಷ್ಟು ಸಹಾಯವನ್ನೂ ಮಾಡುತ್ತಾಳೆ."

ಚಂದ್ರಣ್ಣನಿಗೆ ಇದೂ ಒಂದು ನವೀನ ವಿಷಯವೇ ಆಗಿದ್ದಿತು. ಹೊಟ್ಟೆಗಾಗಿ ದೇಹವಿಕ್ರಯ ಮಾಡುವ ಹೆಂಗಸರಿಗೂ ಕಮ್ಯೂನಿಸ್ಟ್ ಪಕ್ಷ ಎಂದರೆ ಪ್ರೀತಿ, ಆತ್ಮೀಯತೆ. ಕಮ್ಯೂನಿಸ್ಟ್ ಪಕ್ಷದ ವಿರೋಧಿಗಳು ಆಗಾಗ ಎಬ್ಬಿಸುತ್ತಿದ್ದ ಹೂಲಿಯಲ್ಲಿ ಯಾವ ಹುರುಳೂ ಇಲ್ಲವೆಂಬುದು ಆತನಿಗೀಗ ಮನದಟ್ಟಾಗುತ್ತಿದ್ದಿತು. ಕಮ್ಯೂನಿಸ್ಟರು ಮಾಸ್ಕೋದ ಏಜಂಟರು, ಅವರಿಗೆ ರಷ್ಯಾದಿಂದ ಹಣ ಬರುತ್ತದೆ ಎಂದು ಪ್ರಚಾರ ಮಾಡಿ ಜನರ ಮನಸ್ಸನ್ನು ಕಲುಷಿತಗೊಳಿಸಲು ಅವರು ಪ್ರಯತ್ನಿಸುತ್ತಿದ್ದರು. ರಷ್ಯಾದಿಂದ ಹಣ ಬರುತ್ತಿದ್ದರೆ ಕಮ್ಯೂನಿಸ್ಟರು ಇಷ್ಟೆಲ್ಲ ಕಷ್ಟಪಡಬೇಕಾದ ಅಗತ್ಯವಿರುತ್ತಿರಲಿಲ್ಲ, ರಾತ್ರಿ ರಾತ್ರಿಯೆಲ್ಲ ನಿದ್ರೆಗೆಟ್ಟು ಈ ರೀತಿ ಕಾರ್ಬನ್ ಪ್ರತಿಗಳನ್ನು ತೆಗೆಯಬೇಕಾಗುತ್ತಿರಲಿಲ್ಲ, ರಷ್ಯಾದಿಂದ ಹಣ ಬಂದು ಬೀಳುತ್ತಿದ್ದರೆ ಇವರು ಊರೂರಿಗೊಂದು ಮುದ್ರಣಾಲಯ ಏರ್ಪಡಿಸಬಹುದಾಗಿತ್ತು. ಕರಪತ್ರಗಳನ್ನೂ ಪತ್ರಿಕೆಗಳನ್ನೂ

ಪುಸ್ತಕಗಳನ್ನೂ ಸುಲಭವಾಗಿ ಹೊರಡಿಸಬಹುದಾಗಿತ್ತು!

ನಾಗಮ್ಮ ಹೇಳುತ್ತಲೇ ಇದ್ದಳು : "ಹೊಟ್ಟೆಪಾಡಿಗಾಗಿ ಇಂಥ ಕೀಳು ಕೆಲಸ ಮಾಡಬೇಕಾಗಿ ಬಂದಿದೆ ನಮ್ಮ ಈ ಅಕ್ಕ ತಂಗಿಯರಿಗೆ. ಅವರಿಗೆ ಅದರಲ್ಲಿ ಕೊಂಚವೂ ಇಷ್ಟವಿಲ್ಲ. ಆದರೂ ಮಾಡಬೇಕಾಗಿದೆ. ಇಂಥ ಪರಿಸ್ಥಿತಿಯನ್ನು ದೂರಗೊಳಿಸಲು ದುಡಿಯುವ ನಮ್ಮ ಪಾರ್ಟಿಯನ್ನು ಕಂಡರೆ ಇವರಿಗೆಲ್ಲ ಆತ್ಮೀಯತೆ ಹುಟ್ಟುವುದು ಸಹಜವಲ್ಲವೆ ಚಂದ್ರಣ್ಣ?"

"ಸಾವಿತ್ರಿಬಾಯಿಯೂ ಕಮ್ಯೂನಿಜಂ ತಿಳಿದುಕೊಂಡಿರುವಳೇ?"

ಪಾತ್ರೆಗೆ ಸಕ್ಕರೆಯನ್ನೂ ಚಹದ ಪುಡಿಯನ್ನೂ ಹಾಕುತ್ತ ನಾಗಮ್ಮ ಹೇಳಿದಳು : "ಕಮ್ಯೂನಿಜಂ ಎಂದರೇನೆಂಬುದು ಆಕೆಗೆ ತಿಳಿಯದು. ನಿಜ ಹೇಳಬೇಕಾದರೆ ನನಗೂ ತಿಳಿಯದು. ನಾವು ಓದಲಾರೆವು, ಬರೆಯಲಾರೆವು. ಹೇಗೆ ತಾನೆ ತಿಳುದುಕೊಳ್ಳಬಲ್ಲೆವು? ಆದರೆ ಇಷ್ಟು ಮಾತ್ರ ನಮಗೆಲ್ಲ ಗೊತ್ತು–ನಮ್ಮನೆಲ್ಲ ದನಗಳಂತೆ ಮಾಡಿರುವ ಈ ಪರಿಸ್ಥಿತಿಯನ್ನು ದೂರಗೊಳಿಸಿ ನಾವೂ ಮನುಷ್ಯರಂತೆ ಮರ್ಯಾದೆಯಾಗಿ ಸುಖವಾಗಿ ಬದುಕುವಂತೆ ಮಾಡುವುದೇ ಕಮ್ಯೂನಿಜಂ. ಅಂತೆಯೆ ನಮಗೆಲ್ಲ ಅದರ ಬಗ್ಗೆ ತುಂಬಾ ಪ್ರೀತಿ. ಅದಕ್ಕಾಗಿ ಪಾರ್ಟಿಗಾಗಿ ಏನೆಲ್ಲವನ್ನೂ ಮಾಡಲು ಸಿದ್ಧರು ನಾವು! ಸಾವಿತ್ರಿಯನ್ನು ನೋಡಬೇಕೇನು ನೀವು? ಹೌದು ಅಗತ್ಯವಾಗಿ ನೋಡಬೇಕು."

ಚಂದ್ರಣ್ಣ ಉತ್ತರವೀಯಲಿಲ್ಲ. ಸುಮ್ಮನೆ ಕುಳಿತುಕೊಂಡು ಪಾತ್ರೆಯಿಂದ ಮೇಲಕ್ಕೇಳುತ್ತಿದ್ದ ಉಗಿಯ ತೆರೆಗಳನ್ನು ನಿಟ್ಟಿಸುತ್ತಲಿದ್ದ.

"ಸಾವಿತ್ರಿಯೂ ಎಲ್ಲ ಸೂಳೆಯರ ಹಾಗೇ ಇದ್ದಾಳೆ. ಓದಿದಾಕೆಯಲ್ಲ, ಬರೆಯುವಾಕೆಯಲ್ಲ. ಅವಳ ತಾಯಿ ಅಜ್ಜಿಯಂದಿರ ಕಾಲದಿಂದಲೂ ಇದೇ ವ್ಯವಸಾಯವಿದೆ ಮನೆಯಲ್ಲಿ. ಅವಳವೇ ಆದ ಈ ಎರಡು ಮನೆಗಳನ್ನು ಬಿಟ್ಟರೆ ಬೇರೇನೂ ಆಕೆಗಿಲ್ಲ. ಪಕ್ಕದ ಮನೆಯಲ್ಲಿ ಆಕೆ ಇದ್ದಾಳೆ. ಈ ಮನೆಯನ್ನು ನಮಗೆ ಬಿಟ್ಟುಕೊಟ್ಟಿದ್ದಾಳೆ. ಬಾಡಿಗೆಗೆ ಕೊಟ್ಟಿದ್ದರೆ ಸಹಜವಾಗಿ ಹತ್ತು ಹನ್ನೆರಡು ರೂಪಾಯಿ ಬರುತ್ತಿತ್ತು. ಆ ಆಸೆ ಆಕೆಗಿಲ್ಲ. ಅಷ್ಟೇ ಅಲ್ಲ–ತನ್ನ ದುಡಿತದಿಂದ ಬರುವ ಹಣದಲ್ಲಿ ಪ್ರತಿ ತಿಂಗಳೂ ಇಪ್ಪತ್ತು ರೂಪಾಯಿಗಳನ್ನು ಪಾರ್ಟಿಗೆ ಕೊಡುತ್ತಾಳೆ. ಸಾವಿತ್ರಿಯನ್ನು ನೋಡಲೇ ಬೇಕು ನೀವು. ಬಂಗಾರದಂಥ ಹೆಣ್ಣುಮಗಳಾಕೆ."

ಪಾತ್ರೆಯನ್ನು ಕೆಳಕ್ಕಿಳಿಸಿ ಚಹವನ್ನು ಸೋಸಿ ಲೋಟಗಳಿಗೆ ತುಂಬಿ ನಾಗಮ್ಮ

ಕೂಗಿದಳು : "ಚಹಾ! ಚಹಾ!"

ಬರೆಯುವ ಕೆಲಸ ನಿಲ್ಲಿಸಿ ಎಲ್ಲರೂ ಎದ್ದು ಬಂದರು. ಸರೋಜಮ್ಮನೂ ಏಳುತ್ತಾ - "ಸಾವಿತ್ರಿಯೂ ಬರಲಿ ಚಹಾಕ್ಕೆ. ಸಾವಿತ್ರಾ, ಓ ಸಾವಿತ್ರೀಽಽ" ಎಂದು ಗಟ್ಟಿಯಾಗಿ ಕೂಗಿದಳು.

ಮನೆಯ ಮೇಲ್ಭಾವಣಿಯೊಳಗಿನಿಂದ ಹಾಯ್ದು ಸಾವಿತ್ರಿಯ ಧ್ವನಿ ಕೇಳ ಬಂದಿತು : "ಓ! ಬಂದೆ, ಬಂದೆ!"

ಒಂದೆರಡು ನಿಮಿಷಗಳಲ್ಲಿ ಕೊಠಡಿಯಲ್ಲಿ ಅಡಿಯಿರಿಸಿದಳು ಸಾವಿತ್ರಿ. ವಿಸ್ಮಯದಿಂದ ಚಂದ್ರಣ್ಣ ಆಕೆಯನ್ನೆ ನಿಟ್ಟಿಸುತ್ತಲಿದ್ದ. ಆಕೆ ಮಧ್ಯ ವಯಸ್ಸಿನವಳು. ಬಿಳಿಯ ವಾಯಿಲ್ ಸೀರೆಯನ್ನುಟ್ಟು ರೇಷ್ಮೆಯ ರವಕೆ ತೊಟ್ಟು ತುರುಬಿನಲ್ಲಿ ಬಿಳಿಯ ಮಲ್ಲಿಗೆಯ ಮಾಲೆ ಮುಡಿದುಕೊಂಡಿದ್ದಳು. ವೇಶ್ಯಾಸ್ತ್ರೀಯರ ಹಾಗೆ ತಲೆಗೂದಲನ್ನು ಅಲ್ಲಿ ಇಲ್ಲಿ ಸುತ್ತಿ ವಕ್ರವಕ್ರವಾಗಿ ಬಾಚಿಕೊಂಡು ಮುಖದ ಮೇಲೆಲ್ಲ ಪೌಡರ್ ಸವರಿಕೊಂಡಿದ್ದಳು. ಸೂಳೆಯರ ಕೃತಿಮ ಒನಪು ಒಯ್ಯಾರ ಹಾವಭಾವಗಳು ಮಾತ್ರ ಆಗ ಆಕೆಯಲ್ಲಿ ಕಂಡು ಬರುತ್ತಿರಲಿಲ್ಲ. ನಾಟಕದಲ್ಲಿ ವೇಶ್ಯೆಯ ಪಾತ್ರ ಧರಿಸಿದ ಕುಲೀನ ಸ್ತ್ರೀಯತೆ ತೋರುತ್ತಿದ್ದಳಾಕೆ. ಕುಳಿತಿದ್ದವರನ್ನು ನೋಡಿ ಸಲುಗೆಯ ನಗೆಯನ್ನು ತುಳುಕಿಸುತ್ತ ತಾನೂ ಕುಳಿತುಕೊಂಡು ಒಂದು ಲೋಟವನ್ನು ಕೈಗೆತ್ತಿಕೊಂಡಳು. ಅಕಸ್ಮಾತ್ತಾಗಿ ಆಕೆಯ ದೃಷ್ಟಿ ಚಂದ್ರಣ್ಣನತ್ತ ಹರಿಯಿತು.

"ಇವರು ಯಾರು ಹೊಸಬರ ಹಾಗೆ ಕಾಣುವರಲ್ಲ?"

ನಾಗಮ್ಮ ಆತನ ಪರಿಚಯ ಮಾಡಿಕೊಟ್ಟ ಬಳಿಕ ಸಾವಿತ್ರಿ ಲೋಟವನ್ನು ಕೆಳಗಿಟ್ಟು ಎರಡು ಕೈಗಳನ್ನೂ ಎತ್ತಿ ಆತನಿಗೆ ನಮಸ್ಕಾರ ಮಾಡಿದಳು.

"ನೀವು ನಮ್ಮ ಭಾಗದ ದೇವರಪ್ಪ ನಿಮ್ಮಂಥವರಿಂದಲೇ ನಾವು ಉದ್ಧಾರವಾಗ ಬೇಕು! ಎಂದಳು."

ಚಂದ್ರಣ್ಣ ತಬ್ಬಿಬ್ಬಾಗಿ ಏನನ್ನೂ ನುಡಿಯಲಾರದೆ ಸುಮ್ಮನೆ ಕುಳಿತಿದ್ದ. ಸರೋಜಾ ಹೇಳಿದಳು : "ನಮ್ಮ ಸಾವಿತ್ರಿಗೆ ಕಮ್ಯೂನಿಸ್ಟ್ ಪಾರ್ಟಿ ಎಂದರೆ ತುಂಬ ಆದರ ಚಂದ್ರಣ್ಣ-ನಮ್ಮ ಕೆಲಸಗಾರರನ್ನು ಕಂಡರೂ ಪ್ರೀತಿ ಆಕೆಗೆ."

"ನಮಗಾಗಿ ನೀವು ಮನೆಮಾರು ಎಲ್ಲಾ ಬಿಟ್ಟು ದುಡೀತಾ ಇರುವಾಗ ಪ್ರೀತಿ ಇರದೇ ಏನು?" ಎಂದಳು ಸಾವಿತ್ರಿ.

ಇಂಥವರೂ ಪಾರ್ಟಿಯ ಬಗ್ಗೆ ಪ್ರೀತಿಯಿಟ್ಟುಕೊಂಡು ಅದಕ್ಕೆ ಹಣ ಸಹಾಯ ಮಾಡುತ್ತಿರುವುದನ್ನು ಕೇಳಿ ನನಗಂತೂ ಆಶ್ಚರ್ಯವಾಯಿತು ಸರೋಜಮ್ಮ. ಮಾಸ್ಕೋದಿಂದ ನಿಮಗೆ ಹಣ ಬರುತ್ತದೆಂದು ಹೇಳುವವರು ಇಲ್ಲಿಗೆ ಬಂದು ಈ ಸಾವಿತ್ರಮ್ಮನನ್ನು ಕಂಡರೆ ಬಾಯಿ ಮುಚ್ಚಿಕೊಳ್ಳುವುದು ಖಂಡಿತ."

"ಮಾಸ್ಕೋದಿಂದ ಹಣ!" ಎಂದು ನಕ್ಕು ನುಡಿದಳು ಸರೋಜಾ : "ಅಲ್ಲಿಂದ ನಮಗೆ ಹಣ ಬರುತ್ತಿದ್ದಲ್ಲಿ ನಮ್ಮವಳೇ ಆದ ಈ ಸಾವಿತ್ರಿ ಇಂಥ ಕೆಲಸ ಮಾಡಬೇಕಾದ ಅಗತ್ಯವಿರುತ್ತಿತ್ತೇ? ಆಕೆಯ ಸಂಪಾದನೆಗೆ ಪಾರ್ಟಿ ಕೈಯೊಡ್ಡ ಬೇಕಾಗುತ್ತಿತ್ತೇ? ಈಗ ಇಲ್ಲಿರುವವರೆಲ್ಲ–ಈ ನಾಗಮ್ಮ, ನಾಗೋಜಿ, ಇಬ್ರಾಹೀಮ್, ಯಲ್ಲಪ್ಪ ಎಲ್ಲರೂ ತಮ್ಮ ಸಂಪಾದನೆಯಲ್ಲಿ ಕಾಲು ಭಾಗವನ್ನು ಪ್ರತಿತಿಂಗಳೂ ಪಾರ್ಟಿಗೆ ಕೊಡುತ್ತಾರೆ. ಪಾರ್ಟಿಯ ಸದಸ್ಯರಾದವರೆಲ್ಲ ಪಾರ್ಟಿ ಫಂಡಿಗೆ ಕೊಡಲೇಬೇಕೆಂಬ ನಿಯಮವಿದೆ. ಶ್ರಮಜೀವಿಗಳು ದುಡಿದು ಗಳಿಸುವ ಹಣದಿಂದಲೇ ನಡೆಯಬೇಕು ಪಾರ್ಟಿಯ ಕೆಲಸ. ಮಾಸ್ಕೋದಿಂದ ಹಣ ಬರುತ್ತಿದ್ದರೆ ಈ ರೀತಿ ಕಾರ್ಬನ್ ಪ್ರತಿ ತೆಗೆದು ನಾವು ಕೈ ನೋಯಿಸಿಕೊಳ್ಳ ಬೇಕಾಗುತ್ತಿರಲಿಲ್ಲ, ಒಂದು ಸೈಕ್ಲೋಸ್ಟೈಲ್ ಯಂತ್ರಕೊಳ್ಳಬಹುದು ಅಲ್ಲವೆ?"

"ಮಾಸ್ಕೋದಿಂದ ಹಣ ಬರುತ್ತೆ ಅಂತ ಹೇಳುವವರಿಗೆ ತಲೆಯಲ್ಲಿ ಮೆದುಳಿರಲಿಕ್ಕಿಲ್ಲ. ಒಂದು ನಾಲಗೆಯ ಜನ ಅಲ್ಲ ಅದು. ಹಾವಿನ ಜಾತಿ ಅವರದು. ನಮ್ಮ ಬಗ್ಗೆ ಅಲ್ಲದ ಸಲ್ಲದ ಪ್ರಚಾರ ಮಾಡುತ್ತಿರೋದೇ ಅವರ ಕೆಲಸ. ನಮ್ಮ ಹೆಸರು ಕೆಡಿಸಿ ನಮ್ಮ ಬಗ್ಗೆ ಜನರಲ್ಲಿ ತಪ್ಪು ತಿಳಿವಳಿಕೆ ಹರಡುವಂತೆ ಮಾಡಲು ಬಂಡವಾಳಗಾರರು ನಡೆಸಿದ ಸಂಚು ಅದು. ಪಾರ್ಟಿಯ ಫಂಡು ಕಟ್ಟಲು ನಮ್ಮ ಕಾಮ್ರೇಡುಗಳು ಎಷ್ಟು ತ್ಯಾಗ ಮಾಡಿದಾರೆ, ಎಷ್ಟು ಕಷ್ಟಪಟ್ಟಿದಾರೆ, ಎನ್ನುವುದರ ಕಲ್ಪನೆ ಇವರಿಗೇನು ಬಂದೀತು! ಈಗಲೂ ಅರೆ ಹೊಟ್ಟೆಯಿಂದಿದ್ದು ತಮ್ಮ ಸಂಪಾದನೆಯೆಲ್ಲವನ್ನೂ ಪಾರ್ಟಿಗೆ ಕೊಡುವ ಎಷ್ಟೋ ಜನ ಇದಾರೆ ನಮ್ಮಲ್ಲಿ–ನಮ್ಮ ಸರೋಜನಮ್ಮನವರ ವಿಷಯವನ್ನೇ ತೆಗೆದುಕೊಳ್ಳಿ. ಊರಿನಿಂದ ಬರುವಾಗ ಅವರ ಮೈಮೇಲೆ ನಾಲ್ಕೈದು ಸಾವಿರ ರೂಪಾಯಿ ಬೆಲೆಯ ಆಭರಣಗಳಿದ್ದುವು. ಪಾರ್ಟಿ ಫಂಡಿನಲ್ಲಿ ಹಣವಿಲ್ಲದೆ ತುಂಬ ತೊಂದರೆಯಾಗಿದೆಯೆಂದು ಶಂಕರರೊಮ್ಮೆ ಸಹಜವಾಗಿ ಹೇಳಿದಾಗ ಸರಸರನೆ ಎಲ್ಲ ಒಡವೆಗಳನ್ನೂ ತೆಗೆದು ಅವರ ಮುಂದಿರಿಸಿಬಿಟ್ಟರಿವರು," ಎಂದ ನಾಗೋಜಿ.

"ಶಂಕರ್ ಕೇಳಲಿಲ್ಲವಷ್ಟೆ?"

"ಇಲ್ಲ, ಆದರೆ ಈಗ ಭಾಗಕ್ಕೆ ಅವರೇ ಕಾರ್ಯದರ್ಶಿ. ಹಣ ಕೊಡಿಸುವ

ಹೊಣೆಗಾರಿಕೆಯೂ ಅವರ ಮೇಲೇ ಇದೆ. ನನಗೂ ಒಡವೆಗಳಿಂದ ಏನು ಉಪಯೋಗವಾಗುವಂತಿರಲಿಲ್ಲ," ಎಂದಳು ಸರೋಜಾ.

"ನಿಮ್ಮ ತಂದೆತಾಯಿಗಳಿಗೆ ಈ ವಿಷಯ ತಿಳಿದರೆ..."

"ತಂದೆತಾಯಿಗಳು! ನಾನು ಮನೆಬಿಟ್ಟು ಹೊರಟಾಗಲೇ ಅವರ ನನ್ನ ಸಂಬಂಧ ಮುಗಿದಂತಾಯಿತು."

ಅವರು ಮತ್ತೆ ತಮ್ಮ ಕೆಲಸವನ್ನು ಮುಂದುವರಿಸಿದರು. ಸಾವಿತ್ರಮ್ಮನೂ ಎದ್ದು ಹೊರಟಳು. ನಾಗಮ್ಮ ಅಂಟು ಕುದಿಸಲಾರಂಭಿಸಿದಳು.

"ಕರಪತ್ರಗಳಿಗಾಗಿಯೆ?"

"ಹೌದು. ಬೆಳಗಾಗುವುದರೊಳಗಾಗಿ ಎಲ್ಲಾ ಕಡೆಗೂ ಅಂಟಿಸಬೇಕು. ಗಿರಣಿಯ ಕಚೇರಿ, ಚೌಕಗಳು, ಅಂಗಡಿ ಬಾಗಿಲುಗಳು, ಪೊಲೀಸು ಕಚೇರಿಗಳು ಎಲ್ಲ ಕಡೆಗೂ ಅಂಟಿಸುತ್ತೇವೆ. ಕೂಲಿಕಾರ ವಸತಿಗಳಲ್ಲೂ ಹಂಚಬೇಕು."

"ರಾತ್ರಿ ಅಂಟಿಸಲು ಹೋಗುವವರಾರು?"

"ಇನ್ನು ಕೊಂಚ ಹೊತ್ತಿಗೆ ನಾಲ್ಕೈದು ಹುಡುಗರು ಬರುತ್ತಾರೆ. ಹೋಟೆಲ್ ಕೆಲಸಗಾರರು."

"ಅವರೂ ಈ ಚಳುವಳಿಯಲ್ಲಿರುವರೇ?"

"ಹೌದು. ಹೋಟೆಲ್ ಕೆಲಸಗಾರರ ಸಂಘವೂ ಪಾರ್ಟಿಯ ಕೈಯಲ್ಲಿದೆ."

"ರಾತ್ರಿಯೆಲ್ಲ ನಿದ್ರೆಗೆಟ್ಟು ಮತ್ತೆ ಬೆಳಗಿನ ಕೆಲಸಕ್ಕೆ ಹೇಗೆ ಹೋಗುತ್ತಾರೆ ಅವರು?"

"ಅದೆಲ್ಲ ನಮಗೆ ರೂಢಿಯಾಗಿದೆ. ನಿದ್ರೆಯಾದರೂ ಆಯಿತು, ಇಲ್ಲವಾದರೆ ಇಲ್ಲ. ಓ! ನಿಮಗೆ ನಿದ್ರೆ ಬಂದಿರಬೇಕಲ್ಲ! ಗಂಟೆ ಎಷ್ಟಾಯಿತು?"

ಚಂದ್ರಣ್ಣ ತನ್ನ ಕೈಗಡಿಯಾರ ನೋಡಿಕೊಂಡು-"ಹನ್ನೊಂದುವರೆಯಾಗುತ್ತ ಬಂತು," ಎಂದು ನುಡಿದ.

"ನಿಮಗೆ ಹೊತ್ತಾಯಿತೇನೋ. ಮನೆಗೆ ಹೋಗುತ್ತೀರಾ, ಇಲ್ಲ-ಇಲ್ಲೇ ಮಲಗಿ ಕೊಳ್ಳುತ್ತೀರಾ?"

"ಮನೆ ಎಂಬುದು ನನಗಾದರೂ ಎಲ್ಲಿದೆ? ನಿದ್ರೆಯೂ ಬರುವಂತಿಲ್ಲ. ನೀವೆಲ್ಲ ಹೀಗೆ ಕೆಲಸ ಮಾಡುತ್ತಿರುವಾಗ ನನಗೆ ನಿದ್ರೆಯಾದರೂ ಹೇಗೆ ಬಂದೀತು? ಅದಿರಲಿ. ಇಂದು ಇಂಥ ಗಲಭೆಯಾಯಿತು. ನಾಳೆ ಬೆಳಗ್ಗೆ ಎಂದಿನಂತೆ ನೀವೆಲ್ಲ ಕೆಲಸಕ್ಕೆ ಹೋಗುತ್ತೀರಿ ತಾನೆ?"

"ಆ ವಿಚಾರವಿನ್ನೂ ನಿರ್ಧಾರವಾಗಿಲ್ಲ-ಬೆಳಗ್ಗೆ ಕೂಲಿಕಾರರ ಸಭೆಯಲ್ಲಿ ಯಾವುದೂ ಗೊತ್ತಾಗಬೇಕು. ಎಂಟು ಗಂಟೆಯ ಕೆಲಸಕ್ಕೆ ಮಾಲೀಕರು ಒಪ್ಪಿದರೆ, ಇಂದು ಬಂಧಿಸಲ್ಪಟ್ಟವರನ್ನೆಲ್ಲ ಬಿಡುಗಡೆ ಮಾಡಿದರೆ ಮಾತ್ರ ಕೆಲಸಕ್ಕೆ ಹೋಗಬೇಕು-ಇಲ್ಲವಾದರೆ ಇಲ್ಲ-ಅಂತ ಬಹಳ ಜನ ಅಭಿಪ್ರಾಯಪಡುತ್ತಾರೆ."

"ಹಾಗಾದರೆ ಮುಷ್ಕರವೋ"

"ಅದೂ ನಿರ್ಧಾರವಿಲ್ಲ. ಆದರೂ ಆದೀತು."

"ಮುಷ್ಕರ ಹೂಡಬೇಕಾದರೆ ಕಾನೂನು ಪ್ರಕಾರ ನೋಟೀಸ್ ಕೊಡಬೇಕಾಗುವುದಲ್ಲವೆ? ಹಾಗೇ ಮುಷ್ಕರ ಹೂಡಿದರೆ ಅದು ಕಾನೂನುಬಾಹಿರವೆಂದು ಸಾರಿ ನಿಮ್ಮನ್ನೆಲ್ಲ ಕೆಲಸದಿಂದ ತೆಗೆದುಬಿಡಬಹುದು."

"ಕಾನೂನಿನ ಪ್ರಕಾರವೆ ಕೆಲಸ ಮಾಡಲು ಮೊದಲಿನಿಂದಲೂ ಪ್ರಯತ್ನಿಸುತ್ತಿದ್ದೇವೆ ನಾವು. ಆದರೆ ಮಾಲೀಕರೂ ಸರಕಾರದವರೂ ಒಂದಾಗಿ ನಮ್ಮ ಪ್ರಯತ್ನಗಳಿಗೆಲ್ಲ ಕಲ್ಲು ಹಾಕುತ್ತಿದ್ದಾರೆ. ಎಂಟು ತಾಸಿನ ಕೆಲಸದ ಬಗ್ಗೆ ಹೆಚ್ಚು ಸಂಬಳದ ಬಗ್ಗೆ ಮೊದಲು ಸರಕಾರಕ್ಕೆ ಬೇಡಿಕೊಂಡದ್ದಾಯಿತು. ಅದಕ್ಕೆ ಉತ್ತರವೇ ಬರಲಿಲ್ಲ. ಮತ್ತೆ ಎರಡು ಮೂರು ಪತ್ರ ಬರೆದಾಯಿತು. ಅದಕ್ಕೂ ಅವರು ಲಕ್ಷ್ಯಕೊಡಲಿಲ್ಲ. ಆಮೇಲೆ ಮುಷ್ಕರದ ನೋಟೀಸ್ ಕೊಟ್ಟಿದ್ದಾಯಿತು. ಅದು ಮುಟ್ಟಿದ ಬಗ್ಗೆ ಪತ್ರವೂ ಬರಲಿಲ್ಲ. ಈ ತರದ ನಿರ್ಲಕ್ಷ್ಯದಿಂದ ನಮ್ಮನ್ನು ತುಳಿಯಬೇಕೆಂದು ಸರಕಾರವೂ ಮಾಲೀಕರೂ ನಿರ್ಧರಿಸಿರುವಾಗ ನಾವೇನು ಮಾಡಬೇಕು? ಕಾಯಿದೆ ಕಾನೂನು ಯಾವುದರ ಆಧಾರವೂ ಉಳಿದಿಲ್ಲ ನಮಗೆ. ಅವೆಲ್ಲಾ ದುಡ್ಡಿನ ದೊಡ್ಡಪ್ಪಗಳಿಗೆ. ಬಡವರಾದ ನಾವು ಇನ್ನೇನು ಮಾಡಬೇಕು ನೀವೇ ಹೇಳಿ."

ಒಲೆಯ ಮೇಲೆ ಹಿಟ್ಟು ಕುದಿಯುತ್ತಿತ್ತು. ಅದರಿಂದ ಹೊರಡುವ ಸಳಸಳ ಎಂಬ ಸದ್ದನ್ನುಳಿದರೆ ಕೊಠಡಿಯಲ್ಲಿ ಇನ್ನಾವ ಸದ್ದೂ ಇರಲಿಲ್ಲ. ಕರಪತ್ರಗಳನ್ನು ಸಿದ್ಧಗೊಳಿಸುತ್ತಿದ್ದವರೆಲ್ಲ ಸದ್ದಿಲ್ಲದೆ ಕೆಲಸ ಮಾಡುತ್ತಿದ್ದರು. ನಿಮಿಷಗಳು ಉರುಳುತ್ತಿದ್ದುವು.

ಚಂದ್ರಣ್ಣನಿಗೆ ನಿಧಾನವಾಗಿ ತೂಕಡಿಕೆ ಬರಲಾರಂಭಿಸಿದ್ದಿತು.

"ಹೊರಗೆ ಪಡಸಾಲೆಯಲ್ಲಿ ಹಾಸಿಗೆಯಿದೆ. ಅದರ ಮೇಲೆ ಉರುಳಿಕೊಂಡು ಬಿಡಿ. ನಮ್ಮೊಡನೆ ನೀವೂ ಏಕೆ ನಿದ್ದೆಗೆಡಬೇಕು" ಎಂದು ಹೇಳಿ ನಾಗಮ್ಮ ಆತನನ್ನು ಪಡಸಾಲೆಗೆ ಕರೆದುತಂದಳು. ಗೋಡೆಗೆ ಒರಗಿಸಿಟ್ಟಿದ್ದ ಕಂಬಳಿಗಳಲ್ಲಿ ಒಂದನ್ನು ಹಾಸಿ ಇನ್ನೊಂದನ್ನು ಆತನ ಕೈಗೆ ಕೊಟ್ಟು – "ಇಷ್ಟೇ ನಮ್ಮ ಹಾಸಿಗೆ ಹೊದಿಕೆ. ಇಂಥ ಕಂಬಳಿಗಳ ಮೇಲೆ ಮಲಗಿ ರೂಢಿಯಿರಲಿಕ್ಕಿಲ್ಲ ನಿಮಗೆ. ಇದೊಂದು ದಿನ ಹೇಗಾದರೂ ಮಾಡಿ ಮಲಗಿಕೊಳ್ಳಿ," ಎಂದು ನುಡಿದು ಒಳಗಡೆ ತೆರಳಿದಳು.

ಕಂಬಳಿಯನ್ನು ಹೊದೆದುಕೊಂಡು ಚಂದ್ರಣ್ಣ ಮಲಗಿಕೊಂಡ ತಕ್ಷಣ ಮತ್ತೆ ದುರ್ಗಂಧ ಬೆರೆತ ಗಾಳಿ ಮೂಗಿಗೆ ಬಡಿಯತೊಡಗಿತು. ದೊಡ್ಡ ದೊಡ್ಡ ಸೊಳ್ಳೆಗಳೂ ಝೇಂಕಾರಗೈಯುತ್ತ ಬಂದು ರಕ್ತ ಹೀರತೊಡಗಿದುವು. ಅವುಗಳ ಕಾಟ ತಪ್ಪಿಸಲು ಕಂಬಳಿಯನ್ನು ತಲೆಯವರೆಗೂ ಹೊದೆದುಕೊಂಡು ಮಗ್ಗುಲಾಗಿ ಮಲಗಿದ.

ಆತನಿಗೆ ನಿದ್ರೆ ಬರುವಂತಿರಲಿಲ್ಲ. ಕಣ್ಣು ಮುಚ್ಚಿಕೊಂಡಿದ್ದರೂ ಕಣ್ಣ ಬೊಂಬೆಗಳೆದುರಿಗೆ ಸರೋಜಾ, ಸಾವಿತ್ರಿ, ರತ್ನಮ್ಮ, ನಾಗಮ್ಮ ಮೊದಲಾದವರ ಮುಖಗಳು ಒಂದರ ಹಿಂದೊಂದರಂತೆ ಮೂಡಿ ಮಾಯವಾಗುತ್ತಿದ್ದವು. ಆಕಸ್ಮಾತ್ತಾಗಿ ಒಂದು ಸಲ ಶಾರದಾಮಣಿಯ ಮುಖವೂ ಕಾಣಿಸಿಕೊಂಡಂತಾಯಿತು. ಸಾಮ್ಯವಾದದ ಚಳವಳಿಗಾಗಿ ಹಗಲಿರುಳೂ ದುಡಿಯುತ್ತಿರುವ ಈ ನಾಲ್ವರು ಸ್ತ್ರೀಯರನ್ನೂ ಶಾರದಾಮಣಿಯನ್ನೂ ಒಂದೇ ಸಾಲಿನಲ್ಲಿ ನಿಲ್ಲಿಸಿ ತುಲನೆ ಮಾಡಿ ನೋಡಿತು ಆತನ ಮನಸ್ಸು.

ಶ್ರಮಜೀವಿಗಳ ಹೋರಾಟದಲ್ಲಿ ಭಾಗವಹಿಸಲೆಂದು ಕರುಳಿನ ಬಳಗವನ್ನೆಲ್ಲ ತೊರೆದು ಇಷ್ಟು ದೂರ ಬಂದ ಸರೋಜಾ; ಹೊಟ್ಟೆಗಾಗಿ ಶರೀರವನ್ನು ಮಾರಿಕೊಳ್ಳುತ್ತಿದ್ದರೂ ಅದರಿಂದ ಬಂದ ಹಣವನ್ನು ಈ ಚಳವಳಿಗೆ ಸಲ್ಲಿಸುವ ಸಾವಿತ್ರಿ; ಮನೆಯಲ್ಲಿ ಒಡಹುಟ್ಟಿದ ಸೋದರ ಅಸ್ವಾವಸ್ಥನಾಗಿ ಬಿದ್ದಿದ್ದರೂ ಇಲ್ಲಿ ಬಂದು ದುಡಿಯುತ್ತಿರುವ ರತ್ನಮ್ಮ; ಗಂಡನ ದಬ್ಬಾಳಿಕೆಯನ್ನು ಸಹಿಸಿ ಸಹಿಸಿ ಕೊನೆಗೆ ಅದರಿಂದ ಮುಕ್ತಳಾಗಿ ಈ ಚಳವಳಿಯಲ್ಲಿ ತನ್ನ ಕಷ್ಟಮಯ ಬಾಳನ್ನು ತೇಲಿಬಿಟ್ಟ ನಾಗಮ್ಮ; ಸಾಹುಕಾರರ ಏಕಮಾತ್ರ ಮುದ್ದಿನ ಮಗಳಾಗಿ ಬೆಳೆದು ಕಾಲೇಜಿನಲ್ಲಿ ಓದುತ್ತ ಆಧುನಿಕ ಫ್ಯಾಶನ್ನಿನ ಮೂರ್ತಿಮಂತ ಪ್ರತಿಮೆಯಾಗಿ ಮೆರೆಯುತ್ತ ಕತೆ ಕಾದಂಬರಿಗಳನ್ನೋದಿ ಕಾಲಹರಣ ಮಾಡುತ್ತ ತಿರುಗುವ ಶಾರದಾಮಣಿ! ಅಶಿಕ್ಷಿತರೂ ಅಜ್ಞಾನಿಗಳೂ ಆಗಿದ್ದ ಸಾವಿತ್ರಿ ನಾಗಮ್ಮರಂಥ ಸ್ತ್ರೀಯರಲ್ಲೂ ನವಚೈತನ್ಯ ಹುಟ್ಟಿಸಿ ಅವರನ್ನೂ ಆಕರ್ಷಿಸಿಕೊಂಡಿದೆ ಈ

ಚಳವಳಿ. ಶಾರದೆಗೂ ಆಕೆಯಂಥ ಯುವತಿಯರಿಗೂ ಈ ನವಚೈತನ್ಯದ ಸಹವಾಸ ಲಭಿಸಿಲ್ಲ; ಈ ನವಜೀವನದ ಅಪೂರ್ವ ಆನಂದ, ವಿಲಕ್ಷಣ ಉತ್ಸಾಹಗಳ ಅರಿವಿಲ್ಲ. ಒಂದು ಧ್ಯೇಯಕ್ಕಾಗಿ ಒಂದು ಉದ್ದೇಶಕ್ಕಾಗಿ ಸರ್ವಸ್ವವನ್ನೂ ಧಾರೆಯೆರೆದು ದುಡಿಯುವುದರಲ್ಲೂ ಎಂಥ ಸುಖವಿದೆ! ಆ ಸುಖದ ಕಲ್ಪನೆ ಶಾರದೆಯಂಥವರಿಗಿರ ಲಾರದು. ಇನ್ನು ಮುಂದೆಯೂ ಬರಲಾರದೇ? ಯಾರಿಗೆ ಗೊತ್ತು? ಸರೋಜಳೂ ಮೊದಲು ಮೊದಲು ಶಾರದೆಯ ಹಾಗೆಯೆ ಸುಖವಾಗಿ ಕಾಲ ಕಳೆಯುತ್ತ ಅಲೆದಿರ ಬಹುದು. ಶಂಕರನ ಪರಿಚಯವಾದ ಮೇಲೆ ಆತನ ಸಹವಾಸದಿಂದಾಗಿ ಆಕೆಯ ವಿಚಾರರಂಗದಲ್ಲಿ ಕ್ರಾಂತಿಯುಂಟಾಗಿರಬಹುದು...

ತನಗೆ ಯಾವಾಗ ನಿದ್ರೆ ಬಂದಿತೆಂಬುದರ ಅರಿವು ಚಂದ್ರಣ್ಣನಿಗಿರಲಿಲ್ಲ. ಬೆಳಗಿನ ಜಾವದಲ್ಲಿ ಆತನಿಗೆ ಅಕಸ್ಮಾತ್ತಾಗಿ ಎಚ್ಚರವಾಯಿತು. ಮುಖದ ಮೇಲಿನ ಕಂಬಳಿಯನ್ನು ಬದಿಗೆ ಸರಿಸಿ ಕಣ್ಣು ಬಿಟ್ಟು ನೋಡಿದ. ಮಾಡದಲ್ಲಿದ್ದ ಹಣತೆ ಇನ್ನೂ ಹಾಗೆಯೆ ಮಂದವಾಗಿ ಉರಿಯುತ್ತಿತ್ತು. ಕೊಂಚ ಮೇಲಕ್ಕೆದ್ದು ಗೋಡೆಗೆ ಭುಜಗಳ ನ್ನೊರಗಿಸಿ ಕುಳಿತುಕೊಂಡು ಸುತ್ತಲೂ ದೃಷ್ಟಿ ಹೊರಳಿಸಿದ. ಆತನಿಗೆ ತೀರ ಹತ್ತಿರದಲ್ಲೇ – ಆತ ಮಲಗಿದ್ದ ಕಂಬಳಿಯ ಮೇಲೆಯೇ ನಾಗಮ್ಮನೂ ಮಲಗಿ ನಿದ್ರಿಸುತ್ತಿದ್ದಳು. ಹಣತೆಯ ಆ ಮಂದ ಪ್ರಕಾಶದಲ್ಲಿ ಆಕೆಯ ಮುಖ ಹಸುಗೂಸಿನ ಮುಖದ ಹಾಗೆ ಕಾಣಿಸುತ್ತಿತ್ತು. ಮಲಿನತೆಯದೊಂದು ಕಣವೂ ಇದ್ದಂತಿರಲಿಲ್ಲ ಆ ಮುಖದಲ್ಲಿ. ಆಕೆಯ ಪಕ್ಕದಲ್ಲಿಯೇ ಸೀರೆಯ ಸೆರಗನ್ನು ಮುಖದ ಮೇಲೆ ಮುಚ್ಚಿಕೊಂಡು ನಿದ್ರೆ ಹೋಗಿದ್ದಳು ರತ್ನಾ. ಅದರಾಚೆಗೆ ಸರೋಜಾ ಪವಡಿಸಿದ್ದಳು. ಗಂಡಸರಾರೂ ಇದ್ದಂತಿರಲಿಲ್ಲ. ಕರಪತ್ರಗಳನ್ನು ಹಂಚಲು ಅವರೆಲ್ಲ ಹೋಗಿರುವವರೇನೋ ಎಂದು ಕೊಂಡು ಚಂದ್ರಣ್ಣ ಮೇಲಕ್ಕೆದ್ದ.

ತಾನು ಹೊದೆದುಕೊಂಡಿದ್ದ ಕಂಬಳಿಯನ್ನು ನಾಗಮ್ಮ-ರತ್ನಮ್ಮ ಇಬ್ಬರ ಮೇಲೂ ಹೊದೆಯಿಸಿ ಚಂದ್ರಣ್ಣ ಹೊರಡುವುದರಲ್ಲಿದ್ದ. ಕಂಬಳಿಯ ಸ್ಪರ್ಶದೊಂದಿಗೆ ರತ್ನಮ್ಮ ನಿಗೆ ಎಚ್ಚರವಾಯಿತು. ಆಕೆಯೂ ಕಣ್ಣುಜ್ಜಿಕೊಳ್ಳುತ್ತ ಎದ್ದು ಕುಳಿತಳು. ನಾಗಮ್ಮ ಮಾತ್ರ ಶಾಂತವಾಗಿ ನಿದ್ರೆ ಮಾಡುತ್ತಿದ್ದಳು.

"ಹೊರಟಿರಾ?" ಎಂದು ಮೆಲುದನಿಯಲ್ಲಿ ಕೇಳಿದರು ರತ್ನಮ್ಮ.

"ಹೌದು. ನೀವು ಬರುತ್ತೀರಾ?"

"ಬೆಳಗಾಗುತ್ತ ಬಂತೇನೊ. ಗಂಟೆ ಎಷ್ಟು?"

"ನಾಲ್ಕೂವರೆ."

"ಓ! ಹೊತ್ತಾಯಿತು ಹಾಗಾದರೆ. ಇನ್ನು ಮನೆಗೆ ಹೋಗಿ ರೊಟ್ಟಿ ಮಾಡಬೇಕು. ಅಣ್ಣನಿಗೆ ಗಂಜಿ ಮಾಡಿಕೊಡಬೇಕು," ಎನ್ನುತ್ತ ಆಕೆ ಮೇಲಕ್ಕೆದ್ದಳು.

ಸದ್ದಾಗದಂತೆ ಬಾಗಿಲನ್ನು ತೆರೆದು ಅವರಿಬ್ಬರೂ ಹೊರಕ್ಕೆ ಬಂದರು. ಪಶ್ಚಿಮ ದಿಕ್ಕಿನಿಂದ ತಣ್ಣನೆಯ ಗಾಳಿ ಮೈ ಕೊರೆಯುವಂತೆ ಬೀಸಿ ಬರುತ್ತಿತ್ತು. ಸೀರೆಯ ಸೆರಗನ್ನು ತಲೆ ತುಂಬಾ ಹೊದೆದುಕೊಂಡು ರತ್ನಾ ಮೆಟ್ಟಲುಗಳನ್ನಿಳಿದು ಬೀದಿಗೆ ಬಂದಳು. ಬಾಗಿಲನ್ನು ಸರಿಯಾಗಿ ಮುಚ್ಚಿ ಚಂದ್ರಣ್ಣನೂ ಅವಳೊಂದಿಗೆ ಸೇರಿ ನಡೆಯತೊಡಗಿದ. ಸಂದಿಗಳನ್ನು ದಾಟಿ ಗಾಂಧೀಚೌಕದ ಬಳಿ ಬಂದಾಗ ಚಂದ್ರಣ್ಣ ಸಹಜವಾಗಿಯೇ ಕೊಂಚ ತಡೆದು ನಿಂತ.

''ಆಫೀಸಿಗೆ ಹೋಗುವಿರಾ?'' ಎಂದಳು ರತ್ನಾ.

''ನಿಮ್ಮನ್ನು ಹೀಗೆ ಬಿಟ್ಟು?''

''ನೀವೇನೂ ತೊಂದರೆಪಟ್ಟುಕೊಳ್ಳಬೇಡಿ : ನಾನೊಬ್ಬಳೇ ಹೋಗಬಲ್ಲೆ.''

''ಇಂಥ ಹೊತ್ತಿನಲ್ಲಿ?''

''ಎಂಥ ಹೊತ್ತಾದರೇನು! ನನಗೇನು ಭಯ?'' ಎಂದು ರತ್ನಾ ಮುಂದಕ್ಕೆ ಅಡಿಯಿರಿಸಿದಳು.

ಮೆಚ್ಚುಗೆ, ಅಭಿಮಾನಗಳಿಂದ ಚಂದ್ರಣ್ಣನ ಕಂಠ ಗದ್ಗದಿತವಾಯಿತು. ಹೊರಟಿದ್ದ ಆಕೆಯನ್ನು ಎರಡು ಕೈಗಳಲ್ಲೂ ಹಿಡಿದುಕೊಂಡು – ''ಎಂಥಾ ದಿಟ್ಟೆ ನೀನು ರತ್ನಾ! ನಿನ್ನಂಥವಳನ್ನು ಇದುವರೆಗೆ ಕಂಡೇ ಇರಲಿಲ್ಲ ನಾನು!'' ಎಂದ.

ಆತನ ಕೈಗಳಿಂದ ಬಿಡುಗಡೆ ಹೊಂದುತ್ತ ಆಕೆಯೆಂದಳು : ''ದಿಟ್ಟತನವನ್ನು ನಮಗಾರೂ ಕಲಿಸಬೇಕಾಗಿಲ್ಲ ಚಂದ್ರಣ್ಣ. ಪರಿಸ್ಥಿತಿಯೆ ಕಲಿಸಿಕೊಟ್ಟಿರುತ್ತದೆ.''

''ನಡೆ ರತ್ನ, ನಾನೂ ನಿಮ್ಮ ಮನೆಯತನಕ ಬರುತ್ತೇನೆ. ಸೋಮಣ್ಣನನ್ನು ನೋಡಬೇಕು.''

# ೨೨

ಬೆಳಗಿನ ಎಂಟು ಗಂಟೆಯ ಸಮಯ. ಸೋಮಣ್ಣನನ್ನೂ ಶಂಕರನ ತಾಯಿ ಯನ್ನೂ ಕಂಡು ಆಗತಾನೆ ಕಚೇರಿಗೆ ಹಿಂದಿರುಗಿ ಬಂದಿದ್ದ ಚಂದ್ರಣ್ಣ ಬೇರೆ ಬಟ್ಟೆ ಧರಿಸುತ್ತಿದ್ದ. ಬೀದಿಯಿಂದ ಹಾಡಿನ ಪಲ್ಲವಿಯೊಂದು ಕೇಳಿ ಬರುತ್ತಿತ್ತು.

''ಸರ್ವರಿಗೆ ಸಮಬಾಳು ಸರ್ವರಿಗೆ ಸಮಪಾಲು
ಎಂಬ ನವಯುಗವಾಣಿ ಘೋಷಿಸಿದೆ ಕೇಳಿ!''

ನೂರಾರು ಕಂಠಗಳಿಂದ ಹೊರಟು ಸುತ್ತಲಿನ ಸೀಮೆಯಲ್ಲೆಲ್ಲ ದುಮು ದುಮಿಸುತ್ತಿದ್ದ ಆ ಹಾಡು! ಚಂದ್ರಣ್ಣನಿಗೆ ಅದು ಅಪರಿಚಿತವಾದುದೇನೂ ಆಗಿರಲಿಲ್ಲ. ಆತನ ಅತ್ಯಂತ ಮೆಚ್ಚುಗೆಯ ಹಾಡುಗಳಲ್ಲೊಂದು ಅದು. ಬೇಗ ಬೇಗ ಬಟ್ಟೆ ಹಾಕಿಕೊಂಡು ಆತ ಕೆಳಕ್ಕಿಳಿದು ಬಂದ.

ಏಳೆಂಟುನೂರು ಜನ ಕೂಲಿಕಾರರು ಮೆರವಣಿಗೆ ಹೊರಡಿಸಿಕೊಂಡು ಶಿಸ್ತಿ ನಿಂದ ಅಡಿಯಿಡುತ್ತ ಬರುತ್ತಿದ್ದರು. ಎಲ್ಲರಿಗೂ ಮುಂದಿನ ಸಾಲಿನಲ್ಲಿ ರತ್ನಮ್ಮ ಕೆಂಪು ಬಾವುಟವನ್ನು ಕೈಯಲ್ಲೆತ್ತಿ ಹಿಡಿದು ಠೀವಿಯಿಂದ ಹೆಜ್ಜೆ ಹಾಕುತ್ತ ಬರುತ್ತಿದ್ದಳು. ಅವರ ಪಕ್ಕದಲ್ಲಿ ನಾಗಮ್ಮ ಎದೆಯುಬ್ಬಿಸಿ ತಲೆಯೆತ್ತಿ ಬಿಂಕದಿಂದ ನಡೆಯುತ್ತಿದ್ದಳು. ಅವರ ಹಿಂದೆ ಹಿಂದೆ ಬರುತ್ತಿದ್ದ ಮಲ್ಲೇಶಿ ಹಾಡಿನ ಒಂದೊಂದೇ ಚರಣವನ್ನು ಉಚ್ಚಕಂಠದಲ್ಲಿ ಹೇಳುತ್ತಿದ್ದ. ಕೂಲಿಕಾರರೆಲ್ಲ ಅದನ್ನು ಎತ್ತಿಕೊಂಡು ಉತ್ಸಾಹದಿಂದ ಮರುದನಿ ಗೊಡುತ್ತಿದ್ದರು :

''ಸರ್ವರಿಗೆ ಸಮಬಾಳು ಸರ್ವರಿಗೆ ಸಮಪಾಲು
ಎಂಬ ನವಯುಗವಾಣಿ ಘೋಷಿಸಿದೆ ಕೇಳಿ!
ಯುಗಯುಗದ ದಾರಿದ್ರ್ಯಭಾರದಿಂ ಬೆನ್‌ಬಾಗಿ
ಗೋಳಿಡುವ ಬಡಜನರೆ ಏಳಿರೈ ಏಳಿ!''

ಕವಿಯ ಆ ವೀರ ಆವಾಹನ ಆ ಬಡಕೂಲಿಕಾರರಲ್ಲಿ ಹೊಸ ಉತ್ಸಾಹ, ಹೊಸ ಆಸೆ ಹುಟ್ಟಿಸಿ ಅವರನ್ನು ಕಾರ್ಯೋನ್ಮುಖರಾಗಿ ಮಾಡಿದಂತಿದ್ದಿತು. ಬೆಳಗಿನ ಸೂರ್ಯನ ಹೊನ್ನ ಕಿರಣಗಳಲ್ಲಿ ಸ್ಫೂರ್ತಿಯಿಂದ ಕಂಗೊಳಿಸುತ್ತಿದ್ದ ಆ ನೂರಾರು ಮುಖಗಳನ್ನು ಕಂಡಾಗ ಚಂದ್ರಣ್ಣನಿಗೆ ರೋಮಾಂಚನವಾದಂತಾಯಿತು.

''ಶ್ರೀಮಂತರಡಿಗಳಹುಡಿಯಲ್ಲಿ ಹೊರಳಾಡಿ
ಕುಸಿದು ಕುಗ್ಗಿದವರೆಲ್ಲ ಸಂತಸವ ತಾಳಿ!''ಎಂಬ ಚರಣವನ್ನು ಹೇಳುವಾಗ ನಿಜಕ್ಕೂ ಆ ಕೂಲಿಕಾರರ ಮುಖಗಳು ಆನಂದದಿಂದ ಅರಳಿದಂತೆ ತೋರುತ್ತಿತ್ತು.

''ಕಂಗೆಟ್ಟ ಸೋದರರರೆ, ಬರುತಿಹಳು ಕಾಣಿರೈ
ದಾನವರ ಸೀಳಿ ಅದೊ ವಿಪ್ಲವದ ಕಾಳಿ'' ಎಂದು ಘೋಷಿಸುವಾಗ ಮಲ್ಲೇಶಿಯ ಕಂಠ ಗುಡುಗಿನಂತೆ ಗದ್ದರಿಸುತ್ತಿತ್ತು. ಆತನ ಹರಯದ ಮುಖದಲ್ಲಿ ಉದ್ವೇಗ-ಉತ್ಸಾಹ ಉಕ್ಕಿಬಂದಂತೆ ತೋರುತ್ತಿತ್ತು. ಆತನ ಉತ್ಸಾಹದಿಂದ ಪ್ರಭಾವಿತ ರಾದ ಚಿಕ್ಕ ಚಿಕ್ಕ ಹುಡುಗರು ಬಿಗಿದ ಮುಷ್ಟಿಗಳನ್ನು ಮೇಲಕ್ಕೆತ್ತಿ – ''ದಾನವರ ಸೀಳಿ ಅದೊ ವಿಪ್ಲವದ ಕಾಳಿ!'' ಎಂದು ಘೋಷಿಸುವುದು ರೋಮಾಂಚಕಾರಿಯಾದ ದೃಶ್ಯವಾಗಿತ್ತು.

ಯಾವುದೋ ಅದೃಶ್ಯ ಶಕ್ತಿಯೊಂದರ ಆಕರ್ಷಣೆಗೊಳಗಾಗಿ ಚಂದ್ರಣ್ಣನೂ ಮೆರವಣಿಗೆಯೊಂದಿಗೆ ಸಾಗಿದ. ಅವನಂತೆಯೇ ಇನ್ನೂ ಅನೇಕ ನಾಗರಿಕರು ಕೂಲಿಕಾರರನ್ನು ನಿರೀಕ್ಷಿಸುತ್ತ ಗಿರಣಿಯ ಕಡೆಗೆ ಸಾಗಿದ್ದರು. ಬೆಳಗಿನ ಬಂಗಾರದ ಬೆಳಕಿನಲ್ಲಿ ರತ್ನಮ್ಮ ಹಿಡಿದಿದ್ದ ಕೆಂಪುಬಾವುಟ ನೆತ್ತರಿನ ಫಲಕದಂತೆ ಹೊಳೆಯುತ್ತಿತ್ತು.

ಜನ ಹಾಡುತ್ತಿತ್ತು :

''ಇಂದ್ರ ಸಿಂಹಾಸನಕೆ ಬಂದಿಹುದು ಕೊನೆಗಾಲ
ಕಳಚಿ ಬೀಳುವುದಿಂದು ನಂದನದ ಬೇಲಿ!
ದೇವತೆಗಳಶ್ಲೀಲ ಮೋದಕ್ಕೆ ಬಲಿಯಾಗಿ
ಗೋಚರಿಪುದಲ್ಲಿ ಮರ್ತ್ಯರ ಕೃಷಿಯ ಕೇಲಿ!''

ಗಾಳಿಯಲ್ಲಿ ಅಲೆಅಲೆಯಾಗಿ ಬೆರೆತು ಮೊರೆಯುತ್ತಿತ್ತು ಆ ಕ್ರಾಂತಿಗೀತೆ. ಯುದ್ಧರಂಗಕ್ಕೆ ಹೊರಟ ಸೈನಿಕರ ಹಾಗೆ ಠೀವಿಯಿಂದ ಹೆಜ್ಜೆ ಹಾಕುತ್ತ ಹಾಡು ಹೇಳುತ್ತ ಹೊರಟಿದ್ದ ಆ ಕೂಲಿಕಾರರನ್ನು ನಿರೀಕ್ಷಿಸಿದಂತೆ ಚಂದ್ರಣ್ಣನಿಗೆ ಅದೂ ಒಂದು ಯುದ್ಧವೆ, ಆ ಕೂಲಿಕಾರರೂ ಸೈನಿಕರೆ, ಎಲ್ಲರೂ ಯುದ್ಧರಂಗಕ್ಕೆ ಹೊರಟವರೆ ಎಂದೆನ್ನಿಸದಿರಲಿಲ್ಲ.

''ದ್ರವ್ಯಾನುಕೂಲತೆಯ ಜಾತಿಯಾ ನೀತಿಯಾ
ಪಕ್ಷಪಾತವನೆಲ್ಲ ಕೊಚ್ಚುವುದು ಬುದ್ಧಿ

ಮತ್ತೊಂದು ನಾಕವನೆ ನೆಯ್ಯುವರು ಲೋಕದಲಿ
ದೇವರ ನ್ಯಾಯವನು ಮಾನವರೆ ತಿದ್ದಿ!''

ಊರು ಹಿಂದುಳಿಯಿತು. ಸುಂಕದಕಟ್ಟೆಯನ್ನು ದಾಟಿ ನಗರಸಭೆಯ ಸೀಮೆಯನ್ನು ಹಿಂದೆ ಬಿಟ್ಟು ಗಿರಣಿಯ ಕಡೆಗೆ ರಭಸದಿಂದ ಸಾಗಿತು ಮೆರವಣಿಗೆ. ಗಿರಣಿಯ ವಿಶಾಲ ಹಾಗೂ ಭವ್ಯವಾದ ಕಟ್ಟಡ ದೂರದಿಂದ ಅತಿರಮ್ಯವಾಗಿ ಕಾಣಿಸುತ್ತಿತ್ತು. ಆ ಕಟ್ಟಡವನ್ನು ವಶಪಡಿಸಿಕೊಳ್ಳಲು ಹೊರಟ ಸೇನೆಯಂತೆ ಕಾಣಿಸುತ್ತಿತ್ತು ಈ ಗುಂಪು!

ಕೇಳಿದವರ ರಕ್ತವನ್ನು ಕುದಿಸುವಂಥ ಸ್ಫೂರ್ತಿದಾಯಕ ಸ್ವರದಲ್ಲಿ ಹಾಡುತ್ತಿದ್ದ ಮಲ್ಲೇಶಿ :

''ಇಂದು ನೆತ್ತರು ಚೆಲ್ಲಿ ಮುಂದೆ ಬಹ ಮಕ್ಕಳಿಗೆ
ಹೊಟ್ಟೆಗನ್ನವ ಮೈಗೆ ಬಟ್ಟೆಯನು ನೀಡಿ.
ಇಂದು ನೋವಾದರೂ ಇಂದು ಸಾವಾದರೂ
ಮುಂದೆ ಬಾಳಿಗೆ ಸೊಗಸು ನೆಮ್ಮದಿಯ ಮಾಡಿ!''

ಗಿರಣಿಯ ಹತ್ತಿರ ಹತ್ತಿರ ಬಂದಂತೆಲ್ಲ ಜನದ ಉತ್ಸಾಹವೂ ಹೆಚ್ಚುತ್ತಿತ್ತು. ಅವರ ಕಂಠದ ಶಕ್ತಿ ಇಮ್ಮಡಿ ಮುಮ್ಮಡಿ ನೂರ್ಮಡಿಯಾಗುತ್ತಿತ್ತು. ಮಲ್ಲೇಶಿಯಂತೂ ತನ್ನನ್ನು ತಾನು ಮರೆತುಬಿಟ್ಟು ಆವೇಶದಿಂದ ಹಾಡುತ್ತಿದ್ದ :

''ಇಂದು ನೀವೇಳದಿರೆ ಕೆಚ್ಚೆದೆಯ ತಾಳದಿರೆ
ನಿಮ್ಮವರ ಬಾಳು ಎಂದೆಂದಿಗೂ ಹೇಡಿ!
ಇಂದು ರಕ್ತದ ಬಿಂದು, ಮುಂದೆ ಸೌಖ್ಯದ ಸಿಂಧು
ಎಂದು ಸಾಹಸ ಕೇಳಿ, ಹಿಂಜರಿಯಬೇಡಿ!''

''ಹಿಂಜರಿಯಬೇಡಿ!''

''ಹಿಂಜರಿಯಬೇಡಿ!''

''ಹಿಂಜರಿಯಬೇಡಿ!''

ಆ ಕೊನೆ ಶಬ್ದವಂತೂ ಅತ್ಯಂತ ಪ್ರಭಾವಕಾರಿಯಾಗಿದ್ದಿತು. ಅದರ ಹಿಂದೆ ಹಿಂದೆಯೆ 'ಇನ್ಕ್ವಿಲಾಬ್ ಜಿಂದಾಬಾದ್' ಇತ್ಯಾದಿ ಕ್ರಾಂತಿ ಘೋಷಣೆಗಳು ಹೊರಟು ಸುತ್ತುಮುತ್ತಲಿನ ಪ್ರದೇಶವನ್ನೆಲ್ಲ ನಡುಗಿಸಿದುವು.

ಗಿರಣಿಯ ಕಟ್ಟಡದ ಎದುರಿಗಿದ್ದ ಹೊಲದ ಹತ್ತಿರ ಬಂದೊಡನೆ ಮೆರವಣಿಗೆ ಸ್ಥಗಿತವಾಯಿತು. ಹೊಲದ ನಡುವೆ ಇದ್ದ ಬೇವಿನ ಮರದ ಕೆಳಗಡೆ ಕೂಲಿಕಾರರೆಲ್ಲ ಒಂದುಗೂಡಿದರು. ಕೆಂಪುಬಾವುಟವನ್ನು ಕೈಯಲ್ಲಿ ಹಿಡಿದುಕೊಂಡಿದ್ದ ರತ್ನಮ್ಮ ಗಿಡದ ಅಡಿಯಲ್ಲಿ ನಿಂತುಕೊಂಡಳು. ಉಳಿದವರೆಲ್ಲ ಅಲ್ಲಲ್ಲಿ ಕುಳಿತುಕೊಂಡರು.

ಬಾವುಟದ ಕೆಳಗೆ ನಿಂತುಕೊಂಡು ಮಲ್ಲೇಶಿ ಮಾತಿಗಾರಂಭಿಸಿದ. ಮುನ್ನಾದಿನ ಸಾಯಂಕಾಲ ಮಾಲೀಕರು ಪೋಲೀಸರ ನೆರವಿನಿಂದ ಕೂಲಿಕಾರರ ಮೇಲೆ ನಡೆಸಿದ ದಬ್ಬಾಳಿಕೆಯನ್ನು ಖಂಡಿಸಿದ. ಶಂಕರ್ ಮೊದಲಾದ ಕೂಲಿಕಾರ ಮುಂದಾಳುಗಳನ್ನು ಕೂಡಲೇ ಬಿಡಬೇಕೆಂದು ಸಾರಿ ಹೇಳಿದ. ಎಂಟು ಗಂಟೆಗಳ ಕೆಲಸಕ್ಕೆ ಒಪ್ಪಿಗೆ ಕೊಡಬೇಕು, ಮುಖಂಡರನ್ನು ಬಿಟ್ಟುಬಿಡಬೇಕು – ಅದುವರೆಗೆ ಯಾರೂ ಕೆಲಸಕ್ಕೆ ಹೋಗಕೂಡದು ಎಂದು ಘೋಷಿಸಿದ. ಆ ಘೋಷಣೆಗೆ ಸಮ್ಮತಿಯೀಯಲೆಂದು ಕೆಲವರು ಕೈ ತಟ್ಟಿದರು. ಇನ್ನೂ ಕೆಲವರು ಸುಮ್ಮನೆ ಕುಳಿತಿದ್ದರು.

''ಇಂದಿನಿಂದ ಯಾರೂ ಕೆಲಸಕ್ಕೆ ಹೋಗಕೂಡದು ಎನ್ನುವವರೆಲ್ಲ ಕೈ ಮೇಲಕ್ಕೆತ್ತಿರಿ.''

ಹಲವು ಕೈ ಮೇಲೆದ್ದುವು. ಎಷ್ಟೋ ಜನರು ತಲೆ ತಗ್ಗಿಸಿಕೊಂಡು ಮೌನವಾಗಿ ಕುಳಿತಿದ್ದರು.

''ಕೆಲಸಕ್ಕೆ ಹೋಗಬಾರದೆಂದು ಸರ್ವಾನುಮತದಿಂದ ನಿರ್ಧಾರವಾಯಿತು!'' ಎಂದು ಸಾರಿದ ಮಲ್ಲೇಶಿ. ಇನ್ನು ಆತ ತನ್ನ ಸ್ಥಳದಲ್ಲಿ ಕುಳಿತುಕೊಳ್ಳುವವ; ಅಷ್ಟರಲ್ಲಿಯೇ ಜನಸಮೂಹದಿಂದ ಧ್ವನಿಯೊಂದು ಹೊರಟಿತು. ''ಸರ್ವಾನುಮತ ದಿಂದ ನಿರ್ಧಾರವಾಯಿತೆಂದು ಹೇಗೆ ಹೇಳುತ್ತೀ? ಕೆಲಸಕ್ಕೆ ಹೋಗಬಾರದೆಂಬುದನ್ನು ನಾವ್ಯಾರೂ ಒಪ್ಪಿಲ್ಲ.''

ಅದರೊಂದಿಗೆ ಜನರೆಲ್ಲ ಧ್ವನಿ ಕೇಳಿಬಂದ ದಿಕ್ಕಿಗೆ ತಿರುಗಿದರು. ''ಯಾರೋ ಅದು ಮಾತಾಡಿದವರು?'' ''ಎದ್ದು ಮುಂದೆ ಬಾರೋ ಗೆಣೆಯ!'', ''ಕೆಳಗೆ ಕೂತು ಒದರಬ್ಯಾಡೋ!'', ''ಏಳೋ ಮ್ಯಾಲಕ್ಕೆ!'', ಎಂಬ ಕೂಗುಗಳು ಕೇಳಿಸಿದುವು.

ಜನದ ನಡುವೆ ಕುಳಿತಿದ್ದ ಯುವಕನೊಬ್ಬ ಮೇಲಕ್ಕೆದ್ದ. ನೆರೆದಿದ್ದ ಕೂಲಿಕಾರರ ಸಾವಿರಾರು ದೃಷ್ಟಿಗಳು ತನ್ನ ಮೇಲೆ ನೆಲಸಿದ್ದುದನ್ನು ತಿಳಿದಿದ್ದರೂ ಆತ ಕೊಂಚವೂ ನರಹೀನನಾಗಿರಲಿಲ್ಲ. ಜನದ ಮಧ್ಯೆ ದಾರಿ ಮಾಡಿಕೊಂಡು ಆತ ಗಿಡದ ಹತ್ತಿರ

ಬಂದು ರತ್ನಮ್ಮನಿಂದ ಕೊಂಚ ದೂರದಲ್ಲಿ ನಿಂತುಕೊಂಡ. ಆತನ ಗಂಭೀರ ನಿಲುವು, ನಿರ್ಧಾರದ ಸ್ವಭಾವವನ್ನು ಸೂಚಿಸುವ ಶಕ್ತಿಪೂರ್ಣ ಮುಖ ಎಂಥರ ಮೇಲಾದರೂ ಪ್ರಭಾವ ಬೀರುವಂತಿದ್ದುವು. ಎಲ್ಲರೂ ಆ ವ್ಯಕ್ತಿಯನ್ನೇ ಕುತೂಹಲದಿಂದ ನಿಟ್ಟಿಸುತ್ತಿದ್ದರು ಹಾಗೆ ಚಂದ್ರಣ್ಣನೂ ಕೌತುಕದಿಂದ ಆತನನ್ನು ನಿರುಕಿಸುತ್ತಿದ್ದ. ಆತ ಅಪರಿಚಿತನೇನೂ ಆಗಿರಲಿಲ್ಲ ಚಂದ್ರಣ್ಣನಿಗೆ. ಹಿಂದೆ ಕೂಲಿಕಾರ ವಸತಿಯ ಗುಡಿಸಲೊಂದರಲ್ಲಿ ಬಡಿದಾಟ ನಡೆದಿದ್ದಾಗ ಕಂಡ ಸೋಶಲಿಸ್ಟ್ ನಾರಾಯಣಮೂರ್ತಿ ಆತ. ಕಮ್ಯೂನಿಸ್ಟ್ ಪಾರ್ಟಿಯಲ್ಲಿದ್ದು ಕೆಲಸ ಮಾಡಿ ಅದರ ಬಗೆಗೆ ಬೇಸರಗೊಂಡು ಹೊರಬಿದ್ದವ, ಸೋಶಲಿಸ್ಟ್ ಪಾರ್ಟಿಯ ಸ್ಥಳೀಯ ಶಾಖೆಯ ಕಾರ್ಯದರ್ಶಿ.

ಆತ ಮಾತಿಗೆ ಮೊದಲು ಮಾಡಿದ್ದ : ''ಕೆಲಸಕ್ಕೆ ಹೋಗಬಾರದೆಂದು ಇವರೆಂದರು. ಸರ್ವಾನುಮತದಿಂದ ನಿರ್ಧಾರವಾಯಿತೆಂದೂ ಸಾರಿದರು. ನಿಮಗೇ ಗೊತ್ತಿದೆ. ನಿಮ್ಮಲ್ಲಿ ಎಲ್ಲೋ ಕೆಲವರು ಕೈ ಎತ್ತಿದ್ದಾರೆ. ಉಳಿದವರೆಲ್ಲ ಸುಮ್ಮನೆ ಕುಳಿತಿದ್ದಾರೆ. ಸುಮ್ಮನಿರುವ ಈ ಜನರ ಪರವಾಗಿ ಮಾತನಾಡುತ್ತಿದ್ದೇನೆ ನಾನು...'' ಎಂದು ಆತ ಹೇಳುತ್ತಿದ್ದ ಹಾಗೆ ಅಲ್ಲಿಯ ಕುಳಿತಿದ್ದ ಮಲ್ಲೇಶಿ ಕೋಪದಿಂದ ಕುದಿಯುತ್ತ ಮೇಲಕ್ಕೆದ್ದು – ''ಅವರ ಪರವಾಗಿ ಮಾತನಾಡಲು ನಿಮಗಾರು ಅಧಿಕಾರ ಕೊಟ್ಟರು?'' ಎಂದು ಸವಾಲು ಹಾಕಿದ.

ನಾರಾಯಣಮೂರ್ತಿ ಶಾಂತವೂ ಗಂಭೀರವೂ ಆದ ಧ್ವನಿಯಲ್ಲಿ – ''ಮೊದಲು ಮಾತನಾಡುವಾಗ ನಿಮಗಾರು ಅಧಿಕಾರ ಕೊಟ್ಟಿದ್ದರು?'' ಎಂದು ಮರುಸವಾಲು ಹಾಕಿದ.

ಬಿಗಿದ ಮುಷ್ಟಿಯನ್ನು ಮೇಲಕ್ಕೆತ್ತಿ ಮಲ್ಲೇಶಿ ಗರ್ಜಿಸಿದ : ''ಯಾರು ಅಧಿಕಾರ ಕೊಟ್ಟಿದ್ದರು? ಜನರನ್ನು ಕೇಳಿನೋಡಿ.''

''ನೀವೂ ಜನರನ್ನು ಕೇಳಿನೋಡಿ'', ಎಂದು ನುಡಿದು ನಾರಾಯಣ ಕೂಲಿಕಾರರ ಕಡೆಗೆ ದೃಷ್ಟಿ ತಿರುಗಿಸಿ – ''ಎಲ್ಲಿ, ಬಂಧು ಭಗನಿಯರೆ, ನಾನು ಮಾತಾಡಬೇಕು ಅನ್ನುವವರೆಲ್ಲ ಕೈ ಎತ್ತಿರಿ!'' ಎಂದ.

ಒಡನೆಯೆ ನೂರಾರು ಕೈ ಮೇಲಕ್ಕೆದ್ದವು. ''ನಾರಾಯಣ ಮಾತಾಡಲಿ!'', ''ನಾರಾಯಣಮೂರ್ತಿ ನಮ್ಮ ಮುಖಂಡ!'', ''ನಾರಾಯಣ, ಹೊಡೀ ಗಾಡಿ!'', ''ಸೋಶಲಿಸ್ಟ್ ಜಿಂದಾಬಾದ್!'' ಎಂಬಿವೇ ಮೊದಲಾದ ಕೂಗುಗಳೂ ಕೇಳಿಸಿದುವು : ಅವುಗಳ ಹಿಂದೆಯೆ – ''ಕಮ್ಯೂನಿಸ್ಟ್ ಜಿಂದಾಬಾದ್!'', ''ಸೋಶಲಿಸ್ಟ್ ಮುರ್ದಾ

ಬಾದ್'', ''ನಾರಾಯಣ, ಸುಮ್ಮನೆ ಕೂಡ್ರು,'' ಎಂಬ ಮರುಘೋಷಣೆಗಳೂ ಹೊರಟವು. ಎರಡು ಮೂರು ನಿಮಿಷಗಳವರೆಗೆ ಗುಲ್ಲೋ ಗುಲ್ಲು, ಹಲವರು ಸಿಳ್ಳು ಹಾಕಿದರು. ಕೆಲವರು ಚಪ್ಪಾಳೆ ತಟ್ಟಿದರು. ಇನ್ನು ಕೆಲವರು ಬೆಕ್ಕು, ನಾಯಿ, ಕಾಗೆ, ಕತ್ತೆಗಳ ಧ್ವನಿಯನ್ನನುಕರಿಸಿ ಕೋಲಾಹಲವನ್ನುಂಟುಮಾಡಿದರು. ಕೊಂಚ ದೂರದಲ್ಲಿ ನಿಂತು ಸಭೆಯ ಕಾರ್ಯಕಲಾಪಗಳನ್ನು ನಿರೀಕ್ಷಿಸುತ್ತಿದ್ದ ಗಿರಣಿಯ ಅಧಿಕಾರಿಗಳೂ ಗುರ್ಖಾ ಸಿಪಾಯಿಗಳೂ ಈ ಗದ್ದಲವನ್ನು ಕಂಡು ಬಿದ್ದು ಬಿದ್ದು ನಗುವುದು ಚಂದ್ರಣ್ಣನಿಗೆ ಗೋಚರವಾಗದಿರಲಿಲ್ಲ. ಕೂಲಿಕಾರ ಚಳವಳಿಯಲ್ಲಿನ ಈ ಒಡಕು ಆ ಅವ್ಯವಸ್ಥೆಗಳನ್ನು ಕಂಡು ಆತ ಕಳವಳಗೊಂಡ. ಆ ಒಡಕನ್ನು ಹೋಗಲಾಡಿಸಿ ಐಕಮತ್ಯ ವನ್ನು ನೆಲೆಗೊಳಿಸಲು ಸಾಧ್ಯವಾಗದೇ? ಎಂದು ಯೋಚಿಸಿದ. ಆ ಯೋಚನೆಯ ಭರದಲ್ಲಿ ತನಗೆ ತಿಳಿಯದಂತೆಯೆ ಆತ ಕುಳಿತ ಸ್ಥಳಬಿಟ್ಟು ಮೇಲಕ್ಕೆದ್ದು ದೃಢಸ್ವರದಲ್ಲಿ ಕೂಗಿದ : ''ಬಂಧುಗಳೇ ಗದ್ದಲ ಮಾಡಬೇಡಿರಿ.''

ದೃಢಕಾಯನೂ ಖಾದೀದಾರಿಯೂ ಆದ ತೇಜಸ್ವೀ ಯುವಕನೊಬ್ಬ ಆ ರೀತಿ ಹಠಾತ್ತಾಗಿ ಎದ್ದು ನಿಂತು ತನ್ನ ಗಂಭೀರವಾಣಿಯಲ್ಲಿ ಮಾತನಾಡಿದೊಡನೆ ಗಲಭೆಗಾರರು ಸುಮ್ಮನಾದರು. ಚಂದ್ರಣ್ಣ ಮುಂದುವರಿಸಿದ : ''ಈ ರೀತಿ ಗದ್ದಲ ಮಾಡಿದರೆ ಯಾರಿಗೇನು ಉಪಯೋಗವಾದೀತು? ನೋಡುವವರು ನಿಮ್ಮನ್ನು ಕಂಡು ನಗದಿರರೇ? ನಮ್ಮ ವಿರೋಧಿಗಳ ಹೇಳಿಕೆಯನ್ನು ಸಹ ಶಾಂತರೀತಿಯಿಂದ ಕೇಳಿಕೊಳ್ಳಲು ಕಲಿಯಬೇಕು ನಾವು. ಕೆಲಸಕ್ಕೆ ಹೋಗಬಾರದೆಂದು ಮೊದಲಿನವರು ಹೇಳಿದರು. ನೀವು ಕೆಲವರು ಕೈ ಎತ್ತಿದಿರಿ. ಕೆಲಸಕ್ಕೆ ಹೋಗಬಾರದೆನ್ನುವುದಕ್ಕೆ ತಮ್ಮ ಒಪ್ಪಿಗೆಯಿಲ್ಲವೆಂದು ಎರಡನೆಯವರು ಹೇಳುತ್ತಾರೆ. ಅವರ ಪರವಾಗಿಯೂ ಅನೇಕರಿದ್ದಾರೆ. ಇವರೂ ಮಾತನಾಡಲಿ. ಇವರ ವಿಚಾರವೇನೆಂಬುದನ್ನು ಕೇಳಿಕೊಳ್ಳಿ. ಆಮೇಲೆ ಮತ್ತೆ ನೀವು ಅವರನ್ನು ವಿರೋಧಿಸಿ ಮಾತನಾಡಬಹುದಲ್ಲ? ಅದನ್ನು ಬಿಟ್ಟು ನಾಯಿ ಬೆಕ್ಕು ಕಾಗೆ ಕತ್ತೆಗಳ ಧ್ವನಿ ತೆಗೆದರೆ! ಇಲ್ಲಿ ಕುಳಿತಿರುವವರಲ್ಲಿ ಈ ಪ್ರಾಣಿಗಳ ಜಾತಿಯವರಾರೂ ಇಲ್ಲ ತಾನೆ!''

ಆ ಮಾತು ಕೇಳಿ ಅನೇಕರು ನಕ್ಕರು. ಅದಕ್ಕೂ ಚಪ್ಪಾಳೆ ಬಿತ್ತು. ಚಂದ್ರಣ್ಣ ಮಾತು ಮುಗಿಸಿ ಕುಳಿತುಕೊಂಡ ತಕ್ಷಣ ಅನೇಕ ದೃಷ್ಟಿಗಳು ಆತನೆಡೆಗೆ ಹೊರಳಿದುವು. ''ಚಲೋ ಮಾತಾಡಿದ!'', ''ಬರಾಬರಿ ಹೇಳಿದ'', ಎಂದು ಹಲವರು ಪಿಸುದನಿಯಲ್ಲಿ ಹೇಳಿಕೊಂಡರು.

ನಾರಾಯಣ ಮಾತನಾಡುತ್ತಿದ್ದ : ''ನಮ್ಮ ಹಿತೈಷಿಗಳಾದ ಚಂದ್ರಣ್ಣನವರು ಹೇಳಿದ ಹಾಗೆ ಗಲಭೆಯಿಂದ ನಾವೇನನ್ನೂ ಸಾಧಿಸಲಾರೆವು. ಶಾಂತವಾಗಿ ಕೆಲಸ ಮಾಡಿದರೆ ಮಾತ್ರ ನಮ್ಮ ಬೇಡಿಕೆಗಳು ಕೈಗೂಡಬಹುದು. ಕೆಲಸಕ್ಕೆ ಹೋಗಬಾರದೆಂದು ಇವರು ಹೇಳಿದರು. ಕೆಲಸ ನಿಲ್ಲಿಸುವುದೆಂದರೆ ಮುಷ್ಕರ ಹೂಡಿದ ಹಾಗೆ. ಮುಷ್ಕರ ಅಂದರೇನೂ ಹುಡುಗಾಟವಲ್ಲ. ಅದಕ್ಕೆ ಮೊದಲು ಸಾಕಷ್ಟು ಸಿದ್ಧತೆ ಮಾಡಬೇಕಾಗುವುದು. ಕಾನೂನಿನ ಪ್ರಕಾರ ನೋಟೀಸ್ ಕೊಡಬೇಕಾಗುವುದು. ಇಲ್ಲವಾದರೆ ಮುಷ್ಕರ ಕಾನೂನು ಬಾಹಿರವೆಂದು ಸಾರಿ ಮಾಲೀಕರು ಪೊಲೀಸರನ್ನು ಕರೆಯಿಸುತ್ತಾರೆ. ಮತ್ತೆ ಗಲಾಟೆ, ಮತ್ತೆ ರಕ್ತಪಾತ, ಮತ್ತೆ ಬಂಧನಗಳು. ಉಪಯೋಗವೇನೂ ಇಲ್ಲ...''

ನಾರಾಯಣನ ಮಾತನ್ನು ನಡುವೆಯೆ ತಡೆದು ಮಲ್ಲೇಶಿಯೆಂದ : ''ಮುಷ್ಕರದ ನೋಟೀಸ್ ಕೊಟ್ಟು ಒಂದು ತಿಂಗಳಿನ ಮೇಲಾಯಿತು ಮಿಸ್ಟರ್. ಅದು ಮುಟ್ಟಿದ ಬಗ್ಗೆ ಉತ್ತರ ಕೂಡ ಬರಲಿಲ್ಲ. ಮಾಲೀಕರೂ ಸರಕಾರವೂ ಇಷ್ಟು ನಿರ್ಲಕ್ಷ್ಯತನದಿಂದ ವರ್ತಿಸಿದರೆ ನಾನೇನು ಮಾಡಬೇಕು? ನಮಗೆ ಬೇರಾವ ದಾರಿಯಿದೆ?''

''ಮುಷ್ಕರವೊಂದೇ ದಾರಿಯಲ್ಲ ಮಿಸ್ಟರ್! ಇಂಥ ಸಂದರ್ಭಗಳಲ್ಲೆಲ್ಲ ಸ್ವಲ್ಪ ಉಪಾಯವಾಗಿ ವರ್ತಿಸಬೇಕು. ಈಗ ನಾವು ಮುಷ್ಕರ ಹೂಡುವುದನ್ನೇ ಮಾಲೀಕರು ಕಾಯುತ್ತಿದ್ದಾರೆ. ನಮ್ಮ ನಿರ್ಧಾರದಿಂದ ಅವರಿಗೆ ಸಂತೋಷವೇ ಆದೀತು. ಗಿರಣಿಯನ್ನು ಲಾಕ್‌ಔಟ್ ಮಾಡಿಬಿಟ್ಟು ಕೆಲಸಗಾರರನ್ನೆಲ್ಲ ಅವರು ಗೋಳಾಡಿಸುವುದು ಖಂಡಿತ. ಮುಷ್ಕರ ಹೂಡಿದರೆ ನಾವು ಅವರ ಬಲೆಗೇ ಬಿದ್ದಂತಾಗುವುದು. ಆದ್ದರಿಂದ ಸದ್ಯ ಮುಷ್ಕರದ ಮಾತನ್ನೇ ಆಡಬಾರದೆಂದು ನನ್ನ ಅಭಿಪ್ರಾಯ. ಶಾಂತರೀತಿಯಿಂದ ನಮ್ಮ ಬೇಡಿಕೆಗಳನ್ನು ಕೈಗೂಡಿಸಿಕೊಳ್ಳಲು ಹೋರಾಡಬೇಕು.''

ಕೊಂಚ ದೂರದಲ್ಲಿ ಕುಳಿತಿದ್ದ ಇಬ್ರಾಹೀಮ್ ಆ ಮಾತು ಕೇಳಿ ತ್ವೇಷದಿಂದ ಮೇಲಕ್ಕೆದ್ದು – ''ಶಾಂತರೀತಿಯಿಂದ ಅಂದರೇನು ಮಿಸ್ಟರ್? ಮಾಲೀಕರ ಮನೆಯೆದುರಿಗೆ ಹೋಗಿ ಸೆರಗೊಡ್ಡಿ ಬೇಡಿಕೊಳ್ಳಬೇಕು ಅಂತಿರೇನು?'' ಎಂದ.

''ಸೆರಗೊಡ್ಡಬೇಕಾದ ಅಗತ್ಯವೇನೂ ಇಲ್ಲ. ನಮ್ಮ ನ್ಯಾಯವಾದ ಹಕ್ಕುಬಾಧ್ಯತೆಗಳನ್ನು ನೆರವೇರಿಸಿಕೊಡಬೇಕೆಂದು ಕೇಳಿಕೊಳ್ಳಲು ನಮಗೆ ಅಧಿಕಾರವಿದ್ದೇ ಇದೆ. ಈ ಕಮ್ಯೂನಿಸ್ಟರ ಮಾತು ಕೇಳಿ ಕೆಲಸಕ್ಕೆ ಹೋಗಲಿಲ್ಲ ಅಂತ ಇಟ್ಟುಕೊಳ್ಳಿ. ಗಿರಣಿ

ಲಾಕ್ ಔಟ್ ಆದರೆ? ತಿಂಗಳೆರಡು ತಿಂಗಳು ಕೆಲಸವೇ ಇಲ್ಲದಂತಾದರೆ? ಆ ಬಡ ಕೂಲಿಕಾರರೆಲ್ಲ ಏನು ಮಾಡಬೇಕು? ಎಲ್ಲಿಗೆ ಹೋಗಬೇಕು? ಅವರು, ಅವರ ಹೆಂಡಿರು ಮಕ್ಕಳ ಹೊಟ್ಟೆಯ ಪಾಡೇನು? ಕಮ್ಯೂನಿಸ್ಟರೇನೋ ಕಾಫಿ ನೀರಿನ ಮೇಲೆ ಸಿಗರೇಟು ಬೀಡಿಗಳ ಹೊಗೆಯ ಮೇಲೆ ಜೀವಿಸಬಲ್ಲರು. ಆದರೆ ಈ ಎಲ್ಲ ಜನರು? ಇವರ ವಿಚಾರವೇನೆಂದು ತಿಳಿದುಕೊಳ್ಳಬೇಡವೆ? ಮುಷ್ಕರ ಹೂಡಬೇಕೆಂದು ಉಪದೇಶಿಸುವ ಈ ಪಂಡಿತರು ಈ ಸಾವಿರ ಜನಕ್ಕೆಲ್ಲ ಹೊಟ್ಟೆಗೆ ಹಾಕಬಲ್ಲರೇ?''

ನಾರಾಯಣ ಕೂಲಿಕಾರರನ್ನು ತನ್ನ ಅಭಿಪ್ರಾಯದತ್ತ ಒಲಿಸಿಕೊಳ್ಳಬಹುದೆಂದು ಎನ್ನಿಸುತ್ತಲೂ ಇಬ್ರಾಹೀಮ್ – ''ಇದೆಲ್ಲ ಗೋಳಿನ ಕತೆ ಹೇಳಿ ಕಣ್ಣೀರು ಸುರಿಸುವಿರೇಕೆ? ಕ್ರಾಂತಿಯಾಗಬೇಕಾದರೆ ತ್ಯಾಗ ಮಾಡಬೇಕಾಗುತ್ತೆ. ಉಪವಾಸ, ವನವಾಸ ಸಹಿಸಬೇಕಾಗುತ್ತೆ,'' ಎಂದು ನುಡಿದ.

''ತ್ಯಾಗದ ಮಾತು ಹೇಳಲು ಬಲು ಸುಲಭ ಸಾಹೇಬ್ರು, ಉಪವಾಸದ ಮಾತೂ ಅಷ್ಟೆ ಪ್ರತ್ಯಕ್ಷ ಉಪವಾಸದ ಪ್ರಸಂಗ ಬಂದಾಗ ತಿಳಿಯುತ್ತೆ ಅದರ ಕಷ್ಟ ಇಲ್ಲಿ ಕುಳಿತವರಲ್ಲಿ ಎಷ್ಟು ಜನ ಉಪವಾಸಕ್ಕೆ ಸಿದ್ಧರಿರುವರೋ ಕೇಳಿನೋಡಿ!''

ಇಬ್ರಾಹೀಮ್ ಮತ್ತು ಮಲ್ಲೇಶಿ ಹಾಗೂ ಅವರ ಕಮ್ಯೂನಿಸ್ಟ್ ಜೊತೆಗಾರರು, ಕುಳಿತಿದ್ದ ಕೂಲಿಕಾರರ ಮೇಲೆಲ್ಲ ಉದ್ವೇಗಪೂರ್ಣ ದೃಷ್ಟಿ ಬೀರಿದರು. ಸಭಿಕರಲ್ಲಿ ಮುಕ್ಕಾಲು ಪಾಲು ಜನರೆಲ್ಲ ತಲೆ ತಗ್ಗಿಸಿಕೊಂಡು ಅಸಹಾಯಕತೆಯೇ ಮೈದಳೆದ ಹಾಗೆ ಮೌನವಾಗಿ ಕುಳಿತಿದ್ದರು.

''ಇವರನ್ನೊಮ್ಮೆ ನೋಡಿದರೂ ಸಾಕು, ಉಪವಾಸ ವನವಾಸಗಳನ್ನೆದುರಿಸಲು ಇವರಾರೂ ಸಿದ್ಧರಿಲ್ಲವೆನ್ನುವುದು ಎಂಥವರಿಗಾದರೂ ಗೊತ್ತಾದೀತು. ಇವರ ಮನಸ್ಸಿಗೆ ವಿರುದ್ಧವಾಗಿ ಇವರನ್ನು ಮುಷ್ಕರಕ್ಕೆ ತೊಡಗಿಸುವುದೆಂದರೆ ಮಹಾ ಅಪರಾಧವೇ ಸರಿ. ಕಮ್ಯೂನಿಸ್ಟರ ಕೃತ್ಯಗಳೆಲ್ಲ ಇಂಥವೇ. ತಮ್ಮ ಪಾರ್ಟಿಯನ್ನು ಬಲಗೊಳಿಸುವುದಕ್ಕಾಗಿ ಅವರು ಕೂಲಿಕಾರರನ್ನು ಬಲಿಕೊಡಲು ಸಿದ್ಧರೇ!'' ಎಂದ ನಾರಾಯಣ. ''ಕಮ್ಯೂನಿಸ್ಟರನ್ನು ಬೈಯುವವ ನೀನೇನು ಮಹಾ ಮುಖಂಡನೊ? ಸೋಶಲಿಸ್ಟರೆಂಥವರು ಅನ್ನೋದು ಗೊತ್ತಿಲ್ಲವೇ ನಮಗೆ! ಕೂಲಿಕಾರ ಚಳವಳಿಯ ಬೆನ್ನಲ್ಲಿ ಇರಿಯುವ ಹೇಡಿಗಳು! ಬೃಹನ್ನಳೆಗಳು!'' ಎಂದ ಮಲ್ಲೇಶಿ.

''ಏ ಬದ್ಮಾಷ್! ಯಾರಿಗೆ ಹೇಡಿ ಅನ್ನುತ್ತೀಯೆ!'' ಎಂದು ಜಟ್ಟಿಯೊಬ್ಬ ಮೇಲಕ್ಕೆದ್ದು ಮಲ್ಲೇಶಿಯನ್ನು ಹಿಡಿದು ಒಂದೇಟು ಬಿಗಿದ. ''ತಗೊಳ್ಳಿ ಆ

ಕಮ್ಯೂನಿಸ್ಟರನ್ನ! ಒಂದು ಕೈ ತೋರಿಸಿರಿ ಅವರಿಗೆ, ನಮ್ಮ ಹೇಡಿತನ ಅಂದರೆ ಎಂಥಾದ್ದು ಅನ್ನೋದು ಗೊತ್ತಾಗಲಿ!'' ಎನ್ನುತ್ತಾ ಯಾರೋ ಒಂದು ಕಲ್ಲು ತೂರಿದರು. ಒಡನೆಯೆ ಕುಳಿತಿದ್ದ ಜನರೆಲ್ಲ ಗಾಬರಿಗೊಂಡು ಮೇಲಕ್ಕೆದ್ದು ದಾರಿ ಸಿಕ್ಕಿದತ್ತ ಧಾವಿಸತೊಡಗಿದರು. ಅಲ್ಲಲ್ಲಿ ಕೈ ಕೈ ಕಾಳಗವೂ ಪ್ರಾರಂಭವಾಯಿತು. ಕಲ್ಲುಗಳಂತೂ ಒಂದರ ಹಿಂದೊಂದರಂತೆ ಬೀಸಿ ಬರುತ್ತಿದ್ದವು. ಈ ಎಲ್ಲ ಕೋಲಾಹಲದಲ್ಲೂ ಶಾಂತಚಿತ್ತದಿಂದ ದೃಢಮನಸ್ಸಿನಿಂದ ಕೆಂಪುಬಾವುಟ ಹಿಡಿದುಕೊಂಡು ಹಾಗೆಯೇ ನಿಂತಿದ್ದಳು ರತ್ನಮ್ಮ. ಬೀಸಿ ಬರುತ್ತಿದ್ದ ಕಲ್ಲುಗಳಲ್ಲೊಂದು ಆಕೆಯ ಹಣೆಗೆ ಏಟು ಹಾಕಿತು. ದೊಡ್ಡ ಗಾಯ ವಾಗಿ ಅದರಿಂದ ರಕ್ತವೂ ಸುರಿಯತೊಡಗಿತು. ಆದರೂ ಆಕೆ ಬಾವುಟವನ್ನು ಬಿಡದೆ ಸೈನಿಕರಂತೆ ನಿಂತುಕೊಂಡಿದ್ದಳು. ಅಷ್ಟರಲ್ಲಿ ಮೂರು ನಾಲ್ಕು ಜನ ಎಲ್ಲಿಂದಲೋ ಬಂದು ಒಮ್ಮೆಲೆ ಆಕೆಯ ಮೇಲೆ ಎರಗಿ ಬಲಾತ್ಕಾರದಿಂದ ಆ ಬಾವುಟವನ್ನು ಕಸಿದು ಕೊಂಡರು. ಯಾರೋ ಒಬ್ಬರು ಕಡ್ಡಿ ಗೀಚಿದರು. ರತ್ನಮ್ಮನ ಕಣ್ಣುಗಳೆದುರಿನಲ್ಲಿಯೇ ಆ ಬಾವುಟಕ್ಕೆ ಬೆಂಕಿಯಿಟ್ಟು ಸುಟ್ಟುಬಿಡಲಾಯಿತು. ಅಷ್ಟರಲ್ಲಿ ಚಂದ್ರಣ್ಣ ಅತ್ತ ನುಗ್ಗಿ ಬಂದು ಆಕೆಯನ್ನು ಗದ್ದಲದಿಂದ ದೂರಗೊಳಿಸಿ ಸುರಕ್ಷಿತ ಸ್ಥಳಕ್ಕೆ ಕರೆದೊಯ್ದ.

ಹೊಡೆದಾಟಕ್ಕೆ ಪೂರ ಬಂದ ಹಾಗೆ ತೋರುತ್ತಿತ್ತು. ದೂರ ನಿಂತುಕೊಂಡು ಚಂದ್ರಣ್ಣ ಆ ದೃಶ್ಯವನ್ನು ಕಳವಳದಿಂದ ನಿರುಕಿಸುತ್ತಿದ್ದ. ಈಗ ಆ ಮಹಾ ಗಲಭೆಯಲ್ಲಿ ತಾನೇನನ್ನು ಮಾಡಲು ಸಾಧ್ಯವಿಲ್ಲ. ತಾನು ಕೂಗಿಕೊಂಡರೂ ಆ ಧ್ವನಿ ಜನಕ್ಕೆ ಕೇಳಿಸಲಾರದು. ಕೇಳಿಸಿದರೂ ಉದ್ರೇಕಿತರಾದ ಆ ಜನ ಹೊಡೆದಾಟವನ್ನು ನಿಲ್ಲಿಸಲಾರರು. ಕೂಲಿಕಾರ ಚಳವಳಿಗೆ ಬಂದೊದಗಿದ ಈ ದುರ್ಗತಿಯನ್ನು ಕುರಿತು ಕಳವಳಗೊಳ್ಳುತ್ತ ಆತ ನಿಂತುಕೊಂಡಿದ್ದ ಹಾಗೆ ಎಲ್ಲಿಂದಲೋ ಲಾಠಿಧಾರಿಗಳ ತಂಡವೊಂದು ಕೂಲಿಕಾರರ ಗುಂಪಿಗೆ ನುಗ್ಗಿ ಲಾಠಿ ಬೀಸುವುದು ಕಂಡುಬಂದಿತು. ಒಡನೆಯೆ ಹೆಂಗಸರು ಆಕ್ರೋಶ ಮಾಡುತ್ತ ಬೀದಿಗೆ ಧಾವಿಸಿದರು ಚಿಕ್ಕ ಮಕ್ಕಳು ಏಟು ತಿಂದು ಆರ್ತನಾದ ಮಾಡತೊಡಗಿದರು. ಮಲ್ಲೇಶಿ, ಇಬ್ರಾಹೀಮ್, ನಾಗೋಜಿ ಮೊದಲಾದವರಿಗೆಲ್ಲ ಪೂರಾ ಏಟು ಬಿದ್ದಿತು. ನಾಗಮ್ಮ ಮಾತ್ರ ಮಹಿಳೆಯರ ಗುಂಪಿನಲ್ಲಿ ಮಾಯವಾದ ಹಾಗಿದ್ದಿತು.

ಮೂರು ನಾಲ್ಕು ನಿಮಿಷಗಳವರೆಗೆ ಗಲಭೆ ನಡೆದೇ ಇತ್ತು. ಅಷ್ಟರೊಳಗಾಗಿ ಎರಡು ಪೋಲೀಸ್ ಲಾರಿಗಳು ಸಭೆಯ ಸ್ಥಳಕ್ಕೆ ಆಗಮಿಸಿದುವು. ಲಾಠಿ ಹಿಡಿದ ಜರನ್ನು ಥಳಿಸುತ್ತಿದ್ದ ಲಾಠಿದಾರಿಗಳು ಒಬ್ಬೊಬ್ಬರಾಗಿ ನುಸುಳಿಕೊಂಡು ಪಲಾಯನ ಹೇಳಿಸಿದರು. ಕೂಲಿಕಾರರೂ ಅಲ್ಲಿಂದ ಕಾಲ್ದೆಗೆದು ನಗರದ ಕಡೆಗೆ ಓಡತೊಡಗಿದರು.

ಗಲಭೆ ನಿಂತುಹೋಯಿತು. ಪೆಟ್ಟು ತಿಂದು ನರಳುತ್ತಿದ್ದ ಹತ್ತು ಹದಿನೈದು ಜನರನ್ನು ಲಾರಿಗಳಿಗೆ ತುಂಬಿ ಪೊಲೀಸರೂ ಹೊರಟು ನಡೆದರು.

ರತ್ನಮ್ಮನ ಗಾಯಕ್ಕೆ ತನ್ನ ಕರವಸ್ತ್ರದಿಂದ ಪಟ್ಟಿ ಕಟ್ಟಿ ಆಕೆಯನ್ನು ಕರೆದುಕೊಂಡು ಹೊರಟಿದ್ದ ಹಾಗೆ, ದೂರದಲ್ಲಿ ನಿಂತ ಗಿರಣಿಯ ಅಧಿಕಾರಿಗಳ ಮುಖಗಳ ಮೇಲೆ ಸಂತೋಷದಿಂದ ನಗೆ ಮೂಡಿದುದನ್ನು ಕಾಣದಿರಲಿಲ್ಲ ಚಂದ್ರಣ್ಣ.

''ನೋಡಿದೆಯಾ ರತ್ನಾ! ಈ ಬಡಿದಾಟದಿಂದ ಯಾರಿಗಾದರೂ ಉಪಯೋಗವಾಗಿದ್ದರೆ ಅದು ಈ ಜನಕ್ಕೆ! ಹೇಗೆ ಆನಂದದಿಂದ ಕುಲುಕುಲು ನಗುತ್ತಿದ್ದಾರೆ!''

''ಬಡಿದಾಟವಾದೀತೆಂದು ಯಾರು ತಿಳಿದಿದ್ದರು ಹೇಳಿ. ಆ ನಾರಾಯಣ ನಡುವೆ ಎದ್ದುದರಿಂದಲೇ ಇಷ್ಟೆಲ್ಲ ದುರಂತವಾಯಿತು.''

''ನಾರಾಯಣ ಎದ್ದುದರಿಂದ ಗಲಭೆಯಾಗಬೇಕಾದ ಅಗತ್ಯವೇನಿತ್ತು? ಆತ ಹೇಳುವುದನ್ನು ಶಾಂತವಾಗಿ ಕೇಳಿಕೊಳ್ಳುವ ಗುಣ ಕಮ್ಯೂನಿಸ್ಟರಲ್ಲಿದ್ದಿದ್ದರೆ ಗೊಂದಲ ವಾಗುತ್ತಿರಲಿಲ್ಲ. ಸೋಶಲಿಸ್ಟರು ಹೇಡಿಗಳು, ಬೃಹನ್ನಳೆಗಳು ಎಂದು ಆ ಮಲ್ಲೇಶಿ ಅನ್ನದಿದ್ದರೆ ಕೈ ಕೈ ಹತ್ತುವ ಪ್ರಸಂಗ ಬರುತ್ತಿರಲಿಲ್ಲ.''

''ನೀವು ಹೇಳೋದೂ ನಿಜ. ಮಲ್ಲೇಶಿ ಹಾಗನ್ನಬಾರದಾಗಿತ್ತು. ಆದರೇನು ಮಾಡೋದು! ಹುಡುಗ ಇನ್ನೂ ಅನನುಭವಿಕ. ಸಿಟ್ಟಿನ ಭರದಲ್ಲಿ ಅಂದಿರಬೇಕು?''

''ಸಿಟ್ಟು ಅಲ್ಲ ಅದು. ಕಮ್ಯೂನಿಸ್ಟರ ರೀತಿಯೇ ಹಾಗೆ!''

ಚಂದ್ರಣ್ಣ ರತ್ನಮ್ಮ ಇಬ್ಬರೂ ಹೊರಳಿ ನೋಡಿದರು. ಆ ಮಾತನಾಡಿದವ ನಾರಾಯಣಮೂರ್ತಿ. ಹೇಮಾದ್ರಿಯೂ ಇನ್ನೂ ಐದಾರೂ ಜನರೂ ಆತನೊಂದಿಗೆ ಬರುತ್ತಿದ್ದರು. ಅವರಲ್ಲಿ ಯಾರಿಗೂ ಪೆಟ್ಟು ಬಿದ್ದಂತಿರಲಿಲ್ಲ.

''ನೀವು ತಪ್ಪಿಸಿಕೊಂಡಂತೆ ಕಾಣುತ್ತಲ್ಲ ನಾರಾಯಣಮೂರ್ತಿ!'' ಎಂದ ಚಂದ್ರಣ್ಣ.

ನಾರಾಯಣ ಅದಕ್ಕೆ ಉತ್ತರವೀಯುವುದರೊಳಗಾಗಿ ಹೇಮಾದ್ರಿ ನಗುತ್ತ ನುಡಿದ : ''ಅವನೇನ್ರಿ, ಇಂಥದರಲ್ಲೆಲ್ಲ ಎಕ್ಸ್‌ಪರ್ಟ್. ಇಂಥ ಎಷ್ಟೋ ಹೊಡೆದಾಟ ಗಳಲ್ಲಿ ಸಿಕ್ಕರೂ ತಲೆಯುಳಿಸಿಕೊಂಡು ಬಂದಿದ್ದಾನೆ!''

ಎಲ್ಲರೂ ನಕ್ಕರು. ರತ್ನಮ್ಮ ಮಾತ್ರ ನಗಲಿಲ್ಲ. ದೃಷ್ಟಿಯನ್ನು ಕೆಳಕ್ಕೆ ಬಿಟ್ಟು ಮೌನವಾಗಿ ದಾರಿ ತುಳಿಯುತ್ತಿದ್ದಳು. ಸೋಶಲಿಸ್ಟರನ್ನು ಕುರಿತು ಮಲ್ಲೇಶಿಯೆಂದ ಮಾತು ಆಕೆಗೆ ನೆನಪಾಯಿತು. ''ಹೇಡಿಗಳು! ಬೃಹನ್ನಳೆಗಳು!'' ಜಗಳ ಹಚ್ಚಿ ಪಾರಾಗಿ ಬಂದ ನಾರಾಯಣನನ್ನು ಕಂಡಾಗ ಮಲ್ಲೇಶಿಯ ಆ ಮಾತಿನಲ್ಲಿ ತಥ್ಯಾಂಶವಿದೆ ಯೆಂದು ಆಕೆಗನ್ನಿಸದಿರಲಿಲ್ಲ.

''ನಮ್ಮನ್ನು ಥಳಿಸಲೆಂದೇ ಆ ಲಾಠೀಧಾರಿಗಳಿಗೆ ಹೆಂಡ ಕುಡಿಸಿಬಿಟ್ಟಿಂತಿತ್ತು ಕಮ್ಯೂನಿಸ್ಟರು. ಆದರೂ ನಾವು ಪಾರಾದೆವು,'' ಎಂದು ನಗುತ್ತ ಹೇಳಿದ ನಾರಾಯಣ.

''ನಿಮ್ಮ ಕಲ್ಪನೆ ತಪ್ಪು ನಾರಾಯಣ!'' ಎಂದ ಚಂದ್ರಣ್ಣ. ''ಲಾಠಿ ಹಿಡಿದು ಕೊಂಡು ನುಗ್ಗಿದರಲ್ಲ – ಆ ಪುಂಡರು ಕಮ್ಯೂನಿಸ್ಟರ ಕಡೆಯವರೆಂದು ನಿಮ್ಮ ತಿಳುವಳಿಕೆಯೋ ಹೇಗೆ?''

''ಮತ್ತೆ? ಇನ್ನಾರು ಅಂಥ ಪುಂಡತನ ಮಾಡಿಸುವವರು?''

''ಸೆಟ್ಟರೇ ಅವರಿಗೆ ಹೆಂಡ ಕುಡಿಸಿ ಗಲಭೆ ಮಾಡಲು ಬಿಟ್ಟಿರಬಾರದೇಕೆ? ಎಲ್ಲ ಕಡೆಗೂ ಹೀಗೆ ನಡೆಯುವುದುಂಟು. ಅಲ್ಲದೆ ಇನ್ನೂ ಒಂದು ವಿಷಯ ನೀವು ಮರೆಯಬಾರದು. ಆ ಕುಡುಕರು ಬಂದು ನಿಮ್ಮನ್ನು ಹೊಡೆಯಲಿಲ್ಲ–ಕಮ್ಯೂನಿಸ್ಟರನ್ನು ಥಳಿಸಿದರು. ಪಾಪ, ಆ ಹುಡುಗ ಮಲ್ಲೇಶಿಗೆ ಬೆನ್ನಿನ ಮೇಲೆಲ್ಲ ಬಲವಾದ ಏಟು ಬಿದ್ದವು. ಇಬ್ರಾಹೀಮ್, ನಾಗೋಜಿ ಮುಂತಾದವರಿಗೂ ಪೂರಾ ಹೊಡೆತ ಬಿತ್ತು.''

''ಇರಬಹುದು, ನಾನು ನೋಡಲಿಲ್ಲ.''

ಇದುವರೆಗೆ ಮೌನವಾಗಿ ಹೆಜ್ಜೆ ಹಾಕುತ್ತಿದ್ದ ರತ್ನಮ್ಮ ಇನ್ನು ಸುಮ್ಮನಿರಲಾರದೆ – ''ಹೊಡೆದಾಟಕ್ಕಾರಂಭವಾದೊಡನೆ ಓಡಿಹೋಗಿ ದೂರ ನಿಂತವರಿಗೆ ಹೇಗೆ ಕಾಣಿಸಬೇಕು ಅದೆಲ್ಲಾ?'' ಎಂದಳು. ಆಕೆಯ ಧ್ವನಿಯಲ್ಲಿ ತಿರಸ್ಕಾರ ತುಂಬಿಬಂದಿತ್ತು.

ನಾರಾಯಣ ಆಕೆಯನ್ನು ಕುತೂಹಲದಿಂದ ನಿಟ್ಟಿಸುತ್ತ – ''ಯಾರೀಕೆ ಚಂದ್ರಣ್ಣ? ಈ ಕಮ್ಯೂನಿಸ್ಟರ ಪೈಕಿ ಒಬ್ಬಳೋ ಏನು!'' ಎಂದು ಕೇಳಿದ.

''ನೀವು ಮಾತನಾಡುವಾಗ ಬಾವುಟ ಹಿಡಿದು ನಿಂತಿದ್ದಳಲ್ಲ – ಈಕೆಯೆ. ಸೋಮಣ್ಣ ಅಂತ ಇಲ್ಲವೆ, ಕೈ ಕಳಕೊಂಡು ಹಾಸಿಗೆ ಹಿಡಿದಿರುವರಲ್ಲ – ಅವರ ತಂಗಿ ರತ್ನಮ್ಮ.''

''ಓ! ಸೋಮಣ್ಣನ ತಂಗಿಯೆ? ಅಂತೆಯೆ ಇಷ್ಟು ಜೋರು ಅಂತ ಕಾಣುತ್ತೆ!'' ಎಂದು ನಗುತ್ತ ನುಡಿದು ನಾರಾಯಣನೆಂದ : ''ಸೋಮಣ್ಣ ಏನು ಕಮ್ಯೂನಿಸ್ಟ್ ಅಲ್ಲವಲ್ಲ? ಈಕೆ ಎಂದಿನಿಂದ ಕಮ್ಯೂನಿಸ್ಟ್ ಆದಳು?''

ರತ್ನಮ್ಮ ಹಿಂದಿರುಗಿ ಆತನನ್ನೊಮ್ಮೆ ತೀಕ್ಷ್ಣವಾಗಿ ದಿಟ್ಟಿಸಿನೋಡಿ – ''ನಮ್ಮಣ್ಣ ಸಾಯುತ್ತ ಬಿದ್ದರೂ ನಿಮ್ಮಂಥವರೆಲ್ಲ ಆತನನ್ನು ನಿರ್ಲಕ್ಷಿಸಿ ದೂರವಿದ್ದಾಗಿನಿಂದ!'' ಎಂದಳು.

ನಾರಾಯಣನ ಬಾಯಿ ಕಟ್ಟಿದಂತಾಯಿತು. ಕೊಂಚ ಹೊತ್ತು ಎಲ್ಲರೂ ಮೌನವಾಗಿ ದಾರಿ ತುಳಿಯುತ್ತಿದ್ದರು. ನಾಲ್ಕೈದು ನಿಮಿಷ ಕಳೆದ ತರುವಾಯ ಹೇಮಾದ್ರಿಯೆಂದ : ''ನಿಮ್ಮಣ್ಣ ಸೋಶಲಿಸ್ಟ್ ಪಾರ್ಟಿಗೆ ಸೇರಿಕೊಂಡಿದ್ದರೆ ನಾನು ಆತನ ಪರವಾಗಿ ಹೋರಾಡಬಹುದಿತ್ತು. ಸೆಟ್ಟರ ಮೇಲೆ ಮೊಕದ್ದಮೆ ಹೂಡಿ ಹಣವನ್ನೂ ದೊರಕಿಸಿ ಕೊಡಬಹುದಿತ್ತು!''

''ಯಾವ ಪಾರ್ಟಿಗೂ ಸೇರುವ ಮನಸ್ಸು ಆತನಿಗಿಲ್ಲ. ನೀವು – ಸೋಶಲಿಸ್ಟರು ಕಮ್ಯೂನಿಸ್ಟರು ಹೀಗೇ ಕಚ್ಚಾಡುತ್ತಾ ಇರಿ. ನಿಮ್ಮ ಜಗಳದಲ್ಲಿ ನಮ್ಮಣ್ಣನಂಥವರು ನರಳಿ – ನರಳಿ ಸತ್ತು ಹೋಗಲಿ!'' ಎಂದಳು ರತ್ನಮ್ಮ.

ಹೇಮಾದ್ರಿ ಮುಂದೆ ಮಾತನಾಡಲಿಲ್ಲ. ಅವರೊಡನೆ ಬರುತ್ತಿದ್ದ ಕೂಲಿಕಾರ ನೊಬ್ಬ ದನಿಯೆತ್ತಿದ : ''ಹಾಗಂದರೆ! ನೀನೂ ಕಮ್ಯೂನಿಸ್ಟರ ಕಡೆ ಇಲ್ಲ ಆದಂತಾಯಿತಲ್ಲ?''

''ಬಡವರಿಗಾಗಿ ಯಾರು ದುಡಿಯುವರೋ ಅವರ ಕಡೆಗಿರುವವರು ನಾವು. ನಮಗೆ ಕಮ್ಯೂನಿಸ್ಟರೂ ಅಷ್ಟೆ ಸೋಶಲಿಸ್ಟರೂ ಅಷ್ಟೆ''

ಸಮಸ್ತ ಕೂಲಿಕಾರ ವರ್ಗದ ಅಭಿಪ್ರಾಯವನ್ನೇ ಹೇಳಿದ ಹಾಗಿದ್ದಿತು ರತ್ನಮ್ಮ. ಎಂಥ ಮುತ್ತಿನಂಥ ಮಾತಾಡಿದಳು ರತ್ನಾ – ಎಂದುಕೊಂಡ ಚಂದ್ರಣ್ಣ.

''ಈಗಲೂ ನಾನು ಹೇಳುತ್ತೇನೆ ಚಂದ್ರಣ್ಣ, ಸೋಮಣ್ಣ ನಮ್ಮೊಂದಿಗೆ ಕೂಡಿಕೊಳ್ಳಲು ಸಿದ್ಧನಿದ್ದರೆ ನಾಳೆಯೆ ಸೆಟ್ಟರ ಮೇಲೆ ಮೊಕದ್ದಮೆ ಹೂಡಿಸುತ್ತೇನೆ,'' ಎಂದ ಹೇಮಾದ್ರಿ.

''ಅದರ ಅಗತ್ಯವೇನೂ ಇಲ್ಲ. ಅಣ್ಣನಿಗಾಗಲಿ ನಮಗಾಗಲಿ ಆ ಹಣದ ಬಗ್ಗೆ ಯಾವ ಆಸೆಯೂ ಉಳಿದಿಲ್ಲ. ಸೆಟ್ಟರೂ ನಿಮ್ಮಂತೆಯೆ ಹೇಳಿದರು. ಸಂಘಕ್ಕೆ

ರಾಜೀನಾಮೆ ಕೊಟ್ಟು ಕಮ್ಯೂನಿಸ್ಟರ ಸಹವಾಸ ಬಿಟ್ಟು ಬಂದರೆ ಸಾವಿರ ರೂಪಾಯಿ ಎಣಿಸಿಕೊಡುವುದಾಗಿ ಒಪ್ಪಿಕೊಂಡರು,'' ಎಂದಳು ರತ್ನಮ್ಮ.

''ಸಂಘಕ್ಕೆ ರಾಜೀನಾಮೆ ಕೊಡುವ ಅಗತ್ಯವೇನೂ ಇಲ್ಲ. ಇನ್ನು ಸಂಘ ನಮ್ಮ ಕೈಗೇ ಬಂದ ಹಾಗೆ. ಕಮ್ಯೂನಿಸ್ಟರ ಸಹವಾಸವನ್ನು ಮಾತ್ರ ಬಿಡಲೇಬೇಕಾಗುವುದು. ಏಕೆಂದರೆ ಇನ್ನು ಅವರಿಗಿಲ್ಲಿ ಉಳಿಗಾಲವಿಲ್ಲ. ಇವೊತ್ತು ಅವರ ಸೊಕ್ಕು ಪೂರಾ ಇಳಿದು ಹೋಯಿತು.''

''ಹಾಗೆ ತಿಳಿಯಬೇಡಿ ಹೇಮಾದ್ರಿ. ಇಂಥದಕ್ಕೆಲ್ಲ ಸೊಪ್ಪು ಹಾಕುವವರಲ್ಲ ಕಮ್ಯೂನಿಸ್ಟರು. ದಬ್ಬಾಳಿಕೆಯಿಂದ ಅವರನ್ನು ಸದೆಬಡಿಯಲು ಸಾಧ್ಯವೇ ಇಲ್ಲ'' ಎಂದ ಚಂದ್ರಣ್ಣ.

''ಇನ್ನೇನುಳಿದಂತಾಯಿತು ಹೇಳಿ. ಶಂಕರನನ್ನಂತೂ ನಿನ್ನೆಯೆ ಹಿಡಿದೊಯ್ದರು. ಇವೊತ್ತು ಹತ್ತು ಹದಿನೈದು ಮಂದಿಯನ್ನು ಬಂಧಿಸಿದರು. ಮುಖ್ಯ ಮುಖ್ಯ ಕಮ್ಯೂನಿಸ್ಟರನ್ನೆಲ್ಲ ಹಿಡಿದಂತಾಯಿತು. ದುರುಗುಪ್ಪನೊಬ್ಬ ತಲೆ ತಪ್ಪಿಸಿಕೊಂಡಿದ್ದಾರೆ. ಆದರೆ ಇಂಥ ಪರಿಸ್ಥಿತಿಯಲ್ಲಿ ಆತನ ಆಟ ಏನೂ ನಡೆಯುವಂತಿಲ್ಲ. ಇಂದೋ ನಾಳೆಯೊ ಆತನು ಸಿಕ್ಕಿಬೀಳಬಹುದು. ದೇಶ ಎಲ್ಲ ಪ್ರಾಂತಗಳಲ್ಲೂ ಕಮ್ಯೂನಿಸ್ಟರ ವಿರುದ್ಧ ಕ್ರಮ ತೆಗೆದುಕೊಳ್ಳುತ್ತಿವೆ ಸರಕಾರಗಳು. ಇನ್ನು ಅವರ ಆಟವೇನೂ ನಡೆಯಲಾರದು. ಧರ್ಮಪುರದ ಮಟ್ಟಿಗಂತೂ ಕಮ್ಯೂನಿಸ್ಟರ ಸಮಾಧಿ ಯಾದಂತೆಯೆ!'' ಎಂದ ಹೇಮಾದ್ರಿ.

ಆ ಮಾತು ಹಾಸ್ಯಾಸ್ಪದವಾದುದೆನ್ನಿಸದಿರಲಿಲ್ಲ ಚಂದ್ರಣ್ಣನಿಗೆ. ಧರ್ಮಪುರ ದಲ್ಲಿ ಬೇರು ಬಿಟ್ಟು ಸಂದಿಗೊಂದಿಗಳಲ್ಲೂ ಹರಡಿದ ಕಮ್ಯೂನಿಸ್ಟ್ ಸಂಘಟನೆಯ ವಿಷಯದಲ್ಲಿ ಹೇಮಾದ್ರಿಗೆ ಸರಿಯಾದ ತಿಳುವಳಿಕೆಯಿಲ್ಲದಿರುವುದು ಸ್ಪಷ್ಟವಾಗಿದ್ದಿತು. ಕಮ್ಯೂನಿಸ್ಟ್ ಪಾರ್ಟಿಗಾಗಿ ತವರೂರನ್ನೂ ತಂದೆ ತಾಯಿಗಳನ್ನೂ ತ್ಯಜಿಸಿ ಬಂದು ಹಗಲು ರಾತ್ರಿ ದುಡಿಯುತ್ತಿರುವ ಸರೋಜಾ, ತನ್ನ ಸಂಪಾದನೆಯಲ್ಲಿ ಅರ್ಧ ಭಾಗವನ್ನು ಕೊಡುವುದಲ್ಲದೆ ರಾತ್ರಿಯೆಲ್ಲ ನಿದ್ದೆಗೆಟ್ಟು ಪಾರ್ಟಿಯ ಕೆಲಸ ಮಾಡುವ ನಾಗಮ್ಮ, ಹಗಲಿನ ಹನ್ನೆರಡು ತಾಸು ಹೋಟಲಿನ ಜೀವ ತೇಯ್ದು ರಾತ್ರಿ ಕರಪತ್ರಗಳನ್ನಂಟಿಸಲು ಬರುವ ಹೋಟಲು ಮಾಣಿಗಳು – ಇವರು, ಇವರಂಥ ಸ್ತ್ರೀ ಪುರುಷರು ಧರ್ಮಪುರದಲ್ಲಿರುವವರೆಗೆ ಕಮ್ಯೂನಿಸ್ಟ್ ಪಾರ್ಟಿ ಪ್ರಭಾವಶಾಲಿ ಯಾಗಿಯೆ ಇರುವುದು. ಶಂಕರ, ದುರುಗಪ್ಪ ಇಬ್ರಾಹೀಮರಂಥ ಕೆಲವರನ್ನು ಹಿಡಿದು

ಸೆರೆಮನೆಗೆ ಸಾಗಿಸಿದ ಮಾತ್ರಕ್ಕೆ ಆ ಚಳವಳಿ ಸಾಯಲಾರದು. ಸರೋಜಳಂಥ ಧ್ಯೇಯವಾದಿಗಳು, ಸಾವಿತ್ರಿಯಂಥ ನೊಂದಜೀವಿಗಳು, ನಾಗಮ್ಮನಂಥ ಕಷ್ಟಜೀವಿಗಳು ಇರುವವರೆಗೆ ಅಳಿಗಾಲವಲ್ಲಿಲ್ಲ ಈ ಚಳವಳಿಗೆ. ನೊಂದ ಜೀವಿಗಳಲ್ಲಿ ಕಂಬನಿಗಳನ್ನು ಕುಡಿದು ಬೆಳೆಯುವುದು ಈ ಚಳವಳಿ. ಅತೃಪ್ತ ಜೀವಿಗಳ ಬಿಸಿಯುಸಿರಲ್ಲಿ ಅರಳುವುದು ಈ ಚಳವಳಿ. ಶೋಷಿತ ಜನತೆಯ ಮೂಕರೋದನದಲ್ಲಿ ಮಾರ್ದನಿಗೊಳ್ಳುವುದು ಈ ಚಳವಳಿ. ಈ ಎಲ್ಲ ಅನ್ಯಾಯಗಳನ್ನೂ ದೂರಗೊಳಿಸಿದ ಕಮ್ಯೂನಿಸ್ಟ್ ಚಳವಳಿಯನ್ನು ಸದೆಬಡಿಯಲೆತ್ನಿಸುವುದೆಂದರೆ ವ್ಯರ್ಥ ಪ್ರಯತ್ನ. ನಾಲ್ಕು ಜನ ಕಮ್ಯೂನಿಸ್ಟರನ್ನು ಹೊಡೆದು ಬಡಿದು ಸೆರೆಮನೆಗೆ ದೂಡುವುದರಿಂದ ಚಳವಳಿಗೆ ಬಲ ಬರುವುದೇ ವಿನಾ ಅವರ ಸದ್ದಡಗಲಾರದು – ಎನ್ನಿಸಿತು ಚಂದ್ರಣ್ಣನಿಗೆ.

''ಕಮ್ಯೂನಿಸ್ಟರ ಸಮಾಧಿ ಮಾಡುವುದು ಸುಲಭದ ಕೆಲಸವಲ್ಲ ಹೇಮಾದ್ರಿ. ಈ ಬಂಡವಾಳಗಾರರಿಗೆ ಧನ ಮದ, ಲಾಭದಾಸೆ. ಸರಕಾರ ಅವರ ಕೈಗೊಂಬೆಯಾಗಿ ಕುಣಿಯುತ್ತಿದೆ. ಬಡಜನಗಳ ಗೋಳು ತಪ್ಪುತ್ತಿಲ್ಲ.''

''ಸರಕಾರಕ್ಕೆ ವಿವೇಕವಿಲ್ಲವಾದರೆ ಕಮ್ಯೂನಿಸ್ಟರಿಗಾದರೂ ಇರಬೇಡವೆ? ಅವರೂ ಒರಟುತನದಿಂದ ವರ್ತಿಸುತ್ತ ಕೂಲಿಕಾರ ಚಳವಳಿಯನ್ನು ಹಾಳು ಮಾಡುತ್ತಿದ್ದಾರೆ. ಇನ್ನು ಮೇಲೆ ಈ ಊರಿನಲ್ಲಂತೂ ಅವರು ಕಾಲೂರಿ ನಿಲ್ಲುವಂತಿಲ್ಲ, ಸಂಘ ನಮ್ಮ ಕೈಗೆ ಬರುತ್ತದೆ. ಕೂಲಿಕಾರರಿಗೆ ಕಲ್ಯಾಣವಾಗುತ್ತದೆ.''

''ನಿಮ್ಮ ಕೈಗೆ ಸಂಘ? ಅಂದರೆ?''

''ಸೋಶಲಿಸ್ಟ್ ಪಾರ್ಟಿಯ ಕೈಗೆ. ಇನ್ನೊಂದು ತಿಂಗಳಲ್ಲಿ ಹೊಸ ಆಯ್ಕೆಯಾಗುವುದಿದೆ. ಆಗ ನಮ್ಮ ಜನರೇ ಆರಿಸಿ ಬರುವುದು ಖಂಡಿತ.''

''ಈಗ ಕಮ್ಯೂನಿಸ್ಟರಿಗೊದಗಿದ ಗತಿಯೆ ನಾಳೆ ನಿಮಗೂ ಒದಗಲಿಕ್ಕಿಲ್ಲವೆಂದು ಹೇಗೆ ಹೇಳುವಿರಿ?''

''ನಮ್ಮನ್ನು ಕೆಣಕುವ ಎದೆ ಎಲ್ಲಿಂದ ಬಂದೀತು ಆ ಸೆಟ್ಟಿಗೆ? ಹಾಗೇನಾದರೂ ಆತ ಬಾಲ ಬಿಚ್ಚಿದರೆ ಆತನ ಆಯುಷ್ಯದಲ್ಲೇ ಎಂದೂ ದೊರೆತಿರದಂಥ ಪಾಠ ಕಲಿಸಿಕೊಡುತ್ತೇವೆ.''

''ಅದುವರೆಗೆ ಅವರೂ ನೀವೂ ಒಂದಾಗಿ ಕಮ್ಯೂನಿಸ್ಟರನ್ನು ತುಳಿಯುವಿರಲ್ಲವೆ?'' ಎಂದು ಕಟುದನಿಯಲ್ಲಿ ನುಡಿದಳು ರತ್ನಮ್ಮ.

''ಅವರೂ ಇವರೂ ಅಂದರೆ?'' ಎಂದು ವಿಸ್ಮಯಗೊಂಡು ಕೇಳಿದ ಚಂದ್ರಣ್ಣ.

''ಸೆಟ್ಟರೂ ಸೋಶಲಿಸ್ಟರೂ.''

''ನಿಜವೆ ಹೇಮಾದ್ರಿ ಈ ವಿಷಯ.''

ಹೇಮಾದ್ರಿ ಕೂಡಲೆ ಉತ್ತರವೀಯಲಿಲ್ಲ. ಕೊಂಚ ಹೊತ್ತು ಸುಮ್ಮನಿದ್ದು ಆತ ನೆಂದ:''ಇದು ರಾಜಕಾರಣ ಚಂದ್ರಣ್ಣ. ಉಪಾಯವಾಗಿ ಕೆಲಸ ಮಾಡಬೇಕಾಗುತ್ತೆ.''

''ರಾಜಕಾರಣ ಅಂದರೆ ಬಡವರ ಚಳವಳಿಗೆ ದ್ರೋಹ ಮಾಡುವುದೇನು? ಬಂಡವಾಳಗಾರರೊಂದಿಗೆ ಸೇರಿಕೊಂಡು!'' ಎಂದು ತಿರಸ್ಕಾರದಿಂದ ನುಡಿದು ರತ್ನಮ್ಮ ಬಿರಬಿರನೆ ಹೆಜ್ಜೆ ಹಾಕಲಾರಂಭಿಸಿದಳು.

ಹೇಮಾದ್ರಿಯ ಮನೆ ಬಂದುದರಿಂದ ಆತನೂ, ಆತನ ಜೊತೆಗಾರರೂ ಆ ಕಡೆಗೆ ತಿರುಗಿದರು. ಚಂದ್ರಣ್ಣನ ದೃಷ್ಟಿ ಸಹಜವಾಗಿಯೆ ಅತ್ತ ಹೊರಳಿತು. ಹೇಮಾದ್ರಿಯ ಮನೆಯೆದುರಿಗೆ ದೊಡ್ಡ ಮೋಟಾರು ಕಾರೊಂದು ನಿಂತ ಹಾಗಿದ್ದಿತು. ದೂರದಿಂದ ಸಹ ಅದನ್ನು ಗುರುತಿಸದಿರಲಿಲ್ಲ ಚಂದ್ರಣ್ಣ. ಅಂದು ಸದಾಶಿವಪ್ಪ ತನ್ನನ್ನು ಕರೆದುತಂದ ಕಾರು ಅದೇ ಎನ್ನುವುದರಲ್ಲಿ ಯಾವ ಸಂಶಯವೂ ಇರಲಿಲ್ಲ.

''ಸೆಟ್ಟರ ಕಾರು ಹೇಮಾದ್ರಿಯ ಮನೆ ಮುಂದಿದೆ ನೋಡು ರತ್ನಾ. ನೀ ಹೇಳಿದ ಮಾತು ನಿಜವೆಂದೇ ತೋರುತ್ತೆ!''

''ಬಹಳ ದಿನಗಳಿಂದ ನಡೆದಿದೆ ಈ ಕಾರಸ್ಥಾನ. ನಮಗೆಲ್ಲವೂ ಗೊತ್ತು. ಕಮ್ಯೂನಿಸ್ಟರನ್ನು ಹೇಗಾದರೂ ಮಾಡಿ ಮಟ್ಟ ಹಾಕಬೇಕಾಗಿದೆ ಸೆಟ್ಟರಿಗೆ. ಅದಕ್ಕಾಗಿ ಏನು ಬೇಕೋ ಎಲ್ಲವನ್ನೂ ಮಾಡುತ್ತಿದ್ದಾರೆ. ಪೊಲೀಸರ ಸಹಾಯ ಪಡೆದದ್ದಾಯಿತು, ಕಾಂಗ್ರೆಸ್ಸಿನವರ ಸಹಾಯ ಪಡೆದದ್ದಾಯಿತು – ಈಗ ಈ ಸೋಶಲಿಸ್ಟರ ಬೆನ್ನು ತಟ್ಟುತ್ತಿದ್ದಾರೆ. ಹೊತ್ತು ಬಂದಾಗ ಕತ್ತೆಯ ಕಾಲು ಹಿಡಿಯಬೇಕಾಗುವುದಂತೆ. ಸೆಟ್ಟರೀಗ ಮಾಡುತ್ತಿರೋದೂ ಅದೇ.''

''ಸೋಶಲಿಸ್ಟರು ಸೆಟ್ಟರೊಂದಿಗೆ ಸೇರಿಕೊಳ್ಳಬಹುದೆಂದು ನನಗೇನೂ ಅನ್ನಿಸಿರಲಿಲ್ಲ. ನಿಜಕ್ಕೂ ವಿಚಿತ್ರ ವಿಷಯವೇ ಇದು!''

''ವಿಚಿತ್ರ ಏನು ಬಂತು? ಅವರೂ ಸಾಹುಕಾರರು. ಇವರೂ ಸಾಹುಕಾರರು.

ಈ ಸೋಶಲಿಸ್ಟ್ ಪಾರ್ಟಿಯ ಹೆಸರು ಬರೀ ನೆಪಕ್ಕಾಗಿ. ದುಡ್ಡಿದ್ದವರೆಲ್ಲ ಯಾವಾಗಲೂ ಒಂದೇ. ಅಂತೇ ಹೇಮಾದ್ರಿ ಸೆಟ್ಟರನ್ನುಳಿಸಿಕೊಳ್ಳಲು ಹೊರಟಿರಬೇಕು.''

''ಇಂಥ ಬುದ್ಧಿವಂತಿಕೆ ಸೆಟ್ಟರಲ್ಲಿ ಎಲ್ಲಿಂದ ಬಂತು ಅನ್ನೋದೆ ಆಶ್ಚರ್ಯ ನನಗೆ. ಇಂಥ ತಂತ್ರಗಳೆಲ್ಲ ಹೇಗೆ ತಿಳಿಯುವವೊ ಅವರಿಗೆ!''

''ಹಣವೊಂದಿದ್ದರೆ ಸಾಕು. ಎಂಥ ಬುದ್ಧಿವಂತಿಕೆಯನ್ನೂ ಕೊಳ್ಳಬಹುದಲ್ಲ? ಈ ತಂತ್ರಗಳನ್ನೆಲ್ಲ ಸೆಟ್ಟರಿಗೆ ಹೇಳಿಕೊಡುವ ವ್ಯಕ್ತಿಯೊಂದಿದೆ – ಲಾಯರ್ ನರಸಿಂಹಯ್ಯ, ನಿಮಗೆ ಗೊತ್ತಿಲ್ಲವೆ?''

''ಓಹೊ! ಸೆಟ್ಟರ ಕಾನೂನು ಸಲಹೆಗಾರರೊ?''

''ಅವರೆ! ಅದೇ ಆಸಾಮಿ ಇಂಥ ಚಂಡಕತನದ ತಂತ್ರಗಳನ್ನೆಲ್ಲ ಹೂಡುತ್ತಿರೋದು! ಅವರ ಸಲಹೆಯಿಲ್ಲದೆ ಸೆಟ್ಟರು ಒಂದು ಹೆಜ್ಜೆಯನ್ನೂ ಎತ್ತಿ ಇಡುವುದಿಲ್ಲ, ಅಣ್ಣನಿಗೆ ಹಣ ಸಿಗದಂತೆ ಮಾಡಿದವನೂ ಈ ನರಸಿಂಹನೆ. ಸಂಘ ವನ್ನೊಡೆದು ಕಮ್ಯೂನಿಸ್ಟರನ್ನು ದುರ್ಬಲಗೊಳಿಸಲು ಆತ ಹೂಡಿದ ಆಟ ಇದು!''

ಆ ದಿನ ರಾತ್ರಿ ಚಂದ್ರಣ್ಣ ಮತ್ತೆ ಸೂಳೆಗೇರಿಯಲ್ಲಿನ ಆ ಮನೆಗೆ ಹೋಗ ಬೇಕಾಯಿತು. ಅಂದು ಬೆಳಗಿನಲ್ಲಿ ನಡೆದ ಘಟನೆಗಳನ್ನೆಲ್ಲ ಕಣ್ಣಾರೆ ಕಂಡು ಕೂಲಿಕಾರರ ಮೇಲಾದ ಅನ್ಯಾಯಗಳನ್ನು ತೀರ ಹತ್ತಿರದಿಂದ ನಿರುಕಿಸಿದ್ದ, ಆತ ಕಚೇರಿಗೆ ಹೋಗಿ ಸುಖವಾಗಿ ನಿದ್ರೆ ಮಾಡುವುದು ಸಾಧ್ಯವಿರಲಿಲ್ಲ.

ರಾತ್ರಿಯ ಊಟ ಮುಗಿಸಿ ಆತ ಆ ಮನೆಗೆ ಬರುವುದರೊಳಗಾಗಿ ಸರೋಜ, ರತ್ನಮ್ಮ, ನಾಗಮ್ಮ ಮೂವರೂ ಬಂದು ಕರಪತ್ರಗಳನ್ನು ಸಿದ್ಧಗೊಳಿಸಲು ಅಣಿಯಾಗು ತ್ತಿದ್ದರು. ಸಾವಿತ್ರಿಯೂ ಅವರಿಗೆ ನೆರವಾಗಲು ಬಂದಿದ್ದಳು.

ಬಾಗಿಲಿನ ಮೇಲೆ ಸದ್ದಾಗುತ್ತಲೂ ರತ್ನಮ್ಮನೇ ಬಂದು ಬಾಗಿಲು ತೆರೆದಳು. ಗೋಡೆಯ ಮಾಡದಲ್ಲಿ ಉರಿಯುತ್ತಿದ್ದ ಹಣತೆಯ ಬೆಳಕು ಚಂದ್ರಣ್ಣನ ಮುಖವನ್ನು ಬೆಳಗಿಸಿದಾಗ ಆಕೆಗೆ ಅಚ್ಚರಿಯಾಗದಿರಲಿಲ್ಲ.

''ಓ! ಚಂದ್ರಣ್ಣ ನೀವು!''

''ಓ! ರತ್ನಮ್ಮ ನಾನೆ!'' ಎಂದು ಹಾಸ್ಯವಾಗಿ ಹೇಳುತ್ತ ಆತ ಹೊಸತಿಲನ್ನು ದಾಟಿ ಬಂದು ಬಾಗಿಲನ್ನು ಭದ್ರಗೊಳಿಸಿ ಒಳಗಿನ ಕೊಠಡಿಗೆ ಬಂದ. ಆತ ಬಂದುದು

ಗೊತ್ತಾಗುತ್ತಲೂ ರತ್ನಮ್ಮನಂತೆ ಇನ್ನುಳಿದವರೂ ಅಚ್ಚರಿಗೊಂಡರು. ಸರೋಜಳ ಮುಖ ಆನಂದದಿಂದ ನಗುತ್ತಿತ್ತು. ನಾಗಮ್ಮ ತನ್ನ ಹರ್ಷವನ್ನು ಹಿಡಿದಿಟ್ಟುಕೊಳ್ಳಲಾರದೆ ಅದನ್ನು ತನ್ನ ಮುಗ್ಧ ನಗೆಯ ಮೂಲಕ ಹೊರಚಿಮ್ಮಿಸುತ್ತಿದ್ದಳು. ಕಾಗದವನ್ನು ಕತ್ತರಿಸುತ್ತಿದ್ದ ಸಾವಿತ್ರಿಯ ಕಣ್ಣುಗಳಲ್ಲಿ ಕೃತಜ್ಞತಾಭಾವ ಒಡಮೂಡಿದಂತೆ ತೋರುತ್ತಿತ್ತು. ಆತ ಕುಳಿತುಕೊಂಡವನೆ ಕಾಗದವನ್ನು ಸೀಸಕಡ್ಡಿಯನ್ನೂ ಕೈಗೆತ್ತಿಕೊಂಡು – ''ಇಂದು ನಾನು ಕರಪತ್ರಕ್ಕೆ ವಿಷಯ ಬರೆಯಬೇಕೆಂದು ಮಾಡಿದ್ದೇನೆ. ಆಗಬಹುದೇ ಸರೋಜಮ್ಮ?'' ಎಂದ.

''ಓ! ತುಂಬ ಸಂತೋಷ. ನಿಮ್ಮಂಥ ಲೇಖಕರಿಂದ ಕರಪತ್ರ ಹೊರಡು ವಂತಾದರೆ ನಮ್ಮ ಭಾಗ್ಯ.''

''ಇಂದು ಬೆಳಗಿನಲ್ಲಿ ನಡೆದ ಅನ್ಯಾಯವನ್ನು ಕಂಡು ಸುಮ್ಮನಿರಲು ಸಾಧ್ಯ ವಿಲ್ಲ ಸರೋಜಮ್ಮ. ಹೃದಯವಿದ್ದವರಾರೂ ಸುಮ್ಮನಿರಲಾರರು. ಮನುಷ್ಯತ್ವವಿದ್ದವ ರಾರೂ ಸುಮ್ಮನಿರಲಾರರು,'' ಎಂದು ಹೇಳುತ್ತ ಆತ ಬರೆಯತೊಡಗಿದ. ನಾಗಮ್ಮ ಸಡಗರದಿಂದ ಎದ್ದು ಮೂಲೆಯಲ್ಲಿಟ್ಟಿದ್ದ 'ಸ್ಟೋ'ವಿಗೆ ಉರಿ ಹಚ್ಚಿ ಚಹಾಕ್ಕೆ ಎಸರಿಟ್ಟಳು.

ಎಂಟು ಹತ್ತು ನಿಮಿಷಗಳ ಕಾಲ ಚಂದ್ರಣ್ಣ ಬರೆಯುವುದರಲ್ಲಿ ತಲ್ಲೀನ ನಾಗಿದ್ದ. ಅಂದು ನಡೆದ ಭಾರಿ ಮೆರವಣಿಗೆ, ಕೆಲಸಕ್ಕೆ ಹೋಗಬೇಕೋ ಬೇಡವೋ ಎಂಬುದನ್ನು ಚರ್ಚಿಸಲು ಕೂಲಿಕಾರರು ಸೇರಿಸಿದ ಸಭೆ, ಅಲ್ಲಿ ಆ ವಿಷಯವಾಗಿ ಭಿನ್ನಾಭಿಪ್ರಾಯ ಬಂದುದು, ಆ ಬಗೆಗೆ ವಾದವಿವಾದ ನಡೆದಿದ್ದಂತೆಯೆ ಮಾಲೀಕರ ಹಸ್ತಕರು ನುಗ್ಗಿ ಲಾಠಿಗಳಿಂದ ಜನರನ್ನು ಥಳಿಸಿದುದು, ಮಲ್ಲೇಶಿ, ಇಬ್ರಾಹೀಮ್, ನಾಗೋಜಿ ಮೊದಲಾದ ಶೂರ ಯುವಕರಿಗೆ ಭಾರಿ ಪೆಟ್ಟು ಬಿದ್ದುದು, ಸೋಶಲಿಸ್ಟರ ದ್ರೋಹ, ಸೆಟ್ಟರೂ ಅವರೂ ಒಂದುಗೂಡಿ ಕೂಲಿಕಾರ ಸಂಘವನ್ನು ಮುರಿಯಲು ಹೊರಟುದು – ಎಲ್ಲವನ್ನೂ ವಿವರಿಸಿ ಯಾವುದಕ್ಕೂ ಕೂಲಿಕಾರರು ಹೆದರಕೂಡ ದೆಂದು ತಿಳಿಸಿ ಕೊನೆಗೆ ಸಂಘದ ಸಮರಗೀತೆಯಾದ 'ಸರ್ವರಿಗೆ ಸಮಬಾಳು' ಎಂಬುದರ ಮೊದಲ ಚರಣಗಳನ್ನೂ ಕೊನೆಯ ಸಾಲುಗಳನ್ನೂ ಉದ್ಧರಿಸಿ ಕೂಲಿಕಾರ ರಲ್ಲಿ ಧೈರ್ಯವನ್ನೂ ಉತ್ಸಾಹವನ್ನೂ ಹುಟ್ಟಿಸಲು ಪ್ರಯತ್ನಿಸಿದ್ದ.

ಆತ ಬರೆದು ಮುಗಿಸುತ್ತಲೂ ಸರೋಜ ಮತ್ತು ರತ್ನಮ್ಮ ಕಾರ್ಬನ್ನಿನಿಂದ ಪ್ರತಿ ತೆಗೆಯುವ ಕೆಲಸಕ್ಕಾರಂಭಿಸಿದರು. ಚಂದ್ರಣ್ಣನೂ ಅದೇ ಕೆಲಸದಲ್ಲಿ ತೊಡಗಿದ. ತಮಗೆ ಬರೆಯಲು ಬರುವುದಿಲ್ಲವಲ್ಲಾ–ಎಂದು ಕಳವಳಗೊಂಡು ಕಾಗದಗಳನ್ನು

ಕತ್ತರಿಸುತ್ತ ಕುಳಿತಿದ್ದರು ಸಾವಿತ್ರಿ ಮತ್ತು ನಾಗಮ್ಮ.

''ನನಗೆ ಸ್ವಲ್ಪವಾದರೂ ಬರೆಯಲು ಬಂದಿದ್ದರೆ ಎಷ್ಟು ಒಳ್ಳೇದಾಗುತ್ತಿತ್ತು ನಾಗೂ. ಇಂಥ ವೇಳೆಯಲ್ಲಿ ಹೇಗೆ ಉಪಯೋಗವಾಗುತ್ತಿತ್ತು!'' ಎಂದಳು ಸಾವಿತ್ರಿ.

''ನನಗೂ ಹಳಹಳಿಯಾಗುತ್ತೆ ಸಾವಿತ್ರಾ. ಈಗ ನೋಡು, ಗಂಡಸರನ್ನೆಲ್ಲ ಒಮ್ಮೆಲೆ ಹಿಡಿದುಬಿಟ್ಟರು. ಈಗ ಉಳಿದಿರುವವರೆಂದರೆ ಇವರಿಬ್ಬರೆ – ಈ ಸರೋಜಕ್ಕ, ರತ್ನಕ್ಕ. ಏನೋ ನಮ್ಮ ಪುಣ್ಯದಿಂದ ಚಂದ್ರಣ್ಣನವರು ಬಂದಿದ್ದಾರೆ. ನಾಳೆ ಇವರನ್ನೂ ಹಿಡಿದರು ಅಂತ ಇಟ್ಟುಕೋ. ಆಮೇಲೆ? ನಮ್ಮ ಕೆಲಸವೆಲ್ಲ ನಿಂತುಹೋಗಬಾರದು. ಯಾವುದು ನಿಂತರೂ ಪ್ರಚಾರ ಕಾರ್ಯ, ಈ ಕರಪತ್ರಗಳ ಕೆಲಸ ಮಾತ್ರ ನಿಲ್ಲಬಾರ ದೆಂದು ಶಂಕರಣ್ಣ ಮತ್ತೆ ಮತ್ತೆ ಹೇಳುತ್ತಿರುತ್ತಾರೆ ನಮಗೆ. ಬಹಳ ಮಹತ್ವದ ಕೆಲಸ ಇದು.''

''ಈಗಲೂ ಓದಲು ಬರೆಯಲು ಕಲಿಯಲೇ ಅಂತ ಒಮ್ಮೊಮ್ಮೆ ಅನ್ನಿಸುತ್ತೆ ನನಗೆ – ಹಾಳಾದ್ದು ವೇಳೆ ಕೂಡಿಬರಲೊಲ್ಲದು. ರಾತ್ರಿಯೆಲ್ಲಾ ಹೊಟ್ಟೆಯ ಪಾಡು – ಹಗಲೆಲ್ಲಾ ನಿದ್ರೆ – ಇದರಲ್ಲೆ ಕಳೆದುಹೋಗುತ್ತಿದೆ,'' ಎಂದು ವಿಷಾದದಿಂದ ನುಡಿದಳು ಸಾವಿತ್ರಿ.

ಎರಡು ಮೂರು ಗಂಟೆ ಕಳೆದಿರಬಹುದು. ಅಷ್ಟು ಹೊತ್ತಿಗೆ ಆ ಮೂವರು ಸೇರಿ ಮುನ್ನೂರು ನಾಲ್ಕುನೂರು ಪ್ರತಿಗಳನ್ನು ತೆಗೆದುದಾಗಿತ್ತು. ಮಧ್ಯರಾತ್ರಿಯ ಹೊತ್ತಿಗೆ ಬಾಗಿಲಿನ ಮೇಲೆ ಸದ್ದಾಗುವುದು ಕೇಳಬಂದಿತು. ನಾಗಮ್ಮ ಎದ್ದು ಹೋಗಿ ಬಾಗಿಲು ತೆರೆದಾಗ ಅವಸರದಿಂದ ಒಳನುಗ್ಗಿದ ವ್ಯಕ್ತಿಯನ್ನು ಕಂಡು – ''ಯಾರು? ನೀವು?'' ಎಂದು ಆಚ್ಚರಿಯಿಂದಲೂ ಆನಂದದಿಂದಲೂ ಆಕೆ ಉದ್ಗಾರ ತೆಗೆಯುತ್ತಿದ್ದ ಹಾಗೆ ಆ ವ್ಯಕ್ತಿ – ''ಶ್ಯೂ! ಬಾಯಿ ಮಾಡಬೇಡ. ಪೊಲೀಸರು ನನ್ನನ್ನು ಹುಡುಕುತ್ತಿರುವ ಹಾಗಿದೆ,'' ಎಂದು ಹೇಳುತ್ತಾ ಬಾಗಿಲನ್ನು ಭದ್ರವಾಗಿ ಮುಚ್ಚಿ ಒಳಗಿನ ಕೊಠಡಿಗೆ ಕಾಲಿಟ್ಟಿತು.

''ಓಹ್ಹೋ! ದುರುಗಪ್ಪ!'' ಎಂದು ಮುಖ ಮೇಲಕ್ಕೆತ್ತಿದಳು ಸರೋಜಾ.

ಚಂದ್ರಣ್ಣನೂ ಬರೆಯುವುದನ್ನು ನಿಲ್ಲಿಸಿ ದುರುಗಪ್ಪನನ್ನೇ ನಿಟ್ಟಿಸತೊಡಗಿದ. ದುಗುರಪ್ಪನಿಗೆ ಮಾತ್ರ ಚಂದ್ರಣ್ಣನನ್ನು ಆ ಸ್ಥಳದಲ್ಲಿ ಕಂಡು ಸಂತೋಷವಾದಂತೆ ತೋರಲಿಲ್ಲ. ಸಂದೇಹಭರಿತ ಸ್ವರದಲ್ಲಿ ಆತನೆಂದ : ''ಇವರು! ಇವರೇಕೆ ಇಲ್ಲಿಗೆ

ಬಂದರು? ಏನು ಮಾಡುತ್ತಿದ್ದಾರೆ?''

ಚಂದ್ರಣ್ಣ ತಬ್ಬಿಬ್ಬಾಗಿ ಸೀಸಕಡ್ಡಿಯನ್ನು ಬೆರಳುಗಳಲ್ಲಿ ಕುಣಿಸುತ್ತ ದುರುಗಪ್ಪನ ಮುಖವನ್ನೇ ಮಿಕಿಮಿಕಿ ನೋಡುತ್ತಿದ್ದ. ದುರುಗಪ್ಪ ಕರಪತ್ರಗಳ ಪ್ರತಿಯೊಂದನ್ನು ಎತ್ತಿಕೊಂಡು ಸರಸರನೆ ಅದರ ಮೇಲೆ ದೃಷ್ಟಿಯನ್ನೋಡಿಸಿದ. ಅನಂತರ ವಿಚಿತ್ರವಾಗಿ ಹಲ್ಲುಕಿರಿಯುತ್ತ – ''ಯಾರು ಬರೆದರು ಇದನ್ನು? ಈ ಸಂಪಾದಕರೋ?'' ಎಂದು ಕೇಳಿದ.

''ಹೌದು. ಅವರೇ ಬರೆದಿದ್ದಾರೆ. ಬೆಳಗಿನಲ್ಲಿ ನಮ್ಮ ಮೇಲೆ ನಡೆದ ಅನ್ಯಾಯ ವನ್ನೆಲ್ಲ ಕಣ್ಣಾರೆ ಕಂಡು ಸುಮ್ಮನಿರಲಾರದೆ ಬರೆದುದು ಅದು. ಸರಿಯಾಗಿಲ್ಲವೆ?'' ಎಂದಳು ರತ್ನಮ್ಮ.

ದುರುಗಪ್ಪ ವಿಲಕ್ಷಣವಾಗಿ ನಗುತ್ತ – ''ಸರಿಯಾಗಿಯೆ ಇರಬೇಕಲ್ಲ, ಇಂಥವರು ಬರೆದ ಮೇಲೆ? ಇವರನ್ನು ಇಲ್ಲಿ ಸೇರಿಸಲು ಯಾರು ಹೇಳಿದರು ನಿಮಗೆ? ಇವರಿಗೊಂದು ಪಕ್ಷವೆ, ಒಂದು ದಡವೆ? ತಮ್ಮಣ್ಣನವರು ಚೇರ್ಮನ್ ಆಗಿರುವ, ಸೆಟ್ಟರು ಷೇರ್ ಹಾಕಿರುವ ಬಂಡವಾಳಶಾಹಿ ಕಂಪನಿಯ ಮ್ಯಾನೇಜಿಂಗ್ ಡೈರೆಕ್ಟರಿವರು. ಸೆಟ್ಟರ ಮಗಳಿಗೂ ಇವರಿಗೂ ಭಾರೀ ನಂಟು. ಯಾವಾಗಲೂ ಅವರ ಕಾರಿನಲ್ಲಿ ಕೂತು ಸುಖವಾಗಿ ತಿರುಗುವವರು. ಆ ಸೋಶಲಿಸ್ಟ್ ದ್ರೋಹಿಗಳೊಂದಿಗೂ ಇವರಿಗೆ ತುಂಬ ದೋಸ್ತಿ. ಆ ಹೇಮಾದ್ರಿಯ ಮನೆಗೂ ಹೋಗುತ್ತಿರುತ್ತಾರೆ. ಎಲ್ಲ ಕಡೆಗೂ ಓಡಾಡಿ ಕೊಂಡಿದ್ದು ಸಾಹುಕಾರರ ಸಿ.ಐ.ಡಿ.ಗಳಂತೆ ಕೆಲಸ ಮಾಡುತ್ತ ನಮ್ಮ ಹಿತಚಿಂತಕರೆಂದು ನಟಿಸಿ ನಮ್ಮ ಬೆನ್ನಲ್ಲಿ ತಿವಿಯುವ ಇಂಥವರನ್ನು ಕಂಡರೂ ಮೈಯೆಲ್ಲಾ ಉರಿಯುತ್ತೆ ನನಗೆ. ಇವರು ಬರೆದ ಕರಪತ್ರ ಹಂಚುತ್ತೀರಾ? ಎಂಥ ಮೂರ್ಖತನ! ಹರಿದು ಹಾಕಿಬಿಡಿ ಅವುಗಳನ್ನೆಲ್ಲ'' ಎಂದು ಕಿರಿಚಿದ.

ಎಲ್ಲರೂ ತಬ್ಬಿಬ್ಬಾಗಿ ಆತನನ್ನೆ ನಿಟ್ಟಿಸುತ್ತಿದ್ದರು. ದುರುಗಪ್ಪನ ಮಾತನ್ನು ತಡೆಯಲೆಂದು ಸರೋಜಾ ನಡುವೆ ಎರಡು ಮೂರು ಸಲ ದನಿಯೆತ್ತಿದರೂ ಯಾವ ಪ್ರಯೋಜನವೂ ಆಗಿರಲಿಲ್ಲ. ಆವೇಶದ ಭರದಲ್ಲಿ ತಾನೇನನ್ನು ನುಡಿಯುತ್ತಿರುವೆ ನೆಂಬುದರ ಅರಿವೂ ಆತನಿಗಿದ್ದಂತಿರಲಿಲ್ಲ. ಚಂದ್ರಣ್ಣನ ಬಗೆಗೆ ಆತನಿಗೆ ಸಂದೇಹ ವಿದ್ದುದಂತೂ ಸ್ಪಷ್ಟವಾಗಿದ್ದಿತು. ಆ ಸಂದೇಹವೇ ಆತನಿಂದ ಇಂಥ ಮಾತುಗಳನ್ನು ಹೊರಡಿಸಿದ್ದಿತು. ಪೊಲೀಸರು ತನ್ನನ್ನು ಅಲ್ಲಿಗೂ ಅಟ್ಟಿಸಿಕೊಂಡು ಬರಲು ಚಂದ್ರಣ್ಣನ ಪಿತೂರಿಯೆ ಕಾರಣವಿರಬಹುದೆಂದೂ ಆತನಿಗನ್ನಿಸಿರಬೇಕು. ಹೀಗೆ ತಿಳಿವಳಿಕೆ

ಯಾದಾಗ ಎಂಥವರಿಗಾದರೂ ತಾಳ್ಮೆಯುಳಿಯುವುದು ಕಷ್ಟವಾಗುವುದು.

''ದುರುಗಪ್ಪನ ಮನಸ್ಥಿತಿ ಸರಿಯಾಗಿರಲಿಕ್ಕಿಲ್ಲ. ಅಂತೆಯೆ ಆತ ಹೀಗೆಲ್ಲ ಆಡುತ್ತಿರಬೇಕು,'' ಎಂದುಕೊಂಡು ಚಂದ್ರಣ್ಣ ಮೌನದಿಂದಿದ್ದ. ಸರೋಜ ಮಾತ್ರ ಸುಮ್ಮನಿರಲಿಲ್ಲ. ''ನಿನಗೇನು ತಿಳಿಯುತ್ತೆ ದುರುಗಪ್ಪ ಇಂಥದರಲ್ಲೆಲ್ಲ? ಚಂದ್ರಣ್ಣನವರ ಬಗ್ಗೆ ನಾವೇನೂ ಸಂಶಯಪಟ್ಟುಕೊಳ್ಳಬೇಕಾಗಿಲ್ಲ. ಅವರ ವಿಚಾರ ಹೇಗಿವೆ ಯೆನ್ನುವುದು ನನಗೆ ಚೆನ್ನಾಗಿ ಗೊತ್ತು. ಅವರ ಕಂಪನಿಗೆ ತಮ್ಮಣ್ಣ ಚೇರ್ಮನ್ ಆಗಿದ್ದರೇ ನಂತೆ, ಸೆಟ್ಟರು ಷೇರ್‌ಹೋಲ್ಡರಾಗಿದ್ದರೇನಂತೆ, ಸೆಟ್ಟರ ಮಗಳ ಸ್ನೇಹವಿದ್ದರೂ ಏನಂತೆ – ಚಂದ್ರಣ್ಣ ಎಂದೂ ಬಂಡವಾಳಗಾರರ ಪಕ್ಷಕ್ಕೆ ಸೇರಿಕೊಳ್ಳುವವರಲ್ಲ – ಎಂಬ ಬಗ್ಗೆ ನನಗೆ ಪೂರಾ ವಿಶ್ವಾಸವಿದೆ,'' ಎಂದಳು.

''ಬಾಯಿಗೆ ಬಂದಂತೆ ಮಾತಾಡಿ ಇರುವ ನಾಲ್ಕು ಜನ ಸಹಾನುಭೂತಿಗರನ್ನು ಕಳಕೊಂಡು ಬಿಟ್ಟರೆ ಏನು ಉಪಯೋಗ ದುರುಗಪ್ಪ? ನಾಲಗೆಗೆ ಹಿಡಿತ ಬೇಕೋ ಬೇಡವೋ?'' ಎಂದು ರತ್ನಮ್ಮನೂ ಗದರಿಸಿದಳು.

ಉತ್ತರ ಕೊಡಲೆಂದು ದುರುಗಪ್ಪ ದನಿಯೆತ್ತುತ್ತಿದ್ದ ಹಾಗೆ ಬಾಗಿಲಿನ ಆಚೆ ಬೂಟುಗಳ ಸದ್ದಾಗುವುದು ಕೇಳಬಂದಿತು – ಎಂಟು ಹತ್ತು ಜನ ಅತ್ತಿಂದಿತ್ತ ಇತ್ತಿಂದತ್ತ ಓಡಾಡುವುದೂ ಪಿಸುದನಿಯಲ್ಲಿ ಮಾತನಾಡುವುದೂ ಕೇಳಿಸಿತು. ಅವರು ಪೊಲೀಸಿ ನವರೆ ಎಂಬುದರಲ್ಲಿ ಯಾರಿಗೂ ಯಾವ ಸಂದೇಹವೂ ಉಳಿಯಲಿಲ್ಲ. ಅವರ ಕೈಯಿಂದ ದುರುಗಪ್ಪನನನ್ನು ಉಳಿಸುವುದು ಹೇಗೆಂಬುದೇ ಒಂದು ಸಮಸ್ಯೆ ಯಾಯಿತು. ಆ ಮನೆಗೆಲ್ಲ ಅದೊಂದೇ ಬಾಗಿಲು. ಹಿತ್ತಿಲ ಬಾಗಿಲು ಇದ್ದಿದ್ದಲ್ಲಿ ದುರುಗಪ್ಪ ಓಡಿಹೋಗಿ ತಪ್ಪಿಸಿಕೊಳ್ಳಬಹುದಾಗಿತ್ತು. ದುರುಗಪ್ಪನನ್ನು ಉಳಿಸಿಕೊಳ್ಳು ವುದೂ ಅಲ್ಲದೆ ಅಲ್ಲಿದ್ದವರೆಲ್ಲರೂ ಉಳಿದುಕೊಳ್ಳಬೇಕಾಗಿತ್ತು. ಎದುರಿಗೇ ಕರಪತ್ರಗಳ ರಾಶಿ. ಪೊಲೀಸರು ಒಳಗೆ ಬಂದು ಅವುಗಳನ್ನೆಲ್ಲ ನೋಡಿದರೆ ಸಹಜವಾಗಿಯೆ ಎಲ್ಲರನ್ನೂ ಬಂಧಿಸಿಬಿಡಬಹುದು. ಹೇಗೆ ತಪ್ಪಿಸಿಕೊಳ್ಳಬೇಕು ಪೊಲೀಸರಿಂದ?

ಉಸಿರು ಬಿಗಿಹಿಡಿದು ಕೊಂಚವೂ ಸದ್ದಾಗದಂತೆ ಎಲ್ಲರೂ ಕುಳಿತಲ್ಲಿಯೆ ಕುಳಿತಿದ್ದರು. ಇದ್ದುದಿದ್ದ ಹಾಗೆ ಸಾವಿತ್ರಿಗೆ ಉಪಾಯವೊಂದು ಹೊಳೆಯಿತು. ಮೇಲಕ್ಕೆದ್ದು ಚಂದ್ರಣ್ಣನ ಕಿವಿಯಲ್ಲಿ ಏನನ್ನೋ ನುಡಿದು ಉಳಿದವರಿಗೆಲ್ಲ ಅಲ್ಲಿಯೆ ಕೂತಿರಲು ಹೇಳಿ ತಾನು ಹೊರಗಿನ ಪಡಸಾಲೆಗೆ ನಡೆದಳು. ಕೊಠಡಿಯಲ್ಲಿನ ದೀವನ್ನಾರಿಸಿ ಚಂದ್ರಣ್ಣ ಒಳಗಿನ ಬಾಗಿಲನ್ನು ಮುಚ್ಚಿ ಹೊರಡಗೆಯಿಂದ ಅದಕ್ಕೆ ಬೀಗ

ಹಾಕಿದ. ಕೊಂಚವೂ ಸದ್ದಾಗದಂತೆ ಅದೆಲ್ಲವೂ ನಡೆಯಬೇಕಾಗಿತ್ತು. ಪಡಸಾಲೆಯಲ್ಲಿ ಸಾವಿತ್ರಿ ಕಂಬಳಿಯನ್ನು ಹಾಸಿ ಅದರ ಮೇಲೊರಗಿಕೊಂಡಿದ್ದಳು. ಮೈಮೇಲಿನ ಅಂಗಿ ಯನ್ನು ತೆಗೆದು ಗೂಟಕ್ಕೆ ತೂಗಹಾಕಿ ಚಂದ್ರಣ್ಣ ಆಕೆ ಪಕ್ಕದಲ್ಲೊರಗಿ ಕಂಬಳಿಯನ್ನು ಮೈತುಂಬಾ ಹೊದೆದುಕೊಂಡು ಕಣ್ಣುಗಳನ್ನು ಮುಚ್ಚಿ ಗಾಢನಿದ್ರೆಯಲ್ಲಿರುವವರ ಹಾಗೆ ನಟಿಸತೊಡಗಿದ.

ಅವರು ನಿರೀಕ್ಷಿಸಿಕೊಂಡಿದ್ದ ಹಾಗೆ ಒಂದೆರಡು ನಿಮಿಷಗಳಲ್ಲಿ ಬಾಗಿಲಿನ ಮೇಲೆ ಸದ್ದಾಗುವುದು ಕೇಳಬಂದಿತು.

''ಯಾರಲ್ಲಿ ಒಳಗೆ? ಬಾಗಿಲು ತೆಗೀರಿ.''

ಅವರು ಅಲುಗಾಡಲಿಲ್ಲ, ಸುಮ್ಮನೆ ಮಲಗಿಕೊಂಡಿದ್ದರು. ಒಳಗಡೆಯ ಕೊಠಡಿಯಲ್ಲಿ ಎಲ್ಲರ ಎದೆಗಳೂ ಆಶಂಕೆಯಿಂದ ಹಾರುತ್ತಿದ್ದವು.

ಎರಡು ಮೂರು ಸಲ ಕೂಗಿದರೂ ಯಾವ ಉತ್ತರವೂ ಬಾರದಿದ್ದುದರಿಂದ ಹೊರಗಿದ್ದವರು ಗಟ್ಟಿಯಾಗಿ ಕೂಗುತ್ತ ಬಾಗಿಲನ್ನು ರಭಸದಿಂದ ತಳ್ಳತೊಡಗಿದರು. ಇನ್ನು ಸುಮ್ಮನಿರುವುದು ಉಚಿತವಲ್ಲವೆಂದು ಬಗೆದು ಸಾವಿತ್ರಿ ಮೇಲಕ್ಕೆದ್ದಳು. ತಲೆಗೂದಲನ್ನು ಅಸ್ತವ್ಯಸ್ತವಾಗಿ ಕೆದರಿಕೊಂಡು ನಿದ್ರೆಯಿಂದ ಎದ್ದವರ ಹಾಗೆ ಕಣ್ಣ ಬೊಂಬೆಗಳನ್ನು ಕುಣಿಸುತ್ತ ಬಾಗಿಲಿನ ಹತ್ತಿರ ನಿಂತುಕೊಂಡು ''ಯಾರಪ್ಪ ಅವ ಬಾಗಲಾ ಬಡಿಯೂನು ಇಂಥಾ ರಾತ್ರಿಯೊಳಗ? ಇವೊತ್ತು ಖಾಲೀ ಇಲ್ಲ ಹೋಗು!'' ಎಂದಳು. ಬಾಗಿಲಿನಾಚೆ ಇದ್ದ ಪೊಲೀಸರು ನಕ್ಕು ನುಡಿದರು : ''ನಿನ್ನ ಕೂಡ ಮಲಗಾಕ ಬಂದಿಲ್ಲವೇ ನಾವು. ಬಾಗಿಲಾ ತಗಿ ಮೊದಲು!''

''ಇಲ್ಲ ಹೋಗೋ ಮಾವ. ನಾಳೆ ರಾತ್ರಿ ಬಾ!'' ಎಂದಳು ಸಾವಿತ್ರಿ. ನಗುವನ್ನು ಹೇಗೋ ತಡೆ ಹಿಡಿದು ಚಂದ್ರಣ್ಣ ಹಾಸಿಗೆಯಲ್ಲೊರಗಿದ್ದ. ಒಳಗಿನ ಕೊಠಡಿ ಯಲ್ಲಿದ್ದವರಿಗೂ ನಗೆಯನ್ನು ಬಿಗಿಹಿಡಿಯುವುದು ಕಷ್ಟದ ಕೆಲಸವಾಗಿದ್ದಿತು.

''ತೆಗೀತಿಯೋ ಇಲ್ಲವೊ? ಬಾಗಿಲು ಮರಿಯೋಣವೊ?''

ಸಾವಿತ್ರಿ ಗೊಣಗಿಕೊಳ್ಳುತ್ತ ಬಾಗಿಲು ತೆಗೆದಳು. ಒಡನೆಯೆ ಇಬ್ಬರು ಮೂವರು ಪೊಲೀಸರು ಬ್ಯಾಟರಿ ದೀಪವನ್ನು ಬೆಳಗಿಸುತ್ತ ಒಳಕ್ಕೆ ನುಗ್ಗಿದರು. ಚಂದ್ರಣ್ಣ ಕಣ್ಣು ಮುಚ್ಚಿಕೊಂಡು ಕೊಂಚವೂ ಅಲುಗಾಡದಂತೆ ಮಲಗಿದ್ದ.

"ಯಾರವರು ಮಲಗಿದವರು? ಎಬ್ಬಿಸು ಮೇಲೆ!" ಎಂದು ಪೊಲೀಸನೊಬ್ಬ ಕೂಗಿದ.

"ಅವರು ಸಾಹುಕಾರರಪ್ಪ. ಹೀಗೆಲ್ಲ ಎಬ್ಬಿಸುವಂತಿಲ್ಲ."

ಬ್ಯಾಟರಿ ದೀಪವನ್ನು ಮಲಗಿದವನ ಮುಖದ ಮೇಲೆಲ್ಲಾ ಓಡಿಯಾಡಿಸಿ ಪೊಲೀಸನೊಬ್ಬ ತನ್ನ ಜೊತೆಗಾರರನ್ನು ಕುರಿತು – "ದುರುಗಪ್ಪನಂತೂ ಅಲ್ಲ ಈತ. ಯಾರೋ ಬೇರೆ ಅಸಾಮಿ," ಎಂದ.

"ಹೌದು ದುರುಗಪ್ಪ ಕರ್‍ರಗಿದ್ದಾನೆ. ಈತ ಅಲ್ಲ."

"ಹಾಗಾದರೆ ಎಲ್ಲಿಗೆ ಹೋದನಾತ? ಇದೇ ಮನೆಗೇ ನುಗ್ಗಿದನೆಂದು ರುದ್ರ್ಯಾ ಹೇಳಿದನಲ್ಲ?"

"ಕುಡುಕ ಸೂಳೀಮಗ. ಅವನ ಮಾತು ನಂಬೋದು ಕಷ್ಟ. ಅಮಲಿನಾಗ ಏನಾದರೂ ಹೇಳಿದ್ದಾನು," ಎಂದು ನುಡಿದು ಆ ಪೊಲೀಸ್ ಸಾವಿತ್ರಿಯನ್ನು ಕುರಿತು – "ಏನೇ, ಇವನಿಗಿಂತ ಮೊದಲು ಎಷ್ಟು ಜನ ಬಂದಿದ್ದರು ಇವೊತ್ತು?" ಎಂದು ಕೇಳಿದ.

"ಇವೊತ್ತು ಬೇರೆ ಯಾರೂ ಬಂದಿಲ್ಲ. ಇವರೊಬ್ಬರೇ. ರಾತ್ರಿಯೆಲ್ಲ ಇಲ್ಲೇ ಇರುವುದಾಗಿ ಕರಾರು ಮಾಡಿ ಬಂದಿದ್ದಾರೆ."

"ಒಳಗಿನ ಖೋಲಿ ಯಾರದು?"

"ಮಾಲಕರದು. ಅದರೊಳಗೆ ಸಾಮಾನು ಇಟ್ಟಿದ್ದಾರೆ. ಇದೊಂದು ಮಾತ್ರ ನಾನು ಬಾಡಿಗೆ ಹಿಡಿದಿದ್ದೇನೆ."

ಪೊಲೀಸರು ಗೊಣಗಿಕೊಳ್ಳುತ್ತ ಹೊರಟು ನಡೆದರು. ಸಾವಿತ್ರಿಯೂ ಗೊಣಗಿ ಕೊಳ್ಳುತ್ತಲೇ ಬಾಗಿಲು ಹಾಕಿ ಐದಾರು ನಿಮಿಷ ಕತ್ತಲೆಯಲ್ಲಿ ಹಾಗೇ ನಿಂತು ಕೊಂಡಿದ್ದಳು. ಚಂದ್ರಣ್ಣನೂ ಎದ್ದು ಅಂಗಿ ತೊಟ್ಟುಕೊಳ್ಳುತ್ತಲಿದ್ದ.

ಪೊಲೀಸರ ಬೂಟುಗಳ ಸದ್ದು ಕೇಳಿಸುವುದು ನಿಲ್ಲುತ್ತಲೂ ಸಾವಿತ್ರಿ ಬೀಗವನ್ನು ತೆರೆದು ಒಳಬಾಗಿಲನ್ನು ದೂಡಿದಳು. ಚಂದ್ರಣ್ಣ ಕಡ್ಡೀಗೀಚಿ ದೀಪ ಅಂಟಿಸಿದ. ಆ ದೀಪದ ಬೆಳಕಿನಲ್ಲಿ ದುರುಗಪ್ಪನ ಮುಖದ ಮೇಲೆ ಪಶ್ಚಾತ್ತಾಪ ಹಾಗೂ ಕೃತಜ್ಞತೆಗಳ

ಭಾವ ನಿಚ್ಚಳವಾಗಿ ಕಂಡುಬರುತ್ತಿತ್ತು. ಚಂದ್ರಣ್ಣನ ಕೈಯನ್ನು ಗಟ್ಟಿಯಾಗಿ ಕುಲುಕುತ್ತ ಆತನೆಂದ : "ಕ್ಷಮಿಸಿರಿ ಚಂದ್ರಣ್ಣ, ನಿಮ್ಮ ಬಗ್ಗೆ ಸುಮ್ಮಸುಮ್ಮನೆ ಸಂಶಯಪಟ್ಟುಕೊಂಡು ಯದ್ವಾತದ್ವಾ ಮಾತಾಡಿದೆ. ಏನೂ ತಿಳಿದುಕೊಳ್ಳಬೇಡಿ!"

"ಪರವಾಯಿಲ್ಲ ಬಿಡಯ್ಯ!" ಎಂದು ಆತನನ್ನು ಸಂತವಿಸಿದ ಚಂದ್ರಣ್ಣ.

ಮತ್ತೆ ಕರಪತ್ರಗಳ ಕೆಲಸಕ್ಕಾರಂಭವಾಯಿತು.

## ೨೩

ಮಧ್ಯರಾತ್ರಿ ಬೀದಿಯಲ್ಲಿ ಜನಗಳ ಸುಳಿವಿಲ್ಲ. ಎಲ್ಲೆಲ್ಲೂ ಶಾಂತತೆ. ಮನೆಗಳ ಬಾಗಿಲು ಮುಚ್ಚಿವೆ. ಕಿಟಕಿಗಳಿಂದ ಬೆಳಕು ಬರುವುದೂ ನಿಂತುಹೋಗಿದೆ. ಧರ್ಮಪುರದ ಸುಖವಸ್ತುಗಳೆಲ್ಲ ಸುಖವಾಗಿ ನಿದ್ರೆ ಹೋಗಿದಾರೆ.

ಪೊಲೀಸು ಕಚೇರಿಯಲ್ಲಿ ಮಾತ್ರ ವಿದ್ಯುದ್ದೀಪಗಳು ಹಾಗೇ ಉರಿಯುತ್ತಿವೆ. ಹೊರಗಡೆ ಬಂದೂಕುಬಯನೇಟುಧಾರಿ ಪೊಲೀಸನೊಬ್ಬ ಕಾವಲು ಮಾಡುತ್ತಿದ್ದಾನೆ. ಒಳಗಡೆ ನಾಲ್ಕಾರು ಕೊಠಡಿಗಳು, ಕಬ್ಬಿಣದ ಸಲಾಕೆಗಳ ನಡುವೆ ಕಮ್ಯೂನಿಸ್ಟ್ ಕೈದಿಗಳು. ಶಂಕರ, ನಾಗೋಜಿ, ಯಲ್ಲಪ್ಪ ಇಬ್ರಾಹೀಮ್ – ಇನ್ನೂ ಹಲವಾರು ಕೂಲಿಕಾರರು.

ಎರಡು ಮೂರು ದಿನಗಳಿಂದ ಅವರಲ್ಲಿ ಒಬ್ಬರಿಗೂ ನಿದ್ರೆಯಿಲ್ಲ. ಬಂಧನಕ್ಕೊಳಗಾದಂದಿನಿಂದ ಪೊಲೀಸಿನವರು ವಿಚಾರಣೆ ನಡೆಸುತ್ತಿದ್ದಾರೆ; ಅವರಿಗೂ ನಿದ್ರೆಯಿಲ್ಲ. ವಿರಾಮವಿಲ್ಲ. ಹೊತ್ತಿಗೆ ಸರಿಯಾಗಿ ಊಟವಿಲ್ಲ. ಶಂಕರನನ್ನು ಬಂಧಿಸಿದರೂ ಅವರಿಗೆ ಸಮಾಧಾನವಿಲ್ಲ. ಸಂಘದ ಕಾರ್ಯದರ್ಶಿ ದುರುಗಪ್ಪ ಕೈಗೆ ಸಿಕ್ಕಿಲ್ಲ. ನಗರದ ಕಮ್ಯೂನಿಸ್ಟರಲ್ಲೆಲ್ಲ ಆತನೆ ಅತ್ಯಂತ ಉಗ್ರವಾದಿ. ಕೂಲಿಕಾರರ ಮೇಲೆ ಆತನ ವರ್ಚಸ್ಸೂ ವಿಶೇಷ. ಆತನನ್ನು ಬಂಧಿಸಿದ ಹೊರತು ಕಮ್ಯೂನಿಸ್ಟರ ಗಲಭೆ ಅಡಗಲಾರದು. ಯಾವುದಾದರೊಂದು ಮೂಲೆಯಲ್ಲಿ ಕುಳಿತುಕೊಂಡು ಆತ ಗುಪ್ತವಾಗಿ ಸಂಘಟನೆ ಮಾಡುವವನೇ. ಮತ್ತೆ ಗದ್ದಲ ಎಬ್ಬಿಸುವವನೇ. ಮುಷ್ಕರ ಹೂಡಿಸುವವನೇ. ಹಿಂಸೆ ಮಾಡಿಸುವವನೇ. ಆತನನ್ನು ಹಿಡಿಯುವವರೆಗೂ ಕರಪತ್ರಗಳು ಹೊರಡುವುದು

ನಿಲ್ಲಲಾರದು. ಪೊಲೀಸು ಶಾಖೆ, ಸರಕಾರ, ಗಿರಣಿ ಮಾಲೀಕರ ವಿರುದ್ಧ ನಡೆಯುವ ಅಪಪ್ರಚಾರ ನಿಲ್ಲಲಾರದು. ಕಮ್ಯೂನಿಸ್ಟ್ ಚಳವಳಿಯ ಮೆದುಳು ಶಂಕರನಾದರೆ ಕೆಲಸ ಮಾಡುವ ಬಲಗೈ ದುರುಗಪ್ಪ. ಆ ಕೈಗೆ ಕೋಳ ಬೀಳುವವರೆಗೂ ಕೆಲಸಕ್ಕೆ ತಡೆಯಾಗ ಲಾರದು. ಅಂತೆಯೆ ಆತನನ್ನು ಹಿಡಿಯಲು ಪೊಲೀಸು ಶಾಖೆ ಹಗಲಿರುಳೂ ಪ್ರಯತ್ನಿಸುತ್ತಿದೆ.

ಆದರೆ ಧರ್ಮಪುರದಂಥ ನಗರದಲ್ಲಿ ಕೂಲಿಕಾರರ ಮುಖಂಡ ದುರುಗಪ್ಪ ನನ್ನು ಶೋಧಿಸುವುದೇನೂ ಸಾಮಾನ್ಯ ವಿಷಯವಲ್ಲ. ನಗರದ ಮೂರು ನಾಲ್ಕು ಕಡೆ ಗಳಲ್ಲಿದ್ದ ಕೂಲಿಕಾರ ವಸತಿಗಳಲ್ಲಿ, ಹರಿಜನ ಕೇರಿಗಳಲ್ಲಿ, ಒಡ್ಡರ ಗುಡಿಸಲುಗಳಲ್ಲಿ – ಎಲ್ಲಿಯಾದರೂ ತಲೆ ಮರೆಸಿಕೊಂಡು ಇರಬಲ್ಲನಾತ. ಶ್ರಮಜೀವಿಗಳಿಗೆಲ್ಲ ಆತ ಸುಪರಿಚಿತ. ಅವನನ್ನು ಕಂಡರೆ ಎಲ್ಲರಿಗೂ ಭಯ. ಆದುದರಿಂದ ಆತನನ್ನು ಹಿಡಿದುಕೊಡುವವರಾಗಲಿ, ಆತನಿರುವ ಸ್ಥಳವನ್ನು ತಿಳಿಸುವವರಾಗಲಿ ಯಾರೂ ಸಿಕ್ಕುವಂತಿಲ್ಲ. ಈ ಎಲ್ಲ ವಸತಿಗಳನ್ನು ಸುತ್ತಿ ಪೊಲೀಸರು ಆತನನ್ನು ಹಿಡಿಯುವುದು ತುಂಬಾ ಶ್ರಮದ ಕೆಲಸ. ಅವರು ಒಂದು ವಸತಿಯನ್ನು ಮುತ್ತಿದಾಗ ಆತ ಉಪಾಯ ವಾಗಿ ಅಲ್ಲಿಂದ ಜಾರಿಕೊಂಡು ಇನ್ನೊಂದು ವಸತಿಯಲ್ಲಿ ಅಡಗಿಕೊಳ್ಳುವ ಸಂಭವವೂ ಉಂಟು. ಯಾವ ಮನೆಗೆ ಹೋದರೂ ಆತನಿಗೆ ಆಸರೆ ದೊರೆಯದಿರುವುದಿಲ್ಲ. ಸೂಳೆಯರ ಮನೆಗಳಲ್ಲೂ ಆತನಿಗೆ ಸ್ವಾಗತವೆ. ಅವರೂ ಅವನ ಬಗೆಗೆ ಸುದ್ದಿ ತಿಳಿಸುವಂತಿಲ್ಲ.

ಎರಡು ಹಗಲು; ಎರಡು ಇರುಳು – ಒಂದೆ ಸಮನೆ ಪೊಲೀಸರು ಆತನನ್ನು ಬೇಟೆಯಾಡುತ್ತಿದ್ದರು. ಆದರೂ ಈತ ಸಿಕ್ಕುಬಿದ್ದಿರಲಿಲ್ಲ. ಪೊಲೀಸರಿಗೆ ಬೇಸರ ವುಂಟಾಗಿದ್ದುದು ನಿಜವಾದರೂ ನಿರಾಸೆಯಾಗಿರಲಿಲ್ಲ. ಆ ಶಾಖೆಯವರಿಗೆ ನಿರಾಸೆ ಯೆಂಬುದೇ ಅಪರಿಚಿತ ವಿಷಯ. ಅವರು ಹಾಗೇ 'ಮರಳಿ ಯತ್ನವ ಮಾಡು'ತ್ತಿರಲೇ ಬೇಕು.

ಶಂಕರನಿಂದ ಪೊಲೀಸರಿಗೆ ಆ ಬಗೆಗೆ ಯಾವ ವಿಷಯವೂ ತಿಳಿದಿರಲಿಲ್ಲ. ತಿಳಿಯುವುದು ಸಾಧ್ಯವೂ ಇರಲಿಲ್ಲ. ಇನ್‌ಸ್ಪೆಕ್ಟರು ಕೇಳಿದ ಪ್ರಶ್ನೆಗಳಿಗೆಲ್ಲ ಆತ ಶಾಂತವಾಗಿಯೇ ಉತ್ತರವೀಯುತ್ತಿದ್ದ. ಆದರೆ ದುರುಗಪ್ಪನ ವಿಷಯ ಬಂದಾಗ ಮಾತ್ರ ಆತ ವ್ಯಂಗ್ಯವಾಗಿ–

"ಆತನ ಬಗ್ಗೆ ನನ್ನನ್ನೇಕೆ ಕೇಳುತ್ತೀರಿ? ನಾನೇನೂ ನಿಮ್ಮ ಸಿ.ಐ.ಡಿ. ಅಲ್ಲವಲ್ಲ?"

ಎಂದು ನುಡಿದಿದ್ದ.

ಇನ್‌ಸ್ಪೆಕ್ಟರು ತುಟಿ ಕಚ್ಚಿಕೊಂಡು ಕ್ಷಣಕಾಲ ಮೌನವಾಗಿದ್ದು ಅನಂತರ ಕೇಳಿದ್ದರು : "ಸಿ.ಐ.ಡಿ.ಗಳಿಂದಲೇ ಎಲ್ಲವೂ ತಿಳಿಯಬೇಕೆಂದೇನೂ ಇಲ್ಲವಲ್ಲ! ಆತ ಎಲ್ಲಿರುವನೆಂಬುದು ನಿಮಗೆ ಗೊತ್ತಿರಲೇಬೇಕು. ಹೇಳಬಾರದೇ?"

ಶಂಕರ ಗಟ್ಟಿಯಾಗಿ ನಗತೊಡಗಿದ್ದ. ಇನ್‌ಸ್ಪೆಕ್ಟರ ಪ್ರಶ್ನೆಗೆ ಈ ನಗೆಯೇ ಉತ್ತರ ವಾಗಿದ್ದಿತು. ಆತನನ್ನು ಮಾತನಾಡಿಸಿ ಉಪಯೋಗವಿಲ್ಲವೆಂದು ಮನವರಿಕೆ ಯಾದೊಡನೆ ಅವರು ಆ ಹವ್ಯಾಸವನ್ನು ಬಿಟ್ಟು ಇಬ್ರಾಹಿಮ್, ನಾಗೋಜಿ, ಯಲ್ಲಪ್ಪ ಮೊದಲಾದವರನ್ನು ವಿಚಾರಿಸತೊಡಗಿದ್ದರು.

ಇನ್‌ಸ್ಪೆಕ್ಟರ್ ಕೊಠಡಿಯಲ್ಲಿ ಆ 'ವಿಚಾರಣೆ' ನಡೆಯುತ್ತಿತ್ತು. ಕೊಠಡಿಯ ಬಾಗಿಲ ಹೊರಗಡೆ ಬಂಧೂಕಧಾರಿ ಪೊಲೀಸನೊಬ್ಬ ಕಾವಲು ಮಾಡುತ್ತಿರುತ್ತಿದ್ದ. ಒಳಗಡೆ ಇನ್‌ಸ್ಪೆಕ್ಟರು ಕುರ್ಚಿಯ ಮೇಲೆ ಕುಳಿತುಕೊಂಡು ಎದುರಿಗೆ ನಿಂತ ಸೆರೆಯಾಳುವಿಗೆ ಪ್ರಶ್ನೆ ಕೇಳುವರು. ಚರ್ಮದ ಚಬುಕವನ್ನು ಕೈಯಲ್ಲಿ ಹಿಡಿದ ಪೊಲೀಸ ನೊಬ್ಬ ಆತನಿಂದ ಉತ್ತರ ಹೊರಡಿಸುವ ಕೆಲಸದಲ್ಲಿ ತೊಡಗಿರುವನು.

ಕೈದಿಗಳನ್ನಿರಿಸಿದ ಬೀಗದ ಕೊಠಡಿಗಳಿಗೂ ಈ ಕೊಠಡಿಗೂ ಹತ್ತಿಪ್ಪತ್ತು ಅಡಿಗಳ ಅಂತರ. ಇನ್‌ಸ್ಪೆಕ್ಟರ್ ಕೊಠಡಿಯಲ್ಲಿ ನಡೆದ ಮಾತುಕತೆಗಳೆಲ್ಲ ಕೈದಿಗಳಿಗೆ ಕೇಳಿಸುತ್ತಿರಲಿಲ್ಲವಾದರೂ ಚಬುಕದ ಹಾರಾಟದ ಧ್ವನಿಯೂ ಏಟು ತಿಂದವನ ಆಕ್ರೋಶವೂ ಸ್ಪಷ್ಟವಾಗಿ ಕೇಳಿಸುವುದು. ಒಬ್ಬೊಬ್ಬನನ್ನೇ ಹಿಡಿದುಕೊಂಡು ಇನ್‌ಸ್ಪೆಕ್ಟರ ಕೊಠಡಿಗೆ ಕರೆದೊಯ್ದು ಆತನನ್ನು ಹೆದರಿಸಿ ಬೆದರಿಸಿ ಬಡಿದು ಪೀಡಿಸುವುದು ನಡೆದಿದ್ದಿತು.

ಈಗ ನಾಗೋಜಿಯ ಸರದಿ ಬಂದಿದ್ದಿತು.

ಇನ್‌ಸ್ಪೆಕ್ಟರು ಕೇಳುತ್ತಿದ್ದರು :

"ನೀನು ಸಂಘಕ್ಕೆ ಸೇರಿ ಎಷ್ಟು ದಿನವಾಯಿತು?"

ನಾಗೋಜಿ ಕೂಡಲೆ ಉತ್ತರವೀಯಲಿಲ್ಲ. ಅಧಿಕಾರಿಯನ್ನು ತಿರಸ್ಕಾರದಿಂದ ದಿಟ್ಟಿಸುತ್ತ ಸುಮ್ಮನೆ ನಿಂತುಕೊಂಡಿದ್ದ. ಇನ್‌ಸ್ಪೆಕ್ಟರು ಪೊಲೀಸನಿಗೆ ಸನ್ನೆ ಮಾಡಿದರು. ಆತ ಚಬುಕವನ್ನೆತ್ತಿ ನಾಗೋಜಿಯ ಕಡೆ ಬೀಸುತ್ತ – "ಉತ್ತರ ಕೊಡು ಸಾಹೇಬರಿಗೆ. ಯಾಕೆ ದೆವ್ವನ ಹಾಗೆ ನಿಂತಿದ್ದೀ?" ಎಂದು ಗದರಿಸಿದ.

''ಕೂಲಿಕಾರ ಸಂಘಕ್ಕೆ ಸೇರಿ ಎಷ್ಟು ದಿನವಾಯಿತು?'' ಮತ್ತೆ ಕೇಳಿದರು ಇನ್‌ಸ್ಪೆಕ್ಟರು.

''ಸೇರೋದೇನು ಬಂತು! ಅದನ್ನು ಕಟ್ಟಿದವರೇ ನಾವು!'' ಎಂದು ಎದೆ ತಟ್ಟಿಕೊಂಡು ನುಡಿದ ನಾಗೋಜಿ.

ಇನ್‌ಸ್ಪೆಕ್ಟರ ತುಟಿಗಳ ಮೇಲೆ ಸೂಕ್ಷ್ಮವಾದ ನಗೆಯ ತೆರೆಯೊಂದು ಬೀಸಿತು. ಇಂಥ ಸಂದರ್ಭದಲ್ಲೂ ಸಂಘದ ಬಗ್ಗೆ ಮಾತನಾಡುವಾಗ ಅಭಿಮಾನ ತುಂಬಿ ಬರುತ್ತಿದೆ ಈತನ ಹೃದಯದಲ್ಲಿ!

''ದುರುಗಪ್ಪನ ಪರಿಚಯವಾದುದು ಯಾವಾಗ?''

''ಗಿರಣಿಯ ಕೆಲಸಕ್ಕೆ ಸೇರಿದಾಗ.''

''ಗಿರಣಿಯ ಕೆಲಸಕ್ಕೆ ಸೇರಿ ಎಷ್ಟು ವರ್ಷವಾಯಿತು?''

''ಮೂರು ನಾಲ್ಕು ವರ್ಷವಾಗಿರಬಹುದು.''

''ಅದಕ್ಕೆ ಮೊದಲು ಏನು ಮಾಡುತ್ತಿದ್ದೆ?''

''ಸ್ಕೂಲ್ ಮಾಸ್ಟರಾಗಿದ್ದೆ.''

ಇನ್‌ಸ್ಪೆಕ್ಟರಿಗೆ ಆಶ್ಚರ್ಯವಾಗದಿರಲಿಲ್ಲ. ಶಾಲೆಯಲ್ಲಿ ಶಿಕ್ಷಕನಾಗಿ ಕೆಲಸ ಮಾಡುತ್ತಿದ್ದವನು ಗಿರಣಿಗೆ ಕೂಲಿಕಾರನಾಗಿ ಏಕೆ ಸೇರಿದನೊ!

''ಆ ಕೆಲಸವನ್ನೇಕೆ ಬಿಟ್ಟೆ?''

''ನಾನಾಗಿಯೇ ಬಿಡಲಿಲ್ಲ. ಮೇಲಾಧಿಕಾರಿಗಳು ತೆಗೆದುಹಾಕಿದರು.''

''ಏಕೆ?''

''ಏಕೆ ಅಂದರೇನು ಹೇಳೋದು! ಪ್ರಾಥಮಿಕ ಶಾಲೆಗಳ ಶಿಕ್ಷಕರಿಗೆ ಕೊಡುವ ಸಂಬಳ ಎಷ್ಟೆಂಬುದು ನಿಮಗೆ ಗೊತ್ತಿದೆಯೆ?'' ಎಂದು ನಾಗೋಜಿ ಮರುಪ್ರಶ್ನೆ ಹಾಕಿದ.

''ಇಪ್ಪತ್ತು?''

''ಅಷ್ಟೆ ಹೆಚ್ಚೂ ಇಲ್ಲ, ಕಡಿಮೆಯೂ ಇಲ್ಲ. ಯುದ್ಧಕಾಲ. ಎಲ್ಲ ಸಾಮಾನು

ಗಳೂ ತುಟ್ಟಿ. ಮನೆಯಲ್ಲಿ ಎಂಟು ಜನ ತಿನ್ನುವವರು. ಈ ಇಪ್ಪತ್ತು ರೂಪಾಯಿ ಏತಕ್ಕಾದೀತು? ಅರೆಹೊಟ್ಟೆಯಿಂದ ಹುಡುಗರಿಗೆ ಕಲಿಸಬೇಕು. ಎಲ್ಲ ನೌಕರರ ಸಂಬಳ ಹೆಚ್ಚಿದರೂ ನಮಗೆ ಮಾತ್ರ ಹೆಚ್ಚಾಗಲಿಲ್ಲ. ಕೊನೆಗೆ ಮುಷ್ಕರ ಹೂಡದೆ ಗತಿಯಿಲ್ಲ ವೆಂದು ತಿಳಿದು ಅದರ ಸಿದ್ಧತೆಗೆ ತೊಡಗಿದೆವು. ಕಮ್ಯೂನಿಸ್ಟ್ ಪಾರ್ಟಿಯ ಕಾರ್ಯಕರ್ತರಲ್ಲೊಬ್ಬರು ನಮ್ಮ ಸಂಘಟನೆಗೆ ತೊಡಗಿದ್ದರು. ಅದನ್ನೇ ಒಂದು ನೆಪ ಮಾಡಿ ನಾವೆಲ್ಲರೂ ಕಮ್ಯೂನಿಸ್ಟರೆಂದು ಸಾರಿ ಸರಕಾರ ನಮ್ಮನ್ನು ತುಳಿಯಲು ಪ್ರಯತ್ನಿಸಿತು. ನಿಜ ಹೇಳಬೇಕಾದರೆ ನಾವಾರೂ ಕಮ್ಯೂನಿಸ್ಟರಾಗಿರಲಿಲ್ಲ. ಕಮ್ಯೂನಿಜಂ ಅಂದರೇನೆಂಬುದೂ ನಮಗೆ ಗೊತ್ತಿರಲಿಲ್ಲ. ಆದರೆ ನಮ್ಮ ಸ್ಥಿತಿ ಸುಧಾರಿಸಬೇಕು, ನಮ್ಮ ಸಂಬಳ ಹೆಚ್ಚಾಗಬೇಕು, ನಾವೂ ಎಲ್ಲರಂತೆ ಎರಡು ಹೊತ್ತು ಹೊಟ್ಟೆ ತುಂಬ ಊಟ ಮಾಡುವಂತಾಗಬೇಕು ಎಂಬ ಆಸೆಯಿಂದ ಸಂಘಟನೆಗೆ ತೊಡಗಿದೆವು. ಸರಕಾರಕ್ಕೆ ಅದನ್ನೂ ಸಹಿಸಲಾಗಲಿಲ್ಲ. ನಮ್ಮ ಸಂಘಟನೆಯನ್ನು ಮುರಿಯಲು ನಿರ್ಧರಿಸಿ ಶಿಕ್ಷಕರನ್ನು ಹೆದರಿಸಲೆಂದು ನಮ್ಮಲ್ಲಿ ಕೆಲವರನ್ನು ಕೆಲಸದಿಂದ ತೆಗೆದುಹಾಕಲಾಯಿತು. ನಾವು ಕಮ್ಯೂನಿಸ್ಟರೆಂದೂ, ಶಾಲೆಯ ಬಾಲಕರಲ್ಲಿ ಕಮ್ಯೂನಿಜಂ ಪ್ರಚಾರ ಮಾಡುತ್ತಿರುವುದಾಗಿಯೂ ಆರೋಪ ಹೊರಿಸಿ ನಮ್ಮನ್ನು ಮನೆಗೆ ಕಳಿಸಲಾಯಿತು.''

ಇಷ್ಟು ಹೇಳಿ ನಾಗೋಜಿ ತಡೆದು ನಿಂತ. ನಿದ್ರೆಯಿರಲಿಲ್ಲವಾದುದರಿಂದ ಆತನಿಗೆ ಆಕಳಿಕೆ ಬರುತ್ತಿತ್ತು. ಇನ್‌ಸ್ಪೆಕ್ಟರ ಮೇಜಿನ ಮೇಲಿದ್ದ ಕ್ಯಾಪ್‌ಸ್ಟನ್ ಸಿಗರೇಟಿನ ಪೊಟ್ಟಣದ ಕಡೆಗೆ ಆತನ ಆಶಾಭರಿತ ದೃಷ್ಟಿ ಹೊರಳುತ್ತಿತ್ತು. ಬಂಧಿಸಲ್ಪಟ್ಟಾಗ ಆತನ ಜೇಬಿನಲ್ಲುಳಿದಿದ್ದ ಹತ್ತಿಪ್ಪತ್ತು ಬೀಡಿಗಳೆಲ್ಲ ಆಗಲೆ ಬೂದಿಯಾಗಿ ಹೋಗಿದ್ದುವು.

''ಸಿಗರೇಟು ಬೇಕೇ? ತೆಗೆದುಕೋ,'' ಎಂದು ಇನ್‌ಸ್ಪೆಕ್ಟರು ಆತನಿಗೊಂದು ಸಿಗರೇಟು ನೀಡಿ ತಾವೊಂದನ್ನು ಹೊತ್ತಿಸಿದರು. ಅವರ ಮುಖದ ಮೇಲೆ ಸಹಾನುಭೂತಿ ಒಡಮೂಡಿದ್ದುದನ್ನು ಗುರುತಿಸಿದಾಗ ಚಬುಕ ಹಿಡಿದು ನಿಂತಿದ್ದ ಪೊಲೀಸನಿಗೂ ಬೆರಗಾಗದಿರಲಿಲ್ಲ.

ನಾಗೋಜಿ ಸಿಗರೇಟು ಹೊತ್ತಿಸಿ ಮೂರು ನಾಲ್ಕು ಸಲ ಹೊಗೆ ಹೀರಿದ. ಆತನ ಎದೆ ರಭಸದಿಂದ ಏರಿ ಇಳಿಯುವುದನ್ನು ನಿರುಕಿಸುತ್ತ ಇನ್‌ಸ್ಪೆಕ್ಟರು – ''ಮುಂದೆ?'' ಎಂದು ಪ್ರಶ್ನೆ ಮಾಡಿದರು.

''ಮುಂದೆ ಈ ಊರಿಗೆ ಬಂದೆವು. ನಾಲ್ಕೈದು ತಿಂಗಳು ಕೆಲಸಕ್ಕಾಗಿ ಅಲೆದೆ. ಯಾವುದಾದರೊಂದು ಅಂಗಡಿಯಲ್ಲಿ ಗುಮಾಸ್ತೆಯ ಕೆಲಸ ಸಿಕ್ಕಬಹುದೆಂಬ ಆಸೆ

ಯಿತ್ತು. ಆದರೆ ಅದು ಸಾಧ್ಯವಾಗಲಿಲ್ಲ. ಕೊನೆಗೆ ಬೇರಾವ ಗತಿಯೂ ಇಲ್ಲವೆಂದು ಈ ಕೆಲಸಕ್ಕೆ ನಿಂತೆ.''

''ದುರುಗಪ್ಪನ ಪರಿಚಯವಾದುದು ಆಗಲೆ ತಾನೆ?''

''ಆತನೇ ನನಗೆ ಕೆಲಸ ಕೊಡಿಸಿದ ಎಂದು ಹೇಳಬಹುದು.''

''ಅಂದರೆ? ಆತನಿಗೂ ನಿನಗೂ ಬಹಳ ದಿನಗಳ ಸ್ನೇಹ. ಅಲ್ಲವೆ?''

''ಹೌದು. ಈ ಊರಿಗೆ ಬಂದಂದಿನಿಂದ ನನ್ನನ್ನಾತ ಒಡಹುಟ್ಟಿದ ಬಂಧುವಿನ ಹಾಗೆ ನೋಡಿಕೊಂಡು ಬಂದಿದ್ದಾನೆ.''

''ಹಾಗಾದರೆ ಆತ ಎಲ್ಲೆಲ್ಲಿ ಇರುವನೆಂಬುದು ನಿನಗೆ ಗೊತ್ತಿರಬೇಕಲ್ಲ?''

''ಆತ ಇರುವ ಸ್ಥಳ ಇಂಥದೇ ಅಂತ ಹ್ಯಾಗೆ ಹೇಳೋದು? ಕೂಲಿಕಾರರ ಮನೆಗಳಲ್ಲೆಲ್ಲ ಆತನಿಗೆ ಪ್ರವೇಶವಿದೆ. ಇಂದು ಇಲ್ಲಿದ್ದರೆ ನಾಳೆ ಇನ್ನೊಂದು ಕಡೆಗೆ, ನಾಡಿದ್ದು ಇನ್ನೆಲ್ಲೋ. ನಾಲ್ಕೈದು ತಾಸು ಸಹ ಒಂದು ಕಡೆಗೆ ನಿಲ್ಲದಂಥ ಆಸಾಮಿ ಅದು.''

''ಆತನಿಗೆ ಹೆಂಡಿರು ಮಕ್ಕಳಾರು ಇಲ್ಲವೇ?''

''ಈ ಸಂಸಾರದ ಗಲಾಟೆಗೆ ಇನ್ನೂ ಸಿಕ್ಕಿಬಿದ್ದಿಲ್ಲ ದುರುಗಪ್ಪ. ಬಡಜೀವಿಗಳೆಲ್ಲ ತನ್ನ ಸಂಸಾರದವರೇ ಎಂದು ಆತ ತಿಳಿದಿದ್ದಾನೆ.''

''ಆ ನಾಗಮ್ಮ ಎಂಬಾಕೆಯ ಮನೆಯಲ್ಲಿ ಆತ ಇರುವುದಿಲ್ಲವೆ?''

ನಾಗೋಜಿ ಒಂದು ಸಲ ಬಲವಾಗಿ ಹೊಗೆಯನ್ನೆಳೆದು ಅದನ್ನು ಮೂಗಿನ ಹೊರಳೆಗಳ ಮೂಲಕ ಮೆಲ್ಲಗೆ ಹೊರದೂಡುತ್ತ – ''ಅಲ್ಲೂ ಇರುತ್ತಾನೆ. ಆದರೆ ಯಾವಾಗಲೂ ಅಲ್ಲ'' ಎಂದ.

''ಸೂಳೆಯರ ಮನೆಯಲ್ಲಿ?''

''ಅಲ್ಲೂ ಇರುವುದುಂಟು. ಅವರೂ ಬಡವರೇ. ನಮ್ಮವರೇ. ದುರುಗಪ್ಪನ ಬಗ್ಗೆ ಅವರಿಗೂ ತುಂಬಾ ಪ್ರೀತಿಯಿದೆ.''

ಇನ್‌ಸ್ಪೆಕ್ಟರು ಕಣ್ಣುಗಳನ್ನು ಅರ್ಧ ಮುಚ್ಚಿ ಕೊಂಚ ಹೊತ್ತು ಯೋಚಿಸುತ್ತಿದ್ದು ಅನಂತರ – ''ನಿಮ್ಮ ಮನೆಯಲ್ಲಿ ಎಂಟು ಹತ್ತು ಜನ ಇರುವರೆಂದು ಹೇಳಿದೆಯಲ್ಲವೆ? ಈಗ ನಿನ್ನನ್ನು ಜೈಲಿಗೆ ಹಾಕಿದರೆ ಅವರೆಲ್ಲರ ಗತಿಯೇನು? ಅವರೆಲ್ಲರ

ಹೊಟ್ಟೆಗೆ ಹಾಕುವವರಾರು?'' ಎಂದು ಕೇಳಿದರು.

ಕೈಲಿದ್ದ ಸಿಗರೇಟಿನ ತುಂಡನ್ನು ನೆಲಕ್ಕೆಸೆದು ಕಾಲಿನಿಂದ ಅದರ ಬೆಂಕಿಯ ನ್ನಾರಿಸುತ್ತ ನಾಗೋಜಿಯೆಂದ : ''ಇನ್ನಾರು ಹಾಕುವವರು? ಅವರೇ ಏನಾದರೂ ಮಾಡುತ್ತಾರೆ.''

''ಅಂದರೆ?''

''ಪ್ರಸಂಗ ಬಂದರೆ ಉಪವಾಸ ಸಾಯುತ್ತಾರೆ.''

''ಹಾಗೆ ಅವರನ್ನು ಸಾಯಬಿಡುವುದು ತಪ್ಪಲ್ಲವೆ? ಕುಟುಂಬದ ಮುಖ್ಯಸ್ಥ ನಾದ್ದರಿಂದ ಅವರೆಲ್ಲರನ್ನು ಪೋಷಿಸುವುದು ನಿನ್ನ ಕರ್ತವ್ಯವಲ್ಲವೆ?''

''ನಿಜ. ಆದರೆ ಸಾವಿರಾರು ಕೂಲಿಕಾರ ಕುಟುಂಬಗಳ ಕಲ್ಯಾಣಕ್ಕಾಗಿ ಒಂದು ಕುಟುಂಬ ಉಪವಾಸ ಸಾಯುವ ಪ್ರಸಂಗದ ಬಂದರೂ ತಪ್ಪೇನೂ ಇಲ್ಲ'' ಎಂದ ನಾಗೋಜಿ.

''ನೀನೂ ಕಮ್ಯೂನಿಸ್ಟ್ ಏನು?''

''ನಾನು ಪಾರ್ಟಿಯ ಸದಸ್ಯನಲ್ಲ. ಆದರೂ ಕಮ್ಯೂನಿಸ್ಟ್ ಎಂದು ನೀವು ಕರೆದರೂ ನನ್ನ ಅಡ್ಡಿಯೇನೂ ಇಲ್ಲ. ನನ್ನನ್ನು ಮೇಷ್ಟರ ಕೆಲಸದಿಂದ ತೆಗೆದು ಹಾಕಿದಾಗಲೇ ಸರಕಾರ ನನಗೆ ಆ ಬಿರುದು ಕೊಟ್ಟಿದೆ. ಕಮ್ಯೂನಿಸ್ಟ್ ಎಂದರೆ ಅಪರಾಧಿ ಎಂದು ಸರಕಾರದ ಭಾವನೆಯಿರಬಹುದು. ಆದರೆ ನಮಗೆ ಮಾತ್ರ ಕಮ್ಯೂನಿಸ್ಟ್ ಎಂದು ಕರೆಯಿಸಿಕೊಳ್ಳುವಲ್ಲಿ ಹೆಮ್ಮೆಯೇ ಇದೆ.''

ಇನ್‌ಸ್ಪೆಕ್ಟರು ಪೊಲೀಸನಿಗೆ ಸನ್ನೆ ಮಾಡಿದರು. ಆತ ನಾಗೋಜಿಯನ್ನು ಕರೆದೊಯ್ದು ಮತ್ತೆ ಸಲಾಕೆಗಳ ಮರೆಗೆ ದೂಡಿದ. ಇಬ್ರಾಹೀಮನ ಸರದಿ ಬಂದಿತ್ತು.

ಇನ್‌ಸ್ಪೆಕ್ಟರು ಮುಗುಳುನಗೆಯೊಂದಿಗೆ ಆತನನ್ನು ಸ್ವಾಗತಿಸಿದರು. ''ಬಾ ಇಬ್ರಾಹೀಮ್ ಸಾಹೇಬ್. ಕೂತುಕೋ,'' ಎಂದು ಬೆಂಚಿನ ಕಡೆಗೆ ಕೈ ತೋರಿಸಿದರು.

ಆತ ಕುಳಿತುಕೊಳ್ಳಲಿಲ್ಲ. ಕೈಗಳೆರಡನ್ನೂ ಎದೆಯ ಮೇಲೆ ಕಟ್ಟಿಕೊಂಡು ಗಂಭೀರವಾಗಿ ನಿಂತುಕೊಂಡ.

''ಕುಳಿತುಕೋ,'' ಎಂದು ಮತ್ತೆ ಹೇಳಿದರು ಇನ್‌ಸ್ಪೆಕ್ಟರು.

ಇಬ್ರಾಹೀಮನು ವಿಕಟವಾಗಿ ನಗುತ್ತ! ''ಹ್ಯಾಗೆ ಕೂತುಕೊಳ್ಳಲಿ ಸಾಹೇಬರೆ! ಬೆಂಚಿನ ಮೇಲೆ ಕೂತುಕೊಳ್ಳದ ಹಾಗೆ ಮಾಡಿಬಿಟ್ಟಿದ್ದಾರೆ ನಿಮ್ಮ ಲಾಠೀ ಬಹಾದ್ದೂರರು!'' ಎಂದು ನುಡಿದು ತನ್ನ ಹಿಂಭಾಗವನ್ನು ತೋರಿಸಿದ. ಸಭೆಯಲ್ಲಿ ಗದ್ದಲಕ್ಕಾರಂಭವಾದಾಗ ಆತನನ್ನು ಕೆಳಕ್ಕೆ ಕೆಡಹಿ ಬೆನ್ನ ಮೇಲೂ, ಬಲವಾಗಿ ಏಟು ಹಾಕಲಾಗಿದ್ದಿತು. ಹಲವು ಕಡೆಗಳಲ್ಲಿ ಮೂಡಿದ್ದ ಆ ದೊಡ್ಡ ದೊಡ್ಡ ಬಾಸುಂಡೆಗಳು! ಬೇರೆ ಯಾರಾದರೂ ಅವುಗಳನ್ನು ಕಂಡಿದ್ದರೆ ಅವರ ಮೈಮೇಲೆ ನವಿರೇಳಬಹುದಾಗಿದ್ದಿತು. ಆದರೆ ಅಂಥ ಸಾವಿರಾರು ನೋಟಗಳನ್ನು ಕಂಡ ಇನ್‌ಸ್ಪೆಕ್ಟರಿಗೆ ರೋಮಾಂಚನವೇಳುವಂತಿರಲಿಲ್ಲ.

''ಸುಮ್ಮನೆ ಯಾಕೆ ಹೊಡೆತ ತಿಂದೆ ಸಾಹೇಬು! ಇದೆಲ್ಲ ಗೊಂದಲ ಯಾಕೆ ಬೇಕಿತ್ತು ನಿನಗೆ?''

''ಗೊಂದಲ? ಅಂದರೆ?''

''ಈ ಕೂಲಿಕಾರ ಸಂಘ, ಈ ಕಮ್ಯೂನಿಸ್ಟರ ಸಹವಾಸ ಇದೆಲ್ಲ ಯಾಕೆ ನಿನಗೆ? ನಿನ್ನ ಕೆಲಸ ನೀನು ಮಾಡಿಕೊಂಡು ತೆಪ್ಪಗಿದ್ದಿದ್ದರೆ ಇಂಥ ಗತಿ ಏಕೆ ಬರುತ್ತಿತ್ತು?''

''ಅಂದರೆ? ಕಡೆಯತನಕ ನಾವು ಮಾಲೀಕರ ಗುಲಾಮರಾಗಿ ಕೊಳೆಯಬೇಕೆಂದು ತಾವು ಹೇಳುವಿರಾ ಹೇಗೆ?''

''ಮುಸಲ್ಮಾನರು ಯಾವಾಗಲೂ ಸ್ವಾಮಿನಿಷ್ಠರು. ಅನ್ನ ನೀಡಿದ ಧಣಿಯ ವಿರುದ್ಧ ಕೈಯೆತ್ತುವವರಲ್ಲ. ನೀನು ಸಾಚಾ ಮುಸಲ್ಮಾನನಾದರೆ ಇಂಥ ಚಳವಳಿಗಿಳಿಯಬಾರದು. ನಿಮ್ಮ ಧರ್ಮಕ್ಕೆ ವಿರುದ್ಧವಾದ ಚಳವಳಿಗಳಿವು.''

''ಮುಸಲ್ಮಾನ್ ಧರ್ಮ ಗುಲಾಮಗಿರಿಯನ್ನು ಕಲಿಸುವುದಿಲ್ಲ ಸಾಹೇಬರೆ. ಅನ್ಯಾಯಗಳಿಗೆ ವಿರುದ್ಧವಾಗಿ ಸಾಚಾ ಮುಸಲ್ಮಾನ ಯಾವಾಗಲೂ ಹೊಡೆದಾಡುತ್ತಾನೆ. ಸ್ವಾಮಿನಿಷ್ಠೆಯ ಮಾತು ಬರೀ ಡಾಂಬಿಕತನ. ಲಕ್ಷಾವಧಿ ಜನರನ್ನು ಗುಲಾಮಗಿರಿಯಲ್ಲಿರಿಸಲು ಕೆಲವರು ಸ್ವಾರ್ಥಿಗಳು ಎಬ್ಬಿಸಿದ ಹೊಲಿ ಅದು, ಇಂಥ ಬಲೆಗೆ ನಾವಿನ್ನು ಬೀಳುವುದಿಲ್ಲ, ನಮಗೆ ಸಾಕಷ್ಟು ಬುದ್ಧಿ ಬಂದಿದೆ.''

''ಸರಿ. ಸರಿ. ದುರಗುಪ್ಪನಿಗೂ ನಿನಗೂ ಬಹಳ ಸ್ನೇಹವೊ?''

''ಹೌದು.''

''ಆತ ಎಲ್ಲಿ ಸಿಕ್ಕಬಹುದು ಹೇಳಬಲ್ಲೆಯಾ?''

''ಊರಲ್ಲಿ ಎಲ್ಲಾದರೂ ಸಿಕ್ಕಬಹುದು.''

''ಹಾಗಲ್ಲ ಯಾರ ಮನೆಯಲ್ಲಿ?''

''ಅದನ್ನು ನನಗೇಕೆ ಕೇಳುತ್ತೀರಿ? ನಿಮ್ಮ ಸಿ.ಐ.ಡಿ.ಗಳ ದಂಡು ಏನು ಮಾಡುತ್ತಿದೆ?''

ಇನ್‌ಸ್ಪೆಕ್ಟರು ಪೊಲೀಸನಿಗೆ ಸನ್ನೆ ಮಾಡಿದರು. ಆತ ಚಬಕವನ್ನೆತ್ತಿ ಇಬ್ರಾಹೀಮನ ಬೆನ್ನಿಗೆ ಒಂದೇಟು ಬಿಗಿದ. ಲಾಠಿಯ ಏಟುಗಳಿಂದಾದ ಬಾಸುಂಡೆಯ ಮೇಲೆಯೆ ಬಿತ್ತು ಆ ಏಟು. ಇಬ್ರಾಹೀಮ ನೋವಿನಿಂದ ಬಳಲಿದರೂ ಮುಖದಿಂದ ಒಂದು ಶಬ್ದವನ್ನೂ ಹೊರಡಿಸಲಿಲ್ಲ. ಆತನ ಸಹನ ಶಕ್ತಿ ಅದ್ಭುತವಾಗಿತ್ತು!

''ಇನ್ನಾದರೂ ಹೇಳುವನೇನು ಕೇಳು!'' ಎಂದು ಗದರಿಸಿದರು ಇನ್‌ಸ್ಪೆಕ್ಟರು.

''ಪ್ರಾಣ ಹೋದರೂ ಹೇಳುವುದಿಲ್ಲ'' ಎಂದು ದೃಢಸ್ವರದಲ್ಲಿ ನುಡಿದ ಇಬ್ರಾಹೀಮ.

''ಪ್ರಾಣ ಹೋಗುವುದೆಂದರೇನೆಂಬುದನ್ನು ತೋರಿಸು ಅವನಿಗೆ!'' ಎಂದು ಕ್ರುದ್ಧರಾಗಿ ನುಡಿದು ಇನ್‌ಸ್ಪೆಕ್ಟರು ಕುರ್ಚಿಯನ್ನು ಬಿಟ್ಟು ಈಚೆಗೆ ಬಂದರು. ಚಬಕವನ್ನೆತ್ತಿ ಪೊಲೀಸ್ ಏಟು ಹಾಕತೊಡಗಿದ. ಬೆನ್ನಿಗೆ, ಭುಜಕ್ಕೆ, ಕಾಲಿಗೆ, ಕೈಗೆ, ಕುತ್ತಿಗೆಗೆ ಎಲ್ಲ ಕಡೆಗೂ ಏಟು ಬಿತ್ತು. ಆದರೂ ಇಬ್ರಾಹೀಮ ಶೂರನಂತೆ ಎಲ್ಲವನ್ನೂ ಸಹಿಸಿದ. ಒಂದು ಸಲವೂ 'ಅಯ್ಯೋ' ಎಂದು ಆಕ್ರೋಶ ಮಾಡಲಿಲ್ಲ. ಚಬಕದ ಸದ್ದು ಕಚೇರಿಯಲ್ಲೆಲ್ಲ ದುಮುದುಮಿಸುತ್ತಿತ್ತು. ಶಂಕರ, ನಾಗೋಜಿ ಹಾಗೂ ಇನ್ನಿತರ ಕೈದಿಗಳೆಲ್ಲ ತಮ್ಮ ಕೊಠಡಿಗಳಲ್ಲಿ ಹಲ್ಲು ಕಡಿಯುತ್ತ ಕುಳಿತಿದ್ದರು. ಅವರು ಏನನ್ನೂ ಮಾಡುವಂತಿರಲಿಲ್ಲ. ಪಂಜರದಲ್ಲಿ ಸಿಕ್ಕಿಬಿದ್ದ ಹುಲಿಗಳ ಹಾಗೆ ಚಡಪಡಿಸುತ್ತ ರೋಷವನ್ನು ಹೇಗೋ ತಡೆಹಿಡಿದು ಕುಳಿತಿದ್ದರು.

''ಸಾಗಿಸಿ ಅವನನ್ನು!'' ಎಂದು ನುಡಿದು ಇನ್‌ಸ್ಪೆಕ್ಟರು ಮತ್ತೆ ಕುರ್ಚಿಯ ಮೇಲೆ ಕುಳಿತುಕೊಂಡರು. ''ಹೊಡೆಯಬಾರದಿತ್ತು. ಆದರೂ ಹೊಡೆಯಬೇಕಾಯಿತು. ಹಾಳು ಕೆಲಸ ನಮ್ಮದು! ಉಪಾಯವಿಲ್ಲ!'' ಎಂದು ತಮ್ಮಷ್ಟಕ್ಕೆ ತಾವೇ ಹೇಳಿಕೊಂಡು ಮತ್ತೊಂದು ಸಿಗರೇಟಿಗೆ ಬೆಂಕಿ ಹೊತ್ತಿಸಿದರು.

ಪೊಲೀಸು ಕಚೇರಿಯಲ್ಲಿ ಇಂಥ ಘಟನೆಗಳು ನಡೆಯುತ್ತಿದ್ದ ಸಮಯದಲ್ಲಿ ನಗರದ ಬೇರೆ ಬೇರೆ ಭಾಗಗಳಲ್ಲಿದ್ದ ಕೂಲಿಕಾರ ವಸತಿಗಳಲ್ಲೂ ಅಂಥವೇ ಘಟನೆಗಳು ನಡೆಯುತ್ತಿದ್ದುವು. ಮಧ್ಯರಾತ್ರಿಯಲ್ಲಿ ಸೋಮಣ್ಣನ ಮನೆಯಲ್ಲಿ ನುಗ್ಗಿ ಪೊಲೀಸರು ಆತನನ್ನು ಪ್ರಶ್ನಿಸುತ್ತಿದ್ದರು. ಕೈ ಗಾಯದಿಂದ ಅತ್ಯವಸ್ಥನಾಗಿ ಬಿದ್ದುಕೊಂಡಿದ್ದ ಸೋಮಣ್ಣನನ್ನೂ ಅವರು ಪೀಡಿಸದಿರಲಿಲ್ಲ. ಕೂಲಿಕಾರ ವಸತಿಯಲ್ಲಿನ ಎಲ್ಲ ಗುಡಿಸಲುಗಳನ್ನೂ ಶೋಧಿಸಿ ನೋಡಿದರೂ ದುರುಗಪ್ಪನ ಸುಳಿವು ಹತ್ತದಿರಲು ಪೊಲೀಸರಿಗೆ ತಾಳ್ಮೆ ತಪ್ಪಿಹೋಗಿರಬೇಕು. ಎಷ್ಟೋ ಜನ ಕೂಲಿಕಾರರಿಗೆ ಹೊಡೆತ ಬಿತ್ತು. ಗುಡಿಸಲುಗಳಲ್ಲಿನ ಗಡಿಗೆ ಮಡಕೆಗಳನ್ನು ಎತ್ತಿ ಹೊರಕ್ಕೆ ಎಸೆದರು ಪೊಲೀಸರು. ಹರಕು ಕೌದಿಗಳನ್ನೂ ಚಿಂದಿ ಸೀರೆಗಳನ್ನೂ ಎತ್ತಿ ಬಿಸುಟರು. ಯಾವುದರಿಂದಲೂ ಕೂಲಿಕಾರರು ಹೆದರುವಂತಿರಲಿಲ್ಲ. ದುರುಗಪ್ಪ ಇಂಥಲ್ಲಿ ಇರಬಹುದೆಂಬ ವಿಚಾರ ಅನೇಕರಿಗೆ ಗೊತ್ತಿದ್ದಿತು. ಒಬ್ಬರೂ ಬಾಯಿಬಿಡಲಿಲ್ಲ. ಪೊಲೀಸರು ಹೆದರಿಸಿದಷ್ಟೂ ಕೂಲಿಕಾರರ ನಿಶ್ಚಯ ದೃಢವಾಗುತ್ತಿತ್ತು; ದುರುಗಪ್ಪನ ಬಗೆಗೆ ಸಹಾನುಭೂತಿ ಹೆಚ್ಚುತ್ತಿತ್ತು. ಸರಕಾರದ ಬಗೆಗೆ ತಿರಸ್ಕಾರವೂ ಬೆಳೆಯುತ್ತಿತ್ತು. ಪಾಪ! ಪೊಲೀಸರಿಗೆ ಅದರ ಅರಿವಿರಲಿಲ್ಲ. ತಾವು ಕೂಲಿಕಾರರಿಗೆ ಬಿಗಿಯುವ ಒಂದೊಂದು ಏಟೂ ಸರಕಾರದ ಅಸ್ತಿತ್ವಕ್ಕೆ ಬಿಗಿಯಾದ ಕೊಡಲಿಯ ಪೆಟ್ಟೆಂಬುದು ಆ ಅಶಿಕ್ಷಿತ ಪೊಲೀಸರಿಗೆ ಹೇಗೆ ಗೊತ್ತಾದೀತು!

ಬೆಳಗಾಗುತ್ತ ಬಂದಿದೆ. ಪೂರ್ವ ದಿಕ್ಕು ತಿಳಿಯಾಗತೊಡಗಿದೆ. ಕೂಲಿಕಾರ ವಸತಿಗಳಲ್ಲಿನ ಕೋಳಿಗಳೆದ್ದು ಕೂಗತೊಡಗಿವೆ. ಗುಡಿಸಲುಗಳೆದುರಿಗೆ ಉರಿ ಹೊತ್ತಿಸಿ ಮೈ ಕಾಯಿಸಿಕೊಳ್ಳುತ್ತ ಕುಳಿತಿದೆ ಕೂಲಿಕಾರರ ಸಮೂಹ. ರಾತ್ರಿ ಯಾರಿಗೂ ನಿದ್ರೆಯಿಲ್ಲ. ಎಲ್ಲರಿಗೂ ಆಕಳಿಕೆ, ತೂಕಡಿಕೆ. ಎಲ್ಲರ ಎದೆಗಳೂ ರೋಷದಿಂದ ಭುಗಿಲೆನ್ನುತ್ತಿವೆ. ಮುಂದೇನು ಮಾಡಬೇಕು? ಕೆಲಸಕ್ಕೆ ಹೋಗುವುದೇ ಬೇಡವೇ? 'ಬೇಡ'ವೆನ್ನುವವರೇ ಹೆಚ್ಚು ಜನ. ಆದರೆ ಅನೇಕರಿಗೆ ಆ ಧೈರ್ಯವಿಲ್ಲ. ಸೋಶಲಿಸ್ಟರ ಪ್ರಚಾರಕಾರ್ಯ ಬೇರೆ ಭರದಿಂದ ಸಾಗಿದೆ. ಕಮ್ಯೂನಿಸ್ಟರು ಕಿಡಿಗೇಡಿಗಳು, ಅವರ ಮಾತಿಗೆ ಕಿವಿಗೊಡುವವರೆಲ್ಲ ಹಾಳಾಗುವುದು ಖಂಡಿತ ಎಂದು ಅವರು ಬೋಧಿಸುತ್ತಿದ್ದಾರೆ. ಈಗ ಇರುವುದು ನಮ್ಮ ಸರಕಾರ, ನೆಹರೂ ಸರಕಾರ, ನಾವೆಲ್ಲ ಅದಕ್ಕೆ ಬೆಂಬಲ ವಾಗಿರಬೇಕು, ಮುಷ್ಕರ ಇತ್ಯಾದಿ ಹೂಡಬಾರದು ಎಂದು ಸಾರುತ್ತಿದ್ದಾರೆ. ಕೂಲಿಕಾರ ರಿಗೆ ರಾಜಕೀಯ ಜ್ಞಾನವೆಲ್ಲಿಂದ ಬರಬೇಕು? ನೆಹರೂ ಎಂದರೆ ಅವರಿಗೆ ಪ್ರೀತಿ. ಗಾಂಧೀಜಿಯನ್ನು ಬಿಟ್ಟರೆ ನೆಹರೂ ಒಬ್ಬರೇ ಅವರ ಅಭಿಮಾನಕ್ಕೆ ಪಾತ್ರರಾದವರು. ಹಲವರ ಗುಡಿಸಲುಗಳಲ್ಲಿ ನೆಹರೂ ಚಿತ್ರವೂ ಉಂಟು. ಬೆಳಗ್ಗೆ

ಏಳುತ್ತಲೂ ಅದಕ್ಕೆ ನಮಸ್ಕಾರ ಹಾಕುವವರೂ ಉಂಟು. ಅಂಥ ನೆಹರೂ ಸರಕಾರದ ವಿರುದ್ಧ ಮುಷ್ಕರ ಹೂಡುವುದೇ! ಛೆ! ಬೇಡ! ಎಂದು ಹಲವರು ವಾದಿಸುತ್ತಾರೆ. ಈ ಭಿನ್ನಾಭಿಪ್ರಾಯ ವೇನೇ ಇದ್ದರೂ ಸೆಟ್ಟರ ಬಗೆಗೆ, ಪೊಲೀಸರ ಬಗೆಗೆ ಮಾತ್ರ ಯಾರಿಗೂ ಪ್ರೀತಿಯಿಲ್ಲ, ಎಲ್ಲರಿಗೂ ರೋಷವೆ. ಸೆಟ್ಟರ ಹೆಸರು ಕೇಳಿದೊಡನೆ ಥೂ ಎಂದು ಉಗುಳುವವರಿಗೆ, ಪೊಲೀಸರ ಮಾತು ಬಂದೊಡನೆ ಅವಾಚ್ಯವಾಗಿ ಬಯ್ಯುವವರಿಗೆ ಕೊರತೆಯೇನೂ ಇಲ್ಲ, ತಮ್ಮೆಲ್ಲ ಕಷ್ಟಗಳಿಗೂ ಇವರೆ ಮೂಲಕಾರಣವೆಂದು ಕೂಲಿಕಾರರ ನಂಬಿಕೆ. ಬಡವರ ವೈರಿಗಳಾದ ಇವರ ವಿರುದ್ಧವಾಗಿ ಎಂಥ ಚಳವಳಿಗೂ ಸಿದ್ಧರೇ ಅವರು. ಆದರೆ ನೆಹರೂ! ಪಂಡಿತ ನೆಹರೂ! ನೆಹರೂ ಸರಕಾರ! ಅದಕ್ಕೆ ಪೆಟ್ಟು ಬೀಳುವು ದಿಲ್ಲವೆ?-ಅದು ಸೋಶಲಿಸ್ಟರ ಪ್ರಚಾರದ ಪರಿಣಾಮ. ಹೇಮಾದ್ರಿ ನಾರಾಯಣರ ಕೌಶಲ್ಯದ ಮಾತುಗಾರಿಕೆಯ ಪರಿಣಾಮ! ರಾಜಕೀಯ ಅಜ್ಞಾನದಿಂದಾಗಿ ಭಾರತೀಯರಲ್ಲಿ ನೆಲಸಿದ ವಿಭೂತಿ ಪೂಜಾ ಭಾವನೆಯ ಪರಿಣಾಮ!

## ೨೪

ಮುನ್ನಾದಿನದ ರಾತ್ರಿಯೆಲ್ಲ ನಿದ್ರೆಯಿರಲಿಲ್ಲವಾದುದರಿಂದ ಚಂದ್ರಣ್ಣ ಅಂದು ಮಧ್ಯಾಹ್ನ ಊಟ ಮಾಡಿ ಬಂದವನು ಮಹಡಿಯ ಮೇಲೆ ನಿದ್ರೆ ಹೋಗಿದ್ದ. ಸುಮಾರು ಮೂರು ಗಂಟೆಯ ಸಮಯವಾಗಿರಬಹುದು. ತನ್ನ ಕುರ್ಚಿಯ ಮೇಲೆ ಕುಳಿತುಕೊಂಡು ಸುಬ್ಬರಾಯ ಟೈಪಿಂಗ್ ಅಭ್ಯಾಸ ನಡೆಸಿದ್ದ.

ಅಕಸ್ಮಾತ್ತಾಗಿ ಕಚೇರಿಯೆದುರಿಗೆ ಕಾರು ಬಂದು ನಿಂತ ಸದ್ದಾಯಿತು. ಒಡನೆಯೆ ಸುಬ್ಬರಾಯ ಹೊರಕ್ಕೆ ಬಂದು ನೋಡಿದ. ಶಿವಯೋಗಿ, ಸಂಗಪ್ಪ ಸೆಟ್ಟರು, ತಮ್ಮಣ್ಣನವರು ಕಾರಿನಿಂದ ಇಳಿದು ಬಂದಿದ್ದರು. ಕೈಲಿದ್ದ ಬಣ್ಣದ ಬಡಿಗೆಯನ್ನು ಕೆಳಕ್ಕೆ ಊರುತ್ತ ಜಗದ್ಗುರುಗಳೂ ಕಾರಿನಿಂದ ಇಳಿದು ಬರುತ್ತಿದ್ದರು.

ಸುಬ್ಬರಾಯ ಗಾಬರಿಗೊಂಡು ಚಂದ್ರಣ್ಣನನ್ನು ಎಚ್ಚರಿಸತೊಡಗಿದ. ಆದರೆ ರಾತ್ರಿಯೆಲ್ಲ ಜಾಗರಣೆಯಾಗಿದ್ದಿತಾದುದರಿಂದ ಗಾಢ ನಿದ್ರೆಯಲ್ಲಿದ್ದ ಚಂದ್ರಣ್ಣನಿಗೆ

ಬೇಗ ಎಚ್ಚರವಾಗಲಿಲ್ಲ. ಆತ ಕಣ್ಣು ತೆರೆದು ಹಾಸಿಗೆಯಲ್ಲಿ ಅತ್ತ ಇತ್ತ ಹೊರಳುತ್ತಿದ್ದಂತೆಯೆ ಎಲ್ಲರೂ ಮೆಟ್ಟಲುಗಳನ್ನೇರಿ ಮೇಲೆ ಬಂದರು. ಆಕಳಿಸುತ್ತಿದ್ದ ಮೇಲಕ್ಕೇಳುತ್ತಿದ್ದ ಚಂದ್ರಣ್ಣನನ್ನು ನೋಡುತ್ತಲೂ ಎಲ್ಲರೂ ಮುಖ ಕಿವುಚಿದ ಹಾಗೆ ಮಾಡಿದರು.

''ಏನು, ಇನ್ನೂ ಮಲಗಿಯೆ ಇದ್ದೀರಾ?'' ಎನ್ನುತ್ತ ಶಿವಯೋಗಿ ಸ್ವಾಮಿಗಳಿಗಾಗಿ ಕುರ್ಚಿಯೊಂದನ್ನು ಅಣಿಗೊಳಿಸಿ ಜೊತೆಗೆ ತಂದಿದ್ದ ಮಖಮಲ್ಲಿನ ಬಟ್ಟೆಯನ್ನು ಅದರ ಮೇಲೆ ಹಾಸಿದ. ಎಲ್ಲಿಗೆ ಹೋದರೂ ಆ ಬಟ್ಟೆಯೂ ಸ್ವಾಮಿಗಳ ಜೊತೆಗೇ ಹೋಗುವುದು. ಅದನ್ನು ಹಾಸದೆ ಹಾಗೆಯೆ ಯಾವ ಆಸನದ ಮೇಲೆಯೂ ಅವರು ಕೂಡ್ರುತ್ತಿರಲಿಲ್ಲ. ಸ್ವಾಮಿಗಳ ದೇಹ ಪಾವಿತ್ರ್ಯವನ್ನು ಕಾಪಾಡುವ ಹೊದಿಕೆಯ ಹಾಗಿತ್ತು ಆ ಬಟ್ಟೆ!

''ಅದೇನು ಮಧ್ಯಾಹ್ನ ನಿದ್ರೆ ಚಂದ್ರಣ್ಣ?'' ಎಂದು ಕೇಳುತ್ತ ಸ್ವಾಮಿಗಳು ಆಸನದ ಮೇಲೆ ಮಂಡಿಸಿದರು. ಇತರರೂ ಅಲ್ಲಲ್ಲಿ ಕುಳಿತುಕೊಂಡರು.

ಚಂದ್ರಣ್ಣ ಹಾಸಿಗೆಯನ್ನು ಸುತ್ತಿ ಒಂದು ಕಡೆಗಿಟ್ಟು ಮುಖವನ್ನೊರೆಸಿಕೊಳ್ಳುತ್ತ ಸ್ವಾಮಿಗಳ ಹತ್ತಿರ ಬಂದ. ಬಳಲಿದ ಮುಖ, ಕೆಂಪಗಾದ ಕಣ್ಣು ಜಾಗರಣೆಯನ್ನು ಸೂಚಿಸುತ್ತಿದ್ದುವು.

''ರಾತ್ರಿ ನಿದ್ದೆಯಿರಲಿಲ್ಲವೆ?'' ಎಂದು ಕೇಳಿದರು ಸೆಟ್ಟರು.

''ಇಲ್ಲ...'' ಎಂದು ಚಂದ್ರಣ್ಣ ಉತ್ತರವೀಯುತ್ತಿದ್ದ ಹಾಗೆ ಶಿವಯೋಗಿ ನಡುವೆ ಬಾಯಿ ಹಾಕಿ - ''ರಾತ್ರಿಯೆಲ್ಲ ಕೂಲಿಕಾರರ ಸಭೆ ನಡೆಸುತ್ತಿದ್ದರೆ ನಿದ್ರೆಯಾದರೂ ಹೇಗೆ ಬರಬೇಕು?'' ಎಂದು ನುಡಿದ.

''ಹೌದೇ ಚಂದ್ರಣ್ಣ? ಕೂಲಿಕಾರರ ಸಭೆಗಳಿಗೆ ಹೋಗುತ್ತಿದ್ದೀರಾ? ನೀವು?'' ಎಂದು ಕೇಳಿದರು ಸ್ವಾಮಿಗಳು.

ಕೊಂಚ ಹೊತ್ತು ಮೌನವಾಗಿ ನಿಂತಿದ್ದ ಚಂದ್ರಣ್ಣ, ತಾನು ಕೂಲಿಕಾರರ ಸಭೆಯಲ್ಲಿ ಎರಡು ನಿಮಿಷಗಳ ಕಾಲ ಮಾತನಾಡಿದುದು ಈಗಾಗಲೇ ಇವರಿಗೆಲ್ಲ ತಿಳಿದು ಹೋಗಿರಬೇಕು. ಇನ್ನೂ ಏನೇನೂ ತಿಳಿದಿದೆಯೊ! ತಾನು ಶಂಕರನ ಮನೆಗೆ ಹೋದುದು, ಸರೋಜಾ ರತ್ನಾ ಜೊತೆಗೆ ಆ ಓಣಿಯಲ್ಲಿನ ಆ ಮನೆಯಲ್ಲಿ ಕರಪತ್ರಗಳ ಕೆಲಸ ಮಾಡಿದುದು - ಎಲ್ಲವೂ ತಿಳಿದಿದೆಯೊ ಏನೊ- ಪೊಲೀಸರು ಹಾಗೂ ಸೆಟ್ಟರ

ಸಿ.ಐ.ಡಿ.ಗಳು ಎಲ್ಲ ಕಡೆಗೂ ಅಲೆಯುತ್ತಿರುವಾಗ ಈ ಸುದ್ದಿ ತಿಳಿಯುವದರಲ್ಲೇನೂ ಆಶ್ಚರ್ಯವಿಲ್ಲ. ಆದರೆ... ಶಿವಯೋಗಿ ಆ ವಿಷಯವನ್ನೆತ್ತಿಕೊಂಡು ಈ ರೀತಿ ವ್ಯಂಗ್ಯವಾಗಿ ಮಾತನಾಡುವುದೇಕೊ? ಈಗಾಗಲೇ ಈ ವಿಷಯವನ್ನೆಲ್ಲ ಸ್ವಾಮಿಗಳಿಗೆ ತಿಳಿಸಿ ಅವರ ಮನಸ್ಸನ್ನು ಕಲುಷಿತಗೊಳಿಸಿರುವನೊ ಏನೊ!...

''ಬರೀ ಸಭೆಗಳಿಗೆ ಮಾತ್ರವಲ್ಲ ಬುದ್ಧೀ! ಅವರ ಮನೆಗಳಿಗೂ ಹೋಗುತ್ತಿದ್ದಾರೆ. ಹೌದೋ ಅಲ್ಲವೊ ಚಂದ್ರಣ್ಣ?'' ಎಂದು ಕೇಳುತ್ತ ಶಿವಯೋಗಿ ಚಂದ್ರಣ್ಣನನ್ನು ವಕ್ರ ದೃಷ್ಟಿಯಿಂದ ನಿಟ್ಟಿಸತೊಡಗಿದ.

''ಹೋಗುತ್ತಿದ್ದೇನೆ. ಮುಂದೆ?''

ಶಾಂತವೂ ಗಂಭೀರವೂ ಆದ ಆ ಧ್ವನಿ ಕಿವಿಗೆ ಸೇರುತ್ತಲೂ ಎಲ್ಲರೂ ಚಕಿತರಾಗಿ ಚಂದ್ರಣ್ಣನ ಮುಖವನ್ನೇ ಮಿಕಿ ಮಿಕಿ ನೋಡತೊಡಗಿದರು. ಒಂದೆರಡು ಕ್ಷಣಗಳವರೆಗೆ ಯಾರೂ ಮಾತನಾಡಲಿಲ್ಲ. ಶಿವಯೋಗಿಯಂತೂ ತಲೆ ತಗ್ಗಿಸಿಕೊಂಡು ನಿಂತುಕೊಂಡಿದ್ದ.

ಮೌನವನ್ನು ಮುರಿದು ಸ್ವಾಮಿಗಳು ಮಾತಿಗಾರಂಭಿಸಿದರು : ''ಹೀಗೆಲ್ಲ ಮಾಡಿದರೆ ಹೇಗೆ ಚಂದ್ರಣ್ಣ? ನಿಮ್ಮ ಅಂತಸ್ತನ್ನು ಮರೆತು ನೀವು ಈ ರೀತಿ ವರ್ತಿಸಿದರೆ?''

''ಅಂತಸ್ತು! ಏನು ಹಾಗಂದರೆ ಸ್ವಾಮೀಜಿ?''

''ನೀವು ಕಂಪನಿಯ ಮ್ಯಾನೇಜಿಂಗ್ ಡೈರೆಕ್ಟರರು. ಪತ್ರಿಕಾಕರ್ತರು. ಅವರು ಕೂಲಿಕಾರರು!''

''ಇರಬಹುದು. ಅಂದ ಮಾತ್ರಕ್ಕೆ ಅವರಿಗೂ ನಮಗೂ ಯಾವ ಸಂಬಂಧವೂ ಇರಬಾರದೆಂದು ತಮ್ಮ ಅಭಿಪ್ರಾಯವೊ?''

''ಹಾಗಲ್ಲ. ಆದರೂ ಸ್ವಲ್ಪ ವಿಚಾರ ಮಾಡಿದರೆ ಅಂಥವರ ಸಂಬಂಧ ತಂದುಕೊಳ್ಳದೆ ದೂರವಿರುವುದೇ ಒಳ್ಳೆಯದೆಂದು ನಿಮಗೂ ಅನ್ನಿಸಬಹುದು.''

''ನನಗೇನೂ ಹಾಗನ್ನಿಸುವುದಿಲ್ಲ. ಅನ್ನಿಸುವುದೂ ಸಾಧ್ಯವೂ ಇಲ್ಲ'' ಎಂದು ದೃಢಸ್ವರದಲ್ಲಿ ನುಡಿದ ಚಂದ್ರಣ್ಣ.

ಇದುವರೆಗೆ ಸುಮ್ಮನಿದ್ದ ಶಿವಯೋಗಿ ಮತ್ತೆ ತಲೆಯೆತ್ತಿ ಕೆಣಕುವ ಸ್ವರದಲ್ಲಿ ನುಡಿದ :

"ನಿಮಗನ್ನಿಸುವುದನ್ನೇ ನೀವು ಮಾಡುತ್ತ ಹೊರಟರೆ! ಇದೇನು ಲಿಮಿಟೆಡ್ ಕಂಪನಿಯೊ, ಹುಡುಗಾಟವೊ?"

"ನಿಮಗನ್ನಿಸಿದ ಹಾಗೆ ನೀವು ಕಂಪನಿಯ ಹಣ ಹಾಳು ಮಾಡುತ್ತಿದ್ದೀರಲ್ಲ! ಅದು ಹುಡುಗಾಟವಲ್ಲವೊ?" ಎಂದು ಕೇಳಬೇಕೆಂದು ಚಂದ್ರಣ್ಣನಿಗನ್ನಿಸಿತು. ಆದರೆ ಕಂಪನಿಯ ಹಣವನ್ನು ಆತ ದುರುಪಯೋಗಪಡಿಸಿದ ವಿಷಯವನ್ನು ಸ್ವಾಮಿಗಳು, ಸೆಟ್ಟರು, ತಮ್ಮಣ್ಣನವರೆದುರಿಗೆ ಎತ್ತಿ ಆಡುವುದು ಉಚಿತವಲ್ಲವೆಂದು ಬಗೆದು ಆ ವಿಷಯವನ್ನಾಡಲಿಲ್ಲ. ಅದಕ್ಕೆ ಪ್ರತಿಯಾಗಿ – "ಸ್ವಲ್ಪ ನಾಲಗೆ ಬಿಗಿ ಹಿಡಿದು ಮಾತಾಡಿರಿ ಯೋಗಿಗಳೆ. ಯದ್ವಾತದ್ವಾ ಮಾತಾಡಿಸಿಕೊಳ್ಳಲು ನಾನೇನು ನಿಮ್ಮ ಗುಲಾಮನಲ್ಲ" ಎಂದ.

"ಸತ್ಯವನ್ನಾಡಿದರೆ ಯದ್ವಾತದ್ವಾ ಆಡಿದಂತಾಯಿತೇನು? ಯಾವ ಹೊಣೆಗಾರಿಕೆಯ ಯೋಚನೆಯನ್ನೂ ಮಾಡದೆ ನೀವು ಈ ರೀತಿ ಕಮ್ಯೂನಿಸ್ಟರ ಜೊತೆಗೆ ಸೇರಿಕೊಂಡು ಕೆಲಸ ಮಾಡಿದರೆ ಹೇಗೆ? ನಿನ್ನೆ ರಾತ್ರಿಯೆಲ್ಲ ಎಲ್ಲಿದ್ದಿರಿ?"

"ಅದನ್ನು ಕೇಳಲು ನೀವಾರು?"

"ಕಂಪನಿಯಲ್ಲಿ ನಿಮ್ಮ ಪಾಲುಗಾರನಾಗಿರುವುದರಿಂದ ಕೇಳಲು ನನಗೆ ಅಧಿಕಾರವಿದೆ. ಮನಸ್ಸು ಬಂದ ಹಾಗೆ ವರ್ತಿಸಲು ನೀವು ಸ್ವತಂತ್ರರಲ್ಲ. ಸ್ವಾಮಿಗಳೂ ಸೆಟ್ಟರೂ ತಮ್ಮಣ್ಣನವರೂ ಷೇರ್‌ಹೋಲ್ಡರಾಗಿರುವ ಕಂಪನಿಯ ಸೇವಕರು ನೀವು ಎಂಬುದನ್ನು ಮರೆಯಬೇಡಿ!"

ಕಂಪನಿಯ ಸೇವಕರು!

ತೀಕ್ಷ್ಣವಾದ ಬಾಣವೊಂದು ಬೀಸಿ ಬಂತು ತನ್ನೆದೆಗೆ ತಾಕಿದಂತಾಯಿತು ಚಂದ್ರಣ್ಣನಿಗೆ. ಕಂಪನಿಯ ಸೇವಕ! ಆ ವಿಚಾರವೆ ಇದುವರೆಗೆ ಆತನಿಗೆ ಹೊಳೆದಿರ ಲಿಲ್ಲ. ಲಿಮಿಟೆಡ್ ಕಂಪನಿಯ ಮ್ಯಾನೇಜಿಂಗ್ ಡೈರೆಕ್ಟರ್ ಎಂದರೆ ಸೇವಕನೆ?

ಶಿವಯೋಗಿ ಹೇಳುತ್ತಿದ್ದ : "ನೀವು ಸಂಪೂರ್ಣ ಸ್ವತಂತ್ರರೆಂದು ತಿಳಿದು ಕೊಂಡಿದ್ದರೆ ಅದು ದೊಡ್ಡ ತಪ್ಪು. ಕಂಪನಿಯಲ್ಲಿರುವವರೆಗೂ ನೀವೂ ಈ ರೀತಿ ಸ್ವೇಚ್ಛೆಯಾಗಿ ವರ್ತಿಸಕೂಡದು."

"ಎಂದರೆ? ಕಂಪನಿಯ ಡೈರೆಕ್ಟರಾದ ಮಾತ್ರಕ್ಕೆ ನನಗೆ ವೈಯಕ್ತಿಕ ಸ್ವಾತಂತ್ರ್ಯವೇ ಇಲ್ಲವೆಂದು ನಿಮ್ಮ ಅಭಿಪ್ರಾಯವೊ?"

"ನಿಮಗೊಬ್ಬರಿಗೇ ಅಲ್ಲ, ನನಗೂ ಇಲ್ಲ ಅಂಥ ಸ್ವಾತಂತ್ರ್ಯ. ತಮ್ಮಣ್ಣನವರಿಗೂ ಇಲ್ಲ. ಕೇಳಿ ನೋಡಿ ಅವರನ್ನು ಬೇಕಾದರೆ!"

ಇದುವರೆಗೆ ಮೌನವಾಗಿದ್ದ ತಮ್ಮಣ್ಣನವರು ಗಂಭೀರವಾದ ಧ್ವನಿಯಲ್ಲಿ ಹೇಳತೊಡಗಿದರು :

"ಶಿವಯೋಗಿಗಳು ಹೇಳುವ ಮಾತು ಸರಿಯಾದುದು ಚಂದ್ರಣ್ಣ. ಸ್ವಾತಂತ್ರ್ಯ ಎಂದರೆ ಯಾವಾಗಲೂ ಸ್ವಚ್ಛಂದವಾಗಬಾರದು. ನಾವು ಕಾಂಗ್ರೆಸ್ಸಿನವರು, ಸೆಟ್ಟರು ಕಾಂಗ್ರೆಸ್ಸಿನವರು. ನೀವೂ ಕಾಂಗ್ರೆಸ್ಸಿನವರೆಂದು ತಿಳಿದೇ ನಾವು ನಿಮ್ಮೊಡನೆ ಸೇರಿಕೊಂಡದ್ದು..."

ಅವರನ್ನು ನಡುವೆ ತಡೆದು ಚಂದ್ರಣ್ಣ – "ನಾನು ಕಾಂಗ್ರೆಸ್ಸಿನವನೆಂದು ಸೆಟ್ಟರೇನೂ ಸೇರಲಿಲ್ಲ, ಅಲ್ಲವೇನ್ರಿ ಸೆಟ್ಟರೆ? ನಾನು ನಿಮ್ಮ ಜಾತಿಯವನೆಂದು ತಾನೆ ನೀವು ಈ ಕಂಪನಿಯಲ್ಲಿ ಆಸಕ್ತಿ ವಹಿಸಿದ್ದು?" ಎಂದು ಕೇಳಿದ.

ಸೆಟ್ಟರು ನಗುತ್ತ ನುಡಿದರು : "ಅದೂ ನಿಜವೆ!"

"ತಾವು ನಮ್ಮ ಕಂಪನಿಯ ಷೇರ್ ಕೊಳ್ಳಲು ಸಹ ಜಾತಿಯ ಅಭಿಮಾನವೆ ಕಾರಣವಲ್ಲವೆ ಸ್ವಾಮಿಗಳೆ?" ಎಂದ ಚಂದ್ರಣ್ಣ.

ಸ್ವಾಮಿಗಳು ಉತ್ತರವೀಯಲಿಲ್ಲ. ಬೆರಗುಗೊಂಡ ದೃಷ್ಟಿಯಿಂದ ಚಂದ್ರಣ್ಣನನ್ನು ನಿರುಕಿಸತೊಡಗಿದರು.

"ಶಿವಯೋಗಿ, ಸೆಟ್ಟರು, ಸ್ವಾಮಿಗಳು ಎಲ್ಲರೂ ಕಂಪನಿಗೆ ಸೇರಿಕೊಂಡದ್ದು ಜಾತಿಯ ಅಭಿಮಾನದಿಂದ. ತಮ್ಮಣ್ಣನವರು ಸೇರಿದ್ದು ಕಾಂಗ್ರೆಸ್ಸಿಗೆ ಅಭಿಮಾನದಿಂದ. ನಿಜ ಹೇಳಲೇ? ನಿಮ್ಮಲ್ಲಿ ಯಾರಿಗೂ ಜಾತಿಯ ಅಭಿಮಾನವೂ ಇಲ್ಲ, ಕಾಂಗ್ರೆಸ್ಸಿನ ಅಭಿಮಾನವೂ ಇಲ್ಲ. ಕೇವಲ ವೈಯಕ್ತಿಕ ಸ್ವಾರ್ಥಕ್ಕಾಗಿ ನೀವು ನನ್ನೊಡನೆ ಸೇರಿದ್ದೀರಿ. ಆ ಸ್ವಾರ್ಥವನ್ನು ಮರೆ ಮಾಡಿ ಈ ರೀತಿ ಸುಳ್ಳು ಅಭಿಮಾನ ನಟಿಸುತ್ತಿದ್ದೀರಿ."

ಕಣ್ಣುಗಳನ್ನರಳಿಸಿ ಎಲ್ಲರೂ ವಿಸ್ಮಯದಿಂದ ಚಂದ್ರಣ್ಣನನ್ನೇ ಮಿಕಿ ಮಿಕಿ ನೋಡುತ್ತಿದ್ದರು. ಆತ ಶಾಂತವಾದ ವಿಕಾರರಹಿತವಾದ ಸ್ವರದಲ್ಲಿ ಹೇಳುತ್ತಿದ್ದ : "ನನ್ನ ಬಗ್ಗೆ ನೀವೆಲ್ಲರೂ ತಪ್ಪು ಕಲ್ಪನೆ ಮಾಡಿಕೊಂಡಿದ್ದೀರಿ. ನಾನು ಜಾತಿಯ ಅಭಿಮಾನಿಯೂ ಅಲ್ಲ, ಕಾಂಗ್ರೆಸ್ಸಿನ ಅಭಿಮಾನಿಯೂ ಅಲ್ಲ. ಈ ಯಾವ ಬಲೆಗಳಿಗೂ ಸಿಕ್ಕಿಬೀಳುವ ಮನುಷ್ಯ ನಾನಲ್ಲ..."

"ಮತ್ತೆ? ಇನ್ನೇನು ಹಾಗಾದರೆ? ನೀವು ಕಮ್ಯೂನಿಸ್ಟ್ ಎಂದೇ ಆಯಿತಲ್ಲ?" ಎಂದ ಶಿವಯೋಗಿ.

"ಯಾವುದೊಂದು ಪಕ್ಷದ ಸದಸ್ಯನಾಗಿರಲೂ ನನಗೆ ಇಷ್ಟವಿಲ್ಲ. ಆದರೂ ನೀವು ನನ್ನನ್ನು ಕಮ್ಯೂನಿಸ್ಟ್ ಎಂದು ಕರೆದರೂ ನನಗೆ ಪರಿವೆಯಿಲ್ಲ, ಕರೆದುಕೊಳ್ಳಬಹುದು."

"ಆ ಕಮ್ಯೂನಿಸ್ಟ್ ಹುಡುಗಿಯರೇನೊ ಬಲೆ ಬೀಸಿದ ಹಾಗೆ ಕಾಣುತ್ತೆ ನಿಮ್ಮ ಮೇಲೆ!" ಎಂದು ವ್ಯಂಗ್ಯವಾಗಿ ನುಡಿದ ಶಿವಯೋಗಿ.

ಈ ಮಾತಿನಿಂದ ಯಾರಿಗಾದರೂ ಸಿಟ್ಟು ಬರುವುದು ಸಹಜವಾಗಿದ್ದಿತು. ಆದರೆ ಚಂದ್ರಣ್ಣನಿಗೆ ಮಾತ್ರ ಸಿಟ್ಟು ಬರಲಿಲ್ಲ. ಶಿವಯೋಗಿಯ ಸ್ವಭಾವವನ್ನಾತ ಚೆನ್ನಾಗಿ ಅರಿತಿದ್ದನಾದುದರಿಂದ ಅಂಥವನ ಬಗೆಗೆ ಸಿಟ್ಟು ಮಾಡಿಕೊಂಡು ಉಪಯೋಗವಿಲ್ಲವೆಂಬುದು ಆತನಿಗೆ ತಿಳಿದಿತ್ತು.

"ಮಾತು ಬಹಳ ದೂರ ಹೋಯಿತು ಶಿವಯೋಗಿ. ನಿಮ್ಮಂಥವರು ಹೆಣ್ಣುಮಕ್ಕಳ ಬಗ್ಗೆ ಇಂಥ ಮಾತನಾಡಬಾರದು," ಎಂದ.

"ಅವರ ಬಗ್ಗೆ ಮಾತನಾಡುವುದಿಲ್ಲ ನಾನು. ನಿಮ್ಮ ಬಗ್ಗೆ, ನಿನ್ನೆ ರಾತ್ರಿಯೆಲ್ಲ ನೀವು ಸೂಳೆಗೇರಿಯಲ್ಲಿ ಕಳೆದದ್ದು ನಿಜವೋ ಸುಳ್ಳೋ!"

"ಆ್ಞಂ!" ಎಂದು ಆಶ್ಚರ್ಯದಿಂದ ಉದ್ಗಾರ ತೆಗೆದರು ಸ್ವಾಮಿಗಳು.

"ನಿಜವೇ ಶಿವಯೋಗಿ? ಸುಮ್ಮನೆ ಇಲ್ಲದ್ದನ್ನೆಲ್ಲ ಹುಟ್ಟಿಸಿಕೊಂಡು ಹೇಳಬೇಡಿ!"

"ಸುಳ್ಳಾಡಿದರೆ ನನ್ನ ನಾಲಗೆ ಕಡಿದು ಬೀಳಲಿ. ಇವರೇ ಹೇಳಲಿ. ಏನು ಚಂದ್ರಣ್ಣ, ಏನು ಉತ್ತರ ನನ್ನ ಪ್ರಶ್ನೆಗೆ? ನಿನ್ನೆ ರಾತ್ರಿ ಸೂಳೆಯರ ಮನೆಯಲ್ಲಿ ನೀವಿದ್ದುದು ನಿಜವಲ್ಲವೆ?"

ಚಂದ್ರಣ್ಣ ತಲೆ ತಗ್ಗಿಸದೆ, ಧ್ವನಿ ಕುಗ್ಗಿಸದೆ ಮೊದಲಿನಂಥ ಶಾಂತ ಸ್ವರದಲ್ಲಿಯೆ – "ನಿಜ. ಮುಂದೆ?" ಎಂದ.

ಆಸನದಿಂದ ಪುಟಿದೆದ್ದವರಂತೆ ನೆಗೆದೆದ್ದು ಸ್ವಾಮಿಗಳು ಕೇಳಿದರು : "ನಿಜವೆ? ಇದೆಂಥ ಮಾತು ಚಂದ್ರಣ್ಣ? ನೀವು ಇಂಥವರಿರಬಹುದೆಂದು ನಾವು ತಿಳಿದಿರಲಿಲ್ಲ!"

''ಈಗಲಾದರೂ ತಿಳಿಯಿತಲ್ಲವೆ?'' ಎಂದ ಶಿವಯೋಗಿ.

''ಸೂಳೆಯರ ಮನೆಯಲ್ಲಿ! ಛೆ! ಛೆ! ಚಂದ್ರಣ್ಣ! ನೀವು?''

''ಹೌದು. ನಾನು ಅವರ ಮನೆಯಲ್ಲಿದ್ದುದು ನಿಜ. ಆದರೆ ನೀವು ತಿಳಿದು ಕೊಂಡಿರುವ ಕೆಲಸಕ್ಕಾಗಿ ಅಲ್ಲಿಗೆ ಹೋಗಿರಲಿಲ್ಲ ನಾನು. ಬೇರೊಂದು ಕೆಲಸಕ್ಕಾಗಿ ಹೋಗಿದ್ದೆ.''

''ಇನ್ನೇನು ಕೆಲಸ ಅವರ ಮನೆಗಳಲ್ಲಿ?'' ಎಂದು ನಗುತ್ತ ಕೇಳಿದ ಶಿವಯೋಗಿ.

''ನಿಮ್ಮಂಥವರಿಗೆ ಅಲ್ಲಿ ಅದೊಂದೇ ಕೆಲಸವೆನ್ನಿಸೀತು. ನಿಮಗೆ ಸ್ಪಷ್ಟೀಕರಿಸಿ ಹೇಳಲು ನನಗಿಷ್ಟವಿಲ್ಲ. ಅಂತೂ ವ್ಯಭಿಚಾರಕ್ಕಾಗಿ ನಾನಲ್ಲಿಗೆ ಹೋಗಿರಲಿಲ್ಲ, ಇಷ್ಟು ಮಾತ್ರ ಹೇಳಬಲ್ಲೆ. ನಂಬಿದರೆ ನಂಬಬಹುದು, ಬಿಟ್ಟರೆ ಬಿಡಬಹುದು.''

ನಿಲುವಂಗಿಯನ್ನು ಭುಜದ ಮೇಲೆ ಹೊದೆದುಕೊಳ್ಳುತ್ತ ಸ್ವಾಮಿಗಳು ಹೊರಟು ನಿಂತರು. ''ಮೊದಲು ಕಮ್ಯೂನಿಸ್ಟರ ಸಹವಾಸ – ಈಗ ಸೂಳೆಯರ ಸಹವಾಸ... ಶಿಃ ಶಿಃ! ಶಿವ! ಶಿವ! ಇನ್ನು ನಾವಿಲ್ಲಿ ನಿಲ್ಲಲಾರೆವು!'' ಎಂದು ನುಡಿದು ಹೊರಟುಬಿಟ್ಟರು. ಉಳಿದವರೂ ಅವರನ್ನು ಹಿಂಬಾಲಿಸಿದರು.

ಕಾರಿನ ಸದ್ದು ಗಾಳಿಯಲ್ಲಿ ಅಡಗಿಹೋಗುವವರೆಗೂ ಚಂದ್ರಣ್ಣ ನಿಂತಲ್ಲಿಯೆ ನಿಂತಿದ್ದ. ಅನಂತರ ಅಂಗಿ ತೊಟ್ಟುಕೊಂಡು ಕಚೇರಿಯನ್ನು ತ್ಯಜಿಸಿ ಹೊರಬಿದ್ದ.

ರಣ ರಣ ಬಿಸಿಲು ಕಾಯುತ್ತಿತ್ತು. ಚಂದ್ರಣ್ಣನ ತಲೆಯೂ ವಿಚಾರಗಳ ಕೋಲಾಹಲದಿಂದ ಕಾಯ್ದುಹೋಗಿತ್ತು. ಇಷ್ಟೊಂದು ಕಷ್ಟಪಟ್ಟು ಕಂಪನಿಯನ್ನು ಕಟ್ಟಿ ಬೆಳೆಸಿದ್ದ. ಅದೆಲ್ಲವೂ ವ್ಯರ್ಥವಾಗುವ ಪರಿಸ್ಥಿತಿ ಬಂದಿದ್ದಿತು. ಜಗದ್ಗುರುಗಳು, ಸೆಟ್ಟರು, ತಮ್ಮಣ್ಣನವರು ಹೇಳಿದ ಹಾಗೆ ಕೇಳಿಕೊಂಡು ಕಂಪನಿಯಲ್ಲಿರುವುದಾದರೆ ಇರಬೇಕು, ಇಲ್ಲವಾದರೆ ಶರಣು ಹೊಡೆದು ಹೊರಡಬೇಕು. ಬೇರಾವ ದಾರಿಯೂ ಇರಲಿಲ್ಲ. ಆಗಲೇ ಸಾಕಷ್ಟು ಹಣ ಸಂಗ್ರಹವಾಗಿದೆ, ಒಂದೆರಡು ವಾರಗಳಲ್ಲಿ ಮುದ್ರಣಾಲಯದ ಏರ್ಪಾಡೂ ಆಗಲಿದೆ, ಪತ್ರಿಕೆಯೂ ಹೊರಡಬೇಕು. ಬೆಳೆ ಬಂದು ಸಿದ್ಧವಾಗಿದೆ; ಕೊಯ್ಯುವ ಕಾಲ ಬಂದಾಗ ತಾನು ಹೊರಡುವ ಪ್ರಸಂಗ ಬರುವುದೊ ಏನೊ! ಬರುವುದೇನೊ ಎಂಬ ಸಂದೇಹದ ಮಾತಾದರೂ ಏಕೆ? ಅಂಥ ಪ್ರಸಂಗ ಬಂದೇ ಬಿಟ್ಟಿದೆ. ಇಂದು ನಡೆದ ಮಾತುಕತೆಗಳ ಧಾಟಿ ಏನನ್ನು ಸೂಚಿಸುತ್ತದೆ? ತನ್ನನ್ನು ಕಂಪನಿ ಯಿಂದ ತೆಗೆದುಬಿಡುವ ವಿಚಾರವನ್ನೇ ಅಲ್ಲವೆ? ಕಂಪನಿಯಿಂದ ತಾನು ಹೊರಟು

ಬಿಟ್ಟರೆ! – 'ಕ್ರಾಂತಿ'ಯ ಗತಿ? ತನ್ನ ಆ ಪುಸ್ತಕಗಳು! ಪುಸ್ತಕಗಳೂ ಹೋದವು. ಪತ್ರಿಕೆಯೂ ಹೊರಡುವಂತಿಲ್ಲ...

ಆತನಿಗೆ ತಿಳಿಯದಂತೆಯೆ ಆತನ ಕಾಲುಗಳು ಕೂಲಿಕಾರ ವಸತಿಯತ್ತ ಸಾಗಿದ್ದುವು. ರತ್ನಳ ಶಾಂತ ಗಂಭೀರ ಮುಗ್ಧ ಮುಖಮಂಡಲ ಆತನ ಕಣ್ಣುಗಳೆದುರಿಗೆ ಸುಳಿದು ಆತನ ನೊಂದ ಹೃದಯಕ್ಕೆ ತಣಿವನ್ನುಂಟು ಮಾಡಲೆಳೆಸುತ್ತಿದ್ದಿತು. ರತ್ನಮ್ಮ! ತನಗೆ ತಿಳಿಯದಂತೆಯೆ ಆತ ಆಕೆಯ ಕಡೆಗೆ ಆಕರ್ಷಿತನಾಗಿದ್ದ. ಆಕೆಯ ಸಹವಾಸ ದಲ್ಲಿ ಆತ ಕಳೆದ ಒಂದೊಂದು ದಿನಕ್ಕೂ ಒಂದೊಂದು ಬಗೆಯಾಗಿ ಆಕೆಯ ಬಗೆಗೆ ಅನುರಾಗ ಬೆಳೆಯುತ್ತ ಬಂದಿದ್ದಿತು. ಆಕೆಯ ವಯಸ್ಸಿನ ಬೇರೆ ತರುಣಿಯರಲ್ಲಿ ವಿರಳ ವಾಗಿ ಕಾಣಬರುವ ಧ್ಯೇಯವಾದಿತ್ವ, ದೃಢಚಾರಿತ್ರ್ಯ, ನಿರ್ಮಲ ನಿಷ್ಕಳಂಕ ನಡತೆ ಆತನನ್ನು ಮುಗ್ಧಗೊಳಿಸಿತ್ತು. ಆ ಧೈರ್ಯ, ಆ ದಿಟ್ಟತನ, ಆ ದುಡಿತ! ಅವೆಲ್ಲವನ್ನೂ ಕಂಡು ಆತನ ಭಾವುಕ ಹೃದಯ ಆಕೆಗೆ ಮಾರುಹೋಗಿತ್ತು. ಆಕೆಯ ನೆನಪಿನೊಡನೆ ಆತನ ಹೃದಯ ಹೂವಿನಂತೆ ಅರಳುವುದು. ಎದೆಯ ವರ್ತುಲದಲ್ಲೆಲ್ಲ ವಿಲಕ್ಷಣ ಪರಿಮಳವೊಂದು ಇಡುಗಿದಂತಾಗುವುದು.

ಅಂಥ ಅನುಭವವಾಗುವುದು ಆತನಿಗೆ ಅದೇ ಮೊದಲನೆಯ ಸಲ. ಅದುವರೆಗೆ ಯಾವ ಹೆಣ್ಣೂ ಆತನನ್ನು ಈ ರೀತಿ ಆಕರ್ಷಿಸಿಕೊಂಡಿರಲಿಲ್ಲ; ಆತನ ಹೃದಯದ ಮೇಲೆ ಪ್ರಭಾವ ಬೀರಿ ಅಲ್ಲಿ ಒಲವಿನ ಕಿಡಿಯನ್ನು ಜಾಗ್ರತಗೊಳಿಸಲು ಶಕ್ತಳಾಗಿರಲಿಲ್ಲ. ಶಾರದೆಯಂಥ ಲಾವಣ್ಯವತಿಯೂ ಸೋತುಹೋದ ಕಡೆ ರತ್ನಾ ಗೆಲುವಿನ ಧ್ವಜ ಹಾರಿಸಿದ್ದಳು. ಚಂದ್ರಣ್ಣನನ್ನು ವಶಪಡಿಸಿಕೊಳ್ಳಲು ಶಾರದೆ ಪ್ರಯತ್ನಿಸಿದ ಹಾಗೆ ರತ್ನಾ ಎಂದೂ ಪ್ರಯತ್ನಿಸಿರಲಿಲ್ಲ. ಆ ವಿಚಾರವೇ ಆಕೆಯಲ್ಲಿ ಸುಳಿದಿರಲಿಲ್ಲವೆಂದರೂ ಸರಿಯೆ. ತನಗರಿಯದಂತೆಯೆ ಆತನೂ ಆಕೆಯಲ್ಲಿ ಅನುರಕ್ತ ನಾಗಿದ್ದ. ಪ್ರತಿದಿನವೂ ಒಂದು ಸಲವಾದರೂ ಆಕೆಯನ್ನು ನೋಡಲೇಬೇಕು, ನೋಡದಿದ್ದರೆ ಆತನಿಗೆ ಸಮಾಧಾನವಿರುತ್ತಿರಲಿಲ್ಲ. ಎದೆಯಲ್ಲಿ ಎಂಥದೋ ಕೊರಗು, ಏನೊ ಕಳವಳ. ಆಕೆಯನ್ನು ಕಂಡಾಗ ಆ ಕಳವಳ ಮಾಯವಾಗಿ ಅದಕ್ಕೆ ಪ್ರತಿಯಾಗಿ ಶಾಂತತೆ ಆತನ ಎದೆಯನ್ನಾವರಿಸುವುದು.

ಕೂಲಿಕಾರ ವಸತಿಯಲ್ಲಿ ಹಾಯ್ದು ಆತ ಸೋಮಣ್ಣನ ಮನೆಯ ಕಡೆಗೆ ಹೊರಟಿದ್ದ ಹಾಗೆ ಎದುರಿನಿಂದ ಜಟಕಾಗಾಡಿಯೊಂದು ನಿಧಾನವಾಗಿ ಬರುತ್ತಲಿತ್ತು. ಗಾಡಿಗೆ ದಾರಿ ಮಾಡಿಕೊಡಲೆಂದು ಚಂದ್ರಣ್ಣ ಪಕ್ಕಕ್ಕೆ ಸರಿಯುತ್ತಿದ್ದ ಹಾಗೆ

ಕುದುರೆಯನ್ನೋಡಿಸುತ್ತಲಿದ್ದ ಸಾಬಿ ಆತನನ್ನು ಕಂಡು ಗಡ್ಡ ಮೀಸೆಗಳಿಂದ ಅರ್ಧ ಮುಚ್ಚಿದ ತನ್ನ ತುಟಿಗಳ ಮೇಲೆ ಆನಂದದ ನಗೆಯನ್ನರಿಸಿ – ''ಸಲಾಂ ಸಾಮೀ, ಸಲಾಂ,'' ಎಂದ.

ಚಂದ್ರಣ್ಣ ಚಕಿತನಾಗಿ ಆತನ ಕಡೆ ಹೊರಳಿದ. ಅಂದು ಸೋಮಣ್ಣನ ತಾಯಿಯನ್ನು ಅವರ ಮನೆಗೆ ಮುಟ್ಟಿಸಿದ್ದ ಸಾಬಿ! ಇಷ್ಟು ದಿನ ಕಳೆದರೂ ಆತ ತನ್ನ ನೆನಪಿಟ್ಟುಕೊಂಡಿದ್ದಾನೆ! ಕಂಡೊಡನೆ 'ಸಲಾಂ' ಎನ್ನುತ್ತಾನೆ!

''ಓಹ್ಹೋ! ನೀನೇ! ಎತ್ತ ಹೊರಟೆ ಸಾಹೇಬು'' ಎಂದ ಚಂದ್ರಣ್ಣ.

''ಹೆರಿಗೆ ಆಸ್ಪತ್ರೆಗೆ ಸಾಮೀ. ಬೀಬಿಯನ್ನು ಕರೆದುಕೊಂಡು ಹೋಗಬೇಕಾಗಿದೆ. ಬಿಟ್ಟು ಬರುತ್ತೇನೆ,'' ಎಂದು ನುಡಿದು ಆತ ಕುದುರೆಯನ್ನು ಕೊಂಚ ತಡೆದು ನಿಲ್ಲಿಸಿದ.

''ಮತ್ತೊಂದು ಮಗುವಿನ ತಂದೆಯಾಗುವವನೊ?''

ಜಟಕಾಸಾಬಿ – ''ಶ್ಶೂ ಶ್ಶೂ'' ಎಂದು ಉದ್ಗಾರ ತೆಗೆದು ತನ್ನ ಬಾಯಮೇಲೆ ಬೆರಳಿಟ್ಟುಕೊಂಡು ಮೆಲ್ಲಗಿನ ಧ್ವನಿಯಲ್ಲಿ – ''ನಮ್ಮ ಇಬ್ರಾಹೀಮನ ಬೀಬಿ ಸಾಮೀ,'' ಎಂದ.

''ಇಬ್ರಾಹೀಮ್? ಕೂಲಿಕಾರ ಸಂಘದವನಲ್ಲವೆ?''

''ಹೌದು ಸಾಮೀ. ಆತನೇ. ಮನೆಯಲ್ಲಿ ಗಂಡ ಹೆಂಡಿರಿಬ್ಬರೇ. ಬೇರೆ ಯಾರೂ ಇಲ್ಲ – ಆತನನ್ನು ಪೊಲೀಸರು ಹಿಡಿದೊಯ್ದರಲ್ಲ, ಈಕೆಗೆ ದಿನ ತುಂಬಿವೆ. ಕರೆದೊಯ್ಯುತ್ತಿದ್ದೇನೆ.''

''ಇಬ್ರಾಹೀಮ ನಿನಗೇನಾಗಬೇಕು?''

''ಹಾಗೆ ಆಪ್ತಬಂಧುವೇನೂ ಅಲ್ಲ, ಆದರೆ ಅವರೂ ನಾವು ನೆರೆಹೊರೆಯವರು. ಎಲ್ಲಾ ಒಂದೇ ಬಳಗ ಇದ್ದಹಾಗೆ. ಅಜ್ಜಿ ಮಲ್ಲವ್ವಜ್ಜಿ ಮನೆಯಲ್ಲೇ ಹೆರಿಗೆಯಾಗಲೆಂದು ಹೇಳಿದಳು. ತಾನು ದಿನವೂ ಬಂದು ನೋಡಿಕೊಳ್ಳುತ್ತೇನೆಂದಳು. ನಮ್ಮ ಬೀಬಿ ಅಂತೂ ಇದ್ದೇ ಇದಾಳೆ. ಆದರೂ ನಾನೇ ಬೇಡವೆಂದು ಹೇಳಿ ಆಸ್ಪತ್ರೆಗೆ ಬಿಟ್ಟು ಬರಲು ಹೊರಟೆ.''

ಗಾಡಿಯೊಳಗೆ ಸೆರಗನ್ನು ಮುಖದ ತುಂಬ ಹೊದೆದು ಕುಳಿತಿದ್ದ

ಹೆಣ್ಣುಮಗಳು ಬಿಕ್ಕಿ ಬಿಕ್ಕಿ ಅಳುವುದು ಕೇಳಿಬಂದಿತು. ಚಂದ್ರಣ್ಣ ಅಲ್ಲಿ ನಿಲ್ಲಲಾರದೆ ಮುಂದುವರಿದ. ಜಟಕಾ ತನ್ನ ದಾರಿಯಲ್ಲಿ ನಡೆಯಿತು.

''ಯಾರವರು? ಚಂದ್ರಣ್ಣನವರೊ?''

ಚಂದ್ರಣ್ಣ ತಡೆದು ನಿಂತು ಆ ಧ್ವನಿ ಬಂದ ದಿಕ್ಕಿಗೆ ಮುಖ ತಿರುಗಿಸಿದ. ಗುಡಿಸಲೊಂದರೆದುರಿಗೆ ನಾಲ್ಕೈದು ಜನ ಕೂಲಿಕಾರರು ಕುಳಿತುಕೊಂಡು ಪಿಸುಧ್ವನಿಯಲ್ಲಿ ಮಾತನಾಡಿಕೊಳ್ಳುತ್ತಿದ್ದರು. ಗುಡಿಸಲಿನ ಬಾಗಿಲಲ್ಲಿ ನಿಂತು ಮಲ್ಲೇಶಿ ಚಂದ್ರಣ್ಣನನ್ನು ಕೂಗುತ್ತಿದ್ದ.

''ಏನಯ್ಯಾ ಮಲ್ಲೇಶಿ!''

''ಕೊಂಚ ಇಲ್ಲಿಗೆ ಬನ್ನಿ ಸಾರ್. ಒಂದು ಸುದ್ದಿಯಿದೆ.''

ಕೂಲಿಕಾರರೆಲ್ಲರೂ ಸರಿದು ಆತನಿಗೆ ದಾರಿ ಮಾಡಿಕೊಟ್ಟರು. ಚಂದ್ರಣ್ಣ ಗುಡಿಸಲಿನೊಳಕ್ಕೆ ಪ್ರವೇಶಿಸಿದ.

''ಯಾರದಯ್ಯಾ ಮನೆ? ನಿಮ್ಮದೇ?''

''ಹೌದು ಸಾರ್. ಸುದ್ದಿ ಕೇಳಿದಿರಾ ಸಾರ್?''

''ಏನು ಸುದ್ದಿ?''

''ಅದ್ಭುತ; ಬೆಳಗಿನಿಂದ ಊರೆಲ್ಲಾ ಮಾತನಾಡುತ್ತಿದೆ.''

''ಹಾ!''

''ಇಂದು ಬೆಳಗಿನ ಜಾವದಲ್ಲಿ ಶಂಕರಣ್ಣ ಪರಾರಿಯಾದರಂತೆ!''

ಚಂದ್ರಣ್ಣ ವಿಸ್ಮಯದಿಂದ – ''ನಿಜವೇ? ಹೇಗಪ್ಪ ತಪ್ಪಿಸಿಕೊಂಡರು?''

''ಒಬ್ಬೊಬ್ಬರು ಒಂದೊಂದು ರೀತಿ ಹೇಳುತ್ತಿದ್ದಾರೆ. ಬೆಳಗಿನ ಜಾವದಲ್ಲಿ ಶೌಚಕ್ಕೆ ಹೋಗಬೇಕೆಂದು ಕಚೇರಿಯ ಹಿಂಭಾಗಕ್ಕೆ ಹೋದರಂತೆ. ಜತೆಗಿದ್ದ ಪೊಲೀಸ ಪಾಯಿಖಾನೆಯ ಹೊರಗಡೆ ನಿಂತಿದ್ದನಂತೆ. ಎಷ್ಟು ಹೊತ್ತಾದರೂ ಶಂಕರಣ್ಣ ಈಚೆಗೆ ಬರಲೇ ಇಲ್ಲವಂತೆ. ಪೊಲೀಸ ಗಾಬರಿಯಾಗಿ ಪಾಯಿಖಾನೆಯೊಳಹೊಕ್ಕು ನೋಡಿದಾಗ ಅಲ್ಲಿ ಯಾರೂ ಇರಲೇ ಇಲ್ಲವಂತೆ.''

''ಇದೆಲ್ಲ ನಡೆದದ್ದು ಎಷ್ಟು ಗಂಟೆಗೆ?''

''ಬೆಳಗಿನ ನಾಲ್ಕು ಗಂಟೆಯಲ್ಲಿರಬಹುದು. ಅವರು ತಪ್ಪಿಸಿಕೊಂಡ ಸುದ್ದಿ ಗೊತ್ತಾಗುತ್ತಲೂ ಪೋಲೀಸರು ಹೌಹಾರಿ ಊರನ್ನೆಲ್ಲ ತಿರುವಿಹಾಕಿದರು. ಈ ವಸ್ತಿಯೊಳಗಿನ ಮನೆಗಳನ್ನೂ ಹುಡುಕಿದರು. ಅಲ್ಲಿಂದ ಹೊರಟು ಶಂಕರಣ್ಣ ತಮ್ಮ ಮನೆಗೆ ಬಂತು ತಾಯಿಯನ್ನೂ ಸರೋಜಮ್ಮನವರನ್ನೂ ಕಂಡು ಮತ್ತೆ ಮಾಯವಾದ ರಂತೆ.''

''ನೀವಾರೂ ನೋಡಲಿಲ್ಲವೆ ಅವರನ್ನು?''

''ಇಲ್ಲ, ಒಬ್ಬರಿಗೂ ಭೆಟ್ಟಿಯಾಗಲಿಲ್ಲ. ದುರುಗಪ್ಪನನ್ನು ಕಂಡಿದ್ದರೊ ಏನೊ.''

''ಸರೋಜಮ್ಮನವರನ್ನು ನೋಡೋಣ ಬಾ. ಅವರಿಂದ ಹೆಚ್ಚು ವಿಷಯ ತಿಳಿದಾವು.''

''ಇನ್ನೆಲ್ಲಿಯ ಸರೋಜಮ್ಮ ಚಂದ್ರಣ್ಣನವರೆ! ಇಂದು ಬೆಳಗಿನ ರೈಲಿಗೆ ಅವರೂ ಹೊರಟುಹೋದರು.''

''ಶಂಕರನ ತಾಯಿ?''

''ಅವರೂ. ಇಬ್ಬರೂ ಕೂಡಿಯೆ ಹೋದರು.''

''ಮನೆಯಲ್ಲಿನ ಸಾಮಾನು?'' ಎಂದು ಬೆರಗಾಗಿ ಕೇಳಿದ ಚಂದ್ರಣ್ಣ.

''ಅಷ್ಟೊಂದು ಸಾಮಾನೂ ಇರಲಿಲ್ಲವಲ್ಲ ಅವರ ಮನೆಯಲ್ಲಿ? ಪುಸ್ತಕಗಳು, ಹಾಸಿಗೆ, ಹೊದಿಕೆ. ಇವನ್ನೆಲ್ಲ ಎರಡು ಚೀಲಗಳಲ್ಲಿ ತುಂಬಿ ಹೊರಟುಬಿಟ್ಟರು. ನಾನೇ ಗಾಡಿಯಲ್ಲಿ ಕೂಡ್ರಿಸಿ ಬಂದೆ.''

''ಶಂಕರ್ ಎಲ್ಲಿ ಹೋದರೊ! ಇನ್ನು ಪೋಲೀಸರ ಕಣ್ಣಿನಿಂದ ತಪ್ಪಿಸಿಕೊಳ್ಳು ವುದೂ ಒಂದು ಕೆಲಸವಾಯಿತು ಅವರಿಗೆ!''

''ಅದೇನು ಅವರಿಗೆ ಹೊಸದಲ್ಲ ಬಿಡಿ ಸಾರ್. ಇಂಥ ಎಷ್ಟೋ ಸಂದರ್ಭ ಬಂದಿವೆ ಅವರಿಗೆ. ಅದೆಲ್ಲ ಅವರಿಗೆ ರೂಢಿಯಾಗಿದೆ. ತೆಲಂಗಾಣಕ್ಕೆ ಹೋಗುವುದಾಗಿ ಸರೋಜಮ್ಮನವರೆದುರಿಗೆ ಹೇಳಿದರಂತೆ. ತೆಲಂಗಾಣ ಅಂದರೆ ಎಲ್ಲಿದೆ ಸಾರ್?''

''ಹೈದರಾಬಾದಿನ ಒಂದು ಭಾಗ ಅದು. ಅಲ್ಲಿ ಕಮ್ಯೂನಿಸ್ಟರ ಚಟುವಟಿಕೆ

ಬಲವಾಗಿದೆ.''

''ಹೋ! ಹೀಗೇನು? ಹಾಗಾದರೆ ಅಲ್ಲಿಗೇ ಹೋಗಿರಬೇಕು ಅವರು – ಸುಮ್ಮನೆ ಪರಾರಿಯಾಗಿ ಎಲ್ಲಾದರೂ ಅಡಗಿಕೊಂಡಿದ್ದು ಯಾರಾದರೂ ಹಾಕಿದ ಕೂಳು ತಿನ್ನುತ್ತ ತಿರುಗುವವರಲ್ಲ ನಮ್ಮ ಶಂಕರಣ್ಣ. ಅವರ ಸ್ವಭಾವ ನಮಗೆ ಗೊತ್ತಿಲ್ಲವೆ? ಸುಮ್ಮನೆ ಜೈಲಿನಲ್ಲಿ ಕೊಳೆಯುವವರೂ ಅವರು ಅಲ್ಲ. ಅಂತೆಯೆ ಪೊಲೀಸರಿಗೆ ಚಳ್ಳೆಹಣ್ಣು ತಿನ್ನಿಸಿ ಪರಾರಿಯಾಗಿದ್ದಾರೆ. ಇಷ್ಟು ದಿನ ಧರ್ಮಪುರದಲ್ಲಿ ಸಂಘಟನೆ ಮಾಡಿದರು. ಇನ್ನು ತೆಲಂಗಾಣ. ಅಲ್ಲಿ ಕಮ್ಯೂನಿಸ್ಟ್ ಪಾರ್ಟಿ ಬಲವಾಗಿದೆಯಲ್ಲವೆ?''

''ಹೌದು. ಸರಕಾರವೂ ಕಮ್ಯೂನಿಸ್ಟರನ್ನು ಕಂಡರೆ ನಡುಗುತ್ತದೆ ಆ ಭಾಗದಲ್ಲಿ.''

''ಹೌದೇ? ಅಷ್ಟು ಜೋರಾಗಿದೆಯೇ ಪಾರ್ಟಿ? ನಮ್ಮ ಸರೋಜಮ್ಮನವರೂ ಅಲ್ಲಿಗೇ ಹೋದರೊ ಏನೋ.''

''ಅಲ್ಲಿಗೆ ಹೋಗಿರಲಾರರು. ಅವರೀಗ ಹೊರಟದ್ದು ಯಾವ ಊರಿಗೆ?''

''ಬೆಂಗಳೂರಿನ ಟಿಕೀಟು ತೆಗೆಯಿಸಿಕೊಟ್ಟೆ ನಾನೇ!''

''ಸರೋಜಮ್ಮ ನಿನ್ನೆದುರು ಏನೂ ಹೇಳಲಿಲ್ಲವೆ?''

''ಮೊದಲು ಬೆಂಗಳೂರಿಗೆ ಹೋಗಿ ಶಂಕರಣ್ಣನ ತಾಯಿಗೆ ವಸತಿಯ ವ್ಯವಸ್ಥೆ ಮಾಡಿ ಆಮೇಲೆ ತಾವೂ ತೆಲಂಗಾಣಕ್ಕೆ ಹೋಗುವುದಾಗಿ ಹೇಳುತ್ತಿದ್ದರು. ಹೆಚ್ಚು ಮಾತಾಡುವುದು ಸಾಧ್ಯವಿರಲಿಲ್ಲ, ನಮ್ಮ ಹಿಂದೆ ನಾಲ್ಕೈದು ಸಿ.ಐ.ಡಿ.ಗಳು ತಿರುಗುತ್ತಿದ್ದರು.''

''ರತ್ನಮ್ಮ ಬಂದಿದ್ದರೇನು ಸ್ಟೇಶನ್ನಿಗೆ?''

''ಹೌದು. ಅವರೂ ಬಂದಿದ್ದರು. ಅವರನ್ನು ಕೇಳಿದರೆ ಹೆಚ್ಚು ವಿಷಯ ತಿಳಿಯಬಹುದೇನೋ. ಈಗ ಎಲ್ಲಿಗೆ ಅವರ ಮನೆಗೇ ಹೊರಟಿದ್ದಿರಂತ ಕಾಣುವುದಲ್ಲ?''

''ಹೌದು. ನೀನು ಬರುತ್ತಿಯೇನು? ಬಾ,'' ಎಂದು ಚಂದ್ರಣ್ಣ ಗುಡಿಸಲನ್ನು ಬಿಟ್ಟು ಹೊರಗೆ ಬಂದು ಸೋಮಣ್ಣನ ಮನೆಯ ಕಡೆಗೆ ಸಾಗಿದ.

ಮಲ್ಲೇಶಿಯ ಊಹೆ ಸರಿಯಾಗಿತ್ತು. ಆತನಿಗೆ ಗೊತ್ತಿರದಿದ್ದ ಅನೇಕ

ವಿಷಯಗಳು ರತ್ನಮ್ಮನಿಗೆ ಗೊತ್ತಾಗಿದ್ದುವು. ಶಂಕರ್ ಅಲ್ಲಿಂದ ಹೊರಡುವುದಕ್ಕೆ ಮೊದಲು ದುರುಗಪ್ಪನಿಗೂ ಆತನಿಗೂ ಭೆಟ್ಟಿಯಾಗಿದ್ದಿತು. ಸಂಘ ಹಾಗೂ ಪಕ್ಷಗಳ ವಿಷಯವಾಗಿ ಸಲಹೆ ಸೂಚನೆಗಳನ್ನು ಕೊಟ್ಟು ಶಂಕರ ಹೊರಟುಹೋಗಿದ್ದ. ಚಂದ್ರಣ್ಣನಿಗಾಗಿ ಒಂದು ಪತ್ರವೂ ಇತ್ತು.

ಚಂದ್ರಣ್ಣ ಆತುರತೆಯಿಂದ ಅದನ್ನು ಒಡೆದು ನೋಡಿದ.

"ಪ್ರಿಯ ಕಾಮ್ರೇಡ್,

ಹೌದು ನಾನೀಗ ನಿಮ್ಮನ್ನು ಕಾಮ್ರೇಡ್ ಎಂದು ಕರೆಯಬಲ್ಲೆ. ನೀವೂ ನಮ್ಮ ಕಾಮ್ರೇಡ್ ಎನ್ನುವಲ್ಲಿ ನನಗಾವ ಸಂದೇಹವೂ ಉಳಿದಿಲ್ಲ. ನನ್ನ ಬಂಧನದ ತರುವಾಯ ನೀವು ನಮ್ಮ ಧ್ಯೇಯದ ಬಗೆಗೆ ವ್ಯಕ್ತಗೊಳಿಸಿದ ಸಹಾನುಭೂತಿ, ನಮ್ಮ ಕೆಲಸಕ್ಕೆ ನೀಡಿದ ಪ್ರತ್ಯಕ್ಷ ಸಹಾಯಗಳ ವಿಚಾರ ಸರೋಜಾ ವಿವರವಾಗಿ ತಿಳಿಸಿದ್ದಾಳೆ. ನನಗೆ ಅತ್ಯಂತ ಆನಂದವಾಗಿದೆ. ನನ್ನ ಬಹುದಿನಗಳ ಆಸೆ, ನಿರೀಕ್ಷೆ ಫಲಕಾರಿಯಾಯಿತಲ್ಲಾ ಎಂದು.

ಬೆಂಗಳೂರಿನಲ್ಲಿ ನಿಮ್ಮೊಂದಿಗೆ ಪರಿಚಯವಾದಂದಿನಿಂದ ನೀವು ನಮ್ಮ ಪಾರ್ಟಿಗೆ ಸೇರಿ ಸಮತಾವಾದಿ ಚಳವಳಿಯಲ್ಲಿ ಭಾಗವಹಿಸಬೇಕೆಂದು ನಾನು ಆಶಿಸುತ್ತಿದ್ದೆ. ನಿಮ್ಮಂಥ ಧ್ಯೇಯವಾದಿ ಸುಶಿಕ್ಷಿತ ಯುವಕರ ಆವಶ್ಯಕತೆ ಬಲವಾಗಿದೆ ನಮ್ಮ ಚಳವಳಿಗೆ. ರೈತರು ಮತ್ತು ಕೂಲಿಕಾರರು ನಮ್ಮ ಪಾರ್ಟಿಯ ದೇಹದಂತಿದ್ದರೆ ನಿಮ್ಮಂಥ ಯುವಕರು ಅದರ ಮೆದುಳಿನಂತಿದ್ದಾರೆ, ಅದರ ಸ್ಫೂರ್ತಿಯಂತಿದ್ದಾರೆ. ಕೊನೆಗೂ ನೀವು ನಮ್ಮ ಪಾರ್ಟಿಯ ಕಡೆಗೆ ಹೊರಳಿದಿರಲ್ಲಾ ಎಂದು ನನಗೆ ಪರಮಾನಂದವಾಗಿದೆ.

ಧರ್ಮಪುರದಲ್ಲಿ ನಮ್ಮ ಚಳವಳಿ ಭದ್ರವಾಗಿ ಬೇರುಬಿಟ್ಟಿದೆ. ಕೂಲಿಕಾರರೆಲ್ಲ ಆಶಾಪೂರ್ಣ ದೃಷ್ಟಿಯಿಂದ ನಮ್ಮ ಪಾರ್ಟಿಯ ಕಡೆಗೆ ನಿಟ್ಟಿಸುತ್ತಿದ್ದಾರೆ. ಸೋಶಲಿಸ್ಟ್ ದ್ರೋಹಿಗಳು ನಡುವೆ ಬರದಿದ್ದರೆ ಸಂಘಕ್ಕೆ ಗಂಡಾಂತರ ಬರುತ್ತಿರಲಿಲ್ಲ. ಮಾಲೀಕರೊಂದಿಗೆ ಸೇರಿಕೊಂಡು ಈ ದ್ರೋಹಿಗಳು ನಮ್ಮ ಚಳವಳಿಯ ಬೆನ್ನಲ್ಲಿ ತಿವಿದಿದ್ದಾರೆ. ಮಾಲೀಕರ ಕೈವಾರಿಯಾದ ಸರಕಾರವೂ ನಮ್ಮ ವಿರುದ್ಧ ಯುದ್ಧ ಸಾರಿದೆ. ನಮ್ಮ ಕಾರ್ಯಕರ್ತರನ್ನು ಹೊಡೆದು ಬಡಿದು ಜೈಲಿಗೆ ದೂಡಲಾಗಿದೆ. ಯಾವುದಾದರೊಂದು ನೆಪದಿಂದ ನಮ್ಮನ್ನು ಸೆರೆಮನೆಯ ಗೋಡೆಗಳ ಮಧ್ಯೆ ಇರಿಸಿ ನಮ್ಮ ಚಳವಳಿ

ಯನ್ನು ನಾಶಗೊಳಿಸಬೇಕೆಂದು ಇವರ ಹೊಂಚು. ಪ್ರಜಾಸತ್ತಾತ್ಮಕ ಸಮಾಜವಾದ ಎಂಬ ವಿಲಕ್ಷಣ ಹೆಸರಿನಲ್ಲಿ ಸೋಶಲಿಸ್ಟರು ಈ ಬಂಡವಾಳಶಾಹಿ ಆಡಳಿತವನ್ನೆ ಸ್ಥಿರಗೊಳಿಸಲು ನೆರವಾಗುತ್ತಿದ್ದಾರೆ. ಆದರೆ – ಅವರ ಆಟ ಬಹುದಿನ ನಡೆಯದು. ಎಚ್ಚೆತ್ತ ಜನತೆ ಇವರ ನಿಜಸ್ವರೂಪವನ್ನು ಅರಿತುಕೊಂಡಿದೆ. ಬಂಡವಾಳಶಾಹಿಯ ಗುಲಾಮಗಿರಿಯನ್ನು ಇನ್ನು ಅದು ಸಹಿಸಲಾರದು. ಈ ಗುಲಾಮಗಿರಿಯನ್ನು ಕಿತ್ತೆಸೆಯುವುದಕ್ಕಾಗಿ ಈಗ ನಡೆದಿರುವ ಹೋರಾಟ ಇನ್ನು ಕೆಲದಿನಗಳಲ್ಲೇ ಮಹಾಭೀಕರ ಯುದ್ಧವಾಗಿ ಪರಿಣಮಿಸಬಹುದು. ನಿಮ್ಮಂಥ ಧ್ಯೇಯವಾದಿ ಯುವಕರೆಲ್ಲ ಆ ಯುದ್ಧದಲ್ಲಿ ನೇತೃತ್ವ ವಹಿಸಬೇಕಾಗುವುದು. ಸಿದ್ಧವಾಗಿದೀರಾ ಚಂದ್ರಣ್ಣ?

ನನ್ನ ಮಟ್ಟಿಗೆ ಹೇಳಬೇಕಾದರೆ – ಈಗ ನಾನು ಧರ್ಮಪುರವನ್ನು ತ್ಯಜಿಸಲೇ ಬೇಕಾಗಿದೆ. ಪೊಲೀಸಿನವರ ಕಣ್ಣು ತಪ್ಪಿಸಿ ಇಲ್ಲಿಯೆ ಬಹುದಿನ ಇರಲು ಸಾಧ್ಯವಾಗದು. ಅಂತೆಯೆ ಸದ್ಯ ಇಲ್ಲಿಂದ ಹೊರಟು ಬೇರೆ ಭಾಗಕ್ಕೆ ಹೋಗಿ ಕೆಲಸ ಮಾಡಲು ನಿರ್ಧರಿಸಿದ್ದೇನೆ. ಆ ಭಾಗವೊಂದು ರಣರಂಗವಿದ್ದಂತಿದೆ. ಆನಂದದಿಂದಲೂ ಉತ್ಸಾಹದಿಂದಲೂ ನಾನು ಸಮರ ರಂಗಕ್ಕೆ ಹೊರಟಿದ್ದೇನೆ.

ಸರೋಜಾ ಸಹ ಬೇರೆ ಕಡೆ ಹೊರಟಿದ್ದಾಳೆ. ಪಾರ್ಟಿ ಆಕೆಗೆ ಬೇರೊಂದು ಕೆಲಸವನ್ನು ವಹಿಸಿಕೊಟ್ಟಿದೆ. ಅದನ್ನಾಕೆ ನಿರ್ವಹಿಸುವಳು.

ನೀವು ಚಂದ್ರಣ್ಣ? ನಮ್ಮ ಕೆಲಸದ ಬಗೆಗೆ ನೀವು ತೋರಿಸುತ್ತಿರುವ ಪ್ರೀತಿ ಹೀಗೆಯೇ ಉಳಿಯಲಿ. ನಮ್ಮ ಕೆಲಸಗಾರರಿಗೆ ನಿಮ್ಮ ನೆರವು, ಸಲಹೆ, ಸೂಚನೆ ದೊರೆಯುತ್ತಿರಲಿ. ನೀವೂ ನಮ್ಮೆಲ್ಲೊಬ್ಬರೆಂದೇ ನಾವು ನಂಬಿದ್ದೇವೆ. ಆ ನಂಬಿಕೆ ವ್ಯರ್ಥವಾಗುವುದಿಲ್ಲವೆಂದೇ ನನ್ನ ಆಸೆ.

ಅವಸರದಲ್ಲಿ ಈ ಹಲವು ಸಾಲು ಬರೆದಿದ್ದೇನೆ. ರಣರಂಗದಲ್ಲಿ ಬಿಡುವು ದೊರೆತರೆ ಮತ್ತೆ ಬರೆಯುತ್ತೇನೆ. ಆ ಯುದ್ಧದಲ್ಲಿ ನಮಗೆ ಜಯ ದೊರೆತ ಮೇಲೆ ಮತ್ತೆ ಭೆಟ್ಟಿಯಾಗುವ.

ಇಂತು ಲಾಲ್ ಸಲಾಮ್ಸ್!

ಶಂಕರ.''

''ಶಂಕರ ಏನು ಬರೆದಿದ್ದಾರೆನ್ನುವುದು ನಿನಗೆ ಗೊತ್ತಿದೆಯಾ ರತ್ನಾ?'' ಎಂದು ಚಂದ್ರಣ್ಣ ಪತ್ರವನ್ನು ಆಕೆಯ ಕೈಗೆ ಕೊಟ್ಟ. ಆಕೆ ಓದಿ ಮುಗಿಸಿಯಾದ ಮೇಲೆ – ''ಏನು

ನಿರ್ಧಾರ ಮಾಡಿದಿರಿ ಚಂದ್ರಣ್ಣ?'' ಎಂದು ಕೇಳಿದಳು.

''ಮಾಡುವುದೇನುಳಿದಿದೆ? ಆಗಲೇ ನಿರ್ಧರಿಸಿದ ಹಾಗಿದೆಯಲ್ಲವೆ?''

''ಅಂದರೆ?''

''ನಾನು ನಿರ್ಧಾರ ಮಾಡುವಷ್ಟರಲ್ಲೇ ನೀವೇ ಈ ಚಳವಳಿಗೆ ನನ್ನನ್ನೆಳೆದು ಬಿಟ್ಟಿರಲ್ಲ?''

''ನಾನು ಎಳೆದೆವೆಂದು ನೀವು ಇದರಲ್ಲಿ ಉಳಿಯಬಾರದು. ಇದರಲ್ಲಿ ನಂಬಿಕೆಯಿದ್ದರೆ ಮಾತ್ರ ಉಳಿಯಬೇಕು.''

''ನಂಬಿಕೆ ಮೊದಲಿನಿಂದಲೂ ಇದೆ. ಹಿಂದೂಸ್ಥಾನಕ್ಕೆ ಸಾಮ್ಯವಾದದನ್ನುಳಿದು ಬೇರಾವ ಉದ್ಧಾರ ಮಾರ್ಗವೂ ಇಲ್ಲ. ಆದರೆ ಈ ಪಾರ್ಟಿಗಳ ಗೊಂದಲವನ್ನು ಕಂಡರೆ ಮಾತ್ರ ನನಗಾಗುವುದಿಲ್ಲ. ಕಮ್ಯೂನಿಸ್ಟ್ ಸೋಶಲಿಸ್ಟರ ಈ ಬಡಿದಾಟ...''

''ಅದು ನಡೆಯುವುದೇ. ಚಳವಳಿಯೆಂದ ಮೇಲೆ ಅಂಥದೆಲ್ಲವೂ ಇರಲೇಬೇಕಲ್ಲ?''

''ಈ ಬಡಿದಾಟವನ್ನು ನಿಲ್ಲಿಸಿದ ಹೊರತು ಸಾಮ್ಯವಾದೀ ಚಳವಳಿ ಯಶಸ್ವಿಯಾಗಲಾರದು ರತ್ನಾ.''

''ಅದು ಸರಿ. ಆದರೆ ಅದಕ್ಕೇನು ಉಪಾಯ?''

ಏನೂ ಉಪಾಯ? ಈ ಪ್ರಶ್ನೆಗೆ ಚಂದ್ರಣ್ಣನಲ್ಲೂ ಉತ್ತರವಿರಲಿಲ್ಲ.

''ಕಮ್ಯೂನಿಸ್ಟರು ಸೋಶಲಿಸ್ಟರು ತಮ್ಮ ಭಿನ್ನಾಭಿಪ್ರಾಯಗಳನ್ನು ಬದಿಗಿಟ್ಟು ಒಂದೇ ಪಕ್ಷದಲ್ಲಿ ಸೇರಿ ಏಕೆ ಹೋರಾಡಬಾರದು?'' ಎಂದು ಕೇಳಿದ ಸೋಮಣ್ಣ.

''ಹಿಂದೆ ಹಾಗೂ ಆಗಿದೆ. ಆದರೆ ಕಮ್ಯೂನಿಸ್ಟರು ಹಲವಾರು ಉಪಾಯ ಗಳಿಂದ ಸೋಶಲಿಸ್ಟರ ಶಕ್ತಿಯನ್ನು ಕುಗ್ಗಿಸಿ ಆ ಸಂಯುಕ್ತ ಪಕ್ಷದಲ್ಲೂ ತಮ್ಮ ವರ್ಚಸ್ಸ ಸ್ಥಾಪಿಸಲು ಯತ್ನಿಸಿದುದರಿಂದ ಆ ಪ್ರಯತ್ನಕ್ಕೆ ಫಲ ದೊರೆಯಲಿಲ್ಲ. ಮತ್ತೆ ಕಮ್ಯೂನಿಸ್ಟರ ದಾರಿ ಬೇರೆಯಾಯಿತು, ಸೋಶಲಿಸ್ಟರದು ಬೇರೆಯಾಯಿತು. ಈಗ ಪುನಃ ಅವರು ಒಂದುಗೂಡುವುದು ಕಷ್ಟದ ಕೆಲಸ.''

''ನಿಮ್ಮಿಂದ ಈ ಕೆಲಸ ಆಗಬಹುದೇನೊ!'' ಎಂದ ಸೋಮಣ್ಣ.

"ಈ ಎರಡು ಪಕ್ಷಗಳ ಮಹಾ ನಾಟಕರು ನಿರ್ಧರಿಸಬೇಕಾದ ವಿಷಯ ಅದು. ನಮ್ಮಂಥವರು ಏನು ತಾನೆ ಮಾಡಲು ಸಾಧ್ಯ?"

"ಪ್ರಯತ್ನವನ್ನಂತೂ ಮಾಡಬಹುದಲ್ಲ?"

"ಅಷ್ಟು ಮಾಡಬಹುದು. ಮಾಡೋಣ," ಎಂದ ಚಂದ್ರಣ್ಣ. ಆದರೆ ಆತನ ಧ್ವನಿಯಲ್ಲಿ ಅಂಥ ಉತ್ಸಾಹವೇನೂ ಇರಲಿಲ್ಲ.

## ೨೫

ಕಿರ್‌ರ್‌ರ್‌ರ್ ಎಂದು ಬ್ರೇಕುಗಳ ಸದ್ದಾಯಿತು. ಚಂದ್ರಣ್ಣ ತಿರುಗಿ ನೋಡಿದ, ಮೋಟಾರು ಕಾರು ಆತನ ಹತ್ತಿರ ನಿಂತುಬಿಟ್ಟಿದ್ದಿತು. ಸೆಟ್ಟರ ಮೋಟಾರು ಕಾರು. ಶಾರದಾಮಣಿಯನ್ನುಳಿದು ಅದರಲ್ಲಿ ಇನ್ನಾರೂ ಇರಲಿಲ್ಲ. ಆಕೆಯೆ ಸಾರಥ್ಯ ವಹಿಸಿದ್ದಳು. ಸಾಯಂಕಾಲದ ವಾಯುವಿಹಾರಕ್ಕೆ ಹೊರಟಿರುವಳೆಂಬುದು ಸ್ಪಷ್ಟ ವಾಗಿದ್ದಿತು. ಅಲೆಯಲು ಹೊರಟಿದ್ದ ಚಂದ್ರಣ್ಣ ಅಂಥ ಸಮಯದಲ್ಲಿ ಶಾರದಾಮಣಿ ಯನ್ನು ಕಂಡಾಗ ಆತನಿಗೆ ಸಮಾಧಾನವೇನೂ ಆಗಿಲಿಲ್ಲ. ಆದರೂ ಆಕೆ ತನ್ನನ್ನು ಕಂಡು ಮೋಟಾರು ನಿಲ್ಲಿಸಿರುವಾಗ ಒಂದೆರಡು ಮಾತುಗಳನ್ನಾದರೂ ಆಡದೆ ಮುಂದಡಿ ಯಿಡುವಂತಿರಲಿಲ್ಲ.

ಚಲನ ಚಕ್ರದ ಮೇಲಿದ್ದ ಕೈಗಳನ್ನೆತ್ತಿ ಶಾರದಾ ಆತನಿಗೆ ನಮಸ್ಕಾರ ಮಾಡಿ ದಳು. "ತಿರುಗಾಡಲು ಹೊರಟಿರಾ ಚಂದ್ರಣ್ಣ? ಬನ್ನಿ ಕಾರಿನಲ್ಲಿ ಹೋಗಿಬರೋಣ," ಎಂದು ಆಹ್ವಾನಿಸಿದಳು.

"ಇಲ್ಲ, ನನಗೆ ಕೆಲಸವಿದೆ. ನೀವು ಹೋಗಿ ಬನ್ನಿ."

ಶಾರದಾ ಕಾರಿನ ಬಾಗಿಲನ್ನು ತೆರೆದು ಮುಗುಳುನಗೆಯನ್ನು ಮಿಂಚಿಸುತ್ತ – "ಹೀಗೇಕೆ ಮಾಡುತ್ತೀರಿ ಚಂದ್ರಣ್ಣ? ಬನ್ನಿ, ಕೊಂಚ ತಿರುಗಾಡಿಕೊಂಡು ಬಂದರೆ ಅಂಥ ಕೊಳ್ಳೆ ಹೋಗುವುದೂ ಅಷ್ಟರಲ್ಲೇ ಇದೆ," ಎಂದು ನುಡಿಯುತ್ತಾ ಆತನ ಕಡೆಗೆ ಕೈ ನೀಡಿದಳು.

ಇನ್ನು ಹತ್ತಿ ಕುಳಿತುಕೊಳ್ಳದೆ ಬೇರೆ ಉಪಾಯವಿರಲಿಲ್ಲ. ಹಿಂದಿನ ಭಾಗದಲ್ಲಿ ಕುಳಿತುಕೊಳ್ಳಲು ಹೋದ ಚಂದ್ರಣ್ಣನನ್ನು ನಸುಮುನಿಸಿನಿಂದ ನಿಟ್ಟಿಸಿ ನೋಡಿ ಶಾರದಾ – ''ಅಲ್ಲೇಕೆ? ಇಲ್ಲೇ ಪಕ್ಕದಲ್ಲೇ ಬನ್ನಿ – ಸುಖವಾಗಿ ಮಾತನಾಡುತ್ತ ಹೋಗುವ,'' ಎಂದು ಹೇಳಿ ಆತನ ಕೈ ಹಿಡಿದು ಬಲವಂತದಿಂದಲೇ ಆತನನ್ನು ತನ್ನ ಎಡಗಡೆಗೆ ಕೂಡ್ರಿಸಿಕೊಂಡಳು.

ಆಗಲೆ ಊರು ಹಿಂದುಳಿದಿತ್ತು. ಸುಂಕದ ಕಟ್ಟೆಯನ್ನು ದಾಟಿ ಕಾರು ಬೆಂಗಳೂರಿನ ರಸ್ತೆಯಲ್ಲಿ ಧಾವಿಸತೊಡಗಿತು. ಹಿಂದೆ ಬೀಳುತ್ತಿದ್ದ ಗಿಡ ಗಂಟೆ, ತಂತಿಯ ಕಂಭಗಳನ್ನು ನಿಟ್ಟಿಸುತ್ತ ಚಂದ್ರಣ್ಣ ಮೌನವಾಗಿ ಕುಳಿತುಕೊಂಡಿದ್ದ. ಗಾಳಿಯಲ್ಲಿ ಹಾರಾಡುತ್ತಿದ್ದ ಶಾರದೆಯ ಸೀರೆಯ ಸೆರಗು ಆತನ ಮುಖದ ಮೇಲೆ ನೆಗೆದ ಚಿನ್ನಾಟವಾಡುತ್ತಿತ್ತು. ಆಕೆಯ ತಲೆಗೂದಲಿನ ಮಾದಕ ಪರಿಮಳ ಆತನ ಮೈ ಮರೆಯಿಸತೊಡಗಿತ್ತು. ದಾರಿಯ ಮೇಲಿದ್ದ ಮಿಂಚು ಹರಿದಂತಾಗುತ್ತಿತ್ತು. ಚಲನ ಚಕ್ರವನ್ನು ಹಾಗೆ ಹೀಗೆ ತಿರುಗಿಸುತ್ತ ಆಕೆ ಆಗಾಗ ಬೇಕಂತಲೇ ತನ್ನ ಎಡಗೈಯನ್ನು ಆತನ ಭುಜಕ್ಕೆ ತಾಕಿಸುತ್ತಿದ್ದಳು. ಆತ ಬೆಚ್ಚಿಬಿದ್ದು ತನ್ನ ಕಡೆ ನೋಡಿದಾಗ ತುಟಿಗಳನ್ನು ಕುಣಿಸಿ ನಗುತ್ತಿದ್ದಳು.

''ಕಂಪನಿಯಿಂದ ನಿಮ್ಮನ್ನು ತೆಗೆದುಬಿಡಬೇಕೆಂಬ ಯೋಚನೆ ನಡೆದಿದೆಯಂತಲ್ಲ?'' ಎಂದಳಾಕೆ.

''ಹೌದು. ಅವರು ತೆಗೆಯುವುದಕ್ಕೆ ಮೊದಲು ನಾನೇ ರಾಜೀನಾಮೆ ಕೊಡಬೇಕೆಂದಿದ್ದೇನೆ.''

''ರಾಜೀನಾಮೆ ಏಕೆ?''

''ನಾನು ಸ್ವತಂತ್ರ ವಿಚಾರದವ. ಅನ್ಯಾಯಗಳಿಗೆ ತಲೆಬಾಗಿ ಇರುವ ಸ್ವಭಾವ ನನ್ನದಲ್ಲ.''

''ಅನ್ಯಾಯ ಯಾರು ಮಾಡುತ್ತಿದ್ದಾರೆ ನಿಮಗೆ?''

''ನಾನು ವಿವರಿಸಿ ಹೇಳಿದರೂ ನಿನಗರ್ಥವಾಗದು ಶಾರದಾ. ಆ ಮಾತೇ ಬೇಡಾ ಬಿಡು.''

''ನಿಮ್ಮ ಬಗ್ಗೆ ನಾನು ಬಹಳ ಆಸೆಯಿಟ್ಟುಕೊಂಡಿದ್ದೆ. ನೀವು ವಾರಪತ್ರಿಕೆ

ಹೊರಡಿಸುವಿರಿ, ನಾನು ನಿಮ್ಮೊಂದಿಗೆ ಕೂಡಿ ಕೆಲಸ ಮಾಡುತ್ತಾ ಪತ್ರಿಕಾವೃತ್ತಿಯನ್ನ ಅಭ್ಯಸಿಸಬಹುದು, ಲೇಖನ ಕಲೆಯಲ್ಲಿ ಪಳಗಬಹುದು ಎಂದು ಮುಂತಾಗಿ ಯೋಚಿಸುತ್ತಿದ್ದೆ. ಆದರೆ...''

''ಕಂಪನಿಯನ್ನು ಬಿಟ್ಟು ಮಾತ್ರಕ್ಕೆ ನಾನು ಪತ್ರಿಕೆ ಹೊರಡಿಸುವುದೇ ಇಲ್ಲವೆಂದೇನಿದೆ? ಹೊರಡಿಸಬಹುದು. ನೀನು ಆಗಲೂ ನನ್ನೊಡನೆ ಬಂದು ಕೆಲಸ ಮಾಡಬಹುದಲ್ಲ?''

''ನಿಜವೆ? ಹೊರಡಿಸುವಿರಾ?''

''ಹೊರಡಿಸಲೇಬೇಕು. ಇದು ನನ್ನ ಕ್ಷೇತ್ರವಲ್ಲವೆ? ಇದನ್ನು ಬಿಟ್ಟು ನಾನೆಲ್ಲಿಗೆ ಹೋಗಲು ಸಾಧ್ಯ? ನಾನು ಹೋಗಲೆಳಸಿದರೂ ಇದು ನನ್ನನ್ನು ಬಿಡಬೇಕಲ್ಲ.''

''ಅದಕ್ಕೂ ನಿಮಗೂ ಗಂಟು. ಮದುವೆಯ ಗಂಡು ಹೆಣ್ಣು ಇದ್ದ ಹಾಗೆ!''

''ನೀನು ಬರುವೆಯಾ ಶಾರದ ಆಗ?''

''ನೋಡೋಣ. ಎಂಥ ಪತ್ರಿಕೆ ಹೊರಡಿಸುವಿರೊ! ಏನು ಮಾಡುವಿರೊ! ಹಣ ವನ್ನೆಲ್ಲಿಂದ ತರುತ್ತೀರಿ?''

''ಹೇಗೋ ಮಾಡುವುದು ಕಷ್ಟಪಟ್ಟುಕೊಂಡು!''

''ಅಂಥ ಒದ್ದಾಟವೇಕೆ? ಕಂಪನಿಯಲ್ಲಿಯೆ ಸುಖವಾಗಿ ಇರಬಾರದೇ?''

''ಅದೆಂಥ ಸುಖ? ಸ್ವಾತಂತ್ರ್ಯವಿಲ್ಲದ ಸುಖವೂ ಒಂದು ಸುಖವೇ! ಕಷ್ಟ ಪಡುತ್ತಿದ್ದರೂ ಸರಿಯೆ, ಯಾರ ಹಂಗೂ ಇಲ್ಲದೆ ಸ್ವತಂತ್ರವಾಗಿರುವುದರಲ್ಲಿ ನಿಜವಾದ ಸುಖವಿದೆ!''

''ಏನು ಸುಖವೊ! ಈ ಒದ್ದಾಟ ನನಗಾಗದು ತಾಯೀ! ಶಿವಯೋಗಿಯೆ ವಾಸಿ ನಿಮಗಿಂತಲೂ. ಆತ ಹೀಗೆಲ್ಲ ಹುಚ್ಚು ಆದರ್ಶಗಳಿಗಾಗಿ ಒದ್ದಾಡುವುದಿಲ್ಲ. ದೊರೆತದ್ದನ್ನು ಸ್ವೀಕರಿಸಿ ಸುಖವಾಗಿರುತ್ತಾನೆ. ನಿಮಗೆ ಗೊತ್ತಿಲ್ಲವೆ? ಆತನೂ ಒಂದು ಪತ್ರಿಕೆ ಹೊರಡಿಸುತ್ತಾನಂತೆ. ಅದಕ್ಕೆ ನಾನೇ ಸಂಪಾದಕಿಯಾಗಬೇಕೆಂದು ಒತ್ತಾಯ ಪಡಿಸುತ್ತಿದ್ದಾನೆ.''

''ನೀನು ಸಂಪಾದಕಿಯಾದರೆ ಆತ?''

"ಕೇವಲ ಪ್ರಕಾಶಕ."

ಚಂದ್ರಣ್ಣ ನಕ್ಕ. ಮಾತನಾಡಲಿಲ್ಲ.

## ೨೬

ನಾಲ್ಕು ದಿನ ಗತಿಸಿಹೋಗಿವೆ. ಅಂದು ಕಂಪನಿಯ ಡೈರೆಕ್ಟರ್ ಬೋರ್ಡ್ ಸಭೆ ಸೇರಲಿದೆ. ಮ್ಯಾನೇಜಿಂಗ್ ಏಜಂಟರೊಂದಿಗೆ ಕಂಪನಿಯ ಸಂಬಂಧ ಹೇಗಿರಬೇಕು, ಚಂದ್ರಣ್ಣನ ಪತ್ರಿಕೆಗೆ 'ಗುಡ್‌ವಿಲ್' ಕೊಟ್ಟು ಅದನ್ನು ಕಂಪನಿಗೆ ತೆಗೆದುಕೊಳ್ಳುವುದೇ ಬೇಡವೇ ಎಂಬಿವೇ ಮೊದಲಾದ ವಿಷಯಗಳನ್ನು ನಿರ್ಧರಿಸಲು ಆ ಸಭೆಯನ್ನು ಕರೆಯಲಾಗಿದೆ. ಸಾಯಂಕಾಲ ಆರು ಗಂಟೆಗೆ ಸಭೆ.

ಬೆಳಗಿನಿಂದ ಚಂದ್ರಣ್ಣ ಕೊಂಚ ಕಾತರನಾಗಿಯೆ ಓಡಾಡುತ್ತಿದ್ದ. ಆದುವರೆಗೆ ತಾವು ಕೊಡಿಸಿದ ಹಾಗೂ ಖರ್ಚು ಮಾಡಿದ ಹಣದ ಬಗ್ಗೆ ಲೆಕ್ಕಪತ್ರ ಒಪ್ಪಿಸಬೇಕಾಗಿದ್ದಿತು. ತಾನು ತೆಗೆದುಕೊಂಡ ಮೂರು ಸಾವಿರ ರೂಪಾಯಿಗಳನ್ನು ಅಂದು ಕೊಡುವುದಾಗಿ ತುಂಗಭದ್ರಯ್ಯ ಒಪ್ಪಿಕೊಂಡಿದ್ದನಾದುದರಿಂದ ಶಿವಯೋಗಿಯೂ ಚಂದ್ರಣ್ಣನೂ ಆತನನ್ನು ಕಾಣಲು ಹೋಗಿದ್ದರು. ಬೆಳಗಿನಲ್ಲಿ ಆತನ ಭೆಟ್ಟಿಯೇ ಆಗಲಿಲ್ಲ. ಮಧ್ಯಾಹ್ನ ಒಂದು ಗಂಟೆಯ ಹೊತ್ತಿಗೆ ಮನೆಗೆ ಊಟಕ್ಕೆ ಬಂದಿದ್ದಾಗ ಆತನನ್ನು ಸಂಧಿಸಿದರು. ತುಂಗಭದ್ರಯ್ಯ ಇಳಿದ ಧ್ವನಿಯಲ್ಲಿ ನುಡಿದ : "ಕ್ಷಮಿಸಿ ಯೋಗೀಶ್! ಇಂದು ಹಣ ಸಿಕ್ಕಲಿಲ್ಲ."

"ಸಿಕ್ಕಲಿಲ್ಲವೆಂದರೆ! ಏನಾದರೂ ಮಾಡಿ ಕೂಡಿಸಿಕೊಡು ಮಹಾರಾಯ. ಬ್ಯಾಂಕು ಮುಚ್ಚುವುದರೊಳಗಾಗಿ ಹಣ ಬೇಕೇಬೇಕು."

"ಸಿಕ್ಕದಿದ್ದರೆ ನಾನಾದರೂ ಏನು ಮಾಡಲಿ?"

"ಈಗ ನಮ್ಮ ಕುತ್ತಿಗೆಗೆ ಬಂದಿದೆಯಲ್ಲ? ಬ್ಯಾಂಕಿನಲ್ಲಿ ಇಷ್ಟು ಹಣವಿದೆ ಯೆಂದು ಸರ್ಟಿಫಿಕೇಟ್ ಪಡಕೊಡು ಸಭೆಯಲ್ಲಿ ಡೈರೆಕ್ಟರುಗಳೆದುರಿಗೆ ಇಡಲೇ ಬೇಕಾಗಿದೆ. ಇಲ್ಲವಾದರೆ.."

''ಇಲ್ಲವಾದರೂ ಏನಂತೆ! ಏನು ಮಹಾ ಕಂಪನಿಯೊ! ಎಂಥ ಡೈರೆಕ್ಟರುಗಳೊ! ನಾಳೆ ತಂದು ತೋರಿಸುವೆವು ಎಂದು ಹೇಳಿ ಸುಮ್ಮನಾಗಿಸಬಹುದು.''

ಆ ಮಾತಿನಿಂದ ಶಿವಯೋಗಿ ಮೌನ ತಳೆದ. ಚಂದ್ರಣ್ಣನಿಗೆ ಮಾತ್ರ ಸುಮ್ಮನಿರಲಾಗಲಿಲ್ಲ. ''ಹಣದ ವಿಷಯದಲ್ಲಿ-ಅದೂ ಮೂರು ಸಾವಿರ ರೂಪಾಯಿ- ನಾಳೆ ನಾಡಿದ್ದು ಅಂದರೆ ನಡೆಯುವುದಿಲ್ಲ ತುಂಗಯ್ಯನವರೇ, ಮೊದಲೇ ವ್ಯಾಪಾರೀ ಜನ ಅದು. ಕೊಂಚ ಸಂದೇಹ ಬಂದರಾಯಿತು ಕೆಲಸವೆಲ್ಲ ಕೆಟ್ಟುಹೋಗುತ್ತದೆ. ನಮ್ಮ ಮೇಲೆ ವೃಥಾ ಅಪವಾದ ಬರುತ್ತದೆ.''

''ಅಂಥದೇನೂ ಆಗುವುದಿಲ್ಲ, ಸುಮ್ಮನೆ ಭಯ ನಿಮಗೆ ಅಷ್ಟೆ!'' ಎಂದ ತುಂಗಭದ್ರಯ್ಯ.

''ಭಯವೊ ವಿಸ್ಮಯವೊ ಏನಾದರೂ ಇರಲಿ, ತೆಗೆದುಕೊಂಡ ಹಣವನ್ನೆಲ್ಲ ಕೂಡಲೇ ಕೊಟ್ಟುಬಿಡಬೇಕು ನೀವು,'' ಎಂದು ನಿಷ್ಠುರವಾಗಿ ನುಡಿದ ಚಂದ್ರಣ್ಣ.

ಕೊಂಚಹೊತ್ತು ಸುಮ್ಮನಿದ್ದು ತುಂಗಭದ್ರಯ್ಯ - ''ಎಲ್ಲಿಂದ ತಂದು ಕೊಡಲಿ ಚಂದ್ರಣ್ಣ? ಇಂದು ಬೆಳಗಿನಿಂದ ಊರೆಲ್ಲ ತಿರುಗಿದೆ. ನಾಲ್ಕೈದು ಜನ ಕೊಡುವುದಾಗಿ ಭರವಸೆ ಕೊಟ್ಟಿದ್ದರು. ಅವರ ಹತ್ತಿರ ಹೋಗಿ ಬಂದೆ. ಇನ್ನು ನಾಲ್ಕೈದು ದಿನಗಳಲ್ಲಿ ಕೊಡುವುದಾಗಿ ಎಲ್ಲರೂ ಹೇಳಿದರು. ಅವರಿಂದ ಹಣ ಬಂದಿದ್ದರೆ ನಾನು ಕೊಡದೆ ಇರುತ್ತಿದ್ದೇನೇ?'' ಎಂದ.

''ನಿಮ್ಮ ಹತ್ತಿರ ಸಾವಿರಾರು ರೂಪಾಯಿ ಇರಬೇಕಲ್ಲ! ಅದನ್ನೆ ಯಾಕೆ ಕೊಟ್ಟು ಬಿಡಬಾರದು?''

''ನನ್ನ ಹತ್ತಿರ ಹಣ?'' ಎಂದು ನಕ್ಕು ನುಡಿದ ತುಂಗಭದ್ರಯ್ಯ : ''ಯಾರು ಹೇಳಿದರು ಚಂದ್ರಣ್ಣ ನಿಮಗೆ? ನನ್ನ ಹತ್ತಿರ ಹಣವಿದೆಯೆಂದು?''

''ಏನಿಲ್ಲ ಅಂದರೂ ನಲವತ್ತು ಐವತ್ತು ಸಾವಿರವಾದರೂ ಇರಬೇಕೆಂದು ಇವರೇ- ಯೋಗೀಶರೇ ಹೇಳುತ್ತಿದ್ದರು.''

''ಹೌದು. ಇದೆ. ಇಲ್ಲವೆಂದೇನೂ ಅಲ್ಲ, ಆದರೆ ಅದಾವುದೂ ಸದ್ಯ ನನ್ನ ಕೈಯಲ್ಲಿಲ್ಲ, ಎಲ್ಲವೂ ಕಂಪನಿಯಲ್ಲಿಯೆ ತೊಡಗಿಕೊಂಡಿದೆ.''

''ಕಂಪನಿಯಲ್ಲಿ ಅದು ಹೇಗಪ್ಪ?'' ಎಂದು ವಿಸ್ಮಯದಿಂದ ಕೇಳಿದ ಚಂದ್ರಣ್ಣ.

"ಕಂಪನಿಯ ಕೆಲಸಕ್ಕೆ ವಾರ ವಾರವೂ ಮೂರುಸಾವಿರ ರೂಪಾಯಿ ಬೇಕಾಗುತ್ತವೆ. ಅವುಗಳನ್ನೊದಗಿಸುವುದು ಇನ್ನೆಲ್ಲಿಂದ? ನಾನೇ ಹಾಕಬೇಕಾಗುತ್ತೆ. ಇಂದು ಹಾಕಿ ನಾಳೆ ಬಿಲ್ ಹಣ ಬಂದಾಗ ತೆಗೆದುಕೊಳ್ಳುತ್ತೇನೆ."

"ಅಂದರೆ? ಮ್ಯಾನೇಜಿಂಗ್ ಡೈರೆಕ್ಟರಾದ ನೀವೇ ಕಂಪನಿಗೆ ಸಾಲ ಕೊಟ್ಟಂತಾಯಿತಲ್ಲ?"

"ಹೌದು. ಎಲ್ಲರೂ ಮಾಡುವುದು ಹೀಗೇ. ಈ ಊರಿನ ದೊಡ್ಡ ದೊಡ್ಡ ಬಂಡವಾಳಗಾರರೆಲ್ಲ ಬಂಡವಾಳಗಾರರಾದದ್ದೂ ಹೇಗೆ ಅಂತ ತಿಳಿದಿದ್ದೀರಿ? ಎಲ್ಲರೂ ಹೀಗೇ. ನಮ್ಮ ಸಂಗಪ್ಪ ಸೆಟ್ಟರೂ ಸಹ."

"ಸೆಟ್ಟರು?"

"ಅವರೂ ಅಷ್ಟೆ ಅವರು ಶ್ರೀಮಂತರಾದದ್ದು ಹೇಗೆ ಅನ್ನುವುದು ನಿಮಗೆ ತಿಳಿಯದೇ? ಮೊದಲು – ಮೂವತ್ತು ವರ್ಷಗಳ ಕೆಳಗೆ ಇದೇ ನಿಮ್ಮ ಸಂಗಪ್ಪ ಸೆಟ್ಟರ ಬಳಿ ಒಂದು ಚಿಕ್ಕಾಸೂ ಇರಲಿಲ್ಲ. ಇಂದು ಎಪ್ಪತ್ತು ಲಕ್ಷಕ್ಕೆ ಮೇಲ್ಪಟ್ಟು ಆಸ್ತಿಯಿದೆ."

"ಮೂವತ್ತು ವರ್ಷಗಳಲ್ಲಿ ಎಪ್ಪತ್ತು ಲಕ್ಷ!" ಎಂದು ಆಶ್ಚರ್ಯದಿಂದ ಉದ್ಗಾರ ತೆಗೆದ ಚಂದ್ರಣ್ಣ.

"ಅದೆಲ್ಲವೂ ಪ್ರಾಮಾಣಿಕತನದಿಂದ ಬಂದ ಆಸ್ತಿ ಅಂತ ತಿಳಿದರೆ ನಿಮ್ಮಂಥ ಹುಚ್ಚರು ನೀವೇ. ಪ್ರಾಮಾಣಿಕತನದಿಂದ ಈ ಪ್ರಪಂಚದಲ್ಲಿ ಯಾರೂ ಶ್ರೀಮಂತ ರಾಗಲು ಸಾಧ್ಯವಿಲ್ಲ. ನ್ಯಾಯ, ನೀತಿ, ಸತ್ಯ ಇತ್ಯಾದಿ ಆದರ್ಶಗಳನ್ನೆಲ್ಲ ಪೆಟ್ಟಿಗೆಯಲ್ಲಿ ಹಾಕಿ ಕಟ್ಟಿಟ್ಟು ಹಣ ಸಂಪಾದನೆಗೆ ಹೊರಡಬೇಕಾಗುತ್ತೆ. ಸೆಟ್ಟರು ಮಾಡಿದ್ದೂ ಹಾಗೇ. ಇಂದಿಗೆ ಮೂವತ್ತು ವರ್ಷಗಳ ಕೆಳಗೆ ತಮ್ಮ ಹಳ್ಳಿಯನ್ನು ಬಿಟ್ಟು ಈ ಊರಿಗೆ ಬಂದಾಗ ಅವರ ಹತ್ತಿರ ಒಂದು ಕಾಸೂ ಇರಲಿಲ್ಲ. ಕೊಂಚ ಓದು ಬರಹ ಕಲಿತಿದ್ದರು. ಲೆಕ್ಕಪತ್ರ ಇಡಲು ಬರುತ್ತಿತ್ತು. ದಲಾಲಿ ಅಂಗಡಿಯೊಂದರಲ್ಲಿ ಗುಮಾಸ್ತರಾಗಿ ಕೆಲಸಕ್ಕೆ ನಿಂತರು. ತಿಂಗಳಿಗೆ ಹತ್ತು ರೂಪಾಯಿ ಸಂಬಳದ ಮೇಲೆ!"

ಚಂದ್ರಣ್ಣ ಮೌನವಾಗಿ ಕೇಳುತ್ತ ಕುಳಿತಿದ್ದ. ಅಷ್ಟು ಹೊತ್ತಿಗೆ ಒಳಗಿನಿಂದ ಕಾಫಿ ಬಂದಿತು. ಕಾಫಿಯ ಲೋಟವನ್ನು ತುಟಿಗಳ ಹತ್ತಿರ ತಂದು ಒಂದು ಗುಟುಕು ಕುಡಿದು ತುಂಗಭದ್ರಯ್ಯ ಹೇಳತೊಡಗಿದ : "ಹತ್ತು ರೂಪಾಯಿ ಸಂಬಳದ ಮೇಲೆ ಗುಮಾಸ್ತ ರಾಗಿದ್ದರೆಂದು ಹೇಳಿದೆನಲ್ಲ! ಆ ಅಂಗಡಿಯ ಮಾಲೀಕ ಸಾಧಾರಣ ಶ್ರೀಮಂತ.

ಒಳ್ಳೆಯಮನುಷ್ಯ. ಆದರೆ ಸ್ವಲ್ಪ ಖಯಾಲಿ. ಇವರು ಕೆಲಸಕ್ಕೆ ಸೇರಿದ ಬಳಿಕ ಇವರನ್ನು ಪೂರ್ಣವಾಗಿ ನಂಬಿ ಇವರ ಮೇಲೆ ಅಂಗಡಿಯನ್ನು ಬಿಟ್ಟು ತಾನು ಹೆಂಗಸರ ಸಹವಾಸ ದಲ್ಲಿ ಸಮಯ ಕಳೆಯತೊಡಗಿದ. ವ್ಯವಹಾರವನ್ನೆಲ್ಲ ಇವರೇ ನಡಸುತ್ತಿದ್ದರು. ಹಣಕಾಸೂ ಇವರ ಕೈಯಲ್ಲಿಯೆ. ಸರಿ. ಒಂದೆರಡು ವರ್ಷಗಳಲ್ಲೇ ಆ ಅಂಗಡಿ ದಿವಾಳಿ ತೆಗೆಯುವ ಸ್ಥಿತಿಗೆ ಬಂತು. ಅಂಗಡಿಕಾರ ಹಾಳಾಗಿಹೋದ. ಸೆಟ್ಟರು ಮಾತ್ರ ಹತ್ತು ಸಾವಿರ ರೂಪಾಯಿ ಶೇಖರಿಸಿದರು. ಹತ್ತು ರೂಪಾಯಿನ ಸಂಬಳದಿಂದ ಹತ್ತು ಸಾವಿರ ರೂಪಾಯಿಯ ಒಡೆತನಕ್ಕೇರಿದ್ದರು ನಮ್ಮ ಸೆಟ್ಟರು!''

ಒಂದೆರಡು ಕ್ಷಣ ತಡೆದು ನಿಂತು ಕಾಫಿಯನ್ನು ಕುಡಿದು ಮುಗಿಸಿದ ತುಂಗಭದ್ರಯ್ಯ. ಮತ್ತೆ ಹೇಳತೊಡಗಿದ : ''ಹತ್ತು ಸಾವಿರ ರೂಪಾಯಿ ಕೈಗೆ ಬಂದಿತಲ್ಲವೆ! ಇನ್ನೇಕೆ ಗುಮಾಸ್ತಗಿರಿ ಮಾಡಬೇಕು ಅವರು? ಮತ್ತೊಬ್ಬ ವರ್ತಕನನ್ನು ಹಿಡಿದು ಆತನೊಂದಿಗೆ ಪಾಲುಗಾರಿಕೆಯ ಮೇಲೆ ಅಂಗಡಿ ಹೂಡಿದರು. ಆ ಪಾಲುಗಾರ ಅಶಿಕ್ಷಿತ, ನಿರಕ್ಷರಿ. ಆತನಿಗೆ ಸೆಟ್ಟರಂಥ ಬುದ್ಧಿಯೂ ಇರಲಿಲ್ಲ, ಲೆಕ್ಕಪತ್ರ ಗಳಲ್ಲಿನ ಮೋಸಗಾರಿಕೆಯೂ ಆತನಿಗೆ ತಿಳಿಯುತ್ತಿರಲಿಲ್ಲ. ಅಂಥ ಬೆಪ್ಪುತಕ್ಕಡಿಯನ್ನು ಆರಿಸಿ ನೋಡಿಯೆ ಪಾಲುಗಾರಿಕೆ ಹೂಡಿದ್ದರು ನಮ್ಮ ಸೆಟ್ಟರು. ಒಂದೆರಡು ವರ್ಷ ಗಳಲ್ಲಿ ಆತನಿಗೂ ಪರಟಿಕೊಟ್ಟು ಅಂಗಡಿಯನ್ನೆಲ್ಲ ತಾವೊಬ್ಬರೇ ಹಿಡಿದುಕೊಂಡು ಐವತ್ತು ಸಾವಿರ ರೂಪಾಯಿಯ ಶ್ರೀಮಂತರಾಗಿ ಕುಳಿತರು!''

''ಆ ಪಾಲುಗಾರರನ್ನು ಹೇಗೆ ಮುಳುಗಿಸಿದರು?''

''ಲೆಕ್ಕಪತ್ರದ ಜಾದೂ ವಿದ್ಯೆಯನ್ನು ತಿಳಿದಿದ್ದರೆ ಎಂಥವರನ್ನಾದರೂ ಮುಳುಗಿಸ ಬಹುದು. ಒಂದಕ್ಕೆ ಹತ್ತು ಲೆಕ್ಕ ಬರೆಯುವುದು, ಸುಳ್ಳು ಬಿಲ್ ತೋರಿಸುವುದು, ಕೃತ್ರಿಮ ರಸೀತಿ ತಯಾರಿಸುವುದು, ಹತ್ತು ರೂಪಾಯಿ ತೆಗೆದುಕೊಂಡು ಒಂದು ರೂಪಾಯಿ ಬಂದಿತೆಂದು ಬರೆಯುವುದು – ಹೀಗೇ ಇರುತ್ತೆ ಹಲವಾರು ಉಪಾಯ! ಸೆಟ್ಟರು ಈ ವಿದ್ಯೆಯಲ್ಲಿ ಎಕ್ಸ್‌ಪರ್ಟ್ ಆಗಿದ್ದರು. ಆ ಪಾಲುಗಾರ ಹಳ್ಳ ಕೂಡಿದ. ಇವರು ಮನೆ ಕಟ್ಟಿಸಿದರು. ಮನೆಗಳನ್ನು ಕೊಂಡರು. ಅವುಗಳನ್ನು ಬಾಡಿಗೆಗೆ ಕೊಟ್ಟರು. ಅದರಿಂದಲೂ ಹಣ ಬರತೊಡಗಿತು. ಮೆಣಸಿನಕಾಯಿ, ಶೇಂಗಾ ವ್ಯಾಪಾರಕ್ಕೆ ನಿಂತರು. ಅದರಲ್ಲೂ ಲಾಭ ಬರತೊಡಗಿತು. ಆದರೆ ಇಂಥ ಲಾಭಕ್ಕೆಂದೂ ತೃಪ್ತರಾದ ವರಲ್ಲ ಸೆಟ್ಟರು. ಅವರಿಗೆ ಒಂದು ಏಟಿಗೆ ಭಾರಿ ಲಾಭ ಬರುವುದರ ಕಡೆಗೆ ಕಣ್ಣು. ಸರಿ. ತಮ್ಮ ವಖಾರವನ್ನು ಎಂಭತ್ತು ಸಾವಿರ ರೂಪಾಯಿಗಳಿಗೆ ಇನ್ಶೂರ್ ಮಾಡಿಸಿದರು.

ಒಂದು ವರ್ಷ ವಿಮೆಯ ಹಣ ಕಟ್ಟಿದ್ದೂ ಆಯಿತು. ಮರು ವರ್ಷ ಆಕಸ್ಮಾತ್ತಾಗಿ ಬೆಂಕಿಬಿದ್ದು ವಖಾರ ಸುಟ್ಟುಹೋಯಿತು. ಇನ್ಶೂರೆನ್ಸ್ ಕಂಪನಿಯಿಂದ ಎಂಭತ್ತು ಸಾವಿರ ಬಂತು!''

''ಒಮ್ಮೆಲೆ ಹೇಗೆ ಬೆಂಕಿ ಬಿತ್ತು ವಖಾರಕ್ಕೆ?''

''ಬೆಂಕಿ ಹತ್ತಿಸಬೇಕೆಂದು ಸೆಟ್ಟರು ಮನಸ್ಸು ಮಾಡಿದ ಮೇಲೆ ಹತ್ತದಿರುತ್ತದೆಯೆ?''

''ಅಂದರೆ? ಸೆಟ್ಟರೇ ಸ್ವತಃ ಬೆಂಕಿಯಿಟ್ಟರೆನ್ನಿ.''

''ಹೌದು. ಒಂದು ರಾತ್ರಿ ತಾವೇ ಹೋಗಿ ವಖಾರವನ್ನು ಸುಟ್ಟರು. ಆಗ ಅದರಲ್ಲಿ ಏಳೆಂಟು ಸಾವಿರ ರೂಪಾಯಿಯ ಮಾಲು ಸಹ ಇರಲಿಲ್ಲ. ಆಕಸ್ಮಾತ್ತಾಗಿ ಬೆಂಕಿ ಹತ್ತಿತೆಂದು ಪಂಚನಾಮೆ ಮಾಡಿಸಿ ಇನ್ಶೂರೆನ್ಸ್ ಕಂಪನಿಯ ತಲೆ ಬೋಳಿಸಿದರು.''

''ಪೋಲೀಸಿನವರಿಗೆ ಈ ಮೋಸ ತಿಳಿಯಲಿಲ್ಲವೆ?''

''ತಿಳಿದರೂ ಅವರು ಏನನ್ನೂ ಮಾಡುವಂತಿರಲಿಲ್ಲ. ಸೆಟ್ಟರು ತಾವಾಗಿಯೆ ಬೆಂಕಿ ಹಚ್ಚಿದರೆಂಬುದಕ್ಕೆ ಸಾಕ್ಷಿ ಬೇಕಲ್ಲವೆ? ಸರಿ. ಪೋಲೀಸರಿಗೂ ಒಂದೆರಡು ಸಾವಿರ ಲಂಚ ಕೊಟ್ಟು ಅವರನ್ನು ಬಲೆಗೆ ಹಾಕಿಕೊಂಡು ಎಂಭತ್ತು ಸಾವಿರಗಿಟ್ಟಿಸಿದರು.''

''ಸೆಟ್ಟರು ಶ್ರೀಮಂತರಾದದ್ದು ಹೀಗೇ ಅನ್ನಿ ಹಾಗಾದರೆ!''

''ಇನ್ನು ಹೇಗೆ ಇವರೆಲ್ಲ ಶ್ರೀಮಂತರಾಗುವುದು? ಧರ್ಮಪುರದಲ್ಲಿರುವ ಶ್ರೀಮಂತರಲ್ಲಿ ಮುಕ್ಕಾಲುಪಾಲು ಜನರೆಲ್ಲ ಇಂಥ ಅಧರ್ಮದ ಕೃತ್ಯಗಳಿಂದಲೇ ಶ್ರೀಮಂತರಾದದ್ದು. ಅವ ಇವನನ್ನು ಮುಳುಗಿಸುವುದು, ಇವ ಇನ್ನೊಬ್ಬನನ್ನು ಮುಳುಗಿಸುವುದು; ಇವರಿಬ್ಬರನ್ನು ಇನ್ನೊಬ್ಬ ಮುಳುಗಿಸುವುದು–ಶ್ರೀಮಂತರಾಗುವುದು. ಅವರಿವರ ತಲೆಬೋಳಿಸಿಯೆ ಇವರೆಲ್ಲ ಧನಿಕರಾದದ್ದು. ಎಂಭತ್ತು ಸಾವಿರ ಬಂತು ಅಂದೆನಲ್ಲವೆ! ಮುಂದಿನ ಕತೆ ಕೇಳಿ, ಆಗಲೇ ಸೆಟ್ಟರು ಒಂದು ಲಿಮಿಟೆಡ್ ಕಂಪನಿ ಮಾಡಿ ಗಿರಣಿಯನ್ನು ಸ್ಥಾಪಿಸಿದರು. ಇಲ್ಲಿನ ಇನ್ನೊಬ್ಬ ಲಕ್ಷಾಧೀಶರೂ ಇವರೂ ಕೂಡಿ ಮ್ಯಾನೇಜಿಂಗ್ ಏಜಂಟರಾಗಿ ಕೆಲಸ ಸಾಗಿಸಿದರು. ಕೆಲದಿನಗಳಲ್ಲೇ ಆ ಪಾಲುಗಾರ ರನ್ನು ಕಿತ್ತೆಸೆದು ಕಂಪನಿಯ ಸರ್ವಸೂತ್ರಗಳನ್ನು ತಾವೇ ಹಿಡಿದುಕೊಂಡರು. ಆಗ ಯುದ್ಧಕಾಲ. ಗಿರಣಿಗಳಿಗೆ ಒಂದಕ್ಕೆ ನೂರರಷ್ಟು ಲಾಭ. ಸರಿ ಎಲ್ಲ ಷೇರುಗಳನ್ನೂ ತಾವೇ ತೆಗೆದುಕೊಂಡು, ಸುಳ್ಳು ಲೆಕ್ಕ ಬರೆಯಿಸಿ ಲಾಭವನ್ನೆಲ್ಲ ತಮ್ಮ ಜೇಬಿಗೆ ಬಿಟ್ಟರು.

ಲಕ್ಷದಿಂದ ಲಕ್ಷಗಳಿಗೆ ಬೆಳೆಯುತ್ತ ಬಂತು ಆಸ್ತಿ. ಸಾಲದ್ದಕ್ಕೆ ಇವರ ಗಿರಣಿಯ ಕಟ್ಟಡ ಗಳಿಗಾಗಿ ಸಿಮೆಂಟು ಉಕ್ಕು ಕಬ್ಬಿಣ ಸರಕಾರದಿಂದ ಸುಲಭ ಬೆಲೆಗೆ ಸಿಗುತ್ತಿತ್ತು. ಅದರಲ್ಲಿ ಎಲ್ಲೋ ಕೊಂಚ ಭಾಗವನ್ನು ಗಿರಣಿಗೆ ಉಪಯೋಗಿಸಿ ಮಿಕ್ಕುದನ್ನೆಲ್ಲ ಕಾಳಸಂತೆಯಲ್ಲಿ ಹತ್ತುಪಟ್ಟು ಹೆಚ್ಚಿನ ಬೆಲೆಗೆ ಮಾರಿದರು. ಈ ಕಾಳಸಂತೆಯ ವ್ಯವಹಾರ ದಲ್ಲೇ ಅವರಿಗೆ ಸುಮಾರು ಹತ್ತುಲಕ್ಷ ರೂಪಾಯಿ ಲಾಭ ಬಂದಿರಬಹುದು! ಇಂದು ಸೆಟ್ಟರೆಂದರೆ ಎಲ್ಲರೂ ಹೆದರುತ್ತಾರೆ. ಈ ಊರಿಗೇ ಭಾರೀ ಸಾಹುಕಾರರು ಅವರು. ಕಾಂಗ್ರೆಸ್ಸಿನವರು, ಸರಕಾರದವರು, ಸ್ವಾಮಿಗಳು, ಜಗದ್ಗುರುಗಳು ಎಲ್ಲರೂ ಅವರ ಬಾಲಬಡುಕರೇ. ದುಡ್ಡಿನ ಬಲದಿಂದ ಎಲ್ಲರನ್ನು ಕೊಳ್ಳಬಲ್ಲರು ಅವರು... ನಮ್ಮ ನಿಮ್ಮಂಥವರನ್ನು ಯಾರು ಕೇಳಬೇಕು! ಅಂತೆಯೇ, ಈ ಶ್ರೀಮಂತರ ಪ್ರಪಂಚದಲ್ಲಿ ನಾವೂ ತಲೆಯೆತ್ತಿ ಬದುಕಬೇಕಿದ್ದರೆ ಅವರ ವಿದ್ಯೆಯನ್ನೇ ನಾವೂ ಕಲಿಯದೆ ನಿರ್ವಾಹ ವಿಲ್ಲ. ಅವರು ಹೋದ ದಾರಿಯಲ್ಲೇ ನಾವೂ ಹೋಗದಿದ್ದರೆ ವಿಧಿಯಿಲ್ಲ..''

ತುಂಗಭದ್ರಯ್ಯ ಕೊಂಚ ತಡೆದು ನಿಂತ, ಒಂದು ಸಲ ಆಕಳಿಸಿದ, ಅಂಗವಸ್ತ್ರ ದಿಂದ ಮುಖವನ್ನೊರೆಸಿಕೊಂಡು ಮತ್ತೆ ಹೇಳತೊಡಗಿದ :

''ನಾನೂ ಸೆಟ್ಟರ ಹಾಗೆ ಅನ್ಯಾಯದಿಂದ ಶ್ರೀಮಂತನಾಗಲು ಹೊರಟಿರ ಬಹುದೆಂದು ನೀವು ನನ್ನನ್ನು ತಿರಸ್ಕರಿಸಬಹುದೇನೊ, ಆದರೆ ಚಂದ್ರಣ್ಣ, ಈ ಪ್ರಪಂಚ ದಲ್ಲಿ ನ್ಯಾಯ ನೀತಿಗಳಿಗೆ ಯಾವ ಅರ್ಥವೂ ಉಳಿದಿಲ್ಲ, ಸತ್ಯ, ಧರ್ಮ, ದೇವರು ಎಲ್ಲಾ ಬಾಯಲ್ಲಿ ಹೇಳುವುದಕ್ಕೆ ಮಾತ್ರ. ಕೃತಿಯಲ್ಲಿ ಮೋಸ, ಕೇವಲ ಮೋಸ. ಸುತ್ತುಮುತ್ತು ಕೇವಲ ಕಪಟಿಗಳೇ ತುಂಬಿರುವ ಈ ಪ್ರಪಂಚದಲ್ಲಿ ನಮ್ಮಂಥ ಬಡವರು ಬದುಕುವುದೇ ಕಷ್ಟದ ವಿಷಯ. ಚಿಕ್ಕ ವಯಸ್ಸಿನಿಂದ ನನಗೀ ಕಟು ಅನುಭವ ಬಂದಿದೆ. ನಾನು ಓದಿದಾಗ ಪಟ್ಟ ಕಷ್ಟದ ಕತೆ ಹೇಳಿದರೆ ನೀವು ದಿಗಿಲುಗೊಳ್ಳಬಹುದು. ನಮ್ಮ ತಂದೆತಾಯಿಗಳು ತೀರ ಬಡವರು. ಕೋರಾನ್ನ ಭಿಕ್ಷದಿಂದ ಜೀವಿಸುವವರು. ನನ್ನ ಪಾಲಿಗೂ ಜೋಳಿಗೆಯೇ ಕಾದಿತ್ತು. ಆದರೆ ನಾನು ಕಲಿಯಬೇಕೆಂದು ಮನಸ್ಸು ಮಾಡಿದೆ. ನನ್ನ ತಾಯಿ ಈ ಊರಿಗೆ ಬಂದು ಒಂದು ಭೋಜನಾಲಯ ತೆರೆದು ಅಲ್ಲಿ ಹಗಲಿರುಳೂ ಜೀವ ತೇಯ್ದು ನನಗೆ ಓದು ಕಲಿಸಿದಳು. ಎಸ್.ಎಸ್.ಎಲ್.ಸಿ. ಆದ ಮೇಲೆ ಬೆಂಗಳೂರಿಗೆ ಹೋದೆ. ಅಲ್ಲಿ ಅನ್ನಕ್ಕಾಗಿ ಪಟ್ಟ ಬವಣೆಯನ್ನು ಹೇಳತೀರದು. ವೀರಶೈವರಿಗಾಗಿ ಅಲ್ಲೊಂದು ಹಾಸ್ಟಲೇನೂ ಇದೆ. ಚಿತ್ರದುರ್ಗದ ಜಗದ್ಗುರುಗಳು ಕಟ್ಟಿಸಿದ್ದಾರೆ. ಆದರೆ ನಮ್ಮಂಥ ಬಡವರಿಗೆ ಅಲ್ಲಿ ಸ್ಥಾನವಿಲ್ಲ. ರೂಮಿಗೆ ಹಣ ಕೊಡಬೇಕು, ಊಟಕ್ಕೆ ಹಣ ಕೊಡಬೇಕು, ಶ್ರೀಮಂತರ ಮಕ್ಕಳಿಗೆ ಮಾತ್ರ ಅಲ್ಲಿರಲು

ಸಾಧ್ಯವಾದೀತು. ನಮ್ಮಂಥವರು ವಾರದ ಮನೆಗಳಲ್ಲಿ ಊಟ ಮಾಡಿಕೊಂಡು ಎಲ್ಲೋ ಬಿದ್ದುಕೊಂಡು ಓದಬೇಕು. ಕಷ್ಟಪಟ್ಟು ನಾಲ್ಕಾರು ವಾರದ ಮನೆ ಸಂಪಾದಿಸಿದ್ದೂ ಆಯಿತು. ವಾರದಲ್ಲಿ ಐದು ದಿನ ಊಟ. ಎರಡು ದಿನ ಉಪವಾಸ. ಉಪವಾಸ ಆರೋಗ್ಯಕ್ಕೆ ಒಳ್ಳೆಯದು ಎಂದುಕೊಂಡು ಕಾಲ ತಳ್ಳುತ್ತ ಬಂದೆ. ಪುಸ್ತಕ ಕೊಳ್ಳಲು, ಫೀಜು ಕೊಡಲು ಹಣವಿರುತ್ತಿರಲಿಲ್ಲ, ಆದಕ್ಕಾಗಿ ಶ್ರೀಮಂತರ ಮನೆಗಳ ಬಾಗಿಲು ಕಾಯಬೇಕಾಗುತ್ತಿತ್ತು. ನೂರು ಸಲ ತಿರುಗಿಸಿ ಸಾವಿರ ಸಲ ಅವಹೇಳನ ಮಾಡಿದ ಮೇಲೆ ಐದಾರು ರೂಪಾಯಿ ಕೊಟ್ಟು ಕಳಿಸುತ್ತಿದ್ದರು ಆ ಶ್ರೀಮಂತರು. ಆ ಅವಮಾನ ವನ್ನೆಲ್ಲ ಸಹಿಸಿಕೊಂಡು ಬಿ.ಇ. ಮಾಡಿಯೆ ತೀರುವುದೆಂದು ನಿರ್ಧರಿಸಿ ಮಾಡಿದ್ದೂ ಆಯಿತು. ಶ್ರೀಮಂತರ ರೀತಿ ನೀತಿಗಳನ್ನು ಕಂಡಂತೆಲ್ಲ ನಾನೂ ಒಂದು ದಿನ ಶ್ರೀಮಂತ ನಾಗಿಯೆ ತೀರಬೇಕೆಂಬ ಹಟ ನನ್ನಲ್ಲಿ ದೃಢವಾಯಿತು. ಅಂತೆಯೆ ಪದವೀಧರ ನಾಗುತ್ತಲೂ ನೌಕರಿಯ ಗೊಡವೆಗೆ ಹೋಗದೆ ಇನ್ನೊಬ್ಬ ಸ್ನೇಹಿತರೊಂದಿಗೆ ಸೇರಿ ಈ ಕಂಪನಿಯನ್ನು ಹೂಡಿದೆ. ಈ ಊರಿನ ಶ್ರೀಮಂತರು ಕೆಲವರು ಡೈರೆಕ್ಟರಾದರು. ಸರಿ. ವ್ಯವಹಾರ ನಡೆದಿದೆ ನಮ್ಮ ಕಂಪನಿಯಿಂದ! ಅಂದು ನಾನು ಫೀಜಿಗಾಗಿ ಹಣ ಕೇಳಲು ಹೋದಾಗ ಹುಬ್ಬು ಗಂಟುಹಾಕಿಕೊಂಡು ಯದ್ವಾ ತದ್ವಾ ಮಾತಾಡುತ್ತಿದ್ದ ಶ್ರೀಮಂತರೇ ಇಂದು ನನ್ನನ್ನು ಕಾಣುತ್ತಲೂ ತಮ್ಮ ಕಾರು ನಿಲ್ಲಿಸಿ ಕರೆದುಕೊಂಡು ಹೋಗುತ್ತಾರೆ! ಆದರೂ–ಇನ್ನೂ ಹಣ ಬಂದಿಲ್ಲ ಕೈಗೆ. ಇನ್ನು ಎರಡು ತಿಂಗಳಲ್ಲಿ ಒಂದು ಕಟ್ಟಡದ ಹಣ ಬರುವುದಿದೆ. ಒಂದು ಲಕ್ಷ ರೂಪಾಯಿ ಅದು ಕೈಗೆ ಬಂದಾಗ ಏನೂ ತೊಂದರೆಯಿಲ್ಲ, ನಿಮ್ಮ ಮೂರು ಸಾವಿರ ರೂಪಾಯಿ ಕೊಡುವುದೆಂದರೆ ಏನು ಮಹಾ! ಸದ್ಯ ಮಾತ್ರ ನನ್ನನ್ನು ಪೀಡಿಸಬೇಡಿ. ನಾನು ಅಸಹಾಯಕನಾಗಿದ್ದೇನೆ,'' ಎಂದು ಹೇಳಿ ತುಂಗಭದ್ರಯ್ಯ ಎದ್ದು ನಿಂತ. ''ನಾನಿನ್ನೂ ಊಟ ಮಾಡಿಲ್ಲ, ಎರಡು ತುತ್ತು ತಿಂದ ಓಡಬೇಕು. ಬೆಂಗಳೂರು ದಾರಿಯಲ್ಲಿ ಸೇತುವೆಯ ಕಟ್ಟಡ ನಡೆದಿದೆ. ಅಲ್ಲಿಗೆ ಹೋಗಬೇಕಲ್ಲ?'' ಎಂದ. ಶಿವಯೋಗಿಯೂ ಎದ್ದುಬಿಟ್ಟ, ಮರು ಮಾತನಾಡದೆ ಚಂದ್ರಣ್ಣನೂ ಏಳಬೇಕಾಯಿತು.

''ಮುಂದೆ ಹ್ಯಾಗೆ ಯೋಗಿ? ಹಣವಂತೂ ಬರಲಿಲ್ಲ, ನಿಮ್ಮ ಆ ಶಂಕರ ಮೂರ್ತಿಯೂ ಕೊಡಲಿಲ್ಲವೆ?'' ಎಂದ ಚಂದ್ರಣ್ಣ.

''ಪಾಪ! ಆತ ತುಂಬ ತೊಂದರೆಯಲ್ಲಿದ್ದಾನೆ. ಮೊನ್ನೆ ಮೊನ್ನೆ ತಾನೆ ಎಮ್ಮೆ ಕೊಂಡುಕೊಂಡಿದ್ದಾನೆ. ಇನ್ನೂ ಹಾಲು ಕೊಡುತ್ತಿಲ್ಲ ಅವು. ಆತ ಹಣ ಕೊಡಲು ಇನ್ನೊಂದು ವರ್ಷವಾದರೂ ಆದೀತು!''

''ಸರಿ! ಇವೊತ್ತು ನಾಲ್ಕು ಸಾವಿರ ರೂಪಾಯಿಗಳ ಲೆಕ್ಕ ಹೇಗೆ ಕೊಡಬೇಕೆಂದಿದ್ದೀರಿ?''

''ಏನೊ! ಯಾವುದನ್ನು ಯೋಚಿಸಿಲ್ಲ ನಾನು. ಸಭೆ ನಡೆದಾಗ ಏನಾದರೊಂದನ್ನು ಹೇಳಿಬಿಟ್ಟು ಹೇಗೋ ಈ ಪ್ರಸಂಗದಿಂದ ಪಾರಾಗಿಬಿಟ್ಟರಾಯಿತು.''

ಚಂದ್ರಣ್ಣ ಆತನನ್ನು ತೀಕ್ಷ್ಣವಾಗಿ ನಿಟ್ಟಿಸುತ್ತ – ''ಏನಾದರೊಂದು ಅಂದರೇನು ಯೋಗಿ! ಇಂಥ ಬೇಜವಾಬ್ದಾರಿತನದಿಂದ ನನಗೆ ಕೆಟ್ಟ ಹೆಸರು ತರಬೇಕೆಂದಿದ್ದೀರೇನು!'' ಎಂದ.

''ನಾನಾದರೂ ಏನು ಮಾಡಲಿ? ಹಣವನ್ನಂತೂ ಕೊಟ್ಟು ಕುಳಿತೆ. ಕೊಡಬಾರದೆಂಬುದು ಆಗ ತಿಳಿಯಲಿಲ್ಲ. ಈಗ ಹೇಗಾದರೂ ಉಳಿದುಕೊಳ್ಳಬೇಕಲ್ಲ?''

''ನಿಮ್ಮಿಂದಾಗಿ ನನ್ನ ಮೇಲೂ ಅಪವಾದ ಬರುವಂತಾಯಿತಲ್ಲ! ನೀವು ಹೀಗೆ ಹಣ ಕೊಟ್ಟಿರುವ ವಿಷಯವನ್ನು ಸಭೆಯಲ್ಲಿ ತಿಳಿಸದೆ ಬೇರೆ ದಾರಿಯೆ ಉಳಿಯಲಿಲ್ಲ.''

''ತಿಳಿಸುವ ಮನಸ್ಸಿದ್ದರೆ ತಿಳಿಸಬಹುದು!'' ಎಂದು ನಿರ್ಲಕ್ಷ್ಯದಿಂದ ನುಡಿದ ಶಿವಯೋಗಿ.

''ಆ ವಿಷಯ ತಿಳಿಸಿದರೆ ನಿಮ್ಮ ಮರ್ಯಾದೆಯ ಗತಿ?''

''ಮರ್ಯಾದೆ ಎಂಬ ಶಬ್ದಕ್ಕೆ ಯಾವ ಅರ್ಥವೂ ಇಲ್ಲ ನನ್ನ ಕೋಶದಲ್ಲಿ. ನನಗದರ ಪರವೆಯಿಲ್ಲ.''

''ನಿಮಗಿಲ್ಲವಾದರೂ ನನಗಾದರೂ ಇದೆಯಲ್ಲವೆ! ನಾನೆಂದೂ ಹೀಗೆ ಅನ್ಯರ ಹಣವನ್ನು ಅಪವ್ಯಯ ಮಾಡಿದವನಲ್ಲ!''

''ಅನ್ಯರ ಹಣ ಎಂದರೇನು ಚಂದ್ರಣ್ಣ! ಈ ಪ್ರಪಂಚದಲ್ಲಿರುವವರೆಗೆ ಹಣ ಎಲ್ಲರದೂ ಹೌದು. ನನ್ನದು ಪರರದು ಎನ್ನುವುದೆಲ್ಲಾ ಒಂದು ಭ್ರಮೆ. ಕಮ್ಯೂನಿಸ್ಟರಾಗುತ್ತಿರುವ ನಿಮಗೆ ಇಂಥ ಸಣ್ಣ ವಿಷಯವೂ ತಿಳಿಯದೇ!''

''ಆ್ಞಂ!'' ಎಂದು ವಿಸ್ಮಯದಿಂದ ಉದ್ಗಾರ ತೆಗೆದ ಚಂದ್ರಣ್ಣ.

''ಮೊದಲಿನಿಂದಲೂ ನಾನು ಹೀಗೇ ಚಂದ್ರಣ್ಣ, ನಾನು, ಬೇರೆಯವರು ಎಂಬ ಭೇದಭಾವವೇ ನನ್ನಲಿಲ್ಲ, ಬದುಕಿರುವವರೆಗೂ ಸುಖವಾಗಿ ತಿಂದುಂಡು ಸೊಗಸಾಗಿ ಕಾಲ ಕಳೆಯಬೇಕೆಂಬುದು ನನ್ನ ತತ್ವಜ್ಞಾನ. ಹಣ ಸಂಪಾದಿಸಲು ಈ

ಜನರೆಲ್ಲ ಇಷ್ಟೊಂದು ಕಷ್ಟಪಡುವುದನ್ನು ಕಂಡಾಗ ನನಗೆ ಕನಿಕರ ಬರುತ್ತೆ, ನಗೆ ಬರುತ್ತೆ. ಸುಮ್ಮನೆ ಬೆವರಿಳಿಸಿ ಸಾಯುತ್ತಿವೆಯಲ್ಲಾ ಈ ಪ್ರಾಣಿಗಳು ಎಂದು. ಹಣಕ್ಕಾಗಿ ಶ್ರಮ ಪಡಬೇಕಾದ ಪ್ರಸಂಗ ನನಗೆಂದೂ ಬಂದಿಲ್ಲ. ಮೊದಲಿನಿಂದಲೂ ಹಾಗೇ. ಯಾರೋ ಹಣ ಕೊಡುತ್ತಿದ್ದಾರೆ, ನನ್ನ ಜೀವನ ಸರಾಗವಾಗಿ ಸಾಗಿದೆ. ಹಣ ತೆಗೆದುಕೊಳ್ಳುವದರಲ್ಲೂ ಅಷ್ಟೆ ಬೇರೆಯವರಿಗೆ ಕೊಡುವುದರಲ್ಲೂ ಅಷ್ಟೆ ಅದರಲ್ಲಿ ಅಂಥ ಮಹತ್ವವಿದೆ ಯೆಂದು ನನಗೆಂದೂ ಅನ್ನಿಸಿಲ್ಲ. ಈಗ ನೋಡಿ! ಆ ಜಗದ್ಗುರುಗಳು ನಮ್ಮ ಕಂಪನಿಯ ಷೇರ್ ಕೊಂಡು ನಾಲ್ಕು ಸಾವಿರ ರೂಪಾಯಿ ಕೊಟ್ಟರಲ್ಲವೆ! ಆ ಹಣ ಅವರಿಗೆ ಎಲ್ಲಿಂದ ಬಂತು? ಅವರೇನು ಸ್ವತಃ ಕಷ್ಟಪಟ್ಟು ಬೆವರಿಳಿಸಿ ದುಡಿದು ಗಳಿಸಿದರೇ? ಸಂಗಪ್ಪ ಸೆಟ್ಟರಂಥ ನಾಲ್ಕು ಜನ ಲಕ್ಷಾಧೀಶರಿಂದ ಕಾಣಿಕೆ ಬಂದ ಹಣ ಅದು. ಆ ಕೈಯಿಂದ ತೆಗೆದುಕೊಂಡರು, ಈ ಕೈಯಿಂದ ಕೊಟ್ಟರು. ನಾನೂ ಈ ಕೈಯಿಂದ ತೆಗೆದುಕೊಂಡೆ, ಆ ಕೈಯಿಂದ ಕೊಟ್ಟೆ ಇದರಲ್ಲಿ ತಪ್ಪೇನಿದೆ? ಬೇಜವಾಬ್ದಾರಿತನವೇನಿದೆ?''

ಚಂದ್ರಣ್ಣ ನಿರುತ್ತರನಾದ.

ಡೈರೆಕ್ಟರ್ ಬೋರ್ಡಿನ ಸಭೆ ಕೂಡಿದಾಗಲೂ ಶಿವಯೋಗಿ ತನ್ನ ಈ ತತ್ವಜ್ಞಾನವನ್ನು ಬಿಚ್ಚದಿರಲಿಲ್ಲ. ಆತನ ಮಾತುಗಳನ್ನು ಕೇಳಿ ಎಲ್ಲರೂ ನಕ್ಕರಾದರೂ ತಮ್ಮಣ್ಣನವರು ಮಾತ್ರ ನಗಲಿಲ್ಲ. ಅವರು ಹುಬ್ಬುಗಂಟು ಹಾಕಿಕೊಂಡು – ''ನಿಮ್ಮ ತತ್ವಜ್ಞಾನ ಹಾಗಿರಲಿ ಯೋಗಿಗಳೆ. ಈ ನಾಲ್ಕು ಸಾವಿರ ರೂಪಾಯಿ ನಿಮ್ಮ ಹೆಸರಿಗೆ ಖರ್ಚು ಹಾಕಿಬಿಡಿ. ಇಷ್ಟು ಹಣವನ್ನು ಕಂಪನಿಯಿಂದ ತೆಗೆದುಕೊಂಡಿರುವುದಾಗಿ ರಸೀತಿ ಬರೆದುಕೊಡಿ,'' ಎಂದರು. ಶಿವಯೋಗಿ ಮರುಮಾತನಾಡದೆ ಹಾಗೆ ಮಾಡಿದ. ಆ ಪ್ರಕರಣ ಮುಗಿಯಿತಾದರೂ ತಮ್ಮಣ್ಣನವರು ಆ ಬಗೆಗೆ ಚಂದ್ರಣ್ಣನಿಗೂ ನಾಲ್ಕು ಮಾತು ಆಡಲು ಮರೆಯಲಿಲ್ಲ. ''ನಿಮ್ಮನ್ನು ನಂಬಿಕೊಂಡು ನಾವು ಕಂಪನಿ ಮಾಡಿದೆವು. ಇವರು ಹೀಗೆ ಬೇಜವಾಬ್ದಾರಿತನದಿಂದ ನಡೆದುಕೊಳ್ಳುತ್ತಿದ್ದರೂ ನೀವೇಕೆ ಸುಮ್ಮನಿದ್ದಿರಿ?'' ಎಂದು ಕೇಳಿದರು.

ಆ ಪ್ರಶ್ನೆಗೆ ಚಂದ್ರಣ್ಣ ಉತ್ತರವೀಯಲಿಲ್ಲ. ಎಲ್ಲ ದೋಷವನ್ನೂ ಶಿವಯೋಗಿಯ ತಲೆಯ ಮೇಲೆ ಹೊರಿಸಿ ತಾನು ದೂರವಾಗುವ ಅಭಿಲಾಷೆ ಆತನಿಗಿರಲಿಲ್ಲ.

ಟೈಪ್‌ರೈಟರ್, ಗಡಿಯಾರ, ಪರದೆ ಇತ್ಯಾದಿ ಅನವಶ್ಯಕ ವಸ್ತುಗಳಿಗಾಗಿ ಹಣ ಹಾಳು ಮಾಡಿದ ಬಗೆಗೂ ಡೈರೆಕ್ಟರುಗಳೆಲ್ಲ ಆಕ್ಷೇಪವೆತ್ತಿದರು. ಚಂದ್ರಣ್ಣ ಅದಕ್ಕೂ ಉತ್ತರವೀಯಲಿಲ್ಲ. ಶಿವಯೋಗಿಯಂತೂ ಮೌನವ್ರತ ತಳೆದಂತಿತ್ತು.

''ಗುಡ್‌ವಿಲ್'' ಹಣದ ಪ್ರಶ್ನೆ ಬಂತು. ಡೈರೆಕ್ಟರುಗಳಲ್ಲಿ ಯಾರಿಗೂ ಆ ಬಗ್ಗೆ ಆಸಕ್ತಿಯಿರಲಿಲ್ಲ. ಆ ಹಣವನ್ನು ಕೊಡಬೇಕಾಗಿಲ್ಲವೆಂದೂ 'ಕ್ರಾಂತಿ'ಯನ್ನು ಕಂಪನಿಗೆ ತೆಗೆದುಕೊಳ್ಳದೆ ಹೊಸ ಪತ್ರಿಕೆಯನ್ನೇ ಹೊರಡಿಸಬೇಕೆಂದೂ ತೀರ್ಮಾನವಾಯಿತು. ಆಗಲೂ ಚಂದ್ರಣ್ಣ ಮೌನವಾಗಿದ್ದ.

ಹೊಸ ಪತ್ರಿಕೆಯನ್ನು ಎಂದು ಹೊರಡಿಸುವುದು, ಅದನ್ನು ಯಾವ ಧೋರಣೆ ಯಿಂದ ನಡೆಸುವುದು ಎಂಬ ಬಗೆಗೆ ಚರ್ಚೆಯಾಯಿತು. ಡೈರೆಕ್ಟರ್ ಬೋರ್ಡಿನ ಅಪ್ಪಣೆಯ ಮೇರೆಗೆ ಚಂದ್ರಣ್ಣ ಆ ಪತ್ರಿಕೆ ನಡೆಸಬೇಕೆಂದೂ, ಕಂಪನಿಯ ಹಿತಕ್ಕೆ ಧಕ್ಕೆ ಬರುವಂಥ ಬರವಣಿಗೆಗಳಿಗೆ ಅದರಲ್ಲಿ ಆಸ್ಪದವಿರಕೂಡದೆಂದೂ ತಮ್ಮಣ್ಣನವರು ನುಡಿದರು. ಅದುವರೆಗೆ ಮೌನವಾಗಿದ್ದ ಚಂದ್ರಣ್ಣ ಈಗ ಧ್ವನಿಯೆತ್ತಿದ:

''ಕಂಪನಿಯ ಹಿತಕ್ಕೆ ಧಕ್ಕೆ ಬರುವಂತೆ ಎಂದರೇನು?''

''ಕಂಪನಿಯಲ್ಲಿರುವವರೆಲ್ಲ ವ್ಯಾಪಾರಸ್ಥರು, ಬಂಡವಾಳಗಾರರು, ಸ್ವಾಮಿಗಳೂ ಅವರ ಕಡೆಗೇ ಇದ್ದಾರೆ. ಆಂದಬಳಿಕ ಇವರ ಹಿತ ಸಂಬಂಧಗಳ ವಿರುದ್ಧ ಕೆಲಸ ಮಾಡುತ್ತಿರುವ ಕಮ್ಯೂನಿಸ್ಟ್ ಸೋಶಲಿಸ್ಟ್ ಮೊದಲಾದವರ ಲೇಖನಗಳಿಗೆ ಪತ್ರಿಕೆಯಲ್ಲಿ ಸ್ಥಳ ದೊರೆಯಕೂಡದೆಂಬುದು ಸಹಜವೇ ಆಗಿದೆ. ಅಷ್ಟು ಮಾತ್ರವಲ್ಲ, ನೀವು ಕಂಪನಿಯ ಮ್ಯಾನೇಜಿಂಡ್ ಡೈರೆಕ್ಟರಾದ್ದರಿಂದ ಈ ಕಿಡಿಗೇಡಿ ನಿರುದ್ಯೋಗಿಗಳೊಂದಿಗೆ ವೈಯಕ್ತಿಕವಾಗಿ ಯಾವ ಸಂಬಂಧವನ್ನೂ ಇಟ್ಟುಕೊಳ್ಳಕೂಡದು. ನೀವು ಹಾಗೆ ಮಾಡುವುದರಿಂದ ಕಂಪನಿಗೆ ಕೆಟ್ಟ ಹೆಸರು ಬರುತ್ತದೆ. ವ್ಯವಹಾರಕ್ಕೆ ಹೊಡೆತ ಬೀಳುತ್ತದೆ.''

''ಈ ಷರತ್ತುಗಳಂತೆ ಕೆಲಸ ಮಾಡಲು ನಾನು ಸಿದ್ಧನಿರದಿದ್ದರೆ?''

''ಹಾಗಿದ್ದಲ್ಲಿ ನೀವು ಅನಿವಾರ್ಯವಾಗಿ ಕಂಪನಿಯಿಂದ ಹೊರಬೀಳಬೇಕಾಗು ವುದು. ಬೇರಾವ ಉಪಾಯವೂ ಇಲ್ಲ.''

''ದಯವಿಟ್ಟು ನನ್ನ ರಾಜೀನಾಮೆಯನ್ನು ಸ್ವೀಕರಿಸಬೇಕು,'' ಎಂದು ಹೇಳಿ ಚಂದ್ರಣ್ಣ ಮೊದಲೇ ಬರೆದು ತಂದಿದ್ದ ರಾಜೀನಾಮೆಯ ಕಾಗದವನ್ನು ತಮ್ಮಣ್ಣನವರ ಎದುರಿಗಿರಿಸಿದ.

ಅಧ್ಯಕ್ಷರಾದ ತಮ್ಮಣ್ಣನವರ ಸೂಚನೆಯ ಮೇರೆಗೆ ಆ ರಾಜೀನಾಮೆಯ ವಿಷಯದ ಚರ್ಚೆಗೆ ಮೊದಲಾಯಿತು. ಡೈರೆಕ್ಟರ್ ಬೋರ್ಡಿನ ಅಪ್ಪಣೆಯಂತೆ

ವರ್ತಿಸಲು ಚಂದ್ರಣ್ಣ ಸಿದ್ಧನಿರಲಿಲ್ಲವಾದುದರಿಂದ ಇನ್ನು ಆತನನ್ನು ಇಟ್ಟುಕೊಳ್ಳುವುದರಿಂದ ಉಪಯೋಗವೇನೂ ಇಲ್ಲವೆಂಬುದು ಎಲ್ಲರಿಗೂ ಮನವರಿಕೆಯಾಗಿದ್ದಿತು. ಸರಿ. ಆತನ ರಾಜೀನಾಮೆಯನ್ನು ಸ್ವೀಕರಿಸಿ ಶಿವಯೋಗಿಯೊಬ್ಬನನ್ನೇ ಮ್ಯಾನೇಜಿಂಗ್ ಡೈರೆಕ್ಟರನ್ನಾಗಿ ನಿಯಮಿಸಲಾಯಿತು. ಹಣಕಾಸಿನ ವ್ಯವಹಾರವೆಲ್ಲ ತಮ್ಮಣ್ಣನವರ ಕೈಯಲ್ಲಿಯೇ ಇರಬೇಕೆಂದೂ ಅವರ ಅಪ್ಪಣೆಯಂತೆ ಶಿವಯೋಗಿ ಕಂಪನಿಯ ಕೆಲಸ ನೋಡಿಕೊಳ್ಳಬೇಕೆಂದೂ ವಿಧಿಸಲಾಯಿತು. ಶಿವಯೋಗಿ ಆನಂದದಿಂದ ಒಪ್ಪಿಕೊಂಡ. ತನ್ನ ತಲೆಯ ಮೇಲೆ ಬಿದ್ದಿದ್ದ ಭಾರಿ ಬಂಡೆಗಲ್ಲೊಂದು ಸರಿದುಬಿದ್ದಂತೆ ಭಾಸವಾಯಿತು ಚಂದ್ರಣ್ಣನಿಗೆ. ಸಭೆ ಮುಗಿಯುವುದರೊಳಗಾಗಿ ಆತನ ತನ್ನ ಹಾಸಿಗೆಯಲ್ಲಿ ಅಂಗಿ-ಪೈಜಾಮಗಳನ್ನು ಕಟ್ಟಿ, ಕಚೇರಿಯ ಬೀಗದ ಕೈಯನ್ನು ತಮ್ಮಣ್ಣನವರಿಗೊಪ್ಪಿಸಿ ಹೊರಟು ನಿಂತ.

ಎಲ್ಲರೂ ಒಟ್ಟುಗೂಡಿ ಕಚೇರಿಯಿಂದ ಹೊರಟರು. ಹೊರಗಿನ ಬಾಗಿಲಿಗೆ ಭದ್ರವಾದ ಬೀಗ ಜಡಿದು ಅದನ್ನು ಅಲುಗಾಡಿಸಿ ನೋಡಿ, ಬೀಗದ ಕೈಯನ್ನು ಕೋಟಿನ ಜೇಬಿಗೆ ಸೇರಿಸಿ ತಮ್ಮಣ್ಣನವರು ತಮ್ಮ ಮನೆಯ ಕಡೆಗೆ ಹೊರಟಾಗ ಅವರ ತುಟಿಗಳ ಮೇಲೆ ಗೆಲುವಿನ ನಗೆ ಮಿನುಗುತ್ತಿದ್ದುದನ್ನು ಚಂದ್ರಣ್ಣ ಗುರುತಿಸದಿರಲಿಲ್ಲ.

ಆ ಕಚೇರಿಗೆ ಕೊನೆಯ ಶರಣು ಹೊಡೆದು, ಹಾಸಿಗೆಯ ಸುರುಳಿಯನ್ನು ಕಂಕುಳಲ್ಲಿ ಹಿಡಿದುಕೊಂಡು ಕೊಟ್ರಪ್ಪನ ಕೊಠಡಿಗೆ ಸಾಗಿದ ಚಂದ್ರಣ್ಣ.

## ೨೭

ಸಂಗಪ್ಪ ಸೆಟ್ಟರು ನೀಡಿದ 'ಗೋಲ್ಡ್‌ಫ್ಲೇಕ್' ಸಿಗರೇಟನ್ನು ಹೊತ್ತಿಸಿ ಹೊಗೆಯನ್ನು ಉಗುಳುತ್ತ ಮಾರ್ತಾಂಡಪ್ಪ ಹೇಳಿದ :

"ಹೌದು, ಹೌದು. ಒಳ್ಳೆ ಐಡಿಯಾ. ಹಾಗೇ ಮಾಡುವುದು. ಹಾಗೇ ಮಾಡುವುದು."

"ನಿಮಗೇನಾದರೂ ಬೇರೆ ಯೋಚನೆಯಿದ್ದರೆ ಹೇಳಬಹುದು," ಎಂದರು ಸೆಟ್ಟರು.

''ಇದಕ್ಕಿಂತ ಉತ್ತಮವಾದ ವಿಚಾರವಿನ್ನಾವುದಿದ್ದೀತು ಸೆಟ್ಟರೆ! ಇಂಥ ವಿಷಯಗಳಲ್ಲಿ ನಿಮಗಿಂತ ಹೆಚ್ಚಿನ ಬುದ್ಧಿಯೇ ನಮ್ಮದು? ನೀವೆಂದ ಹಾಗೆಯೇ ಸರಿ. ಆ ಕಮ್ಯೂನಿಸ್ಟರನ್ನು ಮಟ್ಟಹಾಕಬೇಕಾದರೆ ಇದೇ ರಾಮಬಾಣ ಉಪಾಯ.''

''ಕಮ್ಯೂನಿಸ್ಟರು ಮಾತ್ರವಲ್ಲ ಮಾರ್ತಾಂಡಪ್ಪ, ಸೋಶಲಿಸ್ಟರಿಗೂ ಗದೆಯಿದ್ದ ಹಾಗೆ ಇದು ಈ ಇಂಟಕ್,'' ಎಂದ ಸದಾಶಿವಪ್ಪ.

ಅಷ್ಟು ಹೊತ್ತು ಸೋಫಾದಲ್ಲಿ ಮೌನವಾಗಿ ಒರಗಿಕೊಂಡಿದ್ದ ಮರಿಯಪ್ಪ ತಲೆಯೆತ್ತಿ ಕೇಳಿದ : ''ಇಂಟಕ್? ಅಂದರೆ?''

''ಇಂಟಕ್ ಅಂದರೇನೆಂಬುದು ಗೊತ್ತಿಲ್ಲವೇ ನಿಮಗೆ?''

''ಇಲ್ಲ ಮಾರಾಯ, ನಾನು ಇಂಗ್ಲೀಷು ಕಲಿತದ್ದೂ ಅಷ್ಟರಲ್ಲೇ ಇದೆಯಲ್ಲ. ಏನೋ ನಾಲ್ಕು ಏ ಬಿ ಸಿ ಡಿ ಬರುತ್ತದೆಂದ ಮಾತ್ರಕ್ಕೆ ಇಂಥ ದೊಡ್ಡ ದೊಡ್ಡ ಶಬ್ದಗಳೆಲ್ಲ ತಿಳಿದಾವೇ?''

''ಹೀಗೆ ನಿರ್ಲಕ್ಷ್ಯ ಮಾಡಿದರೆ ಉಪಯೋಗವಿಲ್ಲ ಮರಿಯಪ್ಪನವರೇ, ಇನ್ನು ಮೇಲೆ ನೀವೇ ಈ ಊರಿನ ಮುಖಂಡರಾಗುವವರು. ಇದುವರೆಗೆ ಕಾಂಗ್ರೆಸ್ ಮುಖಂಡರಾಗಿದ್ದೀರಿ. ಇನ್ನು ಲೇಬರ್ ಲೀಡರೂ ಆಗಬೇಕಾಗಿದೆ. ನೀವೇ ಹೀಗೆ ನಿರುತ್ಸಾಹದಿಂದಿದ್ದರೆ ಹೇಗೆ?'' ಎಂದರು ಸೆಟ್ಟರು.

''ಲೇಬರ್ ಲೀಡರ್ ಎಂದರೆ ಕೂಲಿಕಾರ ಮುಖಂಡರು,'' ಎಂದು ವಿವರಿಸಿದ ಸದಾಶಿವಪ್ಪ.

ಕೂಲಿಕಾರ ಮುಖಂಡರೆನ್ನುತ್ತಲೂ ಮರಿಯಪ್ಪನ ಕುತೂಹಲ ಕೆರಳಿದಂತಾಯಿತು. ಕೂಲಿಕಾರರಿಗೆ ಮುಖಂಡರಾಗುವುದೆಂದರೆ ಸ್ವರ್ಗದಲ್ಲಿ ದೇವೇಂದ್ರನಾದ ಹಾಗೆ ಎಂದು ಆತನ ತಿಳಿವಳಿಕೆ. ನಾನಾ ತರದ ಹರಯದ ಹೆಣ್ಣುಗಳ ಸಹವಾಸಯೋಗ ತೀರ ಸುಲಭ ಕೂಲಿಕಾರ ಕ್ಷೇತ್ರದಲ್ಲಿ! ಕಾಂಗ್ರೆಸ್ಸಿನಲ್ಲಿ ಇಂಥ ಮೋಜು ಲಭಿಸುವುದುಂಟೇ? ಕೂಲಿಕಾರ ಸಂಘದ ಚಟುವಟಿಕೆಗಳಲ್ಲಿ ಭಾಗವಹಿಸುವ ಆಕರ್ಷಕ ಮೈಕಟ್ಟಿನ ತರುಣಿಯರನ್ನು ನಿರೀಕ್ಷಿಸಿದಾಗಲೆಲ್ಲ ಮರಿಯಪ್ಪನಿಗೆ ಆಸೆ ಕೆರಳುತ್ತಿತ್ತು. ತಾನೂ ಕೂಲಿಕಾರ ಮುಖಂಡನಾದರೆ ಎಷ್ಟು ಚೆನ್ನಾದೀತು ಎಂದು ಆತ ಯೋಚಿಸಿದ್ದ. ತನ್ನ ಬಹುದಿನಗಳ ಬಯಕೆ ಹೀಗೆ ಸುಲಭವಾಗಿ ನೆರವೇರುವ ಕಾಲ ಇಷ್ಟು ಬೇಗ ಬಂದೀತೆಂದು ಆತನಿಗನ್ನಿಸಿರಲಿಲ್ಲ.

"ನಿಜ ಹೇಳಬೇಕಾದರೆ ಕೂಲಿಕಾರ ಕ್ಷೇತ್ರದಲ್ಲಿರುವಂಥ ಸ್ವಾರಸ್ಯ ಕಾಂಗ್ರೆಸ್ ರಾಜಕಾರಣದಲ್ಲಿಲ್ಲ. ಏನಿದೆ ಕಾಂಗ್ರೆಸ್ ಕ್ಷೇತ್ರದಲ್ಲಿ? ಚುನಾವಣೆ, ಮತದಾನ, ಯಾವಾಗಲೋ ಒಂದು ಸಭೆ, ಒಂದು ಭಾಷಣ ಆದರೆ ಆಯಿತು. ಎಲ್ಲರೂ ಮಂತ್ರಿಗಳಾಗಿ ಮೆರೆಯಲು ಸಾಧ್ಯವಿದೆಯೆ? ಎಲ್ಲರೂ ಅಧಿಕಾರ ನಡಸಲು ಸಾಧ್ಯವಿದೆಯೆ? ಸಾಮಾನ್ಯ ಕಾರ್ಯಕರ್ತರೆಲ್ಲ ಖಾದಿ ಹಾಕಿಕೊಂಡು ಅಲೆಯುತ್ತಿರುವುದೆಷ್ಟೋ ಅಷ್ಟೆ ಎಲ್ಲವೂ ಬೇಸರದ ಕೆಲಸ. ಕೂಲಿಕಾರ ಕ್ಷೇತ್ರದಲ್ಲಾದರೋ ದಿನವೂ ಏನಾದರೊಂದು ಚಟುವಟಿಕೆಯಿದ್ದೇ ಇರುತ್ತದೆ. ಜೀವಂತ ಚಟುವಟಿಕೆ..." ಎಂದರು ಸೆಟ್ಟರು.

"ನೀವನ್ನುವುದು ನೂರು ಪಾಲಿಗೂ ನಿಜ ಸೆಟ್ಟರೆ," ಎಂದು ದನಿಗೂಡಿಸಿದ ಮಾರ್ತಾಂಡಪ್ಪ.

"ಅದಕ್ಕೇ ನಾನು ಹೇಳುವುದು. ಇಂಟಕ್‌ನ ಶಾಖೆಯನ್ನು ಇಲ್ಲಿ ಸ್ಥಾಪಿಸಿ ಕೂಲಿಕಾರ ಸಂಘವನ್ನು ನೀವು ವಶಪಡಿಸಿಕೊಳ್ಳಬೇಕು."

"ಆ ಕಮ್ಯೂನಿಸ್ಟರು ಬಿಡಬೇಕಲ್ಲ ಸೆಟ್ಟರೆ?" ಎಂದ ಮರಿಯಪ್ಪ

"ಅವರು ಬಿಡದಿದ್ದರೂ ಸಂಘವೇ ಬಿಡುವುದಲ್ಲ ಅವರ ಸಹವಾಸವನ್ನು! ಈಗಾಗಲೇ ಅವರ ಶಕ್ತಿ ಮುಕ್ಕಾಲುಪಾಲು ಕಡಿಮೆಯಾಗಿದೆ. ದೊಡ್ಡ ದೊಡ್ಡ ಪುಂಡರನ್ನೆಲ್ಲ ಓಡಿಸಿಯಾಯಿತು. ದುರುಗಪ್ಪನಿಗೆ ಜೀವ ಬೇಕಿದ್ದರೆ ಆತ ಇಲ್ಲಿ ಕಾಲಿಡುವುದಿಲ್ಲ. ಇನ್ನುಳಿದುದು ಚಿಕ್ಕಪುಟ್ಟ ಜನ. ಅವರನ್ನು ಲೆಕ್ಕದಲ್ಲೇ ಹಿಡಿಯಬೇಕಾದ ಅಗತ್ಯವಿಲ್ಲ. ಅವರನ್ನು ಸೋಶಲಿಸ್ಟರೇ ತೀರಿಸಿ ಬಿಡುತ್ತಾರೆ. ನಾವು ತೊಂದರೆ ಪಟ್ಟುಕೊಳ್ಳಬೇಕಾದ ಅಗತ್ಯವೇನೂ ಇಲ್ಲ."

"ಸದ್ಯಕ್ಕಂತೂ ಕಮ್ಯೂನಿಸ್ಟರ ಸಮಾಧಿಯಾದ ಹಾಗೇ ಆಗಿದೆ. ಈಗ ನಾವು ಮಾಡಬೇಕಾಗಿರುವ ಕೆಲಸವೆಂದರೆ ಯಾರಿಗೂ ತಿಳಿಯದಂತೆ ಮೆಲ್ಲಗೆ ಇಂಟಕ್ ಶಾಖೆಯನ್ನು ಇಲ್ಲಿ ಸ್ಥಾಪಿಸುವುದು. ಇಂಟಕ್ ಅಂದರೇನೆಂಬುದು ಗೊತ್ತಾಯಿತೋ ಇಲ್ಲವೋ ಮರಿಯಪ್ಪ? ಹಿಂದೂಸ್ಥಾನದಲ್ಲೆಲ್ಲ ಕಾಂಗ್ರೆಸ್ ಸಂಸ್ಥೆಯಿರುವ ಹಾಗೆ ಕೂಲಿಕಾರರಿಗಾಗಿ ಈ ಇಂಟಕ್ ಇದೆ. ಇಂಡಿಯನ್ ನ್ಯಾಶನಲ್ ಟ್ರೇಡ್ ಯೂನಿಯನ್ ಕಾಂಗ್ರೆಸ್ ಅಂತ ಹೆಸರು ಇದಕ್ಕೆ. ನಮ್ಮ ಕಾಂಗ್ರೆಸ್ ಸಂಸ್ಥೆಯ ಖಾಸಾ ತಮ್ಮ ಇದ್ದ ಹಾಗೆ ಇದು. ಕಮ್ಯೂನಿಸ್ಟರು ಮತ್ತು ಸೋಶಲಿಸ್ಟರಿಂದ ಅಡ್ಡದಾರಿ ತುಳಿಯುತ್ತಿರುವ ಕೂಲಿಕಾರರನ್ನು ಹತೋಟಿಯಲ್ಲಿಟ್ಟುಕೊಳ್ಳಲೆಂದೇ ಸರದಾರ ಪಟೇಲರು ಸ್ಥಾಪಿಸಿದ ಸಂಸ್ಥೆ ಇದು. ಕಾಂಗ್ರೆಸ್ ಸರಕಾರದ ಬೆಂಬಲ, ಗಿರಣಿ

ಮಾಲೀಕರ ಸಹಾಯ ಎರಡೂ ಉಂಟು. ಆ ಕಾಮ್ರೇಡುಗಳಿಗಿರುವ ಹಾಗೆ ಹಣದ ತೊಂದರೆಯೇನೂ ಇದಕ್ಕಿಲ್ಲ. ಇಂಟಕ್‌ನ ಕಾರ್ಯಕರ್ತರೆಲ್ಲ ಯಾವಾಗಲೂ ಮೋಟರು ಕಾರುಗಳಲ್ಲೇ ಓಡಿಯಾಡುತ್ತಾರೆ. ಮಾರ್ತಾಂಡಪ್ಪನಂಥ ಉತ್ಸಾಹಿ ಕೆಲಸಗಾರರಿಗೆ ಕೆಲಸ ಮಾಡಲು ಸಾಕಷ್ಟು ಅನುಕೂಲ ಲಭಿಸುತ್ತದೆ ಇಂಟಕ್‌ನಲ್ಲಿ. ಮರಿಯಪ್ಪನಂಥವರಿಗೂ ಸಹ ಒಳ್ಳೆಯ ಅವಕಾಶವುಂಟು,'' ಎಂದು ಬಲೆ ಬೀಸಿದರು ಸೆಟ್ಟರು.

ಸೆಟ್ಟರ ಮಾತಿನಿಂದಾಗಿ ಮಾರ್ತಾಂಡಪ್ಪನಿಗೆ ಸಂತೋಷವಾಗದಿರಲಿಲ್ಲ. ಕಾರ್ಯಕರ್ತರಿಗೆ ಸಾಕಷ್ಟು ಅನುಕೂಲತೆ, ತಿರುಗಾಡಲು ಮೋಟರು ಕಾರು, ಕೈಯಲ್ಲಿ ಸಾಕಷ್ಟು ಹಣ... ಇನ್ನೇನು ಬೇಕು? ಕಾಂಗ್ರೆಸ್ಸಿನಲ್ಲಾದರೋ ತನ್ನಂಥ ಸಾಮಾನ್ಯ ಕೆಲಸಗಾರನಿಗೆ ಇವುಗಳಲ್ಲಾವುದೂ ಲಭಿಸುವಂತಿರಲಿಲ್ಲ. ತಮ್ಮಣ್ಣನಂಥವರೇ ಎಲ್ಲ ಸುಖವನ್ನೂ ಅನುಭವಿಸುತ್ತಿದ್ದರು. ಕಾಂಗ್ರೆಸ್ ಕಚೇರಿಯಲ್ಲಿ ಕುಳಿತು ಹಗಲಿರುಳೂ ಕತ್ತೆಯ ಹಾಗೆ ದುಡಿಯುವವರು ತನ್ನಂಥವರು. ನಗಸಭಾಧ್ಯಕ್ಷರಾಗಿಯೊ ಮಂತ್ರಿಗಳಾಗಿಯೊ ಮೆರೆಯುವವರು ತಮ್ಮಣ್ಣನಂತವರು. ಕೂಲಿಕಾರ ಚಳವಳಿಯಲ್ಲಾದರೂ ತನಗೆ ಕೊಂಚ ಸುಖ ಲಭಿಸಿದರೆ...! ಅದರಿಂದಲಾದರೂ ತನ್ನ ಆರ್ಥಿಕ ಸ್ಥಿತಿ ಸುಧಾರಿಸಬಹುದೊ ಏನೊ... ಹೌದು ಸೆಟ್ಟರು ಹೇಳಿದ ಹಾಗೇ ಮಾಡಬೇಕು. ಈ ಊರಲ್ಲಿ ಇಂಟಕ್‌ನ ಶಾಖೆಯನ್ನು ಸ್ಥಾಪಿಸಬೇಕು. ಅದಕ್ಕೆ ತಾನೇ ಕಾರ್ಯದರ್ಶಿಯಾಗಿ ಬಿಟ್ಟರೆ ತೀರಿತು. ತನ್ನೆಲ್ಲ ತೊಂದರೆಗಳೂ ದೂರಾಗುವುವು. ಆಮೇಲೆ ಅವರಿವರಿಂದ ಬೀಡಿ ಸಿಗರೇಟು ಕೇಳಿ ತೆಗೆದುಕೊಂಡು ಸೇದುವಂಥ ಹೀನಸ್ಥಿತಿ ಉಳಿಯಲಾರದು... ಮಾರ್ತಾಂಡಪ್ಪ ಹಿಗ್ಗಿಹೋದ. ಮರಿಯಪ್ಪ ಕೂಲಿಕಾರ ಹೆಣ್ಣುಗಳನ್ನು ಕಣ್ಣೆದುರು ನಿಲ್ಲಿಸಿಕೊಂಡು ಭಾವೀ ಸುಖದ ಕನಸು ಕಾಣತೊಡಗಿದ. ಮಾರ್ತಾಂಡಪ್ಪನಿಗಿರುವ ಆರ್ಥಿಕ ತೊಂದರೆ ಯಾವುದೂ ಆತನಿಗಿಲ್ಲ. ಉಂಡುಟ್ಟು ಸುಖವಾಗಿರುವಷ್ಟು ಹಣವಿದೆ, ಭೂಮಿಗಳಿವೆ. ಕೊರತೆಯೆಂದರೆ ಅದೊಂದೇ ಒಂದು ಆತನಿಗೆ–ಹೊಸ ಹೊಸ ಹೆಣ್ಣುಗಳದು. ಕೂಲಿಕಾರ ಸಂಘ ಕೈಗೆ ಬಂದರೆ ಆ ಕೊರತೆಯೂ ದೂರವಾಗಬಹುದು. ದಿನಕ್ಕೊಂದು ಹೊಸ ಹೆಣ್ಣು ದೊರೆಯಬಹುದು. ಹೆಣ್ಣಿನ ಆಸೆಯನ್ನು ಬಿಟ್ಟರೆ ಮರಿಯಪ್ಪನಿಗೆ ಕೂಲಿಕಾರ ಚಳವಳಿಯಲ್ಲಿ ಹೆಚ್ಚಿನ ಆಸಕ್ತಿಯೇನೂ ಇಲ್ಲ. ಸಂಘ ಸರಕಾರದ ಕೈಲಿದ್ದರೂ ಸರಿಯೆ, ಮಾಲೀಕರ ಕೈಲಿದ್ದರೂ ಸರಿಯೆ. ಎಲ್ಲವೂ ಒಂದೇ ಆತನಿಗೆ.

''ಎಂದು ಸುರವಾಗೋದು ಈ ಇಂಟಕ್ ಸೆಟ್ಟರೆ?'' ಎಂದು ಆತುರತೆಯಿಂದ ಕೇಳಿದ ಮರಿಯಪ್ಪ

''ನೀವೆಲ್ಲ ಸಿದ್ಧವಾದರೆ ಇಂದೇ ಸುರುವಾದ ಹಾಗೆ. ನಾನು ತಮ್ಮಣ್ಣನವರನ್ನು ಕೇಳಿ ನೋಡಿದ್ದೇನೆ. ಅವರೂ ಒಪ್ಪಿಕೊಂಡಿದ್ದಾರೆ. ಈಗ ಕೊಂಚ ಉಪಾಯವಾಗಿ ಬುದ್ಧಿವಂತಿಕೆಯಿಂದ ಕೆಲಸ ಮಾಡಬಲ್ಲ ಜನ ಬೇಕು. ನಿಮಗೆ ಗೊತ್ತಿರುವ ಹಾಗೆ ಕೂಲಿಕಾರರು ಬಹಳ ಹುಂಬರು. ಒರಟು ಜನ. ಯಾವಾಗ ಯಾರನ್ನು ಹೊಡೆದಾರು, ಯಾರನ್ನು ಕಡಿದಾರನೆಂಬ ನಿಯಮವಿರುವುದಿಲ್ಲ. ಕೊಂಚ ನಿರ್ಲಕ್ಷ್ಯವಾದರೂ ತಲೆ ಹೋಗುವ ಸಂಭವವಿರುತ್ತದೆ. ಅಂತೆಯೇ...'' ಎಂದ ಸದಾಶಿವಪ್ಪ

''ಪೋಲೀಸರಂತೂ ನಮ್ಮ ಕೈಯಲ್ಲೇ ಇರುವರಲ್ಲ? ಈ ಕೂಲಿಕಾರರಿಗೇಕೆ ಹೆದರಬೇಕು ನಾವು?'' ಎಂದ ಮರಿಯಪ್ಪ

''ಪೋಲೀಸರಿದ್ದರೇನಾಯ್ತು? ಯಾವಾಗಲೂ ನಮ್ಮ ಜೊತೆಗೇ ಸುತ್ತಲಾಗುತ್ತದೆಯೇ ಪೋಲೀಸರು? ಅಲ್ಲದೆ ಪೋಲೀಸರಿಗೂ ನಮಗೂ ಸಂಬಂಧವಿರುವ ವಿಷಯವನ್ನು ನಾವು ಬಹಿರಂಗಪಡಿಸಬಾರದು. ಸರಕಾರ, ಮಾಲೀಕರು, ಪೋಲೀಸರು ಯಾರೊಂದಿಗೂ ಯಾವ ಸಂಬಂಧವೂ ಇಲ್ಲವೆಂದು ನಟಿಸುತ್ತಾ ಕೂಲಿಕಾರರ ವಿಶ್ವಾಸ ಗಳಿಸಲು ಪ್ರಯತ್ನಿಸಬೇಕು. ಮಾಲೀಕರು ಮತ್ತು ಸರಕಾರದವರು ನಮಗೆ ಹಣ ಕೊಡುವವೆಂಬ ವಿಷಯ ಕೂಲಿಕಾರರಿಗೆ ಖಂಡಿತ ತಿಳಿಯಕೂಡದು. ಹೀಗೇ ಅಲ್ಲವೇನ್ರೀ ಸೆಟ್ಟರೆ?'' ಎಂದು ಮಾರ್ತಾಂಡಪ್ಪ

''ಸರಿಯಾದ ಮಾತು ಹೇಳಿದಿರಿ. ನಮಗೂ ನಿಮಗೂ ಕೊಂಚವೂ ಸಂಬಂಧವಿಲ್ಲದಂತೆ ವರ್ತಿಸಬೇಕು ನೀವು. ಕೂಲಿಕಾರರ ಹಿತಕ್ಕಾಗಿಯೆ ಹೋರಾಡುವವರೆಂದು ಘೋಷಿಸುತ್ತಿರಬೇಕು. ಕೂಲಿಕಾರ ಸಭೆಗಳಲ್ಲಿ ನಮ್ಮನ್ನು ಸೌಮ್ಯವಾಗಿ ಟೀಕಿಸಿದರೂ ಚಿಂತೆಯಿಲ್ಲ. ಆದರೆ ನಮ್ಮ ವಿರುದ್ಧ ಕೂಲಿಕಾರರಲ್ಲಿ ದ್ವೇಷ ಹರಡದಂತೆ ಹುಷಾರಾಗಿರಬೇಕು. ಬಹಳ ಬುದ್ಧಿವಂತಿಕೆಯಿಂದ ಕೆಲಸ ಸಾಗಿಸುತ್ತ ಮುಷ್ಕರ ಗಲಾಟೆ ಬಡಿದಾಟ ಇತ್ಯಾದಿ ಯಾವುದಕ್ಕೂ ಅವಕಾಶ ದೊರೆಯದಂತೆ ಕೂಲಿಕಾರ ಸಂಘದ ಸೂತ್ರ ಚಾಲನೆ ಮಾಡಬೇಕು. ಮಾಲೀಕರೆಂದರೆ ಕೂಲಿಕಾರರ ತಾಯಿ ತಂದೆ ಇದ್ದ ಹಾಗೆ. ಅವರ ವಿರುದ್ಧ ದಂಗೆಯೇಳುವುದು ಪಾಪಕರ ಎಂಬ ಭಾವನೆಯನ್ನು ಬಲಗೊಳಿಸಬೇಕು. ಅಷ್ಟು ನೀವು ಸಾಧಿಸಿದರಾಯಿತು. ನಿಮಗಾವ ಕೊರತೆಯೂ ಇಲ್ಲದಂತೆ ನೋಡಿಕೊಳ್ಳುವ ಭಾರ ನಮ್ಮದು...''

''ನಿಮ್ಮಂಥ ಸಾಹುಕಾರರು ನಮ್ಮ ಬೆಂಬಲಕ್ಕಿರುವಾಗ ಇದೇನು ದೊಡ್ಡ ಕೆಲಸ ಬಿಡಿ ಸೆಟ್ಟರೆ. ಹಣವೊಂದು ಕೈಯಲ್ಲಿದ್ದರೆ ಏನು ಬೇಕಾದರೂ ಸಾಧಿಸಬಹುದು.

ಕೂಲಿಕಾರರಲ್ಲಿ ಹೆಚ್ಚು ಜನ ಕುಡಿತ ಕಲಿತವರೇ ಆಗಿರುತ್ತಾರೆ. ಅವರ ಚಟಕ್ಕೆ ಹಣ ಪೂರೈಸಿದರೆ ಸಾಕು, ನಾವು ಹೇಳಿದ ಹಾಗೆ ಕೇಳಬಹುದು ಅವರು ಅಲ್ಲವೆ?''

''ನಾನು ಹೇಳಬೇಕೆಂದಿದ್ದುದನ್ನು ನೀವೇ ಹೇಳಿದಿರಿ ಮಾರ್ತಾಂಡಪ್ಪ, ಈಗಾಗಲೇ ಕೆಲವರನ್ನು ನಾನು ಪಿತೂರಿ ಮಾಡಿದ್ದೇನೆ. ಇನ್ನು ಮುಂದಿನ ಭಾರವೆಲ್ಲ ನಿಮ್ಮ ಮೇಲೆ. ಹೆಂಡ ಕೊಡಬಹುದು, ಹಣ ಕೊಡಬಹುದು. ಏನು ಬೇಕಾದರೂ ಮಾಡಬಹುದು. ಅಂತೂ ಸಂಘದ ಒಗ್ಗಟ್ಟನ್ನೂ ಶಕ್ತಿಯನ್ನೂ ಮುರಿದು ಅದನ್ನು ಇಂಟಕ್ ವಶಕ್ಕೆ ತಂದುಕೊಂಡರೆ ಸರಿ. ಈ ಕೆಲಸಕ್ಕಾಗಿಯೇ ಕೆಲವೊಂದು ಹಣವನ್ನು ಬೇರೆ ಇರಿಸಿದೆ. ನೀವು ಯಾವಾಗ ಕೇಳಿದರೂ ಸದಾಶಿವಪ್ಪ ಹಣ ಕೊಡುತ್ತಾನೆ.''

ಮಾರ್ತಾಂಡಪ್ಪ ಹಿಗ್ಗಿ ಹೀರೇಕಾಯಿಯಂತಾದ. 'ಇಂಟಕ್'ನ ರೂಪದಲ್ಲಿ ಭಾಗ್ಯದೇವತೆಯೇ ತನ್ನ ಬಳಿ ಬಂದಂತೆ ತೋರಿತು ಆತನಿಗೆ.

ಅಷ್ಟರಲ್ಲಿ ತಿಂಡಿಯ ತಟ್ಟೆಗಳನ್ನು ತೆಗೆದುಕೊಂಡು ಸೇವಕನೊಬ್ಬ ಆಗಮಿಸಿದುದರಿಂದಾಗಿ ಸಂಭಾಷಣೆ ನಿಂತುಹೋಯಿತು. ಮರಿಯಪ್ಪ ಮಾರ್ತಾಂಡಪ್ಪ ಇಬ್ಬರೂ ಉತ್ಸಾಹದಿಂದ ತಿಂಡಿಯ ಮೇಲೆ ಕೈಯ್ಯೆಳೆಯತೊಡಗಿದರು. ಉಪಾಹಾರ ಅರ್ಧಕ್ಕೆ ಬಂದಿರುವಾಗ ತಮ್ಮಣ್ಣನವರ ಸವಾರಿ ಬಂತು.

''ಓ, ಬನ್ನಿ ಬನ್ನಿ, ತಮ್ಮಣ್ಣನವರೆ. ನಿಮ್ಮ ದಾರಿಯನ್ನೇ ಕಾಯುತ್ತಿದ್ದೆವು.''

ತಮ್ಮಣ್ಣನವರು ಸೋಫಾದ ಮೇಲೆ ಕುಳಿತುಕೊಳ್ಳುತ್ತ ಜೇಬಿನಿಂದ ಕರವಸ್ತ್ರವನ್ನು ತೆಗೆದು ಮುಖವನ್ನೊರೆಸಿಕೊಂಡರು.

''ತಗೊಳ್ಳಿ, ತಮ್ಮಣ್ಣನವರೆ.''

ಮೈಸೂರುಪಾಕಿನ ಒಂದು ತುಂಡನ್ನು ಬಾಯಿಗಿಟ್ಟುಕೊಂಡು ನುರಿಸುತ್ತ ತಮ್ಮಣ್ಣ ಹೇಳಿದರು :

''ಅಂತೂ ಒಂದು ಪೀಡೆ ತೊಲಗಿದಂತಾಯ್ತು ಸೆಟ್ಟರೆ.''

''ಪೀಡೆ?''

''ಹೌದು ಪೀಡೆಯಲ್ಲದಿನ್ನೇನು ಸೆಟ್ಟರೆ? ಆ ಚಂದ್ರಣ್ಣ ಇದಾನಲ್ಲ–ಆತನ ವಿಚಾರ ನಾ ಹೇಳುತ್ತಿರೋದು. ಆತನಿಂದ ನಮಗೆ ನಿಮಗೆ ಎಲ್ಲರಿಗೂ ಏನಾದರೂ

ಉಪಯೋಗವಾದೀತೆಂಬ ಆಸೆಯಿಂದ ಒಂದು ಕಂಪನಿ ಮಾಡಿ ಕೊಟ್ಟದ್ದಾಯಿತು ಆದರೆ ಎಂಥ ಕೃತಘ್ನ ವ್ಯಕ್ತಿ ಅದು. ಉಪ್ಪುಣಿಸಿದವರ ಕೈಯನ್ನೆ ಕಡಿಯಲು ಹೊರಟಿತು. ಇನ್ನೂ ಪತ್ರಿಕೆ ಹೊರಡಲಿಲ್ಲವೆಂದು ಒಳ್ಳೆಯದಾಯಿತು. ಹೊರಟಿದ್ದರೆ ನಮ್ಮ ಮೇಲೆ ಪ್ರಖರ ಟೀಕೆ ಬಂದು ಬಿಡುತ್ತಿತ್ತು. ಈಗಾಗಲೇ ಆತನನ್ನು ಕಿತ್ತೊಗೆದದ್ದು ಉಚಿತವೇ ಆದಂತಾಗಲಿಲ್ಲವೆ?''

''ಭೇಷಕ್. ಬಹಳ ಒಳ್ಳೆಯ ಕೆಲಸ ಮಾಡಿದಿರಿ. ಎಲ್ಲವೂ ಮುಗಿದೇ ಹೋಯಿತೇನು? ಇಷ್ಟು ಬೇಗ?'' ಎಂದ ಸದಾಶಿವಪ್ಪ

''ಆತನನ್ನು ತೆಗೆದು ಬಿಡುವುದೂ ಒಂದು ಮಹಾ ಕೆಲಸವೇ? ಅದರಲ್ಲೇನಿದೆ ಅಂಥದು? ಎಲ್ಲವೂ ಝುಟಪಟ ಅಂತ ಮುಗಿದುಹೋಯ್ತು. ಆತ ತನ್ನ ಗಂಟು ಮೂಟೆ ಕಟ್ಟಿ ತಳ ಕಿತ್ತಿದ.''

''ಸಾಮಾನು ಸಹಿತ ಹೊರಟುಹೋದನೆ! ಪಾಪ!'' ಎಂದು ಸೆಟ್ಟರು ಮರುಗಿದರು. ''ಎಷ್ಟಾದರೂ ಆತ ನಮ್ಮವ. ನಮ್ಮ ಜಾತಿಯವ. ಬುದ್ಧಿವಂತ. ನಮ್ಮ ಜೊತೆಗೆ ಕೂಡಿಕೊಂಡಿದ್ದು ಕೆಲಸ ಮಾಡಿದ್ದರೆ ಅವನಿಗೂ ಲಾಭವಾಗುತ್ತಿತ್ತು. ಆದರೆ ಏನೇನೋ ಹುಚ್ಚು ತಲೆಗೆ ಹಾಕಿಕೊಂಡು ಕೆಟ್ಟ. ಧ್ಯೇಯ, ಆದರ್ಶ, ತತ್ವ ಅಂತ ಹಾಳಾದ. ಏನು ಮಾಡೋದು, ಉಪಾಯವಿಲ್ಲ, ನಮ್ಮ ಶಾರದಾಮಣಿಗೂ ಆತನ ಬಗ್ಗೆ ತುಂಬ ಮಮತೆಯಿತ್ತು. ಈ ವಿಷಯ ತಿಳಿದರೆ ಆಕೆ ಎಷ್ಟು ನೊಂದುಕೊಳ್ಳುವಳೊ!''

''ನೊಂದುಕೊಳ್ಳುವ ಆಗತ್ಯವೇನೂ ಇಲ್ಲ'' ಎಂದು ನುಡಿಯುತ್ತ ಶಾರದಾ ಮಣಿಯೂ ಕೊಠಡಿಯಲ್ಲಿ ಅಡಿಯಿಟ್ಟಳು; ತಂದೆಯ ಹತ್ತಿರ ಬಂದು ಕುಳಿತುಕೊಳ್ಳುತ್ತ ಮತ್ತೆ ಹೇಳಿದಳು : ''ಆ ಚಂದ್ರಣ್ಣ ಸುಸಂಸ್ಕೃತನೂ ನಾಗರಿಕನೂ ಆಗಿರಬಹುದೆಂದು ನಾನು ತಿಳಿದಿದ್ದೆ. ಎಲ್ಲವೂ ತಪ್ಪು ಕಲ್ಪನೆಯಾಯಿತು. ಸಂಸ್ಕೃತಿಯೆಂದರೇನೆಂಬುದೇ ತಿಳಿಯದು ಆತನಿಗೆ. ಪೂರಾ Brute ಇದ್ದಂತಿದಾನೆ.''

''ಅದೇನು ಮಣಿ, ಇಷ್ಟೊಂದು ಕೋಪ ಆತನ ಮೇಲೆ?''

''ಕೋಪ ಮಾಡಿಕೊಳ್ಳಲು ಅವನಿಗೂ ನನಗೂ ಇರುವ ಸಂಬಂಧವಾದರೂ ಏನು ಅಪ್ಪಾ? ನನ್ನ ಕತೆಗಳನ್ನು ಓದಿ ನೋಡಿ ಅಭಿಪ್ರಾಯ ತಿಳಿಸಬೇಕೆಂದು ಅವನ ಹತ್ತಿರ ಕೊಟ್ಟಿರಲಿಲ್ಲವೆ? ಅವುಗಳನ್ನು ಕಂಡವರೆಲ್ಲ ಮೆಚ್ಚಿಕೊಂಡಿದ್ದರಲ್ಲ! ಆತ ಅವುಗಳನ್ನು ಓದಿ ನೋಡುವ ಶ್ರಮವನ್ನೂ ತೆಗೆದುಕೊಳ್ಳದೆ ಹಾಗೇ ಯದ್ವಾ ತದ್ವಾ ಟೀಕೆ ಮಾಡಿ

ವಾಪಸ್ಸು ಕೊಟ್ಟ ಸೌಜನ್ಯಕ್ಕಾಗಿಯಾದರೂ ಒಂದೆರಡು ಒಳ್ಳೆಯ ಮಾತನಾಡಬೇಕೆಂಬ ಯೋಚನೆ ಆತನಿಗೆ ಬರಲಿಲ್ಲ. ಬ್ರೂಟ್ ಅಂದರೆ ಪೂರಾ ಬ್ರೂಟ್. ನಮ್ಮ ಮೇಷ್ಟ್ರು ಸಹಾ ಎಷ್ಟು ಹೊಗಳಿದ್ದರು ಆ ಕತೆಗಳನ್ನು. ಶಿವಯೋಗಿಸ್ವಾಮಿಗಳಂತೂ ಓದಿ ಕುಣಿದಾಡಿದ್ದರು....''

''ಅದೋ, ಶಿವಯೋಗಿಗಳೇ ಬಂದು ಬಿಟ್ಟರು ನೋಡಿ. ನಿಮಗೆ ನೂರು ವರ್ಷ ಆಯಸ್ಸು ಶಿವಯೋಗಿ. ಈಗತಾನೆ ಶಾರದಾಮಣಿದೇವಿ ನಿಮ್ಮ ನೆನಸು ತೆಗೆದಿದ್ದರು,'' ಎಂದು ನಗುತ್ತ ನುಡಿದ ಮಾರ್ತಾಂಡಪ್ಪ.

''ಹಾಗಾಧರೆ ನನ್ನಂಥ ಭಾಗ್ಯಶಾಲಿಯಿನ್ನೊಬ್ಬನಿಲ್ಲ,'' ಎಂದು ಶಿವ ಯೋಗಿಯೂ ನಗುತ್ತ ನುಡಿದು ಶಾರದಾಮಣಿಯ ಕಡೆಗೆ ಕಳ್ಳನೋಟವೊಂದನ್ನೆಸೆದು ಕುರ್ಚಿಯ ಮೇಲೆ ಕುಳಿತುಕೊಂಡ.

''ಆ ಚಂದ್ರಣ್ಣ ಹೋದರೆ ಹೋದ. ಶಿವಯೋಗಿಸ್ವಾಮಿಗಳೇ ಏಕೆ ಪೇಪರ್ ಮಾಡಬಾರದು?'' ಎಂದರು ಸೆಟ್ಟರು.

''ಹೋ, ಯಾಕಾಗಬಾರದು? ಬೇಕಿದ್ದರೆ ನಾನೂ ಅವರಿಗೆ ನೆರವಾಗುತ್ತೇನೆ,'' ಎಂದು ಶಾರದಾಮಣಿ ಉತ್ಸಾಹದಿಂದ ನುಡಿದಳು.

''ನಿನಗಂತೂ ಬರವಣಿಗೆಯ ಹುಚ್ಚೇ ಹಿಡಿದಂತಿದೆ. ನೀನೇ ಒಂದು ಪತ್ರಿಕೆ ಹೊರಡಿಸಬಲ್ಲೆ ಸ್ವತಂತ್ರವಾಗಿಯೆ. ಸರಿ, ಹಾಗಾದರೆ. ನೀವಿಬ್ಬರೂ ಸೇರಿ ಕಂಪನಿಯ ವತಿಯಿಂದ ಪತ್ರಿಕೆ ಹೊರಡಿಸಬಹುದಲ್ಲ?''

''ಶಾರದಾದೇವಿ ಸಂಪಾದಕತ್ವ ವಹಿಸಿಕೊಂಡರೆ ಫಸ್ಟ್‌ಕ್ಲಾಸ್ ಪೇಪರು ಮಾಡಬಹುದು. ಯಾಕ್ರೀ, ಶಿವಯೋಗಿ?'' ಎಂದ ಮಾರ್ತಾಂಡಪ್ಪ.

''ನಾ ಹೇಳುವುದನ್ನು ನೀವೇ ಹೇಳಿಬಿಟ್ಟಿರಿ. ಪೇಪರೆಂದರೆ ಏನು ಮಹಾ! ಸ್ವಲ್ಪ ಬರೆಯಲು ಗೊತ್ತಿದ್ದರೆ ಸಾಕು. ಯಾರು ಬೇಕಾದರೂ ಮಾಡಬಹುದು. ಅದರಲ್ಲಿ ನಮ್ಮ ಶಾರದಾದೇವಿಯಂಥ ನುರಿತ ಕತೆಗಾರ್ತಿ ಮುಂದೆ ಬಂದರೆ ಇನ್ನಾವ ಸಂದೇಹ? ನಾಳೆಯೇ ಹೊರಡಿಸೋಣ.''

''ಆ ಚಂದ್ರಣ್ಣ ತನ್ನನ್ನು ಬಿಟ್ಟರೆ ಪತ್ರಿಕೆಯೇ ಹೊರಡಲಾರದು ಅಂತ ಜಂಬ ಕೊಚ್ಚಿಕೊಳ್ಳುತ್ತಿರಬೇಕು. ನಮ್ಮ ಶಾರದಾಮಣಿಯಾದರೂ ಆ ಜಂಬವನ್ನಿಳಿಸಲಿ!'' ಎಂದ ಸದಾಶಿವಪ್ಪ.

ಅಷ್ಟರಲ್ಲಿ ಗೂರ್ಖಾ ಶಿಪಾಯಿಯೊಬ್ಬ ಅಲ್ಲಿಗೆ ಧಾವಿಸಿ ಬಂದು ಸೆಟ್ಟರಿಗೆ ಸಲಾಮು ಹಾಕಿ – ''ಗಿರಣಿಯ ಮುಂದೆ ಸಭೆಗಾರಂಭವಾಯಿತು ಧಣಿಯರೆ,'' ಎಂದು ವರದಿ ಮಾಡಿದ.

''ನೀವೆಲ್ಲ ಸಿದ್ಧತೆ ಮಾಡಿದ್ದೀರಾ?''

''ಮಾಡಿದ್ದೇವೆ ಧಣಿಯರೆ.''

''ನೀನು ಕಾರು ತೆಗೆದುಕೊಂಡು ಹೋಗಿ ವ್ಯವಸ್ಥೆ ಮಾಡು ಸದಾಶಿವಪ್ಪ, ಪ್ಲ್ಯಾನ್ ಮಾಡಿದ ಹಾಗೇ ಎಲ್ಲವೂ ನಡೆಯಬೇಕು. ಕೊಂಚವೂ ಹೆಚ್ಚು ಕಡಿಮೆಯಾಗ ಬಾರದು. ಮಾರ್ತಾಂಡಪ್ಪ, ಮರಿಯಪ್ಪ, ನೀವೂ ಹೋಗಿರಿ ಬೇಕಾದರೆ ಕಾರಿನಲ್ಲಿ, ಈಗಿನಿಂದಲೇ ಎಲ್ಲವನ್ನೂ ಅರಿತುಕೊಳ್ಳಿರಿ,'' ಎಂದು ನುಡಿದು ಸೆಟ್ಟರು ಮೇಲಕ್ಕೆದ್ದರು.

## ೨೮

ಕೆಂಪು ಬಾವುಟವನ್ನು ಕೈಯಲ್ಲಿ ಹಿಡಿದುಕೊಂಡಿದ್ದ ಹಾಗೆ ರತ್ನಾ ಅತ್ತ ಇತ್ತ ದೃಷ್ಟಿ ತಿರುಗಿಸಿದಳು.

ಗಿರಣಿಯೆದುರಿಗಿನ ಬಯಲಿನಲ್ಲಿ ಕೂಲಿಕಾರರು ಒಟ್ಟುಗೂಡಿದ್ದರು. ಗಂಡಸರು, ಹೆಂಗಸರು, ಹುಡುಗರು. ಮೂರು ನಾಲ್ಕು ನೂರು ಜನ ಇದ್ದಿರಬಹುದು. ಎಲ್ಲರ ಮುಖಗಳ ಮೇಲೂ ಏನೋ ಕಳವಳ, ಏನೋ ಆಶಂಕೆ. ಈ ಮೊದಲು ಸಭೆ ಸೇರುತ್ತಿದ್ದಾಗ ಅವರಲ್ಲಿರುತ್ತಿದ್ದ ಉತ್ಸಾಹ ಅಂದು ಕಾಣಿಸುತ್ತಿರಲಿಲ್ಲ. ಎಂದಿನಂತೆ ಸಾವಿರಾರು ಜನರೂ ಅಂದು ಸೇರಿರಲಿಲ್ಲ. ಎಷ್ಟೋ ಜನರು ಮನೆ ಬಿಟ್ಟು ಹೊರಕ್ಕೇ ಬಂದಿರಲಿಲ್ಲ. ಪೊಲೀಸರು ಲಾಠಿ ಚಾರ್ಜ್ ಮಾಡುವರು, ಕೂಲಿಕಾರರನ್ನು ಹಿಡಿದು ಕೊಂಡು ಹೋಗುವರು ಎಂಬ ವದಂತಿಯೆದ್ದುದೂ ಅದಕ್ಕೊಂದು ಕಾರಣವಾಗಿದ್ದಿತು. ಸೋಶಲಿಸ್ಟರ ಪ್ರಚಾರದ ಪ್ರಭಾವಕ್ಕೊಳಗಾಗಿ ಸುಮ್ಮನಿದ್ದರು ಹಲವರು. ಸಂಗಪ್ಪ ಸೆಟ್ಟರ ಹಸ್ತಕರ ಕೈವಾಡದಿಂದಾಗಿ ತಟಸ್ಥರಾಗಿ ಉಳಿದವರು ಕೆಲವರು.

ನೆರೆದಿದ್ದ ಆ ಅಲ್ಪ ಜನಸಮೂಹದ ಮೇಲೆ ಕಾತರದ ದೃಷ್ಟಿಯನ್ನೋಡಿಸಿದಳು

ರತ್ನಾ, ಯಾವಾಗಲೂ ಧೈರ್ಯದಿಂದ ತಲೆಯೆತ್ತಿ ಕುಳಿತಿರುತ್ತಿದ್ದ ಕೂಲಿಕಾರರನೇಕರು ಅಂದು ತಲೆತಗ್ಗಿಸಿ ಕುಳಿತಿದ್ದರು! ಆ ದೃಶ್ಯವನ್ನು ನೋಡುತ್ತಲೂ ತನ್ನ ತಲೆಯೂ ಕೆಳಕ್ಕೆ ಬಾಗುವಂತಾಯಿತು ರತ್ನಾಗೆ. ಇಷ್ಟು ತಿಂಗಳುಗಳ ಕಾಲ ಈ ಕೂಲಿಕಾರರಲ್ಲಿ ಧೈರ್ಯ, ಸಾಹಸ, ಆಶಾವಾದಗಳನ್ನು ಹುಟ್ಟಿಸಲು ತಾವೆಲ್ಲ ಪಟ್ಟ ಪರಿಶ್ರಮ ವ್ಯರ್ಥವಾದಂತಾ ಯಿತೇ? ಏನಾಯಿತು ಈ ಜನಕ್ಕೆ? ಈ ಅಧೈರ್ಯಕ್ಕೆ ಈ ನಿರಾಸೆಗೆ ಏನು ಕಾರಣ? ದುರುಗಪ್ಪ, ಶಂಕರ್ ಮೊದಲಾದ ಮುಖಂಡರು ಮಾಯವಾದುದೇ ಕಾರಣವೋ ಏನು?

ಅಂದು ಸಾಯಂಕಾಲ ತಾವು ಸಭೆಗೆಂದು ಹೊರಟುನಿಂತಾಗ ಹಾಸುಗೆಯ ಮೇಲೊರಗಿದ್ದ ಹಾಗೆ ತನ್ನಣ್ಣ ಹೊರಡಿಸಿದ ಉದ್ಗಾರವೊಂದು ಮತ್ತೆ ರತ್ನಳ ಕಿವಿಗಳಲ್ಲಿ ಮೊರೆಯತೊಡಗಿತು. ವಾತ್ಸಲ್ಯದಿಂದ ತಂಗಿಯ ಕೈಯನ್ನು ತಟ್ಟುತ್ತ ಸೋಮಣ್ಣ ಹೇಳಿದ್ದ:

"ಎಂಥ ಪ್ರಸಂಗ ಬಂದರೂ ನಿರಾಶರಾಗಬಾರದು ರತ್ನಾ, ಇಂದಿಲ್ಲ ನಾಳೆ ನಮ್ಮ ಹೋರಾಟಕ್ಕೆ ಗೆಲವು ಖಂಡಿತ."

ಗೆಲವು ಖಂಡಿತ ಎಂಬ ಮಾತಿನಲ್ಲಿ ಯಾವ ಸಂದೇಹವೂ ಇರಲಿಲ್ಲ ರತ್ನಾಗೆ. ಆದರೂ ಆಶಂಕೆ ತಪ್ಪಿರಲಿಲ್ಲ, ಗೆಲವು ದೊರೆಯುವುದೇನೋ ಖಂಡಿತ, ನಿಜ. ಆದರೆ ಅದು ಎಂದೋ, ಯಾವ ಗಳಿಗೆಗೋ? ಇಂದು ಮಾತ್ರ ತಮಗೆ ಸೋಲು ನಿಶ್ಚಿತ ಎಂದೆನ್ನಿಸಿದಾಗ ಆಕೆಗೆ ಅತೀವ ವ್ಯಸನವಾಗುತ್ತಿತ್ತು.

"ಇಂದಿನ ಸಭೆಯೇ ನಮ್ಮ ಕೊನೆಯ ಸಭೆಯಾಗುವುದೋ ಏನೊ. ಸಭೆಯ ಕಾಲಕ್ಕೆ ಏನಾಗುವುದೋ!" ಎಂದು ಆಕೆ ಕಳವಳದಿಂದ ನುಡಿದಿದ್ದಳು.

ಸೋಮಣ್ಣ ಆಕೆಗೆ ಧೈರ್ಯ ಹುಟ್ಟಿಸುತ್ತು – "ಆಗುವುದೆಲ್ಲ ಆಗಲೇ ಬೇಕಲ್ಲ ರತ್ನಾ, ಅದೆಲ್ಲವೂ ಅನಿವಾರ್ಯ. ಎಲ್ಲ ಚಳವಳಿಗಳ ಹಾಗೆ ಕೂಲಿಕಾರ ಚಳವಳಿಗೂ ಏರು ಇಳುವುಗಳುಂಟು. ಚಳವಳಿ ಎಂದರೂ ಒಂದು ಯುದ್ಧವಿದ್ದ ಹಾಗೆ. ಸಣ್ಣಪುಟ್ಟ ಚಕಮಕಿ ನಡೆದಾಗ ಒಮ್ಮೊಮ್ಮೆ ಗೆಲವೂ ಸಿಕ್ಕುತ್ತದೆ. ಒಮ್ಮೊಮ್ಮೆ ಸೋಲೂ ಲಭಿಸುತ್ತದೆ. ಆ ಸಂದರ್ಭಕ್ಕೆ ಸೋತು ಹಿಮ್ಮೆಟ್ಟಬೇಕಾಗಿ ಬರುವುದಾದರೂ ಅದೇ ನಮ್ಮ ಕೊನೆಯ ಸೋಲಲ್ಲ, ಅದೇ ಯುದ್ಧದ ಕೊನೆಯಲ್ಲ. ಹಿಮ್ಮೆಟ್ಟಿದರೂ ಎದೆ ಗುಂದದೆ ಕೆಲದಿನ ವಿರಮಿಸಿಕೊಂಡು ಮತ್ತೆ ಶಕ್ತಿಯನ್ನು ಬಲಪಡಿಸಿಕೊಂಡು ಮೊದಲಿಗಿಂತ ಹೆಚ್ಚಿನ ಉತ್ಸಾಹದಿಂದ ಮುನ್ನುಗ್ಗಬೇಕಾಗುವುದು. ಅಂತೂ ಕೊನೆಗೆ ನಮಗೇ ಜಯ ಖಂಡಿತ, ಈ ವಿಷಯವನ್ನು ಮರೆಯಬೇಡ," ಎಂದು ಹೇಳಿದ್ದ.

''ಅದು ಸರಿಯಣ್ಣ, ಆದರೆ... ಇವೊತ್ತಿನ ಸಭೆ ಮುರಿಯಲು ಸೆಟ್ಟಿ ಎಂಥೆಂಥ ಕುಟಿಲ ಉಪಾಯ ಹೂಡಿದ್ದಾನೋ ಏನೋ. ಮೊನ್ನಿನ ಸಭೆಯಲ್ಲೇ ಹಾಗಾಯಿತಲ್ಲ. ಇನ್ನು ಈ ಸಭೆಯಲ್ಲಿ...''

''ನೀನೇನೂ ಚಿಂತೆ ಮಾಡಬೇಡ ರತ್ನಕ್ಕ. ನಾನಿದ್ದೇನೆ,'' ಎಂದು ಎದೆಯುಬ್ಬಿಸಿ ಮಾತನಾಡಿದ್ದ ಮಲ್ಲೇಶಿ. ಅಂದು ಸಭೆಯನ್ನು ನಡೆಸಬೇಕಾಗಿದ್ದ ಗಂಡುಸು ಎಂದರೆ ಅವನೊಬ್ಬನೇ. ಪಾಪ, ಆತನಿನ್ನೂ ಹುಡುಗ. ಹದಿನೆಂಟಕ್ಕಿಂತ ಹೆಚ್ಚಿಗಿರಲಿಲ್ಲ ಆತನ ವಯಸ್ಸು. ಹುಡುಗ ಮಲ್ಲೇಶಿಯೊಬ್ಬ, ತಾನೊಬ್ಬಳು, ನಾಗಮ್ಮ ಒಬ್ಬಳು. ಮೂವರೇ ಸೇರಿ ಸಭೆ ನಡೆಸಬೇಕಾಗಿದ್ದಿತು. ಮುಷ್ಕರದ ಗೊತ್ತುವಳಿಯನ್ನು ಪಾಸು ಮಾಡಿಕೊಳ್ಳ ಬೇಕಾಗಿದ್ದಿತು.

''ಸರ್ವರಿಗೆ ಸಮಬಾಳು ಸರ್ವರಿಗೆ ಸಮಪಾಲು

ಎಂಬ ನವಯುಗ ವಾಣಿ ಘೋಷಿಸಿದೆ ಕೇಳಿ!

ಯುಗಯುಗದ ದಾರಿದ್ರ್ಯ ಭಾರದಿಂ ಬೆನ್‌ಬಾಗಿ

ಗೋಳಿಡುವ ಬಡ ಜನರೆ ಏಳಿರೈ ಏಳಿ!''

ಪಕ್ಕದಲ್ಲಿ ನಿಂತುಕೊಂಡು ಮಲ್ಲೇಶಿ ಉಚ್ಚ ಕಂಠದಿಂದ ಹಾಡು ಹೇಳುತ್ತಲಿದ್ದ. ಮೊದಲು ಆ ಹಾಡು ಕಿವಿಗೆ ಬಿದ್ದಾಗಲೆಲ್ಲ ಉತ್ಸಾಹದಿಂದ ಅರಳುತ್ತಿದ್ದ ಕೂಲಿಕಾರರ ಮುಖಗಳ ಮೇಲೆ ಈಗ ಯಾವ ಭಾವವೂ ಮೂಡಲಿಲ್ಲ. ಅವರ ಬಾಗಿದ ಬೆನ್ನು ಬಾಗಿದ ತಲೆ ಮೇಲಕ್ಕೇಳಲಿಲ್ಲ.

ಹಾಡು ಹೇಳಿಸಿ ಮುಗಿಸಿ ಮಲ್ಲೇಶಿ ಮಾತಿಗೆ ಮೊದಲು ಮಾಡಿದ. ಬಡವ ರಾದ ಕೂಲಿಕಾರರ ಮೇಲೆ ಸಂಗಪ್ಪಸೆಟ್ಟರು ನಡೆಸಿದ ದಬ್ಬಾಳಿಕೆ, ಅದಕ್ಕೆ ಸರಕಾರದ ನೆರವು, ಕಮ್ಯೂನಿಸ್ಟ್ ಕಾರ್ಯಕರ್ತರ ಬಂಧನ, ಅವರಿಗಾದ ಹಿಂಸೆ, ಸೋಶಲಿಸ್ಟರು ಮಾಡಿದ ದ್ರೋಹ, ಬಂಡವಾಳಗಾರರ ಕುಟಿಲ ನೀತಿ ಮೊದಲಾದ ವಿಚಾರಗಳನ್ನು ವಿವರಿಸಿ ಹೇಳಿ ಕೂಲಿಕಾರರ ಸಂಘದ ಸದಸ್ಯರೆಲ್ಲರೂ ಕಮ್ಯೂನಿಸ್ಟ್ ಪಾರ್ಟಿಯ ಧ್ವಜದಡಿಯಲ್ಲಿ ಒಂದಾಗಿ ಕೊನೆಯವರೆಗೂ ಹೋರಾಡಬೇಕು, ತಮ್ಮ ಬೇಡಿಕೆಗಳು ಮನ್ನಿಸಲ್ಪಡುವ ತನಕ ಯಾರೂ ಕೆಲಸಕ್ಕೆ ಹೋಗಕೂಡದು ಎಂದು ಘೋಷಿಸಿ ಗೊತ್ತುವಳಿಯನ್ನು ಓದಿ ಹೇಳಿದ. ರತ್ನಮ್ಮ ಅದಕ್ಕೆ ಅನುಮೋದನವಿತ್ತಳು. ''ಕೈ ಚಪ್ಪಾಳೆ ಹಾಕಿ ಎಲ್ಲರೂ ನಿಮ್ಮ ಒಪ್ಪಿಗೆ ಸೂಚಿಸಬೇಕು,'' ಎಂದು ಮಲ್ಲೇಶಿ ಹೇಳುತ್ತಿದ್ದ ಹಾಗೇ

ಕೊಂಚ ದೂರ ನಿಂತುಕೊಂಡಿದ್ದ ಕೆಲವರು ಪುಂಡರು ಅಕಸ್ಮಾತ್ತಾಗಿ ಸಭಿಕರಲ್ಲಿ ನುಗ್ಗಿ ಬಂದು ಕೈಗೆ ಸಿಕ್ಕಿದವರನ್ನು ಥಳಿಸತೊಡಗಿದರು. ಹೆಂಗುಸರೂ ಹುಡುಗರೂ ಹಾಹಾಕಾರ ಮಾಡುತ್ತ ದಾರಿ ಸಿಕ್ಕಿದತ್ತ ಓಡತೊಡಗಿದರು. ನಾಲ್ಕೈದು ಜನ ಧಡಿಯರು ಬಾವುಟದ ಬಳಿ ಬಂದು ನಾಗಮ್ಮನನ್ನೂ ರತ್ನಮ್ಮನನ್ನೂ ಹಿಡಿದು ಕೊಂಡರು. ಬಾವುಟವನ್ನು ಕಸಿದುಕೊಂಡು ಕಡ್ಡಿ ಕೊರೆದು ಸುಟ್ಟುಬಿಡಲಾಯಿತು. ರತ್ನಮ್ಮನನ್ನುಳಿಸಿಕೊಳ್ಳಲು ಹೊಡೆದಾಡುತ್ತಿದ್ದ ಮಲ್ಲೇಶಿಯ ತಲೆಯ ಮೇಲೆ ಧಡಿಯ ನೊಬ್ಬ ದೊಣ್ಣೆಯಿಂದ ಏಟು ಹಾಕಿದ; ಮಲ್ಲೇಶಿ ಒಂದೇ ಒಂದು ಸಲ 'ಅವ್ವಾ' ಎಂದು ಭೀಕರವಾಗಿ ದನಿ ತೆಗೆದು ನೆಲಕ್ಕುರುಳಿದ. ಸುತ್ತಲೆಲ್ಲ ನಡೆದ ಮಹಾ ಕೋಲಾಹಲದಲ್ಲಿ ಆ ಆಕ್ರಂದನ ಯಾರಿಗೂ ಕೇಳಿಸುವಂತಿರಲಿಲ್ಲ.

ಇಬ್ಬರು ಧಡಿಯರು ರತ್ನಮ್ಮನನ್ನೂ, ಇನ್ನಿಬ್ಬರು ನಾಗಮ್ಮನನ್ನೂ ಹಿಡಿದು ಕೊಂಡು ಎಳೆಯುತ್ತ ಎಳೆಯುತ್ತಲೇ ಅವರನ್ನು ರಸ್ತೆಗೆ ಸಾಗಿಸತೊಡಗಿದರು. ಅವರ ಹಿಡಿತದಿಂದ ತಪ್ಪಿಸಿಕೊಳ್ಳಲು ರತ್ನಾ ತನ್ನ ಶಕ್ತಿಮೀರಿ ಪ್ರಯತ್ನಿಸಿದಳು. ಆದರೆ ರಾಕ್ಷಸ ರಂತಿದ್ದ ಆ ಪುಂಡರೆದುರಿಗೆ ಆಕೆಯ ಆಟ ನಡೆಯುವಂತಿರಲಿಲ್ಲ. ಒಂದೆರಡು ನಿಮಿಷ ಗಳಲ್ಲಿಯೇ ಆಕೆಯನ್ನು ಹೊತ್ತುಕೊಂಡು ರಸ್ತೆಯ ಮೇಲೆ ಕಾದು ನಿಂತಿದ್ದ ಮೋಟಾರು ಕಾರಿನಲ್ಲಿ ಹಾಕಿದರು. ಮೋಟಾರು ವೇಗವಾಗಿ ಓಡತೊಡಗಿತು. ಆದರ ಹತ್ತಿರದಲ್ಲೇ ಇದ್ದ ಇನ್ನೊಂದು ಮೋಟಾರಿನಲ್ಲಿ ನಾಗಮ್ಮನನ್ನೂ ಇನ್ನಿಬ್ಬರು ಕೂಲಿಕಾರ ಹೆಂಗಳೆ ಯರನ್ನೂ ಹಾಕಿ ಅದನ್ನೂ ಓಡಿಸಲಾಯಿತು.

ಹಲವು ನಿಮಿಷಗಳಲ್ಲಿ ಸಭೆ ಚದುರಿ ಹೋಯಿತು. ಮೂರ್ಛೆಗೊಂಡು ಬಿದ್ದಿದ್ದ ಮಲ್ಲೇಶಿಯನ್ನೂ ಯಾರೋ ಹೊತ್ತುಕೊಂಡು ಮನೆಗೆ ಸಾಗಿಸಿದರು.

ಕಂಪನಿಯ ಸಭೆ ಕೊನೆಗೊಂಡ ತರುವಾಯ ಕೊಟ್ರಪ್ಪನ ಕೊಠಡಿಯ ಕಡೆಗೆ ಹೊರಟಿದ್ದ ಚಂದ್ರಣ್ಣನಿಗೆ ಗಿರಣಿಯೆದುರು ನಡೆದ ಈ ಭೀಕರ ಘಟನೆಗಳ ವಿಚಾರ ಕೊಂಚವೂ ತಿಳಿದಿರಲಿಲ್ಲ. ಏಟು ತಿಂದು ಓಡಿಬರುತ್ತಲಿದ್ದ ಕೂಲಿಕಾರರನ್ನು ತಡೆದು ವಿಚಾರಿಸಿದಾಗ ಅವರಿಂದ ಯಾವುದೂ ಸ್ಪಷ್ಟವಾಗಿ ತಿಳಿಯಲಿಲ್ಲ. ಗಾಯಗೊಂಡಿದ್ದ ಮಲ್ಲೇಶಿಯನ್ನು ಹೊತ್ತುಕೊಂಡು ಧಾವಿಸಿ ಬರುತ್ತಲಿದ್ದ ಕೂಲಿಕಾರರನ್ನು ಚಂದ್ರಣ್ಣ ತಡೆದು ನಿಲ್ಲಿಸಿದ.

''ಇವರಿಗೇನಾಯಿತಪ್ಪ? ಯಾರು ಹೀಗೆ ಹೊಡೆದರು?''

''ಪುಂಡರು ಸ್ವಾಮೀ. ಸೆಟ್ಟರ ಪುಂಡರು.''

ಕುದುರೆಗಾಡಿಯೊಂದನ್ನು ಕೂಗಿ ಮಲ್ಲೇಶಿಯನ್ನು ಅದರಲ್ಲಿ ಹಾಕಿ ಚಂದ್ರಣ್ಣ ಆ ಕೂಲಿಕಾರನೊಂದಿಗೆ ತಾನೂ ಅದರಲ್ಲಿ ಕುಳಿತುಕೊಂಡ. ಗಾಡಿ ಕರಿಯನ ವಸತಿಯ ಕಡೆಗೆ ಹೊರಟಿತು. ಶವದ ಹಾಗೆ ಬಿದ್ದುಕೊಂಡಿದ್ದ ಆ ಹುಡುಗನನ್ನು ಶೂನ್ಯ ದೃಷ್ಟಿಯಿಂದ ನಿರುಕಿಸುತ್ತ ಚಂದ್ರಣ್ಣನೆಂದ :

"ಏನಾಯಿತು ಹೇಳಪ್ಪ, ಒಂದನ್ನೂ ಬಿಡದೆ ಹೇಳು."

ಕುಗ್ಗಿದ ಧ್ವನಿಯಲ್ಲಿ ಆ ಕೂಲಿಕಾರ ಸಭೆಯ ಪ್ರಾರಂಭದಿಂದ ಕೊನೆಯ ವರೆಗಿನ ಘಟನೆಗಳನನೆಲ್ಲ ವಿವರಿಸಿ ಹೇಳಿದ. "ರತ್ನಮ್ಮನನ್ನೂ ನಾಗಮ್ಮನನ್ನೂ ಹೊತ್ತು ಕೊಂಡು ಹೋದರು," ಎಂದು ಆತ ಹೇಳುತ್ತಿದ್ದ ಹಾಗೆ ಚಂದ್ರಣ್ಣನ ಎದೆಗೆ ಬಲವಾದ ಆಘಾತವಾದಂತಾಯಿತು.

"ಹೊತ್ತುಕೊಂಡು ಹೋದರೇ? ಯಾರು?"

"ಇನ್ನ್ಯಾರು ಬರಬೇಕು ಸ್ವಾಮೀ. ಅವರೇ ಆ ಧಡಿಯರೇ."

"ಯಾವ ಕಡೆಗೊಯ್ದರು?"

"ಮೋಟಾರಿನಲ್ಲಿ ಹಾಕಿಕೊಂಡು ಹೋದರು. ಎತ್ತ ಹೋದರೂ ಗೊತ್ತಾಗ ಲಿಲ್ಲ. ನನ್ನ ಜೀವ ಉಳಿಸಿಕೊಂಡು ಈ ಹುಡುಗನನ್ನು ಹೊತ್ತುಕೊಂಡು ಬರಬೇಕಾದರೆ ಸಾಕು ಬೇಕಾಯಿತು."

"ಈತ ಏನಾಗಬೇಕು ನಿನಗೆ?"

"ಏನೂ ಇಲ್ಲ, ಸುಮ್ಮನೆ ಗುರುತು ಅಷ್ಟೆ. ನಮ್ಮ ಮನೆಯಲ್ಲಿ ಈತ ಊಟ ಮಾಡಿಕೊಂಡಿದ್ದಾನೆ."

"ಹುಡುಗನಿಗೆ ಭಾರಿ ಪೆಟ್ಟು ಬಿದ್ದಂತಿದೆ. ಈತನ ತಂದೆ ತಾಯಿ ಯಾರೂ ಇಲ್ಲವೆ?"

"ಎಲ್ಲೋ ಹಳ್ಳಿಯಲ್ಲಿ ಇರುವವರಂತೆ. ಈತನೊಬ್ಬನೇ ಇಲ್ಲಿ ಗಿರಣಿಯಲ್ಲಿ ದುಡಿಯುತ್ತಿದ್ದಾನೆ. ನಮ್ಮಲ್ಲೇ ಉಣ್ಣುತ್ತಾನೆ. ಖಾನಾವಳಿಯವರಿಗೆ ಕೊಡುವುದನ್ನು ನಮಗೇ ಕೊಡುತ್ತಾನೆ."

"ಹಾಗಾದರೆ ಈತನ ಆಪ್ತರಾರೂ ಇಲ್ಲವೆಂದಾಯಿತಲ್ಲ ಈ ಊರಲ್ಲಿ?"

''ನಾವೇ ಇದ್ದೇವಲ್ಲ ಸ್ವಾಮೀ.''

''ಹಾಗಲ್ಲ, ಹುಡುಗನಿಗೆ ಭಾರೀ ಪೆಟ್ಟು ಬಿದ್ದಿದೆ. ಏನೋ ಹೇಗೋ ಬಲ್ಲವರಾರು? ನೀನೀಗ ಹೋಗಿ ಡಾಕ್ಟರನ್ನು ಕರೆದು ತಂದು ಈತನಿಗೆ ಚಿಕಿತ್ಸೆ ಮಾಡಿಸು. ನಾನು ರತ್ನಳನ್ನು ಹುಡುಕಿಕೊಂಡು ಬರುತ್ತೇನೆ,'' ಎಂದು ನುಡಿದು ಚಂದ್ರಣ್ಣ ಗಾಡಿಯಿಂದಿಳಿಯತೊಡಗಿದ.

''ರತ್ನಳನ್ನು ಹುಡುಕುತ್ತೀರಾ? ಎಲ್ಲಿ ಅಂತ ಹುಡುಕುತ್ತೀರಿ ಸ್ವಾಮೀ?'' ಎಂದು ಬೆರಗುಗೊಂಡ ಧ್ವನಿಯಲ್ಲಿ ಪ್ರಶ್ನಿಸಿದ ಆ ಕೂಲಿಕಾರ.

''ಎಲ್ಲಾದರೂ ಹುಡುಕುತ್ತೇನೆ. ನೀನು ನಡೆ,'' ಎಂದು ಉತ್ತರವಿತ್ತು ಚಂದ್ರಣ್ಣ ಗಾಡಿಯಿಂದಿಳಿದು ಬಂದ. ಮೊದಲು ಕೊಟ್ರಪ್ಪನ ಕೊಠಡಿಗೆ ಹೋಗಿ ತನ್ನ ಹಾಸಿಗೆ ಸುರುಳಿಯನ್ನು ಅಲ್ಲ ಬಿಸುಟು ರತ್ನಳನ್ನು ಹುಡುಕುತ್ತ ಗಿರಣಿಯ ಕಡೆಗೆ ಧಾವಿಸಿದ. ಆತ ಅಲ್ಲಿಗೆ ಬರುವುದರೊಳಗಾಗಿ ಬಯಲು ಬರಿಯದಾಗಿದ್ದಿತು. ಆದರೆ ಹತ್ತಿರ ಹಾಯ್ದು ನಗರದ ಕಡೆಗೆ ಹೆಜ್ಜೆ ಹಾಕುತ್ತ ಬರುತ್ತಿದ್ದ ನಾರಾಯಣ, ಹೇಮಾದ್ರಿ ಹಾಗೂ ಅವರ ಐದಾರು ಜನ ಜೊತೆಗಾರರು ಚಂದ್ರಣ್ಣ ದೃಷ್ಟಿಗೆ ಬೀಳುತ್ತಲೂ ತಮ್ಮ ತಮ್ಮಲ್ಲೇ ಕಣ್ಣುಸನ್ನೆ ಮಾಡಿ ಮೃದುವಾಗಿ ನಕ್ಕರು.

''ಏನ್ರೀ ಸಂಪಾದಕ ಮಹಾಶಯರೇ, ಎಲ್ಲಿಗೆ ಹೊರಟಿತ್ತು ಸವಾರಿ?'' ಎಂದು ಪ್ರಶ್ನಿಸಿದ ನಾರಾಯಣ.

''ಸಭೆ ಮುಗಿಯಿತೇ?''

''ಆಗಲೆ ಮುಗಿದಾಯಿತಲ್ಲ, ಕಮ್ಯೂನಿಸ್ಟರ ಸಮಾಧಿಯೂ ಆಯಿತು. ಇನ್ನು ಅವರಿಲ್ಲಿ ತಲೆಯೆತ್ತಿದರೆ ಹೇಳಿ.''

''ನಮ್ಮ ರತ್ನಮ್ಮನನ್ನು ಕಂಡಿರಾ ಹೇಮಾದ್ರಿ?'' ಎಂದು ಕಳವಳದ ಧ್ವನಿಯಲ್ಲಿ ಕೇಳಿದ ಚಂದ್ರಣ್ಣ.

ಆ ಪ್ರಶ್ನೆಗೆ ಹೇಮಾದ್ರಿ ಉತ್ತರವೀಯುವುದರೊಳಗಾಗಿ ಆತನ ಜೊತೆಗಾರ ನೊಬ್ಬ ಕೊಂಕು ನಗೆಯೊಂದಿಗೆ ಕೇಳಿದ : ''ರತ್ನಮ್ಮ? ನಿಮ್ಮ ರತ್ನಮ್ಮ? ಹ ಹ ಹ ಹ್ಹ!''

ಈ ಕೊಂಕು ನುಡಿಯೂ, ಅಣಕದ ಮಾತೂ ಹೇಮಾದ್ರಿಗೆ ಸರಿಬರಲಿಲ್ಲ. ಆತ ಹುಬ್ಬುಗಂಟಿಕ್ಕಿ ಜೊತೆಗಾರರನ್ನು ಸುಮ್ಮನಾಗಿಸುವಷ್ಟರಲ್ಲಿಯೆ ಜಟ್ಟಿಯಂತಿದ್ದ

ಜೊತೆಗಾರನೊಬ್ಬ ಗಹಹಗಿಸಿ ನಗುತ್ತ ನುಡಿದ : ''ನಿಮ್ಮ ರತ್ನ? ರಾಜನನ್ನು ಹುಡುಕಿಕೊಂಡು ಹೋಯಿತು ಅದು!''

ಚಂದ್ರಣ್ಣನ ಎದೆ ಧಡಧಡಿಸತೊಡಗಿತು. ''ಅಂದರೆ! ಆದದ್ದಾದರೂ ಏನು? ಆಕೆಗೂ ಪೆಟ್ಟು ಬಿತ್ತೇ?''

''ಅಂಥ ಚೆಲುವೆಗೆ ಯಾರು ತಾನೆ ಪೆಟ್ಟು ಕೊಟ್ಟಾರು? ಆಕೆಗೆ ಕೊಡೋದು ಬೇರೆ ಇದೆ. ಅದಕ್ಕಾಗಿಯೇ ಮೋಟಾರಿನಲ್ಲಿ ಕೂಡಿಸಿಕೊಂಡು ಕರೆದೊಯ್ದಿರ ಬಹುದು.''

''ಯಾರು?''

''ಆಗಲೆ ಹೇಳಲಿಲ್ಲವೆ. ರತ್ನಳ ರಾಜ ಅಂತ!'' ಎಂದು ನುಡಿದು ಆ ಜಟ್ಟಿ ಬಿದ್ದು ಬಿದ್ದು ನಗತೊಡಗಿದ.

ಅವರಿಂದ ನಿಜ ಸಂಗತಿ ತಿಳಿಯದೆಂಬುದು ಕಂಡುಬರುತ್ತಲೂ ಚಂದ್ರಣ್ಣ ಅಲ್ಲಿಂದ ಕಾಲ್ತೆಗೆದು ಗಿರಣಿಯ ರಸ್ತೆಗುಂಟ ಐದಾರು ಮೈಲುಗಳವರೆಗೂ ಓಡುತ್ತ ಹೋದ. ಎಲ್ಲಿಯೂ ಯಾರೊಬ್ಬರ ಸುಳಿವೂ ಇರಲಿಲ್ಲ.

ದಣಿವು, ಹಸಿವು ಎಲ್ಲವನ್ನೂ ಮರೆತು ಆತ ಹುಚ್ಚು ಹಿಡಿದವನಂತೆ ಊರೆಲ್ಲವನ್ನೂ ಸುತ್ತಿದ. ಯಾರಿಂದಲೂ ರತ್ನಳ ವಿಷಯ ಗೊತ್ತಾಗಲಿಲ್ಲ. ಸಾವಿತ್ರಿಯ ಮನೆಗೆ ಹೋಗಿ ಆಕೆಯನ್ನೂ ವಿಚಾರಿಸಿದ. ಸಾವಿತ್ರಿಗೂ ಗಾಬರಿಯಾಗದಿರಲಿಲ್ಲ. ರತ್ನದಂಥ ಆ ಹುಡುಗಿಯನ್ನು ಹೊತ್ತುಕೊಂಡು ಹೋದವರ ಮನೆ ಹಾಳಾಗಲಿ, ವಂಶ ನಾಶವಾಗಲಿ - ಎಂದಾಕೆ ಚಿಟಿಕೆ ಮುರಿದು ಶಾಪ ಹಾಕತೊಡಗಿದಳು. ಆಕೆಯನ್ನು ಬೀಳ್ಕೊಂಡು ಸೋಮಣ್ಣನ ಮನೆಗೆ ಧಾವಿಸಿದ ಚಂದ್ರಣ್ಣ. ಆತ ಬರುವುದರೊಳಗಾಗಿ ಅವರಿಗೂ ಸಮಾಚಾರ ತಿಳಿದಿಟದ್ದಿತು. ಮುದುಕಿ ಗಾಬರಿಗೊಂಡು ಅಳುತ್ತ ಕುಳಿತಿದ್ದಳು. ಸೋಮಣ್ಣ ಹಾಸುಗೆಯ ಮೇಲೆ ಚಡಪಡಿಸುತ್ತ ಬಿದ್ದುಕೊಂಡಿದ್ದ. ಚಂದ್ರಣ್ಣನನ್ನು ನೋಡುತ್ತಲೂ ಮುದುಕಿಯ ಅಳು ಉಕ್ಕೇರಿ ಬಂದಿತು.

''ಅಯ್ಯೋ ಚಂದ್ರಣ್ಣ ಹೀಗಾಗಿ ಹೋಯಿತಲ್ಲ, ನನ್ನ ಮುತ್ತಿನಂಥ ಮಗಳನ್ನು ಎಲ್ಲಿಗೊಯ್ದರೋ ಏನೋ ಆ ನೀಚರು. ಅಯ್ಯೋ...'' ಎಂದು ಆಕೆ ಧ್ವನಿ ತೆಗೆದು ಗೋಳಾಡತೊಡಗಿದಳು.

ಅವರನ್ನು ಸಂತವಿಸಿ ಚಂದ್ರಣ್ಣ ಮತ್ತೆ ಹೊರಕ್ಕೆ ಹೊರಟ. ಒಂದು ಗುಡಿಸಲಿ

ನೆದುರಿಗೆ ಎಂಟು ಹತ್ತು ಜನ ಕೂಲಿಕಾರರು ಗುಂಪುಗೂಡಿದ್ದರು. ಚಂದ್ರಣ್ಣ ಕೊಂಚ ತಡೆದು ನಿಂತ.

''ಯಾಕಪ್ಪ ನೀವೆಲ್ಲ ಇಲ್ಲಿ ಸೇರಿದ್ದೀರಿ?''

''ನಮ್ಮ ಮಲ್ಲೇಶಿಯನ್ನು ಹೊಡೆದುಬಿಟ್ಟಿದ್ದಾರಲ್ಲರಿ ಆ ಹೊಲೆಸೂಳೇ ಮಕ್ಕಳು, ಡಾಕ್ಟರು ಬಂದಿದ್ದಾರೆ.''

''ಡಾಕ್ಟರು ಬಂದಿದ್ದಾರೆಯೆ?'' ಎನ್ನುತ್ತ ಚಂದ್ರಣ್ಣ ಗುಡಿಸಲಲ್ಲಿ ಅಡಿಯಿಟ್ಟ

ಒಳಗಡೆ ಗೋಣಿಚೀಲವೊಂದರ ಮೇಲೆ ಮಲ್ಲೇಶಿಯನ್ನು ಮಲಗಿಸ ಲಾಗಿದ್ದಿತು. ಅಷ್ಟು ಹೊತ್ತಿಗಾಗಲೇ ಆತ ಎಚ್ಚರಗೊಂಡು ನರಳತೊಡಗಿದ್ದ. ಡಾಕ್ಟರು ಆತನ ತಲೆಗೆ ಪಟ್ಟಿ ಬಿಗಿಯುತ್ತಿದ್ದರು.

''ಹೇಗಿದೆ ಡಾಕ್ಟರ್ ಆತನಿಗೆ?''

''ಅಂಥ ಸೀರಿಯಸ್ ಏನೂ ಇಲ್ಲ. ರಕ್ತ ಮಾತ್ರ ಬಹಳ ಹೋಗಿದೆ. ಹುಡುಗನಿಗೆ ನಿಶ್ಶಕ್ತಿಯಾಗಿದೆ.''

''ಪ್ರಾಣಾಪಾಯವಿಲ್ಲವಷ್ಟೆ?''

''ಇಲ್ಲ. ಸ್ವಲ್ಪದರಲ್ಲೇ ಉಳಿದುಕೊಂಡಿದ್ದಾನೆ. ಸ್ವಲ್ಪ ಎಡಗಡೆಗೆ ಏಟು ಬಿದ್ದಿದ್ದಲ್ಲಿ ಮೆದುಳಿಗೆ ಪೆಟ್ಟು ತಾಕುತ್ತಿತ್ತು. ಹುಡುಗನ ಪುಣ್ಯ, ಹಾಗೇನೂ ಆಗಲಿಲ್ಲ.''

''ಇವನಿಗೆ ನೆಟ್ಟಗಾಗಲು ಎಷ್ಟು ದಿನವಾದೀತು ಡಾಕ್ಟರರೆ?''

''ಒಂದೆರಡು ದಿನಗಳಲ್ಲಿ ಗುಣವಾದೀತು. ಇವನ ತಂದೆ ತಾಯಿ ಎಲ್ಲ ಎಲ್ಲಿದ್ದಾರೆ?''

''ಎಲ್ಲೋ ಹಳ್ಳಿಯಲ್ಲಿರುವರಂತೆ.''

''ಅವರನ್ನು ಕೂಡಲೆ ಕರೆಯಿಸಿ. ಇಲ್ಲವಾದರೆ ಈತನನ್ನೇ ಅಲ್ಲಿಗೆ ಕಳಿಸಿದರೂ ಚಿಂತೆಯಿಲ್ಲ.''

ತಂದೆ ತಾಯಿ ಎಂಬ ಶಬ್ದ ಕಿವಿಗೆ ಬೀಳುತ್ತಲೂ ಮಲ್ಲೇಶಿ – ''ಅವ್ವಾ, ಅಪ್ಪಾ..'' ಎಂದು ಹಲುಬತೊಡಗಿದ.

"ಸುಮ್ಮನಿರು ತಮ್ಮಾ, ನಿನ್ನ ತಂದೆ ತಾಯಿಗಳನ್ನು ಕರೆಸೋಣ," ಎಂದು ಚಂದ್ರಣ್ಣ ಆತನನ್ನು ಸಂತವಿಸತೊಡಗಿದ.

ಗುಡಿಸಲನ್ನು ಬಿಟ್ಟು ಆತ ಹೊರಕ್ಕೆ ಬಂದಾಗ ರಾತ್ರಿ ಹನ್ನೊಂದು ಗಂಟೆಯಾಗಿದ್ದಿತು. ರತ್ನಳನ್ನು ಕಾಣುವವರೆಗೂ ಆತನಿಗೆ ಸಮಾಧಾನವಾಗು ವಂತಿರಲಿಲ್ಲ. ಮತ್ತೆ ಬೀದಿ ಬೀದಿ ಸುತ್ತತೊಡಗಿದ.

## ೨೯

ಗಿರಣಿಯಿಂದ ಒಂದೆರಡು ಫರ್ಲಾಂಗ್ ದೂರದಲ್ಲಿದ್ದ ಬಂಗಲೆಯೊಂದನ್ನು ಆ ದಿನದ ಮಟ್ಟಿಗೆ ತೆರವು ಮಾಡಿಸಿದ್ದ ಸದಾಶಿವಪ್ಪ. ಬಂಗಲೆ ನಗರದಿಂದ ದೂರವಾಗಿ ಜನವಸತಿಯಿಲ್ಲದ ಕಡೆ ಒಂಟಿಯಾಗಿದ್ದಿತು. ಗಿರಣಿಗೆ ಸಂಬಂಧಪಟ್ಟ ಕರಣಿಕರು ಕೆಲವರು ಅಲ್ಲಿ ವಾಸಿಸುತ್ತಿದ್ದರು. ಎರಡಂತಸ್ತುಗಳ ದೊಡ್ಡ ಬಂಗಲೆ. ಮೇಲಿನ ಅಂತಸ್ತಿನಲ್ಲಿ ವಿಶಾಲವಾದ ಕೋಣೆಯೊಂದು. ಅದರಲ್ಲಿ ಸುಂದರವಾದ ಕರಿಮರದ ಮಂಚ. ಅಂದವಾದ ಹಾಸಿಗೆ. ಅದರ ಬಳಿ ಪುಟ್ಟದಾದ ಒಂದು ದುಂಡು ಮೇಜು. ಅದರ ಮೇಲೆ ಒಂದೆರಡು ಗಾಜಿನ ಲೋಟಗಳು. ಹಾಲಿನ ತಂಬಿಗೆ. ತಟ್ಟೆ ಯೊಂದರಲ್ಲಿ ಬಗೆಬಗೆಯ ಎರಡು ಮೂರು ವಿಧದ ತಿಂಡಿಗಳೂ ಇರಿಸಲ್ಪಟ್ಟಿದ್ದುವು. ಬಗೆಯನ್ನು ಕದಡುವಂಥ ಉಗ್ರ ಪರಿಮಳವೊಂದು ಕೊಠಡಿಯಲ್ಲೆಲ್ಲ ಹರಡಿ ಕೊಂಡಿದ್ದಿತು.

ಆ ದಿನ ಬೆಳಗಿನಲ್ಲೇ ಅಲ್ಲಿ ವಾಸಿಸುತ್ತಿದ್ದ ಕರಣಿಕರಿಗೆ ರಾತ್ರಿ ಅಲ್ಲಿಗೆ ಬರದಂತೆ ಮುನ್ನೆಚ್ಚರಿಕೆ ಕೊಡಲ್ಪಟ್ಟಿದ್ದಿತು. ಅಂಥ ಎಚ್ಚರಿಕೆ ದೊರೆಯುವುದು ಅದೇ ಮೊದಲ ಸಲವೇನೂ ಆಗಿರಲಿಲ್ಲ ಅವರಿಗೆ. ಈ ಮೊದಲು ಎಷ್ಟೋ ಬಾರಿ ಅವರು ಈ ರೀತಿ ಬಂಗಲೆಯನ್ನು ಬಿಟ್ಟು ಹೋಗಬೇಕಾಗಿ ಬಂದಿದ್ದಿತು. ಸಂಗಪ್ಪಸೆಟ್ಟರೊ, ಸದಾಶಿವಪ್ಪ ಸೆಟ್ಟರೊ ಆ ಒಂದು ರಾತ್ರಿಯ ಮಟ್ಟಿಗೆ ಅಲ್ಲಿರುತ್ತಿದ್ದ ವಿಷಯವೂ ಅವರಿಗೆ ಅಪರಿಚಿತ ವಾದುದಾಗಿರಲಿಲ್ಲ. ತಮ್ಮ ಪ್ರಶಸ್ತವಾದ ಮನೆಯನ್ನು ಬಿಟ್ಟು ಅವರು ಈ ಬಂಗಲೆ ಯಲ್ಲಿ ಏಕೆ ಕಾಲ ಕಳೆಯುತ್ತಿದ್ದರೆಂಬುದನ್ನೂ ಅವರು ಅರಿಯದವರಾಗಿರಲಿಲ್ಲ. ಎಲ್ಲವೂ ಅವರಿಗೆ ಗೊತ್ತಿದ್ದಿತು. ಆದರೆ ಯಾರೂ ಆ ಬಗೆಗೆ ಬಾಯಿ ಬಿಡುವಂತಿರಲಿಲ್ಲ.

ಬಂಗಲೆಯಂತೂ ಸೆಟ್ಟರದೇ. ತಾವೆಲ್ಲ ಬದುಕುವುದೂ ಅವರ ಸಂಬಳದಿಂದಲೇ. ಸಾಹುಕಾರರ ರಹಸ್ಯಗಳ ಗೊಡವೆ ಬಡವರಾದ ತಮಗೇಕೆ ಬೇಕು – ಎಂದುಕೊಂಡು ಆ ಒಂದು ರಾತ್ರಿಯ ಮಟ್ಟಿಗೆ ಬೇರೆ ಕಡೆ ಎಲ್ಲಿಯಾದರೂ ಸ್ಥಳ ದೊರಕಿಸಿ ನಿದ್ರೆ ಹೋಗುತ್ತಿದ್ದರು. ಆ ಬಂಗಲೆಯಲ್ಲಿ ನೆಲಸಿದ್ದವರೆಲ್ಲ ಬ್ರಹ್ಮಚಾರಿಗಳು, ಅಥವಾ ವಿವಾಹಿತರಾಗಿದ್ದರೂ ಒಂಟಿಯಾಗಿದ್ದ ಯುವಕರು. ಒಂದು ರಾತ್ರಿಗಾಗಿ ಸಂಸಾರ ಗಳನ್ನು ಕಟ್ಟಿಕೊಂಡು ಸ್ಥಳ ಹುಡುಕುತ್ತ ಹೊರಡಬೇಕಾದ ಸಂದರ್ಭವಿರಲಿಲ್ಲ. ಅಂತೆಯೆ ಆ ಬಗೆಗೆ ಹೆಚ್ಚು ಯೋಚನೆಗೊಡದೆ ಅವರೆಲ್ಲ ಸ್ನೇಹಿತರ ಮನೆಗಳಲ್ಲೋ ಆಪ್ತೇಷ್ಟರ ಮನೆಗಳಲ್ಲೋ ನಿದ್ರೆ ಹೋಗುತ್ತಿದ್ದರು.

ಬಂಗಲೆಯನ್ನು ಕಟ್ಟಿಸಿಯಾದ ಬಳಿಕ ಸೆಟ್ಟರು ಅದಕ್ಕೆ 'ನೀಲಾಭವನ' ಎಂದು ನಾಮಕರಣ ಮಾಡಿದ್ದರು. ಆದರೆ ಅಲ್ಲಿ ಆಗಾಗ ನಡೆಯುತ್ತಿದ್ದ ಘಟನೆಗಳ ವಿಚಾರವನ್ನರಿತವರು ಅದನ್ನು 'ವಿಲಾಸಭವನ' ಎಂದು ಕರೆಯತೊಡಗಿದ್ದರು. ಸೆಟ್ಟರಿಗೆ ವಯಸ್ಸಾಗಿ ಉತ್ಸಾಹ ಕುಗ್ಗುವವರೆಗೂ ಅಲ್ಲಿ ಅವರ ರಹಸ್ಯ ವಿಲಾಸ ಎಡೆಬಿಡದೆ ನಡೆಯುತ್ತ ಬಂದಿದ್ದಿತು. ಅವರ ಕಾಲ ಮುಗಿಯುತ್ತ ಬಂದಾಗ ಸದಾಶಿವಪ್ಪನ ಲೀಲೆಗಾರಂಭವಾಗಿತ್ತು. ಆ ಭವನದ ಒಂದೊಂದು ಅಡಿ ಸ್ಥಳವೂ ಆ ತಂದೆ ಮಕ್ಕಳ ಸಾವಿರಾರು ಬಲಾತ್ಕಾರದ ಕೃತಿಗಳಿಗೆ ಸಾಕ್ಷಿಯಾಗಿದ್ದಿತು.

ಬಂಗಲೆಯ ಅಂಗಳದಲ್ಲಿ ಸಿಗರೇಟು ಎಳೆಯುತ್ತ ನಿಂತುಕೊಂಡಿದ್ದ ಸದಾಶಿವಪ್ಪ – ಕಾರಿನ ಸಪ್ಪಳ ಯಾವಾಗ ಕೇಳಬರುವುದೋ ಎಂದು ಕಾಯುತ್ತ. ಸಭೆಯಲ್ಲಿ ಏನಾಯಿತೋ, ಗದ್ದಲವಾಯಿತೋ ಇಲ್ಲವೊ, ಹಿಡಿದರೂ ಆಕೆ ಎಲ್ಲಾದರೂ ತಪ್ಪಿಸಿಕೊಂಡು ಓಡಿದಳೋ – ಏನಾಯಿತೋ ಯಾರಿಗೆ ಗೊತ್ತು...! ಏಕೆ ಇಷ್ಟು ಹೊತ್ತಾಯಿತು? ಸಭೆಯ ಸ್ಥಳದಿಂದ ಇಲ್ಲಿಗೆ ಅರ್ಧ ಮೈಲು ಆದೀತು ಅಷ್ಟೆ ಭರದಿಂದ ಕಾರು ಓಡಿಸಿದರೆ ಐದು ನಿಮಿಷಗಳಲ್ಲಿ ಇಲ್ಲಿಗೆ ಬಂದು ಬಿಡಬಹುದು. ಆದರೂ ಏಕೆ ತಡವಾಯಿತು? – ಸದಾಶಿವಪ್ಪ ಕೈ ಗಡಿಯಾರ ನೋಡಿಕೊಂಡ. "ಶೂ! ಶೂ! ತುಂಬ ಹೊತ್ತಾಯಿತು," ಎಂದು ಗೊಣಗಿಕೊಂಡು ಕೈಲಿದ್ದ ಸಿಗರೇಟನ್ನು ನೆಲಕ್ಕೆಸೆದು ಬೂಟುಗಾಲಿನಿಂದ ಅದನ್ನು ತುಳಿದು ಬೆಂಕಿಯನ್ನಾರಿಸಿದ. ಕೊಂಚ ಹೊತ್ತು ಅಂಗಳದಲ್ಲಿ ಅಡಿಯಿಡುತ್ತಲಿದ್ದು ಮತ್ತೊಂದು ಸಿಗರೇಟು ಹೊತ್ತಿಸಿದ. ಅಷ್ಟರೊಳಗೆ ಬಂಗಲೆಯೆದುರಿಗೆ ಮೋಟಾರು ಬಂದು ನಿಂತುಕೊಂಡಿತು. ಒಳಗಿದ್ದ ಧಡಿಯರಿಬ್ಬರು ರತ್ನಮ್ಮನನ್ನು ಹಿಡಿದುಕೊಂಡು ಕೆಳಕ್ಕಿಳಿದು ಬಂದರು. ಸದಾಶಿವಪ್ಪ ಅವರೊಂದಿಗೆ ಮಹಡಿಗೆ ತೆರಳಿದ.

ರತ್ನಳನ್ನು ಕೊಠಡಿಯಲ್ಲಿ ಬಿಟ್ಟು ಧಡಿಯರಿಬ್ಬರೂ ಬಂದ ಹಾಗೆ ಹಿಂದಿರುಗಿದರು. ಸದಾಶಿವಪ್ಪ ಬಾಗಿಲನ್ನು ಮುಚ್ಚಿ ಚಿಲಕ ಹಾಕಿದ. ಭೀತಿಯಿಂದಲೂ ಆಶಂಕೆಯಿಂದಲೂ ಏದುತ್ತ ನಿಂತಿದ್ದ ರತ್ನಳನ್ನು ಮುಗುಳ್ನಗೆಯೊಂದಿಗೆ ದಿಟ್ಟಿಸುತ್ತ ಮೆಲು ದನಿಯಲ್ಲಿ – ''ಬಾ ರತ್ನಾ, ಹೆದರಬೇಡ, ಕೂತುಕೋ,'' ಎಂದು ನುಡಿದ.

ತಾನು ಎಂಥ ಪ್ರಸಂಗದಲ್ಲಿ ಸಿಕ್ಕುಬಿದ್ದಿರುವೆನೆಂಬುದು ರತ್ನಾಗೆ ಒಡನೆಯೆ ತಿಳಿಯದಿರಲಿಲ್ಲ. ಸದಾಶಿವಪ್ಪ ತನ್ನನ್ನು ಈ ದೂರದ ಬಂಗಲೆಗೆ ಯಾವ ಉದ್ದೇಶಕ್ಕಾಗಿ ಹಿಡಿದು ತರಿಸಿರುವನೆಂಬುದು ಸ್ಪಷ್ಟವಾಗಿಯೇ ಇತ್ತು. ಊರಿನಿಂದ ಬಲುದೂರದಲ್ಲಿ ನಿರ್ಜನ ಪ್ರದೇಶದಲ್ಲಿ ಒಂಟಿಯಾಗಿದ್ದ ಬಂಗಲೆ... ಸದಾಶಿವಪ್ಪನನ್ನೊಬ್ಬನನ್ನುಳಿದು ಬೇರಾರೂ ಅಲ್ಲಿ ಇದ್ದ ಹಾಗಿರಲಿಲ್ಲ. ಕೆಳಗಿನ ಭಾಗದಲ್ಲೂ ಜನರ ಸುಳಿವಿದ್ದ ಹಾಗೆ ಕಾಣಿಸಿರಲಿಲ್ಲ. ಬೇಕಂತಲೇ ಎಲ್ಲರನ್ನೂ ಮೊದಲೇ ಕಳುಹಿಸಿಬಿಡಲಾಗಿದೆಯೊ ಏನೊ. ಈಗ ನಾನು ಈತನ ಕೈಯಿಂದ ಪಾರಾಗುವ ಬಗೆ ಹೇಗೆ? ತಾನು ಕೂಗಿ ಶಂಖವಾದ್ಯಕ್ಕಾರಂಭಿಸಿದರೂ ಯಾವ ಪ್ರಯೋಜನವೂ ಆಗಲಾರದು. ಬರಿಯ ಅರಣ್ಯರೋದನವಾದಂತಾದೀತು ತನ್ನ ಕೂಗು...

ರತ್ನಾ ಅತ್ತಿತ್ತ ಹೊರಳಿ ನೋಡಿದಳು. ಚಿಲಕ ಹಾಕಲ್ಪಟ್ಟಿದ್ದ ಆ ಒಂದು ಬಾಗಿಲನ್ನುಳಿದು ಕೊಠಡಿಗೆ ಬೇರೆ ಬಾಗಿಲು ಇದ್ದಂತಿರಲಿಲ್ಲ. ಕಿಟಕಿಗಳಿಗೆ ಗಟ್ಟಿ ಮುಟ್ಟಾದ ಕಬ್ಬಿಣದ ಗಜಗಳಿದ್ದುವು. ತಪ್ಪಿಸಿಕೊಳ್ಳಲು ಯಾವ ದಾರಿಯೂ ಇರಲಿಲ್ಲ.

ಸದಾಶಿವಪ್ಪ ಆಕೆಯೆಡೆಗೆ ಬರುತ್ತಾ ಮತ್ತೆ ಮಾತನಾಡಿದ :

''ಯಾಕೆ ಹೆದರುತ್ತೀ ರತ್ನಾ? ನಾನೇನು ತಿನ್ನುತ್ತೇನೆಯೆ ನಿನ್ನನ್ನು? ಬಾ, ಕೂತುಕೋ. ಹಸಿದಿರಬಹುದು. ಈ ಹಣ್ಣುಗಳನ್ನೆಲ್ಲ ನಿನಗೋಸ್ಕರವೇ ತರಿಸಿದ್ದೇನೆ. ತಿನ್ನು ಬಾ.''

ಆತ ಹತ್ತಿರ ಹತ್ತಿರ ಬಂದ ಹಾಗೆ ರತ್ನಾ ದೂರ ದೂರ ಸರಿಯತೊಡಗಿದಳು. ಆಕೆಯನ್ನು ವಶಪಡಿಸಿಕೊಳ್ಳುವುದು ಸುಲಭವಲ್ಲವೆಂಬುದು ಕಂಡುಬರುತ್ತಲೂ ಸದಾಶಿವಪ್ಪ ಜೇಬಿನಿಂದ ನೂರು ರೂಪಾಯಿನದೊಂದು ನೋಟನ್ನು ಹೊರದೆಗೆದು... ''ಇದನ್ನು ತೆಗೆದುಕೊ ರತ್ನಾ. ಹೀಗೇಕೆ ಮಾಡುತ್ತೀಯ ಅರಸಿಕಳ ಹಾಗೆ? ನಾನೇನು ರಾಕ್ಷಸನೆ, ಪಶುವೇ? ನಿನ್ನ ಮೇಲಿನ ಪ್ರೀತಿಯಿಂದಾಗಿಯೆ ಈ ರೀತಿ ನಿನ್ನನ್ನು ಕರೆಯಿಸಬೇಕಾಯಿತು. ಬೇರೇನೂ ಭಾವಿಸಿಕೊಳ್ಳಬೇಡ. ಬಾ,'' ಎಂದು ಅವಳ ಕೈ ಹಿಡಿಯಲು ಮುಂದುವರಿದ.

ಕೋಪದಿಂದ ಮೈಯೆಲ್ಲ ಕಂಪಿಸುತ್ತಿರಲು ರತ್ನಾ ಕೂಗಿ ಹೇಳಿದಳು :

''ಹತ್ತಿರ ಬರಬೇಡ, ದೂರ ನಿಲ್ಲು.''

ಕ್ಷಣಕಾಲ ನಿಂತಲ್ಲಿಯೆ ನಿಂತುಕೊಂಡಿದ್ದ ಸದಾಶಿವಪ್ಪ. ಸಿಟ್ಟಿನಿಂದ ನಯವಾಗಿ ಕಂಪಿಸುತ್ತಲಿದ್ದ ರತ್ನಳ ರೂಪು ಆತನಿಗೆ ತುಂಬ ಮೋಹಕವಾಗಿ ಕಾಣಿಸಿತು. ಸೂಕ್ಷ್ಮವಾಗಿ ಬಳಕುತ್ತಲಿದ್ದ ಆಕೆಯ ಹುಬ್ಬು, ಮೆಲ್ಲನೆ ಕುಣಿಯುತ್ತಲಿದ್ದ ಮೂಗು, ಏರಿ ಇಳಿಯುತ್ತಲಿದ್ದ ಎದೆಕಟ್ಟು, ರಕ್ತವೇರಿ ಕೆಂಪಗಾದ ಮುಖ, ನಡುಗುತ್ತಲಿದ್ದ ತುಟಿ – ರತ್ನಾ ಇನ್ನೂ ಮನೋಹರೆಯಾಗಿ ಕಾಣಿಸಿಕೊಂಡಳು.

''ನೋಡು ರತ್ನಾ, ನಿನ್ನನ್ನು ಕಂಡರೆ ತುಂಬ ಪ್ರೀತಿ ನನಗೆ.''

''ಥೂ ನೀಚ. ಇದುವರೆಗೆ ಎಷ್ಟು ಜನರನ್ನು ಹೀಗೆ ವಂಚಿಸಿದ್ದೀಯೊ. ನಿನ್ನ ಮುಖಕ್ಕೆ ಬೆಂಕಿ ಹಾಕಲಿ.''

''ನಿನ್ನ ಹಾಗೆ ಸಿಡಿದು ಬೀಳುವವರನ್ನು ಕಂಡರೆ ತುಂಬ ಹುಚ್ಚು ನನಗೆ. ನಿನಗೆ ಗೊತ್ತೇ ರತ್ನಾ, ಸಿಟ್ಟಿನ ಭರದಲ್ಲಿ ಎಷ್ಟು ಚೆಲುವಾಗಿ ಕಾಣುತ್ತಿರುವೆ ನೀನು. ಆ ನಿಲುಗನ್ನಡಿಯಲ್ಲಾದರೂ ನೋಡಿಕೊ.''

''ಮೊದಲು ನನ್ನನ್ನು ಇಲ್ಲಿಂದ ಬಿಡುಗಡೆ ಮಾಡು. ಇಲ್ಲವಾದರೆ ನನ್ನ ಹೆಣವನ್ನೆ ನೀನು ನೋಡಿಕೊಳ್ಳಬೇಕಾಗುವುದು.''

''ಇಂಥ ರೂಪು, ಇಂಥ ಯೌವನ ಇರುವಾಗ ಸಾವಿನ ಯೋಚನೆ ಯಾಕೆ ನಿನಗೆ? ಬದುಕಿರುವವರೆಗೂ ಸುಖಪಡುವುದನ್ನು ಬಿಟ್ಟು ಇಂಥ ಹುಚ್ಚುಚ್ಚು ಮಾತು ಏಕೆ ಆಡುತ್ತೀಯೆ? ಬಾ,'' ಎಂದು ನುಡಿಯುತ್ತ ಆತ ಆಕೆಯನ್ನು ಹಿಡಿಯಲು ಮುಂದುವರಿದ.

ತಾನೇನನ್ನು ಮಾಡುತ್ತಿರುವೆನೆಂಬುದರ ಅರಿವೂ ಇಲ್ಲವಾಯಿತು ರತ್ನಾಗೆ. ಹೇಗಾದರೂ ಮಾಡಿ ಈ ಸ್ಥಳದಿಂದ, ಈ ನೀಚ ವ್ಯಭಿಚಾರಿಯ ಹಿಡಿತದಿಂದ ಪಾರಾಗಿ ಹೋಗಬೇಕೆಂಬುದೊಂದೇ ಆಕೆಯ ಯೋಚನೆಯಾಗಿತ್ತು. ಹಣ್ಣುಗಳ ತಟ್ಟೆಯ ಬದಿಯಲ್ಲಿದ್ದ ಗಾಜಿನ ಲೋಟ ದೃಷ್ಟಿಗೆ ಬೀಳುತ್ತಲೂ ಆಕೆ ಅಲ್ಲಿಗೆ ನುಗ್ಗಿ ಎರಡು ಲೋಟಗಳನ್ನೂ ಕೈಗೆತ್ತಿಕೊಂಡು ಸದಾಶಿವಪ್ಪ ಸ್ವಸಂರಕ್ಷಣೆಗೆ ಸಿದ್ಧನಾಗುವುದಕ್ಕೆ ಮೊದಲೇ ಹುಲಿಯಂತೆ ಆತನ ಮೇಲೆ ಹಾರಿ ಗಾಜಿನ ಲೋಟದಿಂದ ಆತನ ಹಣೆಗೆ ಬಲವಾಗಿ ಏಟು ಹಾಕತೊಡಗಿದಳು. ಒಂದು ಲೋಟ ಒಡೆದು ಬೀಳುತ್ತಲೂ

ಇನ್ನೊಂದು ಲೋಟವನ್ನೆತ್ತಿ ಗಾಯವಾದ ಸ್ಥಳದಲ್ಲೇ ಮತ್ತೆ ಮತ್ತೆ ಏಟು ಹಾಕಿದಳು. ಗಾಜಿನ ಚೂರುಗಳೆಷ್ಟೋ ಆತನ ಹಣೆಗೆ ಅಂಟಿಕೊಂಡುವು. ಆತ ಒಂದೆರಡು ಸಲ ವಿಕಾರವಾಗಿ ಕೂಗಿಕೊಂಡು ಕೆಳಕ್ಕುರುಳಿದ. ಮೂರು ನಾಲ್ಕು ಗಾಯಗಳಿಂದ ನೆತ್ತರು ಚಿಮ್ಮತೊಡಗಿತು. ಆತ ಒಂದೆರಡು ಸಲ ಗರಗರನೆ ಕಣ್ಣು ತಿರುಗಿಸಿ ನಿಶ್ಚೇಷ್ಟಿತನಾಗಿ ಬಿದ್ದುಕೊಂಡ.

ಚಿಲಕವನ್ನು ತೆಗೆದು ರತ್ನಾ ಬಾಗಿಲು ದೂಡಿ ಕೆಳಕ್ಕೋಡಿದಳು. ಕೆಳಗಿನ ಭಾಗದಲ್ಲಿ ಯಾರ ಸುಳಿವೂ ಇರಲಿಲ್ಲ. ಅಂಗಳಕ್ಕಿಳಿದು ಬಂದು ಹೆಬ್ಬಾಗಿಲನ್ನು ದೂಡಿ ರಸ್ತೆಗೆ ಓಟಬಿಟ್ಟಳು.

## ೩೦

ಓಡುತ್ತ ಓಡುತ್ತ ರತ್ನಾ ಮನೆಗೆ ಬಂದು ಮುಟ್ಟಿದಾಗ ಮಧ್ಯರಾತ್ರಿ ಮೀರಿ ಹೋಗಿದ್ದಿತು.

ಮುದುಕಿ ಹಾಗೆಯೆ ಅಳುತ್ತ ಕುಳಿತಿದ್ದಳು. ಸೋಮಣ್ಣ ಹಾಸುಗೆಯಲ್ಲಿ ಅತ್ತ ಇತ್ತ ಹೊರಳಾಡುತ್ತಲಿದ್ದ.

ಗುಡಿಸಲಿನ ಬಾಗಿಲನ್ನು ಧಡಾರನೆ ದೂಡಿ ಗಾಳಿಯಂತೆ ಒಳನುಗ್ಗಿ ಬಂದ ರತ್ನಳನ್ನು ಕಂಡೊಡನೆ ಮುದುಕಿ ಧಿಗ್ಗನೆದ್ದು ಆಕೆಯನ್ನು ತಬ್ಬಿಕೊಂಡಳು. ಸೋಮಣ್ಣನ ಕಣ್ಣುಗಳಿಂದ ಹರ್ಷಾಶ್ರುಗಳುದುರತೊಡಗಿದುವು.

''ಎಲ್ಲಿಗೆ ಹೋಗಿದ್ದೆ ರತ್ನಾ? ಏನಾಗಿತ್ತು ನಿನಗೆ?''

ತಾಯಿಯ ಆಲಿಂಗನದಿಂದ ದೂರವಾಗಿ ರತ್ನಾ ಅಣ್ಣನ ಹಾಸುಗೆಯ ಬಳಿ ಕುಳಿತುಕೊಂಡಳು. ಸೀರೆಯ ಸೆರಗಿನಿಂದ ಮುಖವನ್ನೊರೆಸಿಕೊಳ್ಳುತ್ತ ನಿಧಾನವಾಗಿ ಉತ್ತರವಿತ್ತಳು :

''ಇಂದು ನಡೆದುದೆಲ್ಲ ಒಂದು ಭಯಂಕರ ಕನಸಿನಂತಿದೆ ಅಣ್ಣಾ. ಇಂಥ ಪ್ರಸಂಗ ಇನ್ನೆಂದೂ ಬರದಿರಲಿ ನನಗೆ...''

''ಏನಾಯಿತು ರತ್ನಾ?''

''ನಾವು ಸಭೆ ಕೂಡಿಸುವುದು ಗೊತ್ತಾದಾಗಲೆ ಆ ಸೆಟ್ಟಿಯ ಹಸ್ತಕರು ಎಲ್ಲ ಸಿದ್ಧತೆ ಮಾಡಿಕೊಂಡಿದ್ದರೇನೊ. ಸಭೆಯಲ್ಲಿ ಪುಂಡರನ್ನು ನುಗ್ಗಿಸಿ ಬೇಕಂತಲೇ ಗಲಭೆ ಯೆಬ್ಬಿಸಿದರು. ನನ್ನನ್ನೂ ನಾಗಮ್ಮನನ್ನೂ ಹಿಡಿದು ಕಾರಿನಲ್ಲಿ ಹಾಕಿ ಹೊತ್ತುಕೊಂಡು ಹೋದರು.''

''ಇಬ್ಬರನ್ನೂ ಜೊತೆಗೇ ಒಯ್ದರೇನು?''

''ಇಲ್ಲ, ನನ್ನನ್ನೊಂದು ಕಾರಿನಲ್ಲಿ, ನಾಗಮ್ಮನನ್ನೂ ಇನ್ನಿಬ್ಬರು ಹೆಂಗುಸರನ್ನೂ ಇನ್ನೊಂದು ಕಾರಿನಲ್ಲಿ. ನನ್ನನ್ನೊಯ್ದು ಗಿರಣಿಯ ಆಚೆಗಿರುವ ಬಂಗಲೆಯೊಂದರಲ್ಲಿ ತಳ್ಳಿದರು. ಅಲ್ಲಿ ಆ ಹೊಲೆಯ ಸದಾಶಿವಸೆಟ್ಟಿ ಮೊದಲೇ ಕಾಯ್ದು ನಿಂತಿದ್ದ. ಹೆಂಡ ಕುಡಿದು ಮತ್ತನಾಗಿದ್ದನೇನೋ. ಅವನನ್ನು ಬಿಟ್ಟರೆ ಅಲ್ಲಿ ಇನ್ನಾರೂ ಇರಲಿಲ್ಲ. ಬಾಗಿಲಿಗೆ ಚಿಲಕ ಹಾಕಿ ನನ್ನ ಮೈಮೇಲೆ ಬಂದ. ಪಾರಾಗಿ ಹೋಗಬೇಕೆಂದರೆ ಬೇರೆ ಬಾಗಿಲಿರ ಲಿಲ್ಲ. ನನಗೆ ಅರಿವು ತಪ್ಪಿದಂತಾಯಿತು. ಆತ ನನ್ನ ಮೈಮೇಲೆ ಬಂದೊಡನೆ ಗಾಜಿನ ಗ್ಲಾಸುಗಳನ್ನೆತ್ತಿಕೊಂಡು ರಪರಪನೆ ಹಣೆಗೆ ಏಟು ಹಾಕಿದೆ. ಗಾಜು ಒಡೆದು ಆತನ ಹಣೆಗೆ ನಟ್ಟಿರಬೇಕು. ರಕ್ತ ಬಳಬಳನೆ ಪುಟಿಯತೊಡಗಿತು. ಆತ ಒಮ್ಮೆ ಭಯಂಕರ ವಾಗಿ ಕೂಗಿಕೊಂಡು ಕೆಳಕ್ಕುರುಳಿದ. ಗಾಯವೂ ಭಯಂಕರವಾಗಿಯೇ ಇತ್ತು. ಇಷ್ಟು ಹೊತ್ತಿಗಾಗಲೆ ಆತ ಸತ್ತು ಹೋಗಿರಬಹುದು. ಆತ ಬಿದ್ದು ಬಿಡುತ್ತಲೂ ನಾನಿತ್ತ ಧಾವಿಸಿ ಬಂದೆ.''

''ಕೆಳಗಡೆ ಯಾರೂ ಇರಲಿಲ್ಲವೆ?''

''ಇಲ್ಲ, ಈ ಹೊಲೆಗೆಲಸಕ್ಕಾಗಿಯೆ ಮನೆಯನ್ನೆಲ್ಲ ತೆರವು ಮಾಡಿಸಿದ್ದನೇನೊ.''

ಮುದುಕಿ ಮತ್ತೆ ಮಗಳನ್ನು ತಬ್ಬಿಕೊಂಡು ಬಿಕ್ಕುತ್ತ ಬಿಕ್ಕುತ್ತ – ''ಇನ್ನು ಹ್ಯಾಗೆ ಮಾಡೋದೆ ರತ್ನಾ? ನಿನ್ನ ಗತಿಯೇನು?'' ಎಂದು ಗೋಗರೆಯತೊಡಗಿದಳು.

''ನನಗಾಗಿ ಯಾಕೆ ಅಳುತ್ತೀಯವ್ವ! ನಾನೇನೂ ಕೆಟ್ಟ ಕೆಲಸ ಮಾಡಿ ಬಂದಿಲ್ಲವಲ್ಲ? ತಿಂದು ಕೊಬ್ಬಿದ ಈ ನೀಚ ಶ್ರೀಮಂತರಿಗೆ ನಮ್ಮಂಥ ಬಡ ಹೆಂಗಳೆ ಯರನ್ನು ಕೆಡಿಸೋದೇ ಒಂದು ಆಟವೆಂದು ತೋರುತ್ತದೆ. ಇಂಥ ಪಶುಗಳಿಗೆ ಒಂದು ಪಾಠ ಕಲಿಸಿದಂತಾಯಿತು. ಇನ್ನು ಏನಾದರೇನು ನನಗೆ? ಸಂತೋಷದಿಂದ ಫಾಸೀ ಹೋಗಬಲ್ಲೆ.''

''ರತ್ನಾ, ನನ್ನ ತಂಗೀ...'' ಎಂದು ಕ್ಷೀಣಸ್ವರದಲ್ಲಿ ಕೂಗಿದ ಸೋಮಣ್ಣ. ಆತನ

ಕತ್ತು ಬಿಗಿದು ಬಂದಿದ್ದಿತು. ಮುಂದೆ ಮಾತನಾಡಲಾಗಲಿಲ್ಲ.

ಅಣ್ಣನ ಎಡಗೈಯನ್ನು ತನ್ನ ಕೈಯಲ್ಲಿ ಹಿಡಿದುಕೊಂಡು ಪ್ರೀತಿಯಿಂದ ಅದನ್ನು ತಟ್ಟುತ್ತಾ ರತ್ನಾ ಹೇಳಿದಳು : "ನೀನೂ ಹೀಗೆ ಧೈರ್ಯ ಬಿಡುವದೆಂದರೇನಣ್ಣ? ನಿನ್ನಂಥವನೂ?"

"ಎಂಥ ಪ್ರಸಂಗ ಬಂತಲ್ಲ ರತ್ನಾ."

"ಬಂದರೆ ಬರಲಿ. ನಾನದನ್ನು ಎದುರಿಸಬಲ್ಲೆ. ಆದರೆ... ಆದರೆ... ನಾನೂ ಈಗ ಹೊರಟು ನಿಂತರೆ ಇಲ್ಲಿ ನಿನ್ನನ್ನು ನೋಡಿಕೊಳ್ಳಲು ಯಾರೂ ಇಲ್ಲದಂತಾಗು ವುದಲ್ಲ. ಅವ್ವನೋ ಮುದುಕಿ : ಆಕೆಗೂ ಶಕ್ತಿಯಿರುವದು ಅಷ್ಟರಲ್ಲೇ ಇದೆ. ಇನ್ನು ನಿನ್ನ ಗತಿ?"

"ನೀನೇನು ಮಾಡಬೇಕೆಂದಿರುವೆ ರತ್ನಾ?" ಎಂದು ಗಾಬರಿಯಿಂದ ಕೇಳಿದ ಸೋಮಣ್ಣ.

"ಇನ್ನೇನು ಮಾಡೋದು? ಇಲ್ಲಿಂದ ನೆಟ್ಟಗೆ ಪೊಲೀಸು ಸ್ಟೇಶನ್ನಿಗೆ ಹೋಗಿ ಹಾಜರಾಗೋದು. ಹೇಗೂ ಇನ್ನೊಂದು ಗಂಟೆ ಎರಡು ಗಂಟೆಗಳಲ್ಲಿ ಅವರು ನನ್ನನ್ನು ಹುಡುಕುತ್ತಾ ಬಂದೇ ಬರುತ್ತಾರೆ. ಅವರಿಗಾದರೂ ಏಕೆ ತೊಂದರೆ ಪಾಪ, ನಾನೇ ಹೋಗಿ ಎಲ್ಲವನ್ನೂ ಹೇಳಿಬಿಟ್ಟರಾಯಿತು."

ಸೋಮಣ್ಣ ಹಾಸುಗೆಯ ಮೇಲೆದ್ದು ಕುಳಿತು ತಂಗಿಯ ಭುಜಗಳನ್ನು ಹಿಡಿದು ಕಳಕಳದಿಂದ ಕಂಪಿಸುವ ಸ್ವರದಲ್ಲಿ ನುಡಿದ :

"ಛೆ! ಇಂಥ ಹುಚ್ಚು ಕೆಲಸ ಮಾಡಬೇಕು. ಸದಾಶಿವಪ್ಪ ಸತ್ತುದರಲ್ಲಿ ನಿನ್ನದೇನು ತಪ್ಪಿದೆ? ಆತನ ಪಾಪ ಆತನಿಗೆ ಮುಳುವಾಯಿತು. ಅದಕ್ಕಾಗಿ ನೀನೇಕೆ ಪ್ರಾಣ ಕಳೆದುಕೊಳ್ಳುತ್ತೀಯ?"

"ಏಕೆ ಅಂದರೆ? ಒಳ್ಳೆ ಪ್ರಶ್ನೆಯೆ ನಿನ್ನದು ಅಣ್ಣ. ಕಾನೂನು ಸುಮ್ಮನೆ ಬಿಟ್ಟೀತೇ ನನ್ನನ್ನು?"

"ಈ ಕಾನೂನು ಈ ಕಾಯಿದೆ ಇರುವುದೆಲ್ಲ ನಮ್ಮಂಥ ಬಡವರನ್ನು ಶಿಕ್ಷಿಸುವುದಕ್ಕಾಗಿಯೆ ಏನು? ಈ ಶ್ರೀಮಂತರು ಇಂಥ ಮಹಾಪರಾಧ ಮಾಡಿದರೂ ಕಾನೂನು ಅವರಿಗೇನನ್ನೂ ಮಾಡಲಾರದು. ಆ ಅಪರಾಧಕ್ಕೆ ತಕ್ಕ ಶಿಕ್ಷೆ ಅವರಿಗಾಗು

ವಾಗ ನಮಗೆ ಮಾತ್ರ ಕಾನೂನಿನ ಭಯವೇಕೋ?''

''ಕಾನೂನನ್ನು ನಮ್ಮ ಕೈಯಲ್ಲೇ ತೆಗೆದುಕೊಂಡು ನಾವೇ ಶಿಕ್ಷೆ ವಿಧಿಸುವುದೂ ಅಪರಾಧವೇ ಅಲ್ಲವೇನಣ್ಣ?''

''ಅದೆಲ್ಲ ಇರಲಿ ರತ್ನಾ, ನಿಜಕ್ಕೂ ಈ ಸಂದರ್ಭದಲ್ಲಿ ನಿನ್ನಿಂದ ಅಪರಾಧ ವಾಗಿಲ್ಲವೆಂದೇ ನನಗನ್ನಿಸುತ್ತದೆ. ಸುಮ್ಮನೆ ಏಕೆ ಪ್ರಾಣ ಕಳೆದುಕೊಳ್ಳುತ್ತೀಯೆ? ನಾ ಹೇಳಿದ ಹಾಗೆ ಕೇಳು.''

ತಲೆ ಕೆಳಕ್ಕೆ ಬಾಗಿಸಿ ಮೌನವಾಗಿ ಕುಳಿತಿದ್ದಳು ರತ್ನಾ. ಸೋಮಣ್ಣ ಹೇಳುತ್ತಿದ್ದ:

''ಆತನನ್ನು ನೀನೇ ಕೊಂದದ್ದು ಎನ್ನುವುದಕ್ಕೆ ಅಲ್ಲಿ ಏನಾದರೂ ಆಧಾರ ವಿದೆಯೇ? ನಿನ್ನನ್ನು ಕಾರಿನಲ್ಲಿ ಹಾಕಿ ಅಲ್ಲಿಗೊಯ್ದು ಬಿಟ್ಟವರು ಆ ವಿಷಯ ಹೇಳಲಾರ ರೆಂದೇ ನನಗನ್ನಿಸುತ್ತದೆ. ಹಾಗೆ ಅವರು ಪೊಲೀಸರೆದುರಿಗೆ ಹೇಳಿದಲ್ಲಿ ಅವರ ಬಗೆಗೇ ಪೊಲೀಸರಿಗೆ ಸಂಶಯ ಬರಬಹುದು. ಅಂತೆಯೆ ಈ ಪ್ರಕರಣ ತನ್ನಷ್ಟಕ್ಕೆ ತಾನೇ ಕೊನೆಗೊಂಡು ಹೋಗಬಹುದು.''

''ನನಗೇನೂ ಹಾಗೆನ್ನಿಸುವುದಿಲ್ಲ ಅಣ್ಣ. ಆತ ಸೆಟ್ಟರ ಮಗ. ಒಬ್ಬನೇ ಒಬ್ಬ ಮಗ. ಸೆಟ್ಟರು ಸುಮ್ಮನಿದ್ದಾರೇ? ಆಕಾಶ ಪಾತಾಳಗಳನ್ನೊಂದು ಮಾಡಿಯಾರು.''

''ಹಾಗೂ ಮಾಡಬಹುದೆಂಬುದನ್ನು ಒಪ್ಪಿಕೊಳ್ಳೋಣ. ಆದರಿಂದ ತಪ್ಪಿಸಿ ಕೊಳ್ಳಬೇಕಾದರೆ ನೀನು ಈಗಿಂದೀಗ ಇಲ್ಲಿಂದ ಹೊರಟು ಎಲ್ಲಾದರೂ ಗುಡ್ಡಗಾಡಿನ ಪ್ರದೇಶದಲ್ಲಿ ಅಡಗಿಕೊಳ್ಳಬೇಕು. ಈ ಗದ್ದಲ ಕೊಂಚ ಕಡಿಮೆಯಾದಾಗ ನಾವೆಲ್ಲ ಮತ್ತೆ ಒಂದುಗೂಡಬಹುದು.''

ರತ್ನಾ ವಿಸ್ಮಿತಳಾಗಿ ತನ್ನ ವಿಶಾಲ ನೇತ್ರಗಳನ್ನು ಆತನ ಕಡೆಗೆ ತಿರುಗಿಸಿ - ''ನೀನು ಅನ್ನುವುದಾದರೂ ಏನು ಅಣ್ಣ? ನಾನೀಗ ಪರಾರಿಯಾಗಬೇಕು ಅಂತಲೊ?'' ಎಂದು ಕೇಳಿದಳು.

''ಹೌದು ರತ್ನಾ, ಅದನ್ನು ಬಿಟ್ಟರೆ ಬೇರೆ ದಾರಿಯಿಲ್ಲ.''

''ಅಣ್ಣ ಹೇಳಿದ ಹಾಗೆ ಮಾಡು ಮಗಳೇ. ಇಲ್ಲ ಅನ್ನಬೇಡ,'' ಎಂದು ಮುದುಕಿಯೂ ದನಿಗೂಡಿಸಿದಳು.

''ನೀನು ಹೇಳುವದೇ ನನಗರ್ಥವಾಗಲೊಲ್ಲದು. ನಾನು ಪರಾರಿಯಾಗಲಾ?

ಎಲ್ಲಿಗೆ? ಯಾರ ಜೊತೆಗೆ? ಒಬ್ಬಳೇ ಎಲ್ಲಿಗಂತ ಹೋಗಲಿ?''

''ಒಬ್ಬಳೇ ಅಂತ ಚಿಂತಿಸಬೇಡ ರತ್ನಾ, ನಾನೂ ಬರುತ್ತೇನೆ ನಿನ್ನ ಜೊತೆಗೆ!''

ಹಠಾತ್ತಾಗಿ ಕೇಳಿಬಂದ ಚಂದ್ರಣ್ಣನ ವಾಣಿಯನ್ನು ಗುರುತಿಸಿ ಎಲ್ಲರೂ ಆಶ್ಚರ್ಯದಿಂದ ಬಾಗಿಲಿನ ಕಡೆ ಹೊರಳಿದರು. ಆತ ಯಾವಾಗ ಬಂದಿದ್ದನೊ, ನಡೆಯುತ್ತಿದ್ದ ಮಾತುಕತೆಗಳನ್ನೆಲ್ಲವನ್ನೂ ಮೌನವಾಗಿ ಕೇಳಿಕೊಂಡಿದ್ದನೇನೋ. ಆತ ದೃಢಸ್ವರದಲ್ಲಿ ನುಡಿದ :

''ಹೌದು ರತ್ನಾ, ನಾನೂ ಬರುತ್ತೇನೆ ನಿನ್ನ ಜೊತೆಗೆ. ಹೊರಡಲು ಸಿದ್ಧಳಾಗು. ಇನ್ನು ಹೆಚ್ಚು ಹೊತ್ತು ಇಲ್ಲಿರುವುದೊಳ್ಳೆಯದಲ್ಲ.''

ರತ್ನಾ ಎದ್ದು ಆತನ ಬಳಿ ಬಂದಳು. ಆಶ್ಚರ್ಯದಿಂದ ಕಂಪಿಸುವ ಸ್ವರದಲ್ಲಿ ಕೇಳಿದಳು :

''ನೀವು? ನೀವು ಬರುತ್ತೀರಾ?''

''ಹೌದು ರತ್ನಾ, ನಾನು ಬರುತ್ತೇನೆ. ಏಕೆ ನಂಬಿಕೆಯಾಗುವುದಿಲ್ಲವೆ ನನ್ನ ಮಾತಿನ ಬಗ್ಗೆ?''

''ಹೇಗೆ ನಂಬಲಿ? ನಿಮ್ಮ ಕಂಪನಿ, ನಿಮ್ಮ ಪ್ರೆಸ್ಸು ನಿಮ್ಮ ಪತ್ರಿಕೆ ಎಲ್ಲವನ್ನೂ ಏನು ಮಾಡುತ್ತೀರಿ?''

''ಆ ಬಗೆಗೂ ಯೋಚಿಸಬೇಕಾಗಿಲ್ಲ, ಎಲ್ಲದಕ್ಕೂ ನೀರು ಬಿಟ್ಟಾಯಿತು ನಾನು.''

''ನೀರು ಬಿಟ್ಟಾಯಿತೇ? ಅದು ಹೇಗೆ?''

''ಇವೊತ್ತು ಸಾಯಂಕಾಲ ಡೈರೆಕ್ಟರ್ ಬೋರ್ಡಿನ ಸಭೆಯಿತ್ತು. ಅಲ್ಲಿ ಎಲ್ಲವೂ ಮುಗಿದಂತಾಯಿತು. ಇನ್ನು ಕಂಪನಿಗೂ ನನಗೂ ಯಾವ ಸಂಬಂಧವೂ ಇಲ್ಲ, ನಾನು ಅದಕ್ಕೆ ರಾಜೀನಾಮೆ ಕೊಟ್ಟು ಮುಕ್ತನಾದೆ. ಕಚೇರಿಯನ್ನೂ ಬಿಟ್ಟುದಾಯಿತು. ಕೊಟ್ರಪ್ಪನ ರೂಮಿನಲ್ಲಿ ಹಾಸಿಗೆಯಿಟ್ಟು ಬಂದಿದ್ದೇನೆ.''

ರತ್ನಾ ವಿಸ್ಮಿತಳಾಗಿ ಕೇಳಿದಳು : ''ಮುಂದೆ?''

''ಬೆಂಗಳೂರಿನಲ್ಲಿ ರಂಗಯ್ಯ ಎಂಬ ಸ್ನೇಹಿತನೊಬ್ಬನಿದ್ದಾನೆ. ಆತ ಪ್ರಿಂಟರ್.

ನಮ್ಮ ವಿಚಾರದವನೇ. ಬಂಡವಾಳಶಾಹಿಗೆದುರಾಗಿ ಹೋರಾಡುವದೆಂದರೆ ಆತನಿಗೂ ತುಂಬ ಉತ್ಸಾಹ. ನನ್ನ ಬಗೆಗೂ ಆತನಿಗೆ ಬಲು ವಿಶ್ವಾಸವುಂಟು. ಆತನನ್ನು ಇಲ್ಲಿಗೇ ಕರೆದುತಂದು ಆತನ ಮುದ್ರಣಾಲಯವನ್ನು ಇಲ್ಲಿಯೇ ಹೂಡಿ ಸಣ್ಣ ಪತ್ರಿಕೆಯೊಂದನ್ನು ಹೊರಡಿಸಿ ಈ ಪ್ರತಿಗಾಮಿಗಳನ್ನು ಮಟ್ಟ ಹಾಕಬೇಕೆಂದು ಯೋಚಿಸಿಕೊಂಡಿದ್ದೆ.''

''ಹಾಗೇ ಮಾಡಬೇಕು. ಹಾಗೇ ಮಾಡಬೇಕು. ಆಗ ನಿಮಗೆ ಈ ಬಂಡವಾಳಗಾರರ ಹಂಗೇನೂ ಇರುವುದಿಲ್ಲ, ಸ್ವತಂತ್ರವಾಗಿರುತ್ತೀರಿ. ಕೂಲಿಕಾರ ಚಳವಳಿಗೂ ನಿಮ್ಮಿಂದ ಸಾಕಷ್ಟು ಸಹಾಯವಾದೀತು. ನಿಮ್ಮ ಕೈಯಲ್ಲೊಂದು ಸ್ವತಂತ್ರ ಪತ್ರಿಕೆಯಿದ್ದರೆ ಸಾವಿರ ಸೈನಿಕರ ಶಕ್ತಿಯಿದ್ದ ಹಾಗೇ ಸರಿ.''

''ಸದ್ಯದ ಮಟ್ಟಿಗೆ ಪತ್ರಿಕೆಯ ವಿಚಾರ ಬದಿಗಿಟ್ಟು ಈ ಪ್ರಸಂಗದಿಂದ ನಿನ್ನನ್ನುಳಿಸಿಕೊಳ್ಳುವುದು ನನ್ನ ಮೊದಲನೆಯ ಕೆಲಸ ರತ್ನಾ, ಸೋಮಣ್ಣನೆಂದ ಹಾಗೆ ನೀನು ಈಗಿಂದೀಗ ಹೊರಟು ಸುರಕ್ಷಿತ ಸೀಮೆಯಲ್ಲಿ ಕೆಲದಿನಗಳವರೆಗಾದರೂ ಅವಿತುಕೊಳ್ಳಬೇಕು. ನಾನೂ ಬರುತ್ತೇನೆ ನಿನ್ನ ಜೊತೆಗೆ. ಏನೆನ್ನುವೆ ಸೋಮಣ್ಣ ನೀನು?''

''ಇಂಥ ಕಠಿಣ ಸಂದರ್ಭದಲ್ಲಿ ನನ್ನ ತಂಗಿಯನ್ನುಳಿಸಲು ಬಂದ ದೇವರು ನೀವು ಚಂದ್ರಣ್ಣ. ನಿಮ್ಮ ಉಪಕಾರವನ್ನು ಜನ್ಮ ಜನ್ಮಾಂತರಗಳಲ್ಲೂ ಮರೆಯಲಿಕ್ಕಿಲ್ಲ ನಾವು. ಹೊರಡು ರತ್ನಾ, ಚಂದ್ರಣ್ಣನವರ ಜೊತೆಗೆ ಹೊರಡು. ಅವರು ಜೊತೆಗಿರುವಾಗ ನಿನಗಾರ ಭಯವೂ ಇಲ್ಲ.''

ಉಕ್ಕಿ ಬರುತ್ತಿದ್ದ ಅಳುವನ್ನು ಹೇಗೋ ತಡೆದುಕೊಂಡು ಮುದುಕಿ ಮಗಳ ಸೀರೆ ರವಕೆಗಳನ್ನೂ ಹೊದಿಕೆಯನ್ನೂ ಕೂಡಿಸಿ ಗಂಟು ಕಟ್ಟಿದಳು. ಮಧ್ಯಾಹ್ನ ಬೇಯಿಸಿದ ರೊಟ್ಟಿಗಳಲ್ಲಿ ಇನ್ನೂ ಹಲವು ರೊಟ್ಟಿ ಉಳಿದಿದ್ದುವು. ಅವುಗಳನ್ನೂ ಗಂಟಿಗೆ ಸೇರಿಸಿದಳು. ಉಪ್ಪಿನ ಗಡಿಗೆಯಲ್ಲಿ ಮಡಗಿಸಿಟ್ಟಿದ್ದ ಮೂರು ರೂಪಾಯಿಗಳನ್ನು ತೆಗೆದು ಮಗಳ ಕೈಗೆ ಕೊಡುತ್ತ – ''ಈಗ ಇರೋದು ಇವಿಷ್ಟೇ ಮಗಳೇ. ಹ್ಯಾಗೆ ಮಾಡ್ತೀಯೋ ನೀನು?'' ಎಂದು ನುಡಿದು ಮತ್ತೆ ಅಳತೊಡಗಿದಳು.

''ನಾನು ಹೇಗಾದರೂ ಮಾಡೇನು ಅವ್ವ. ಇವರು ಬೇರೆ ನನ್ನ ಜೊತೆಗಿರುತ್ತಾರೆ. ನಿಮ್ಮದೇ ಚಿಂತೆ ನನಗೆ.''

"ನಮಗೇನೂ ಆಗುವುದಿಲ್ಲವ್ವ. ದೇವರ ದಯದಿಂದ ನನ್ನ ಕಣ್ಣು ಇನ್ನೂ ಕಾಣುತ್ತವೆ. ವಾರವೆಲ್ಲಾ ನೂತರೆ ಮೂರು ರೂಪಾಯಿ ಬರುತ್ತದೆ. ನಮಗಿಬ್ಬರಿಗೂ ಗಂಜಿಗಾದರಾಯಿತು."

ಚಂದ್ರಣ್ಣ ಓಡುತ್ತ ಹೋಗಿ ಕೊಟ್ರಪ್ಪನ ಕೊಠಡಿಯಲ್ಲಿದ್ದ ತನ್ನ ಹಾಸಿಗೆ ಸುರುಳಿಯನ್ನು ತೆಗೆದುಕೊಂಡು ಬಂದ. ಮುದುಕಿ ಗೋಳಿಡುತ್ತಿರಲು ಚಂದ್ರಣ್ಣ ರತ್ನಾ ಗುಡಿಸಲಿನಿಂದ ಹೊರಟರು.

## ೩೧

ತಾರೆಗಳಿಂದ ತುಂಬಿದ ಆಕಾಶ. ಒಂದು ಕಡೆ ಅರ್ಧಚಂದ್ರ. ಆತನ ಸುತ್ತಮುತ್ತಲು ಹಲವಾರು ಮೋಡ ಬಗೆಬಗೆಯ ಆಕಾರ ತಳೆದು ನಿಂತಿವೆ. ಆಗಾಗ ಗಾಳಿ ಬೀಸುತ್ತಿದೆ. ಆದರೊಂದಿಗೆ ಮೋಡಗಳು ಅತ್ತ ಇತ್ತ ಹರಿದಾಡಿ ಚಂದ್ರ ಪ್ರಕಾಶವನ್ನು ಮರೆಮಾಡುತ್ತಿವೆ. ಒಮ್ಮೆ ಸ್ಪಷ್ಟವೂ ಸ್ವಚ್ಛವೂ ಆದ ತಿಂಗಳ ಬೆಳಕು, ಒಮ್ಮೆ ತಿಳಿಗತ್ತಲೆ.

ಇಂಥ ಮಬ್ಬು ಬೆಳಕಿನಲ್ಲಿ ಕಾಲುದಾರಿ ಹಿಡಿದು ಹೊರಟ ಆಕೃತಿಗಳೆರಡು ಅಸ್ಫುಟವಾಗಿ ಗೋಚರವಾಗುತ್ತಿವೆ. ದೂರ ನಿಂತು ನೋಡಿದರೆ ನಡೆದು ಬರುವುದು ಒಂದೇ ಆಕೃತಿಯೆಂಬಂತೆ ಭಾಸವಾಗುತ್ತದೆ. ಆ ಕಾಲುದಾರಿಯೂ ತೀರ ಚಿಕ್ಕದು. ಎಡಕ್ಕೂ ಬಲಕ್ಕೂ ಆಳೆತ್ತರ ಬೆಳೆದು ನಿಂತ ಗಿಡಗಂಟೆಗಳು. ಕೊಂಚ ಅತ್ತ ಇತ್ತ ಕಾಲು ಸರಿದರೆ ಮುಳ್ಳು ನಾಟುವಂತಿವೆ. ಒಬ್ಬ ಮನುಷ್ಯ ಮಾತ್ರ ಸಲೀಲವಾಗಿ ನಡೆದು ಬರುವಂಥ ಪುಟ್ಟ ದಾರಿ. ಜಾಗರೂಕತೆಯಿಂದ ನಡೆಯಬೇಕು. ಹೆಜ್ಜೆ ಹೆಜ್ಜೆಗೂ ದೊಡ್ಡ ದೊಡ್ಡ ಕಲ್ಲುಗಳು. ಹಗಲು ಹೊತ್ತಿನಲ್ಲಿ ನಡೆದು ಹೋಗಬೇಕಾದರೂ ದೃಷ್ಟಿ ಯಾವಾಗಲೂ ದಾರಿಯ ಮೇಲೆಯೇ ಇರಬೇಕಾಗುವುದು. ಇನ್ನು ಇಂಥ ರಾತ್ರಿ ಯಲ್ಲಿ, ಮಬ್ಬು ಬೆಳಕಿನಲ್ಲಿ ನಡೆಯಬೇಕಾದರೆ ಮೈಯೆಲ್ಲ ಕಣ್ಣಾಗದೆ ವಿಧಿಯಿಲ್ಲ. ಸುತ್ತಮುತ್ತಲು ಮೈಲಿ ಮೈಲಿಗಳವರೆಗೆ ಹಬ್ಬಿ ಬೆಳೆದ ಭೀಕರ ಕಾಡು. ಕಿರುಬ, ತೋಳ, ಹಾವು ಮೊದಲಾದ ಹಿಂಸ್ರ ಪ್ರಾಣಿಗಳಿಗೇನೂ ಕೊರತೆಯಿಲ್ಲ. ಅಂತೆಯೆ, ಆ ನಿರ್ಜನ ಕಾಡು ಪ್ರದೇಶದಲ್ಲಿ ನಡೆದು ಬರುತ್ತಿರುವ ವ್ಯಕ್ತಿಗಳೆರಡೂ ಒಂದನ್ನೊಂದು ಬಿಗಿಯಾಗಿ

ಹಿಡಿದುಕೊಂಡು ಒಂದೇ ವ್ಯಕ್ತಿಯಂತೆ ಬರುತ್ತಿವೆ. ಆ ವ್ಯಕ್ತಿಗಳಲ್ಲೊಂದು ಗಂಡು, ಇನ್ನೊಂದು ಹೆಣ್ಣು ಎಂಬುದೂ ದೂರದಿಂದ ನೋಡುವವರಿಗೆ ತಿಳಿಯುವಂತಿಲ್ಲ. ಹಾಸಿಗೆ ಸುರುಳಿಯನ್ನು ಬೆನ್ನಿನ ಸುತ್ತಲೂ ಕಟ್ಟಿಕೊಂಡು ಬಲಗೈಯಲ್ಲಿ ದಪ್ಪನೆಯ ಕೋಲೊಂದನ್ನು ಹಿಡಿದಿದೆ ಗಂಡು; ಬೆನ್ನಿಗೆ ಪುಟ್ಟದೊಂದು ಗಂಟನ್ನು ಬಿಗಿದು, ಬಲಗೈಯನ್ನು ಗಂಡಿನ ಶರೀರದ ಸುತ್ತಲೂ ಸೇರಿಸಿ ಬಳಸಿಕೊಂಡು ಬರುತ್ತಿದೆ ಹೆಣ್ಣು. ಧರ್ಮಪುರದಿಂದ ಹೊರಟು ಕಾಡುಪ್ರದೇಶವನ್ನು ಸೇರಿ ನಡೆದು ಬರುತ್ತಿರುವ ಚಂದ್ರಣ್ಣ ಮತ್ತು ರತ್ನರೆ ಅವರು.

''ಬಹಳ ದಣಿವಾಗಿದೆಯೇ ರತ್ನಾ?''

''ಸ್ವಲ್ಪ''

''ಸುಮ್ಮನೆ ಹಾರಿಸಿಬಿಡಬೇಡ ರತ್ನಾ, ನನಗೆ ಗೊತ್ತು. ನೀನು ತುಂಬ ದಣಿದುಕೊಂಡಿದ್ದೀಯ.''

ಆಗಾಗ ರತ್ನಾ ಕೊಂಚ ತಡೆದು ನಿಂತು ಚಂದ್ರಣ್ಣನ ಭುಜದ ಮೇಲೆ ತಲೆಯನ್ನೊರಗಿಸಿ ದಣಿವಾರಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಾಳೆ. ಆತ ತನ್ನ ಎಡಗೈಯಿಂದ ಆಕೆಯ ತಲೆಯನ್ನು ನೇವರಿಸುತ್ತ ಆಕೆಯನ್ನು ಸಂತವಿಸಲು ಪ್ರಯತ್ನಿಸುತ್ತಿದ್ದಾನೆ. ಆಕೆಯ ಬಗೆಗೆ ತುಂಬಿ ಬರುವ ಕನಿಕರದ ಮಧ್ಯೆ ಆತನಿಗೆ ತನ್ನ ದಣಿವೂ ಮರೆತು ಹೋಗುತ್ತಿದೆ. ಧರ್ಮಪುರವನ್ನು ಬಿಟ್ಟ ಬಳಿಕ ಕಾಡುದಾರಿ ಹಿಡಿದು ನಡುವೆ ಎಲ್ಲಿಯೂ ನಿಲ್ಲದೆ, ಸಾಧ್ಯವಾದಷ್ಟು ಬೇಗ ಧರ್ಮಪುರದಿಂದ ದೂರ – ಬಹುದೂರ ಹೋಗಿ ನಿರ್ಜನ ಪ್ರದೇಶಕ್ಕೆ ತಲುಪಬೇಕೆಂಬುದು ಅವರ ವಿಚಾರ. ಅಂತೆಯೆ, ದೊಡ್ಡ ರಸ್ತೆಗಳನ್ನು ಬಿಟ್ಟು ಈ ಕಾಡುದಾರಿಯನ್ನು ಹಿಡಿದು ಬಂದಿದ್ದಾರೆ. ಸುತ್ತಲೂ ಎಂಟು ಹತ್ತು ಮೈಲಿಗಳವರೆಗೆ ವಿಶಾಲವಾದ ಅರಣ್ಯ ಪಸರಿಸಿದೆಯೆಂಬುದನ್ನವರು ಬಲ್ಲರು. ಒಂದೆರಡು ದಿನಗಳವರೆಗಾದರೂ ಆ ಕಾಡುಪ್ರದೇಶದಲ್ಲಿಯೇ ಕಾಲ ಕಳೆಯಬೇಕು, ಪೊಲೀಸಿನವರು ಅಲ್ಲಿಗೆ ಬರುವುದು ಸಾಧ್ಯವಿಲ್ಲ, ರತ್ನಾ ಸುರಕ್ಷಿತವಾಗಿರಬಹುದು – ಎಂದುಕೊಂಡು ಚಂದ್ರಣ್ಣ ಆ ಕಾಡಿಗೆ ಅಡಿಯಿರಿಸಿದ್ದಾನೆ.

ಹಠಾತ್ತಾಗಿ ಕಾಡಿನ ನೀರವತೆಯನ್ನು ಕದಡುವಂಥ ಕರ್ಕಶ ಕೂಗು ಕೇಳಬಂದಿತು. ನಡೆದು ಬರುತ್ತಿದ್ದವರು ಪರಸ್ಪರರನ್ನು ಇನ್ನಷ್ಟು ಬಿಗಿಯಾಗಿ ಬಳಸಿಕೊಂಡು ಒಂದು ಕ್ಷಣ ನಿಂತಲ್ಲಿಯೆ ನಿಂತುಕೊಂಡಿದ್ದರು.

''ಯಾವ ಪ್ರಾಣಿಯ ಕೂಗೋ ಅದು?'' ಎಂದು ಮೆಲ್ಲಗಿನ ಧ್ವನಿಯಲ್ಲಿ ಕೇಳಿದಳು ರತ್ನಾ.

''ಕಿರುಬವೊ ತೋಳವೊ ಕೂಗಿಕೊಳ್ಳುತ್ತಿರಬಹುದು. ಭಯವಾಗುತ್ತಿದೆಯೆ ರತ್ನಾ ನಿನಗೆ?''

''ಇಲ್ಲ... ಕಿರುಬ ತೋಳ ನಮ್ಮನ್ನೇನು ಮಾಡಿಯಾವು? ಹುಲಿಯಾದರೆ ಅಂಜಿಕೆ ಅಷ್ಟೆ''

''ಈ ಕಾಡಿನಲ್ಲಿ ಹುಲಿ ಚಿರತೆ ಯಾವುದೂ ಇಲ್ಲ. ಬರೀ ತೋಳ ಕಿರುಬ ಅಷ್ಟೆ''

''ಹಾಗಿದ್ದರೆ ಯಾವ ಭಯವೂ ಇರಬೇಕಾಗಿಲ್ಲ. ತೋಳ ಕಿರುಬ ಅಂದರೇನು, ನಮ್ಮೂರಿನ ನಾಯಿಗಳಿದ್ದ ಹಾಗೆ ಇದ್ದಾವು.''

''ಅಂದರೆ?''

''ನಮ್ಮ ಊರೂ ಇಂಥ ಗುಡ್ಡಗಾಡು ಸೀಮೆಯಲ್ಲೇ ಇದೆ. ಅಲ್ಲಿಯೂ ತೋಳ ಕಿರುಬ ವಿಪರೀತ. ನಾನು ಸಣ್ಣವಳಾಗಿದ್ದಾಗ ದನ ಕಾಯಲು ಗುಡ್ಡಕ್ಕೆ ಹೋಗುತ್ತಿದ್ದೆ. ಹೊರಳಿ ಬರಬೇಕಾದರೆ ಕತ್ತಲಾಗುತ್ತಿತ್ತು. ನನ್ನ ಕಣ್ಣೆದುರಿಗೇ ಈ ಪ್ರಾಣಿಗಳು ಹಾಯ್ದು ಹೋಗುತ್ತಿದ್ದುವು...''

''ಇಂಥ ಗುಡ್ಡಗಾಡಿನಲ್ಲಿ ಹುಟ್ಟಿ ಬೆಳೆದದ್ದರಿಂದಲೇ ನೀನಿಂಥ ಧೀರೆಯಾದೆ ಯೆಂದು ತೋರುತ್ತೆ.''

''ಇರಬಹುದು. ನಮ್ಮ ಮನೆತನದ ರಕ್ತವೇ ಅಂಥದೆಂದರೂ ಚಿಂತೆಯಿಲ್ಲ. ಹೂಂ. ನೀವು ಎಲ್ಲಿರೀ ಹುಟ್ಟಿದ್ದು?''

''ನಾನೂ ನಿಮ್ಮೂರಿನಂಥ ಹಳ್ಳಿಯಲ್ಲೇ ಹುಟ್ಟಿದೆ.''

''ರೈತರಲ್ಲಿ?''

''ಹೌದು.''

''ಸಣ್ಣವರಿದ್ದಾಗ ನೀವೂ ಇಂಥ ಗುಡ್ಡಗಾಡಿನಲ್ಲಿ ತಿರುಗಿರಬಹುದಲ್ಲ?''

''ಎಷ್ಟೋ ಸಲ. ಆಗಾಗ ಗುಡ್ಡಗಳಲ್ಲೇ ರಾತ್ರಿ ರಾತ್ರಿ ಕಳೆದದ್ದುಂಟು.''

''ಗುಡ್ಡಗಳಲ್ಲಿ? ಅದೇಕೆ?''

''ಮಸಾರಿ ಭೂಮಿಗಳಲ್ಲಿ ಬೆಳೆ ಕಾಯಲು.''

''ಅಂದರೆ? ನಿಮಗೂ ಅದೆಲ್ಲ ಗೊತ್ತಿದೆ ಅನ್ನಿರಿ ಹಾಗಾದರೆ. ಹೊಲದಲ್ಲಿ ದುಡಿಯಲೂ ಬರುತ್ತದೆಯೇ ನಿಮಗೆ?''

ಚಂದ್ರಣ್ಣ ನಗುತ್ತ ನುಡಿದ : ''ಅದೇನು ದೊಡ್ಡದೇ ರತ್ನಾ! ರೈತರಲ್ಲಿ ಹುಟ್ಟಿದ ಬಳಿಕ ರೈತರ ಕೆಲಸ ಬಾರದಿರುತ್ತದೆಯೇ?''

''ಇಷ್ಟು ವರ್ಷಗಳವರೆಗೆ ಪಟ್ಟಣಗಳಲ್ಲಿದ್ದು ಅದೆಲ್ಲಾ ಮರೆತುಹೋಗಿರ ಬಹುದೋ ಏನೊ.''

''ರೂಢಿ ತಪ್ಪಿದಂತಾಗಿದೆ, ನಿಜ. ಆದರೇನು, ಒಮ್ಮೆ ಕಲಿತ ವಿದ್ಯೆ ಪೂರ್ಣವಾಗಿ ಅಳಿಸಿಹೋಗುವುದಿಲ್ಲ. ಒಮ್ಮೆ ಈಜು ಕಲಿತರೆ ಸಾಕು, ಅನಂತರ ಹತ್ತಿಪ್ಪತ್ತು ವರ್ಷ ಈಜುವ ಪ್ರಸಂಗ ಬರದಿದ್ದರೂ ಒಮ್ಮೆ ಅಕಸ್ಮಾತ್ತಾಗಿ ನೀರಿಗೆ ಬಿದ್ದಾಗ ಮನುಷ್ಯ ಈಜಾಡುವುದಿಲ್ಲವೆ? ಹಾಗೆಯೆ ಎಲ್ಲ ವಿದ್ಯೆಗಳೂ – ಹೌದೇ ರತ್ನಾ, ನಿನಗೆ ಈಜಲು ಬರುತ್ತದೆಯೆ?''

''ಓಹ್ಹೊ, ಬರುತ್ತೆ. ಚಿಕ್ಕವಳಿದ್ದಾಗ ನಮ್ಮೂರಿನ ಹಳ್ಳದಲ್ಲಿ ಎಮ್ಮೆಗಳ ಮೈ ತೊಳೆಯುವಾಗ ಕಲಿತುಕೊಂಡೆ.''

''ಹಳ್ಳಿಯ ಬದುಕು ಎಷ್ಟು ಚೆಲುವಾದ್ದು ರತ್ನಾ. ಅಂಥ ಸೊಗಸು ಪಟ್ಟಣದಲ್ಲಿ ಎಲ್ಲಿಂದ ಬಂದೀತು!''

''ನಿಜ ನೀವು ಹೇಳೋದು. ನಮ್ಮ ಹಳ್ಳಿಯ ನೆನಪಾದಾಗಲೆಲ್ಲ ನನಗೆ ಕಣ್ಣೀರು ಬರುತ್ತದೆ. ಅದರ ಬಗ್ಗೆ ಅಷ್ಟು ಪ್ರೀತಿ ನನಗೆ.''

''ಅದನ್ನೇಕೆ ಬಿಟ್ಟು ಬಂದಿರೊ. ಅಲ್ಲೆ ಇದ್ದಿದ್ದರೆ ಚೆನ್ನಾಗುತ್ತಿತ್ತು.''

''ಹೌದು, ಬಹಳ ಚೆನ್ನಾಗುತ್ತಿತ್ತು. ಆದರೇನು ಮಾಡೋದು. ನಾವಲ್ಲಿ ಇರುವ ಹಾಗೇ ಇರಲಿಲ್ಲ. ಇರಲು ಒಂದು ಮನೆಯೂ ಇಲ್ಲವಾದ ಬಳಿಕ ಅಲ್ಲಿದ್ದು ಉಪಯೋಗವಾದರೂ ಏನು? ಅಂತೆಯೆ ಈ ಗಿರಣಿಯ ಜಂಜಾಟಕ್ಕೆ ಬಂದು ಬಿದ್ದೆವು. ಹಳ್ಳಿಯಲ್ಲಿ ಬದುಕಲು ಸಾಧ್ಯವಿದ್ದಿದ್ದರೆ ನಾವೇಕೆ ಈ ಹಾಳು ಕೆಲಸಕ್ಕೆ ಬರುತ್ತಿದ್ದೆವು?''

''ಭೂಮಿಯೆಲ್ಲ ದುಡಿಯುವವರದಾಗಬೇಕು. ಅದರ ಮೇಲೆ ವ್ಯಕ್ತಿಗಳ ಒಡೆತನಕ್ಕೆ ಆಸ್ಪದವಿರಕೂಡದು. ಎಲ್ಲರೂ ಬೆವರಿಳಿಸಿ ದುಡಿದು ತಿನ್ನಬೇಕು. ಎಲ್ಲರೂ ಸುಖವಾಗಿರಬೇಕು, ಅಂಥ ಕಾಲ ಬಂದರೆ ನಮ್ಮ ಹಳ್ಳಿಗರಿಗೆಲ್ಲ ಎಂಥ ಸಂತೋಷ ವಾದೀತು ರತ್ನಾ!''

''ಸ್ವರ್ಗವೇ ಅವರ ನಡುವೆ ಬಂದಂತಾಯಿತು. ಅಂಥ ದಿನ ಬಂದೀತೇ?''

''ಬರದೆ ಎಲ್ಲಿ ಹೋಗುತ್ತೆ ರತ್ನಾ, ಇನ್ನು ಕೆಲವು ವರ್ಷಗಳಲ್ಲೇ ಆ ಕಾಲ ಬಂದೇ ಬರುವುದೆಂಬ ನಂಬಿಕೆ ನನಗಿದೆ. ಶಂಕರನಂಥ ಧ್ಯೇಯವಾದಿ ಯುವಕರು, ದುರುಗಪ್ಪನಂಥ ನಿಷ್ಠಾವಂತ ಕೆಲಸಗಾರರು, ಇಬ್ರಾಹೀಮ್ ನಾಗೋಜಿಯಂಥ ಕಳಕಳಿಯ ಕಾರ್ಯಕರ್ತರು, ನಾಗಮ್ಮನಂಥ ಪ್ರಾಮಾಣಿಕ ಜೀವ, ಸಾವಿತ್ರಿಯಂಥ ನೊಂದ ಮಹಿಳೆ, ನಿನ್ನಂಥ ಸರೋಜಳಂಥ ಆದರ್ಶವಾದಿ ಯುವತಿಯರು, ನಿಮ್ಮಂಥ ಲಕ್ಷಾವಧಿ ತರುಣ ತರುಣಿಯರು ಅದಕ್ಕಾಗಿಯೆ ಹಗಲಿರುಳು ದುಡಿಯುತ್ತಿರುವಾಗ ಆ ದಿನ ಬರದಿರುತ್ತದೆಯೆ? ಹಿಂದೂಸ್ಥಾನದಲ್ಲೆಲ್ಲ ಕ್ರಾಂತಿಯ ಬಿರುಗಾಳಿ ಬೀಸುತ್ತಿದೆ. ಪಟ್ಟಣಗಳಲ್ಲೂ ಅಷ್ಟೆ ಹಳ್ಳಿಗಳಲ್ಲೂ ಅಷ್ಟೆ ಎಲ್ಲ ಕಡೆಗೂ ಬಡವರ ಬಳಗ ಕ್ರಾಂತಿಯ ಕಡೆಗೆ ಆಶಾಪೂರ್ಣ ದೃಷ್ಟಿಯಿಂದ ನಿರುಕಿಸುತ್ತಿದೆ. ಅದಕ್ಕಾಗಿ ಹೋರಾಡುತ್ತಿದೆ. ಇನ್ನು ಬರದೆ ಇರುವುದೇ ಕ್ರಾಂತಿ? ಖಂಡಿತ ಬರುತ್ತದೆ. ಬಡವರ ಒಡಲಿನ ಜ್ವಾಲಾಮುಖಿ ಸ್ಫೋಟಗೊಂಡು ವಿಷಮತೆಯನ್ನೆಲ್ಲ ಸುಟ್ಟು ಹುಡಿಗೂಡಿಸುತ್ತದೆ. ಆ ಹುಡಿಯ ಮೇಲೆ ಸಮತೆಯ ಕಟ್ಟಡ ಎದ್ದು ನಿಲ್ಲುತ್ತದೆ...''

''ಎಂದು ಬರುವುದೋ ಆ ದಿನ!''

ಅತ್ತ ಹೊರಳಿ, ಇತ್ತ ತಿರುಗಿ, ಪೊದೆಗಳ ನಡುವೆ, ಕಲ್ಲು ಬಂಡೆಗಳ ಮೇಲೆ ಹಾಯ್ದು ಕಾಲುದಾರಿ ನಡೆದಿತ್ತು. ಮೆಲ್ಲ ಮೆಲ್ಲನೆ ಹೆಜ್ಜೆ ಹಾಕುತ್ತ ಅವರಿಬ್ಬರೂ ಬರುತ್ತಿದ್ದರು. ಕಾಡಿನ ಮಧ್ಯಭಾಗವನ್ನು ಹಿಂದೆ ಹಾಕಿ ಒಂದು ಓರೆಗೆ ಬಂದಹಾಗಿತ್ತು ದಾರಿ. ಒಂದೆರಡು ನಿಮಿಷ ನಿಂತುಕೊಂಡು ಅವರು ಸುತ್ತುಮುತ್ತಲು ದೃಷ್ಟಿ ಹೊರಳಿಸಿದರು. ಎದುರಿಗೆ ಎತ್ತರವಾದ ಮಲೆಗಳು ಸುದೂರದವರೆಗೂ ಭುಜಗಳನ್ನು ಚಾಚಿ ಮುಗಿಲಿಗೆ ಮುತ್ತು ಕೊಡುವ ಭಂಗಿಯಲ್ಲಿ ನಿಂತಿದ್ದುವು. ಅವರು ನಿಂತು ಕೊಂಡಿದ್ದ ಸ್ಥಳದಿಂದ ಕೆಳಗಡೆ ನೂರಾರು ಅಡಿಗಳವರೆಗೂ ಕೊಳ್ಳವೊಂದು ರುದ್ರ ರಮಣೀಯವಾಗಿ ಮೆರೆಯುತ್ತಿತ್ತು. ಅದರಾಚೆ ಮತ್ತೆ ಗುಡ್ಡಗಳ ಗುಂಪು. ಕೊಳ್ಳದ ನಡುವೆ ಹರಿದು ಹೋಗುತ್ತಿದ್ದ ಪುಟ್ಟ ಹಳ್ಳವೊಂದನ್ನು ತಿಂಗಳ ಬೆಳಕು ಅಸ್ಪಷ್ಟವಾಗಿ

ತೋರಿಸುತ್ತಿತ್ತು.

ರತ್ನಾ ಕೆಲಹೊತ್ತು ಮೌನವಾಗಿ ಆ ಕೊಳ್ಳವನ್ನೆ ನಿರುಕಿಸುತ್ತಲಿದ್ದು ಉದ್ಗಾರ ತೆಗೆದಳು : ''ಆಹ್ಹಾ ಎಂಥ ಚೆಲುವು! ಎಂಥ ಚೆಲುವು!''

''ಹೌದು ತುಂಬ ಚೆಲುವು. ಈ ಬೆಳದಿಂಗಳಲ್ಲಿ ಇನ್ನೂ ಚೆಲುವು. ಇಲ್ಲೇ ಕೊಂಚ ಕೂತಿರೋಣವೇ ರತ್ನಾ? ಸ್ವಲ್ಪ ವಿರಮಿಸಿಕೊಂಡು ಮತ್ತೆ ನಡೆದರಾಯಿತು.''

ಪರಸ್ಪರರನ್ನು ಬಳಸಿಕೊಂಡಿದ್ದ ಹಾಗೇ ಇಬ್ಬರೂ ಕುಳಿತುಕೊಂಡರು. ಮುಗಿಲಿನ ಪಶ್ಚಿಮ ದಿಸೆಯಲ್ಲಿ ಚಂದ್ರ ಮನೋಹರವಾಗಿ ಬೆಳಗುತ್ತಲಿದ್ದ. ಆತನಿಗೆ ತೀರ ಹತ್ತಿರದಲ್ಲಿ ಮಿನುಗುತ್ತಿದ್ದ ಉಜ್ವಲ ತಾರೆಯೊಂದನ್ನು ನಟ್ಟ ದಿಟ್ಟಿಯಿಂದ ನಿರುಕಿಸುತ್ತ ರತ್ನಾ ಕೇಳಿದಳು :

''ಚಂದ್ರನ ಕೆಳಗಡೆ ಥಳಥಳ ಹೊಳೆಯುತ್ತಿದೆಯಲ್ಲ, ಬೇರಾವ ತಾರೆಗಳಿಗೂ ಆದರ ಹೊಳಪಿಲ್ಲ ಕಂಡಿರಾ? ಅದಾವ ತಾರೆ ಗೊತ್ತಿದೆಯೇ ನಿಮಗೆ?''

''ರೋಹಿಣಿ ಎಂದು ಯಾರೋ ಹೇಳಿದ್ದನ್ನು ಕೇಳಿದ್ದೇನೆ. ನನಗೂ ಸರಿಯಾಗಿ ತಿಳಿಯದು. ಹೆಸರು ಯಾವುದಾದರೇನು, ಅದರ ತೇಜಸ್ಸು ಮುಖ್ಯವಲ್ಲವೆ? ಚಂದ್ರನಿಗೆ ಸರಿಯಾದ ಜೊತೆಯಲ್ಲವೇ ರತ್ನಾ ಅದು?''

ಬೆನ್ನಿಗಿದ್ದ ಗಂಟನ್ನು ಬಿಚ್ಚಿ ಬದಿಗಿರಿಸಿ ರತ್ನಾ ಆತನ ಭುಜಕ್ಕೊರಗಿ ಕುಳಿತು ಕೊಂಡಳು. ಧರ್ಮಪುರದಿಂದ ಇಲ್ಲಿಗೆ ಬರುವುದರೊಳಗಾಗಿ ಆತ ಆತ್ಮೀಯ ನಂತಾಗಿದ್ದ ರತ್ನಾಗೆ. ಆತ ಪರಪುರುಷನೆಂದು ಆಕೆಗನ್ನಿಸುತ್ತಲೇ ಇರಲಿಲ್ಲ. ಹಲವಾರು ವರ್ಷಗಳಿಂದ ಆತನಿಗೂ ತನಗೂ ತೀರ ನಿಕಟ ಸಂಬಂಧವಿದ್ದ ಹಾಗೆ ತೋರುತ್ತಿತ್ತು ಆಕೆಗೆ.

ಚಂದ್ರಣ್ಣನೂ ತನ್ನ ಬೆನ್ನಿಗಿದ್ದ ಹಾಸಿಗೆ ಸುರುಳಿಯನ್ನು ಬಿಚ್ಚಿ ನೆಲದ ಮೇಲೆ ಬಿಡಿಸಿ – ''ಬಹಳ ದಣಿದಿದ್ದೀಯ ಕೊಂಚ ಮಲಗಿಕೋ ರತ್ನಾ'' ಎಂದ.

''ಇಂಥ ಸ್ಥಳದಲ್ಲಿ?''

''ಏನಾಗುತ್ತೆ ಮಲಗಿದರೆ?''

''ನಿದ್ದೆಯೇ ಬರಲೊಲ್ಲದು.''

ಚಂದ್ರಣ್ಣ ಆಕೆಯನ್ನು ಹತ್ತಿರ ಸೆಳೆದುಕೊಂಡು ಕೊಂಚ ಬಲವಂತದಿಂದಲೇ ಹಾಸಿಗೆಯ ಮೇಲೆ ಮಲಗಿಸಿದ. ಕಂಬಳಿಯನ್ನು ಆಕೆಯ ಕೊರಳಿನವರೆಗೂ ಹೊದೆಯಿಸಿ ಅವಳ ತಲೆಗೂದಲುಗಳ ಮೇಲೆ ಮೃದುವಾಗಿ ಕೈಯನ್ನಾಡಿಸುತ್ತ ಕೇಳಿದ : ''ನಿದ್ರೆ ಬರಲಾರದೇ ರತ್ನಾ?''

''ಹೇಗೆ ಬಂದೀತು. ಇಂಥ ಚೆಲುವಾದ ಸೃಷ್ಟಿ ಎದುರಿಗಿರುವಾಗ?''

ರತ್ನಳ ಮಾತು ಅಕ್ಷರಶಃ ಸತ್ಯವಾದುದಾಗಿತ್ತು. ಕೆಳಗಡೆ ಪಸರಿಸಿದ್ದ ಆ ಕಡಿದಾದ ಕೊಳ್ಳ, ಅದರ ಪಾತಾಳದಲ್ಲಿ ಹೊಳೆಯುತ್ತ ಹರಿಯುತ್ತಿದ್ದ ಪುಟ್ಟ ಹಳ್ಳ, ಸುತ್ತಮುತ್ತಲೂ ಬೆಡಗಿನಿಂದ ತಲೆಯೆತ್ತಿ ನಿಂತ ಬೆಟ್ಟಗಳ ಬಳಗ, ಅಕ್ಕಪಕ್ಕದ ನಿಬಿಡ ವನಶ್ರೀ, ಅದರ ಚೆಲುವನ್ನು ತನ್ನ ಹಾಲುಗಿರಣಗಳಿಂದ ಬೆಳಗಿಸುತ್ತ ನಿಂತ ಅರ್ಧ ಚಂದ್ರ, ಆತನ ಹತ್ತಿರ ಥಕಥಕನೆ ಹೊಳೆಯುತ್ತಲಿದ್ದ ಆ ರೋಹಿಣಿ, ಸುತ್ತಮುತ್ತಲೂ ಸೂರೆಯಾಗಿದ್ದ ಲಕ್ಷೋಪಲಕ್ಷ ತಾರೆಗಳ ಬಳಗ, ಆ ತಾರಾ ಚಂದ್ರರೊಂದಿಗೆ ಕಣ್ಣು ಮುಚ್ಚಾಲೆಯಾಡುತ್ತ ಎಡತಾಕುತ್ತಿದ್ದ ಬಿಳಿಯ ಮೋಡಗಳ ಹಿಂಡು, ಆ ಶಾಂತ ಸುಂದರ ಮೌನಮಯ ವಾತಾವರಣ! ಎಷ್ಟು ನೋಡಿದರೂ ತೃಪ್ತಿಯಾಗದು. ಮನಸ್ಸು ತಣಿಯದು. ದೃಷ್ಟಿ ದಣಿಯದು. ಧರ್ಮಪುರದಲ್ಲಿ ಅಂದು ಜರುಗಿದ ಆ ಭೀಕರ ಘಟನೆಗಳು, ಬಂಗಲೆಯಲ್ಲಿನ ಆ ದುರಂತ, ಅಲ್ಲಿಂದ ಪಲಾಯನ ಎಲ್ಲವೂ ಮರೆಯಾಗಿದ್ದಿತು ರತ್ನಳ ನೆನಪಿನಿಂದ. ತಾನು ಗಾಜಿನ ಲೋಟದಿಂದ ಏಟು ಹಾಕುತ್ತಲೂ 'ಹಾ' ಎಂದು ಕೂಗಿ ನೆಲಕ್ಕುರುಳಿ ಕಣ್ಣುಗಳನ್ನು ಗರಗರನೆ ತಿರುಗಿಸಿದ ಸದಾಶಿವಪ್ಪನ ಆ ರಕ್ತರಂಜಿತ ಮುಖವನ್ನು ಮರೆಯಲು ರತ್ನಾ ಬಗೆ ಬಗೆಯಾಗಿ ಯತ್ನಿಸುತ್ತ ಬಂದಿದ್ದಳು. ಧರ್ಮಪುರದಿಂದ ಹೊರಟು ಇಲ್ಲಿಗೆ ಬರುವವರೆಗೂ ಆ ವಿಷಯವನ್ನು ಕುರಿತು ಒಂದು ಮಾತನ್ನೂ ಆಡಿರಲಿಲ್ಲ ಆಕೆ. ಚಂದ್ರಣ್ಣನೂ ಆ ಬಗೆಗೆ ಧ್ವನಿಯೆತ್ತಿರಲಿಲ್ಲ, ಆ ವಿಷಯ ಹೊರಡುತ್ತಲೂ ರತ್ನಳ ಅವಸ್ಥೆ ವಿಚಿತ್ರವಾಗುವುದೆಂಬುದು ಗೊತ್ತಿದ್ದಿತಾದುದರಿಂದ ಆತ ಬೇರೆ ವಿಷಯಗಳಲ್ಲಿ ಆಕೆಯ ಚಿತ್ತವನ್ನು ತೊಡಕಿಸಿಡಲು ಯತ್ನಿಸುತ್ತ ಬಂದಿದ್ದ, ಆತನ ಪ್ರಯತ್ನವೂ ಫಲಿಸತೊಡಗಿದ್ದಿತು. ನಿಸರ್ಗದ ಸಹಜ ರಮಣೀಯತೆಯ ನಡುವೆ ರತ್ನಾ ತನ್ನನ್ನು ತಾನೆ ಮರೆತುಬಿಟ್ಟಿದ್ದಳು. ಆಹ್ಲಾದದಿಂದ ಅರಳಿದಂತಿದ್ದ ಆಕೆಯ ಕಣ್ಣಬೊಂಬೆಗಳು ಒಮ್ಮೆ ಅತ್ತ, ಒಮ್ಮೆ ಇತ್ತ ಹೊರಳಿ ಹೊರಗಣ ಚೆಲುವನ್ನೆಲ್ಲ ಹೀರಿಕೊಳ್ಳಲು ಹಾರೈಸುತ್ತಿದ್ದುವು.

''ರೀಽಽ''

ಚಂದ್ರಣ್ಣ ಕೌತುಕದಿಂದ ಆಕೆಯ ಮುಖ ನೋಡಿದ. ತನ್ನನ್ನು ''ರೀಽಽ'' ಎಂದು ರತ್ನಾ ಕರೆದುದು ಅದೇ ಮೊದಲ ಸಲ. ಧರ್ಮಪುರದಲ್ಲಿದ್ದಾಗ ತನ್ನನ್ನು ಹೆಸರೆತ್ತಿ ಕರೆಯಲು ಆಕೆಗೆ ಯಾವ ಸಂಕೋಚವೂ ಆಗುತ್ತಿರಲಿಲ್ಲ. ಈ ಒಂದು ರಾತ್ರಿ ಯಲ್ಲೇ ಆ ವಿಲಕ್ಷಣ – ಆದರೂ ತನಗೆ ಪ್ರಿಯವಾದ ಸಂಕೋಚ ಬಂದು ಬಿಟ್ಟಿತ್ತೇ ಅವಳಲ್ಲಿ!

''ರೀಽಽ''

''ಏನು ರತ್ನಾ?''

''ಇಂಥ ಸಂದರ್ಭದಲ್ಲಿ ನಾವಿಬ್ಬರೂ ಹೀಗೆ ಒಟ್ಟುಗೂಡಬಹುದೆಂದು ಯಾರು ತಿಳಿದಿದ್ದರು?''

''ನಾನು ತಿಳಿದಿದ್ದೆ.''

ರತ್ನಾ ಕೌತುಕದಿಂದ ಆತನ ಮುಖವನ್ನು ದಿಟ್ಟಿಸುತ್ತ – ''ಹೌದೇ? ನಿಮಗೆ ಹಾಗನ್ನಿಸಿತ್ತೇ? ಯಾವಾಗ?'' ಎಂದು ಕೇಳಿದಳು.

''ನಾನು ನೀನು ಮೊದಲ ಬಾರಿ ಭೆಟ್ಟಿಯಾದಾಗ. ನಿನಗೆ ನೆನಪಿದೆಯೇ ರತ್ನಾ ಆ ಸಂದರ್ಭ? ನಿಮ್ಮ ತಾಯಿಯೊಂದಿಗೆ ನಾನು ನಿಮ್ಮ ಮನೆಗೆ ಬಂದಿದ್ದೆನಲ್ಲ?''

''ನೆನಪಿರದೇನು? ಅಂದು ನಡೆದ ಮಾತುಕತೆ, ನೀವು ನಮ್ಮ ಮನೆಯಲ್ಲಿ ಕುಳಿತು ಊಟ ಮಾಡಿದ್ದು ನಾನು ಎದುರಿಗೆ ಕುಳಿತು ನಿಮಗೆ ಬಡಿಸಿದ್ದು ನಗುನಗುತ್ತ ನೀವೂ ಊಟ ಮಾಡಿದ್ದು – ಎಲ್ಲಾ ಎಲ್ಲಾ ನೆನಪಿದೆ. ನಿನ್ನೆಯೊ ಮೊನ್ನೆಯೊ ನಡೆದ ಹಾಗಿದೆ ಅದೆಲ್ಲಾ.''

''ನನಗೂ ಅಷ್ಟೆ ಅಂದು ನಿನ್ನನ್ನು ಕಂಡೊಡನೆ ನನ್ನ ಬಾಳಿನಲ್ಲಿ ಹೊಸ ಬೆಳಕೊಂದು ಸೇರಿದಂತಾಯಿತು. ನಿನ್ನ ಆ ದೊಡ್ಡ ದೊಡ್ಡ ಕಣ್ಣುಗಳಲ್ಲಿನ ಸರಲತೆ ಯನ್ನೂ ಗಾಂಭೀರ್ಯವನ್ನೂ ಗುರುತಿಸಿದಾಗ ಹೃದಯ ಆನಂದದಿಂದ ನಲಿಯಿತು. ನೀನು ನನ್ನ ಜೊತೆಗಾತಿಯಾಗುವಂತಾದರೆ ಎಷ್ಟು ಚೆನ್ನಾದೀತು ಎಂದು ಅಂದಿನಿಂದಲೂ ಮನಸ್ಸು ಹಾರೈಸತೊಡಗಿತು. ಎಂಥ ಆಶ್ಚರ್ಯ ಎನ್ನುವೆ! ಒಂದಿಲ್ಲೊಂದು ದಿನ ನೀನು ನನ್ನವಳಾಗಿಯೆ ಆಗುವಿಯೆಂಬ ನಂಬಿಕೆಯೂ ಆಗಲೆ ನನ್ನಲ್ಲಿ ಮೂಡಿತ್ತು.''

ಆ ಮಾತುಗಳು ಕಿವಿಗೆ ಬೀಳುತ್ತಲೂ ರತ್ನಾ ಸಂಕೋಚದಿಂದ ಕಣ್ಣುಗಳನ್ನು

ಮುಚ್ಚಿಕೊಂಡಳು. ಆದರೆ ಆಕೆಯ ಹೃದಯದಲ್ಲಿ ತುಂಬಿ ಬಂದ ಹರುಷ ಆಕೆಯ ಮುಖಮಂಡಲದಲ್ಲಿ ಮೂಡದಿರಲಿಲ್ಲ. ಅವಳ ತುಟಿಗಳ ಮೇಲೆ ಅರಳಿದ ಸಂತೋಷದ ನಗೆ ಹೂವನ್ನು ಚಂದ್ರಣ್ಣ ಗುರುತಿಸದಿರಲಿಲ್ಲ. ಆಕೆಯ ಕೆನ್ನೆಗಳನ್ನು ಎರಡು ಕೈಗಳಿಂದ ತೀಡುತ್ತ, ಪ್ರೀತಿಯಿಂದ ನಡುಗುವ ಸ್ವರದಲ್ಲಿ ಆತನೆಂದ : ''ರತ್ನಾ...''

ಆಕೆ ಕಣ್ಣುಗಳನ್ನು ಅರ್ಧ ತೆರೆದು ಪ್ರಣಯ ಭಾವದಿಂದ ಬಳುಕುವ ತೇಲು ನೋಟವನ್ನು ಆತನ ಮುಖದ ಮೇಲೆ ಹರಿಬಿಟ್ಟು ಮೌನವಾಗಿ ಒರಗಿಕೊಂಡಿದ್ದಳು.

''ರತ್ನಾ, ನನ್ನ ರತ್ನಾ, ಮಾತನಾಡು. ನೀನು ನನ್ನವಳಲ್ಲವೆ?''

ಆಗಲೂ ಆಕೆ ಮಾತನಾಡಲಿಲ್ಲ. ಮಾತನಾಡುವ ಅಗತ್ಯವೂ ಇರಲಿಲ್ಲವೇನೊ.

ಹಾಸಿಗೆಯ ಮೇಲೊರಗಿದ್ದ ಆಕೆಯ ತಲೆಯನ್ನೆತ್ತಿ ಚಂದ್ರಣ್ಣ ಅದನ್ನು ತನ್ನ ತೊಡೆಯ ಮೇಲೆ ಮಲಗಿಸಿಕೊಂಡ. ಆತನಿಗೆ ತಿಳಿಯದಂತೆಯೇ ಆತನ ತೋಳುಗಳು ಆಕೆಯ ಶರೀರದ ಸುತ್ತ ಹೆಣೆದುಕೊಂಡವು. ಆಕೆಯ ಮುಖಕ್ಕೆ ತೀರ ಹತ್ತಿರ ತನ್ನ ಮುಖವನ್ನೊಯ್ದು ಆತನೆಂದ :

''ಹೇಳು ರತ್ನಾ, ನೀನು ನನ್ನವಳಲ್ಲವೆ?''

ಹಠಾತ್ತಾಗಿ ಆಕೆಯ ತುಟಿಗಳ ಮೇಲಿನ ನಗೆ ಹೂ ಮಾಯವಾಯಿತು. ಬಿರುಗಾಳಿಗೆ ಸಿಕ್ಕ ಗರಿಗಳ ಹಾಗೆ ಆಕೆಯ ತುಟಿಗಳೆರಡೂ ಕಂಪಿಸತೊಡಗಿದವು. ಆಕೆ ಬಿಕ್ಕಿ ಬಿಕ್ಕಿ ಅಳತೊಡಗಿದಳು.

ಚಂದ್ರಣ್ಣ ವಿಹ್ವಲತೆಯಿಂದ ಆಕೆಯ ತಲೆಗೂದಲಿನ ಮೇಲೆ ಕೈಯನ್ನಾಡಿಸುತ್ತ – ''ಏಕೆ ರತ್ನಾ? ಅಳುವಿಯೇಕೆ? ಏನಾಯಿತು ನಿನಗೆ ಇದ್ದಕ್ಕಿದ್ದಂತೆ?'' ಎಂದ.

ಬಿಕ್ಕುತ್ತ ಬಿಕ್ಕುತ್ತ ಆಕೆಯೆಂದಳು : ''ಅಯ್ಯೋ, ಎಂಥ ದುರ್ದೈವಿ ನಾನು!''

ತನ್ನ ಧೋತರದ ಕೊನೆಯಿಂದ ಆಕೆಯ ಕಂಬನಿಗಳನ್ನೊರಸುತ್ತ ಆತ ಕೇಳಿದ : ''ಏಕೆ ರತ್ನಾ? ದುರ್ದೈವಿಯಾಗಲು ನಿನಗಾದುದೇನು? ಎಂಥ ಹುಚ್ಚು ಹುಚ್ಚು ಮಾತನಾಡುತ್ತೀಯೆ?''

''ನನ್ನ ಇತಿಹಾಸವೆಲ್ಲ ನಿಮಗೆ ತಿಳಿಯದು. ಅಂತೆಯೆ ಹೀಗೆ ಮಾತನಾಡುತ್ತೀರಿ... ಅದು ತಿಳಿದಾಗ...''

''ಇತಿಹಾಸ! ಎಂಥ ಇತಿಹಾಸ?''

''ನನ್ನ ಬಾಳಿನ ಇತಿಹಾಸ. ನನ್ನ ದುರ್ದೈವದ ಇತಿಹಾಸ. ವಿಚಿತ್ರ ಬಾಳು ನನ್ನದು. ನನ್ನಂಥ ನಿರ್ಭಾಗ್ಯೆಯನ್ನು ನಿಮ್ಮವಳನ್ನಾಗಿ ಮಾಡಿಕೊಳ್ಳಲು ಏಕೆ ಬಯಸುತ್ತೀರಿ?'' ಎಂದು ನುಡಿದು ಆಕೆ ಮತ್ತೆ ಬಿಕ್ಕತೊಡಗಿದಳು.

''ಶ್ಯೂ! ಶ್ಯೂ! ಮತ್ತೆ ಅಳುವೆ? ಸುಮ್ಮನಾಗು ರತ್ನಾ. ಏತಕ್ಕಾಗಿ ಅಳುತ್ತಿರುವೆಯೋ ಏನೊ. ಏನು ದುಃಖ ಹೇಳಬಾರದೇ? ನೀನು ನನ್ನವಳಾಗಲು ಯಾವ ಆತಂಕವುಂಟು?''

''ನಾನಿನ್ನು ಯಾರವಳು ಆಗುವಂತಿಲ್ಲ. ಆ ಭಾಗ್ಯ ನನ್ನ ಹಣೆಯಲ್ಲಿ ಬರೆದಿಲ್ಲ.''

''ಇಷ್ಟೆಲ್ಲ ಪುಸ್ತಕ ಓದಿ ಇಷ್ಟೆಲ್ಲ ತಿಳಿದುಕೊಂಡು ಇಷ್ಟು ದಿನ ಕಮ್ಯೂನಿಸ್ಟರ ಸಹವಾಸದಲ್ಲಿದ್ದರೂ ಇನ್ನೂ ಈ ಭಾಗ್ಯ ಈ ಹಣೆಬರಹಗಳ ಹುಚ್ಚು ಬಿಟ್ಟಿಲ್ಲವಲ್ಲ ನೀನು? ಅದೆಲ್ಲ ಅಜ್ಜಿಗಳ ಕತೆ. ನಿನ್ನ ದುಃಖವೇನೆಂಬುದನ್ನು ಹೇಳು. ಸುಲಭವಾಗಿ ದೂರಗೊಳಿಸಬಲ್ಲೆ ನಾನದನ್ನು.''

''ಇಲ್ಲ, ಅಷ್ಟು ಸುಲಭವಲ್ಲ ಆ ವಿಷಯ. ನಾನು! ನಿಮ್ಮ ಕೈಹಿಡಿಯುವ ಅಧಿಕಾರವಿಲ್ಲ ನನಗೆ. ಅದನ್ನೆಂದೋ ಕಳೆದುಕೊಂಡು ಬಿಟ್ಟಿದ್ದೇನೆ.''

''ಅಧಿಕಾರ? ಎಂಥ ಅಧಿಕಾರ?''

''ಈ ದೇಹ ನನ್ನದಲ್ಲ, ಎಂದೋ ಅದು ಇನ್ನೊಬ್ಬರದಾಗಿ ಹೋಗಿದೆ. ನಿಮಗೆ ಗೊತ್ತಿಲ್ಲವೆ? ನನಗೆ... ನನಗೆ ಮದುವೆಯಾಗಿದೆ. ನನ್ನ ಗಂಡನೂ ಬದುಕಿದ್ದಾನೆ'' ಎಂದು ನುಡಿದು ರತ್ನಾ ತನ್ನ ಮುಖವನ್ನು ಚಂದ್ರಣ್ಣನ ಮುಖದೆಡೆಗೆ ಹೊರಳಿಸಿ ಆತನನ್ನು ಕಳವಳದಿಂದ ದಿಟ್ಟಿಸತೊಡಗಿದಳು.

ಒಂದು ಕ್ಷಣ ಮೌನವಾಗಿ ಕುಳಿತಿದ್ದ ಚಂದ್ರಣ್ಣ. ರತ್ನಳಿಗೆ ಮದುವೆಯಾಗಿದೆ, ಆಕೆಯ ಗಂಡನೂ ಬದುಕಿದ್ದಾನೆ! ಆತನಿಗೆ ಈ ವಿಷಯ ತೀರ ಹೊಸದು. ಆಕೆ ವಿವಾಹಿತೆಯಾಗಿರಬಹುದೆಂಬ ವಿಚಾರ ಇದುವರೆಗೆ ಆತನ ಕನಸು ಮನಸಿನಲ್ಲೂ ಸುಳಿದಿರಲಿಲ್ಲ. ಸೋಮಣ್ಣನೂ ಈ ವಿಷಯವಾಗಿ ಏನನ್ನೂ ಹೇಳಿರಲಿಲ್ಲ. ರತ್ನಳಂತೂ ಆ ಬಗೆಗೆ ಮಾತನಾಡುವ ಸಂದರ್ಭವೇ ಬಂದಿರಲಿಲ್ಲ. ರತ್ನಾ ವಿವಾಹಿತೆ! ಹಠಾತ್ತಾಗಿ ಕಾಣಿಸಿಕೊಂಡು ಈ ವಸ್ತು-ಸ್ಥಿತಿಯನ್ನೆದುರಿಸುವುದು ಹೇಗೆಂಬುದು ಒಂದು ಸಮಸ್ಯೆ

ಯಾಯಿತು ಚಂದ್ರಣ್ಣನಿಗೆ.

''ಹೌದು, ನಾನು ವಿವಾಹಿತೆ. ಗಂಡನೂ ಇದ್ದಾನೆ. ಆದರೆ ನನ್ನ ಪಾಲಿಗೆ ಮಾತ್ರ ಆತ ಸತ್ತಂತೆಯೆ. ಆತನ ಪಾಲಿಗೆ ನಾನೂ ಸತ್ತಂತೆ. ಅಷ್ಟು ಮಾತ್ರವಲ್ಲ, ನನ್ನ ಬಾಳಿನ ಆ ಒಂದು ಭಾಗವೂ ಸತ್ತಂತೆಯೆ.''

''ಅಂದರೇನು? ನೀನು ಹೇಳುವುದು ನನಗರ್ಥವಾಗಲಿಲ್ಲ.''

''ಹೇಗೆ ಹೇಳಿದರೆ ಅರ್ಥವಾಗಬಹುದೊ? ನನ್ನ ಆಸೆಯನ್ನು ನೀವು ಬಿಟ್ಟು ಬಿಡುವುದೇ ಒಳ್ಳೆಯದು. ನನ್ನಿಂದ ನಿಮಗೆ ಕೊಂಚವೂ ಸುಖವಾಗಲಾರದು.''

''ನಿನ್ನ ಮಾತುಗಳೊಂದೂ ಅರ್ಥವಾಗುತ್ತಿಲ್ಲ ರತ್ನಾ.''

''ಬಿಡಿಸಿ ಹೇಳಲೇಬೇಕೇ? ಕೇಳಿ ಹಾಗಾದರೆ. ನನಗೆ ಮದುವೆಯಾಗಿತ್ತು. ಒಂದೆರಡು ವರ್ಷಗಳ ಕಾಲ ಅತ್ತೆಯ ಮನೆಯಲ್ಲಿ ಇದ್ದುದೂ ಆಯಿತು. ಆ ಮೇಲೆ...''

''ಹೂ. ಆಮೇಲೆ?''

''ಆಮೇಲೆ ಅದಕ್ಕೆ ಶರಣು ಹೊಡೆದು ತವರಿಗೆ ಬಂದುಬಿಟ್ಟೆ. ಮತ್ತೆ ಅಲ್ಲಿ ಕಾಲಿಡಲಿಲ್ಲ.''

''ಏಕೆ ರತ್ನಾ, ಅಂಥ ಪ್ರಸಂಗ ಏಕೆ ಬಂತು?''

''ಏಕೆ ಎಂದು ಏನು ಹೇಳಲಿ? ನನ್ನನ್ನು ಮದುವೆಯಾದ ಆ ಮನುಷ್ಯ ಮನುಷ್ಯನೆಂದು ಕರೆದುಕೊಳ್ಳಲೂ ಯೋಗ್ಯನಾಗಿರಲಿಲ್ಲ. ಮಹಾ ವ್ಯಭಿಚಾರಿ. ನಾನು ಆತನ ಮನೆಗೆ ಹೋಗುವುದರೊಳಗಾಗಿಯೆ ಅನೇಕ ಹೆಂಗಸರೊಂದಿಗೆ ಸಂಬಂಧ ಬೆಳೆಸಿದ್ದ. ನಾನು ಹೋದರೂ ಸಹ ಆತನ ಹೊರಬಾಳಿ ನಿಲ್ಲಲಿಲ್ಲ. ನನ್ನನ್ನು ಕಡೆಗಣಿಸಿ ಮತ್ತೆ ಆ ಕೊಳಚೆಯಲ್ಲೇ ಕೊಳೆಯತೊಡಗಿದ. ಆತನ ತಂದೆತಾಯಿಗಳೂ ಆತನಿಗೆ ಬುದ್ಧಿ ಹೇಳುತ್ತಿರಲಿಲ್ಲ. ವಯಸ್ಸಿಗೆ ಬಂದ ಹುಡುಗ, ಮಜಾ ಮಾಡಲಿ ಎಂದು ಸುಮ್ಮನಿದ್ದರು.''

''ಶ್ರೀಮಂತರೇನು ರತ್ನಾ ಅವರು?''

''ಸಾಧಾರಣ. ಹೇಳಿಕೊಳ್ಳುವಂಥ ಶ್ರೀಮಂತಿಕೆಯೇನೂ ಇರಲಿಲ್ಲ. ಒಂದೆರಡು ಹೊಲಗಳಿದ್ದುವು. ಒಂದು ಸಣ್ಣ ಅಂಗಡಿಯಿತ್ತು. ತಿಂದುಣ್ಣಲು ಕೊರತೆ

ಯೇನೂ ಇರಲಿಲ್ಲ. ಆದರೆ – ನನಗಲ್ಲಿ ಯಾವ ಸುಖವೂ ಲಭಿಸಲಿಲ್ಲ. ಗಂಡನೆಂದು ಕೊಳ್ಳುವಾತ ಮಹಾ ಪೋಲಿ. ಸಂಸಾರದಲ್ಲಿ ಆತನಿಗೆ ಆಸಕ್ತಿಯಿರಲಿಲ್ಲ. ಸೂಳೆಯರ ಸಹವಾಸಕ್ಕೆ ಬಿದ್ದು ಆರೋಗ್ಯವನ್ನೆಲ್ಲ ಹಾಳು ಮಾಡಿಕೊಂಡಿದ್ದ. ಆತನನ್ನು ಸುಧಾರಿಸಿ ಒಳ್ಳೆಯ ದಾರಿಗೆ ತರಲು ನಾನು ಪಟ್ಟ ಶ್ರಮವೆಲ್ಲ ವ್ಯರ್ಥವಾಯಿತು. ಒಂದು ರಾತ್ರಿಯೂ ಮನೆಯಲ್ಲಿರುತ್ತಿರಲಿಲ್ಲ ಆತ. ವ್ಯಭಿಚಾರಿ, ಇಸ್ಪೀಟು, ಸಾರಾಯಿ ಕುಡಿಯುವುದನ್ನೂ ಕಲಿತಿದ್ದ. ನನ್ನ ಮೈಮೇಲಿದ್ದ ಒಡವೆಗಳನ್ನೆಲ್ಲ ಒಂದೊಂದಾಗಿ ದೋಚಿಕೊಂಡು ಹೋಗಿ ತನ್ನ ಚಟಗಳಿಗೆ ಹಾಕಿದ. ಒಬ್ಬನೇ ಮಗ ಎಂಬ ಮೋಹ ದಿಂದಾಗಿ ತಂದೆ ತಾಯಿಗಳು ಆತನ ಮೇಲೆ ರೇಗುತ್ತಿರಲಿಲ್ಲ. ಆತನ ಮೇಲೆ ತೀರಿಸಬೇಕಾಗಿದ್ದ ಸಿಟ್ಟನ್ನೆಲ್ಲ ನನ್ನ ಮೇಲೆ ತಿರುಗಿಸಿದರು. ದಿನ ದಿನವೂ ಅತ್ತೆಯ ಕಾಟಕ್ಕೆ ಮೊದಲಾಯಿತು. ಎದ್ದರೆ ಬೈಗಳು, ಕುಳಿತರೆ ಬೈಗಳು, ಬೆಳಗಿನಿಂದ ರಾತ್ರಿಯವರೆಗೂ ಶಪಿಸುತ್ತಲೇ ಇರುತ್ತಿದ್ದಳು. ಮನೆಗೆಲಸವೆಲ್ಲ ನನ್ನ ಪಾಲಿಗೇ ಬಿದ್ದಿತ್ತು. ಅದೇನೊ ಸರಿಯೆ. ಮೊದಲಿನಿಂದಲೂ ನನಗೆ ದುಡಿತವೆಂದರೆ ತುಂಬ ಪ್ರೀತಿ. ಕೆಲಸವೆಷ್ಟು ಬಿದ್ದರೂ ನನಗೆ ಬೇಸರವಿರುತ್ತಿರಲಿಲ್ಲ. ಆದರೆ ಕೆಲಸದ ಮಧ್ಯೆ ಅತ್ತೆಯ ಅವಾಚ್ಯ ಶಬ್ದಗಳನ್ನು ಕೇಳಿ ಸಹಿಸುವುದು ಮಾತ್ರ ಕಷ್ಟವಾಯಿತು. ಒಂದೆರಡು ಸಲ ಕಟ್ಟಿಗೆಯಿಂದ ಏಟು ತಿಂದದ್ದೂ ಆಯಿತು.''

''ಕಟ್ಟಿಗೆಯಿಂದ! ಸುಮ್ಮನಿದ್ದೆಯಾ ನೀನು!''

''ಇನ್ನೇನು ಮಾಡುವುದು? ಅತ್ತೆಯೆಂದರೆ ದೇವತೆಯ ಸಮಾನ ಎಂದು ಕೂಗಿ ಕೂಗಿ ಹಿರಿಯರು ನಮ್ಮ ಕೈ ಕಟ್ಟಿಬಿಟ್ಟಿರುವುದಿಲ್ಲವೇ? ಸೊಸೆಯೆಂದರೆ ತೊತ್ತುಗೆಲಸ ಮಾಡುತ್ತ ಗಂಡನ ಹಾಸಿಗೆಯ ದಾಸಿಯಾಗಿ ಬಿದ್ದಿರುವ ಎರಡು ಕಾಲಿನ ಪಶುವಲ್ಲದೆ ಇನ್ನೇನೂ ಅಲ್ಲ – ಹಾಗೆ ಬಿದ್ದಿರುವುದೇ ಪಾತಿವ್ರತ್ಯದ ಲಕ್ಷಣ, ಅದೇ ಭಾರತೀಯ ಸಂಸ್ಕೃತಿಯ ಲಕ್ಷಣ ಎಂದು ಬುರುಡೆ ಕೊಚ್ಚಿ ನಮ್ಮನ್ನು ಮೂಕರನ್ನಾಗಿ ಮಾಡಿರುವುದಿಲ್ಲವೆ? ಚಿಕ್ಕಂದಿನಿಂದ ನನಗೆ ಪುಸ್ತಕ ಓದುವುದೆಂದರೆ ಬಲು ಪ್ರೀತಿ. ತವರುಮನೆಯಲ್ಲಿದ್ದಷ್ಟು ದಿನವೂ ಅಣ್ಣ ಪುಸ್ತಕ ತಂದುಕೊಡುತ್ತಿದ್ದ. ಕೆಲಸದಿಂದ ಬಿಡುವಾದಾಗಲೆಲ್ಲ ಓದುತ್ತಿದ್ದೆ. ನೂರಾರು ಪುಸ್ತಕ ಓದಿದ್ದರಿಂದ ನನ್ನ ದೃಷ್ಟಿಯೂ ವಿಶಾಲವಾಗಿತ್ತು. ಸ್ವತಂತ್ರ ವಿಚಾರ ಮಾಡುವ ಶಕ್ತಿ ಬಂದಿತ್ತು. ಅತ್ತೆಯ ಮನೆಯಲ್ಲಿ ನನ್ನ ಮೇಲೆ ನಡೆದಿದ್ದ ದಬ್ಬಾಳಿಕೆಯನ್ನು ಧೈರ್ಯದಿಂದ ಎದುರಿಸಿ ನಿಲ್ಲಬೇಕೆಂಬ ಕೆಚ್ಚು ನನ್ನಲ್ಲಿ ಮೂಡಿತ್ತು. ತಪ್ಪು ದಾರಿ ತುಳಿಯುತ್ತಿದ್ದ ನನ್ನ ಗಂಡನನ್ನು ಒಳ್ಳೆಯ ದಾರಿಗೆ ತಿರುಗಿಸಲು ನಾ ಕೈಗೊಂಡ ಪ್ರಯತ್ನಗಳೆಲ್ಲ ವ್ಯರ್ಥವಾಗಿದ್ದುವು. ದಿನ ಕಳೆದ ಹಾಗೆಲ್ಲ

ಆತ ಇನ್ನೂ ಕೆಡುತ್ತಿದ್ದನೇ ವಿನಾ ಸುಧಾರಿಸುವ ಆಸೆಯಿರಲಿಲ್ಲ. ಇತ್ತ ಅತ್ತೆಯ ಕಾಟವೋ ದಿನಕ್ಕೊಂದು ಬಗೆಯಾಗಿ ಹೆಚ್ಚುತ್ತಿತ್ತು. ಆಕೆಯ ಚಾಡಿ ಮಾತು ಕೇಳಿಕೊಂಡು ಮಾವನೂ ನನ್ನನ್ನು ಹೀಯಾಳಿಸತೊಡಗಿದ. ಇಂಥ ಪರಿಸ್ಥಿತಿಯಲ್ಲಿ...''

''ಎಂಥವರಿಗಾದರೂ ತಾಳ್ಮೆ ತಪ್ಪುವ ಸಂದರ್ಭವೇ ಸರಿ!''

''ಆ ಚಿತ್ರಹಿಂಸೆಯನ್ನು ಸಹಿಸಿ ಸಹಿಸಿ ಸಾಕಾಗಿಹೋಗಿತ್ತು. ದಿನವಿಡೀ ದನದಂತೆ ದುಡಿಯಬೇಕು. ಬೈಸಿಕೊಳ್ಳಬೇಕು. ಬಡಿಸಿಕೊಳ್ಳಬೇಕು. ರಾತ್ರಿಯಾಗುತ್ತಲೂ ನನ್ನ ಕೊಠಡಿಯಲ್ಲಿ ನಾನೊಬ್ಬಳೆ ಪರದೇಶಿಯಂತೆ ಬಿದ್ದುಕೊಂಡು ನನ್ನೆಲ್ಲ ಯಾತನೆಗಳನ್ನು ಮರೆಯುವುದಕ್ಕಾಗಿ ಅಕ್ಕಮಹಾದೇವಿಯ ವಚನಗಳಿಗೆ ಮೊರೆಹೋಗುತ್ತಿದ್ದೆ. ನಾನು ರಾತ್ರಿ ಕಾಲದಲ್ಲಿ ಪುಸ್ತಕ ಓದುವುದೂ ಸಹನೆಯಾಗಲಿಲ್ಲ ನನ್ನ ಅತ್ತೆ ಮಾವಂದಿರಿಗೆ. 'ನೀನು ಓದಿ ಏನು ನೌಕರಿ ಮಾಡಬೇಕೆಂದಿದ್ದೀಯಾ, ಓದುವ ನೆಪದಲ್ಲಿ ಪತ್ರಗಿತ್ರ ಬರೆಯುತ್ತಿಯೊ ಏನು ಯಾರಿಗಾದರೂ!' ಎಂದು ಪೀಡಿಸುವುದಲ್ಲದೆ ನಾನು ಕನಸು ಮನಸಿನಲ್ಲೂ ಎಣಿಸದಿದ್ದ ಹೇಯ ವಿಷಯಗಳನ್ನು ನನಗೆ ಆರೋಪಿಸುವುದೂ ನಡೆಯಿತು. 'ನೀನು ಯಾರನ್ನೋ ಇಟ್ಟುಕೊಂಡಿರಬೇಕು, ಆತನಿಗೇ ಪತ್ರ ಬರೆಯುತ್ತಿರಬೇಕು' ಎಂದು ನುಡಿದು ನನ್ನನ್ನು ಬಡಿಯುವುದೂ ನಡೆಯಿತು. ಆ ಗೋಳಿನಿಂದ ತಪ್ಪಿಸಿಕೊಳ್ಳಲೆಂದು ಪುಸ್ತಕ ಓದುವುದನ್ನೂ ನಿಲ್ಲಿಸಬೇಕಾಯಿತು. ನನ್ನೆದೆಯಲ್ಲಿ ಸುಪ್ತವಾಗಿದ್ದ ಜ್ವಾಲಾಮುಖಿ ಕೆರಳಿ ಉಕ್ಕಿ ಹರಿಯಲು ಸಿದ್ಧವಾಗಿತ್ತು. ಮದುವೆಯೆಂಬ ಬಂಧನಕ್ಕೊಳಪಟ್ಟು ಸಂಸಾರವೆಂಬ ಸೆರೆಮನೆಗೆ ಬಂದು, ಅತ್ತೆ ಮಾವ ಗಂಡಂದಿರೆಂಬ ಯಮದೂತರಿಂದ ಚಿತ್ರಹಿಂಸೆಗೊಳಗಾಗಿದ್ದ ನನ್ನ ಜೀವ ಸ್ವಾತಂತ್ರ್ಯಕ್ಕಾಗಿ ಕಾತರಿಸುತ್ತಿತ್ತು. ಬಂಡಾಯದ ಬಾವುಟ ಎತ್ತಿ ಹಿಡಿದು ಈ ಬಂಧನವನ್ನು ಧಿಕ್ಕರಿಸಿ ಈ ಮನೆ ಬಿಟ್ಟು ಹೊರಡಬೇಕೆಂಬ ನಿರ್ಧಾರ ಎದೆಯಲ್ಲಿ ಬಲಗೊಳ್ಳುತ್ತಿತ್ತು. ಅಹ್ಹ! ಪಾತಿವ್ರತ್ಯ! ಹೆಣ್ಣಿನ ಶೀಲ, ಸಹನೆ, ಔದಾರ್ಯ, ತ್ಯಾಗ, ಕಷ್ಟಸಹಿಷ್ಣುತೆ! ಇಂಥ ದೊಡ್ಡ ದೊಡ್ಡ ಶಬ್ದಗಳ ಜಾಲ ನೇಯ್ದು ಢಾಂಬಿಕ ಸಮಾಜ ಹೆಣ್ಣನ್ನು ಕಡೆಯವರೆಗೂ ಗುಲಾಮಗಿರಿಯಲ್ಲಿರಿಸಲು ಪ್ರಯತ್ನಿಸುತ್ತಿದೆ. ಇನ್ನೂ ಸಾವಿರಾರು ವರ್ಷಗಳವರೆಗೂ ಹೆಣ್ಣನ್ನು ದಾಸಿಯನ್ನಾಗಿರಿಸಲು ಹೊಂಚು ಹೂಡಿದೆ. ಪಾತಿವ್ರತ್ಯ...! ಹಾ! ಹಾ! ಹಾ!'' ಎಂದು ನುಡಿದು ರತ್ನಾ ಉಪಹಾಸದಿಂದ ನಗತೊಡಗಿದಳು.

ಹೆಣ್ಣಿನ ಕತ್ತಿಗೆ ನೇತುಬಿದ್ದ ಹಗ್ಗದಂತೆ ಅದು – ಆ ಪಾತಿವ್ರತ್ಯ. ಗಂಡ,

ಗಂಡನ ತಂದೆ ತಾಯಂದಿರು, ಬಂಧು ಬಳಗದವರು ಎಂಥ ಅನ್ಯಾಯ ನಡೆಸಿದರೂ ಅದನ್ನೆಲ್ಲ ಸಹಿಸಿಕೊಂಡು ಮೂಕ ಪಶುವಿನಂತೆ ಬಿದ್ದಿರುವುದು ಪಾತಿವ್ರತ್ಯ! ಅಂಥ ಪಾತಿವ್ರತ್ಯಕ್ಕೆ ಕಟ್ಟುಬಿದ್ದು ನನ್ನ ವ್ಯಕ್ತಿತ್ವವನ್ನೇ ಅದಕ್ಕೆ ಬಲಿ ಕೊಡಲು ಮನಸ್ಸೊಪ್ಪಲಿಲ್ಲ. ಒಂದು ದಿನ ಸಮಯ ಕಾಯ್ದು ಗಂಡ ಊಟಕ್ಕೆ ಕುಳಿತಾಗ ಆತನನ್ನು ಸ್ಪಷ್ಟವಾಗಿ ಕೇಳಿದೆ : 'ನೀವು ರಾತ್ರಿಯೆಲ್ಲಾ ತಿರುಗುವುದನ್ನೂ, ಇಸ್ಪೀಟು ಸಾರಾಯಿ ಸೂಳೆಯರ ಸಹವಾಸವನ್ನೂ ಬಿಟ್ಟು ಸಂಭಾವಿತರಂತೆ ಮನೆಯಲ್ಲಿರುತ್ತಿರೋ ಇಲ್ಲವೋ? ನಿಮಗೆ ಸಂಸಾರ ಬೇಕೋ ಬೇಡವೋ?' ಎಂದು. ಆತ ಭಯಂಕರವಾಗಿ ರೇಗಿ ಉಣ್ಣಲೆಂದು ಇಟ್ಟಿದ್ದ ಕಂಚಿನ ತಾಬಾಣವನ್ನೇ ಎತ್ತಿ ನನ್ನ ಮುಖಕ್ಕೆಸೆದ. 'ಹಾಗೆ ಮಾಡಬೇಕು ಹೀಗೆ ಮಾಡಬೇಕು ಅಂತ ಹೇಳಲು ನೀನಾರು ನನಗೆ? ನಾಯಿಯ ಹಾಗೆ ಹಾಕಿದ ಕೂಳು ತಿಂದು ಬಿದ್ದಿರಬಾರದೇ? ಎಂಥ ಸೊಕ್ಕು!' ಎಂದು ಗದರಿಸಿದ. ನಾನು – 'ನಾಯಿಯ ಹಾಗೆ ಬಿದ್ದಿರಲು ಬಂದಿಲ್ಲ ನಾನು. ನಿಮ್ಮೊಡನೆ ಬಾಳ್ವೆ ಮಾಡಲು ಬಂದಿದ್ದೇನೆ' ಎಂದು ಸಮಾಧಾನದಿಂದಲೇ ಹೇಳಿದೆ. ಆತ ನನ್ನ ಕೆನ್ನೆಗೆ ನಾಲ್ಕು ಏಟು ಬಿಗಿದು – 'ಹೆಚ್ಚು ಮಾತಾಡಿದರೆ ನಾಲಗೆ ಕಿತ್ತು ಆಚೆಗಿಟ್ಟೇನು. ಇಲ್ಲಿರುವುದು ಬೇಡವಾದರೆ ನಡೆ. ನನ್ನ ಮನೆಯಲ್ಲಿರಬೇಡ. ಈಗಿಂದೀಗ ಹೊರಡು' ಎಂದು ಕಿರಿಚಿದ. ಅತ್ತೆಯೂ ಧಾವಿಸಿ ಬಂದು ತಾನೂ ಒಂದೆರಡು ಏಟು ಹಾಕಿ ಎಡಗಾಲಿನಿಂದ ಒದೆದು – 'ನನ್ನ ಮಗನ ಎದುರಾಎದುರು ಬಲ್ಲಂತೆ ಬೊಗಳುತ್ತೀಯಾ ಹೊಲೆ ಸೂಳೇ ಮಗಳೆ! ನಡೆ ಹೊರಗೆ' ಎಂದು ಆರ್ಭಟಿಸಿ ಉಟ್ಟ ಸೀರೆಯ ಮೇಲೆ ನನ್ನನ್ನು ಹೊರಗೆ ಹಾಕಿ ಬಾಗಿಲು ಮುಚ್ಚಿಕೊಂಡಳು. ಇನ್ನು ಆ ಮನೆಯ ಋಣ ಮುಗಿಯಿತೆಂದುಕೊಂಡು ತವರೂರಿಗೆ ಹೊರಟುಬಂದೆ."

"ನಿಮ್ಮ ತಂದೆತಾಯಿ ಮತ್ತೆ ನಿನ್ನನ್ನು ಅಲ್ಲಿಗೆ ಕಳಿಸಲಿಲ್ಲವೆ?"

"ಇಲ್ಲ, ನನ್ನ ಮೇಲೆ ಅಲ್ಲಿ ನಡೆದ ಅನ್ಯಾಯವನ್ನೆಲ್ಲ ಕೇಳಿ ಅವರಿಗೂ ಹೊಟ್ಟೆಯುರಿಯುತ್ತಿತ್ತು. ಅಂಥ ಕಟುಕರ ಮನೆಗೆ ನನ್ನನ್ನು ಕಳಿಸುವುದಿಲ್ಲವೆಂದು ತಾಯಿ ನಿರ್ಧರಿಸಿದಳು. ಅಣ್ಣನೂ ಬೇಡವೆಂದ. ನಾವಾಗಿ ಅವರ ಹತ್ತಿರ ಹೋಗಲಿಲ್ಲ, ಅವರೂ ಕರೆಯಲು ಬರಲಿಲ್ಲ. ಒಂದು ವರ್ಷ ಕಳೆದ ಮೇಲೆ ನನ್ನ ಗಂಡ ಇನ್ನೊಂದು ಮದುವೆಯಾದನೆಂದು ತಿಳಿಯಿತು. ಅಲ್ಲಿಗೆ ಅವರ ಪರಲು ಹರಿಯಿತು ಎಂದುಕೊಂಡು ನಾವೆಲ್ಲ ಸುಮ್ಮನಾದೆವು."

"ನೀನೂ ಮತ್ತೊಂದು ಮದುವೆಯಾಗಬಹುದಾಗಿದ್ದಿತಲ್ಲ?"

''ಆಗಬಹುದಿತ್ತು. ನನ್ನ ತಂದೆತಾಯಿಗಳು ಅದಕ್ಕಾಗಿ ಒತ್ತಾಯಪಡಿಸುತ್ತಲೂ ಇದ್ದರು. ನಾಲ್ಕೈದು ಜನ ಬಂದು ಕೇಳಿಯೂ ಹೋದರು. ಆದರೆ ಸಂಸಾರವೆಂಬ ಆ ನರಕದಲ್ಲಿ ಜೀವ ತೇಯ್ದುದರಿಂದ ನನಗೆ ಅದರಲ್ಲಿ ಹೇಸಿಕೆ ಹುಟ್ಟಿತ್ತು. ಮದುವೆ, ಗಂಡ, ಮಾವನ ಮನೆ ಎಂದೊಡನೆ ಮೈಮೇಲೆ ಮುಳ್ಳು ಬರುತ್ತಿತ್ತು. ಜೊತೆಗೆ ಅಕ್ಕಮಹಾದೇವಿ ವಚನ, ಆಕೆಯ ಜೀವನಗಳಿಂದಾಗಿ ನನ್ನ ಮನಸ್ಸಿನ ಮೇಲೆ ವಿಚಿತ್ರ ಪರಿಣಾಮವೊಂದು ಮೂಡಿತ್ತು. ಆಕೆಯ ಹಾಗೆ ನಾನೂ ಆದರ್ಶ ಸಾಧನೆಗಾಗಿ ದುಡಿಯಬೇಕೆಂಬ ನಿರ್ಧಾರಕ್ಕೆ ಬಂದಿದ್ದೆ.''

''ಅಕ್ಕನ ಹಾಗೆ ನೀನೂ ವಿರಾಗಿಣಿಯಾಗಿದ್ದೆಯೊ ಏನು?''

''ಆಕೆಯ ಹಾಗಲ್ಲವಾದರೂ ಒಂದು ರೀತಿಯಲ್ಲಿ ವಿರಾಗಿಣಿಯಾಗಿದ್ದೆನೆಂದು ಹೇಳಬಹುದು. ಅಕ್ಕನಂತೆ ಚೆನ್ನಮಲ್ಲಿಕಾರ್ಜುನನ ಸಾಕ್ಷಾತ್ಕಾರಕ್ಕಾಗಿ ಹಂಬಲಿಸುತ್ತಿರಲಿಲ್ಲ ನಾನು, ನಿಜ. ಆದರೆ ಈ ಜಗತ್ತಿನಲ್ಲಿ ಹೆಣ್ಣಿನ ಮೇಲೆ, ಬಡವರ ಮೇಲೆ, ನಡೆದಿರುವ ಮಹಾ ಅನ್ಯಾಯಗಳನ್ನೆಲ್ಲ ಎದುರಿಸಿ ನಿಂತು ನನ್ನಿಂದಾದಷ್ಟು ಕೆಲಸ ಮಾಡಬೇಕೆಂದು ನಿರ್ಧರಿಸಿದ್ದೆ. ನನ್ನೊಂದಿಗೆ ಬಳಕೆಗೆ ಬಂದ ಹೆಣ್ಣುಮಕ್ಕಳೆಲ್ಲ ಸ್ವತಂತ್ರ ವಿಚಾರದ ಬೀಜ ಬಿತ್ತಿ ಅವರ ಮೂಢ ಕಲ್ಪನೆಗಳನ್ನು ತೊಲಗಿಸಲು ಪ್ರಯತ್ನಿಸುತ್ತಿದ್ದೆ. ಅದೇ ಕಾಲಕ್ಕೆ ಪತ್ರಿಕೆಯೊಂದರಲ್ಲಿ ಪ್ರಕಟವಾದ ರಶಿಯದಲ್ಲಿನ ಸ್ತ್ರೀಯರ ಅದ್ಭುತ ಪ್ರಗತಿ ಎಂಬ ಲೇಖನವೊಂದು ನನ್ನ ಕಣ್ಣಿಗೆ ಬಿತ್ತು. ಸಾಮ್ಯವಾದಿ ಸಮಾಜದಲ್ಲಿ ಸ್ತ್ರೀಯರಿಗಿರುವ ಸ್ಥಾನಮಾನವೇನೆಂಬುದನ್ನು ನಾನು ಕಂಡುಕೊಂಡಿದ್ದೆ ಆಗಲೆ. ಅಂದಿನಿಂದ ಸಾಮ್ಯವಾದದ ಬಗ್ಗೆ ನನ್ನಲ್ಲಿ ಆಸಕ್ತಿ ಹುಟ್ಟಿತು. ಆ ಬಗ್ಗೆ ಕನ್ನಡದಲ್ಲಿ ಬಂದ ಪುಸ್ತಕಗಳನ್ನು ತರಿಸಿ ಓದಿದೆ. ಸ್ತ್ರೀಯರ ಸರ್ವಾಂಗೀಣ ಉನ್ನತಿಗೆ ಸಾಮ್ಯವಾದವೊಂದೇ ಉಪಾಯವೆಂಬ ಸತ್ಯ ನನಗಾಗ ಮನವರಿಕೆಯಾಯಿತು. ನಾವು ಗೋಕಾವಿಯ ಗಿರಣಿಯಲ್ಲಿದ್ದಾಗ ಕಮ್ಯೂನಿಸ್ಟರೊಂದಿಗೆ ಬಳಕೆ ಬಂದಿತ್ತು. ಅವರ ಪರಿಚಯವಾದಂದಿನಿಂದ ನನ್ನ ವಿಚಾರಗಳು ಪಕ್ವವಾಗತೊಡಗಿದವು. ಅಂದಿನಿಂದ ನಾನು ಸಾಮ್ಯವಾದದ ಆರಾಧಕಳಾದೆ. ಅಕ್ಕಮಹಾದೇವಿ ಆರಾಧಿಸಿದ್ದು ಚೆನ್ನಮಲ್ಲಿಕಾರ್ಜುನನನ್ನು, ನಾನು ಆರಾಧಿಸಿದ್ದು ಸಾಮ್ಯವಾದೀ ಚಳವಳಿಯನ್ನು. ಈ ಚಳವಳಿಗೆ ಗೆಲವು ದೊರೆಯುವವರೆಗೂ ಬೇರಾವ ವಿಚಾರವೂ ಬರುವಂತಿಲ್ಲ ನನ್ನಲ್ಲಿ. ನನ್ನಂಥವಳನ್ನು ಪ್ರೀತಿಸಿ ನೀವೂ ದುಃಖಕ್ಕೆ ಗುರಿಯಾಗಬೇಡಿ. ನೀವು ಪ್ರೀತಿಸುವಂಥದೇನಿದೆ ಈ ದೇಹದಲ್ಲಿ? ನಾನಂಥ ಚೆಲುವೆಯೂ ಅಲ್ಲವಲ್ಲ?''

''ನಿನ್ನ ದೇಹವನ್ನಲ್ಲ ನಾನು ಪ್ರೀತಿಸುವುದು ರತ್ನಾ, ನಿನ್ನ ಈ ಅದ್ಭುತ ವ್ಯಕ್ತಿತ್ವವನ್ನು, ಅನ್ಯಾಯಗಳಿಗೆಲ್ಲ ಧೈರ್ಯದಿಂದ ಎದುರಾಗಿ ನಿಂತಿರುವ ನಿನ್ನ ಚೇತನವನ್ನು. ನಿನ್ನನ್ನು ನೋಡಿದ ಮೊದಲ ದಿನವೇ ನೀನಿಂಥ ತೇಜಸ್ವಿನಿಯಾಗಿರ ಬೇಕೆಂದು ನನಗನ್ನಿಸಿತ್ತು. ದಿನ ಕಳೆದ ಹಾಗೆಲ್ಲ ನಿನ್ನ ಶೀಲ, ನಿನ್ನ ದೃಢತೆ, ನಿನ್ನ ಎಡೆಬಿಡದ ದುಡಿತ, ನಿನ್ನ ನಿಷ್ಠೆ ನಿನ್ನ ಧ್ಯೇಯವಾದಗಳ ಅರಿವಾಯಿತು. ಈ ಎಲ್ಲ ಉಜ್ವಲ ಗುಣಗಳ ಗಣಿಯಾದ ರತ್ನಳನ್ನು ಪ್ರೀತಿಸುವುದು ನಾನು. ಆಕೆಯ ದೇಹವನ್ನಲ್ಲ.''

ಕಣ್ಣುಗಳೆರಡನ್ನೂ ಮುಚ್ಚಿಕೊಂಡು ರತ್ನಾ ಕೆಲಕಾಲ ಹಾಗೆಯೇ ಪವಡಿಸಿದ್ದಳು. ಕ್ರಮೇಣವಾಗಿ ಹೊತ್ತು ಜಾರುತ್ತಿತ್ತು. ಚಂದ್ರನೂ ನಿಧಾನವಾಗಿ ಬೆಟ್ಟದ ಅಂಚಿಗೆ ಇಳಿಯುತ್ತಿದ್ದ. ಬೆಳಕು ಕಡಿಮೆಯಾಗುತ್ತ ಕತ್ತಲೆ ಹೆಚ್ಚುತ್ತಿತ್ತು. ಹಲವು ನಿಮಿಷಗಳ ಹಿಂದೆ ಬೆಳ್ಳಗೆ ಹೊಳೆಯುತ್ತಿದ್ದ ಮೋಡಗಳ ಪಡೆಗೆ ನಿಧಾನವಾಗಿ ಕಪ್ಪು ಬಣ್ಣವೇರ ತೊಡಗಿದ್ದಿತು. ಗಾಳಿಯೂ ಮೆಲ್ಲಮೆಲ್ಲನೆ ಶಕ್ತಿಯನ್ನು ಹೆಚ್ಚಿಸಿಕೊಂಡು ಹುಚ್ಚುಹುಚ್ಚಾಗಿ ಓಡತೊಡಗಿದ್ದಿತು; ಒಮ್ಮೆ ಪಶ್ಚಿಮದಿಂದ ಪೂರ್ವಕ್ಕೆ, ಇನ್ನೊಮ್ಮೆ ಪೂರ್ವದಿಂದ ಪಶ್ಚಿಮಕ್ಕೆ. ಗಾಳಿಯ ಆಲೆದಾಟದೊಂದಿಗೆ ಸುತ್ತುಮುತ್ತಲಿನ ಗಿಡಗಂಟೆಗಳೂ ಹಾಗೆ ಹೀಗೆ ತೂಗಾಡುತ್ತಿದ್ದುವು. ಎಲೆಗಳ ಮರ್ಮರ ರವವೂ ಕೇಳಬರುತ್ತಿತ್ತು. ಅಲ್ಲಿ ಇಲ್ಲಿ ಸುರಿದು ಬಿದ್ದ ಒಣ ಎಲೆಗಳ ಕಸಕಡ್ಡಿಗಳೂ ಗಾಳಿಯ ರಭಸಕ್ಕೆ ಮೇಲಕ್ಕೆದ್ದು ಸದ್ದು ಮಾಡುತ್ತ ಹಾರತೊಡಗಿದ್ದುವು.

''ಮಳೆ ಬರುವ ಲಕ್ಷಣ ಕಾಣುತ್ತಿದೆಯಲ್ಲ ರತ್ನಾ!''

''ಹೌದು. ಬಂದರೂ ಬಂದೀತು.''

''ನಿನಗೆ ನಿದ್ರೆ ಬಂದಿರಬೇಕು. ಇಂಥ ಸ್ಥಳದಲ್ಲಿ ಹೇಗೆ ಮಲಗಿಕೊಳ್ಳುತ್ತೀಯೆ? ಗಿಡದ ಆಸರೆಗಾದರೂ ಹೋದರೆ ಒಳ್ಳೆಯದಾದೀತು.''

ಇಬ್ಬರೂ ಎದ್ದು ವಿಶಾಲವಾದ ಗಿಡವೊಂದರ ಆಸರೆಯನ್ನರಸಿ ಹೊರಟರು. ಕೊಂಚ ದೂರದಲ್ಲಿಯೆ ದೊಡ್ಡ ಮರವೊಂದು ಕಾಣಿಸುತ್ತಿತ್ತು. ಹತ್ತಿರ ಬಂದಾಗ ಅದರ ಕೆಳಗಡೆ ಬಿದಿರಿನ ಗಳಗಳಿಂದ ಕಟ್ಟಿದ ಅಟ್ಟಣೆಯೊಂದು ಕಣ್ಣಿಗೆ ಬಿತ್ತು. ಚಂದ್ರಣ್ಣ ಆನಂದದಿಂದ ಕೂಗಿ ಹೇಳಿದ;

''ತೋಯಿಸಿಕೊಳ್ಳುವ ಚಿಂತೆಯೂ ಇಲ್ಲ ರತ್ನಾ, ಹುಲ್ಲು ಹೊದೆಯಿಸಿದ ಅಟ್ಟಣೆಯೊಂದು ನಮಗಾಗಿ ಕಾದಿರುವಂತಿದೆ. ಬಾ, ಮೇಲೇರಿ ಮಲಗಿದರಾಯಿತು.''

''ಇಂಥ ಜಾಗದಲ್ಲಿ ಇಂಥ ಅಟ್ಟಣೆ ಹೇಗೆ ಬಂತೋ! ಇಲ್ಲೇ ಎಲ್ಲಾದರೂ ಜನವಸತಿಯಿರುವುದು ಸ್ಪಷ್ಟವಿದೆ. ಇಲ್ಲಿ ಮಲಗುವುದು ಗಂಡಾಂತರದ್ದಾಗಲಿಕ್ಕಿಲ್ಲವೆ?''

''ಜನವಸತಿಯಿರಲಿ, ಇಲ್ಲದಿರಲಿ, ರಾತ್ರಿಯನ್ನಂತೂ ಇಲ್ಲಿ ಕಳೆದರಾಯಿತು. ಬೆಳಗಾದ ಮೇಲೆ ಹೇಗಾದರೂ ಮಾಡಿದರಾಯಿತು. ಬಾ,'' ಎಂದು ನುಡಿದು ಚಂದ್ರಣ್ಣ ರತ್ನಳನ್ನು ಅಟ್ಟಣೆಗೇರಿಸಿ, ತಾನೂ ಹತ್ತಿ ಮೇಲೆ ಬಂದ.

ಬಿದಿರಿನ ಗಳಗಳನ್ನು ಸಾಲಾಗಿ ಜೋಡಿಸಿ, ಜೋಳದ ದಂಟುಗಳನ್ನಿರಿಸಿ ಅವುಗಳ ಮೇಲೆ ಮೆತ್ತಗಿನ ಹುಲ್ಲು ಹೊದೆಯಿಸಲಾಗಿದ್ದಿತು. ಬೆಳೆಯನ್ನು ಕಾಯುವುದಕ್ಕಾಗಿ ಅಡವಿಯ ಹೊಲಗಳಲ್ಲಿ ರೈತರು ರಚಿಸುವ ಅಟ್ಟಣೆಯಂತಿದ್ದಿತದು. ಇಲ್ಲಿಯೆ ಎಲ್ಲಾದ್ದರೂ ಹೊಲಗಳಿರಬೇಕು ಎಂದುಕೊಳ್ಳುತ್ತ ಅವರು ಹಾಸಿಗೆ ಹಾಸಿ ದೇಹಗಳನ್ನೊರಗಿಸಿದರು.

ಅವರು ಊಹಿಸಿಕೊಂಡಿದ್ದ ಹಾಗೆ ಕೆಲವು ನಿಮಿಷಗಳಲ್ಲಿ ಮಳೆಹನಿಗಳು ಉದುರತೊಡಗಿದವು. ಮೊದಲು ಸೌಮ್ಯವಾಗಿ ಸುರಿಯಲಾರಂಭಿಸಿದರೂ ಬರ ಬರುತ್ತ ಮಳೆಯ ರಭಸ ಹೆಚ್ಚುತ್ತ ಬಂದಿತು. ಅದರೊಂದಿಗೆ ಗುಡುಗು ಮಿಂಚುಗಳ ಗದ್ದಲಕ್ಕೂ ಆರಂಭವಾಯಿತು. ಅಟ್ಟಣೆಯ ಮೇಲ್ಕಟ್ಟಿನಿಂದ ಆಗಾಗ ನೀರ ಹನಿಗಳೂ ಬೀಳತೊಡಗಿದುವು. ತನಗೆ ತಿಳಿಯದಂತೆಯೆ ರತ್ನಾ ಚಂದ್ರಣ್ಣನತ್ತ ಸರಿಯುತ್ತ ಬಂದು, ಮಳೆಯ ಅಬ್ಬರ ಹೆಚ್ಚಾಗುತ್ತಲೂ ಆತನನ್ನು ತಬ್ಬಿಕೊಂಡು ಆತನ ವಕ್ಷಸ್ಥಳದಲ್ಲಿ ತನ್ನ ತಲೆಯನ್ನು ಹುದುಗಿಸಿದ್ದಳು. ಮಗುವನ್ನು ನೇವರಿಸುವ ತಾಯಿಯಂತೆ ಚಂದ್ರಮ್ಮ ಆಕೆಯ ತಲೆಯನ್ನು ಅಕ್ಕರೆಯಿಂದ ನೇವರಿಸುತ್ತ ಮೆಲುದನಿಯಲ್ಲಿ ಕರೆದ : ''ರತ್ನಾ!''

ಆಕೆ ಆತನನ್ನು ಇನ್ನೂ ಬಿಗಿಯಾಗಿ ತಬ್ಬಿಕೊಳ್ಳುತ್ತ ಚಿಕ್ಕ ಮಕ್ಕಳಂತೆ ಧ್ವನಿ ತೆಗೆದು ''ಊಂ'' ಎಂದಳು.

''ನಿನ್ನ ಆ ಸಂಸಾರದ ನರಕಯಾತನೆ ಎಲ್ಲೋ ಹಿಂದಿನ ಜನ್ಮದ್ದೆಂದು ತಿಳಿದುಕೋ ರತ್ನಾ. ಇನ್ನು ನನ್ನೊಡನೆ ಹೊಸ ಬಾಳು ಪ್ರಾರಂಭಿಸಬೇಕು ನೀನು. ಹೇಳು. ಒಪ್ಪಿಗೆಯೇ?''

''ಇನ್ನೆಲ್ಲಿಯ ಬಾಳು ನನಗೆ? ಯಾವಾಗ ಪೊಲೀಸರು ಬಂದು ಹಿಡಿದೊಯ್ಯುವರೋ ನಿಶ್ಚಿತವಿಲ್ಲ. ಇನ್ನು ಬಾಳು...!''

''ಆ ಪೊಲೀಸರ ವಿಷಯವನ್ನು ತಲೆಯಿಂದ ತೆಗೆದುಹಾಕಿಬಿಡು ರತ್ನಾ. ವಿಶ್ವ

ಪ್ರಯತ್ನ ಮಾಡಿ ನಾನು ನಿನ್ನನ್ನು ಆ ಪ್ರಸಂಗದಿಂದ ದೂರಗೊಳಿಸುತ್ತೇನೆ. ಆ ಬಗ್ಗೆ ಯಾವ ಸಂಶಯವೂ ಬೇಡ. ಈಗ ನನ್ನ ಮಾತಿಗೆ ಉತ್ತರ ಕೊಡು. ಇನ್ನು ಮುಂದೆ ನೀನು ನನ್ನವಳು, ನಾನು ನಿನ್ನವ. ಹೌದಲ್ಲವೆ?''

ರತ್ನ ಮಾತನಾಡಲಿಲ್ಲ, ಮೃದುವಾಗಿ ನಕ್ಕಳು.

## ೩೨

ಕಣಿವೆಯ ಮೇಲೇರಿ ಬಂದಿದ್ದ ಸೂರ್ಯನ ಎಳೆಗಿರಣಗಳು ಅಟ್ಟಣೆಯೊಳಗಡೆ ನುಗ್ಗಿ ಬಂದು ತನ್ನ ಕಣ್ಣುಗಳನ್ನು ಚುಂಬಿಸಿದಾಗ ಎಚ್ಚರವಾಯಿತು ರತ್ನಾಗೆ. ಮೆಲ್ಲನೆ ಕಣ್ದೆರೆದು ಸುತ್ತಲೂ ದೃಷ್ಟಿ ಹೊರಳಿಸಿದಳು. ಒಂದೆರಡು ಕ್ಷಣ ಯಾವುದೂ ಗೋಚರವಾಗಲಿಲ್ಲ, ಬೆಳಕು... ಬರಿಯ ಬೆಳಕು! ಎತ್ತ ತಿರುಗಿದರೂ ಬೆಳಕೇ ಬೆಳಕು! ಎದುರಿನಿಂದ ಬರುತ್ತಿದ್ದ ಸೂರ್ಯಕಿರಣಗಳಿಂದ ಕಣ್ಣು ಕುಕ್ಕಿದಂತಾಯಿತು. ಕಂಬಳಿಯನ್ನು ಮೆಲ್ಲನೆ ಎತ್ತಿ ಕೊಂಚ ಮೇಲಕ್ಕೆ ಕುಳಿತಳು. ಎದುರಿಗೆ ಅತ್ಯಂತ ರಮಣೀಯವಾದ ದೃಶ್ಯ. ದೃಷ್ಟಿ ಹರಿಯುವಷ್ಟು ದೂರದವರೆಗೆ ಚಿನ್ನದಂಥ ಬೆಳಕು ಚೆಲ್ಲವರಿದಿತ್ತು. ಕಣಿವೆಯ ಮೇಲೇರಿ ಬಂದ ಬಾಲಸೂರ್ಯನ ಲಕ್ಷೋಪಲಕ್ಷ ಕಿರಣಗಳು ಕೊಳ್ಳದಲ್ಲಿ ಧುಮುಕಿ ಅದ್ಭುತವಾದ ದೃಶ್ಯವೊಂದನ್ನು ರಚಿಸಿದ್ದುವು. ಗುಡ್ಡ, ಮರಡಿ, ಗಿಡ, ಮರಗಳ ಮೇಲೆಲ್ಲ ಬೆಳ್ಳಿಯ ಹುಡಿ ಹಾರುತ್ತಿದ್ದ ಹಾಗೆ ತೋರುತ್ತಿತ್ತು. ಒಮ್ಮೆ ಬೆಳ್ಳಿ, ಒಮ್ಮೆ ಬಂಗಾರ! ರಾತ್ರಿಯ ಮಳೆಯಲ್ಲಿ ಮೈ ತೊಳೆದುಕೊಂಡ ನಿಸರ್ಗದೇವತೆ ಬೆಳಗಿನ ಹೊನ್ನುಡಿಗೆಯನ್ನು ಧರಿಸಿ ಆನಂದದಿಂದ ನಲಿಯುವಂತಿದ್ದಿತು.

ಅಟ್ಟಣೆಯ ಕೆಳಗಡೆ ಬಗೆಬಗೆಯ ಹೂಗಿಡಗಳು ಸ್ವೇಚ್ಛೆಯಿಂದ ಬೆಳೆದು ನಿಂತಿದ್ದುದು ಕಾಣಿಸಿತು. ಕೆಂಪು ಹೂ, ಬಿಳಿಯ ಹೂ, ಹಳದಿ ಹೂ. ಕೊಂಚ ದೂರದಲ್ಲಿ ಕಾಡು ಸಂಪಗೆಯ ಗಿಡವೊಂದು ತನ್ನ ಕುಸುಮಗಳ ಸುಗಂಧವನ್ನು ಸುತ್ತಲೂ ಪಸರಿಸುತ್ತ ನಿಂತಿದ್ದಿತು. ಆ ಮಾದಕ ಪರಿಮಳ ಗಾಳಿಯೊಂದಿಗೆ ತೇಲಿ ಬಂದು ತನ್ನ ನಾಸಿಕಕ್ಕೆ ತಾಗಿ ರತ್ನಳ ಮೈಯಲ್ಲಿ ಮಿಂಚಿನ ಹೊಳೆ ಹರಿದಂತಾಯಿತು. ಹಲವು ವರ್ಷಗಳಿಂದ ತಾನು ಅನುಭವಿಸದಿದ್ದ ದಿವ್ಯ ಸುಖವೊಂದನ್ನು ಅನುಭವಿಸಿದಂತಾಗಿ ಆಕೆಯ ಹೃದಯ ಉಲ್ಲಾಸದಿಂದ ಅರಳತೊಡಗಿತು.

ಸಂತಸದಿಂದ ಹೊಳೆಯುವ ಕಣ್ಣುಗಳನ್ನು ಚಂದ್ರಣ್ಣನ ಕಡೆಗೆ ತಿರುಗಿಸಿದಳು. ಕಂಬಳಿಯನ್ನು ಕೊರಳಿನವರೆಗೆ ಹೊದೆದುಕೊಂಡು ಆತ ಶಾಂತವಾಗಿ ನಿದ್ರಿಸುತ್ತಲಿದ್ದ. ಎಡಗೈ ಕಂಬಳಿಯಿಂದ ನುಸುಳಿಕೊಂಡು ಈಚೆಗೆ ಬಂದು ಎದೆಯ ಮೇಲೊರಗಿ ಕೊಂಡಿದ್ದಿತು. ಸೂರ್ಯನ ಹೊಂಗಿರಣದಲ್ಲಿ ಹಲವು ಆಗಾಗ ಆತನ ಮುಖದ ಮೇಲೂ ಚಿನ್ನಾಟವಾಡುತ್ತಲಿದ್ದುವು. ಅವುಗಳ ಸ್ವರ್ಣಕಾಂತಿಯಲ್ಲಿ ಆತನ ತರುಣ ಮುಖ ಅತ್ಯಂತ ಸುಂದರವಾಗಿ ಶೋಭಿಸುತ್ತಿತ್ತು. ಗಾಳಿಯ ತೆರೆಯೊಂದು ಸುಳಿದು ಬಂದಾಗ ಅತ್ತ ಇತ್ತ ಹಾರಾಡುತ್ತ ಬೆಳಕಿನಲ್ಲಿ ಮೋಹಕವಾಗಿ ಮಿನುಗುತ್ತಿದ್ದ ಆತನ ತಲೆಗೂದಲು! ವಿಶಾಲವಾದ ಹಣೆ, ತಿದ್ದಿ ಮೂಡಿದಂಥ ನೇರವಾದ ನಾಸಿಕ, ಹಾಲು ಗಲ್ಲದ ಹಸುಳೆಯಂಥ ನಿರ್ಮಲವಾದ ತುಟಿ, ತುಂಬಿದ ಕೆನ್ನೆ ದೃಢಚಾರಿತ್ರ್ಯವನ್ನೂ ಕೆಚ್ಚೆದೆಯನ್ನೂ ಪ್ರತಿಬಿಂಬಿಸುವ ಮಾಟವಾದ ಗದ್ದ! ನಿದ್ರಾಕಾಲದಲ್ಲಿ ಮನುಷ್ಯ ರನ್ನಾವರಿಸುವ ಮಲಿನತೆಯೊಂದು ಕಣವೂ ಇದ್ದಂತಿರಲಿಲ್ಲ ಆತನ ಮುಖದಲ್ಲಿ. ದೀರ್ಘವಾದ ಸುಖ ನಿದ್ರೆಯನ್ನನುಭವಿಸಿ ತೃಪ್ತಿಯಿಂದ ಕಣ್ಣು ಮುಚ್ಚಿ ಮಲಗಿರುವ ಮುದ್ದು ಕಂದನಂತೆ ಕಾಣಿಸುತ್ತಿದ್ದ ತನ್ನ ಪ್ರಿಯನನ್ನು ಎವೆಯಿಕ್ಕದೆ ದಿಟ್ಟಿಸುತ್ತ ರತ್ನಾ ನಾಲ್ಕೈದು ನಿಮಿಷ ಹಾಗೆಯೆ ಕುಳಿತಿದ್ದಳು. ಈ ಮುದ್ದು ಮುಖ, ಈ ದೃಢಕಾಯದ ಒಳಗಿರುವ ಆ ಹೃದಯವೂ ಎಷ್ಟು ಸುಂದರವಾದುದು! ತನ್ನ ಬಗೆಗೆ ಅಂಥ ಅಪಾರ ಪ್ರೀತಿ ಆತನಿಗೆ... ತನಗಾಗಿ ಎಲ್ಲವನ್ನೂ ತೊರೆದು ತನ್ನೊಡನೆ ಬಂದಿದಾನೆ! ಆಕೆಯ ಹೃದಯ ಕೃತಜ್ಞತೆಯಿಂದ ತುಂಬಿ ಬಂದಿತು.

ಚಂದ್ರಣ್ಣನ ಮುಖವನ್ನು ದಿಟ್ಟಿಸುತ್ತಲಿದ್ದ ಹಾಗೆ ಆಕೆಯ ಬಗೆಗಣ್ಣಿನೆದುರಿಗೆ ಇನ್ನೊಂದು ಮುಖ ಬಂದು ನಿಂತಂತಾಯಿತು; ತನ್ನ ಗಂಡನೆನಿಸಿಕೊಂಡಿದ್ದವನ ಮುಖ. ಒಂದು ದಿನವೂ ಆ ಮುಖದ ಮೇಲೆ ಪ್ರೀತಿಯ ಭಾವ ಮೂಡಿದುದನ್ನು ಕಂಡಿರಲಿಲ್ಲ ತಾನು. ಅಕ್ಷತೆಯ ದಿನ ಹಸೆಯ ಮೇಲೆ ಕುಳಿತಿದ್ದಾಗಲೂ ಗಂಟು ಹಾಕಿಕೊಂಡೇ ಇದ್ದಿತಾ ಮುಖ. ಶೋಭನ ಪ್ರಸ್ತದ ದಿನ, ತಮ್ಮ ಸಮಾಗಮದ ಪ್ರಥಮ ರಾತ್ರಿ ಆತ ಆಚರಿಸಿದ ಬಗೆಯನ್ನು ನೆನೆದಾಗ ಆಕೆಯ ಮೈ ಜುಮ್ಮೆಂದಿತು. ತಾನೂ ಒಬ್ಬಳು ಮನುಷ್ಯಪ್ರಾಣಿ, ತನಗೂ ಭಾವರಾಗಗಳುಂಟು, ತನ್ನೊಡನೆ ಕೊಂಚವಾದರೂ ಪ್ರೀತಿಯಿಂದ, ಮಮತೆಯಿಂದ ವರ್ತಿಸಬೇಕು ಎಂಬ ಯೋಚನೆಯೇ ಆತನಿಗಿರಲಿಲ್ಲ. ಒಂದು ಮುಗುಳು ನಗೆಯಿಲ್ಲ, ಒಂದು ಲಲ್ಲೆಮಾತಿಲ್ಲ. ಹಸಿದ ನಾಯಿ ಎಲುಬಿನ ತುಂಡನ್ನು ನೆಕ್ಕುವಂತೆ ತನ್ನ ತರುಣ ದೇಹವನ್ನಾತ ನೆಕ್ಕಿದ್ದ. ತನ್ನ ಭಾವನೆಗಳ ವಿಚಾರವೇ ಆತನಿಗಿರಲಿಲ್ಲ.

ಅಂದೇ ಆತನ ಬಗೆಗೆ ತನ್ನಲ್ಲಿ ಅನಾದರ, ಜಿಗುಪ್ಸೆ ಹುಟ್ಟಿಕೊಂಡಿದ್ದಿತು. ಆತನಂತೂ ತನ್ನನ್ನು ಪಶುವಿನಂತೆಯೆ ಕಾಣುತ್ತಿದ್ದ, ಮನಸ್ಸು ಬಂದಾಗ ಮನೆಗೆ ಬರುತ್ತಿದ್ದ, ಒಂದೊಂದು ರಾತ್ರಿ ಮೂರು ನಾಲ್ಕು ಗಂಟೆಗೆ ಬಂದು, ನಿದ್ರೆ ಹೋಗಿರುತ್ತಿದ್ದ ತನ್ನನ್ನು ಒರಟು ಕೈಗಳಿಂದ ಬರಸೆಳೆದುಕೊಂಡು ಲಾಲಸೆಯನ್ನು ತೀರಿಸಿಕೊಳ್ಳುತ್ತಿದ್ದ. ತನಗೆ ಹೇಸಿಕೆ, ತಿರಸ್ಕಾರ. ಆತನ ಕೈಯ ಸ್ಪರ್ಶವಾದರೂ ಸಹ ಮೈಯೆಲ್ಲ ನಡುಗುತ್ತಿತ್ತು. ಆತನನ್ನೊದೆದು ದೂರ ಕೆಡವಿ ಚೆನ್ನಾಗಿ ಬುದ್ಧಿ ಕಲಿಸಿ, ತನಗೂ ಒಂದು ವ್ಯಕ್ತಿತ್ವವಿದೆ, ತಾನೂ ಮನುಷ್ಯಪ್ರಾಣಿಯೆಂಬುದರ ಅರಿವನ್ನುಂಟು ಮಾಡಿಕೊಡಬೇಕೆಂದೂ ಎಷ್ಟೋ ಸಲ ಅನ್ನಿಸಿದ್ದುಂಟು. ಆದರೆ...

ಆಕೆಯ ಮುಖದಿಂದ ನಿಟ್ಟುಸಿರೊಂದು ಹೊರ ಹೊರಟಿತು. ಗತಕಾಲದ ಆ ಕಹಿನೆನಹುಗಳನ್ನು ಮರೆಯಲೆಂದು ಮತ್ತೆ ಮತ್ತೆ ಪ್ರಯತ್ನಿಸಿದರೂ ಯಶ ದೊರೆಯುತ್ತಿರಲಿಲ್ಲ. ಹತ್ತಿರದಲ್ಲಿ ಪ್ರೇಮವೇ ಮೈತಳೆದು ಬಂದಂತೆ ಒರಗಿದ್ದ ಚಂದ್ರಣ್ಣನನ್ನು ದಿಟ್ಟಿಸಿದ ರತ್ನ ಕತ್ತು ಬಗಿದು ಬರತೊಡಗಿತು. ಆತನಿಗೆ ಎಚ್ಚರವಾಯಿತೇನೋ ಎಂದು ಚಕಿತಳಾಗಿ ನಿರುಕಿಸಿದಳು. ಎಚ್ಚರವಾದಂತೆ ತೋರಲಿಲ್ಲ. ರಾತ್ರಿಯೆಲ್ಲ ಜಾಗರಣೆಯಾಗಿದ್ದಿತಾದುದರಿಂದ ಆತ ಗಾಢನಿದ್ರೆಯಲ್ಲಿ ಮುಳುಗಿಹೋಗಿದ್ದ.

ರಾತ್ರೆ ನಡೆದ ಮಾತುಕತೆಗಳೆಲ್ಲ ನೆನಪಿಗೆ ಬಂದು ಆಕೆಯ ಸಮಸ್ತ ಶರೀರವೂ ಅವರ್ಣನೀಯವಾದೊಂದು ಭಾವದಿಂದ ಸೂಕ್ಷ್ಮವಾಗಿ ಕಂಪಿಸತೊಡಗಿತು. ''ರತ್ನಾ ನನ್ನ ರತ್ನಾ, ನೀನು ನನ್ನವಳಲ್ಲವೆ?'' ಎಂಬ ಚಂದ್ರಣ್ಣನ ಕಾತರದ ಕರೆ ಮತ್ತೆ ಆಕೆಯ ಕಿವಿಗಳಲ್ಲಿ ಮೊರೆಯತೊಡಗಿತು. ತಾನು ಆತನವಳೇ ಎಂಬುದನ್ನು ಯಾವಾಗಲೋ ಅರಿತುಕೊಂಡಿದ್ದರೂ ಮತ್ತೆ ಮತ್ತೆ ತನ್ನನ್ನು ಕೇಳಿ ತನ್ನ ಒಪ್ಪಿಗೆಯನ್ನು ದೊರಕಿಸಿದ ಮೇಲೇ ತನ್ನೊಂದಿಗೆ ಪವಡಿಸಿದ ಆತನ ಧೀರೋದಾತ್ತ ಸ್ವಭಾವವನ್ನು ನೆನೆದಾಗ ಆಕೆಯ ಅಂತರಂಗವೆಲ್ಲ ಆತನ ಬಗೆಗಿದ್ದ ಮೆಚ್ಚುಗೆಯಿಂದ ಪುಲಕಗೊಂಡಂತಾಯಿತು. ಸಾವಿರ ಸಲ ಹುಟ್ಟಿ ಬಂದರೂ ಸಂತೋಷದಿಂದ ತನ್ನದೆಲ್ಲವನ್ನೂ ಈತನ ಚರಣಗಳಲ್ಲಿ ಅರ್ಪಿಸಬಹುದು. ಇಂಥವನ ಮಡದಿಯಾಗುವುದಕ್ಕೂ ಪಡೆದು ಬಂದಿರಬೇಕು. ಆತನ ಯೋಗ್ಯತೆಯೆಲ್ಲಿ, ತನ್ನ ಯೋಗ್ಯತೆಯೆಲ್ಲಿ! ಈ ಅಲ್ಪಶಿಕ್ಷಿತ ಹಳ್ಳಿಯ ಹುಡುಗಿಯಲ್ಲಿ ಏನನ್ನು ಕಂಡು ಒಲಿದು ಬಂದನೋ ಈತ?

ಅಟ್ಟಣೆಯ ಮೇಲಿದ್ದ ಗಿಡದ ಕೊಂಬೆಗಳಲ್ಲಿ ಕುಳಿತು ಕಾಡ ಹಕ್ಕಿಗಳು ಹಾಡತೊಡಗಿದ್ದುವು. ಒಂದೆರಡು ಗುಬ್ಬಚ್ಚಿಗಳು ಅಟ್ಟಣೆಯೊಳಗಡೆ ಹಾರಿಬಂದು

ಕಲಕಲ ರವ ಮಾಡುತ್ತ ಚಂದ್ರಣ್ಣನ ಮುಖದ ಮೇಲೆಯೆ ಹಾಯ್ದು ಹೋದವು. ಆತ ನಿಧಾನವಾಗಿ ಕಣ್ಣು ತೆರೆದ. ಮೋಡಗಳ ತೆರೆಯಿಂದ ಜಾರಿಕೊಂಡು ಬೆಳಗುವ ತಾರೆಗಳಂತೆ ಆತನ ಕಣ್ಣ ಬೊಂಬೆಗಳು ಥಳಥಳಿಸತೊಡಗಿದುವು. ಒಂದೆರಡು ಕ್ಷಣ ಆತ ಹಾಗೆಯೇ ಕಣ್ಣು ಬಿಟ್ಟು ಎದುರಿಗೆ ಪ್ರಫುಲ್ಲ ವದನದಿಂದ ಕುಳಿತಿದ್ದ ರತ್ನಳನ್ನೂ ಆಚೆಗೆ ಸ್ವರ್ಗೀಯ ಸೌಂದರ್ಯದಿಂದ ಮೆರೆಯುತ್ತಿದ್ದ ನಿಸರ್ಗವನ್ನೂ ಎವೆಯಿಕ್ಕದೆ ದಿಟ್ಟಿಸಿದ. ಆತನ ದೃಷ್ಟಿಯೊಂದಿಗೆ ತನ್ನ ದೃಷ್ಟಿ ಸೇರಿದೊಡನೆ ರತ್ನಾ ನಾಚಿಕೆಯಿಂದ ಮುಖವನ್ನು ಅತ್ತ ತಿರುಗಿಸಲೆತ್ನಿಸಿದಳು. ಅಷ್ಟರಲ್ಲಿ ಚಂದ್ರಣ್ಣ ತನ್ನ ಬಲಗೈಯಿಂದ ಆಕೆಯ ಗದ್ದವನ್ನು ಹಿಡಿದು ಮೊದಲಿನ ಭಂಗಿಯಲ್ಲಿಯೆ ಅದನ್ನು ನಿಲ್ಲಿಸಿ – ''ಅತ್ತಿತ್ತ ಅಲುಗಾಡಬೇಡ ರತ್ನಾ ಕೊಂಚ ಹೀಗೇ ಕುಳಿತಿರು. ಬಂಗಾರದ ಬೆಳಕಿನ ಹಿನ್ನೆಲೆಯಲ್ಲಿ ನೀನೆಷ್ಟು ಮುದ್ದಾಗಿ ಕಾಣಿಸುತ್ತಿರುವೆ ಬಲ್ಲೆಯಾ?'' ಎಂದ.

ನಾಚಿಕೆಯಿಂದ ಆಕೆ ಮುಖಕ್ಕೆಲ್ಲ ಕೆಂಬಣ್ಣವೇರಿತು.

''ನಿದ್ದೆ ಮಾಡಿದಿರಾ? ಚೆನ್ನಾಗಿ?''

''ಇದುವರೆಗೆ ಒಂದು ರಾತ್ರಿಯೂ ಇಂಥ ಸುಖನಿದ್ರೆ ಬಂದಿರಲಿಕ್ಕಿಲ್ಲ ನನಗೆ. ನಿದ್ರೆಯೆಂದರೆ ಎಂಥ ಸವಿಯಾದ ನಿದ್ರೆ. ಏನೇನೊ ಸವಿಗನಸುಗಳು. ಸುಂದರ ಸುಂದರ ದೃಶ್ಯಗಳು. ಇಂಥ ಸ್ಥಳದಲ್ಲಿ ಮಲಗಿದರೆ ಕನಸು ಬೀಳುವುದೂ ಅಚ್ಚರಿಯಲ್ಲ.''

''ಇದೆಲ್ಲವೂ ಒಂದು ಕನಸೇ ಇರಬಹುದೇನೋ ಅನ್ನಿಸುತ್ತೆ ನನಗೆ,'' ಎಂದಳಾಕೆ, ಸದಾಶಿವಪ್ಪನ ರಕ್ತರಂಜಿತ ಮುಖವನ್ನು ಜ್ಞಾಪಿಸಿಕೊಂಡು.

''ಶ್ಯೂ! ಹುಚ್ಚಿಯೇ ಹುಚ್ಚಿ! ಕನಸಲ್ಲ ಇದು, ನನಸು. ನಿಜಕ್ಕೂ ನಡೆಯುತ್ತಿರುವ ಕನಸು ಎನ್ನು ಬೇಕಾದರೆ. ಏಳು, ಕೆಳಗಡೆ ಹಳ್ಳ ಕಾಣುತ್ತಿದೆಯಲ್ಲ, ಅಲ್ಲಿಗೆ ಹೋಗಿ ಮುಖ ತೊಳೆದುಕೊಳ್ಳೋಣ. ನನಗೆ ತುಂಬ ಹಸಿವು. ನಿನಗೆ?'' ಎನ್ನುತ್ತ ಆತ ಹಾಸಿಗೆಯನ್ನು ಸುರುಳಿ ಸುತ್ತತೊಡಗಿದ.

ಅಟ್ಟಣೆಯಿಂದ ಕೆಳಕ್ಕಿಳಿದು ಬಂದು ಎದುರಿಗೆ ದೃಷ್ಟಿ ಹೊರಳಿಸಿದರು. ಹಳ್ಳದ ಆಚೆಯ ದಂಡೆಯ ಮೇಲೆ ಗಿಡಗಳ ಗುಂಪಿನಲ್ಲಿ ಹೊಗೆಯ ಮೋಡಗಳೆದ್ದು ಸುರುಳಿ ಸುರುಳಿಯಾಗಿ ಮೇಲಕ್ಕೇರಿ ಹವೆಯಲ್ಲಿ ಕರಗಿ ಹೋಗುತ್ತಿದ್ದುದು ಕಂಡುಬಂದಿತು.

''ಅಲ್ಲಿ ಜನ ವಸತಿಯಿದ್ದಂತಿದೆ ನೋಡು ರತ್ನಾ, ಹೊಗೆಯೇಳುತ್ತಿದೆ.''

''ಯಾವುದೊಂದು ಹಳ್ಳಿಯೊ ಏನೊ. ಗಿಡಗಳ ನಡುವೆ ಮನೆಗಳೂ ಕಾಣಿಸುತ್ತಿವೆ.''

''ಹೆಚ್ಚು ಮನೆಗಳೇನೂ ಇದ್ದ ಹಾಗಿಲ್ಲ. ಗುಡ್ಡಗಾಡಿನ ಜನರ ಸಣ್ಣ ವಸತಿಯಿರಬಹುದು ಅದು.''

''ಅಲ್ಲಿಗೆ ಹೋಗೋಣವೇ, ಬೇಡವೇ?''

''ಇಂಥ ಸ್ಥಳದಲ್ಲೂ ಯಾರ ಹೆದರಿಕೆ? ನೋಡೋಣ ಬಾ. ಮೊದಲು ಹಳ್ಳಕ್ಕೆ ಹೋಗಿ ಮುಖವನ್ನಾದರೂ ತೊಳೆಯೋಣ. ಆಮೇಲೆ ಮುಂದಿನ ಮಾತು. ಸುರಕ್ಷಿತವಲ್ಲವೆನ್ನಿಸಿದರೆ ಹಾಗೇ ಗುಡ್ಡದಲ್ಲಿ ಹಾಯ್ದು ಬೇರೆ ಹಾದಿ ಹಿಡಿದರಾಯಿತು.''

ಬಲಗೈಯಿಂದ ಕೋಲನ್ನೂರುತ್ತ ನಿಧಾನವಾಗಿ ಕೊಳ್ಳದಲ್ಲಿಳಿಯತೊಡಗಿದ ಚಂದ್ರಣ್ಣ, ಆತನ ಎಡಗೈ ಹಿಡಿದುಕೊಂಡು ರತ್ನಳೂ ಎಚ್ಚರಿಕೆಯಿಂದ ಇಳಿಯ ತೊಡಗಿದಳು. ಗಿಡಗಂಟೆ, ಕಲ್ಲು ಮುಳ್ಳುಗಳ ನಡುವೆ ಹಾದಿ ಹುಡುಕಿಕೊಂಡು ಹೋಗಬೇಕಾಗಿತ್ತು. ಕೆಲವೆಡೆಗಳಲ್ಲಿ ಕಲ್ಲುಗಳ ಮೇಲೆ ಕಾಲಿಟ್ಟಾಗ ಜಾರುತ್ತಿತ್ತು. ನೂರಿನ್ನೂರು ಅಡಿ ಕೆಳಗೆ ಬಂದಾಗ ಹರಿದುಹೋಗುತ್ತಿದ್ದ ಹಳ್ಳದ ಪಾತ್ರವೂ, ಅದರಾಚೆಗೆ ಹರಗಿ ಸಿದ್ಧವಾಗಿದ್ದ ಹೊಲಗಳೂ ಕಾಣಿಸಿದುವು. ಆ ಹೊಲಗಳಿಗೆ ಕೊಂಚ ದೂರದಲ್ಲಿ ಮಾವಿನ ಗಿಡಗಳ ನಡುವೆ ಗುಡಿಸಲುಗಳಿದ್ದುದೂ ಕಾಣಿಸಿತು.

ಹಳ್ಳದ ಬಳಿ ಬಂದು ತಿಳಿನೀರಿನಿಂದ ಮುಖ ತೊಳೆದುಕೊಂಡು ಅವರಿಬ್ಬರೂ ದಂಡೆಯ ಮಳಲ ಹಾಸುಗೆಯ ಮೇಲೆ ಕುಳಿತರು. ರಾತ್ರಿ ತಾಯಿ ಕಟ್ಟಿಕೊಟ್ಟಿದ್ದ ರೊಟ್ಟಿಯ ಗಂಟನ್ನು ಬಿಚ್ಚಿದಳು ರತ್ನಾ. ಅದರೊಂದಿಗೆ ತಾಯಿಯ ಹಾಗೂ ಅಣ್ಣನ ನೆನಪು ಬಂದು ಆಕೆಯ ಕಣ್ಣುಗಳಲ್ಲಿ ನೀರೂರಿತು.

''ಏಕೆ ರತ್ನಾ, ಮತ್ತೇಕೆ ಕಣ್ಣೀರು?''

''ಏಕೂ ಇಲ್ಲ'' ಎಂದು ನುಡಿದು ಆಕೆ ಸೀರೆಯ ಸೆರಗಿನಿಂದ ಕಂಬನಿಗಳನ್ನು ಮಿಡಿದುಕೊಂಡು ರೊಟ್ಟಿ ಪಲ್ಯವನ್ನು ತೆಗೆದು ಆತನ ಕೈಗಿತ್ತಳು.

''ತಾಯಿಯ ನೆನಪಾಯಿತೇ ರತ್ನಾ?''

''ಪಾಪ, ಅವರಿಬ್ಬರೂ ನಮಗಾಗಿ ಎಷ್ಟು ಚಿಂತಿಸುತ್ತಿರುವರೋ ಏನೊ. ಅಣ್ಣನಿಗೆ ಮೊದಲೇ ಅಂಥ ಸ್ಥಿತಿ. ಅದು ಸಾಲದೇನೊ ಅನ್ನುವಂತೆ ನನ್ನ ಚಿಂತೆಯೊಂದು

ಗಂಟುಬಿತ್ತು ಆತನಿಗೆ. ಅವ್ವ ಮೊದಲೇ ಮುದುಕಿ. ಈ ವಯಸ್ಸಿನಲ್ಲಿ ಇಂಥ ಚಿಂತೆ ಹತ್ತಿದರೆ ಆಕೆಯ ಗತಿ ಏನಾಗಬೇಡ. ಅಂತೂ ನನ್ನಿಂದಾಗಿ ಅವರಿಗೆ ಬಹಳ ಕಷ್ಟವಾಯಿತು. ಯಾವಾಗ ಪೊಲೀಸರು ನನ್ನನ್ನು ಹಿಡಿಯುವರೋ ಎಂಬ ಭಯವೇ ಅಂಟಿಕೊಂಡಿತಲ್ಲ ಅವರಿಗೆ...''

''ಏನು ಮಾಡುವುದು ರತ್ನಾ, ಅದಕ್ಕೆ ಬೇರೆ ಉಪಾಯವಿಲ್ಲ. ಆದರೆ ನಿನ್ನ ಮಟ್ಟಿಗೆ ನೀನು ಮಾತ್ರ ಪೊಲೀಸರ ವಿಚಾರವನ್ನೇ ತಲೆಗೆ ಹಾಕಿಕೊಳ್ಳಬೇಡ. ನಿಶ್ಚಿಂತೆಯಿಂದ ಇರು. ಧರ್ಮಪುರದ ಯೋಚನೆಯನ್ನೇ ಹಚ್ಚಿಕೊಳ್ಳಬೇಡ. ಆ ಗಿರಣಿ, ಆ ಗದ್ದಲ ಎಲ್ಲವನ್ನೂ ಮರೆತುಬಿಡು ಅಂದರಾಯಿತು...''

''ಹೇಗೆ ತಾನೆ ಮರೆಯಲಿ? ನಿನ್ನೆ ಸಂಜೆ ಗಿರಣಿಯೆದುರಿಗಿನ ಬಯಲಲ್ಲಿ ನಡೆದ ಸಭೆಯ ಗದ್ದಲವೆಲ್ಲಾ ಇನ್ನೂ ಕಣ್ಣ ಮುಂದೆ ಕಟ್ಟಿದಂತಿದೆ. ಪುಂಡರನ್ನು ಸಭೆಗೆ ನುಗ್ಗಿಸಿ ಎಂಥ ಅತ್ಯಾಚಾರ ಮಾಡಿದರು... ಪಾಪ, ಆ ನಾಗಮ್ಮನಿಗೆ ಎಂಥ ಗತಿಯೊದಗಿತೋ... ಆ ಹುರುಪಿನಿಂದ ಹುಡುಗ ಮಲ್ಲೇಶಿ... ನನ್ನನ್ನುಳಿಸಿಕೊಳ್ಳಲು ನಡುವೆ ಬಂದಾಗ ಆತನನ್ನು ದೊಣ್ಣೆಯಿಂದ ಹೊಡೆದರು... ಪಾಪ, ಆತನ ತಲೆಯೊಡೆದು ರಕ್ತ ಚಿಮ್ಮುತ್ತಿತ್ತು. ಆ ದೃಶ್ಯದ ನೆನಪಾಗುತ್ತಲೂ ಮೈ ಜುಮ್ಮೆನ್ನುತ್ತದೆ...''

''ಹೌದು ಪಾಪ. ಎಳೆಯ ಹುಡುಗ ಮಲ್ಲೇಶಿ. ಆತನನ್ನು ಆ ರೀತಿ ಹೊಡೆದು ಗಾಯಗೊಳಿಸಿದರಲ್ಲ ಆ ಕಟುಕರು...!''

''ಯಾರಪ್ಪಾ ಅವ ಆ ಮಲ್ಲೇಶಿ ಅಂದರೆ?'' ಎಂದು ಅಪರಿಚಿತ ಧ್ವನಿಯೊಂದು ಪ್ರಶ್ನಿಸಿತು. ಚಂದ್ರಣ್ಣ ರತ್ನಾ ಇಬ್ಬರೂ ಬೆಚ್ಚಿ ಬಿದ್ದು ತಲೆಯೆತ್ತಿ ನೋಡಿದರು. ದೃಢಕಾಯದ ರೈತನೊಬ್ಬ ಎತ್ತುಗಳೆರಡನ್ನೂ ಹಿಡಿದು ನೀರಿಗಿಳಿಯುತ್ತಲಿದ್ದ. ಆತನಿಗೆ ಸುಮಾರು ಐವತ್ತು ವರ್ಷ ವಯಸ್ಸಾಗಿರಬಹುದು. ಐದೂಮುಕ್ಕಾಲು ಆರು ಅಡಿ ಎತ್ತರವಾದ, ತುಂಬಿದ ಶರೀರ. ಒರಟು ಬಟ್ಟೆಯ ಕೊಳಕು ಅಂಗಿ, ಬಲಿಷ್ಠವಾದ ತೊಡೆಗಳನ್ನು ತೆರೆದು ತೋರಿಸುವ ಹರಿದ ಧೋತರ, ಅರೆನರೆತ ತಲೆಗೂದಲನ್ನು ಪ್ರದರ್ಶಿಸುವ ಚಿಂದಿ ರುಮಾಲು. ಗಡ್ಡ ಮೀಸೆಗಳಿಗೂ ಬಿಳಿಯ ಬಣ್ಣ ಬಂದಿದ್ದರೂ ಆತನ ಮುಖದ ಮೇಲೆ ವೃದ್ಧಾಪ್ಯದ ಲಕ್ಷಣವಾವುದೂ ಕಾಣಿಸುತ್ತಿರಲಿಲ್ಲ.

ಅವರಿಬ್ಬರೂ ಕೌತುಕದಿಂದ ಆತನನ್ನು ನಿರುಕಿಸುತ್ತಿದ್ದಾಗ ಆತನ ದೃಷ್ಟಿಯೂ ಅವರನ್ನು ಸೂಕ್ಷ್ಮವಾಗಿ ನಿರುಕಿಸುತ್ತಿತ್ತು. ಆತನ ದಪ್ಪನೆ ಹುಬ್ಬುಗಳು ಹಾಗೆ ಅವರ ಹತ್ತಿರ

ಒಂದು ಗಡಸು ಧ್ವನಿಯಲ್ಲಿ ಪ್ರಶ್ನಿಸಿದ : ''ಧರ್ಮಪುರದಿಂದ ಬಂದವರೇನು ನೀವು? ಮಲ್ಲೇಶಿ ಅಂತ ಏನೋ ಅಂತಿದ್ದರಲ್ಲ – ಏನಾಯ್ತು ಅವನಿಗೆ?''

ತಾವಾಡಿದ ಮಾತುಗಳನ್ನಾತ ಕೇಳಿಕೊಂಡಿದ್ದುದು ಸ್ಪಷ್ಟವಾಗಿದ್ದಿತು. ಇನ್ನು ಆತನ ಹತ್ತಿರ ಸುಳ್ಳು ಹೇಳುವ ಹಾಗಿರಲಿಲ್ಲ.

''ಮಲ್ಲೇಶಿ? ನಿಮ್ಮ ಪೈಕಿ ಯಾರಾದರೂ ಮಲ್ಲೇಶಿ ಎಂದು ಇರುವರೇನಪ್ಪ ಧರ್ಮಪುರದಲ್ಲಿ?''

''ನನ್ನ ಪೈಕಿ ಅಂದರೇನ್ರೀ, ನನ್ನ ಸ್ವಂತ ಮಗನೇ ಇದಾನೆ.''

''ಏನು ಕೆಲಸ ಮಾಡುತ್ತಾನೆ?''

''ಗಿರಣ್ಯಾಗ ಕೂಲಿ ಮಾಡುತಾನೆ.''

ಚಂದ್ರಣ್ಣನ ಎದೆ ಆಶಂಕೆಯಿಂದ ಧಡಗುಟ್ಟಿತು. ಸಭೆಯ ಕಾಲಕ್ಕೆ ಏಟು ತಿಂದು ಬಿದ್ದ ಮಲ್ಲೇಶಿಯೆ ಈತನ ಮಗನಾಗಿರಬಹುದೊ ಏನೊ. ಆತನೇ ಆಗಿದ್ದರೆ...? ಪಾಪ, ಎಂಥ ದುಃಖದಾಯಕ ಪ್ರಸಂಗವನ್ನೆದುರಿಸಬೇಕಾಗುವುದಲ್ಲ ಈ ರೈತ... ಆತನಿಗೆ ಏಟು ಬಿದ್ದ ಸಮಾಚಾರವೂ ಇನ್ನೂ ಈತನಿಗೆ ತಿಳಿದಿರಲಾರದು. ತಾವೇ ಅದನ್ನು ತಿಳಿಸಬೇಕಾಗುವುದೊ ಏನೊ. ತಿಳಿಸುವುದು ಉಚಿತವೇ, ಅನುಚಿತವೇ?

''ವಯಸ್ಸೆಷ್ಟಪ್ಪ ನಿನ್ನ ಮಗನಿಗೆ?''

''ಯುಗಾದೀಗೆ ಹದಿನೇಳು ತುಂಬಿ ಹದಿನೆಂಟರಾಗ ಬಿತ್ತಪ್ಪ. ಇನ್ನೂ ಹರೇದ ಹುಡುಗ.''

ಚಂದ್ರಣ್ಣ ರತ್ನರಿಗೆ ಇನ್ನು ಸಂದೇಹವುಳಿಯಲಿಲ್ಲ. ಈ ರೈತನ ಮಗನೇ ಮಲ್ಲೇಶಿಯೆಂಬುದು ಇಬ್ಬರಿಗೂ ಮನವರಿಕೆಯಾಯಿತು. ಆದರೂ ಇನ್ನೂ ಕೊಂಚ ನಂಬಿಕೆ ಮಾಡಿಕೊಳ್ಳಬೇಕೆಂದು ಬಗೆದು ರತ್ನಾ ಪ್ರಶ್ನಿಸಿದಳು :

''ಮದುವೆಯಾಗಿತ್ತೇನಪ್ಪ ನಿನ್ನ ಮಗನಿಗೆ?''

''ಇಲ್ಲ ತಂಗೀ. ಎಲ್ಲೀ ಮದುವಿ! ಇನ್ನು ಎರಡು ಮೂರು ವರ್ಷದಾಗ ಮಾಡಬೇಕಂತ ಮಾಡೀವಿ.''

''ಆತನೊಬ್ಬನೇ ಇರುತ್ತಿದ್ದನೇನಪ್ಪ ಧರ್ಮಪುರದಲ್ಲಿ?''

''ಹೌದವ್ವ. ನಮ್ಮ ಗುರುತಿನವರೊಬ್ಬರ ಮನಿಯೊಳಗೆ ಇರುತ್ತಿದ್ದ. ಅಲ್ಲೇ ಊಟಾ ಮಾಡುತಿದ್ದ. ಆವಗ ಏನೋ ಆಯ್ತು ಅಂತಿದ್ದಿರಲ್ಲವ್ವ. ನನ್ನ ಎದಿ ಬಡೀಲಿಕ್ಕೆ ಹತ್ಯೆತಿ. ಏನು ಅನ್ನೂದನ್ನ ಬೇಗ ಹೇಳ್ರಿ. ನನಗಿರೂದೂ ಅವನೊಬ್ಬನೇ ಒಬ್ಬ ಮಗ.''

''ನಮಗೆ ಗುರುತಿರುವ ಮಲ್ಲೇಶಿಯೆ ನಿನ್ನ ಮಗ ಎಂದ ಹೇಗೆ ಹೇಳಬೇಕಪ್ಪಾ? ಸ್ವಲ್ಪ ಕುಳ್ಳಗೆ ಕರ್ರಗೆ ಇದ್ದಾನೆ ಹುಡುಗ. ಮೂಗು ಸ್ವಲ್ಪ ಮೊಂಡ. ಆತನೇ ಏನು?''

''ಹೌದು. ಹೌದು. ಅವನೇ, ಏನಾಯಿತು ಹೇಳ್ರಪ್ಪ ನನ್ನ ಮಗನಿಗೆ. ಏಳ್ರಿ ನಮ್ಮನೆಗೇ ನಡೀರಿ. ಅಲ್ಲೇ ಮಾತಾಡೋಣವಂತೆ...''

''ಮನೆಗೆ?''

''ಹೂ. ನಮ್ಮನೆಗೆ. ಯಾಕ ಸಂಶಯ ನಿಮಗೆ?''

''ನಮ್ಮ ಮೇಲೆ ಪೊಲೀಸರ ಕಣ್ಣಿದೆ ಕಣಪ್ಪ ಯಾವಾಗ ಬಂದು ಹಿಡಿದಾರೆಂಬ ನಿಯಮವಿಲ್ಲ. ನಮ್ಮಿಂದಾಗಿ ನಿಮ್ಮ ಮೇಲೇನಾದರೂ ಬರಬಾರದಲ್ಲ?''

''ಇಲ್ಲ್ಯಾಕ ಸಾಯಕ ಬರ್ತಾರ ಪೊಲೀಸರು? ಬರ್ರಿ. ನೀವೇನೂ ಚಿಂತೆ ಮಾಡಬ್ಯಾಡ್ರಿ. ನಮ್ಮಲ್ಲೇ ಇರ್ರಿ ಆರಾಮಾಗಿ. ನನ್ನ ಮಲ್ಲೇಶಿ ಹೋದಾಗಿನಿಂದ ನಮ್ಮ ಮನೀನೂ ಭಣ ಭಣ ಅಂತೈತೆ. ನಮ್ಮ ಮುದುಕಿಯೂ ನಿಮ್ಮನ್ನು ನೋಡಿ ಹಿಗ್ಗಿ ಹೀರೇಕಾಯಿಯಾದೀತು,'' ಎಂದು ನುಡಿದು ಆತ ಚಂದ್ರಣ್ಣನ ಹಾಸಿಗೆ ಸುರುಳಿ ಯನ್ನೆತ್ತಿಕೊಂಡ.

ನೀರು ಕುಡಿದು, ದಂಡೆಯ ಮೇಲಿನ ಗರಿಕೆಯನ್ನು ಮೆಲ್ಲುತ್ತ ನಿಂತಿದ್ದ ಎತ್ತುಗಳನ್ನು ಮುಂದೆ ಅಟ್ಟಿಕೊಂಡು ಮುದುಕ ನಡೆಯತೊಡಗಿದ. ಚಂದ್ರಣ್ಣ ರತ್ನಾ ಆತನ ಹಿಂದಿನಿಂದ ಹೊರಟರು.

''ನಮ್ಮನ್ನಿಟ್ಟುಕೊಂಡಿದ್ದರಿಂದ ನಿಮಗೇನೂ ತೊಂದರೆಯಾಗಬಾರದಪ್ಪ''

''ಅದರ ಚಿಂತೀ ಬಿಡ್ರಿ ನೀವು. ಇಲ್ಲಿಗೆ ಯಾರೂ ಕಾಲು ಹಾಕಾಕಿಲ್ಲಂತ ಆಗಲೇ ಹೇಳಿದೆನಲ್ಲ? ಊರಾಗ ಐವತ್ತು ಮಂದಿ ಇದೀವಿ. ಎಲ್ಲಾ ಒಂದು. ಪಿತೂರಿ ಯಾದವನ ಮೈಯಾಗಿನ ಎಲುವು ಕೂಡಾ ಉಳೀಲಿಕ್ಕಿಲ್ಲ. ಕಡಿದು ಬುಟ್ಟೀ ತುಂಬಿ ಹಳ್ಳಕ್ಕ ಹಾಕ್ತೀವಿ. ಪೊಲೀಸರು ಕಾಲಿಡೂದಿಲ್ಲ ಇಲ್ಲಿ ಒಬ್ಬೊಬ್ಬರೇ. ಅಂತ ಸೀಮೆ ನಮ್ಮದು.''

"ನೂರಾರು ಮಂದಿ ಕೂಡಿಕೊಂಡು ಬಂದರೆ?"

"ಬಂದಾಗ ನೋಡಿಕೊಂಡರಾಯ್ತು. ಅವರ ಕೈಯಾಗ ಸಿಗದಾಂಗ ನಿಮ್ಮನ್ನ ಮುಚ್ಚಿಡತೀವಿ. ಕೊಳ್ಳದಾಗ ಬೇಕಾದಷ್ಟು ಗವಿಗಳಿದಾವೆ."

"ಗವಿಗಳು?"

"ಹೌದವ್ವ. ಹಳೇಕಾಲದ ಗವಿಗಳು."

ಹಳ್ಳದಿಂದ ಕೊಂಚ ದೂರದಲ್ಲಿದ್ದ ಆ ಹಳ್ಳಿಯನ್ನು ಕಂಡು ರತ್ನಾ ಕೇಳಿದಳು : "ನಿಮ್ಮ ಹಳ್ಳಿಯ ಹೆಸರೇನು ಅಜ್ಜ?"

"ಇಂಥಾ ಸಣ್ಣ ಹಳ್ಳಿಗೆ ಎಂಥಾ ಹೆಸರವ್ವಾ ತಂಗೀ! ಭರಮನಟ್ಟಿ ಅಂತೀವಿ ನಾವಿದಕ್ಕ."

ಬಿತ್ತಿಗೆಗೆ ಸಿದ್ಧವಾಗುತ್ತಿದ್ದ ಹೊಲಗಳಲ್ಲಿ ಹಾಯ್ದು ಅವರ ಗುಡಿಸಲುಗಳ ಬಳಿ ಬರುತ್ತಿದ್ದಂತೆ ಹೊಲಗಳಲ್ಲಿ ಕೆಲಸ ಮಾಡುತ್ತಿದ್ದ ಹಳ್ಳಿಗರು ಕೆಲಹೊತ್ತು ತಮ್ಮ ತಮ್ಮ ಹೋರೆ ನಿಲ್ಲಿಸಿ ಹೊಸಬರನ್ನು ಕುತೂಹಲದಿಂದ ದಿಟ್ಟಿಸುತ್ತಿದ್ದರು. "ಇವರ‍್ಯಾರಪ್ಪಾ ಅಜ್ಜ? ಎಲ್ಲಿಂದ ಬಂದರು?" ಎಂಬ ಪ್ರಶ್ನೆಗಳೂ ಕೇಳಿ ಬಂದುವು. "ನಮ್ಮವರೇ. ನಮ್ಮ ಮಲ್ಲೇಶಿಯ ದೋಸ್ತಿ ಈ ತಮ್ಮ," ಎಂದು ಮುದುಕ ಉತ್ತರವಿತ್ತ.

ದೊಡ್ಡ ಮಾವಿನಮರವೊಂದರ ಪಕ್ಕದಲ್ಲಿದ್ದ ತನ್ನ ಮಣ್ಣಿನ ಮನೆಗೆ ಅವರನ್ನು ಕರೆತಂದ ಮುದುಕ. ನಡೆದು ಬರುತ್ತಿದ್ದವರ ಅಡಿಗಳ ಸದ್ದು ಕಿವಿಗೆ ಬಿದ್ದೊಡನೆ ಒಳಗಿನಿಂದ ಮಧ್ಯ ವಯಸ್ಸಿನ ಮಹಿಳೆಯೊಬ್ಬಳು ಧಾವಿಸಿ ಬಂದಳು. "ಯಾರು ಬಂದರೋ ಹಿರಿಯ, ಮಲ್ಲಣ್ಣ ಬಂದನೇನು?" ಎಂದು ಆತುರದಿಂದ ಕೇಳಿದಳಾಕೆ.

"ಅವ ಬಂದಿಲ್ಲಬೇ. ಅವನ ದೋಸ್ತಿಯೊಬ್ಬ ಬಂದಾನ. ಮಲ್ಲೇಶಿಯ ಸಂಗಡ ಗಿರಣ್ಯಾಗ ಇದ್ದಾಂವ, ಅವನ ಹೆಂಡತೀನೂ ಬಂದಾಳ."

"ಮಲ್ಲಣ್ಣ ಬರಲಿಲ್ಲ?"

"ಇಲ್ಲ, ಇನ್ನು ಮೂರು ನಾಲ್ಕು ದಿನಗಳಲ್ಲಿ ಬಂದಾನು," ಎಂದ ಚಂದ್ರಣ್ಣ.

"ಬಾರಪ್ಪಾ ತಮ್ಮ. ಬಾರವ್ವಾ ಮಗಳೇ. ಬರ‍್ರಿ. ದಣಿದು ಬಂದಿರೇನೊ. ಕಾಲು ತೊಳೀರಿ. ರೊಟ್ಟೀ ತಿನ್ನೇಳ್ರಿ," ಎಂದು ನುಡಿಯುತ್ತ ಒಳಕ್ಕೆ ನಡೆದಳಾಕೆ.

ಮನೆ ತೀರ ಚಿಕ್ಕದು. ಹೊರಗಡೆ ಒಂದು ಪಡಸಾಲೆ, ಅದಕ್ಕೆ ಹತ್ತಿಕೊಂಡಿದ್ದ ಹಾಗೆ ದನದ ಕೊಟ್ಟಿಗೆ, ಪಡಸಾಲೆಯ ಆಚೆ ಒಂದು ಕೋಣೆ, ಅದಕ್ಕೆ ಹತ್ತಿಕೊಂಡು ಅಡುಗೆಯ ಮನೆ. ಪಡಸಾಲೆಯಲ್ಲಿ ಗೋಡೆಗುಂಟ ಒಂದೆರಡು ಧಾನ್ಯದ ಚೀಲ ಗಳನ್ನಿರಿಸಲಾಗಿದ್ದಿತು. ಕೊಟ್ಟಿಗೆಯಲ್ಲಿ ಒಂದು ಎಮ್ಮೆಯೂ, ಅದರದೊಂದು ಕರುವೂ ಮೆಲುಕಾಡಿಸುತ್ತ ನಿಂತಿದ್ದುವು. ಎತ್ತುಗಳನ್ನು ಅವುಗಳ ಪಕ್ಕದಲ್ಲಿ ಕಟ್ಟಿ ಮುದುಕ ಪಡಸಾಲೆಗೆ ಬಂದು ಕುಳಿತುಕೊಂಡ. ಅಷ್ಟರಲ್ಲಿ ಒಳಗಿನಿಂದ ಯಲ್ಲವ್ವ ನೀರು ತಂದುಕೊಟ್ಟಳು.

''ತಗೊಳ್ರಿ, ಕೈಕಾಲು ತೊಳೀರಿ,'' ಎಂದು ನುಡಿದ ಭರಮಪ್ಪ ''ಛೀ, ನನ್ನ ಮಂಜಾಳ ಹೋಗ್ಲಿ, ನಮ್ಮನ್ಯಾಗ ನೀವು ಉಣ್ಣುತೀರೋ ಇಲ್ಲೋ? ನಾವು ಬೇಡರ ಜಾತಿಯವರಪ್ಪ, ನೀವು?'' ಎಂದು ಕೇಳಿದ.

''ನಾವು ಯಾವ ಜಾತಿಯವರ ಹಾಗೆ ಕಾಣಿಸುತೇವೆ?'' ಎಂದು ಕೌತುಕ ದಿಂದ ಕೇಳಿದಳು ರತ್ನಾ.

''ಲಿಂಗಾಯತರೋ ಏನೊ. ಹೌದೇನು ಮತ್ತ?''

''ಅಲ್ಲ, ನಾವೂ ನಿಮ್ಮ ಜಾತಿಯವರೇ,'' ಎಂದು ನಗುತ್ತ ನುಡಿದ ಚಂದ್ರಣ್ಣ.

''ಚಲೋ ವಿದ್ಯಾ ಕಲ್ತವರಂಗ ಮಾತಾಡ್ತೀರಲ್ಲ?''

''ಕಲಿತರೇನಾಯ್ತು? ಬೇಡರ ಜಾತಿಯಲ್ಲೂ ಬೇಕಾದಷ್ಟು ಮಂದಿ ಕಲಿತವ ರಿದ್ದಾರೆ ಈಗ. ಈ ಊರಲ್ಲಿ ಮಾತ್ರ ಯಾರೂ ಕಲಿತವರಿದ್ದರಂತೆ ಕಾಣುವುದಿಲ್ಲವಲ್ಲ?''

''ಇಲ್ಲ್ಯಾರ ಬರ್‍ತಾರ ಕಲಿಸಾಕ? ಬಂದರೂ ಕಲಿಯುವವರು ಬೇಕಲ್ಲ? ನಮಗ್ಯಾಕಪ್ಪ ವಿದ್ಯಾ ಹಳ್ಳೀ ಮುಕ್ಕರಿಗೆ. ನಮ್ಮದೇ ನಮಗೆ ಸಾಕಾಗೈತಿ. ಬೆಳಗಿನಿಂದ ರಾತ್ರೀತನಕ ಕುರುಪೀ ಹಿಡಕೊಂಡು ದುಡೀಬೇಕು ಹೊಲದಾಗ. ಅಂದರೇನೋ ನಾಕು ರೊಟ್ಟಿ ಸಿಗುತಾವ ತಿನ್ನಾಕ. ವಿದ್ಯಾ ಕಲೀತಾ ಕೂತರ ಕೆಲಸಾ ಮಾಡುವವವು ಯಾರು? ಅದೆಲ್ಲ ನಮ್ಮಂಥ ಬಡವರಿಗಲ್ಲ...''

ಗಡಿಗೆಯೊಂದರಲ್ಲಿ ಕಾಯಿಸಿದ ಹಾಲು ತಂದು ಯಲ್ಲವ್ವ ಅವರ ಮುಂದಿಟ್ಟಳು. ''ಕುಡೀರಪ್ಪ. ಈಗ ರೊಟ್ಟಿಗೆ ಹಂಚು ಇಟ್ಟೇನಿ. ರೊಟ್ಟಿ ಆದಮ್ಯಾಲ ತಿಂದೀರಂತೆ,'' ಎಂದಳು.

''ನಾವು ರೊಟ್ಟೀ ತಂದಿದ್ದೇವೆ ಅವ್ವ,'' ಎಂದಳು ರತ್ನಾ.

''ತಂಗಳಾಗಿ ಕಟರಾಗಿದ್ದಾವು. ಅವನ್ನೇನ ಮಾಡ್ತೀರಿ ಬಿಡ್ರಿ. ನಾವು ತಿನ್ನುತೇ ವಂತೆ ಅವನ್ನ ಮೊದಲು ಹಾಲು ಕುಡೀರಿ,'' ಎಂದು ಹೇಳಿ ಯಲ್ಲವ್ವ ರತ್ನಳನ್ನು ಕೌತುಕದಿಂದ ನಿಟ್ಟಿಸಿ ನೋಡುತ್ತ – ''ನಿನ್ನ ಹೆಸರೇನವ್ವಾ ತಂಗೀ?'' ಎಂದು ಕೇಳಿದಳು.

''ರತ್ನಾ.''

''ರತ್ನಾ! ಎಂಥಾ ಚೆಂದದ ಹೆಸರವ್ವ! ನಿನ್ನ ಗಂಡನ ಹೆಸರು?''

ಚಂದ್ರಣ್ಣ ತನ್ನ ಗಂಡನಾಗಿರದಿದ್ದರೂ ಆತನ ಹೆಸರು ಹೇಳಲು ರತ್ನಾಗೆ ನಾಚಿಕೆ ಯಾಗುವುದು ಸಹಜವಾಗಿತ್ತು. ಆಕೆ ದೃಷ್ಟಿಯನ್ನು ಕೆಳಕ್ಕೆ ತಿರುಗಿಸಿ ಮೌನವಾಗಿ ಕುಳಿತುಕೊಂಡಳು.

''ನನ್ನ ಹೆಸರು ಚಂದ್ರಣ್ಣ'' ಎಂದು ತಾನೇ ಹೇಳಿ ಚಂದ್ರಣ್ಣ ರತ್ನಳನ್ನು ಆ ಸೂಕ್ಷ್ಮ ಸಂದರ್ಭದಿಂದ ಮುಕ್ತಗೊಳಿಸಿದ.

''ಚಂದ್ರಣ್ಣ–ರತ್ನಾ, ರತ್ನಾ–ಚಂದ್ರಣ್ಣ! ಎಂಥ ಚೆಂದದ ಹೆಸರುಗಳು!'' ಎಂದು ನುಡಿದು ಯಲ್ಲವ್ವ ಕ್ಷಣಕಾಲ ಮೌನವಾಗಿದ್ದು ಒಂದು ನಿಟ್ಟುಸಿರುಬಿಟ್ಟು ತನ್ನಷ್ಟಕ್ಕೇ ತಾನೇ ಹೇಳಿಕೊಳ್ಳುವವಳಂತೆ – ''ನನ್ನ ಮಲ್ಲೇಶಿಯೂ ಮನ್ಯಾಗ ಇದ್ದಿದ್ದರ ಅವನ ಹೆಂಡ್ತೀನೂ ಬರ್ತಿದ್ದಳು ಇಷ್ಟು ಹೊತ್ತಿಗೆ,'' ಎಂದಳು.

''ಹಾಗಾದರೆ ಅವನನ್ನೇಕೆ ಕಳಿಸಿದಿರೆ ಗಿರಣಿಗೆ?'' ಎಂದು ಪ್ರಶ್ನಿಸಿದ ಚಂದ್ರಣ್ಣ.

''ಕಳಿಸದಿದ್ದರೆ ನಡೀಬೇಕಲ್ಲ ತಮ್ಮಾ. ಧಣೇರಿಗೆ ಕೊಡಬೇಕಾದ ಸಾಲ ಗುಡ್ಡಧಾಂಗ ಬೆಳದೈತಿ. ನಮಗಿರುವ ಗೇಣುದ್ದ ಹೊಲದಾಗ ಬರೂದೆಷ್ಟು ನಾವು ಅವರಿಗೆ ಕೊಡೂದು ಹ್ಯಾಗ?'' ಎಂದ ಮುದುಕ.

''ಅಂದರೆ? ಸಾಲ ಮಾಡಿದ್ದೀರೋ ಏನು?''

''ಸಾಲ ಯಾರು ಮಾಡಿಲ್ಲ ತಮ್ಮ? ಎಲ್ಲರೂ ಸಾಲಗಾರರೇ ಈ ಊರಾಗ. ಅದನ್ನ ತೀರಿಸಾಕ ಏನಾರ ಮಾಡಬೇಕಲ್ಲ? ಅದಕ್ಕs ನನ್ನ ಮಗನ್ನ ಗಿರಣಿಗೆ ಕಳಿಸಬೇಕಾಯ್ತು.''

''ಯಾರ ಹತ್ತಿರ ಸಾಲ ಮಾಡಿದ್ದೀರಿ?''

''ಧಣೇರು, ಇನಾಮದಾರ್ರು. ಈ ಊರಿನ ಹೊಲಗಳೆಲ್ಲಾ ಅವರವೇ ಅಪ್ಪ.''

''ಅಂದರೆ... ನಿಮಗಾರಿಗೂ ಸ್ವಂತ ಹೊಲ ಇಲ್ಲವೇ ಇಲ್ಲ ಅಂದಂತಾಯಿತಲ್ಲ?''

''ನಮಗೆಲ್ಲಿಂದ ಬರಬೇಕಪ್ಪಾ ಸ್ವಂತ ಹೊಲಾ? ಎಲ್ಲಾ ಇನಾಮದಾರ್ರವು. ನಾವು ಪಾಳೇಕ್ಕ ಮಾಡತೀವಿ.''

''ಆದರೂ ಸಾಲ ಏಕಾಯಿತು?''

''ಒಂದೊಂದು ವರ್ಷ ಬೆಳಿ ನೆಟ್ಟಗ ಬರೂದಿಲ್ಲ. ಪಾಳೇದ ರೊಕ್ಕ ಮಾತ್ರ ಕೊಡಾಕsಬೇಕಲ್ಲ. ಕೊಡಾಕ ನಮ್ಮ ಹತ್ತರ ಏನೂ ಇರೂದಿಲ್ಲ. ಈ ವರ್ಷ ಸಾಲ ಹೇಳತೀವಿ. ಅದು ಹಾಂಗs ಬೆಳೀತಾ ಬರುತೈತಿ, ಅಸಲು ಬಡ್ಡಿ ಎಲ್ಲಾ ಕೊಡಿ.''

''ಬೆಳೆ ಚೆನ್ನಾಗಿ ಬಂದ ವರ್ಷ ಈ ಸಾಲ ತೀರಿಸಲು ಆಗುವುದಿಲ್ಲವೆ?''

''ಹ್ಯಾಂಗ ತೀರಿಸುತ್ತೀರಿ ಅಪ್ಪ? ಬೆಳೆದದ್ದು ನಮ್ಮ ಹೊಟ್ಟೆಗೇ ಆಗುವುದಿಲ್ಲ - ಇನ್ನು ಸಾಲಾ ತೀರಿಸೂದು...'' ಎಂದು ನಿಟ್ಟುಸಿರು ಹಾಕಿದ ಭರಮಪ್ಪ.

''ಅದಕ್ಕ ನಮಗಿದ್ದs ಒಬ್ಬನೇ ಒಬ್ಬ ಮಗನ್ನ ಗಿರಣ್ಯಾಗ ಚಾಕರಿ ಮಾಡಾಕ ಕಳಿಸಿದ್ದೀವಿಯಪ್ಪಾ. ಅವ ಅಲ್ಲಿ ದುಡಿದು ತಿಂಗಳಾ ತಿಂಗಳಾ ಹತ್ತಿಪ್ಪತ್ತು ರೂಪಾಯಿ ಕಳಿಸುತ್ತಾನೆ. ಅದನ್ನ ಸಾಲಕ್ಕೆ ಕಟ್ಟುತ್ತೀವಿ,'' ಎಂದಳು ಯಲ್ಲವ್ವ.

''ನಮ್ಮ ಮಲ್ಲಣ್ಣಗ ಏನೋ ಪೆಟ್ಟು ಬಿದ್ದೈತಿ ಅಂತಿದ್ದರು ಇದೇ ಈಗ. ಏನಪ್ಪಾ ಅದು, ಹೇಳಲೇ ಇಲ್ಲವಲ್ಲಾ?''

''ಪೆಟ್ಟು ಬಿದ್ದುದು ನಿಜ. ಆದರೆ ಆತ ನಿಮ್ಮ ಮಲ್ಲೇಶಿ ಹೌದೋ ಅಲ್ಲವೋ ಯಾರಿಗೆ ಗೊತ್ತು?''

''ನನ್ನ ಮಗನೇ ಇರಬೇಕ್ರಿ ಅವ. ಎಲ್ಲಿ ಪೆಟ್ಟಾಗೈತಿ ಅವಗ? ಯಾರು ಹೊಡದರು ಅವನ್ನ?''

''ಸಭೆ ನಡೆದಾಗ ಗದ್ದಲವಾಗಿ ಸ್ವಲ್ಪ ಪೆಟ್ಟಾಗಿತ್ತು. ನೀವೇನೂ ಚಿಂತೆ ಮಾಡಬೇಡಿರಿ.''

''ಅಯ್ಯೋ, ನನ್ನ ಮಗನಿಗೇನಾಗೈತ್ಯೋ. ಹೋಗಿ ಅವನ್ನ ಕರಕೊಂಡಾದರೂ

ಬಾರೋ ಹಿರಿಯ,'' ಎಂದು ಕಳವಳದಿಂದ ನುಡಿದಳು ಯಲ್ಲವ್ವ.

''ಇವರು ಹೇಳಿದ್ದು ಕೇಳಿದಾಗಿನಿಂದ ನನಗೂ ಜೀವದಾಗ ಜೀವ ಇಲ್ಲ. ಇಂದೇ ಹೋಗಿ ಅವನ್ನ ಕರಕೊಂಡು ಬರ್ತೇನೆ. ಎಂಟು ಹತ್ತು ದಿವಸ ರಜಾ ತಕೊಂಡು ಬಂದಾನಂತೆ...''

''ಹಾಂಗ ಮಾಡು. ಬಿಸಿಲಾಗೂದರೊಳಗಾಗಿ ಹೊರಟುಬಿಡು. ನಾ ರೊಟ್ಟಿಗಿಡುತೀನಿ,'' ಎಂದು ಯಲ್ಲವ್ವ ಅಡುಗೆಯ ಮನೆಗೆ ನಡೆದಳು. ಆಕೆಯೊಂದಿಗೆ ರತ್ನಳೂ ಒಳಗೆ ತೆರಳಿದಳು.

''ನೀನು ಇವೊತ್ತು ವಿರಾಮವಾಗಿರು ಅವ್ವ. ನಾನು ರೊಟ್ಟಿ ಮಾಡುತೀನಿ. ನಾನು ಸುಮ್ಮನೆ ಕೂಡ್ರುವುದೆಂದರೆ ಆಗದವ್ವ. ಯಾವಾಗಲೂ ಏನಾದರೂ ಕೆಲಸ ಮಾಡುತ್ತಿರಬೇಕು. ಇಲ್ಲವಾದರೆ ಬರೀ ಬೇಸರು,'' ಎಂದು ಹೇಳಿ ರತ್ನಾ ಹಿಟ್ಟು ಕೈಗೆ ತೆಗೆದುಕೊಂಡಳು.

''ಎಷ್ಟು ಚೆಂದಾಗಿ ಮಾತಾಡುತ್ತೀಯಲ್ಲೇ ನಮ್ಮವ್ವ. ನೀನೂ ಸಾಲೀ ಕಲಿತೀಯಾ?'' ಎಂದು ಕೌತುಕದಿಂದ ಕೇಳಿದಳು ಯಲ್ಲವ್ವ.

''ಸ್ವಲ್ಪ ಸ್ವಲ್ಪ ಕಲಿತಿದ್ದೇನವ್ವ.''

''ಕಲಿತಾಕಿಯಾದರೂ ಮನೀ ಕೆಲಸ ಬರ್ರೈತೇನು ನಿನಗ?''

''ಕಲಿತವಳಾದರೇನಾಯಿತು? ಮನೆಗೆಲಸ ಬರಬಾರದೇನವ್ವ. ನಮ್ಮ ಮನೆ ಯಲ್ಲಿ ನಾನೇ ಎಲ್ಲಾ ಕೆಲಸ ಮಾಡುತ್ತಿದ್ದೆ.''

''ಯಾರಾರಿದಾರವ್ವ ಮನಿಯಾಗ?''

''ಅವ್ವ, ಅಣ್ಣ''

''ನಿನ್ನ ಗಂಡ ಏನು ಕೆಲಸ ಮಾಡ್ತಾನವ್ವ?''

''ಪತ್ರಿಕೆ ಮಾಡುತಾರೆ. ಪತ್ರಿಕೆ ಅಂದರೆ ಗೊತ್ತಿದೆಯೇನವ್ವ ನಿನಗೆ?''

''ಪತ್ರಿಕೆ? ಅಂದರೇನು ತಂಗಿ? ಪತ್ರೀಗಿಡದ ಎಲಿಯೋ ಏನು ಮಣ್ಣೋ!''

ಆ ಮಾತು ಕೇಳಿ ರತ್ನಾ ಮನಸೋಕ್ತವಾಗಿ ನಕ್ಕಳು.

ಹೀಗೆ ಅವರಿಬ್ಬರೂ ಆ ಮನೆಯವರೊಂದಿಗೆ ಬೆರೆತುಕೊಂಡರು.

## ೩೩

ಅದೇ ದಿನ ಸಾಯಂಕಾಲ ಭರಮಪ್ಪ ಮಗನನ್ನು ಕರೆದುಕೊಂಡು ಬರಲೆಂದು ಧರ್ಮಪುರಕ್ಕೆ ಹೊರಟ. ಚಂದ್ರಣ್ಣ ಆತನನ್ನು ಕಳುಹಿಸಲೆಂದು ಕೊಂಚ ದೂರದವರೆಗೆ ಜೊತೆಗೆ ಹೋದ.

''ನಡದೇ ಹೋಗುತ್ತೀಯಾ ಭರಮಣ್ಣ?''

''ಗುಡ್ಡದಾಗ ಹಾದು ಹೋದರೆ ಲಗೂ ಮುಟ್ಟಬಹುದು. ಬರುವಾಗ ಮೋಟರಿನಾಗ ಬಂದರಾಯಿತು.''

''ಸೋಮಣ್ಣನ ಮನೆಗೆ ಹೋಗಿ ನಾವಿಬ್ಬರೂ ಕ್ಷೇಮವಾಗಿದ್ದೇವೆ ಅಂತ ತಿಳಿಸಿಬಾರಪ್ಪ. ಆದರೆ ನಾವಿಲ್ಲಿ ಇರುವ ವಿಷಯ ಬೇರೆ ಯಾರಿಗೂ ಗೊತ್ತಾಗಬಾರದೆಂದು ಹೇಳು. ನೀನೂ ಯಾರೆದುರಿಗೂ ಆ ಮಾತು ಆಡಬೇಡ.''

''ಹಾಂಗೆ ಆಗಲಪ್ಪ. ನೀನು ಮನಿಗೆ ಹೋಗು. ಬಹಳ ಬಿಸಿಲು,'' ಎಂದು ನುಡಿದು ಭರಮಣ್ಣ ಹಳ್ಳದ ಕಡೆಗೆ ಹೊರಟಿದ್ದ. ಹಾಗೆ ಆತನ ಹೆಸರೆತ್ತಿ ಯಾರೋ ಕೂಗಿದಂತಾಯಿತು. ಇಬ್ಬರೂ ಹೊರಳಿ ನೋಡಿದರು.

''ಯಾರೋ ಬಂದ ಹಾಗಿದೆಯಲ್ಲಪ್ಪ?'' ಎಂದ ಚಂದ್ರಣ್ಣ.

ಹೌದು ಯಾರೋ ಬಂದ ಹಾಗಿದ್ದಿತು.

''ರುದ್ರ್ಯಾನ ಹಾಂಗ ಕಾಣಿಸುತಾನೆ. ಮಲ್ಲೇಶಿಯನ್ನ ಕರಕೊಂಡು ಬಂದಾನೊ ಏನೊ,'' ಎನ್ನುತ್ತ ಭರಮಣ್ಣ ಮನೆಯ ಕಡೆಗೆ ಧಾವಿಸಿದ.

''ರುದ್ರ್ಯಾ? ಯಾರಪ್ಪ ಆವ?''

''ಅವನೂ ಒಬ್ಬ ಕೂಲಿಕಾರ.''

ಆ ಹೆಸರನ್ನು ತಾನು ಎಲ್ಲಿಯೋ ಕೇಳಿರಬೇಕೆಂದೆನ್ನಿಸಿತು ಚಂದ್ರಣ್ಣನಿಗೆ. ಎಲ್ಲಿ ಯಾವಾಗ ಕೇಳಿರಬಹುದು? ಆ ವ್ಯಕ್ತಿಯನ್ನು ಈ ಮೊದಲು ನೋಡಿದ ಹಾಗಿರಲಿಲ್ಲ. ಹೆಸರು ಮಾತ್ರ ಪರಿಚಿತವಾದುದಾಗಿತ್ತು. ಓ... ನೆನಪಾಯಿತು... ರುದ್ರ್ಯಾ... ಸೆಟ್ಟರ ಸಿ.ಐ.ಡಿ. ಆಗಿ ಕೆಲಸ ಮಾಡುತ್ತಿದ್ದ ರುದ್ರ್ಯಾ... ಆತನೇಕೆ ಬಂದನೋ ಇಲ್ಲಿಗೆ? ತಾವು ಇತ್ತ ಬಂದು ಇಲ್ಲಿ ಆಸರ ದೊರಕಿಸಿದುದು ಈಗಾಗಲೇ ಗೊತ್ತಾಗಿದೆಯೊ ಏನೊ.

ಈತನೊಬ್ಬನೇ ಬಂದಿರಬಹುದೆಂದು ಹೇಗೆ ಹೇಳಬೇಕು? ಈತನ ಹಿಂದೆಯೆ ಪೊಲೀಸರಿದ್ದರೂ ಇರಬಹುದು. ರತ್ನಳನ್ನು ಹಿಡಿದುಕೊಂಡೊಯ್ಯಲೆಂದೇ ಅವರು ಬಂದಿರಲು ಸಾಕು.

ಧಡಧಡಿಸುವ ಹೃದಯದೊಂದಿಗೆ ಚಂದ್ರಣ್ಣ ಮನೆಯ ಬಳಿ ಬಂದ. ತನ್ನನ್ನು ಕಂಡೊಡನೆ ಕುಳಿತಿದ್ದವನು ಚಂದ್ರಣ್ಣ ದೃಷ್ಟಿಗೆ ಬಿದ್ದೊಡನೆ ಎದ್ದುನಿಂತು – ''ನಮಸ್ಕಾರರೀ,'' ಎಂದು ನುಡಿದ ಆಶ್ಚರ್ಯದಿಂದ. ಆತನನ್ನೇ ದಿಟ್ಟಿಸುತ್ತ ನಿಂತ.

''ನೀವು? ಇಲ್ಲಿ?'' ಮುಂದೆ ಆತನ ಮುಖದಿಂದ ಮಾತುಗಳೇ ಹೊರಡಲಿಲ್ಲ.

''ನೀನೇಕೆ ಬಂದೆಯಯ್ಯಾ?'' ಎಂದು ಚಂದ್ರಣ್ಣ ಸಮಾಧಾನದಿಂದಲೇ ಪ್ರಶ್ನಿಸಿದ.

''ಮಲ್ಲೇಶಿಯನ್ನು ಕರಕೊಂಡು ಬರಬೇಕಾಗಿತ್ತರೀ. ಹಾಂಗs ನಮ್ಮೂರಿಗೂ ಹೋಗಿಬಂದರಾಯಿತಂತ ಬಂದೆ.''

''ನಿಮ್ಮೂರು ಇಲ್ಲೇ ಇದೆಯೇನು?''

''ಇಲ್ಲಿಂದ ಆರು ಮೈಲು ದೂರೈತಿರಿ.''

''ಹೂಂ. ಸರಿ. ಹೇಗಿದಾನೆ ಮಲ್ಲೇಶಿ?''

''ಈಗ ಸ್ವಲ್ಪ ಆರಾಮಾಗಿದಾನ್ರಿ. ಏನೂ ಚಿಂತಿಲ್ಲ''

ರುದ್ರಪ್ಪನ ಧ್ವನಿಯನ್ನು ಗುರುತಿಸಿ ರತ್ನಳೂ ಭೀತಳಾಗಿ ಬಾಗಿಲಿನ ಮರೆಯಲ್ಲಿ ನಿಂತು ಆತನನ್ನೇ ದಿಟ್ಟಿಸುತ್ತಲಿದ್ದಳು. ಮಲ್ಲೇಶಿಯನ್ನು ನೋಡಲೆಂದು ಚಂದ್ರಣ್ಣ ಮನೆಯೊಳಗಡೆ ಅಡಿಯಿರಿಸುತ್ತಲೂ ಬೆಳ್ಳಗೆ ಬಿಳಿಚಿಕೊಂಡ ರತ್ನಳ ಮುಖ ಆತನ ಕಣ್ಣಿಗೆ ಬಿದ್ದಿತು.

''ಭಯಪಡಬೇಡ ರತ್ನಾ, ಹೇಗಾದರೂ ಮಾಡಿ ಇಲ್ಲಿಂದ ಪಾರಾಗೋಣ,'' ಎಂದು ತೀರ ಮೆಲ್ಲಗಿನ ಧ್ವನಿಯಲ್ಲಿ ನುಡಿದು ಚಂದ್ರಣ್ಣ ಮಲ್ಲೇಶಿಯ ಬಳಿ ಬಂದ.

''ಹೇಗಿದೆ ಮಲ್ಲೇಶಿ?''

''ಆರಾಮಾಗಿದೆ ಚಂದ್ರಣ್ಣ''

"ನಿಮ್ಮಪ್ಪ ನಿನ್ನನ್ನು ಕರೆದುತರಲು ಬರುವುದರೊಳಗಾಗಿ ನೀನೇ ಬಂದು ಬಿಟ್ಟೆಯಲ್ಲ?"

"ಇನ್ನು ಅಲ್ಲಿದ್ದು ಮಾಡುವುದಾದರೂ ಏನು ಚಂದ್ರಣ್ಣ? ಈ ಗಾಯ ಮಾಯುವವರೆಗಾದರೂ ನಾನು ಇಲ್ಲೇ ಇರಬೇಕಲ್ಲ? ಗಿರಣಿಯ ಕೆಲಸಕ್ಕಂತೂ ಕಲ್ಲು ಬಿದ್ದಂತಾಯ್ತು."

"ಏಕೆ?"

"ಕೂಲಿಕಾರರಲ್ಲಿ ಅಶಾಂತಿ ಹುಟ್ಟಿಸಲು ಕಾರಣರಾದೆವೆಂಬ ನೆವದಿಂದ ನಮ್ಮಲ್ಲಿ ಅನೇಕರನ್ನು ಕೆಲಸದಿಂದ ವಜಾ ಮಾಡಿದ್ದಾರೆ."

"ಹೀಗೊ? ಸರಿ. ಯಾರು ಯಾರನ್ನು?"

"ನನ್ನನ್ನು ರತ್ನಮ್ಮ ನಾಗಮ್ಮ ರುದ್ರಪ್ಪ ಹಾಗೂ ಇನ್ನೂ ಇಪ್ಪತ್ತು ಮೂವತ್ತು ಜನರನ್ನು."

"ರುದ್ರಪ್ಪನನ್ನೂ ತೆಗೆದುಬಿಟ್ಟರೇ?" ಎಂದು ಆಶ್ಚರ್ಯದಿಂದ ಕೇಳಿದಳು ರತ್ನಾ.

"ಹೌದು. ಅವನನ್ನೂ ಓಡಿಸಿಬಿಟ್ಟರು. ಅವನಿಗೂ ಸಾಕಷ್ಟು ಪೆಟ್ಟು ಬಿತ್ತು."

"ಸೆಟ್ಟರಿಗೆ ಅವನ ಮೇಲೆ ಬಹಳ ಪ್ರೀತಿ ಇತ್ತಲ್ಲವೆ?"

"ಎಲ್ಲಿಯ ಪ್ರೀತಿ ಚಂದ್ರಣ್ಣ? ತಮ್ಮ ಕೆಲಸಕ್ಕೆ ಉಪಯೋಗ ಆಗುವವರೆಗೆ ಪ್ರೀತಿಯ ನಟನೆ. ಆಮೇಲೆ – ಸ್ವಲ್ಪವಾದರೂ ಸಂಶಯ ಬಂದರೆ ಮುಗಿಯಿತು. ಬಿತ್ತು ಏಟು..."

"ಅವನ ಮೇಲೂ ಸಂಶಯ ಬಂದಿತೇ?"

ಈ ಪ್ರಶ್ನೆಗೆ ಮಲ್ಲೇಶಿ ಉತ್ತರವೀಯುವುದರೊಳಗಾಗಿ ರುದ್ರಪ್ಪನೇ ಒಳಗೆ ಬಂದು ಮಾತನಾಡಿದ :

"ಆ ಸೆಟ್ಟರಿಗೆ ಯಾರ ಮ್ಯಾಲೂ ವಿಶ್ವಾಸ ಇಲ್ಲರಿ ಚಂದ್ರಣ್ಣನವರೆ. ಎಲ್ಲಾ ಕೆಲಸದ ಪೂರ್ತಿ ಅವರ ವಿಶ್ವಾಸ..."

ಆಕಸ್ಮಾತ್ತಾಗಿ ಆತನ ದೃಷ್ಟಿ ರತ್ನಳ ಕಡೆಗೆ ಹೊರಳಿತು.

"ಯಾರು? ರತ್ನಮ್ಮ? ನೀನೂ ಇಲ್ಲಿ...?" ಎಂದು ಬೆರಗುಗೊಂಡು

ಕೇಳಿದನಾತ. ''ನೀವಿಬ್ಬರೂ ಒಮ್ಮಿಂದೊಮ್ಮೆ ಧರ್ಮಪುರದಿಂದ ಹೊರಟದ್ದೇಕೆ ಅನ್ನೋದೇ ನಮಗಾರಿಗೂ ತಿಳೀಲಿಲ್ಲ ಬಿಡಿರಿ. ನಮ್ಮ ಹೇಮಾದ್ರಿಯವರೂ ನಿಮ್ಮನ್ನ ಬಹಳ ಹುಡುಕಿದರು.''

''ಹೇಮಾದ್ರಿ?''

''ಹೌದು, ಅವರೇ. ಸೋಶಲಿಸ್ಟ್ ಹೇಮಾದ್ರಿ. ಸೆಟ್ಟರ ಪುಂಡರಿಂದ ಪೆಟ್ಟು ತಿಂದು ನಾನು ನರಳತಾ ಬಿದ್ದಾಗ ಅವರೇ ಕರಕೊಂಡು ಹೋಗಿ ಉಪಚಾರ ಮಾಡಿದರು. ನಾಗಮ್ಮನನ್ನೂ ಅವರೇ ಆಸ್ಪತ್ರೆಗೆ ಹಾಕಿದರು.''

''ನಾಗಮ್ಮ ಆಸ್ಪತ್ರೆಗೆ? ಆಕೆಗೇನಾಗಿತ್ತು?'' ಎಂದು ಕಳವಳದಿಂದ ಕೇಳಿದಳು ರತ್ನಾ.

''ಆ ಬಿಳೀ ಟೋಪಿಯ ಮಾರ್ತಾಂಡಪ್ಪ ಮರಿಯಪ್ಪ ಆಕೆಯನ್ನೂ ಇನ್ನಿಬ್ಬರು ಹೆಂಗಸರನ್ನೂ ಹೊತ್ತುಕೊಂಡು ಹೋಗಿದ್ದರಂತೆ. ರಾತ್ರಿ ಮೂರು ಗಂಟೆಗೆ ಒಂದು ಹೊಲದಾಗ ನಾಗಮ್ಮನನ್ನು ಒಗೆದು ಬಿಟ್ಟಿದ್ದರಂತೆ. ಪಾಪ, ಆಕೆ ರಾತ್ರಿಯಲ್ಲೆಲ್ಲ ಮಳೆಯೊಳಗೆ ತೋಯಿಸಿಕೊಳ್ಳುತ್ತಾ ಸಾಯುತಾ ಬಿದ್ದಿದ್ದಳಂತೆ. ಮುಂಜಾನೆ ತಿರುಗಾಡಲು ಹೋಗಿದ್ದ ಹೇಮಾದ್ರಿಯವರು ಆಕೆಯನ್ನು ಕಂಡು ಮರುಗಿ ಗಾಡಿಯಲ್ಲಿ ಹಾಕಿ ಆಸ್ಪತ್ರೆಗೆ ಸೇರಿಸಿದರಂತೆ.''

''ಕಮ್ಯೂನಿಸ್ಟರ ಬಗ್ಗೆ ಎಂದಿನಂತೆ ಪ್ರೀತಿ ಬಂತು ಈ ಸೋಶಲಿಸ್ಟರಿಗೆ?'' ಎಂದು ಪ್ರಶ್ನಿಸಿದಳು ರತ್ನಾ.

''ಕಮ್ಯೂನಿಸ್ಟ್ ಸೋಶಲಿಸ್ಟ್ ಅಂತ ಯಾವ ಭೇದಭಾವವೂ ಹೇಮಣ್ಣ ನವರಿಗಿಲ್ಲ ರತ್ನಾ. ಅವರು ಬಹಳ ದಯಾವಂತರು. ನನಗೆ ಪೆಟ್ಟು ಬಿದ್ದ ಸುದ್ದಿ ತಿಳಿದಾಗ ನನ್ನನ್ನೂ ಮಾತನಾಡಿಸಿಕೊಂಡು ಹೋದರು.''

''ನಿನ್ನ ಹತ್ತಿರ ಬಂದಿದ್ದರೇ?''

''ಹೌದು. ನನ್ನ ಗಾಯ ನೋಡಿ ಕಣ್ಣಲ್ಲಿ ನೀರು ತಂದರು. 'ಇರಲಿ, ಇದಕ್ಕೆ ಸರಿಯಾಗಿ ಮಾಡೋಣ ಈ ಸೆಟ್ಟಿಗೆ' ಎಂದು ಹೇಳಿದರು.''

''ಸೆಟ್ಟರೂ ಅವರೂ ಒಂದಾದುದರಿಂದಲೇ ಈ ಗತಿಯಾಯಿತು ನಮಗೆ. ಇನ್ನು ಇವರು ಸೆಟ್ಟರಿಗೇನು ಮಾಡುವರೊ...''

"ಸೆಟ್ಟರು ಇವರಿಗೂ ಕೈ ಕೊಟ್ಟರಲ್ಲ ರತ್ನಾ. ಸೋಶಲಿಸ್ಟರ ಕೈಗೆ ಕೂಲಿಕಾರ ಸಂಘ ಕೊಡುವ ನಾಟಕ ಮಾಡಿ ಯಾರಿಗೂ ಗೊತ್ತಾಗದಂತೆ ಆ ಬಿಳಿಟೋಪಿಯವರನ್ನು ಸೇರಿಸಿಕೊಂಡು ಅವರ ಕೈಗೆ ಕೊಟ್ಟರಲ್ಲ ಸಂಘವನ್ನು. ಇನ್ನು ಹೇಮಾದ್ರಿ ಸುಮ್ಮನಿರುವುದಿಲ್ಲ. ಇಂಟಕ್ ಮತ್ತು ಸೆಟ್ಟರಿಗೆದುರಾಗಿ ಬಲವಾದ ಹೋರಾಟ ಹೂಡುತ್ತಾರೆ. ಈ ಹೋರಾಟದಲ್ಲಿ ಚಂದ್ರಣ್ಣನವರಿಂದ ತುಂಬ ಸಹಾಯವಾಗಬಹುದೆಂದು ಹೇಳುತ್ತಿದ್ದರು."

"ಚಂದ್ರಣ್ಣನವರೂ ಅವರೂ ಕೂಡಿ ಪತ್ರಿಕೆಯೊಂದನ್ನು ಹೊರಡಿಸಿದರೆ ಈ ಲಫಂಗರನ್ನೆಲ್ಲ ಮಟ್ಟ ಹಾಕಬಹುದು ಅಂತ ಹೇಳುತ್ತಿದ್ದರು. ಇಂದು ಮುಂಜಾನೆಯೆಲ್ಲಾ ಅವರು ಚಂದ್ರಣ್ಣನವರನ್ನು ಬಹಳ ಹುಡುಕಿದರು," ಎಂದು ನುಡಿದು ರುದ್ರಪ್ಪ – "ಅದೆಲ್ಲ ಆಯ್ತು ರತ್ನಾ, ನೀವಿಬ್ಬರೂ ಹೀಗೇಕೆ ಇಲ್ಲಿಗೆ ಬಂದಿರೆಂಬುದೇ ಗೊತ್ತಾಗಲಿಲ್ಲವಲ್ಲ? ಏನಾಯ್ತು?" ಎಂದು ಕೇಳಿದ.

"ಅಣ್ಣನನ್ನು ನೋಡಿದ್ದೆಯಾ? ಅವನೇನೂ ಹೇಳಲಿಲ್ಲವೆ?"

"ಇಲ್ಲ, ಏನು ಅಂತ ಕೇಳಿದರೆ ಸಣ್ಣ ಮಕ್ಕಳ ಹಾಗೆ ಕಣ್ಣೀರು ಹಾಕಿದ. ನಿಮ್ಮ ಅವ್ವನೂ ಬಾಯಿ ಬಿಚ್ಚಲಿಲ್ಲ."

"ನಮ್ಮಣ್ಣನಿಗೆ ಹ್ಯಾಗಿದೆಯಪ್ಪಾ ಈಗ?"

"ಏನೂ ನೆಟ್ಟಗಿದ್ದಾಂಗ ಕಾಣುವದಿಲ್ಲವ್ವ. ನಾ ನೋಡಿದಾಗ ಭಯಂಕರ ಜ್ವರ ಇದ್ದಾಂಗಿತ್ತು ಮೈಯೊಳಗೆ."

ರತ್ನಳ ಎದೆ ಡವಡವನೆ ಬಡಿದುಕೊಳ್ಳತೊಡಗಿತು. ಮೊದಲೇ ಜರ್ಜರಿತವಾಗಿದ್ದ ಶರೀರ ಅಣ್ಣನದು. ತಾನು ಅಂಥ ಪರಿಸ್ಥಿತಿಗೆ ಸಿಲುಕಿ ಇತ್ತ ಹೊರಟು ಬರುತ್ತಲೂ ಆತನ ಮನಸ್ಸಿಗೆ ಆಘಾತವಾಗಿ ಭಾರಿ ಜ್ವರವೇರಿದೆಯೊ ಏನೊ. ತನ್ನ ಅಣ್ಣ... ತನ್ನ ಪ್ರೀತಿಯ ಅಣ್ಣ... ರತ್ನಳ ಕತ್ತು ಬಿಗಿದು ಬಂದಿತು.

"ನಿನ್ನೆಯ ಗೊಂದಲದಲ್ಲಿ ಸದಾಶಿವ ಸೆಟ್ಟರಿಗೂ ಪೆಟ್ಟು ಬಿದ್ದಿದ್ದಿತೇನಯ್ಯ ರುದ್ರಪ್ಪ?" ಎಂದು ಉಪಾಯವಾಗಿ ಕೇಳಿದ ಚಂದ್ರಣ್ಣ.

"ಗೊಂದಲದಾಗ ಅವರ್ಯಾಕ ಸಿಕ್ಕಾರ್ರೀ? ಅವರ ಗೊಂದಲಾನೆ ಬ್ಯಾರೆ ಬಿಡ್ರಿ"

"ಅಂದರೆ?"

"ಗಿರಣಿಯ ಆಚೆಗಿರುವ ಬಂಗಲೇದಾಗ ರಾತ್ರಿಯೆಲ್ಲಾ ಕುಡಿದು ಮಜಾ ಮಾಡ್ತಿದ್ದರಂತೆ. ಅಮಲಿನಾಗ ಗೊತ್ತಾಗದೆ ಗ್ಲಾಸಿನ ಮ್ಯಾಲ ಬಿದ್ದರಂತೆ. ಹಣೆಗೆ ಪೆಟ್ಟಾಗಿತ್ತು."

"ಆಮೇಲೆ?" ಎಂದು ಉಸಿರು ಬಿಗಿಹಿಡಿದು ಕೇಳಿದ ಚಂದ್ರಣ್ಣ.

"ಮುಂಜಾನೆ ಒಯ್ದು ಆಸ್ಪತ್ರೆಗೆ ಹಾಕಿದರು. ಅಪರೇಶನ್ನೂ ಆಯ್ತಂತೆ. ನೆಟ್ಟಗಾದ ಸೂಳೀಮಗ. ಸತ್ತು ಹೋಗಿದ್ದರ ಚಲೋ ಆಗುತ್ತಿತ್ತು," ಎಂದು ನುಡಿದು ರುದ್ರಪ್ಪ ಖೇಕರಿಸಿ ಉಗುಳಿದ.

"ಉಳಿದುಕೊಂಡ... ಉಳಿದುಕೊಂಡ... ನಿಜವಾಗಿಯೂ?" ಎಂದು ಉದ್ಗಾರ ತೆಗೆಯುತ್ತ ರತ್ನಾ ಹುಚ್ಚಿಯಂತೆ ಎದ್ದು ಹೊರಕ್ಕೋಡಿದಳು. ಆಕೆಯ ಕಣ್ಣುಗಳಿಂದ ಬಳಬಳನೆ ನೀರು ಸುರಿಯತೊಡಗಿತು. ಮಾವಿನ ಗಿಡದ ಕಟ್ಟೆಯ ಮೇಲೆ ಕುಳಿತುಕೊಂಡು ಮತ್ತೆ ಮತ್ತೆ – "ಉಳಿದುಕೊಂಡ... ಉಳಿದುಕೊಂಡ ಹಾ... ಅವ್ವಾ... ಅಣ್ಣಾ... ಹಾ..." ಎಂದು ತನ್ನಷ್ಟಕ್ಕೆ ತಾನೇ ಹೇಳಿಕೊಂಡಳು. ಆಕೆಯ ಎದೆಯ ಮೇಲೆ ಬಿದ್ದುಕೊಂಡಿದ್ದ ಭಾರಿ ಬಂಡೆಗಲ್ಲೊಂದು ತಾನಾಗಿಯೆ ಅಲ್ಲಿಂದ ದೂರ ಸರಿದಂತಾಗಿದ್ದಿತು.

ಆಕೆಯ ವಿಚಿತ್ರ ವರ್ತನೆಯನ್ನು ಕಂಡು ಮನೆಯವರೆಲ್ಲ ಆಶ್ಚರ್ಯಚಕಿತ ರಾಗುವುದು ಸ್ವಾಭಾವಿಕವಾಗಿದ್ದಿತು. ಚಂದ್ರಣ್ಣ ನಡೆದುದೆಲ್ಲವನ್ನೂ ಸ್ವಲ್ಪದರಲ್ಲಿಯೇ ವಿವರಿಸಿ, ತಾವಿಬ್ಬರೂ ಆಕಸ್ಮತ್ತಾಗಿ ಧರ್ಮಪುರದಿಂದ ಹೊರಡಲು ಕಾರಣ ವೇನೆಂಬುದನ್ನು ತಿಳಿಸಿದಾಗ ಎಲ್ಲರಿಗೂ ಅರ್ಥವಾಯಿತು.

ಅದೇ ದಿನ ರಾತ್ರಿ ಅಲ್ಲಿಂದ ಹೊರಟುಬಿಡಬೇಕೆಂದು ರತ್ನಾ ನಿರ್ಧರಿಸಿದಳು. ಧರ್ಮಪುರಕ್ಕೆ ಹೋಗಿ ತನ್ನ ಅಣ್ಣನನ್ನು ಕಾಣುವವರೆಗೂ ಆಕೆಗೆ ಸಮಾಧಾನವಾಗು ವಂತಿರಲಿಲ್ಲ. ಒಂದೆರಡು ದಿನ ಇದ್ದು ಹೋಗಬೇಕೆಂದು ಭರಮಣ್ಣ, ಯಲ್ಲವ್ವ, ಮಲ್ಲೇಶಿ ಮೂವರೂ ಎಷ್ಟು ಹೇಳಿಕೊಂಡರೂ ಆಕೆ ನಿಲ್ಲಲು ಒಪ್ಪಲಿಲ್ಲ. ಅಣ್ಣನಿಗೆ ಗುಣವಾದ ಬಳಿಕ ಮತ್ತೊಮ್ಮೆ ಬಂದು ಕಾಣುವುದಾಗಿ ಹೇಳಿ ಹೊರಟು ನಿಂತಳು.

"ನಿನಗೆ ಪೂರ್ಣವಾಗಿ ಗುಣವಾದ ಮೇಲೆ ಮತ್ತೆ ಧರ್ಮಪುರಕ್ಕೆ ಬರುವೆಯಾ ಮಲ್ಲೇಶಿ?" ಎಂದು ಕೇಳಿದ ಚಂದ್ರಣ್ಣ.

"ಹೌದು. ಬರಲಿಕ್ಕೇ ಬೇಕಲ್ಲರಿ? ಏನಾರ ಮಾಡಿ ಈ ಸಾಲ ಒಂದು ತೀರಿಸಬೇಕಲ್ಲ?"

''ಗಿರಣಿಯೊಳಗಿನ ಕೆಲಸವಂತೂ ಹೋಯಿತಲ್ಲ? ಮುಂದೆ?''

''ಅದೊಂದೇ ಕೆಲಸವೇನು ಬಿಡಿರಿ ಆ ಊರೊಳಗೆ? ಎಲ್ಲಾದರೂ ಅಂಗಡಿಯೊಳಗೆ ಹಮಾಲೀ ಮಾಡುತೀನಿ.''

''ಗಿರಣಿಯವರನ್ನ ನಾವು ಸುಮ್ಮನೆ ಬಿಡತೀವೇನ್ರಿ ಚಂದ್ರಣ್ಣ? ಹೇಮಣ್ಣನವರು ಮತ್ತೆ ಚಳವಳಿ ಹೂಡುತಾರೆ. ಈಗ ಕೆಲಸದಿಂದ ತೆಗೆದವರನ್ನೆಲ್ಲ ಮತ್ತೆ ಗಿರಣಿಯೊಳಗ ಕರೆದುಕೊಳ್ಳುವ ತನಕ ಬಿಡುವುದಿಲ್ಲ ಅವರು,'' ಎಂದು ಉತ್ಸಾಹದಿಂದ ಹೇಳಿದ ರುದ್ರಪ್ಪ. ''ನೀವೂ ಇದ್ದೇ ಇರುತೀರಲ್ಲ ನಮ್ಮ ಸಂಗಡ? ನಿಮ್ಮ ಪತ್ರಿಕೆಯೂ ಹೊರಡಬೇಕು. ನಾ ಬೇಕಾದರೆ ಓಣಿ ಓಣಿ ತಿರುಗಿ ಅದನ್ನ ಮಾರಾಟ ಮಾಡುತೀನಿ.''

''ಮಾರಾಟ ಮಾಡುವ ಹಕ್ಕು ಆ ಕೊಟ್ರಪ್ಪನಿಗೆ ಸೇರಿದ್ದು ಕಣಪ್ಪ. ನಾನು ಯಾವ ಪತ್ರಿಕೆ ಹೊರಡಿಸಿದರೂ ಆತನೇ ನಮ್ಮ ಮಾರಾಟಗಾರ.''

''ಹಾಗಿದ್ದರೆ ನಾನು ನಿಮ್ಮ ಪ್ರೆಸ್ಸಿನಾಗ ಏನಾದರೂ ಕೆಲಸಕ್ಕೆ ನಿಲ್ಲುತ್ತೀನಿ.''

''ನಾನೂ ಬರಬಹುದಲ್ರೀ ನಿಮ್ಮ ಪ್ರೆಸ್ಸಿನಾಗ ಮೊಳೆ ಜೋಡಿಸುವುದಕ್ಕ ಕಲಿತು ಕಂಪೋಜಿಟರ್ ಆಗಬಹುದಲ್ಲ?'' ಎಂದು ಪ್ರಶ್ನಿಸಿದ ಮಲ್ಲೇಶಿ.

''ಓಹೊ! ಯಾಕಾಗಲೊಲ್ಲದು! ಇನ್ನೂ ಪ್ರೆಸ್ಸೇ ಇಲ್ಲವಂತೆ. ಆಗಲೆ ಕೆಲಸಗಾರರು ಸಿದ್ಧವಾದರು. ಆದೇನೋ ಅನ್ನುವವರಲ್ಲ - ಹಾಲೂ ಇಲ್ಲ, ಬಟ್ಟಲೂ ಇಲ್ಲ, ಗುಟುಕ್ ಅದರಂತೆ. ಹಾಗಿದೆ ಈ ಸಮಾಚಾರ!'' ಎಂದು ನಗುತ್ತ ನುಡಿದ ಚಂದ್ರಣ್ಣ.

''ನೀವು ಮನಸ್ಸು ಮಾಡಿದರೆ ಪತ್ರಿಕೆ ಹೊರಡಿಸೋದು ಏನು ದೊಡ್ಡದು ಬಿಡಿರಿ. ನಮ್ಮ ಹೇಮಣ್ಣನವರೂ ಸಹಾಯ ಮಾಡುತಾರೆ.''

''ಇನ್ನು ಮೇಲೆ ಅವರಿವರ ಸಹಾಯಕ್ಕಾಗಿ ಕಾಯದೆ ಸ್ವತಂತ್ರವಾಗಿ ಹೊರಡಿಸುವ ಹಾಗಿದ್ದರೆ ಹೊರಡಿಸಬೇಕು ಪತ್ರಿಕೆಯನ್ನು, ರಂಗಯ್ಯ ಧರ್ಮಪುರಕ್ಕೆ ಬರುವ ಹಾಗಾದರೆ...'' ಎಂದು ನುಡಿದು ಚಂದ್ರಣ್ಣ ಆ ಮಾತು ಅಷ್ಟಕ್ಕೇ ನಿಲ್ಲಿಸಿದ.

ರಾತ್ರಿ ಊಟವಾದ ಬಳಿಕ ಅವರು ಹೊರಟು ನಿಂತರು. ಜೊತೆಗೆ ರುದ್ರಪ್ಪನೂ ಹೊರಟಿದ್ದ. ಅವರನ್ನು ಧರ್ಮಪುರದವರೆಗೆ ಕಳುಹಿಸಿ ಬರಲು ಭರಮಣ್ಣನೂ ಹೊರಟಿದ್ದ. ಯಲ್ಲವ್ವನನ್ನೂ ಮಲ್ಲೇಶಿಯನ್ನೂ ಬೀಳ್ಕೊಂಡು ಅವರು ಮನೆಯಿಂದ

ಹೊರಟರು. ಹೆಗಲ ಮೇಲೆ ದೊಡ್ಡದಾದ ಚೂಪು ಕೊಡಲಿಯನ್ನಿಟ್ಟುಕೊಂಡು, ಕೈಯಲ್ಲಿ ಕಂದೀಲು ಹಿಡಿದು ಭರಮಣ್ಣ ಮುಂದೆ ಮುಂದೆ ಹೊರಟ. ಉಳಿದವರು ಆತನನ್ನು ಅನುಸರಿಸಿದರು.

ಹಳ್ಳವನ್ನು ದಾಟಿ ಅವರು ಕಣಿವೆಯನ್ನೇರುತ್ತಿದ್ದಾಗ ಚಂದ್ರಣ್ಣ ಹಿಂದಿರುಗಿ ಭರಮನಹಟ್ಟಿಯ ಕಡೆಗೆ ದೃಷ್ಟಿ ತೂರಿದ. ಕತ್ತಲೆಯ ಮಡಲಲ್ಲಿ ಮುಖ ಮುಚ್ಚಿಕೊಂಡು ಆ ಹಳ್ಳಿ ಶಾಂತವಾಗಿ ಪವಡಿಸಿದಂತೆ ತೋರುತ್ತಿತ್ತು. ಒಂದು ಕಡೆಗೆ ಮಾತ್ರ ಪ್ರಖರವಾದ ಜ್ವಾಲೆಗಳೆದ್ದು ಸುತ್ತಮುತ್ತಲಿನ ಪ್ರದೇಶವನ್ನು ಬೆಳಗಿಸುತ್ತಿದ್ದುವು.

''ಅಲ್ಲಿ ಯಾರು ಉರಿ ಹತ್ತಿಸಿದ್ದಾರೆ ಭರಮಣ್ಣ?''

ಭರಮಣ್ಣ ತಡೆದು ನಿಂತು ಹಿಂದಿರುಗಿ ನೋಡಿ, ಉತ್ತರವಿತ್ತ :

''ಅದೇ? ಗುಡಿಯ ಮುಂದ ಉರಿ ಹಾಕಿದಾಂಗ ಕಾಣುತ್ತೈತಿ.''

''ಏನು ವಿಶೇಷವಪ್ಪ ಇವೊತ್ತು?''

''ಇವೊತ್ತೇ ಏನಪ್ಪ? ದಿನಾಲು ಇದ್ದೇ ಇರುತ್ತೈತಲ್ಲ ಬೆಂಕಿ. ಗುಡಿಯೊಳಗ ಮಲಗುವವರು ನಿದ್ದೆ ಬರುವತನಕ ಉರಿಸುತಿರುತಾರ ಆಯಿತು.''

''ಗುಡಿಯೊಳಗೆ ಮಲಗುವವರು? ಅಲ್ಲೇಕೆ ಮಲಗುತ್ತಾರೆ? ಮನೆಗಳಿಲ್ಲವೇ ಅವರಿಗೆ?''

''ಮನಿ?'' ಎಂದು ವಿಷಾದದಿಂದ ನಕ್ಕು ನುಡಿದ ಭರಮಣ್ಣ ''ಎಂಥಾ ಮನಿಗಳಪ್ಪ ಅವು? ಒಬ್ಬಿಬ್ಬರು ಮಲಗಾಕ ಜಾಗ ಇರೂದಿಲ್ಲ, ಅದಕ್ಕೇ ಎಲ್ಲರಿಗೂ ಲಗುಮವ್ವನ ಗುಡಿದೇ ಆಸರ. ಬಡತನ ಅನ್ನೂದು ಬಹಳ ಕೆಟ್ಟದಪ್ಪ...''

ಚಂದ್ರಣ್ಣ ಮಾತನಾಡಲಿಲ್ಲ, ಮೌನವಾಗಿ ಕಣಿವೆಯನ್ನೇರತೊಡಗಿದ. ಸ್ವಲ್ಪ ಹೊತ್ತಿನಲ್ಲಿಯೆ ಏರು ಮುಗಿಯಿತು. ಕಂದೀಲಿನ ಬೆಳಕಿನಲ್ಲಿ ಎದುರಿಗಿದ್ದ ಬಿದಿರಿನ ಅಟ್ಟಣೆ ಕಾಣಿಸುತ್ತಲಿತ್ತು. ಅದು ದೃಷ್ಟಿಗೆ ಬೀಳುತ್ತಲೂ ಮುನ್ನಾದಿನದ ರಾತ್ರಿ ತಾವಿಬ್ಬರೂ ಅಲ್ಲಿ ಕಳೆದ ಆ ರಸಪೂರ್ಣ ಕಾಲ ಮತ್ತೆ ನೆನಪಿಗೆ ಬಂದು ಚಂದ್ರಣ್ಣ ರತ್ನರ ದೇಹಗಳು ರೋಮಾಂಚಿತವಾದುವು.

ಒಂದೆರಡು ಕ್ಷಣಗಳವರೆಗೆ ಅದರ ಹತ್ತಿರ ನಿಂತುಕೊಂಡು ಅವರಿಬ್ಬರೂ ಆಗತಾನೆ ಬಿಟ್ಟು ಬಂದ ಹಳ್ಳಿಯ ಕಡೆಗೆ ದೃಷ್ಟಿ ಹೊರಳಿಸಿದರು. ಗಂಭೀರವೂ

ರಹಸ್ಯಮಯವೂ ಆದ ಕತ್ತಲಲ್ಲಿ ಹುದುಗಿಕೊಂಡಿದ್ದಿತು ಕೊಳ್ಳ. ಕೃಷ್ಣಪಕ್ಷದ ರಾತ್ರಿಯಾದುದರಿಂದ ಚಂದ್ರನಿನ್ನೂ ಮೂಡಿ ಬಂದಿರಲಿಲ್ಲ. ಎತ್ತ ತಿರುಗಿದರೂ ಕಪ್ಪು, ಬರಿಯ ಕಪ್ಪು, ದಟ್ಟವಾದ ಕಪ್ಪು; ಗಿಡಗಂಟಿಗಳು, ಬಂಡೆಗಲ್ಲುಗಳು, ಕೊಳ್ಳದ ನಡುವೆ ಹರಿಯುವ ಹಳ್ಳ, ಅದರಾಚೆಯ ಭರಮನ ಹಟ್ಟಿ, ಗುಡ್ಡ ಬೆಟ್ಟಗಳೆಲ್ಲವನ್ನೂ ತನ್ನ ಕರಾಳಗರ್ಭದಲ್ಲಿ ಅಡಗಿಸಿಕೊಂಡು ಕದಲದೆ ನಿಂತ ಕಪ್ಪು!

ಅಂಥ ಪ್ರಚಂಡ ಕತ್ತಲೆಯನ್ನು ಭೇದಿಸಿಕೊಂಡು ಒಂದು ಕಡೆಗೆ ಬೆಂಕಿಯ ಕೆನ್ನಾಲಗೆಗಳು ಸಿಡಿದೇಳುತ್ತಿದ್ದುವು. ನೂರಾರು ಅಡಿ ಮೇಲೆ ನಿಂತು ನೋಡುತ್ತಿದ್ದ ಚಂದ್ರಣ್ಣ ರತ್ನರಿಗೆ ಅದೊಂದು ರೋಮಾಂಚಕಾರಕ ನೋಟವಾಗಿ ಪರಿಣಮಿಸಿದ್ದಿತು.

ರತ್ನಳ ಕೈಯನ್ನು ಸ್ನೇಹಭರದಿಂದ ತಟ್ಟುತ್ತ ಚಂದ್ರಣ್ಣ ಭಾವಪೂರ್ಣ ಸ್ವರದಲ್ಲಿ ಉದ್ಗಾರ ತೆಗೆದ :

''ಇಂಥ ಭೀಕರ ಕತ್ತಲೆಯಿದ್ದರೂ ಅಳುಕದೆ ಹೆಮ್ಮೆಯಿಂದ ತಲೆಯೆತ್ತಿ ನಿಂತು ಹೇಗೆ ಬೆಳಕು ಬೀರುತ್ತಿದೆ ಆ ಬೆಂಕಿ! ನೋಡಿದೆಯಾ ರತ್ನಾ, ದೂರದಿಂದ ಅದೊಂದು ಜ್ವಾಲಾಮುಖಿ ಕಂಡ ಹಾಗೆ ಕಾಣುವುದಿಲ್ಲವೆ? ಸ್ವಾರ್ಥಿಗಳ ಪೀಡನೆಗೊಳಗಾದರೂ ನಿರಾಶರಾಗದೆ ಎದೆಯುಬ್ಬಿಸಿ ನಿಂತ ದಲಿತ ಜನಪದದ ಶಕ್ತಿಯ ಹಾಗಿದೆ ನೋಡು ಆ ಜ್ವಾಲೆ. ಇಂದು ತೀರ ಅಲ್ಪವಾಗಿದ್ದರೂ ಗಾಳಿ ಬೀಸಿದಾಗ ಆ ಬೆಂಕಿಯೇ ಧಗಧಗಿಸಿ ಉರಿಯುತ್ತ ಸ್ವಾರ್ಥದ ಕಸವನ್ನೆಲ್ಲ ದಹಿಸೀತು. ಸುತ್ತಲೂ ಕವಿದಿರುವ ಅನ್ಯಾಯದ ಕತ್ತಲೆಯನ್ನು ಹೊಡೆದೋಡಿಸಿ ಬೆಳಕಿನ ರಾಜ್ಯ ಕಟ್ಟೀತು..''

ಪ್ರಿಯಕರನ ಕೈಯಲ್ಲಿ ಕೈ ಹಾಕಿಕೊಂಡು ಆತನ ಭುಜಕ್ಕೆ ಭುಜ ಆನಿಸಿ, ಭಾವನೆಗಳಿಂದ ಕಂಪಿಸುವ ಹೃದಯದೊಂದಿಗೆ ನಿಂತುಕೊಂಡಿದ್ದಳು ರತ್ನಾ

''ನಡೆ ರತ್ನಾ, ಹೊತ್ತಾಯಿತು. ಭರಮಣ್ಣ ಮುಂದೆ ಹೋದನೇನೊ. ಬೇಗ ಬೇಗ ನಡೆದು ಕಾಡು ದಾಟಿ ಧರ್ಮಪುರಕ್ಕೆ ಹೋಗಬೇಕು.''

ಪರಸ್ಪರರನ್ನು ಬಳಸಿಕೊಂಡು ಅವರಿಬ್ಬರೂ ಮುನ್ನಡೆಯತೊಡಗಿದರು.

ಭರಮಣ್ಣನ ಕೈಯಲ್ಲಿನ ಕಂದೀಲು ಕಾಡಿನ ಕತ್ತಲೆಯ ಮೇಲೆ ಬೆಳಕಿನ ಗೆರೆಗಳನ್ನು ಕೊರೆಯುತ್ತಲಿದ್ದಿತು.

★★★